ರಾಷ್ಟ್ರ ಪ್ರಶಸ್ತಿ

# ಅಂತಿಮ ಹೋರಾಟ

ಯಂಡಮೂರಿ ವೀರೇಂದ್ರನಾ



894.814 3

RAJ N88

ಗ್ರಂಥ ಸ್ವಾಮ್ಯ ವಿಭಾಗ

SP 19:

ಯಂಡಮೂರಿ ವೀರೇಂದ್ರನಾಥ ಅವರ

# ಅಂತಿಮ ಹೋರಾಟ

(ಕಾದಂಬರಿ)

ಅನುವಾದ

**ರಾಜಾ ಚೆಂಡೂರ್**

**ಚೆಂಡೂರ್ ಪ್ರಕಾಶನ**

35, 6ನೇ ಅಡ್ಡರಸ್ತೆ, ಹನುಮಂತನಗರ

**ಬೆಂಗಳೂರು: 560 019**

ಪ್ರಕಾಶನ :

**ಚೆಂಡೂರ್ ಪ್ರಕಾಶನ**

35, ಆರನೇ ತಿರುವು

ಹನುಮಂತ ನಗರ

ಬೆಂಗಳೂರು: 560 019

ವಿತರಣೆ :

**ಸಾಹಿತ್ಯ ಪ್ರಕಾಶನ**

ಸಿಟಿ ಕ್ಲಿನಿಕ್ ಸಂಕೀರ್ಣ

ದಾಜಿಬಾನ ಪೇಟೆ

ಹುಬ್ಬಳ್ಳಿ: 580 028

ಆರ್ಥಿಕ ಸಹಕಾರ :

ಕೆನರಾ ಬ್ಯಾಂಕ್

ಹನುಮಂತ ನಗರ ಶಾಖೆ

ಬೆಂಗಳೂರು: 560 019

ANTIMA HORAATA: Kannada translation of Sri Yendamoori Veerendranath's Telugu novel AAKHRI PORAATAM by Sri Raja Chendur; Published by Chendur Prakashana, Hanumantanagar, Bangalore:560 019

ಹಕ್ಕುಗಳು: ಶ್ರೀ ಸಿ. ಎಂ. ಆರ್. ರಾವ್

ಮೊದಲನೇ ಮುದ್ರಣ: 1988 ಪುಟಗಳು: iv + 320 ಬೆಲೆ: 60-00

ಮುದ್ರಣ: ಶ್ರೀ ರೇಣುಕಾ ಪಾವರ್ ಪ್ರಿಂಟಿಂಗ್ ಪ್ರೆಸ್, ಹುಬ್ಬಳ್ಳಿ.

## ಹೋರಾಟಕ್ಕೆ ಮುಂಚೆ...

ಚರಿತ್ರೆಯಿಂದ ಪಾಠ ಕಲಿಯದೆ ಪ್ರಪಂಚವನ್ನೇ ಗೆಲ್ಲಬೇಕೆಂದು ಹೊರಟವರ ಅಂತ್ಯವೆಲ್ಲಾ ಒಂದೇ ರೀತಿ ಉದಾಹರಣೆಗೆ, ಹಿಟ್ಲರ್, ನೆಪೋಲಿಯನ್. ರಾಜಕೀಯ, ಗೂಂಡಾಗಿರಿ, ಧರ್ಮ, ಜನರ ಮೌಢ್ಯತೆ ಈ ನಾಲ್ಕು ಸ್ತಂಭಗಳನ್ನು ನಂಬಿ-

ಮತವೇ ತನ್ನ ಆಯುಧ, ರಾಜಕೀಯವೇ ತನ್ನ ಆಟವೆಂದು ಮೆರೆಯುತ್ತಿದ್ದ ಅನಂತಾನಂತಸ್ವಾಮಿಯ ವಿರುದ್ಧ–ವಿಹಾರಿ ಮತ್ತು ಸಿ.ಬಿ.ಐ.ನ ಪ್ರವಲ್ಲಿಕ ನಡೆಸಿದ ಯುದ್ಧವೇ ಅಂತಿಮ ಹೋರಾಟ.

ಜೊತೆಗೆ–ವಿಹಾರಿ, ಪ್ರವಲ್ಲಿಕ, ಸುನಾದಮಾಲರ ತ್ರಿಕೋನ ಪ್ರೇಮ. ಶ್ರೀ ಯಂಡಮೂರಿ ವೀರೇಂದ್ರನಾಥರ ಕಾದಂಬರಿಗಳ ಸಾಲಿನಲ್ಲಿ ನಿಲ್ಲುವ ಒಂದು ಶ್ರೇಷ್ಠ ಕೃತಿ–ಅತ್ಯಂತ ಜನಪ್ರಿಯತೆ ಗಳಿಸಿದ ಕಾದಂಬರಿ. ಚೆಂಡೂರು ಪ್ರಕಾಶನದ ಹೆಮ್ಮೆಯ ಕಾಣಿಕೆ.

ಪುಸ್ತಕ ನಿಮ್ಮ ಕೈತಲುಪಲು ನನಗೆ ಊರುಗೋಲಾಗಿ ನಿಂತ "ಸಾಹಿತ್ಯ ಪ್ರಕಾಶನ" ಹುಬ್ಬಳ್ಳಿಯ ಉತ್ಸಾಹಿ ಯುವಕ ಶ್ರೀ ಸುಬ್ರಮಣ್ಯಂರವರಿಗೆ– ತಮ್ಮ ಬ್ಯಾಂಕಿನಿಂದ ಆರ್ಥಿಕ ಸಹಕಾರ ನೀಡಿ ಪ್ರೋತ್ಸಾಹಿಸುತ್ತಿರುವ ಕೆನರಾ ಬ್ಯಾಂಕ್, ಹನುಮಂತನಗರ ಶಾಖೆಯ ಸೀನಿಯರ್ ಮ್ಯಾನೇಜರ್ ಶ್ರೀ ಎಸ್. ಆರ್. ವಿ ಕಾಮತ್ ಮತ್ತು ಸಿಬ್ಬಂದಿ ವರ್ಗಕ್ಕೆ – ಧಾರಾವಾಹಿಯಾಗಿ ಪ್ರಕಟಿಸಿದ 'ಪ್ರಜಾಮತ' ವಾರಪತ್ರಿಕೆಯ ಸಂಪಾದಕ ವರ್ಗಕ್ಕೆ, ಆಕರ್ಷಕವಾಗಿಯೂ ಅರ್ಥಪೂರ್ಣವಾಗಿಯೂ ಮುಖಪುಟ ರಚಿಸಿಕೊಟ್ಟ ಶ್ರೀ ಚಂದ್ರನಾಥರಿಗೆ, ಮತ್ತು ಅದನ್ನು ಮುದ್ರಿಸಿದ ರವಿಶಂಕರ್‌ರವರಿಗೆ, ಈ ಪುಸ್ತಕದ ಪ್ರತಿ ಅಕ್ಷರವನ್ನು ಮುದ್ದಾಗಿ ಮುದ್ರಿಸಿಕೊಟ್ಟು ಸಹರಿಸಿದ ಹುಬ್ಬಳ್ಳಿಯ "ಶ್ರೀ ರೇಣುಕಾ ಪಾವರ್ ಪ್ರಿಂಟಿಂಗ್ ಪ್ರೆಸ್ಸಿ"ನ ಕಾರ್ಮಿಕ ವರ್ಗಕ್ಕೆ, ಮತ್ತು ಆತ್ಮೀಯ ಓದುಗರೇ ನಿಮಗೆ ನಾನು ಕೃತಜ್ಞ.

ಬೆಂಗಳೂರು

ಜೂನ್, 1989

**ರಾಜಾ ಚೆಂಡೂರ್**

# ಅರ್ಪಣೆ

ಅಂತಿಮ ಕ್ಷಣದವರೆಗೂ
ಕೈ ಹಿಡಿದವರ ಮತ್ತು ಹೆತ್ತವರ
ನೋವು ನಲಿವುಗಳಿಗೆ ಸ್ಪಂದಿಸುತ್ತಾ
ಅವರ ಏಳ್ಗೆಯನ್ನು ಬಯಸುತ್ತಾ
ತಮ್ಮ ಉಳಿದ ಕೆಲವು ಕನಸುಗಳು
ನನಸಾಗುವುದಕ್ಕೆ ಮುಂಚೆಯೇ—
ಇತ್ತೀಚೆಗಷ್ಟೇ ನಮ್ಮನ್ನಗಲಿದ

## ನನ್ನ ತಾಯಿಗೆ

## ಸೆಂಟ್ರಲ್ ಬ್ಯೂರೋ ಆಫ್ ಇನ್‌ವೆಸ್ಟಿಗೇಷನ್.

ಆರನೇ ಅಂತಸ್ತು.

ಉಳಿದ ಆಫೀಸುಗಳಿಗೂ ಅದಕ್ಕೂ ವ್ಯತ್ಯಾಸವಿದೆ. ಆಫೀಸಿನಲ್ಲೆಲ್ಲಾ ಎಲ್ಲರೂ ಸುತ್ತಬಹುದು. ಆದರೆ ಆ ಅಂತಸ್ತು ಮಾತ್ರ ಉನ್ನತಾಧಿಕಾರಿಗಳಿಗೆ, ಸಿ. ಬಿ. ಐ. ಆಫೀಸರ್‌ಗಳಿಗೆ ಮಾತ್ರವೇ ಪರಿಮಿತ.

ಸಂಪೂರ್ಣವಾಗಿ ಏರ್‌ಕಂಡೀಷನ್ ಮಾಡಲ್ಪಟ್ಟ ವಿಶಾಲವಾದ ಆ ವರಾಂಡದ ಗೋಡೆಗಳಿಗೆ ಕಂಪ್ಯೂಟರೈಜ್ಡ್ ಕಬ್ಬಿಣದ ಬೀರುಗಳನ್ನು ಅಳವಡಿಸಲಾಗಿದೆ. ಒಬ್ಬೊಬ್ಬ ಆಫೀಸರ್‌ಗೆ ಒಂದೊಂದು ಕೋಡ್ ನಂಬರ್ ಕೊಡಲಾಗಿದೆ. ಅವು ಮಾತ್ರವೇ ಅವರಿಗೆ ಸಂಬಂಧಿಸಿದ ಬೀರುಗಳನ್ನು ತೆರೆಯುತ್ತವೆ. ತಮ್ಮ ಶೋಧನೆಗಳ ರಿಪೋರ್ಟ್‌ಗಳನ್ನು ಅವರು ಅದರಲ್ಲಿರಿಸುತ್ತಾರೆ. ಅವನ್ನು ಹೊರಗೆಡಹುವ ಅವಕಾಶವೇ ಇರುವುದಿಲ್ಲ.

ಲಿಫ್ಟ್ ಆರನೇ ಅಂತಸ್ತಿನಲ್ಲಿ ನಿಂತಿತು.

ಡೆಪ್ಯೂಟಿ ಕಮಿಷನರ್ ಆಫ್ ಸಿ. ಬಿ. ಐ. ಹೊರಬರುತ್ತಿದ್ದಂತೆಯೇ ಅದರ ಬಾಗಿಲು ಮುಚ್ಚಿಕೊಂಡಿತು. ಪ್ರವೇಶ ದ್ವಾರದ ಬಳಿ ಗಾರ್ಡ್ ಸೆಲ್ಯೂಟ್ ಮಾಡಿದ. ಅದನ್ನು ಸ್ವೀಕರಿಸಿ ಒಳಗೆ ಹೆಜ್ಜೆ ಇರಿಸುತ್ತಿದ್ದಂತೆಯೇ ಗಾರ್ಡ್ ಬಾಗಿಲು ಮುಚ್ಚಿದ.

ಒಳಗೆ ತಂಪಾಗಿತ್ತು. ವಿಶಾಲವಾದ ಕೋಣೆ. ಬ್ಯಾಂಕಿನಲ್ಲಿಯ ಲಾಕರ್‌ಗಳಂತಹ ಕಬ್ಬಿಣದ ಬೀರುಗಳು...ತನಗೆ ಸಂಬಂಧಿಸಿದ ಬೀರುವಿನ ಮುಂದೆ ನಿಂತು, ಡೆಪ್ಯೂಟಿ ಕಮಿಷನರ್ ಗುಂಡಿಗಳನ್ನು ಒತ್ತುತ್ತಿದ್ದಂತೆಯೇ ಕಂಪ್ಯೂಟರ್ ತನ್ನ ಕೆಲಸವನ್ನು ಪ್ರಾರಂಭಿಸಿತು.

"೭೮೬ .."

"ಕ್ಯಾಚ್ ವರ್ಡ್ ಪ್ಲೀಜ್..." ಕಂಪ್ಯೂಟರ್ ಕೇಳಿತು.

"ಬಂಗಾಳಕೊಲ್ಲಿ"

"ಆಳವೆಷ್ಟು ?"

"೭೬೧೮೮ ಅಡಿಗಳು"

ಕಂಪ್ಯೂಟರ್ ತೃಪ್ತಿಹೊಂದಿದಂತೆ ಬಾಗಿಲು ತೆರೆದುಕೊಂಡಿತು.

ಆದರಲ್ಲಿತ್ತು...

"ರೆಡ್ ಫೈಲ್"

ದೇಶಕ್ಕೆ ಅಪಾಯಕಾರಿಗಳಾದ......ಅತ್ಯಂತ ದಾರುಣವಾದ ಮೇಧಾವಿ ನರರೂಪಿ ರಾಕ್ಷಸರಿಗಾಗಿ ಮಾತ್ರವೇ ಉಪಯೋಗಿಸುವ ಫೈಲ್ !!!

ಸುಮಾರು ಎರಡು ವರ್ಷಗಳ ಕಾಲ ರಹಸ್ಯವಾಗಿ ಪರಿಶೋಧಿಸಿ ಮೂರನೇ ಕಣ್ಣಿಗೆ ತಿಳಿಯದಂತೆ ಎಷ್ಟೋ ವಿಷಯಗಳನ್ನು ಸಂಗ್ರಹಿಸಿ, ಒಂದೊಂದೇ ಪೇಜನ್ನು ನಿರ್ಮಿಸಿ, ಕಾಪಾಡಿಕೊಂಡು ಬಂದಿರುವ ಫೈಲ್ !! ಆ ದಿನ ಅದರ ವಿಷಯಗಳನ್ನು ಎಲ್ಲರಿಗೂ ತಿಳಿಸಲಾಗುತ್ತದೆ. ಸಿ. ಬಿ. ಐ. ಆಫೀಸರುಗಳೆಲ್ಲ ತದೇಕಚಿತ್ತರಾಗಲಿದ್ದಾರೆ.

ನಾಲ್ಕನೆ ಅಂತಸ್ತಿನಲ್ಲಿ-ಇನ್ನು ಹತ್ತು ನಿಮಿಷಗಳಲ್ಲಿ-ನಡೆಯಲಿರುವ ಮೀಟಿಂಗ್‌ನಲ್ಲಿ ತಾನು ಪ್ರಕಟಿಸಲಿರುವ ವಿಷಯ ಬಾಂಬಿನಂತೆ ಸಿಡಿಯುತ್ತದೆಂದು ಡೆಪ್ಯೂಟಿ ಕಮೀಷನರ್‌ಗೆ ಗೊತ್ತು. ದೇಶದ ಪ್ರಜೆಗಳೆಲ್ಲಾ ಎಷ್ಟೋ ಗೌರವ ದಿಂದ ಕಾಣುವ ವ್ಯಕ್ತಿಯ ಬಗ್ಗೆ ಎರಡು ವರ್ಷಗಳಿಂದ, ಜೀವನದ ಗುರಿಯಾಗಿಸಿ ನಿರ್ಮಿಸಿಕೊಂಡು ಬರುತ್ತಿರುವ ಫೈಲು...

ಅದರ ವಿವರಗಳನ್ನು ಇಂದಿನ ಮೀಟಿಂಗ್‌ನಲ್ಲಿ ಹೊರಗೆಡುವಲಾಗುತ್ತದೆ.

* * * *

"ಡಿಯರ್ ಫ್ರೆಂಡ್ಸ್..."

ಡೆಪ್ಯೂಟಿ ಕಮೀಷನರ್ ಹೇಳಲು ಪ್ರಾರಂಭಿಸಿದರೂ, ಆಫೀಸರ್‌ಗಳೆಲ್ಲಾ ಇನ್ನೂ ಪಾಕಿನಿಂದ ಚೇತರಿಸಿಕೊಂಡಿರಲಿಲ್ಲ. ಡಿ. ಸಿ. ಕೈಯಲ್ಲಿದ್ದ ಕೆಂಪು ಫೈಲನ್ನು ನೋಡಿದ ಕೂಡಲೇ ಕಲರವ ಪ್ರಾರಂಭವಾಯಿತು.

ಡಿಪಾರ್ಟ್‌ಮೆಂಟಿನಲ್ಲಿ ನಾಲ್ಕೈದಕ್ಕಿಂತಲೂ ಹೆಚ್ಚು ರೆಡ್‌ಫೈಲ್ಸ್ ಇರ ಲಿಲ್ಲ. ಕ್ರೈಮ್‌ನ ಸ್ಥಾಯಿಯನ್ನನುಸರಿಸಿ ನೀಲಿ, ಹಳದಿ, ಕಪ್ಪು......ಹೀಗೆ ಫೈಲುಗಳನ್ನು ಏರ್ಪಡಿಸಿಕೊಳ್ಳುತ್ತಾರೆ. ದೇಶಕ್ಕೆ ಅತ್ಯಂತ ಅಪಾಯಕಾರಿಗಳಾದ

ಟೆರ್ರರಿಸ್ಟ್‌ಗಳಿಗೆ, ಸ್ಮಗ್ಲರ್‌ಗಳಿಗೆ ಮಾತ್ರವೇ ರೆಡ್‌ಫೈಲನ್ನು ಉಪಯೋಗಿಸಲಾಗುತ್ತದೆ. ಹಾಗಾದರೂ ದೇಶದಲ್ಲೆಲ್ಲ ಅಂತಹವರು ಕೇವಲ ನಾಲ್ಕೈದು ಜನ ಮಾತ್ರ. ಇಬ್ಬರು ಲಾಕಪ್‌ನಲ್ಲಿ. ಒಬ್ಬ ಪಂಜಾಬಿನಲ್ಲಿ, ಮತ್ತೊಬ್ಬ ಸ್ವೀಡನ್‌ನಲ್ಲಿ,

ಇಷ್ಟು ಕಾಲದನಂತರ ಮತ್ತೊಂದು ಫೈಲು .. ಯಾರು ಆ ವ್ಯಕ್ತಿ?

# 1

ಆಫ್ರಿಕಾದ ಅತ್ಯಂತ ಬೆಲೆಬಾಳುವ, ಪ್ರತಿಷ್ಠೆಯ ಆಲ್ಮಂಡ್ ಜಿಂಕೆಯ ಚರ್ಮಕ್ಕೆ ಚೈನಾ ದೇಶದ ಕಲಾವಿದರು ಹೆಣೆದ ಲೇಸುಗಳ ಮಕ್ಮಲ್ ಬಟ್ಟೆಯ ಮೇಲೆ ಗಾಂಭೀರ್ಯದಿಂದ ಕುಳಿತಿದ್ದಾನೆ ಅನಂತಾನಂತಸ್ವಾಮಿ. ಗೋಪುರಾಕಾರದ ಹದಿನೈದು ಅಡಿ ಎತ್ತರವಿದ್ದ ಆ ವಿಶಾಲವಾದ ಹಾಲಿನಲ್ಲಿ ಒಂದೊಂದು ಗೋಡೆಯೂ ಒಂದೊಂದು ಕನ್ನಡಿಯಂತೆ ಮಿರುಗುತ್ತಿದೆ. ಜಿಂಕೆ ಚರ್ಮದ ಕೊನೆಯಲ್ಲಿ ಅಳವಡಿಸಿದ ರತ್ನಗಳು ಗಾಳಿಗೆ ನಿಧಾನವಾಗಿ ಅಲ್ಲಾಡುತ್ತಿವೆ. ಎದುರಿನಲ್ಲಿದ್ದ ಬೆಲ್ಜಿಯಮ್ ಕನ್ನಡಿಯಲ್ಲಿ ಆ ಕೋಣೆಯ ಶೋಭೆ ದ್ವಿಗುಣೀಕೃತವಾಗುತ್ತಿದೆ. ದಕ್ಷಿಣ ಭಾರತದ ಶಿಲ್ಪಿಗಳು ಎಷ್ಟೋ ಏಕಾಗ್ರತೆಯಿಂದ ಕೆತ್ತಿದ ಶಿಲ್ಪಗಳು ಆ ಸ್ತಂಭಗಳ ಗೋಡೆಗಳಿಗೆ ಹೊಸ ಕಳೆಯನ್ನು ತರುತ್ತಿತ್ತು. ಸ್ವಾಮಿ ಕುಳಿತಿದ್ದ ಮಂಟಪದ ಮೇಲ್ಭಾಗದಲ್ಲಿದ್ದ ಜಪಾನೀಸ್ ಷಾಂಡ್ಲಿಯರ್ ವಿಧವಿಧ ಕಾಂತಿಗಳನ್ನು ಚಿಮ್ಮುತ್ತಿತ್ತು. ಪ್ರಾಚೀನ ಸಾಂಪ್ರದಾಯಿಕ ಪಾತ್ರೆಗಳಲ್ಲಿ ಸುಗಂಧ ದ್ರವ್ಯಗಳು ಪಕ್ಕದಲ್ಲಿವೆ.

ಒಟ್ಟಿನಲ್ಲಿ ಪ್ರಪಂಚದ ಎಲ್ಲಾ ದೇಶಗಳೂ ಆ ಕೋಣೆಗೆ ತಮ್ಮ ಅಂಶಗಳನ್ನು ನೀಡಿವೆ.

ಒಂದು ಕಾಲನ್ನು ಮುಂದಕ್ಕೆ ಚಾಚಿ, ಒಂದು ಕಾಲನ್ನು ಮಡಿಸಿ, ಒಂದು ಕೈಯನ್ನು ಎದೆಯ ಮೇಲಿಟ್ಟುಕೊಂಡು ಠೀವಿಯಿಂದ ಕಣ್ಣನ್ನು ಅರೆಮುಚ್ಚಿ ಕುಳಿತಿದ್ದಾನೆ ಅವನು.

ಸುಂದರಿಯೊಬ್ಬಳು ಶ್ರೇಷ್ಠವಾದ ಮೈಸೂರು ಗಂಧವನ್ನು ಅವನ ಭುಜಕೆ ಬಳಿಯುತ್ತಿದ್ದಾಳೆ. ಮತ್ತೊಬ್ಬ ಹುಡುಗಿ ಅವನ ಕಣ್ರೆಪ್ಪೆಗಳನ್ನು ತಿದ್ದುತ್ತಿದ್ದಾಳೆ. ಮತ್ತೊಬ್ಬಳು ಅವನ ಕಾಲುಗಳನ್ನು ಒತ್ತುತ್ತಿದ್ದಾಳೆ.

ಐದು ನಿಮಿಷಗಳಲ್ಲಿ ಸೇವೆ ಪೂರ್ತಿಯಾಯಿತು. ಅವನು ಮೇಲೆದ್ದ. ಆಜಾ

ನುಬಾಹು, ಅರವಿಂದ ದಳಾಕ್ಷ. ಅವನು ನಡೆಯುತ್ತಿದ್ದರೆ ಅವನ ಅಂಗಾಂಗಗಳು ಗಾಂಭೀರ್ಯದಿಂದ ಅಲುಗಾಡುತ್ತಿದ್ದವು. ವಿಶಾಲವಾದ ಕಾರಿಡಾರ್‌ನಲ್ಲಿ ಅವನು ಬರುತ್ತಿದ್ದಂತೆ ಸೇವಕರು ವಿನಯದಿಂದ ತಲೆ ತಗ್ಗಿಸುತ್ತಿದ್ದರು. ಕಾರಿಡಾರ್ ಕೊನೆಯಲ್ಲಿ ದೊಡ್ಡ ಹಾಲ್. ಅವನು ಆ ಹಾಲಿಗೆ ಪ್ರವೇಶಿಸುತ್ತಿದ್ದಂತೆಯೇ ಪ್ರಪಂಚದ ವಿವಿಧ ಕಡೆಗಳಿಂದ ಬಂದಿದ್ದ ಭಕ್ತರು, ಬೇಶಿಯರು ಒಮ್ಮೆಗೇ ಎತ್ತರದ ಸ್ವರದಲ್ಲಿ "ಅನಂತಾನಂತ ಸ್ವಾಮಿಗೆ ಜೈ" ಎಂದು ಮುಕ್ತಕಂಠದಿಂದ ಕಿರುಚಿದರು.

* * * *

"ಅನಂತಾನಂತ ಸ್ವಾಮಿಯನ್ನು ನೀವೆಂದಾದರೂ ನೋಡಿದ್ದೀರಾ?"

ಡೆಪ್ಯುಟಿ ಕಮಿಷನರ್ ಕೇಳಿದ ಪ್ರಶ್ನೆಗೆ ಅಧಿಕಾರಿಗಳೆಲ್ಲಾ ಮುಖ ಮುಖ ನೋಡಿಕೊಂಡರು.

"...ಹೌದು. ಈ ಫೈಲು ಆತನ ಬಗ್ಗೆಯೇ"

ಆಣೆಕಟ್ಟು ಒಡೆದು ನದಿಯ ಪ್ರವಾಹ ನುಗ್ಗಿ ಬಂದಂತೆ ಆ ಕೋಣೆಯಲ್ಲಿ ಕಲರವ ಪ್ರಾರಂಭವಾಯಿತು. ಸಿ. ಬಿ. ಐ. ಆಫೀಸರುಗಳೆಂಬ ವಿಷಯವನ್ನೂ ಮರೆತು ಅವರವರಲ್ಲೇ ಮಾತನಾಡಿಕೊಳ್ಳಲು ಪ್ರಾರಂಭಿಸಿದರು. ಡಿ. ಸಿ.ಯವರ ಮಾತು ಮುಂದುವರೆಯಿತು.

"...ಪ್ರಧಾನ ಮಂತ್ರಿ ದೇಶದಲ್ಲಿ ಯಾವುದಾದರೂ ಆಣೆಕಟ್ಟಿಗೆ ಶಂಕು ಸ್ಥಾಪನೆ ಮಾಡಬೇಕೆಂದರೆ ಅದಕ್ಕೆ ಆತ ಮುಹೂರ್ತ ಇಡಬೇಕು. ಮುಖ್ಯ ಮಂತ್ರಿ ಗುಡಿಯಲ್ಲಿ ವಿಗ್ರಹ ಬದಲಾಯಿಸಲು ಆತ ಪೂಜೆ ಮಾಡಬೇಕು. ಹಸ್ತ ಸಾಮುದ್ರಿಕೆಯಲ್ಲಿ ಆತನಷ್ಟು ಶ್ರೇಷ್ಠರಿಲ್ಲವೆಂದು ಅಧಿಕಾರದಲ್ಲಿರುವ ಪಕ್ಷದವರೂ, ವಿರೋಧ ಪಕ್ಷದವರೂ ಒಟ್ಟಿಗೇ ಅಂಗೀಕರಿಸುತ್ತಾರೆ. ಆತ ಯಾರ ಕೈಯನ್ನಾದರೂ ನೋಡಿ, "ನೀನು ನಾಲ್ಕು ದಿನಗಳಲ್ಲಿ ಸಾಯುತ್ತೀಯೆಂದು ಹೇಳಿದರೆ ಅವರು ಸಾಯುವುದು ಖಂಡಿತ. ವಿಚಿತ್ರವೇನೆಂದರೆ ಈ ಸಾವೆಂಬುದು ಜ್ವರದಿಂದಾಗಲೀ, ಆಕ್ಸಿಡೆಂಟ್‌ನಿಂದಾಗಲೀ ಅಲ್ಲ; ಆಕ್ಸಿಡೆಂಟ್‌ನಂತಹ ಕೊಲೆಯಿಂದಲೋ, ಅತ್ಯಾಚಾರದಿಂದಲೋ ನಡೆಯುತ್ತದೆ. ಅಷ್ಟು ಜಾಣತನದಿಂದ ಆತ ಸಾವನ್ನು ಆಳಬಲ್ಲ. ಈ ಎರಡು ವರ್ಷಗಳಲ್ಲಿ ಸುಮಾರು ಎಪ್ಪತ್ತು ಜನರಿಗೆ ಆತ ಭವಿಷ್ಯ ಹೇಳಿದ್ದಾನೆ. ಆ ಎಪ್ಪತ್ತು ಜನರೂ ಸತ್ತಿದ್ದಾರೆ. ಸಾವನ್ನು ಆ ರೀತಿ ಆತ ಆಳುತ್ತಾನೆ....

"...ಸತ್ತು ಹೋದ ಎಪ್ಪತ್ತು ಜನರಲ್ಲಿ, ಐವತ್ತು ಜನ ರಾಜಕೀಯಕ್ಕೆ ಸಂಬಂಧಿಸಿದವರು.

"ಮತ್ತು ಬರಿಸುವ ಪಾನೀಯಗಳು, ಗಾಂಜಾ, ಮಾರ್ಜುವಾನಾ, ಸ್ತ್ರೀಯರು, ಬಂಗಾರ, ಸ್ಮಗ್ಲಿಂಗ್...ಈ ಎಲ್ಲದರಲ್ಲಿ ಯಾವುದು ಹೆಚ್ಚು ಲಾಭದಾಯಕ ವ್ಯಾಪಾರ? ಉಹ್ಲೂ...ಇವ್ಯಾವೂ ಅಲ್ಲ. ಎಲ್ಲಕ್ಕಿಂತಲೂ ಉತ್ತಮ ವ್ಯಾಪಾರ ರಾಜಕೀಯ!!! ಹೇಗೋ ಒಂದು ರೀತಿ ಒಬ್ಬ ವ್ಯಕ್ತಿಯನ್ನು ಮುಖ್ಯಮಂತ್ರಿಯನ್ನಾಗಿ ಮಾಡು. ಶೇ. ಹತ್ತನ್ನು ಕೇಳು. ಐದು ವರ್ಷಗಳಲ್ಲಿ ಒಂದು ಕೋಟಿ ರೂಪಾಯಿಯ ವರೆಗೂ ಸಿಗುತ್ತದೆ. ಆ ಕೋಟಿಯಲ್ಲಿ ಮತ್ತೆ ಶೇ. ಹತ್ತು ಖರ್ಚುಮಾಡಿದರೆ ಒಂದು ಸ್ಥಾನ ಖಾಲಿ ಮಾಡಲು ಒಬ್ಬ ಮಂತ್ರಿಯನ್ನು ಕೊಲ್ಲಬಹುದು. ಒಬ್ಬ ನಿಯತ್ತಾದ ಮಂತ್ರಿಯನ್ನು ಲಂಚಕೋರನೆಂದು ನಿರೂಪಿಸಿ ರಾಜೀನಾಮೆ ಪಡೆಯಬಹುದು. ವಿರೋಧಪಕ್ಷದ ಮೀಟಿಂಗ್‌ನಲ್ಲಿ ಬಾಂಬುಗಳನ್ನಿಟ್ಟು ಇಬ್ಬರು–ಮೂವರನ್ನು ಸಾಯಿಸಿ ಅದನ್ನು ಆಡಳಿತ ಪಕ್ಷವೇ ಮಾಡಿಸಿದ್ದೆಂದು ಪ್ರಜೆಗಳಲ್ಲಿ ಭ್ರಾಂತಿ ಹುಟ್ಟಿಸಬಹುದು ... ಅನಂತಾನಂತಸ್ವಾಮಿಯ ಟೆಕ್ನಿಕ್ ಇದೇ..."

ಕೋಣೆಯಲ್ಲಿ ಅಧಿಕಾರಿಗಳು ಬಿಳಿಚಿಕೊಂಡು ಕೇಳುತ್ತಿದ್ದಾರೆ. ಅಂಗವಿಕಲ ಮಕ್ಕಳ ಟ್ರಸ್ಟ್, ವೃದ್ಧ ಜನೋಪಕಾರಿ ಸಂಘ, ದೀನ ಸಮಾಜೋದ್ಧಾರ ಸಮಾಜ, ವಿಧವಾ ಹಿತರಕ್ಷಣ ಸಂಸ್ಥೆಗಳ ಎಷ್ಟಕ್ಕೋ ಆತ–ಸುಮಾರು ನಾಲ್ಕು ಕೋಟಿ ರೂಪಾಯಿಗಳ ಆಸ್ತಿಗೆ ಅವನು ಅಧಿಕಾರಿ. ಅಂತಹ ವ್ಯಕ್ತಿಯ ಮೇಲೆ ಸಿ. ಬಿ. ಐ....

ಡಿ.ಸಿ.ಯ. ಮಾತು ಮುಂದುವರೆಯಿತು.

"ಹಿಂದುಗಳು ಸ್ವಭಾವತಃ ಸಹನಶೀಲರು. ಆ ಗುಣವೇ ಅವರಲ್ಲಿಲ್ಲದಿದ್ದರೆ ದೇಶ ಹೀಗಿರುತ್ತಿರಲಿಲ್ಲ. ದೇಶವ ಮೈನಾರಿಟಿ ವರ್ಗದಲ್ಲಿ ಸುಸ್ಥಿರತೆಯ ಭಾವನೆ ಕಡಿಮೆಯಾಗುವಂತೆ ಮಾಡುತ್ತಿದ್ದಾರೆ. ಸರಿಯಾಗಿ ಅದೇ ಪಾಯಿಂಟನ್ನು ಹಿಡಿದಿದ್ದಾನೆ ಅನಂತಾನಂತಸ್ವಾಮಿ! ಆದರೆ ಇದೆಲ್ಲಾ ಎಷ್ಟೋ ಸಿಸ್ಟಮ್ಯಾಟಿಕ್ಕಾಗಿ, ಯಾರಿಗೂ ಅನುಮಾನ ಬರದಂತೆ ಮಾಡುತ್ತಿದ್ದಾನೆ. ಸುಮಾರು ಇಪ್ಪತ್ತು ವರ್ಷಗಳ ಕೃಷಿಯಿದೆ ಇದರ ಹಿಂದೆ.

"–ಮತ ಆತನ ಆಯುಧ! ವೆಪನ್!!

"–ರಾಜಕೀಯ ಆತನ ಆಟ! ಗೇಮ್!!

"ಆತ ವಿಮಾನದಿಂದ ಇಳಿಯುತ್ತಿದ್ದರೆ ನೂರಾರು ಜನ ಪೂರ್ಣಕುಂಭ ಸ್ವಾಗತ ನೀಡುತ್ತಾರೆ. ವಿದೇಶಗಳಿಗೆ ಹೋದರೆ, ವಾಪಸ್ಸಾಗುವಾಗ ವಿದೇಶ

ಮಂತ್ರಿ ಸ್ವತಃ ಬೀಳ್ಕೊಡುತ್ತಾನೆ.

"ಇಂತಹ ಮಹೋನ್ನತ ವ್ಯಕ್ತಿ, ಮತ ರಕ್ಷಕ, ರಾಜಕೀಯ ಅಧಿನೇತ, ನಿರ್ಣಯ ನಿರ್ದೇಶಕನಾದ ಅನಂತಾನಂತಸ್ವಾಮಿಯ ಕತ್ತಲಕೋನವನ್ನು ನಾನು ಎರಡು ವರ್ಷಗಳಿಂದಲೂ ಗಮನಿಸಿದೆ, ಶೋಧಿಸಿದೆ. ಆತನ ಪ್ರತಿಯೊಂದು ಚಟುವಟಿಕಗಳನ್ನೂ ಭೂತಗಾಜಿನಲ್ಲಿ ನೋಡಿ ರೆಕಾರ್ಡ್ ಮಾಡಿದ್ದೇನೆ. ಅದಕ್ಕೆ ಸಂಬಂಧಪಟ್ಟಿದ್ದೆಲ್ಲಾ ಈ ಫೈಲಿನಲ್ಲಿದೆ. ಆದರೆ ಆತನ ಮೇಲೆ ಆಕ್ಷನ್ ತೆಗೆದು ಕೊಳ್ಳಲು ಸಾಕಷ್ಟು ಪುರಾವೆಗಳಿನ್ನೂ ನನಗೆ ಲಭಿಸಿಲ್ಲ.

"ಇಂದು ಸಂಜೆ ಅಂತಹ ಪುರಾವೆಯೊಂದು ಸಿಗಲಿದೆ...''

–ಆಫೀಸರುಗಳೆಲ್ಲಾ ಉತ್ಸುಕತೆಯಿಂದ ಮುಂದಕ್ಕೆ ಬಗ್ಗಿದರು. ಆ ಕೋಣೆಯಲ್ಲಿ ಸೂಜಿ ಬಿದ್ದರೂ ಕೇಳಿಸುವಷ್ಟು ನಿಶ್ಶಬ್ಧ ಆವರಿಸಿತ್ತು.

"...ಈ ದಿನ ಸಂಜೆ ರವೀಂದ್ರ ಕಲಾಕ್ಷೇತ್ರದಲ್ಲಿ ಒಂದು ನಾಟಕ ಪ್ರದರ್ಶನ ವಿದೆ. ಇಂದಿರಾ ಗಾಂಧಿ ಮಹಿಳಾ ಕಲಾಶಾಲೆಯವರು ಈ ಕಾರ್ಯಕ್ರಮವನ್ನು ವಿಕಲಾಂಗ ಮಕ್ಕಳ ಸಹಾಯಾರ್ಥ ಏರ್ಪಡಿಸಿದ್ದಾರೆ. ಇದಕ್ಕೆ ಅಧ್ಯಕ್ಷತೆ ವಹಿಸು ತ್ತಿರುವುದು ಕಾರ್ಮಿಕಮಂತ್ರಿ ಸೂರ್ಯಾರಾವ್. ನನಗೆ ತಲುಪಿರುವ ರಹಸ್ಯ ಸಮಾಚಾರದ ಪ್ರಕಾರ ಆತನನ್ನು ಅಲ್ಲಿ ಕೊಲ್ಲುವ ಪ್ರಯತ್ನ ನಡೆಯಲಿದೆ".

–ಕೇಳುತ್ತಿದ್ದವರೆಲ್ಲಾ ಆಸಕ್ತಿಯಿಂದ ನೋಡಿದರು. ಗುಸು ಗುಸು ಪ್ರಾರಂಭವಾಯಿತು.

"ಈಗೊಂದು ವಾರದ ಹಿಂದೆ ಸ್ವಾಮಿ ಸೂರ್ಯಾರಾವ್‌ನ ಕೈನೋಡುತ್ತಾ 'ಮುಗಿದಿದೆ ತಮ್ಮಾ ಎಚ್ಚರಿಕೆ' ಎಂದು ಎಚ್ಚರಿಸಿದ್ದು ಕಾಕತಾಳೀಯವಾಗಿರ ಬಹುದು. ಆದರೆ ಈ ಪ್ರಯತ್ನ ನಡೆಯುತ್ತಿದ್ದಂತೆ ಕನಿಷ್ಟ ಒಬ್ಬ ಟೆರ್ರರಿಸ್ಟನ್ನಾ ದರೂ ನಾವು ಹಿಡಿದರೆ–ಮತ್ತಷ್ಟು ವಿಷಯಗಳು ಹೊರಬೀಳುವುದು. ಸರ್ಸ್... ಇಷ್ಟು ದಿನ ಈ ವಿಷಯಗಳೆಲ್ಲಾ ನನಗೆ ಮಾತ್ರ ಸೀಮಿತವಾಗಿತ್ತು. ಇಂದು ನಿಮ್ಮೆಲ್ಲರ ಸಹಕಾರ ಬೇಕಾಗಿರುವುದರಿಂದ ಇಷ್ಟು ದಿನ ನಾನು ಶೇಖರಿಸಿದ್ದ ಸಮಾಚಾರವನ್ನು ನಿಮ್ಮ ಮುಂದೆ ಇಡುತ್ತಿದ್ದೇನೆ. ಈ ಫೈಲನ್ನು ಪೂರ್ತಿ ಓದಿ. ಈ ವಿಷಯಗಳನ್ನೆಲ್ಲಾ ನೀವು ತುಂಬಾ ರಹಸ್ಯವಾಗಿಯೂ, ಗೋಪ್ಯವಾಗಿಯೂ ಇರಿಸಬೇಕೆಂದು ನಿಮಗೆಲ್ಲಾ ಹೇಳುವ ಅಗತ್ಯವಿಲ್ಲ. ಈ ಸಂಜೆ ನಾವೆಲ್ಲಾ ಅಲ್ಲಿಗೆ ಹೋಗುತ್ತಿದ್ದೇವೆ. ನಮ್ಮ ಕೋಡ್ ಕಾಲರ್."

(ಹತ್ಯೆಯ ಪ್ರದೇಶದಲ್ಲಾಗಲೀ, ಮೀಟಿಂಗುಗಳಲ್ಲಾಗಲಿ ಆಫೀಸರ್‌ಗಳು ಒಬ್ಬರನ್ನೊಬ್ಬರು ಗುರುತಿಸಲು ಒಂದು ಕೋಡನ್ನು ಏರ್ಪಡಿಸಿಕೊಳ್ಳುತ್ತಾರೆ. ಆ ಕೋಡನ್ನು ಕೊನೆಯ ಕ್ಷಣವಲ್ಲಿ ಮಾತ್ರ ಹೊರಗೆಡುಹಲಾಗುತ್ತದೆ. ಆ ದಿನ

ಕಾಲರನ್ನು ಸ್ವಲ್ಪ ಮೇಲೆತ್ತಿರುವುದು ಗುರುತು.)

"ಸೂರ್ಯಾರಾವ್‌ರವರಿಗೆ ಇವತ್ತಿನ ಕಾರ್ಯಕ್ರಮಕ್ಕೆ ಬರದಿರಲು ಎಚ್ಚರಿಕೆ ಸೂಚಿಸೋಣವಾ ?" ಯಾರೋ ಕೇಳಿದರು.

"ನಮಗೇನೋ ಸುದ್ದಿ ಸಿಗುತ್ತಿದ್ದಂತೆಯೇ ಮಂತ್ರಿಗಳನ್ನು ಕಾರ್ಯಕ್ರಮಗಳಿಗೆ ಹೋಗದಿರುವಂತೆ ಸಲಹೆ ನೀಡಿದರೆ, ದೇಶದಲ್ಲಿ ಯಾವ ನಾಯಕರೂ ಬಹಿರಂಗವಾಗಿ ಕಾಣಿಸಿಕೊಳ್ಳಲು ಸಾಧ್ಯವಿರುವುದಿಲ್ಲ. ನಾವಲ್ಲಿ ಆತನಿಗೆ ರಕ್ಷಣಾ ವಲಯವನ್ನು ಏರ್ಪಡಿಸಬೇಕು. ಅವರನ್ನು ಹಿಡಿಯಲು ಇದಕ್ಕಿಂತಲೂ ಉತ್ತಮ ಅವಕಾಶ ಮತ್ತೊಮ್ಮೆ ಬರದು, ಬೆಸ್ಟ್ ಆಫ್ ಲಕ್..."

ಎಲ್ಲರೂ ನಿಶ್ಶಬ್ದದಿಂದ ಎದ್ದರು.

ಅನಂತಾನಂತಸ್ವಾಮಿಯ ಸುತ್ತಲೂ ಸಿ. ಬಿ. ಐ. ಬಲೆ!

ಸಿ. ಬಿ. ಐ. ಚರಿತ್ರೆಯಲ್ಲಿ ಇಷ್ಟು ದೊಡ್ಡ ಆಪರೇಷನ್ ಹಿಂದೆಂದೂ ನಡೆದಿರಲಿಲ್ಲ.

ಎಲ್ಲರ ಮನಸ್ಸು ಟೆನ್ಷನ್‌ನಿಂದ ತುಂಬಿತ್ತು.

* * * *

ಆ ವಿಗ್ರಹವನ್ನು ನೋಡಿದರೆ ಯಾರೂ ಅದನ್ನು ಮನೆಯೊಳಗಿನ ದೇವರ ಮನೆಯದೆಂದು ಹೇಳರು. ವಿಗ್ರಹವೇ ಆರಡಿಗಳ ಎತ್ತರವಿದೆ. ವಿಶಾಲವಾದ ಗರ್ಭಗುಡಿ. ಅನಂತಾನಂತಸ್ವಾಮಿಯ ಮನೆಯ ಅಂಗಳದಲ್ಲಿರುವ ಪೂಜಾ ಮಂದಿರ ಅದು,

ಕಚ್ಚೆ ಪಂಚೆಯನ್ನು ಮೇಲೆತ್ತಿ ಹಿಡಿದು ಗಡಿಬಿಡಿಯಿಂದ ಪ್ರವೇಶಿಸಿದ ಸಿ. ಬಿ. ಐ. ಛೀಫ್. ಆತ ಇನ್ನೆರಡು ವರ್ಷಗಳಲ್ಲಿ ರಿಟೈರ್ ಆಗಲಿದ್ದ. ಅನಂತಾನಂತಸ್ವಾಮಿಯನ್ನು ದೇವರ ಅವತಾರವೆಂದು ನಂಬಿದ್ದ. ಭಗವಂತನ ವಿರುದ್ಧ ಎನ್‌ಕ್ವೈರೀನಾ? ಅಪಚಾರ...

ಬರುತ್ತಿದ್ದಂತೆಯೇ ಸ್ವಾಮಿಯ ಕಾಲಿಗೆರಗಿದ. "ಹತ್ತು ನಿಮಿಷಗಳ ಮುಂಚೆಯಷ್ಟೇ ನಮ್ಮ ಡಿಪಾರ್ಟ್‌ಮೆಂಟಿನಲ್ಲಿ ನನಗೊಂದು ವಿಷಯ ತಿಳಿಯಿತು ಸ್ವಾಮಿ! ಓಡೋಡಿ ಬಂದೆ "

"ಪ್ರಜೆಗಳಿಂದ ಅಪವಾದ ಶ್ರೀರಾಮನನ್ನೇ ಬಿಡಲಿಲ್ಲ. ಶ್ರೀ ಕೃಷ್ಣ ಕೂಡಾ ಅದರಿಂದ ಹೊರತಾಗಲು ಸಾಧ್ಯವಾಗಲಿಲ್ಲ. ನಾನೆಷ್ಟರವನು ಬ್ರದರ್. ಎನ್‌ಕ್ವಯರಿ ಬರಲಿ. ಒಳ್ಳೇದೇ ತಾನೇ–"

ಛೀಫ್ ಬೆಚ್ಚಿ, "ನಿಮಗೆಲ್ಲಾ ತಿಳಿದಿದೆಯಾ ಸ್ವಾಮಿ?'' ಕೇಳಿದ.

"ನಿನ್ನ ಕೈ ಕೆಳಗಿನ ಅಧಿಕಾರಿ ಡೆಪ್ಯೂಟಿ ಕಮಿಷನರ್ ಮಾತನಾಡಿದ ಪ್ರತಿ ಮಾತೂ ನನಗೆ ತಲುಪಿತು ಬ್ರದರ್.''

ಛೀಫ್ ಕೈಯೆತ್ತಿ ನಮಸ್ಕರಿಸುತ್ತಾ, "ನೀವು ಕಾಲಜ್ಞಾನಿಗಳು ಮಹಾ ಪ್ರಭು. ಹತ್ತು ನಿಮಿಷಗಳ ಹಿಂದೆಯಷ್ಟೆ ನಡೆದ ರಹಸ್ಯ ಸಮಾವೇಶದ ಬಗ್ಗೆ ಕೂಡಾ ನಿಮಗೆ ತಿಳಿದಿದೆಯೆಂದರೆ ನೀವು ಯುಗಪುರುಷರು! ನಿಮ್ಮ ವಿರುದ್ಧ ತನಿಖೆಯೆಂದರೆ ನಮಗೂ, ನಮ್ಮ ಡಿಪಾರ್ಟ್‌ಮೆಂಟ್‌ಗೂ ಕೆಡುಕು ತಪ್ಪದು" ಎಂದು ಮೇಲೆದ್ದ ಅಳುತ್ತಾ.

ಇಂತಹ ಮೂರ್ಖರೂ, ದೈವಭಕ್ತಿಯಿಂದ ಜ್ಞಾನೇಂದ್ರಿಯಗಳನ್ನು ಕಳೆದು ಕೊಂಡವರೂ, ಮತದ ಬಗ್ಗೆ ಅಗತ್ಯಕ್ಕಿಂತಲೂ ಹೆಚ್ಚು ನಂಬಿಕೆಯಿರುವವರೂ ಸಿ. ಬಿ. ಐ. ನಂತಹ ದೇಶದ ಅತ್ಯಂತ ಪ್ರತಿಷ್ಠಿತ ಡಿಪಾರ್ಟ್‌ಮೆಂಟಿನಲ್ಲಿರುತ್ತಾರಾ ಅಂದರೆ... ಇರುತ್ತಾರೆ!!

"ಬ್ರದರ್ ! ನನ್ನ ಮೇಲೆ ಅತ್ಯಂತ ಭಕ್ತಿಯಿಂದ ನೀನು ಬಂದು ಆ ಫೈಲಿನ ವಿಷಯ ಹೇಳಿದ್ದಿ. ನಿನ್ನ ಭಕ್ತಿಗೆ ಮೆಚ್ಚಿ ನಿನಗೊಂದು ತಾಯಿತ ಕೊಡುತ್ತೇನೆ. ಇದಕ್ಕೂ ಮುಂಚೆ ಕೊಟ್ಟಿದ್ದಕ್ಕಿಂತಲೂ ಇದು ಹೆಚ್ಚು ಪ್ರಭಾವ ಹೊಂದಿದೆ."

"ಕೃತಜ್ಞ ಸ್ವಾಮಿ–"

ಸ್ವಾಮಿ ಛೀಫ್‌ನ ಬಳಿ ಬಂದು ತೋಳಿಗೆ ಕಟ್ಟಿದ್ದ ಹಳೆಯ ತಾಯಿತವನ್ನು ಬಿಚ್ಚಿ ತಾನೇ ಸ್ವತಃ ಹೊಸದನ್ನು ಕಟ್ಟಿದ.

"ಆ ರೆಡ್‌ಫೈಲ್ ವಿಷಯವನ್ನು ನಾನು ನೋಡಿಕೊಳ್ಳುತ್ತೇನೆ ಸ್ವಾಮಿ."

"ಬೇಕಾಗಿಲ್ಲ ಬ್ರದರ್. ದೈವಕೃಪೆಯಿಂದ ಆಗಿನ ವಿಷಯಗಳನ್ನಾಗಲೇ ದಿವ್ಯದೃಷ್ಟಿಯಿಂದ ಗ್ರಹಿಸಬಲ್ಲೆ —"

ತುಂಬಾ ಭಕ್ತಿಯಿಂದ ಛೀಫ್ ಮತ್ತೊಮ್ಮೆ ದಂಡ ನಮಸ್ಕಾರ ಮಾಡಿ ಹೊರಟುಹೋದ. ಸ್ವಾಮಿ ಆ ಕಡೆಗೇ ನೋಡುತ್ತಾ ಕೈಯಲ್ಲಿದ್ದ ಹಳೆಯ ತಾಯಿತವನ್ನು ಬೆರಳಿನಿಂದ ಬಿಚ್ಚಿದ. ಬ್ಯಾಟರಿ ಮುಗಿದುಹೋದ ಮೈಕ್ರೋ ಫೋನ್ ಕೆಳಗೆ ಬಿತ್ತು.

...ಅಷ್ಟರಲ್ಲಿ ಅಲ್ಲಿಗೊಬ್ಬ ವ್ಯಕ್ತಿ ಬಂದ. ಅವನ ಹೆಸರು ರಾಮಲಾಲ್. ಆ ಸಂಜೆ ವ್ಯವಹಾರ ನಡೆಸಬೇಕಾಗಿದ್ದುದು ಅವನೇ,

"ಈ ದಿನ ನಾವು ಮಾಡಲಿರುವ ಕೆಲಸ ಸಿಬಿಐಗೆ ತಿಳಿದಿದೆಯಂತೆ ಕೋಡ್–ಕಾಲರ್‌ಲಿಫ್ಟಿಂಗ್... ಆಡಿಟೋರಿಯಂ ತುಂಬಾ ಅವರೇ ಇರುತ್ತಾರೇನೋ, ಪ್ರೋಗ್ರಾಮನ್ನು ನಾಳೆಗೆ ಬದಲಾಯಿಸಲಾ...?"

"ಬೇಡ... ಯದ್ಭಾವಂ ತದ್ಭವತಿ, ಅವರೆಲ್ಲರೂ ಇರುವುದೇ ಸೂಕ್ತ.'' ಮತ್ತೆ ಪೂಜೆಯಲ್ಲಿ ಮುಳುಗಿದ ಸ್ವಾಮಿ. ರಾಮ್‌ಲಾಲ್ ಅಲ್ಲಿಂದ ಹೊರಟು ಥಿಯೇಟರ್ ಬಳಿಗೆ ಬಂದ. ಅಲ್ಲಿನ್ನೂ ಪ್ರೇಕ್ಷಕರು ಸೇರಿರಲಿಲ್ಲ, ಸಾಯಂಕಾಲ ಐದೂವರೆ ಗಂಟೆಯಾಗುತ್ತಾ ಬಂತು.

ಅವನ ಮನಸ್ಸಿನಲ್ಲಿಯ ಪ್ಲಾನ್ ಸ್ಪಷ್ಟವಾಗಿಯೇ ಇತ್ತು. ಹತ್ಯೆಗೆ ನಾಲ್ವರನ್ನು ಉಪಯೋಗಿಸಬೇಕೆಂದುಕೊಂಡಿದ್ದ ಅವನು. ಅವರಿಗೆ ಹೆಸರುಗಳಿಲ್ಲ. A-1 A-2, A-3, A-4··· ಅಷ್ಟೆ.

ನಾಟಕದ ಟ್ರೂಪಿನವರ ಸಂಭ್ರಮ ಮಾತ್ರ ಗ್ರೀನ್ ರೂಮಿನಿಂದ ಕೇಳಿಸುತ್ತಿತ್ತು. ರಾಮಲಾಲ್ ತಲೆಯೆತ್ತಿ ಪ್ರವೇಶದ್ವಾರದ ಕಡೆಗೆ ನೋಡಿದ. ದೊಡ್ಡ ಬ್ಯಾನರೊಂದು ತೂಗಾಡುತ್ತಿತ್ತು.

''ವಿಕಲಾಂಗ ಮಕ್ಕಳ ಸಹಾಯಾರ್ಥ ಇಂದಿರಾ ಗಾಂಧಿ ಮಹಿಳಾ ಕಲಾಶಾಲೆ ನಿರ್ವಹಿಸುತ್ತಿರುವ ಕಲಾಭಾರತಿ ನಾಟಕ.

"ಅಂತಿಮ ಹೋರಾಟ."

ರಾಮಲಾಲ್‌ಗೆ ಏಕೋ ನಗು ಬಂತು.

ಯಾವ ಹೋರಾಟವೂ ಇಲ್ಲದೆ ಅವನ ಕೈ ಜೋಂಪು ಹಿಡಿದಂತಾಗಿದೆ. ಈಗ ಸಿ. ಬಿ. ಐ. ರಂಗದೊಳಗಿಳಿದಿದೆ. ತನ್ನ ಸಾಮರ್ಥ್ಯ ತೋರಿಸಬಹುದು. ದೇಶದ ನಂ. 1 ಕತ್ತಲ ಪ್ರಪಂಚದ ಲೀಡರ್ ಕೆಳಗೆ ಕೆಲಸ ಮಾಡುವುದರಲ್ಲಿ ನಷ್ಟ ಅದೇ. ಥ್ರಿಲ್ ಇರುವುದಿಲ್ಲ. ಹೋರಾಟವಿರುವುದಿಲ್ಲ. ಇಷ್ಟು ದಿನದ ನಂತರ ತನ್ನ ಕೋರಿಕೆ ಈಡೇರಲಿದೆ.

ಅದೇ ಸಮಯದಲ್ಲಿ ಒಳಗೆ ರಕ್ಷಣಾ ವ್ಯವಸ್ಥೆ ಮಾಡುತ್ತಿದ್ದ ಡೆಪ್ಯೂಟಿ ಕಮಿಷನರ್ ಮನಸ್ಸೆಲ್ಲಾ ಉದ್ವಿಗ್ನತೆಯಿಂದ ತುಂಬಿತ್ತು. ಇಷ್ಟು ದೊಡ್ಡ ಕತ್ತಲ ಪ್ರಪಂಚಕ್ಕೆದುರಾಗಿ, ಒಂಟಿಯಾಗಿ ಹೋರಾಡಿದ್ದು ತಾನು ಮಾತ್ರ ಈ ದಿನ ಹತ್ತು ಜನಕ್ಕೆ ತಿಳಿದಿದೆ. ಸರ್ಕಾರದಲ್ಲಿ ಶೇ. ನೂರರಷ್ಟು ಅವರ ಜನರೇ ಇರುವುದರಿಂದ ಈ ವಿಷಯ ರಹಸ್ಯವಾಗಿ ಇರುವುದಿಲ್ಲ. ಎರಡು ವರ್ಷಗಳ ಕಷ್ಟದ ಪ್ರತಿಫಲ ಇಂದು ಸಿಗಲೇಬೇಕು.

"ಕಾದು ನೋಡು" ಎಂಬುದು ಸಿ. ಬಿ. ಐ. ಟ್ರೈನಿಂಗ್‌ನಲ್ಲಿ ಬರುವ ಮೊದಲನೆ ಪಾಠ. ಪ್ರಸ್ತುತ ಮಾಡುತ್ತಿರುವ ಕೆಲಸವೂ ಅದೇ. ಇಷ್ಟು ದಿನ ಕಾದಿದ್ದಕ್ಕೆ ಇವತ್ತು ಪ್ರತಿಫಲ ಸಿಗಲೇಬೇಕು.

ಡಿ. ಸಿ. ಯ ದೃಷ್ಟಿ ಎದುರಿಗಿದ್ದ ಬ್ಯಾನರ್ ಮೇಲೆ ಬಿತ್ತು: ಇಂದಿರಾ ಗಾಂಧಿ ಮಹಿಳಾ ಕಲಾ ಶಾಲೆ ನಿರ್ವಹಿಸುತ್ತಿರುವ...ಅಂತಿಮ ಹೋರಾಟ.

—ಹೌದು. ತನಗಿದೇ ಬಹುಶಃ ಅಂತಿಮ ಹೋರಾಟವಾಗಬಹುದು. ತನ್ನ ಕುಟುಂಬಕ್ಕೆ ನಡೆದ ಅನ್ಯಾಯಕ್ಕೆ ಸ್ವಾಮಿಯ ಮೇಲೆ ಸೇಡು ತೀರಿಸಿಕೊಳ್ಳಲು ಇದೇ ಅಂತಿಮ ಅವಕಾಶವಾಗಬಹುದು.

## 2

ಸುನಾದಮಾಲಳ ಕಾಲುಗಳು ನಡುಗಿದವು. ಅವಳಿಗೆ ಕಾಲುಗಳು ನಡುಗುವುದೇನೂ ಹೊಸದಲ್ಲ. ಬಸ್ಸಿನಲ್ಲಿ ಹೋಗುತ್ತಿರುವಾಗ ಅಷ್ಟು ದೂರದಿಂದ ಯಾರಾದರೂ ನಕ್ಕರೂ ಸರಿ ಅವಳ ಕಾಲು ನಡುಗುತ್ತದೆ. ಚಿಲ್ಲರೆ ಕೊಡುವಾಗ ಕಂಡಕ್ಟರನ ಕೈ ತಗುಲಿದರೂ ಅವಳ ಕಾಲು ನಡುಗುತ್ತದೆ. ಕೂಡಲೇ ಸ್ನಾನ ಮಾಡಬೇಕು.

ಈ ದಿನ ಮತ್ತಷ್ಟು ಹೆಚ್ಚಾಗಿ ನಡುಕ ಹುಟ್ಟಲು ಕಾರಣ–ಪ್ರಿನ್ಸಿಪಾಲ್ ಅವಳೊಡನೆ "ನೋಡಮ್ಮಾ! ನೀನು ಮೆಯಿನ್ ಗೇಟಿನ ಬಳಿ ನಿಂತು ಮಂತ್ರಿಯವರಿಗೆ ಪುಷ್ಪಗುಚ್ಛವನ್ನು ನೀಡಬೇಕು," ಎಂದು ಹೇಳಿದ್ದು.

ಪ್ರಿನ್ಸಿಪಾಲ್ ಕಳೆದ ಒಂದು ವಾರದಿಂದಲೂ ಸಂಭ್ರಮಪಡುತ್ತಿದ್ದಳು. ಮಂತ್ರಿಯವರ ದೃಷ್ಟಿಯಲ್ಲಿ ಹೇಗಾದರೂ ಬಿದ್ದು ಪರಿಚಯ ಬೆಳೆಸಿಕೊಂಡು ತನ್ನ ಊರಿಗೆ ಟ್ರಾನ್ಸ್‌ಫರ್ ಮಾಡಿಸಿಕೊಳ್ಳಬೇಕೆಂದು ಆಸೆ. ಅದಕ್ಕೆ ಕಾಲೇಜ್ ಬ್ಯೂಟಿ ಸುನಾದಮಾಲಳನ್ನು ಪ್ರವೇಶ ದ್ವಾರದ ಬಳಿ ನಿಲ್ಲಿಸಲು ನಿರ್ಧರಿಸಿದ್ದಳು! ಯಾರಾದರೂ ಸರಿ ಆ ಹುಡುಗಿಯನ್ನು ಒಂದು ಸಲ ನೋಡಿದರೆ ಸ್ವಲ್ಪ ದೂರ ಹೋದರೂ ಮತ್ತೆ ಹಿಂತಿರುಗಿ ನೋಡುತ್ತಾರೆ. ಅಂತಹ ಅದ್ಭುತ ಸೌಂದರ್ಯ ಅವಳದು. ಅವಳು ಬ್ರಿಲಿಯಂಟ್ ಸ್ಟೂಡೆಂಟ್ ಅಲ್ಲ. ಆದರೆ ಸುಂದರಿ. ಅವಳಲ್ಲಿದ್ದ ಒಂದೇ ದುರ್ಗುಣ "ಭಯ" . ಆದರೆ ಅಷ್ಟು ಸುಂದರ ಹುಡುಗಿಗೆ ಭಯ ಕೂಡಾ ಒಂದು ಅರ್ಹತೆಯಾಗಿ ಕಾಣುತ್ತಿತ್ತು.

ಸುಮಾರು ನಾಲ್ಕು ಗಂಟೆಗಳಿಂದ ಅವಳಿಗೆ ಮೈಯ್ಯೆಲ್ಲಾ ಬೆವರುತ್ತಿತ್ತು. ಸಂಜೆ ಯಾವಾಗ ಆಗುತ್ತೋ ಎಂದು ಎದುರು ನೋಡುತ್ತಿದ್ದಳು. ಅವರು ಬರುತ್ತಾರೆ...ಒಳಗೆ ಹೋಗುತ್ತಾರೆ. ಪ್ರವೇಶದ್ವಾರದ ಬಳಿ ನಿಂತು ಪುಷ್ಪಗುಚ್ಛವನ್ನು ಆತನಿಗೆ ನೀಡಬೇಕು.

ಅಷ್ಟೇ ತಾನು ಮಾಡಬೇಕಾಗಿದ್ದುದು.

ಆದರೆ ಕೊಡುವಾಗ ಅದು ಜಾರಿಹೋದರೆ? ಅವರದನ್ನು ಗಮನಿಸದೆ ಒಳಗೆ ಹೊರಟುಹೋದರೆ? ಎಲ್ಲಾ ಪ್ರಶ್ನೆಗಳೇ.

ತಾನು ಕೆಳಗೆ ಹಿಡಿದುಕೊಂಡರೆ ಆತ ಅದರ ಮಧ್ಯೆ ಹಿಡಿದು ತೆಗೆದುಕೊಳ್ಳುತ್ತಾರಾ? ತಾನೇ ಮಧ್ಯೆ ಹಿಡಿದು ಅವರಿಗೆ ಕೊಡಬೇಕಾ? ಅವರ ಕೈ ತಗುಲಿದರೆ ಹೇಗೆ? ಕೊಟ್ಟ ಕೂಡಲೇ ನಮಸ್ಕರಿಸಬೇಕಾ? ಆತುರಪಡಕೂಡದಾ? ಅವರನ್ನು ಸೀಟಿನವರೆಗೂ ಕರೆದೊಯ್ಯಬೇಕಾ? ಆ ವಿಷಯವನ್ನು ಪ್ರಿನ್ಸಿಪಾಲ್ ನೋಡಿಕೊಳ್ಳುತ್ತಾರಾ?

ಸಂಜೆಯ ವರೆಗೂ ಎಲ್ಲಾ ಅನುಮಾನಗಳೇ, ...ಆರಾಯಿತು.

ವೇಗವಾಗಿ ಹೊಡೆದುಕೊಳ್ಳುತ್ತಿದ್ದ ಹೃದಯ ಬಡಿತವನ್ನು ನಿಗ್ರಹಿಸಿಕೊಳ್ಳಲು ಪ್ರಯತ್ನಿಸುತ್ತ ದ್ವಾರದ ಬಳಿ ನಿಂತಿದ್ದಳು ಸುನಾದಮಾಲ.

ಒಬ್ಬೊಬ್ಬ ಅತಿಥಿಗಳೇ ಬರುತ್ತಿದ್ದಾರೆ.

ಅತಿಥಿಗಳೊಡನೆ ನಾಲ್ವರು ಆಗಂತುಕರು ಕೂಡಾ ಬಂದು ತಮ್ಮ ತಮ್ಮ ಸೀಟುಗಳಲ್ಲಿ ಕುಳಿತಿದ್ದಾರೆ: A-1, A-2 A-3, A-4.

ಆರೂಕಾಲಾಯಿತು.

ಆರೂ ಇಪ್ಪತ್ತು.

* * * *

ಗ್ರೀನ್‌ರೂಮಿನಲ್ಲಿ ನಿಕುಂಜ್ ವಿಹಾರಿ ಗಡಿಬಿಡಿಯಿಂದ ಅತ್ತಿಂದಿತ್ತ ತಿರುಗಾಡುತ್ತಿದ್ದಾನೆ. ಕಲಾ ಭಾರತಿ ಟ್ರೂಪ್ ಅವನದೇ. 'ಅಂತಿಮ ಹೋರಾಟ' ನಾಟಕಕ್ಕೆ ಅವನೇ ನಿರ್ದೇಶಕ. ಆ ನಾಟಕದಲ್ಲಿ ಅವನದು ಮಂತ್ರಿಯ ಪಾತ್ರ.

ಅದೇ ನಾಟಕದಲ್ಲಿ ಅವನ ಸ್ನೇಹಿತ ಆಟೋ ಡ್ರೈವರ್ ಪಾತ್ರವಹಿಸುತ್ತಿದ್ದ. ಅವನ ಹೆಸರು ಪದ್ಮಾಕರ್. ಅವರಿಬ್ಬರೂ ಒಳ್ಳೆಯ ಸ್ನೇಹಿತರು. ನಿಕುಂಜ್ ವಿಹಾರಿಗೆ ತಂದೆಯಿಲ್ಲ. ತಾಯಿ ಲಕ್ಷಾಧಿಕಾರಿಣಿ. ಆಕೆಯ ತಂದೆ ಅವಳನ್ನು ದೊಡ್ಡ ಆಸ್ತಿಗೆ ವಾರಸುದಾರಳನ್ನಾಗಿ ಮಾಡಿ ನಿಧನ ಹೊಂದಿದ್ದ. ಆಸ್ತಿಯನ್ನು ಉಳಿಸಿಕೊಳ್ಳುವ ಸಾಮರ್ಥ್ಯ ಅವಳಿಗಿಲ್ಲ. ನಂಬಿಕಸ್ಥನಾದ ಮ್ಯಾನೇಜರ್‌ಗೆ ಕೂಡಾ ವಯಸ್ಸಾಗುತ್ತಿತ್ತು. ಮಗ ಕೈಗೆ ಬರುತ್ತಾನೆಂದುಕೊಂಡಳು. ಆದರೆ ಅವನು ನಾಟಕಗಳೆಂದು ಸರಿಯಾಗಿ ಮನೆಗೆ ಬರದೆ ಅಲೆಯುತ್ತಿದ್ದ. ಆಕೆಗೆ ಅದೊಂದೇ ಯೋಚನೆ.

ವಿಹಾರಿಯಲ್ಲಿ ಸಾಧನೆಯ ಕೃಷಿ ಇಲ್ಲವೆಂದಲ್ಲ. ಬಿ. ಎ. ಪಾಸಾಗಿದ್ದಾನೆ.

ಅವನ ದೃಷ್ಟಿಯೆಲ್ಲಾ ನಾಟಕಗಳ ಮೇಲೇ. ಅವನು ಸ್ಥಾಪಿಸಿದ 'ಕಲಾ ಭಾರತಿ' ಮೂರು ವರ್ಷಗಳಲ್ಲೇ ಸಾಕಷ್ಟು ಹೆಸರು ಮಾಡಿ, ಒಂದು ಪ್ರತಿಷ್ಠೆಯ ನಾಟಕ ಮಂಡಳಿ ಎಂದು ಹೆಸರು ಪಡೆದಿತ್ತು. ಅದು ಅವನ ತಾಯಿಗೂ ಗೊತ್ತಿತ್ತು. ಆಕೆಗೆ ಇದ್ದ ಯೋಚನೆಯೆಂದರೆ ಮಗ ತನ್ನ ಸಂಪಾದನೆಯನ್ನೆಲ್ಲಾ ಅನವಶ್ಯಕವಾಗಿ ಖರ್ಚುಮಾಡುತ್ತಾನಲ್ಲಾ ಎಂದು. ಗಂಡ ಹೋದಂದಿನಿಂದ ಆಕೆ ಹೆಚ್ಚು ಕಾಲವನ್ನು ದೇವರುದಿಂಡರೆಂದು ಕಳೆಯುತ್ತಿದ್ದಳು. ಆಕೆಯಲ್ಲಿ ಎಷ್ಟು ಒಳ್ಳೆಯತನವಿತ್ತೋ ಅದಕ್ಕೆ ಎರಡು ಪಟ್ಟು ಮುಗ್ಧತೆಯಿತ್ತೆಂದು ತಿಳಿಸಲು ಈ ಉದಾರಣೆ ಸಾಕು.

...ಅವರ ಮನೆಯಲ್ಲಿ ಅಡಿಗೆ ಮಾಡುತ್ತಿದ್ದವನ ಹೆಸರು ಗಂಗ. ಪದ್ಮಾಕರ್‌ಗೂ ಅವನಿಗೂ ತುಂಬಾ ದೋಸ್ತಿ. ಸುಪ್ರಸಿದ್ಧ ಅಡಿಗೆಯವರೆಲ್ಲಾ ಬೆಂಗಾಲಿಗಳೆಂದು ತಿಳಿದಾಗ ತನ್ನ ಹೆಸರನ್ನೂ 'ಗಂಗೂಲಿ' ಎಂದು ಬದಲಾಯಿಸಿಕೊಂಡಿದ್ದ. ಅವನಿಗೆ ಮೂವರು ಹೆಂಡತಿಯರು, ಹಣದ ಅವಶ್ಯಕತೆ ಹೆಚ್ಚು. ಅವನಿಗೆ ಕೂಡ ನಾಟಕದ ಹುಚ್ಚು ಸ್ವಲ್ಪ ಇತ್ತು. ಇನ್ನು ನಾಲ್ಕು ದಿನಗಳಲ್ಲಿ ಹಬ್ಬಕ್ಕೆ ಸೀರೆ ಕೊಡಿಸದಿದ್ದರೆ ಅವನ ಎಲುಬು ಮುರಿಯುವುದಾಗಿ ಅವನ ಹೆಂಡತಿಯರು ಎಚ್ಚರಿಕೆ ನೀಡಿದ್ದರು. ಅಷ್ಟು ಕಡಿಮೆ ಸಮಯದಲ್ಲಿ ಆ ಹಣವನ್ನು ಹೇಗೆ ಸಂಪಾದಿಸುವುದೆಂದೇ ಅವನಿಗೆ ತಿಳಿಯಲಿಲ್ಲ. ಇದೇ ಸಮಯಕ್ಕೆ ಸರಿಯಾಗಿ ಪದ್ಮಾಕರ್ ಅವನಿಗೊಂದು ಸಲಹೆ ಕೊಟ್ಟ. ಅಮ್ಮನವರ ಬಳಿಯೇ ತನ್ನ ನಟನಾ ಸಾಮರ್ಥ್ಯವನ್ನು ಪರೀಕ್ಷಿಸಿಕೊಳ್ಳೋಣವೆಂದು ನಾಟಕ ಕಂಪನಿಯ ಮೇಕಪ್ ಮನ್ ಸಹಾಯದಿಂದ ವೇಷ ಮರೆಸಿಕೊಂಡು ಮನೆಗೆ ಬಂದ.

"ಅಮ್ಮಾ! ಬೆಳಿಗ್ಗೆ ನೀವು ಶಿವಾಲಯದ ಪಕ್ಕದಲ್ಲಿದ್ದ ಹುತ್ತದೊಳಗೆ ಹಾಲು ಹೊಯ್ದಿರಲ್ಲವೇ ?"

ಹೌದೆಂದು ಹೇಳಿದರು ವರ್ಧನಮ್ಮ.

"ನೀವು ಬಿಸಿ ಬಿಸಿ ಹಾಲು ಹೊಯ್ದಿದ್ದೀರಿ. ಹಾವು ಸತ್ತುಹೋಗಿದೆ ತಾಯಿ!" ವಿಷಾದದಿಂದ ಹೇಳಿದ.

ವರ್ಧನಮ್ಮನವರ ಮುಖ ಬಾಡಿಹೋಯಿತು. "ನಿಜವಾ?" ಕೇಳಿದರು.

"ಹೌದು ತಾಯಿ. ನೀವು ಹಾಗೆ ಹಾಲು ಹೊಯ್ದು ಹೋದ ಸ್ವಲ್ಪ ಸಮಯಕ್ಕೆ ಅದು ಹುತ್ತದಿಂದ ಹೊರಬಂತು. ಚರ್ಮವೆಲ್ಲಾ ಸುಟ್ಟಿತ್ತು. ನರಳಿ ನರಳಿ ಸತ್ತುಹೋಯಿತು. ಪಕ್ಕದಲ್ಲೇ ನಾನಿದ್ದೆ. ಯಾರೆಂದು ನೋಡಿದರೆ ನೀವು ಅಲ್ಲಿಂದ ಬರುತ್ತಿದ್ದಿರಿ".

ಆಕೆಗೆ ಭಯ, ದುಃಖ ಎರಡೂ ಒಮ್ಮೆಗೆ ಉಂಟಾಯಿತು.

"ಅಯ್ಯೋ! ಈಗ ಹೇಗೆ?"

"ಐದು ನೂರು ಕೊಟ್ಟು ಅರ್ಚನೆ ಮಾಡಿಸಬೇಕು ತಾಯಿ! ನಂತರ ಒಂದು ಬೆಳ್ಳಿಯ ನಾಗವನ್ನು ಮಾಡಿಸಿಕೊಡಬೇಕು."

ಆಕೆ ಶಿವಸ್ತೋತ್ರವನ್ನು ಪಠಿಸುತ್ತಾ ಒಳಗಿನಿಂದ ಹಣ ತಂದುಕೊಟ್ಟಳು. ಗಂಗೂಲಿ ಅದನ್ನು ತೆಗೆದುಕೊಂಡು ಹೊರಟುಹೋದ. ಕಥೆ ಸುಖಾಂತವಾಗುತ್ತಿತ್ತೇನೋ? ಆಗಲೇ, ಅಷ್ಟರಲ್ಲಿ ಅಲ್ಲಿಗೆ ಬಂದ ಪದ್ಮಾಕರ್, ವಿಹಾರಿ ಗಂಗೂಲಿಯನ್ನು ರೆಡ್‌ಹ್ಯಾಂಡೆಡ್ ಆಗಿ ಹಿಡಿದರು.

"ಏನೋ–ಎಲುಬು ಮುರೀಬೇಕಾ? ಪೊಲೀಸಿಗೆ ಕೊಡಬೇಕಾ?"

ಅವನು ಕೈಜೋಡಿಸಿ, "ಎರಡರಲ್ಲಿ ಯಾವುದನ್ನಾದರೂ ಮಾಡೀಪ್ಪ. ಆದರೆ ಹಣಾನ ಮಾತ್ರ ವಾಪಸ್ಸು ಕೇಳ್ಬೇಡಿ", ದುಃಖದಿಂದ ಹೇಳಿದ.

"ಯಾಕೆ?"

"ನಿಮಗಿಂತಲೂ, ಪೊಲೀಸರಿಗಿಂತಲೂ ನನ್ನ ಹೆಂಡತಿಯರೇ ಅತಿ ಭಯಂಕರರು."

ವರ್ಧನಮ್ಮ ನಗುತ್ತಾ ಅವನಿಗೆ ಹಣಕೊಟ್ಟು ಕಳುಹಿಸಿದರು.

"ನೀನು ಕೊಟ್ಟಿರೋ ಸಲೀಗೇನೆ ಅಮ್ಮಾ ಇದು. ಕೆಲಸದಿಂದ ತೆಗೆದು ಹಾಕ್ದೇ ಇನ್ನೂ ಅವನಿಗೇ ಹಣಕೊಟ್ಟು ಕಳಿಸ್ತೀಯಲ್ಲಾ–"

"ಹೋಗಲಿಬಿಡೋ. ಆ ಭಯದಲ್ಲಿ ಬಂಗಾರದ ಹಾವನ್ನು ಕೇಳಿದ್ದರೂ ಕೊಟ್ಟಿಡ್ತಿದ್ದೆ..." ನಗುತ್ತಾ ಹೇಳಿದರಾಕೆ.

* * * *

"ಇನ್ನೂ ಮಂತ್ರಿಗಳು ಬರಲಿಲ್ಲವಲ್ಲಾ–" ಪದ್ಮಾಕರನ ಮಾತಿಗೆ ತನ್ನ ಯೋಚನೆಯಿಂದ ಎಚ್ಚೆತ್ತ ವಿಹಾರಿ ಹಾಲಿನ ಕಡೆ ನೋಡಿದ.

"ಆಡಿಟೋರಿಯಂ ತುಂಬಿದೆ. ಜನರಿಗೆ ಬೇಸರವಾಗಿ ಗಲಾಟೆ ಹೆಚ್ಚಾಗುತ್ತಿದೆ ನೋಡು".

"ಏನು ಮಾಡೋಣ?"

"ಅದನ್ನೇ ಯೋಚಿಸ್ತಿದ್ದೀನಿ."

ಪದ್ಮಾಕರ ಬೇಸರದಿಂದ ಗ್ರೀನ್ ರೂಮಿಗೆ ಹೋದ. ವಿಹಾರಿ ತಲೆಯನ್ನು ಸ್ವಲ್ಪ ಪಕ್ಕಕ್ಕೆ ಸರಿಸಿ ಆಡಿಟೋರಿಯಂ ಕಡೆ ನೋಡಿದ. ಕಿಚ ಕಿಚ ಜನ. ನಿಜವಾದ ಆರ್ಟಿಸ್ಟ್‌ಗೆ ಅದಕ್ಕಿಂತಲೂ ಹೆಚ್ಚಿನ ಸಂತೋಷವೇನಿರುತ್ತೆ? ಅವನು ವಾಚ್

ನೋಡಿಕೊಂಡ. ಏಳೂವರೆಯಾಗಿತ್ತು. ಮಂತ್ರಿಗಳಿಗಾಗಿ ಇನ್ನೂ ಎಷ್ಟು ಹೊತ್ತು ಕಾಯಬೇಕೋ.

ಹಾಗೆ ಅವನು ಹೊರನೋಡುತ್ತಿದ್ದ ಸಮಯದಲ್ಲಿ, ಬಾಗಿಲ ಬಳಿ ನಿಂತಿದ್ದ ಯುವತಿಯ ಮೇಲೆ ಅವನ ದೃಷ್ಟಿ ಬಿತ್ತು. ಮೊದಲು ಆ ಸುನಾದಮಾಲಳನ್ನು ನೋಡಿ, ರವೀಂದ್ರ ಕಲಾಕ್ಷೇತ್ರದ ಬಾಗಿಲ ಬಳಿ ನಿಲ್ಲಿಸಿರುವ ಪ್ರತಿಮೆ ಅಂದು ಕೊಂಡ. ಹೂಗುಚ್ಛವನ್ನು ಭಯದಿಂದೆಂಬಂತೆ ಕೈಯಲ್ಲಿ ಹಿಡಿದು ಗಾಬರಿಯ ಕಣ್ಣು ಗಳನ್ನು ಅತ್ತಿತ್ತ ಹೊರಳಿಸುತ್ತಾ ನಿಂತಿದ್ದಾಳೆ ಅವಳು! ಆದರೆ ಅಷ್ಟರಲ್ಲೇ ಆ ಪ್ರತಿಮೆ ಅಲ್ಲಾಡಿದ್ದನ್ನು ಕಂಡು ತನ್ನ ಭ್ರಮೆಗೆ ನಗು ಬಂದು, ಅಷ್ಟು ಸುಂದರ ಹುಡುಗಿಯರಿರುತ್ತಾರಾ ಎಂದು ಆಶ್ಚರ್ಯಪಟ್ಟ. ಅವಳ ಬೆನ್ನು ಗಾಂಡೀವವನ್ನೂ, ವಕ್ಷ ಕುರುಕ್ಷೇತ್ರವನ್ನೂ ಕಣ್ರೆಪ್ಪೆಗಳು ಬಿಲ್ಲನ್ನೂ, ಕಂಠ ಪಾಂಚ ಜನ್ಯವನ್ನೂ, ಕಣ್ಣುಗಳು ರಥಚಕ್ರಗಳನ್ನೂ ನೆನಪಿಗೆ ತಂದವು. ಮನಸ್ಸಿನಲ್ಲಿ ಯುದ್ಧ ಪ್ರಾರಂಭವಾಯಿತು. ಮಹಿಳಾ ಕಲಾಶಾಲೆಯವರು ಈ ನಾಟಕವನ್ನು ಏರ್ಪಾಟು ಮಾಡಿದ್ದಾರೆಂದು ಗೊತ್ತಿತ್ತಾದರೂ ಆ ಕಲಾಶಾಲೆಯಲ್ಲಿ ಇಷ್ಟು ಸುಂದರವಾದ ಹುಡುಗಿಯರಿರುತ್ತಾರೆಂದು ತಿಳಿದಿರಲಿಲ್ಲ.

ನಿಕುಂಜ ವಿಹಾರಿ ಅವಳೆಡೆಗೇ ನೋಡುತ್ತಾ ಅದೆಷ್ಟು ಹೊತ್ತು ನಿಂತಿದ್ದನೋ ಗೊತ್ತಿಲ್ಲ. ಅಷ್ಟರಲ್ಲಿ "ಈಗೇನು ಮಾಡೋಣ ಗುರೂ?" ಎಂದು ಪದ್ಮಾಕರನ ಸ್ವರ ಹಿಂದಿನಿಂದ ಕೇಳಿಸಿತು. ಅವನ ನೋಟ ಕೂಡ ಅವಳ ಮೇಲೆ ಬಿದ್ದು 'ಮೈಗಾಡ್' ಎಂದು ನಿಟ್ಟುಸಿರುಬಿಟ್ಟ ಅವಳ ಸೌಂದರ್ಯಕ್ಕೆ ಆಶ್ಚರ್ಯ ಪಟ್ಟು.

"ಏನ್ ಗುರೂ–ಲವ್ ಅಟ್ ಫಸ್ಟ್ ಸೈಟಾ?"

"ನಿನ್ನ ಮುಖ... ನನಗಿಂತಹ ಫಸ್ಟ್ ಸೈಟುಗಳ ಮೇಲೆ ನಂಬಿಕೆಯಿಲ್ಲ. ಆದರೆ......ಹುಡ್ಗಿ ಚೆನ್ನಾಗಿದಾಳಲ್ವಾ ?"

"ಆ ವಿಷಯವನ್ನು ಸರ್ಕಾರ ಪಾರ್ಲಿಮೆಂಟಿನಲ್ಲಿಟ್ಟರೂ, ವಿರೋಧಪಕ್ಷದವರೂ ಸಹ ಒಪ್ಪಿಕೊಳ್ಳಲೇಬೇಕು."

"ಆದರೆ, ಸಾಮಾನ್ಯವಾಗಿ ಇಂತಹ ಹುಡುಗಿಯರ ಮೆದುಳಿನಲ್ಲಿ ಅಮೂಲ್ ಮಿಲ್ಕ್ ಪೌಡರ್ ಬಿಟ್ಟು ಬೇರೇನೂ ಇರುವುದಿಲ್ಲ."

"ನಾನೊಪ್ಪಲ್ಲ ಅದನ್ನ. ಸುಂದರಿಯರಲ್ಲಿ ಬುದ್ಧಿವಂತರೂ ಇರುತ್ತಾರೆ."

"ಪಂದ್ಯ ಕಟ್ತೀಯಾ ?''

''ಪಂದ್ಯ......ನೀನು ಸೋತರೆ ಆ ಹುಡುಗಿ ಬಾಯಿಂದ 'ಐ ಲವ್ ಯು' ಅನ್ನಿಸಿಕೊಳ್ಳಬೇಕು.

"ನಿಜವಾಗಿಯೂ ಅಷ್ಟು ಸುಂದರ ಹುಡುಗಿಗೆ, ಅಷ್ಟೇ ತಿಳುವಳಿಕೆ ಕೂಡಾ ಇದ್ದು, ನಾನು ಈ ಪಂದ್ಯದಲ್ಲಿ ಸೋತುಹೋದರೆ, ಬರೀ ಐ ಲವ್ ಯೂ ಅನ್ನಿಸಿಕೊಳ್ಳುವುದು ಮಾತ್ರವಲ್ಲ, ಅವಳನ್ನು ಮದುವೆಯೇ ಆಗುತ್ತೇನೆ. ಓ...ಕೆ?"

"ಸೋತರೆ ಕಷ್ಟಕ್ಕೆ ಸಿಕ್ಕಿಕೊಳ್ಳೀಯ ಗುರೂ..."

"ಸೋಲುವುದಿಲ್ಲ. ಆ ಟೋಪಿ ಇಲ್ಲಿ ಕೊಡು."

ಪದ್ಮಾಕರ್ ಬಿಳಿಚಿಕೊಂಡು "ಏಕೆ?" ಎಂದು ಕೇಳಿದ.

"ಆ ಮಂತ್ರಿಯವರು ಬರುವುದಕ್ಕೆ ಇನ್ನೆಷ್ಟು ಕಾಲ ಹಿಡಿಯುತ್ತದೆಯೋ ಏನೋ ! ನಾನೇ ಟೋಪಿ ಇಟ್ಕೊಂಡು ಪ್ರವೇಶದ್ವಾರದ ಮೂಲಕ ಒಳಗೆ ಬರುತ್ತೇನೆ. ನೀವು ಅಷ್ಟರಲ್ಲಿ ನಿಜವಾಗಿಯ ಮಂತ್ರಿಯವರೇ ಒಳಬಂದರೆಂಬಂತೆ ಪರದೆ ಸರಿಸಿ ನಾಟಕ ಪ್ರಾರಂಭಿಸಿ. ನಾಟಕ ಪ್ರಾರಂಭವಾದ ನಂತರ ಆ ಸುಂದರಾಂಗಿ ಏನುಮಾಡ್ತಾಳೆ ?" ಸುನಾದಮಾಲಳ ಕಡೆಗೇ ನೋಡುತ್ತಾ ಹೇಳಿದ ವಿಹಾರಿ.

ಅವಳ ಕೈಯಲ್ಲಿರುವ ಪುಷ್ಪಗುಚ್ಛ ಮಂತ್ರಿಗಾಗಿಯೇ ಎಂದು ಅವನಿಗೆ ಗೊತ್ತಿತ್ತು.

*    *    *    *

ಆ ದಿನ ರವೀಂದ್ರ ಕಲಾಕ್ಷೇತ್ರದಲ್ಲಿ ಮಿನಿಸ್ಟರ್ ಸೂರ್ಯಾರಾವ್‌ನನ್ನು ಕೊಲೆಮಾಡುವ ಯೋಜನೆಯನ್ನೂ, ಅದನ್ನು ಹೇಗೆ ಕಾರ್ಯಗತಗೊಳಿಸಬೇಕೆಂಬ ವ್ಯೂಹ ರಚಿಸಿದ್ದುದು–ಲಾಯರ್ ಪರಮೇಶ್ವರ್.

ಅನಂತಾನಂತಸ್ವಾಮಿಗೆ, ಪರಮೇಶ್ವರ್ ಮೆದುಳಿನಂತೆ.

ಪ್ರಧಾನಮಂತ್ರಿಯನ್ನು ನಾಲ್ವರ ಮಧ್ಯೆ ಕೊಲೆಮಾಡಿದ, ಕೊಲೆಗಾರರನ್ನೂ ಕೂಡಾ ಕೋರ್ಟಿನಲ್ಲಿ ವಾದಿಸಿ ಬಿಡುಗಡೆಗೊಳಿಸಬಲ್ಲ ಸಮರ್ಥ! ಅಷ್ಟು ತಿಳುವಳಿಕೆಯಿದ್ದ ವ್ಯಕ್ತಿ ಒಳ್ಳೆಯದಕ್ಕೆ ವಿರುದ್ಧವಾಗಿದ್ದು ದೇಶದ ದುರದೃಷ್ಟ. ಅವನು ಪ್ರಧಾನಮಂತ್ರಿಯನ್ನೂ ಪ್ರಶ್ನಿಸಲು ಸಾಮರ್ಥ್ಯ ಹೊಂದಿದ್ದ ಲಾಯರ್. ತನ್ನ ಬುದ್ಧಿವಂತಿಕೆಯಿದ ಸುಪ್ರೀಂ ಕೋರ್ಟಿನ ಜಡ್ಜ್‌ಗಳನ್ನೂ ಕೂಡಾ ಗಲಿಬಿಲಿಗೊಳಿಸಬಲ್ಲಷ್ಟು ಸಮರ್ಥ.

ಸಿ. ಬಿ. ಐ. ಡೆಪ್ಯೂಟಿ ಕಮಿಷನರ್ ದೃಷ್ಟಿ ಲಾಯರ್ ಪರಮೇಶ್ವರ್ ಮೇಲೆ ಕೂಡಾ ಇತ್ತು. ಅನಂತಾನಂತಸ್ವಾಮಿ ತನ್ನ ವಿಜಯವೆಲ್ಲಾ ನಾಲ್ಕು ಸ್ತಂಭಗಳ ಮೇಲೆ ನಿಂತಿದೆಯೆಂದು ತನ್ನ ಆಪ್ತರೊಡನೆ ಹೇಳುತ್ತಿರುತ್ತಾನೆ. ಅದ

ರಲ್ಲಿ ಒಂದು ಸ್ತಂಭ ಲಾಯರ್ ಪರಮೇಶ್ವರ್ (ಬುದ್ಧಿವಂತಿಕೆ). ಮತ್ತೊಂದು ಸ್ತಂಭ ರಾಮಲಾಲ್ (ಬಲ). ಮೂರನೆ ಸ್ತಂಭ ಒಬ್ಬ ರಾಜಕೀಯ ನಾಯಕ (ಅಧಿಕಾರ). ನಾಲ್ಕನೆ ಸ್ತಂಭ ಏನು? ಯಾರು? ಎಂಬುದನ್ನು ಡೆಪ್ಯೂಟಿ ಕಮಿಶನರ್ ಎಷ್ಟು ಪ್ರಯತ್ನಿಸಿದರೂ ತಿಳಿಯಲಿಲ್ಲ. ಅನಂತಾನಂತಸ್ವಾಮಿ ತಮಾಷೆಗಾಗಿ ಈ ಉದಾಹರಣೆ ಕೊಟ್ಟರೂ, ಆ ಮಾತಿನಲ್ಲಿ ನಿಜಾಂಶವಿದೆಯೆಂದು ಡಿ. ಸಿ...ಸಿ. ಬಿ. ಐ. ಗೆ ಗೊತ್ತು. ರಷ್ಯನ್ ಗೂಢಚಾರಿ ಸಂಸ್ಥೆ ಕೆ. ಜಿ. ಬಿ. ಯೊಡನೆ ಕೂಡಾ ಸಂಬಂಧಗಳಿವೆಯೆಂಬ ಅನುಮಾನ. ಅವನ ಬುದ್ಧಿವಂತಿಕೆ ಅಪೂರ್ವ, ಅನಿರ್ವಚನೀಯ. ಅವನಿಗೆ ಐವತ್ತು ವರ್ಷಗಳಿರಬಹುದು. ಮಹಾಭಾರತದ ಶಕುನಿ, ದ್ರೋಣ ಮೊದಲಾದವರ ಅಂಶಗಳೊಡನೆ, ಆ ಬುದ್ಧಿವಂತಿಕೆಯಿಂದ ಹುಟ್ಟಿದ್ದಾನೆ. ಅವನ ಯೋಜನೆ ಸರಿಯಾಗಿ ನಡೆದರೆ, ಇನ್ನು ನಾಲ್ಕೈದು ವರ್ಷಗಳಲ್ಲಿ ಅನಂತಾನಂತಸ್ವಾಮಿಯನ್ನು ಭಾರತ ದೇಶದ ಸರ್ವಾಧಿಕಾರಿಯನ್ನಾಗಿ ಮಾಡುತ್ತಾನೆ. ಸುಮಾರು ಹತ್ತು ವರ್ಷಗಳ ಕೃಷಿಯಿಂದೆ ಇದರ ಹಿಂದೆ. ಈ ದಿನ ನಡೆಯಲಿರುವ ಕೊಲೆ ಪ್ರಯತ್ನ ಅದರ ಮೊದಲ ಮೆಟ್ಟಿಲು.

ಅಂತಹ ಪರಮೇಶ್ವರ್ ಹತ್ತಿದ ಕಾರು ಆಗಲೇ ರವೀಂದ್ರ ಕಲಾಕ್ಷೇತ್ರದೊಳಗೆ ಪ್ರವೇಶಿಸುತ್ತಿದೆ. ಅವನು ತಲೆಯೆತ್ತಿ ಬ್ಯಾನರನ್ನು ನೋಡಿ ನಕ್ಕ.

**'ಅಂತಿಮ ಹೋರಾಟ'**

ಇನ್ನರ್ಧ ಗಂಟೆಯಲ್ಲಿ ರಕ್ತಕಾಲುವೆಯಾಗಿ ಹರಿಯಲಿದೆ. ನಾಳೆ ಪತ್ರಿಕೆಗಳಲ್ಲಿ ದೊಡ್ಡ ದೊಡ್ಡ ಅಕ್ಷರಗಳಲ್ಲಿ ಈ ಸುದ್ದಿ ಪ್ರಮುಖವಾಗಿ ಪ್ರಸಾರವಾಗಲಿದೆ. ಪೊಲೀಸರ ಅಸಮರ್ಥತೆಯ ಬಗ್ಗೆ ಸಾಧ್ಯವಾದರೆ— ಮ್ಯಾಜಿಸ್ಟೀರಿಯಲ್ ಎನ್‌ಕ್ವಯರಿ. ನಂತರ ಎಲ್ಲಾ ವಾರ್ತೆಗಳಂತೆ ಇದನ್ನೂ ಮರೆತುಬಿಡುತ್ತಾರೆ. ಸ್ವಾಮಿಯ ಸ್ವಿಸ್ ಅಕೌಂಟ್‌ನಲ್ಲಿ ಒಂದು ಕೋಟಿ ರೂಪಾಯಿಗಳ ಕ್ರೆಡಿಟ್.

ಅಂತಿಮ ಹೋರಾಟ !

ಇರುವವನನ್ನು ಇಲ್ಲದವರೆಲ್ಲಾ ಸೇರಿ ಎದುರಿಸುವುದು! ಯಾವ ರಂಗಸ್ಥಳದ ಮೇಲೆ ನೋಡಿದರೂ, ಯಾವ ನಾಟಕವಾದರೂ ಇದೇ ಥೀಮು! ಕೊನೆಗೆ ಕ್ರಾಂತಿಕಾರಿಯಾದ ಹೀರೋನೋ, ರೇಪ್‌ಗೆ ಒಳಗಾದ ಹೀರೋಯಿನ್ನೋ ಸ್ಟೇಜಿನ ಮೇಲೆ ಉಪನ್ಯಾಸ ಕೊಡುತ್ತಾ ಸಾಯುವುದರೊಡನೆ ನಾಟಕ ಸಮಾಪ್ತವಾಗುತ್ತದೆ. ಮಾರನೆಯ ದಿನ ಅದೇ ಸ್ಟೇಜಿನ ಮೇಲೆ ಮತ್ತೊಂದು ಅಂತಿಮ ಹೋರಾಟ, ಅದೇ ಕೊನೆಯೆನ್ನುತ್ತಾ ಎಷ್ಟೋ ...ಎಷ್ಟೆಷ್ಟೋ ಹೋರಾಟಗಳು.

ಪರಮೇಶ್ವರ್ ಆ ಬ್ಯಾನರನ್ನೇ ನೋಡುತ್ತಾ ಒಳಗೆ ಪ್ರವೇಶಿಸಿದ. ಒಳ

ಗೆಷ್ಟೋ ಯೋಚನೆಗಳು...ರಾಜ್ಯದಲ್ಲಿ ಮುಖ್ಯಮಂತ್ರಿಯ ಪ್ರಭಾವ ಆಳವಾಗಿ ಬೇರೂರಿದೆ. ಇನ್ನು ಹತ್ತು ವರ್ಷಗಳ ವರೆಗೂ ಅದನ್ನು ಅಲುಗಾಡಿಸುವುದೂ ಕಷ್ಟ. ಆ ಸ್ಥಾನದಿಂದ ಆತನನ್ನು ಯಾರೂ ಕದಲಿಸಲಾರರೆಂಬುದು ನಿರ್ವಿವಾದ. ಇಂತಹ ಪರಿಸ್ಥಿತಿಯಲ್ಲಿ ಸ್ವಾಮಿಯ ಬಳಿಗೆ ಒಂದು ಆಫರ್ ಬಂದಿದೆ.

ಮುಖ್ಯಮಂತ್ರಿಯನ್ನು ಗದ್ದುಗೆಯಿಂದ ಇಳಿಸಿದರೆ ಕೋಟಿ ರೂಪಾಯಿಗಳು!!! ತುಂಬ ರಹಸ್ಯವಾಗಿ ಪಿತೂರಿ ನಡೆಯುತ್ತಿತ್ತು.

ಹಣ ಕೊಡುವವರ ಹೆಸರು ಗೋಪ್ಯವಾಗಿರಿಸಲಾಗಿತ್ತು!

ಅದೇ ಸ್ವಾಮಿಯ ಸ್ಪೆಷಾಲಿಟಿ. ಯಾರಿಗೆ ಎಷ್ಟು ಹೇಳಬೇಕೋ ಅಷ್ಟನ್ನೇ ಹೇಳುತ್ತಾನೆ. ಈ ವ್ಯವಹಾರದಲ್ಲಿ ಮೊದಲ ಮೆಟ್ಟಿಲು ಸೂರ್ಯಾರಾವ್ ಎಂಬ ಮಂತ್ರಿಯನ್ನು ಮುಗಿಸುವುದು. ಇದಕ್ಕೂ, ಮುಖ್ಯಮಂತ್ರಿಯ ಪದಚ್ಯುತಿಗೂ ಯಾವ ಸಂಬಂಧವಿದೆಯೋ ಆ ಸ್ವಾಮಿಗೆ, ಪರಮೇಶ್ವರ್‌ಗೆ ಮಾತ್ರ ಗೊತ್ತು.

ಮಿನಿಸ್ಟರ್ ಸೂರ್ಯಾರಾವ್‌ನನ್ನು ಕೊಲೆ ಮಾಡುವ ಜವಾಬ್ದಾರಿ ರಾಮಲಾಲ್‌ದು.

ಆ ಸಮಯದಲ್ಲಿ ಏನಾದರೂ ಹೆಚ್ಚು ಕಡಿಮೆಯಾಗಿ ಸಿಕ್ಕಿಬಿದ್ದರೆ. ಹತ್ತಿರದಲ್ಲೇ ಇದ್ದು, ಅವರನ್ನು ಕೋರ್ಟಿನಿಂದ ಬಿಡುಗಡೆಗೊಳಿಸುವುದು ಪರಮೇಶ್ವರನ ಕರ್ತವ್ಯ.

ಹೀಗೆ ಅವರವರ ಕರ್ತವ್ಯಗಳನ್ನು ವಹಿಸಿದ್ದ ಸ್ವಾಮಿ.

ಇಲ್ಲಿ ರಾಮಲಾಲ್‌ನ ಬಗ್ಗೆ ಸ್ವಲ್ಪ ಹೇಳಬೇಕು. ಒಬ್ಬ ಓಟಗಾರ ದಿನವೂ ಹೇಗೆ ಅಭ್ಯಾಸ ಮಾಡುತ್ತಾನೋ, ಒಬ್ಬ ಡ್ಯಾನ್ಸರ್ ನಾಟ್ಯವನ್ನು ಹೇಗೆ ಮನಸ್ಸಿಟ್ಟು ಅಭ್ಯಾಸಮಾಡುತ್ತಾಳೋ– ಅವನು ಕ್ರೈಮನ್ನು ಹಾಗೆಯೇ ಪ್ರಾಕ್ಟೀಸ್ ಮಾಡುತ್ತಾನೆ. ಹಣಕ್ಕಾಗಿಯಲ್ಲ; ಆ ಪ್ರಾಕ್ಟೀಸ್ ಇಲ್ಲದಿದ್ದರೆ ಏನೂ ತೋಚುವುದಿಲ್ಲ. ಒಂದು ದಿನ ಯಾರೂ ಸಿಗದಿದ್ದರೆ ಹುಡುಗನೊಬ್ಬನನ್ನು ಕರೆತಂದು ಟೇಬಲ್ಲಿನ ಮೇಲೆ ಕೈಯಿರಿಸಲು ಹೇಳುತ್ತಾನೆ.

"ಪ್ಯಾಸೇಜ್ ಸಿನಿಮಾ ನೋಡಿದ್ದೀಯಾ?"

ಅವನು ನಡುಗುತ್ತಾ "ಇಲ್ಲಾ...ಸ್ವಾಮಿ" ಎನ್ನುತ್ತಾನೆ.

"ನಾನು ನೆನ್ನೆತಾನೇ ನೋಡಿದೆ" ಎನ್ನುತ್ತಾ ಎರಡು ಬೆಂಡೆಕಾಯಿಗಳನ್ನು ತಂದು ಆ ಹುಡುಗನ ಬೆರಳುಗಳ ಪಕ್ಕದಲ್ಲಿರಿಸಿ ಚಾಕು ತೆಗೆದುಕೊಳ್ಳುತ್ತಾನೆ. "...ಹೇಳು ಬೆಂಡೇಕಾಯನ್ನು ಕತ್ತರಿಸ್ತೀನಾ? ನಿನ್ನ ಬೆರಳನ್ನು ಕತ್ತರಿಸುತ್ತೀನಾ? ಅದರಲ್ಲಿ ವಿಲನ್ ಹೀಗೇ ಕೇಳುತ್ತಾನೆ."

ಅವನು ಅಳಲು ಪ್ರಾರಂಭಿಸುತ್ತಾನೆ. ಉತ್ತರಿಸಬೇಕು.

"ನನ್ನ ಬೆರಳನ್ನು ಕತ್ತರಿಸುತ್ತೀನಿ..."

ಬೆಂಡೆಕಾಯಿಗಳು ಕಚಕಚ ಕತ್ತರಿಸಲ್ಪಡುತ್ತವೆ. "ನಿನಗೆ ನಿಜ ಹೇಳುವುದಕ್ಕೆ ಕೂಡಾ ಬರುವುದಿಲ್ಲವೋ. ಹೋಗಲಿ ಎಂದು ಬಿಟ್ಟಿದ್ದೇನೆ. ಈ ಸಲ ನಿಜ ಹೇಳ ದಿದ್ದರೆ ನಿಜವಾಗಿಯೂ ಬೆರಳನ್ನು ಕತ್ತರಿಸುತ್ತೇನೆ. ಹೇಳು. ಈ ಸಲ ಏನನ್ನು ಕತ್ತರಿಸುತ್ತೇನೆ?"

"ಬೆಂಡೆಕಾಯಿಗಳನ್ನು..."

ಥಾಪ್...ಥಾಪ್...ಥಾಪ್...ಬೆರಳುಗಳು ತುಂಡುತುಂಡಾಗಿ ಬೀಳುತ್ತವೆ, ಅವನ ಆಕ್ರೋಶದ ನಡುವೆ "ಸುಳ್ಳು ಹೇಳಿದಿ. ಅದಕ್ಕೇ ಬೆರಳನ್ನು ಕತ್ತರಿಸಿದೆ. ನನ್ನ ತಪ್ಪಲ್ಲವೋ" ಎಂದು ನಗುತ್ತಾ ಹೇಳುತ್ತಾನೆ. ಅಂತಹ ಕ್ರಿಮಿನಲ್ ರಾಮಲಾಲ್! ರಾತ್ರೋರಾತ್ರಿ ಒಂದು ಊರನ್ನೇ ಖಾಲಿಮಾಡಬಲ್ಲ. ಕಾರ್ಮಿಕ ಸಂಘಗಳಲ್ಲಿ ನಾಲ್ಕು ಇವನ ಹಿಡಿತದಲ್ಲಿದೆ. ಹತ್ತು ಜನ ಹಿಂಬಾಲಕರನ್ನು ಕರೆದೊಯ್ದು ಪ್ರಯತ್ನಿಸಿದರೆ ಅವನಿಷ್ಟಪಟ್ಟ ವ್ಯಕ್ತಿ ಎಂ. ಎಲ್. ಎ. ಆಗುತ್ತಾನೆ. ಅವನೇನಾದರೂ ಎದುರುಬಿದ್ದರೆ, ಮತ್ತೆ 'ದಯೆ'ಯಿಂದ ಅವನು ಒಪ್ಪಿಕೊಳ್ಳುವವರೆಗೂ ರಾಜ್ಯಾದ್ಯಂತ ಪರಿಸ್ಥಿತಿ ಪ್ಯಾರಲೈಜ್ ಆಗಬೇಕಾದದ್ದೇ. ಅವನು ಸ್ವತಃ ಹತ್ಯೆಗಳನ್ನು ಮಾಡುವ ಸ್ಟೇಜ್‌ದಾಟಿ ತುಂಬಾ ದಿನಗಳಾಗಿವೆ. ಹಳೆ ಕೇಸುಗಳನ್ನು ಮುಚ್ಚಿಹಾಕಲು ಹೇಗೂ ಪರಮೇಶ್ವರ್ ಇದ್ದಾನೆ.

ಎಲ್ಲಾ ಸೇರಿಸಿ ಒಂದೇ ಮಾತಿನಲ್ಲಿ ಹೇಳಬೇಕೆಂದರೆ— ಭಾರತ ಸೈನ್ಯದ ಬಳಿಯಿರುವ ಆಯುಧಗಳಿಗಿಂತಲೂ ಆಧುನಿಕವಾದವು ಅನಂತಾನಂತಸ್ವಾಮಿಯ ಬಳಿಯಿವೆ. ಅದರ ರಕ್ಷಣೆ, ಅವುಗಳನ್ನು ಉಪಯೋಗಿಸುವುದು— ರಾಮಲಾಲ್!! ವಿಂಗ್ ಕಮ್ಯಾಂಡರ್!!

ಮಿನಿಸ್ಟರ್ ಸೂರ್ಯಾರಾವ್‌ನನ್ನು ಸಾಯಿಸುವುದು ರಾಮಲಾಲ್‌ಗೆ ದೊಡ್ಡ ಸಮಸ್ಯೆಯೇನಲ್ಲ. ತನ್ನ ನಾಲ್ಕು ಅಸಿಸ್ಟೆಂಟ್‌ಗಳನ್ನು ನಾಲ್ಕು ಸ್ಥಳಗಳಲ್ಲಿ ಇರಿಸಿದ್ದ. ಮಿನಿಸ್ಟರ್ ಸೂರ್ಯಾರಾವ್ ಮೇಲೆ A-3ಆಕ್ರಮಣ ಮಾಡುತ್ತಾನೆ. ಥಿಯೇಟರಿನಲ್ಲಿ ಅವನ ಸುತ್ತಲೂ ನಾಲ್ಕು ಸಾಲುಗಳಲ್ಲಿ ಅವನ ಅನುಚರರೆ ಇರುತ್ತಾರೆ. A-3 ತನ್ನ ಕೆಲಸ ಮುಗಿಸಿದ ಕೂಡಲೆ ಅವನನ್ನು ಕವರ್ ಮಾಡುತ್ತಾರೆ. ಆ ಗಲಿಬಿಲಿಯಲ್ಲಿ ಪೊಲೀಸರು, ಪ್ರಜೆಗಳು ಚೇತರಿಸಿಕೊಳ್ಳುವುದಕ್ಕೆ ಮುಂಚೆಯೇ ಕೊಲೆಗಾರ ಹೊರಬರುತ್ತಾನೆ. ಒಂದು ವೇಳೆ A–3ಯ ಗುರಿಗೆ ಸೂರ್ಯಾರಾವ್ ಸಾಯದಿದ್ದರೆ ಕೂಡಲೇ ಒಬ್ಬರಾದ ಮೇಲೊಬ್ಬರಂತೆ A-1 A-4 ಷೂಟ್ ಮಾಡುತ್ತಾರೆ.

A-2 ಮಾತ್ರ ಇವರೊಡನೆ ಸೇರದೆ ಪ್ರತ್ಯೇಕವಾಗಿರುತ್ತಾನೆ. ರಾಮಲಾಲ್

ಅವನಿಗೆ ಪ್ರತ್ಯೇಕವಾದ ಸೂಚನೆಗಳನ್ನು ಕೊಟ್ಟಿದ್ದ. ಸ್ಟೇಜಿನ ಹಿಂದೆನಿಂತು ಈ ಆಪರೇಷನ್ನೆಲ್ಲಾ ಅವನು ಗಮನಿಸುತ್ತಾ, ಏನಾದರೂ ಪರಿಸ್ಥಿತಿ ವಿಷಮಿಸಿದರೆ– ರಂಗದೊಳಗೆ ಪ್ರವೇಶಿಸಬೇಕು.

ಅವನು ನಿಧಾನವಾಗಿ ರಂಗಸ್ಥಳದ ಹಿಂಭಾಗಕ್ಕೆ ಸೇರಿಕೊಂಡ. ಆ ಜನರಲ್ಲಿಯೇ ಬೆರೆತಂತೆ ಸುಮಾರು ನೂರುಜನ ಸಿ.ಬಿ.ಐ. ಆಫೀಸರುಗಳಿದ್ದಾರೆ. ಹೇಗಾದರೂ ಒಬ್ಬ ಟೆರ್ರರಿಸ್ಟ್‌ನನ್ನು ಹಿಡಿಯಬೇಕು. ಅವನಿಂದ ಎಲ್ಲಾ ವಿಷಯಗಳನ್ನು ಹೊರಗೆಡಹಿಸಬಹುದು. ಇದಕ್ಕಿಂತಲೂ ಉತ್ತಮ ಅವಕಾಶ ಸಿಗದು. ಆದರೆ ಇದೆಲ್ಲಾ ಮಂತ್ರಿಗೆ ಯಾವ ಅಪಾಯವೂ ಆಗದಂತೆ ನಡೆಯಬೇಕು.

ಡೆಪ್ಯುಟಿ ಕಮಿಷನರ್ ಮನಸ್ಸಿನಲ್ಲಿ ಪರಮೇಶ್ವರನೇ ಸರಿದಾಡುತ್ತಿದ್ದ. ಆಡಿಟೋರಿಯಂನಲ್ಲಿ ರಾಮಲಾಲ್ ಇದ್ದಾನೆ. ಇದು ಸುಲಭವಾದ ಪ್ಲಾನ್ ಆಗಿರಲಿಕ್ಕಿಲ್ಲ. ಏನೋ ಸಂಭವಿಸಲಿದೆ.

ಆಲೋಚಿಸುತ್ತಿದ್ದಂತೆಯೇ ಡೆಪ್ಯುಟಿಯ ದೃಷ್ಟಿ–ಸ್ಟೇಜಿನ ಹಿಂದೆ ನಿಧಾನವಾಗಿ ಸರಿಯುತ್ತಿದ್ದ A–2 ಮೇಲೆ ಬಿತ್ತು. ಆ ನಡುಗೆಯಲ್ಲಿನ ಬದಲಾವಣೆಯನ್ನು ಛೀಫ್ ಕೂಡಲೇ ಗಮನಿಸಿದರು.

* * * *

ತನ್ನ ಮಿನಿಸ್ಟರ್ ವೇಷವನ್ನು ಕನ್ನಡಿಯಲ್ಲಿ ನೋಡಿಕೊಂಡು ಕಾಲರನ್ನು ಮೇಲಕ್ಕೆತ್ತುತ್ತಿದ್ದ ವಿಹಾರಿ. ಟೋಪಿ ಇಟ್ಟುಕೊಂಡು ಹೊರಬರುತ್ತಾ ಪದ್ಮಾಕರನ ನೋಡಿ ನಕ್ಕ. ಆಗಲೇ ಪದ್ಮಾಕರನ ಹಿಂದಿನಿಂದ ವಿಹಾರಿ ಹೊರಡಲು ಏರ್ಪಾಟು ಮಾಡಿದ್ದ. ಅವನಿಗಿದೆಲ್ಲಾ ಥ್ರಿಲ್ಲಿಂಗಾಗಿತ್ತು.

ವಿಹಾರಿ ಗ್ರೀನ್ ರೂಮಿನ ತಿರುವಿನಲ್ಲಿ ತಿರುಗುತ್ತಿದ್ದಂತೆಯೇ, ಯುವತಿಯೊಬ್ಬಳು ಎದುರಿನಿಂದ ಓಡಿಬಂದವಳೇ ಅವನಿಗೆ ಢಿಕ್ಕಿ ಹೊಡೆದಳು. ಆದರೆ ಅವಳದನ್ನು ಮನಸ್ಸಿಗೆ ಹಚ್ಚಿಕೊಳ್ಳದೆ ಕಂಗಾಲಾಗಿ, "ಪರಮೇಶ್ವರ್ 'ಪಿ' ಸಾಲಿನಲ್ಲಿ ಕುಳಿತ್ತಿದ್ದಾನೆ. ಕವರ್ ಮಾಡಿ" ಎನ್ನುತ್ತಾ ವೇಗವಾಗಿ ಹೊರಟುಹೋದಳು. ಕಣ್ರೆಪ್ಪೆ ಬಡಿಯುವಷ್ಟು ಹೊತ್ತಿನಲ್ಲೇ ನಡೆದ ಈ ಘಟನೆಯಿಂದ ವಿಹಾರಿಗೆ ಏನೂ ಅರ್ಥವಾಗಲಿಲ್ಲ.

ಕಾಲೇಜಿನ ಫಂಕ್ಷನ್ನಿನಲ್ಲಿ ಪ್ರತಿಯೊಬ್ಬರೂ ತಮ್ಮದೇ ಈ ಫಂಕ್ಷನ್ ಎನ್ನುವಂತೆ ಸಡಗರದಿಂದ ಓಡಾಡುವುದು ಸಾಮಾನ್ಯವೇ. ಅದರಲ್ಲಿಯೂ ಮಹಿಳಾ ಕಲಾಶಾಲೆ!!!

ಅವನು ಆದರ ಬಗ್ಗೆ ತಲೆಕೆಡಿಸಿಕೊಳ್ಳದೆ, ಹಿಂದಿನಿಂದ ಆಡಿಟೋರಿಯಂನ ಹೊರಬಂದು, ಪ್ರವೇಶದ್ವಾರದ ಬಳಿ ಬಂದ. ಆಗಲೇ ಪದ್ಮಾಕರ್, ಅಲ್ಲಿ ಮತ್ತಿಬ್ಬರು ಸ್ನೇಹಿತರನ್ನು ತಯಾರುಮಾಡಿದ್ದ. ಅವರೂ ನಟರೇ ಆದ್ದರಿಂದ, ಸೀರಿಯಸ್ಸಾಗಿ ವಿಹಾರಿಯ ಕೊರಳಿಗೆ ಹೂವಿನಹಾರ ಹಾಕಿದರು. ಅದೃಷ್ಟವಶಾತ್ ಪ್ರಿನ್ಸಿಪಾಲ್ ಅಲ್ಲಿರಲಿಲ್ಲ, ವಿಹಾರಿ ಮತ್ತಷ್ಟು ಧೈರ್ಯ ತಂದುಕೊಂಡು, ಸುತ್ತಲೂ ಇರುವವರಿಗೆ ಮುಗುಳ್ನಗುತ್ತಾ ನಮಸ್ಕರಿಸಿ, ಅವರೆಲ್ಲರ ನಮಸ್ಕಾರಗಳನ್ನು ಸ್ವೀಕರಿಸುತ್ತ ಪ್ರವೇಶ ದ್ವಾರವನ್ನು ಮುಟ್ಟಿದ.

ಸುನಾದಮಾಲಳ ಮೈಯೆಲ್ಲಾ ಬೆವರಿಂದ ತೊಯ್ದಿತ್ತು. ಕೈಯಲ್ಲಿದ್ದ ಪುಷ್ಪಗುಚ್ಛ ನಡುಗುತ್ತಿತ್ತು. ಮಂತ್ರಿಯೆಂದರೆ ಎಲ್ಲೋ ಐವತ್ತು ದಾಟಿದ ವ್ಯಕ್ತಿಯೆಂದುಕೊಂಡಿದ್ದಳು. ಹೀಗೆ ಯುವಕನೆಂದುಕೊಂಡಿರಲಿಲ್ಲ. ಹೇಗೆ ಹೂಗುಚ್ಛವನ್ನು ಕೊಟ್ಟರೆ ಮಂತ್ರಿಯವರ ಕೈ ಸ್ಪರ್ಶವನ್ನು ಮಾಡದಿರಲು ಸಾಧ್ಯವೆಂದು ಚಿಂತಿಸುತ್ತಿದ್ದಳು.

ವಿಹಾರಿ ಹತ್ತಿರಕ್ಕೆ ಬರುತ್ತಿದ್ದಾನೆ.

ತಾನೆಲ್ಲಿ ಎಚ್ಚರತಪ್ಪಿ ಕೆಳಗೆ ಬೀಳುತ್ತೇನೋ ಎಂಬಂತಿತ್ತು ಮಾಲಳಿಗೆ. ಹೂಗುಚ್ಛವನ್ನು ಹೇಗೋ ಒಂದು ರೀತಿ ಅರ್ಪಿಸಿ 'ಅಮ್ಮಯ್ಯ' ಅಂದುಕೊಂಡಳು ನಿಟ್ಟುಸಿರುಬಿಟ್ಟು. ವಿಹಾರಿ ವಿಶಾಲವಾದ ಕಿರುನಗೆಯಿಂದ ಸ್ವೀಕರಿಸಿ ಅವಳಿಗೆ ಮರಳಿಸಿದ.

ಅಂದುಕೊಂಡಂತೆ ನಡೆಯಿತು.

ಸುನಾದಮಾಲಳ ತಲೆಯಲ್ಲಿದ್ದ ಮಲ್ಲಿಗೆ ದಂಡೆ ಕೆಳಗೆ ಬಿತ್ತು. ಅದನ್ನು ಎತ್ತಿಕೊಡಲು ವಿಹಾರಿ ಬಗ್ಗಿದ. ಸುನಾದಮಾಲ ಕೂಡ ಬಗ್ಗಿದಳು.

"ಇಂತಹ ಸಮಯಗಳಲ್ಲೇ ತಲೆಗಳು ಡೀ ಹೊಡೆಯುವುದು". ವಿಹಾರಿಯ ಈ ಮಾತುಗಳು ಅವಳಿಗೆ ಸರಿಯಾಗಿ ಕೇಳಿಸಲಿಲ್ಲ. ಜಿಂಕೆಯಂತೆ ಬೆದರುಗಣ್ಣಿನಿಂದ ನೋಡುತ್ತಾ ನಿಂತಳು. ಅಷ್ಟರಲ್ಲಿ ಪ್ರಿನ್ಸಿಪಾಲ್‌ಗೆ ಸುದ್ದಿ ಮುಟ್ಟಿ, ಗಡಿಬಿಡಿಯಿಂದ ಅತ್ತಲೇ ಓಡೋಡಿ ಬಂದರು, ಸೂರ್ಯಾರಾವ್‌ನ ಬದಲು ಮತ್ತೊಬ್ಬ ಮಂತ್ರಿಯೇ ದೂರದಲ್ಲಿ ಬರುತ್ತಿರುವುದನ್ನು ಕಂಡು ಅತ್ತ ಓಡಿದರು.

"ನಿಮ್ಮ ಹೆಸರು–" ವಿಹಾರಿ ಕೇಳಿದ.

"ಸು...ಸು...ಸುನಾದಮಾಲ".

"ಸುಸುಸ್ಸುನಾದಮಾಲಾ?"

ಅವಳು ಮತ್ತಷ್ಟು ಬೆದರಿದವಳಂತೆ "ಒಂದೇ ಸು .." ಅಂದಳು.

''ಒಂದು 'ಸು' ನೇನಾ? ಮೂರು 'ಸು'ಗಳಲ್ಲ ತಾನೇ?'' ಎಂದು

ಮುಂದಕ್ಕೆ ಹೆಜ್ಜೆ ಇಟ್ಟು, 'ನನ್ನ ಹೆಸರು ನಿಮಗೆ ಗೊತ್ತಾ?' ಎಂದು ಕೇಳಿದ. ಅವಳು ಅದಕ್ಕೆ ಉತ್ತರಿಸಿದೆ ವಿಧಿಯೇ ಇರಲಿಲ್ಲ.

''ಸು... ಸು... ಸೂರ್ಯಾರಾವ್''

''ಮೂರು 'ಸೂ'ಗಳಿಲ್ಲ, ಒಂದೇ 'ಸೂ' " ಭಾವರಹಿತನಾಗಿ ಹೇಳಿದ. ಅವಳ ನಾಲಿಗೆಯ ದ್ರವ ಆರಿತ್ತು.

"ಏನು ಓದ್ತಿದೀಯಮ್ಮಾ ನೀನು?'' ಆವಳು ಹೇಳಿದಳು.

ಅಷ್ಟರಲ್ಲಿ ನಿಧಾನವಾಗಿ ರಂಗಸ್ಥಳದ ಮೇಲೆ ಕರ್ಟನ್ ತೆರೆದುಕೊಂಡಿತು. ಅವನು ಅವಳನ್ನು ಮತ್ತೊಂದು ಪ್ರಶ್ನೆ ಕೇಳುತ್ತಿದ್ದಂತೆಯೇ, ಆಗ ಕೇಳಿಸಿತು. ಪಿಸ್ತೂಲು ಶಬ್ದ... ಕೂಡಲೇ ಮತ್ತೊಂದು ಸಲ...

ವಿಹಾರಿ ಸುನಾದಮಾಲಳ ಕೈ ಹಿಡಿದು ಸ್ಟೇಜಿನ ಮೇಲಕ್ಕೆ ಓಡಿದ. ಆಗಲೇ ಪರದೆ ಸಂಪೂರ್ಣವಾಗಿ ಸರಿದು ಸೆಟ್ ಕಾಣುತ್ತಿತ್ತು. ಅದೇ ಅವನು ಮಾಡಿದ ತಪ್ಪು.

A-3 ವಿಹಾರಿಯನ್ನೇ ಮಂತ್ರಿ ಅಂದುಕೊಂಡ.

ಸ್ಟೇಜಿನ ಮೇಲೆ ಮಂತ್ರಿಯನ್ನು ಕರೆತರುವವರನ್ನೂ ಕೂಡಾ ಸಾಯಿಸಿ ಬಿಡಬೇಕೆಂದು ಅವನಿಗೆ ಇನ್‌ಸ್ಟ್ರಕ್ಷನ್ಸ್. A-3ಯ ಪಿಸ್ತೂಲಿನಿಂದ ಹೊರಟ ಗುಂಡು ಸ್ಟೇಜನ್ನು ಛಿದ್ರ ಛಿದ್ರ ಮಾಡಿತು. ಅಷ್ಟರಲ್ಲಿ ಡೆಪ್ಯೂಟಿ ಛೀಫ್ ಪಿಸ್ತೂಲನ್ನು ತೆಗೆದದ್ದು, A-3 ಯನ್ನು ಸುಟ್ಟದ್ದು ನಡೆದುಹೋಗಿತ್ತು. ಆ ಗುರಿ ಎಷ್ಟು ಸರಿಯಾಗಿತ್ತೆಂದರೆ A-3ಕೈಯೊಳಗೆ ಉದ್ದವಾಗಿ ನುಸುಳಿದ ಗುಂಡು ಮೊಣಕೈವರೆಗೂ ಇಬ್ಭಾಗ ಮಾಡಿತ್ತು. ಅವನು ಕಿರುಚಿದ ಶಬ್ದ ಹಾಲೆಲ್ಲಾ ಪ್ರತಿಧ್ವನಿಸಿತು.

ಡೆಪ್ಯೂಟಿ ಛೀಫ್‌ಗಿಂತಲೂ ವೇಗವಾಗಿ ಯೋಚಿಸಬಲ್ಲ ಮತ್ತೊಂದು ವ್ಯಕ್ತಿ ಆ ಹಾಲಿನಲ್ಲೇ ಇದ್ದ...ಲಾಯರ್ ಪರಮೇಶ್ವರ್.

A-3 ಸಿಕ್ಕಿಬಿದ್ದನೆಂದು ಅವನಿಗೆ ಗೊತ್ತಾಯಿತು. ಪ್ರಾಣಸಹಿತನಾಗಿ ಸಿಗಬಾರದೆಂದೂ ಅವನಿಗೆ ಗೊತ್ತು. ಹಿಂದೆ ಬಾಲ್ಕನಿಯ ಕಡೆ ನೋಡಿ ಸಂಜ್ಞೆ ಮಾಡಿದ. ರಾಮುಲಾಲ್ ಹಿಂದಿನಿಂದ A-3 ಯನ್ನು ಸುಟ್ಟುಬಿಟ್ಟ. ಅವನ ಮೆದುಳು ಸಿಡಿದು ಚೂರುಚೂರಾಗಿ ಗಾಳಿಯಲ್ಲಿ ಹಾರಿತು. ಆದರೆ ಅದು ಒಂದು ಕ್ಷಣ ಮಾತ್ರ. ಕಿಟಾರನೆ ಕಿರುಚಾಟ...ಹಾಹಾಕಾರಗಳು.

ರಾಮುಲಾಲ್, ಅವನ ಸಹಚರರು ಪ್ರೊಫೆಷನಲ್‌ಗಳು! ತಮ್ಮ ಕೆಲಸಗಳನ್ನು–ಈ ಗಲಾಟೆಗೆ ಸಂಬಂಧವಿಲ್ಲವೆಂಬಂತೆ–ನಡೆಸಿಕೊಂಡು ಹೋಗುತ್ತಿದ್ದಾರೆ, A-3 ಯನ್ನು ಕೊಂದದ್ದು ಸಿ. ಬಿ. ಐ. ನವರು ಎಂದುಕೊಳ್ಳುತ್ತಾರೆಂದು

ರಾಮಲಾಲ್‌ಗೆ ಗೊತ್ತು.

ಸ್ಟೇಜಿನ ಹಿಂದಿದ್ದು ಇದನ್ನೆಲ್ಲಾ ನೋಡುತ್ತಿದ್ದ A-2, ವಿಹಾರಿ, ಸುನಾದಮಾಲರ ಮೇಲೆ A-3 ಗುರಿಯಿಟ್ಟು ಹೊಡೆದದ್ದು ನಂತರ ಅವನೇ ಸತ್ತದ್ದು-ಎಲ್ಲಾ ನೋಡಿದ್ದ. A-3 ಯ ಸಾವು ಅವನನ್ನು ಗಾಬರಿಗೊಳಿಸಲಿಲ್ಲ. ಅವನಿಗೆ ವಹಿಸಿದ್ದ ಕೆಲಸ ಮಂತ್ರಿ ಸಾಯುವ ವರೆಗೂ ಸೂಪರ್‌ವೈಜ್ ಮಾಡ ಬೇಕೆಂದು. ಅವರಿಬ್ಬರೂ ಸತ್ತಿದ್ದಾರಾ, ಇಲ್ಲವಾ ಎಂದು ಕೂಡಾ ನೋಡಲಿಲ್ಲ. ಅವನ ಪಿಸ್ತೂಲಿನಿಂದ ಹೊರಟ ಮೊದಲ ಬುಲೆಟ್ ಹೋಗಿ ರಾಡ್‌ಗೆ ಕಟ್ಟಿದ್ದ ಹಗ್ಗಕ್ಕೆ ತಗುಲಿತು. ಅದು ಕಡಿದು, ಉದ್ದವಾದ ಸ್ತಂಭವೊಂದು ಸ್ಟೇಜಿನ ಮೇಲೆ ಬಿತ್ತು.

## 3

ವಿಹಾರಿ ಮೊದಲು ನೋಡಿಕೊಳ್ಳಲಿಲ್ಲ. ಆಕಾಶದಿಂದ ನಕ್ಷತ್ರ ಜಾರಿದಂತೆ ಬೀಳುತ್ತಿದ್ದ ಪರದೆಯನ್ನು ಕೊನೆಯ ಕ್ಷಣದಲ್ಲಿ ಕಂಡ, ಆಗಲೇ ತಡವಾಗಿತ್ತು.

ಅವನೇನಾದರೂ ಅದನ್ನು ತಳ್ಳಿರದಿದ್ದರೆ ಅದು ಅವಳ ಮೇಲೆ ಬೀಳು ತ್ತಿತ್ತು. ಮೊದಲನೇ ಬುಲೆಟ್ ಕಿವಿಯ ಪಕ್ಕದಲ್ಲಿ ನುಗ್ಗಿ ಹೋದಾಗ ಅವನಿಗೆ ಏನು ನಡೆಯಿತೆಂದೇ ಅರ್ಥವಾಗಲಿಲ್ಲ. ಅನಂತರ ಪಿಸ್ತೂಲಿನ ಶಬ್ದ ಕೇಳಿಸುತ್ತಿದ್ದರೆ ಸುನಾದಮಾಲಳ ಕೈಹಿಡಿದುಕೊಂಡು ಓಡಿದ. ಆ ಸ್ತಂಭ ಬೀಳುವ ಸಮ ಯಕ್ಕೆ ಅವರಿಬ್ಬರೂ ಸ್ಟೇಜಿನ ಮಧ್ಯೆ ಇದ್ದುದಕ್ಕೂ, ಸ್ತಂಭ ಅವಳ ಮೇಲೆ ಬೀಳ ದಂತೆ ತಡೆದದ್ದಕ್ಕೂ, ಅದರ ಭಾರವನ್ನು ತಡೆಯಲಾರದೆ ಅವನು ಜಾರಿಬೀಳು ವುದಕ್ಕೂ ಸರಿಹೋಯಿತು.

ಅಂಗಾತನಾಗಿ ಅವಳು, ಅವಳ ಮೇಲೆ ಅವನು, ಅವನ ಮೇಲೆ ಸ್ಟೇಜಿನ ಹಿಂಭಾಗಕ್ಕೆ ಕಟ್ಟಿದ ತಡಿಕೆ, ಅದರ ಮೇಲೆ ಸ್ತಂಭ ಒಂದರ ಮೇಲೊಂದಾಗಿ ಬಿದ್ದವು.

ಮೊದಲು ಪಿಸ್ತೂಲಿನ ಶಬ್ದ, ನಂತರ A-3 ಕಿರುಚಿದ ಆರ್ತನಾದ, ಆಮೇಲೆ ಸ್ಟೇಜೇ ಕುಸಿದದ್ದನ್ನು ಕಂಡ ಪ್ರೇಕ್ಷಕರು ಭಯಭ್ರಾಂತರಾಗಿ ಪ್ರವೇಶ ದ್ವಾರದ ಮೂಲಕ ಒಮ್ಮೆಗೇ ಹೊರಬರಲು ಪ್ರಯತ್ನಿಸುತ್ತಿದ್ದರು. ಅಲ್ಲಿ ನುಗ್ಗಾಟ ಪ್ರಾರಂಭವಾಯಿತು.

ಮಂತ್ರಿಯನ್ನು ರಕ್ಷಿಸುವ ಪ್ರಯತ್ನದಲ್ಲಿ ಪೋಲಿಸರು ಬಲೆಯಂತೆ ನಿಂತಿ

ದ್ದರು. ಭಾರೀ ಸೀರೆ ಜಾರುತ್ತಿದ್ದರೂ ಓಡಲು ಪ್ರಯತ್ನಿಸಿದ ಪ್ರಿನ್ಸಿಪಾಲ್ ಸಾಲು ಕುರ್ಚಿಗಳ ನಡುವೆ ಕುಸಿದು ಬಿದ್ದರು. ಜನರೆಲ್ಲಾ ಆಕೆಯ ಪಕ್ಕದಿಂದ ಓಡುತ್ತಿದ್ದರು. ಅಂತಹ ಗಡಿಬಿಡಿಯಲ್ಲಿಯೂ ಕರ್ತವ್ಯವನ್ನು ಮರೆಯದವರು ಡೆಪ್ಯುಟಿ ಛೀಫ್ ಮಾತ್ರ. ಗ್ಯಾಂಗಿನ ಒಬ್ಬರನ್ನಾದರೂ ಹಿಡಿದು ಅನಂತಾನಂತ ಸ್ವಾಮಿಗೂ ಈ ಗಲಭೆಗೂ ಸಂಬಂಧವಿದೆಯೆಂದು ನಿರೂಪಿಸಲು ಇದಕ್ಕಿಂತಲೂ ಉತ್ತಮ ಅವಕಾಶ ಸಿಗಲಾರದು.

ವಿಹಾರಿಗೆ ಆ ಯಾವ ತಾಪತ್ರಯವೂ ಇರಲಿಲ್ಲ. ಸುನಾದಮಾಲಳ ಮೇಲೆ ಬೋರಲು ಮಲಗಿ ಮಾತು ಮುಂದುವರಿಸಲು ಪ್ರಯತ್ನಿಸಿದ. ಸ್ತಂಭ ಅಡ್ಡ ಬಿದ್ದುದರಿಂದ ಇವರು ಯಾರಿಗೂ ಕಾಣಿಸುತ್ತಿರಲಿಲ್ಲ. ಸ್ತಂಭದ ಭಾರ, ತನ್ನ ಭಾರ ಅವಳ ಮೇಲೆ ಬೀಳದಂತೆ ಎರಡೂ ಕೈಗಳನ್ನು ಸ್ಟೇಜಿನ ಮೇಲೆ ಆಧಾರವಾಗಿಟ್ಟುಕೊಂಡು, ಅವಳನ್ನು ಕೇಳಿದ.

''ನೀವೇನು ಓದ್ತಿದೀರಿ?"

ಭೂಮಿ ಎರಡಾಗಿ ಸೀಳಿ ತಾನದರೊಳಗೆ ಏಕೆ ಸೇರಲಿಲ್ಲವೋ ಎಂದು ಅನ್ನಿಸಿತು ಸುನಾದಮಾಲಳಿಗೆ. ಕೇವಲ ನೆಗಡಿಗೇ ಗಲಿಬಿಲಿಗೊಳ್ಳುವ ವ್ಯಕ್ತಿಗೆ ಏಯ್ಡ್ಸ್ ಎಂದು ಗೊತ್ತಾದರೆ ಹೇಗಾಡುತ್ತಾನೋ ಹಾಗೆಯೇ ಆಯಿತು ಅವಳಿಗೆ. ಪರಗಂಡಸು ತಾಕಿದರೇನೇ ಸರ್ಫ್‌ನಿಂದ ತೊಳೆದುಕೊಳ್ಳುವ ಅವಳಿಗೆ ಈ ಪರಿಸ್ಥಿತಿಯಿಂದ ಉಸಿರೇ ನಿಲ್ಲುತ್ತದೇನೋ ಅನ್ನಿಸಿತು. ಆದರೆ ತನ್ನ ಮೇಲಿರುವುದು ಮಂತ್ರಿ, ಅದಕ್ಕೂ ಮಿಗಿಲಾಗಿ ತನ್ನನ್ನು ರಕ್ಷಿಸುತ್ತಿರುವವನಾದ್ದರಿಂದ ಹೇಗೋ ಸಾವರಿಸಿಕೊಂಡು ''ಬಿ.ಎಸ್ಸಿ.,-ಸಿ.ಪಿ.ಎಂ." ಅಂದಳು.

''ಹಾರಿಜಾಂಟಲ್‌ಗೂ ಪರ್ಪೆಂಡಿಕ್ಯುಲರ್‌ಗೂ ವ್ಯತ್ಯಾಸವೇನು?''

ಅವಳು ಕೂಡಲೇ ಉತ್ತರಿಸಲಿಲ್ಲ. ಅವಳ ಮೌನವನ್ನು ಕಂಡು, "ನೋಡ್ರಿ, ಮೇಲೆಷ್ಟೇ ಭಾರವಿದ್ದರು ನಿಮ್ಮ ಮೇಲೆ ಹೀಗೆ ಬೋರಲಾಗಿ ಮಲಗಿಕೊಳ್ಳುವುದು ನನಗಿಷ್ಟವೆಂದೇನೂ ಭಾವಿಸಬೇಡಿ. ಐಮೀನ್...ಭಾರವಿಲ್ಲದಿದ್ದರೆ ಇಷ್ಟವಾ ಎಂದು ನಿಮಗನುಮಾನ ಬರಬಹುದು. ಮೊದಲೇ ನೀವು ತುಂಬಾ ಅನುಮಾನದ ವ್ಯಕ್ತಿಯಂತೆ ಕಾಣುತ್ತೀರಿ. ಯಾರಾದರೂ ಬಂದು ಸಹಾಯ ಮಾಡುವ ವರೆಗೂ ನಾವು ಹೀಗೆಯೇ ಇರಬೇಕು. ನಾನೂ ನೀವೂ ಪ್ಯಾರಲಲ್! ನಮ್ಮ ಮೇಲೆ ಈ ಕಂಭ ಪರ್ಪೆಂಡಿಕ್ಯುಲರ್. ಇನ್ನು ಹಾರಿಜಾಂಟಲ್ ಅಂದರೆ ಉದ್ದುದ್ದವಾಗಿ ಮತ್ತೊಂದು ಕಂಭ."

"ನಂಗೂ ಗೊತ್ತು," ಎಂದಳು ಉಸಿರು ಬಿಗಿ ಹಿಡಿದು. ದೂರದಲ್ಲಿ ಪಿಸ್ತೂಲಿನ ಸಿಡಿತದ ಶಬ್ದ. ಇದ್ದಕ್ಕಿದ್ದಂತೆಯೇ ಅವಳು ಕಿಟಾರನೆ ಕಿರುಚಿದಳು.

ಅದಕ್ಕೆ ಕಾರಣ ಅವನು ಲಯಬದ್ಧವಾಗಿ ತೂಗಾಡಲು ಪ್ರಾರಂಭಿಸಿದ್ದ!!! "ಮ್ಯಾಡಮ್! ನೀವು ಮತ್ತೆ ನನ್ನನ್ನು ಅಪಾರ್ಥಮಾಡಿಕೊಳ್ಳುತ್ತಿದ್ದೀರಿ. ಮೇಲೆ ಕಂಭದ ಮೇಲೆ ಯಾರೋ ಓಡುತ್ತಿದ್ದಾರೆ. ಅಷ್ಟೇ ಆಗಲೀ ಮತ್ಯಾವುದಕ್ಕೂ ಅಲ್ಲ..."

ಮಾತನಾಡುವ ಹಂತ ದಾಟಿ ಹೋದಂತೆ ಅವಳು ಕಣ್ಣೆಟ್ಟುಕೊಂಡು ನೋಡುತ್ತಿದ್ದಾಳೆ. ಮೊದಲೇ ದೊಡ್ಡದಾದ ಕಣ್ಣು ಮತ್ತಷ್ಟು ದೊಡ್ಡದಾಗಿ ಕಾಣಿಸುತ್ತಿದೆ. ಅವಳು ಹಾಗೆ ನೋಡುತ್ತಿದ್ದರೆ ಅವಳನ್ನು ಮತ್ತಷ್ಟು ಅಳಿಸ ಬೇಕೆನ್ನಿಸಿತು ಅವನಿಗೆ.

"...ಅಂದ ಹಾಗೆ ನಿಮಗೆ 'ನಾತಿಚರಾಮಿ' ಎಂದರೇನೆಂದು ಗೊತ್ತಾ? ಕಿರುಬೆರಳಿಂದ ಕಿರುಬೆರಳನ್ನು ಹಿಡಿದುಕೊಂಡು ಕಾಲಿನಿಂದ ಕಾಲನ್ನು ತುಳಿಸು ತ್ತಾರೆ, ಮದುವೆಯ ಸಮಯದಲ್ಲಿ! ತಲೆಯಿಂದ ಕಾಲಿನವರೆಗೂ ನಿನ್ನವಳು ಎಂದು ಅದರ ಅರ್ಥ. ಅಂತಹುದರಲ್ಲಿ ಹೀಗೆ ಬೆರಳು ಕಾಲು ಆಗದೆ, ತಲೆ ಯಿಂದ ಕಾಲಿನವರೆಗೂ, ನಾವೀಗ ಹೀಗಿರುವುದು ಸಾವಿರ ನಾತಿಚರಾಮಿಗಳಿಗೆ ಸಮಾನ."

"ನೋಡ್ರಿ, ಜವಾಬ್ದಾರಿಯುತ ಮಂತ್ರಿಯ ಸ್ಥಾನದಲ್ಲಿದ್ದು ನೀವು ಹೀಗೆ, ಮಾತನಾಡುವುದು ಸಭ್ಯತೆಯಲ್ಲ," ಹೇಗೋ ಕಂಠ ಸರಿಪಡಿಸಿಕೊಂಡು ಹೇಳಿದಳು. ಆಗ ನೆನಪಾಯಿತು ಅವನಿಗೆ ತಾನಾರೆಂದು ಅವಳಿಗೆ ತಿಳಿಸಿಲ್ಲವೆಂದು. "ಸಾರಿ ನಾನು ಮಂತ್ರಿಯಲ್ಲ. ನನ್ನ ಹೆಸರು ನಿಕುಂಜ್ ವಿಹಾರಿ. ಇಷ್ಟು ಭಾರವನ್ನು ಜವಾಬ್ದಾರಿಯಾಗಿ ಹೊರುತ್ತಿರುವ 'ಅಂತಿಮ ಹೋರಾಟ' ನಾಟಕದಲ್ಲಿ ಮಂತ್ರಿ ಪಾತ್ರವಹಿಸುತ್ತಿದ್ದವನು."

ಸುನಾದಮಾಲಳ ಮುಖ ನಾಚಿಕೆಯಿಂದಲೂ, ರೋಷದಿಂದಲೂ ಕೆಂಪಗಾ ಯಿತು. ಕೋಪದಿಂದ ಏನೋ ಹೇಳಲು ಹೋಗುವಷ್ಟರಲ್ಲಿ ಯಾರೋ 'ಅರರೇ' ಎಂದಂತಾಯಿತು. ಕಂಬವನ್ನು ಮೇಲೆತ್ತಿದರು. ಜೊಂಪು ಹಿಡಿದಿದ್ದ ತನ್ನ ಕೈಗ ಳನ್ನು ಸರಿಪಡಿಸಿಕೊಳ್ಳುತ್ತಾ ವಿಹಾರಿ ಕೇಳಿದ, "ನೀವು ನನಗೆ ಥ್ಯಾಂಕ್ಸ್ ಹೇ..." ಎನ್ನುತ್ತಿದ್ದಂತೆಯೇ ಅವನ ಭುಜದ ಪಕ್ಕದಲ್ಲೇ ಪಿಸ್ತೂಲಿನ ಗುಂಡೊಂದು ನುಗ್ಗಿ ಹೋಯಿತು. ಸ್ಪರ್ಶ ಸುಖಾನ್ವೇಷಿತನಾದ ಅವನು ಹೊರ ಪ್ರಪಂಚದ ಭೀಭತ್ಸ ವನ್ನು ತಾತ್ಕಾಲಿಕವಾಗಿ ಮರೆತಿದ್ದ. ತಕ್ಷಣವೇ ಸುತ್ತಲೂ ನೋಡಿದ, ಸುನಾದ ಮಾಲ ಅಲ್ಲಿಂದ ಯಾವಾಗಲೋ ಓಡಿದ್ದಳು.

ಸುತ್ತಲೂ ಸ್ಟೇಜಿನ ಮೇಲೆ ಗಡಿಬಿಡಿ, ಗಲಿಬಿಲಿಯಿಂದ ಜನ ಸರಿದಾಡುತ್ತಿ ದ್ದರು. ಮುಖ್ಯ ದ್ವಾರದ ಬಳಿ ಹೊರ ಓಡಲು ನುಗ್ಗಾಟ. ಮೈಕ್‌ನಲ್ಲಿ 'ವೆಕೇಟ್

ದಿ ಸ್ಟೇಜ್' ಎಂದು ಸಿ ಬಿ ಐ ಆಫೀಸರ್ ಅನೌನ್ಸ್ ಮಾಡುತ್ತಿದ್ದರು. A-3 ಯನ್ನು ಸಾಯಿಸಿಬಿಟ್ಟಂತೆ ಡೆಪ್ಯುಟಿ ಥೀಫ್‌ಗೆ ಗೊತ್ತಾಗಿಬಿಟ್ಟಿತ್ತು. ಆ ಕೊಲೆಗಾರ ನನ್ನು ಹಿಡಿಯದಿದ್ದರೆ-ಇನ್ನು ಸಿಬಿಐಗೆ ಇಷ್ಟು ಪ್ರಯತ್ನ ಮಾಡಿ ವ್ಯರ್ಥ ವಾಗುತ್ತದೆ.

ವಿಹಾರಿ ಯೋಚನೆಯಿಂದ ಹೊರಬರುತ್ತಿದ್ದಂತೆಯೇ ಪಿಸ್ತೂಲುಗಳ ಶಬ್ದ ನಿಂತು ಹೋಯಿತು. ಯಾವಾಗ ಜನರೆಲ್ಲಾ ಖಾಲಿಯಾಗಿ ತಮ್ಮನ್ನು ಗುರುತಿಸು ತ್ತಾರೆಂದು ತಿಳಿಯಿತೋ ಕೂಡಲೇ ರಾಮಲಾಲ್ ತನ್ನ ಅನುಚರರಿಗೆ ಸಂಜ್ಞೆ ಮಾಡಿದ. ತಕ್ಷಣವೇ ಎಲ್ಲರೂ ಮಾಯವಾದರು. ಈಗ ಜನರ ಗಲಿಬಿಲಿಯನ್ನು ಬಿಟ್ಟು ಬೇರೇನೂ ಇಲ್ಲ. ಆದರೆ ಡೆಪ್ಯುಟಿ ಕಮಿಷನರ್‌ಗೆ ಗೊತ್ತು-ಅಪಾಯ ಬಂದಾಗ ತಮ್ಮೊಡನೆ ಹಾರಲಾರದ ಪಕ್ಷಿಯನ್ನು ಬಿಟ್ಟುಹೋಗುವಂತೆ ಸತ್ತ ವ್ಯಕ್ತಿಯನ್ನು ಬಿಟ್ಟು ಉಳಿದವರೆಲ್ಲ ಓಡಿದ್ದಾರೆಂದು!

ಮತ್ತೊಬ್ಬ ವ್ಯಕ್ತಿ ಗ್ರೀನ್ ರೂಮಿನಲ್ಲಿದ್ದಾನೆಂದು ತಿಳಿಯಿತು. !! ... ಎಚ್ಚರ ತಪ್ಪಿದರೆ ಅವನು ಒಳಗಿನಿಂದಲೇ ಎಲ್ಲರನ್ನೂ ಸುಡಲು ಪ್ರಾರಂಭಿಸ ಬಹುದು!!

ಅನಂತಾನಂತಸ್ವಾಮಿಯ ಮನುಷ್ಯ ಅವನು. ಸರ್ಕಾರ ಸರಬರಾಜು ಮಾಡುವ ಆಯುಧಗಳಿಗಿಂತಲೂ ಆಧುನಿಕವಾದ ಆಯುಧಗಳು ಅವರ ಬಳಿ ಯಿದೆ. ಎಚ್ಚರಿಕೆಯಿಂದ ಹ್ಯಾಂಡಲ್ ಮಾಡಬೇಕು. ಇಲ್ಲದಿದ್ದರೆ ಮತ್ತಷ್ಟು ಪ್ರಾಣಹಾನಿ ತಪ್ಪದು.

* * * *

ತನ್ನ ಸಹನಟರಾರೂ ಕಾಣಲಿಲ್ಲ ವಿಹಾರಿಗೆ. ಸ್ಟೇಜೆಲ್ಲಾ ಅಸ್ತವ್ಯಸ್ತ ವಾಗಿದೆ. ಕಾಲಿಗೆ ಅಡ್ಡ ಬಂದ ಸಾಮಾನುಗಳನ್ನೆಲ್ಲಾ ತಳ್ಳಿಕೊಂಡು ಗ್ರೀನ್ ರೂಮ್ ಕಡೆಗೆ ಬಂದ.

ಹುಲಿಗಿಂತಲೂ ಅಪಾಯಕಾರಿ ವ್ಯಕ್ತಿ ಒಳಗಿದ್ದಾನೆಂದು ಅವನಿಗೆ ಗೊತ್ತಿಲ್ಲ. ಅವನು ಒಳಗೆ ನಡೆಯುತ್ತಿದ್ದಂತೆಯೇ ತಲೆ ಹಿಂಭಾಗದಲ್ಲಿ ಪಿಸ್ತೂ ಲನ್ನು ಒತ್ತಿ 'ಮೇಲೆತ್ತು ಕೈ' ಎಂದ A-2. ವಿಹಾರಿಯನ್ನು ಅಡ್ಡ ಇಟ್ಟು ಕೊಂಡು ಪೊಲೀಸರಿಂದ ತಪ್ಪಿಸಿಕೊಳ್ಳಬಹುದೆಂದು ಅವನ ಆಸೆ. ವಿಹಾರಿ ಚಕ್ಕನೆ ಹಿಂತಿರುಗಿದ. ಸಾಧಾರಣವಾಗಿ ಹಾಗೆ ನಡೆಯುವುದಿಲ್ಲ. ಎಂತಹವನೂ ಭಯ ಪಡುವ ಸನ್ನಿವೇಶ. ಆದರೆ ಅವನ ಕಿವಿಗಳು ಕೇಳಿದ ಮಾತುಗಳಿಗಿಂತ, ಸಬ್

ಕಾನ್ಷಸ್ ರಿಯಾಕ್ಷನ್ ಶೀಘ್ರವಾಗಿ ಕೆಲಸ ಮಾಡಿದ್ದರಿಂದ ಅವನು ಹಿಂತಿರುಗಿದ. A-2 ಪಿಸ್ತೂಲ ಗುಂಡೊಂದನ್ನು ಬಿಡುಗಡೆ ಮಾಡಿತು. ಕತ್ತಿನ ಚರ್ಮವನ್ನು ಸುಟ್ಟು. ಅದು ಪಕ್ಕದಲ್ಲಿಯೇ ನುಗ್ಗಿ ಹೋಯಿತು. ಕಾದ ಕಬ್ಬಿಣ ಸಲಾಕೆ ಕತ್ತಿಗೆ ತಗುಲಿದಂತಾಯಿತು.

ಅಷ್ಟರಲ್ಲಿ ಮತ್ತೊಮ್ಮೆ ಪಿಸ್ತೂಲಿನ ಶಬ್ದ ಕೇಳಿಸಿತು.

ಪ್ರಾಣವೇ ಹೋಯಿತೆಂದುಕೊಂಡ ವಿಹಾರಿ.

ಆದರೆ ಈ ಸಲ ಬಂದ ಶಬ್ದ ಶತ್ರುವಿನ ಪಿಸ್ತೂಲಿನಿಂದಲ್ಲ. ಬಾಗಿಲ ಕಡೆಯಿಂದ. ಯುವತಿಯೊಬ್ಬಳು ಪಿಸ್ತೂಲನ್ನು ಕೈಯ್ಯಲ್ಲಿ ಹಿಡಿದು ನಿಂತಿದ್ದಾಳೆ ಅಲ್ಲಿ.

ಅವನ ಕಾಲರನ್ನು ಸರಿಪಡಿಸಿಕೊಂಡು ಹೊರ ಬರುತ್ತಿದ್ದಂತೆಯೇ "ಪರಮೇಶ್ವರ್‌ನನ್ನು ಕವರ್ ಮಾಡಿ" ಎಂದು ಗಡಿಬಿಡಿಯಿಂದ ಓಡಿದಳು. ಯುವತಿ!!! ಅವಳ ಪಿಸ್ತೂಲಿನಿಂದ ಹೊರಟ ಗುಂಡು ಆಗಂತುಕನ ಕೈಗೆ ತಗುಲಿ. ಅವನ ಕೈಯ್ಯಲ್ಲಿದ್ದ ಆಯುಧ ಕೆಳಗೆ ಬಿತ್ತು. ಆದರೆ ಅವನು ಪ್ರೊಫೆಶನಲ್. ಒಂದೇ ಕ್ಷಣದಲ್ಲಿ ಚೇತರಿಸಿಕೊಂಡವನೇ ಅವಳ ಕಡೆ ನುಗ್ಗಲು ಪ್ರಯತ್ನಿಸಿದ. ಅವಳು ಮತ್ತೊಮ್ಮೆ ಟ್ರಿಗರ್ ಒತ್ತಿದಳು, ಆದರೆ ಅದರಲ್ಲಿ ಗುಂಡುಗಳು ಮುಗಿದಿದ್ದವು.

ಅದುವರೆವಿಗೂ ಪ್ರೇಕ್ಷಕನಂತೆ ನೋಡುತ್ತಿದ್ದ ವಿಹಾರಿ ಕೂಡಲೇ ಚೇತರಿಸಿಕೊಂಡು ಹಿಂದಿನಿಂದ ಶತ್ರುವಿನ ಮೇಲೆ ದಾಳಿ ಮಾಡಿದ. ಅವನಿಗೆ ಕರಾಟೆಯಲ್ಲ; ಕನಿಷ್ಟ ಬಾಕ್ಸಿಂಗ್ ಕೂಡಾ ಗೊತ್ತಿರಲಿಲ್ಲ. ಕತ್ತಿನ ಬಳಿ ಆಗಿದ್ದ ಗಾಯ ಉರಿಯುತ್ತಿತ್ತು. ಅದರಿಂದ ರೊಚ್ಚಿಗೆದ್ದ. ಅವನ ಮನಸ್ಸತ್ವವೇ ಅಂತಹುದು. ರೊಚ್ಚಿಗೆದ್ದರೆ ಶತ್ರು ಎಷ್ಟೇ ಬಲಶಾಲಿಯಾದರೂ, ಅದರ ಬಗ್ಗೆ ಯೋಚಿಸುವುದಿಲ್ಲ. ಅದೇ ಅವನಿಗೆ ಭವಿಷ್ಯತ್ತಿನಲ್ಲಿ ತುಂಬಾ ಕಷ್ಟಕ್ಕೀಡುಮಾಡಿತು.

ಹಿಂದಿನಿಂದ ತನ್ನನ್ನು ಹಿಡಿದ ವಿಹಾರಿಯನ್ನು ಒಂದೇ ಏಟಿಗೆ ದೂರ ತಳ್ಳಿದ A-2 ಬೆಳಗಾದರೆ ಅವನಿಗೆ ಇಂತಹವು ಸರ್ವೇ ಸಾಧಾರಣ. ವಿಹಾರಿಯಂತಹವರು ಒಂದು ಲೆಕ್ಕವೇ ಅಲ್ಲ. ಆ ಪೆಟ್ಟಿಗೇ ಕೆಳಗೆ ಬಿದ್ದು, ಅಷ್ಟೇ ರಭಸದಿಂದ ಮೇಲೆದ್ದ. ಚಿಕ್ಕಂದಿನಲ್ಲಿ ಆಡಿದ್ದ ಫುಟ್‌ಬಾಲ್ ನೆನಪಿಗೆ ಬಂತು. ಎದುರಾಳಿಯ ಮೊಣಕಾಲನ್ನು ಚೆಂಡಂತೆ ಭಾವಿಸಿ...ಎದುರಿನಲ್ಲಿದ್ದ ಮುಖ್ಯದ್ವಾರವನ್ನು ಗೋಲಾಗಿ ಊಹಿಸಿ, ಬಲವಾಗಿ ಒದ್ದ. ಆ ಕಿಕ್‌ನಿಂದ ಆ ವ್ಯಕ್ತಿಗೆ ಕಣ್ಣು ತಿರುಗುವಂತೆ ಮಾಡಿತು. ಯಾವ ಹೋರಾಟಕ್ಕಾದರೂ ಒಂದು ಸೈನ್ಸ್ ಇರುತ್ತದಾಗಲೀ, ಪ್ರಾಣಕ್ಕೆ ಬಂದು ಅದೇ ಕೊನೆಯ ಹೋರಾಟವೆಂದು ತಿಳಿದಾಗ ಅದಕ್ಯಾವ ಸೈನ್ಸ್ ಇರುತ್ತದೆ?

ಕೆಳಗೆ ಬಿದ್ದ A-2 ಅತೀ ಕಷ್ಟದಿಂದ ಮೇಲೆದ್ದು ನಿಂತ. ಎರಡೂ ಕೈಗಳಿಂದ ಕುರ್ಚಿಯನ್ನು ಎತ್ತಿ ವಿಹಾರಿಯ ಕಡೆಗೆ ಎಸೆದ. ಅದೇನಾದರೂ ಅವನಿಗೆ ಬಿದ್ದಿದ್ದರೆ ವಿಹಾರಿಯ ಮುಖವನ್ನು ಯಾವ ಪ್ಲಾಸ್ಟಿಕ್ ಸರ್ಜನ್ನೂ ಸರಿಪಡಿಸಲಾಗುತ್ತಿರಲಿಲ್ಲ. ಆದರೆ ಅದಕ್ಕೆ ಅರ್ಧಕ್ಷಣ ಮುಂಚೆಯೇ ಪಿಸ್ತೂಲು ಸಿಡಿದಿತ್ತು. ಇವರ ಘರ್ಷಣೆಯನ್ನು ಆಧಾರ ಮಾಡಿಕೊಂಡು ಸಿಕ್ಕಿದ ಸಮಯದಲ್ಲೇ ಗುಂಡುಗಳನ್ನು ತುಂಬಿಸಿಕೊಂಡ ಅವಳು, ತನ್ನ ಆಯುಧವನ್ನು ಎಷ್ಟು ಗುರಿಯಿಟ್ಟು ಉಪಯೋಗಿಸಿದ್ದಳೆಂದರೆ, ಆ ಬುಲೆಟ್ ಕುರ್ಚಿಗೆ ತಗುಲಿ, ಅದೇ ಒತ್ತಡದಿಂದ ಅವನು ಹಿಂದಕ್ಕೆ ಬೀಳುವಂತೆ ಮಾಡಿತು, ಸ್ವಲ್ಪವೂ ಗಾಯವಾಗದಂತೆ ಸಿಕ್ಕಿಬಿದ್ದ. ಒಂದು ಸಲ ಅವನು ಕೆಳಗೆ ಬೀಳುತ್ತಿದ್ದಂತೆಯೇ ಉಳಿದ ಆಫೀಸರುಗಳು ಬಿಲಬಿಲನೆ ಮುನ್ನುಗ್ಗಿ ಅವನನ್ನು ಸುತ್ತುವರಿದರು.

ಅವಳು ವಿಹಾರಿಯ ಕಡೆಗೆ ಕೈಚಾಚಿ, "ನೀವು ಮಾಡಿದ ಸಹಾಯಕ್ಕೆ ತುಂಬಾ ಥ್ಯಾಂಕ್ಸ್. ಸಾಮಾನ್ಯ ಪ್ರಜೆಗಳಲ್ಲಿ ನಿಮ್ಮಂತೆ ಸಿವಿಕ್‌ಸೆನ್ಸ್ ಇರುವವರು ಅಪರೂಪ. ಬುಲೆಟ್ಸ್ ತುಂಬಿಸಿಕೊಳ್ಳಲು ನನಗೆ ಸಾಕಷ್ಟು ಸಮಯವನ್ನು ನಿಮ್ಮ ಪ್ರಾಣವನ್ನು ಪಣವಿಟ್ಟು ಕೊಟ್ಟಿರಿ. ನೀವು ಮಧ್ಯೆ ಬರದಿದ್ದರೆ ನಾನಿಂದು ಪ್ರಾಣ ಕಳೆದುಕೊಳ್ಳುತ್ತಿದ್ದೆ" ಅಂದಳು.

ವಿಹಾರಿ ಅವಳೆಡೆಗೇ ಅಪ್ರತಿಭನಾಗಿ ನೋಡುತ್ತಿದ್ದ. ಅವಳ ವಯಸ್ಸು 26ಕ್ಕೆ ಸ್ವಲ್ಪ ಅತ್ತಿತ್ತ ಇತ್ತು. ಅವಳು ಪಿಸ್ತೂಲನ್ನು ಹಿಡಿದ ರೀತಿ ಅವಳಿಗಿದ್ದ ಕಮಾಂಡನ್ನು ಸೂಚಿಸುತ್ತಿತ್ತು. ಆದರೂ ಅವನು ನೋಡುತ್ತಿದ್ದುದು ಅವಳ ಭಂಗಿಯನ್ನಲ್ಲ. ಅವಳ ಮುಖವನ್ನು!! ಅದರಲ್ಲಿ ಒಂದು ರೀತಿಯ ಪರ್ಸನಾಲಿಟಿ ಇದೆ. ಚೆಲ್ಲುತನವಿದೆ. ಸಾಮಾನ್ಯವಾಗಿ ನೋಡುವವರಿಗೆ ಸೌಂದರ್ಯ ಮಾತ್ರ ಕಾಣಿಸುತ್ತದೆ. ಆಳವಾಗಿ ನೋಡುವವರಿಗೆ ಆ ಕಣ್ಣಗಳಲ್ಲಿ ಒಂದು ರೀತಿಯ ಹಠ-ಸೇಡು ಕಾಣುತ್ತದೆ. ರಾಧೆ ಕೃಷ್ಣನಿಗೆ ಒಂದು ಕೋನದಿಂದ ಸತ್ಯಭಾಮೆಯಾಗಿಯೂ ಕಂಡಿದ್ದಿರಬಹುದು. ಅದಕ್ಕೆ ಅವಳೆಂದರೆ ಅಷ್ಟು ಪ್ರೀತಿ. ಈ ಪರ್ಸನಾಲಿಟಿ ಎಂಬುದು ತುಂಬಾ ಹುಡುಗಿಯರಿಗಿರುವುದಿಲ್ಲ. ಅದಕ್ಕೆ ಕಾರ್ಯೇಷು... ದಾಸಿ ಸ್ಟೇಜ್‌ವರೆಗೂ ಬಂದು ನಿಂತುಬಿಡುತ್ತಾರೆ.

ವಿಹಾರಿ ಹುಡುಗಿಯರ ಹಿಂದೆ ಸುತ್ತುವ ಜಾತಿಗೆ ಸೇರಿದವನಲ್ಲ. ಹಾಗೆಂದು ಪೂರ್ತಿ ಇಂಟ್ರಾವರ್ಟೂ ಅಲ್ಲ. ಒಂದೇ ದಿನ ಕಂಡ ಇಬ್ಬರು ಹುಡುಗಿಯರು ಒಬ್ಬರಿಗಿಂತಲೂ ಒಬ್ಬರು ಬೇರೆ ಬೇರೆ ಕೋನಗಳಲ್ಲಿ, ಅಪರೂಪ ಭಂಗಿಗಳಲ್ಲಿ, ಅಪರೂಪ ಸಂದರ್ಭಗಳಲ್ಲಿ ಪರಿಚಯವಾಗಿ ಅವನ ತಲೆ ಕೆಡಿಸಿದರು.

"ನಿಮ್ಮ ಹೆಸರೇನೆಂದು ತಿಳಿದುಕೊಳ್ಳಬಹುದಾ?"

"ನಿಕುಂಜ್ ವಿಹಾರಿ"

"ಥ್ಯಾಂಕ್ಸ್. ನನ್ನ ಹೆಸರು ಪ್ರವಲ್ಲಿಕ. ಡೆಪ್ಯುಟಿ ಕಮಿಷನರ್ ಸಿ. ಬಿ. ಐ."

* * * *

ಇದೇನೇ ಇಷ್ಟು ಹೊತ್ತಿನಲ್ಲಿ ಸ್ನಾನ ಮಾಡ್ತಿದ್ದಿ?" ಥಿಯೇಟರ್‌ನಿಂದ ಬರುತ್ತಿದ್ದಂತೆಯೇ ಬಾತ್‌ರೂಂನೊಳಗೆ ಸೇರಿಕೊಂಡು ಅರ್ಧಗಂಟೆಯಾದರೂ ಹೊರಬರದಿದ್ದ ಸುನಾದಮಾಲಳನ್ನು ಅವಳ ಅಜ್ಜಿ ಕೇಳಿದರು.ತಣ್ಣೀರು ಮೈ ಮೇಲೆ ಬೀಳುತ್ತಿದ್ದರೂ ಉರಿ ಕಡಿಮೆ ಆಗಲಿಲ್ಲ ಸುನಾದಮಾಲಳಿಗೆ.

"ವಿಹಾರಿ ನಾನು ಪಂದ್ಯ ಕಟ್ಟಿಕೊಂಡಿದ್ದೆವು. ಮಂತ್ರಿಯ ವೇಷದಲ್ಲಿ ನಿಮ್ಮನ್ನು ಫೂಲ್ ಮಾಡುತ್ತೇನೆಂದಿದ್ದ" ಹೋಗುತ್ತಿದ್ದಾಗ ಪದ್ಮಾಕರ್ ಹೇಳಿದ ಮಾತುಗಳು...ವಿಹಾರಿ ಮೇಲೆ ಮಲಗಿಕೊಂಡಿದ್ದಕ್ಕಿಂತಲೂ ಈ ಮಾತುಗಳು ಹೆಚ್ಚು ಅವಮಾನಕರವಾಗಿದ್ದವು. ತಾನು ಅಷ್ಟು ಕೀಳಾಗಿ ಬಿಟ್ಟೇನೇ ಅವನಿಗೆ?

ಸುನಾದ ಮಾಲಳ ಅಕ್ಕನನ್ನು ಪಕ್ಕದ ಮನೆಯ ಸ್ಟೂಡೆಂಟ್ ಒಬ್ಬನು ಮೋಸಮಾಡಿ ಓಡಿಬಿಟ್ಟ. 'ವಿಷ್ಣು'ವನ್ನು ಹೆತ್ತು ಅವಳು ಆತ್ಮಹತ್ಯೆ ಮಾಡಿಕೊಂಡಳು. ತಂದೆಗೆ ಕುದುರೆ ಪಂದ್ಯಗಳ ಹುಚ್ಚು. ಮನೆಯಲ್ಲಿದ್ದ ವಸ್ತುಗಳನ್ನೇ ಅಡವಿಟ್ಟು ಹಣ ತೆಗೆದುಕೊಂಡ, ತಾಯಿಗೂ, ತಂದೆಗೂ ತುಂಬಾ ಜಗಳವಾಗಿ ತಾಯಿ ಮರಣ ಹೊಂದಿದಳು. ಪೋಲಿಸರು ಅವನನ್ನು ಹಿಡಿದುಕೊಂಡು ಹೋಗಿ ಜೈಲಿಗೆ ತಳ್ಳಿದರು. ಬಿಡುಗಡೆಯಾದ ನಂತರವೂ ಮನೆಗೆ ಬರದೆ ಎಲ್ಲೆಲ್ಲೋ ಸುತ್ತಾಡುತ್ತಿದ್ದ. ಹಾಗಾಗಿ ಮನೆಯಲ್ಲಿ ಸುನಾದಮಾಲ, ಅಜ್ಜಿ, ವಿಷ್ಣು ಉಳಿದರು.

ಈ ಘಟನೆಗಳು ಸುನಾದಮಾಲಳ ಮೇಲೆ ತುಂಬಾ ಪ್ರಭಾವ ಬೀರಿತು. ಭಯ...ಬೆದರುವುದು...ಅಂಜಿಕೆ ತುಂಬಾ ಆಯಿತು. ಇವೆಲ್ಲಾ ಮೇಲೆ ಕಾಣಿಸುವಂತಹವು. ಅಂತರ್ಗತವಾಗಿ ಅವಳ ಹೃದಯದ ತುಂಬಾ ತೀವ್ರ ಪ್ರೀತಿ ಭಾವ ಇದೆ. ಹೃದಯದಲ್ಲಿ ಅಡಗಿರುವ ಪ್ರೀತಿ ಅಪೂರ್ವವಾದ ಆಭರಣ. ಅದನ್ನು ಬೇಗ ಯಾರಿಗೂ ಕೊಡಬಾರದು. ಕೊಟ್ಟರೆ ಮಾತ್ರ ಕಾಯಾ, ವಾಚಾ, ಮನಸಾ ಕೊಡಬೇಕು. ಇಂತಹ ಭಾವನೆಗಳು ಸುನಾದಮಾಲಳಲ್ಲಿ ಬೆಳದಿತ್ತು. ಅವರ ಅಜ್ಜಿಯೇ ಹೇಳುತ್ತಿದ್ದರು "ಇನ್ನೂ ಈ ಹಳೇ ಕಾಲದ ಬಾಡಿಗಳೇನೇ ತಾಯಿ... ಬ್ರಾ ಹಾಕಿಕೋಬಾರದೇ?—ಅದರಲ್ಲಿ ನ್ಯೂಲುಕ್ ಇರುತೆ" ಎಂದು ಸಲಹೆ ನೀಡುತ್ತಿದ್ದರು. ಆಕೆ ಓದಿದ್ದು ಎಂಟನೆಯ ಕ್ಲಾಸಾದರೂ ಹಳೇ ಕಾಲದ ಓದು.

ಅದಕ್ಕಿಂತಲೂ ಕಾಲಸ್ಥಿತಿಯನ್ನು ಚೆನ್ನಾಗಿ ಅರ್ಥಮಾಡಿಕೊಳ್ಳುವ ಹೆಂಗಸು. ಆಕೆಗಿಂತಲೂ ನಲವತ್ತು ವರ್ಷ ಚಿಕ್ಕವಳಾದ ಸುನಾದಮಾಲ ಆಕೆಗೆ ಸಂಪೂರ್ಣ ವಿರುದ್ಧ. ಏನಾದರೂ ಕನಸು ಬಿದ್ದರೂ ಸಾಕು ವೇಳಿಗ್ಗೆ ಎದ್ದೊಡನೆಯೇ ತುಳಸೀ ಕಟ್ಟೆಯನ್ನು ಸುತ್ತುಹಾಕುತ್ತಿದ್ದಳು.

ಸ್ನಾನ ಮಾಡುತ್ತಿದ್ದಷ್ಟು ಹೊತ್ತೂ ನಡೆದ ಘಟನೆಯ ನೆನಪೇ ಬರುತ್ತಿತ್ತು. ಕಣ್ಣಿಂದ ನೀರು ಧಾರಾಕಾರವಾಗಿ ಸುರಿಯುತ್ತಿತ್ತು. ತುಂಬಾ ಹೊತ್ತು ಅತ್ತು, ನಂತರ ಸ್ನಾನ ಪೂರ್ತಿಮಾಡಿ ಹೊರಬಂದಳು.

ಸುನಾದಮಾಲಳದು ತುಂಬಾ ಸಂಕೀರ್ಣ ಮನೋಭಾವ. ಇಲ್ಲದಿದ್ದರೆ ಡೈರಿಯಲ್ಲಿ ಅಂದು ಆ ಎರಡು ವಾಕ್ಯಗಳನ್ನು ಯಾವ ಸಂದರ್ಭವೂ ಇಲ್ಲದೆ ಬರೆದುಕೊಳ್ಳುತ್ತಿರಲಿಲ್ಲ.

''I should like him not only for what he is..but also what I am in his presence who is he?''

* * * *

ಅಗಸ್ಟ್ 13, ಕ್ವಿಜಾನ್‌ಸಿಟಿ, ಫಿಲಿಪ್ಪೈನ್ಸ್.

"ತಿಯರ್‍ರಾ ಅದೋರಾವ, ನಾಜಾದೇವ್ ಸೋಲ್ ದ ಓರಿಯಂಟೆ..." ಮಕ್ಕಳು ರಾಷ್ಟ್ರಗೀತೆ ಹಾಡುತ್ತಿದ್ದಾರೆ. ತ್ರಿಭುಜ, ಮಧ್ಯದಲ್ಲಿ ಎಂಟು ಕಿರಣಗಳ ಸೂರ್ಯನಿರುವ ರಾಷ್ಟ್ರೀಯ ಬಾವುಟ ರಪರಪ ಆಡುತ್ತಿದೆ. ಐದುಕೋಟಿ ಜನ ಸಂಖ್ಯೆಯ ಈ ದೇಶ ಸುಮಾರು ಏಳುಸಾವಿರ ದ್ವೀಪಗಳನ್ನು ಹೊಂದಿ. ಒಂದೆಡೆ ಚೀನಾ ಸಮುದ್ರ ಮತ್ತೊಂದೆಡೆಗೆ ಪೆಸಿಫಿಕ್...ಒಂದು ಕಾಲಕ್ಕೆ ಈ ದ್ವೀಪಗಳೆಲ್ಲಾ ಅಗ್ನಿ ಪರ್ವತಗಳು. ಅವು ತಣ್ಣಗಾದರೂ ಅಲ್ಲಿಯ ಅಗ್ನಿ ತಣ್ಣಗಾಗಿರಲಿಲ್ಲ. ದಂಗೆ–ಕ್ರಾಂತಿ ಪ್ರಜಾಸ್ವಾಮ್ಯ ತಿರುಗು ಬೀಳುವುದು–ಮಿಲಿಟರಿ ಅಧಿಕಾರ...ಚಕ್ರ ತಿರುಗುತ್ತಲೇ ಇದೆ.

ಕ್ರಿಸ್ತಶಕ 1500 ನಿಂದ ನಾನ್ನೂರು ವರ್ಷಗಳ ಕಾಲ ಸ್ಪೈಯಿನ್‌ನ ಅಧೀನದಲ್ಲಿ, ನಂತರ ಅರವತ್ತು ವರ್ಷಗಳ ಕಾಲ ಅಮೆರಿಕದ ಆಡಳಿತದಲ್ಲಿ ಎರಡನೇ ಪ್ರಪಂಚ ಯುದ್ಧದಲ್ಲಿ ಜಪಾನಿನ ವಶದಲ್ಲಿದ್ದು, ಇಷ್ಟು ವರ್ಷಗಳ ನಂತರ ಸ್ವಚ್ಛಂದ ಗಾಳಿಯನ್ನು ಉಸಿರಾಡುತ್ತಿರುವ ದ್ವೀಪ...ಆದರೂ ಅಗ್ನಿಪರ್ವತದಂತೆ ಮೇಲೆ ಸಾಮಾನ್ಯವಾಗಿ ಕಾಣುತ್ತಿದ್ದರೂ ಒಳಗೇ ಕುದಿಯುತ್ತಿತ್ತು.

ಈ ದೇಶ 1975ರಲ್ಲಿ ಚೈನಾದೊಡನೆ ಸಂಬಂಧವೇರ್ಪಡಿಸಿಕೊಂಡಿದ್ದ

ರಿಂದ ಅಮೆರಿಕಕ್ಕೆ ಸ್ವಲ್ಪ ದೂರವಾಯಿತು. ಆದರೂ ಈ ದೇಶದ ರಕ್ಷಣೆಯ ಭಾರವನ್ನೆಲ್ಲಾ ಅಮೆರಿಕಾನೇ ವಹಿಸುತ್ತಿದೆ. ಚೈನಾ ಪಕ್ಕದಲ್ಲಿರುವ ಈ ದ್ವೀಪದ ಮೇಲೆ ಅಮೆರಿಕಾದ ಆಧಿಪತ್ಯವನ್ನು ಮತ್ತೊಂದು ಪ್ರಬಲ ದೇಶ ಇಷ್ಟಪಡುತ್ತಿಲ್ಲ.

ಪ್ರಧಾನಿ ಸೈನಿಕರ ವಂದನೆ ಸ್ವೀಕರಿಸುತ್ತಿದ್ದ. ಸೈನ್ಯಾಧ್ಯಕ್ಷ ರಾಮೋನ್ ಹರ್ಸಾಸೆ ಪ್ರಧಾನಿಯ ಕಡೆಗೆ ನೋಡಿದ.

ಅಂದುಕೊಂಡಿರುವಂತೆ ನಡೆದರೆ ಇನ್ನಾರು ತಿಂಗಳಲ್ಲಿ ಆ ಸ್ಥಾನದಲ್ಲಿ ತಾನಿರುತ್ತಾನೆ, ಸೈನಿಕರ ವಂದನೆ ಸ್ವೀಕರಿಸುತ್ತಾ. ಆದರೆ ಅದು ಅಷ್ಟು ಸುಲಭವಲ್ಲ.

ಪ್ರಸ್ತುತ ಸರ್ಕಾರವನ್ನು ಉರುಳಿಸಲು ಆಗುವ ಖರ್ಚನ್ನು ಆ ಅಗ್ರದೇಶ ಸ್ವಿಸ್ ಬ್ಯಾಂಕಿನಲ್ಲಿ ಹಾಕಲು ಸಿದ್ಧವಾಗಿಯೇ ಹೊರತು ಆಯುಧಗಳನ್ನು ಕೊಡಲು ಒಪ್ಪುತ್ತಿಲ್ಲ. ನಾಳೆ ವಿಷಯ ಹೊರಬಿದ್ದರೆ ಉಳಿದ ದೇಶಗಳು ವಿರೋಧಿಸುತ್ತವೇನೋ ಎಂಬ ಭಯ ಅದಕ್ಕೆ.

ಒಮ್ಮೆಗೆ ತಿರುಗಿಬೀಳಲು ರಾಮೋನ್‌ಹರ್ಸಾಸೇಗೆ ಇಷ್ಟವಿಲ್ಲ. ಪ್ರಸ್ತುತ ಪ್ರಧಾನಿಗೆ ದೇಶಾದ್ಯಂತ ಉತ್ತಮ ಸಪೋರ್ಟ್ ಇದೆ. ಅದನ್ನು ಕಡಿಮೆಗೊಳಿಸಬೇಕೆಂದರೆ ಮೊದಲು ಡಿಸ್ಟರ್ಬ್ ಮಾಡಬೇಕು. ಗೆರಿಲ್ಲಾ ಪದ್ಧತಿಯಂತೆ ಕಮಾಂಡೋಗಳನ್ನು ತಯಾರು ಮಾಡಬೇಕು.

ಅವರಿಗೆ ಆಯುಧಗಳು ಬೇಕು.

ಆದರೆ ಇವೆಲ್ಲಾ ಒಳಗೊಳಗೇ ನಡೆಯಬೇಕು!

ಎಷ್ಟೋ ರಹಸ್ಯವಾಗಿ ತುಂಬಾ ಜನರೊಡನೆ ವ್ಯವಹರಿಸಿದ ನಂತರ ಅವನಿಗೆ ಈ ಆಯುಧಗಳನ್ನು ಸಪ್ಲೈ ಮಾಡುವ ಸಂಸ್ಥೆ ಸಿಕ್ಕಿತು. ಆದರ ಪ್ರತಿನಿಧಿಗೂ ಅವನಿಗೂ ನಡುವೆ ಒಪ್ಪಂದ ಕುದುರಿತು. ಅವನು ತೋರಿಸಿದ ಸ್ಯಾಂಪಲನ್ನು ಕಂಡು ಆಶ್ಚರ್ಯಪಟ್ಟ ರಾಮೋನ್‌ಹರ್ಸಾಸೆ! ಆಯುಧಗಳನ್ನು ತಯಾರಿಸುವುದರಲ್ಲಿ ಪ್ರಪಂಚದಲ್ಲೇ ಸ್ವೀಡನ್‌ದು ಅಗ್ರಸ್ಥಾನ. ಈ ಆಯುಧಗಳ ಕ್ವಾಲಿಟಿ ಅದಕ್ಕಿಂತಲೂ ಉತ್ತಮವಾಗಿದೆ.

"ನಾನು ನಿಮ್ಮ ಕಂಪನಿಯ ಯಜಮಾನರನ್ನು ಸ್ವತಃ ಬೇಟಿಯಾಗಬೇಕು." ನಂಬಿಕೆ ಬೆಳೆದ ನಂತರ ಹೇಳಿದ ಹರ್ಸಾಸೆ,

"ಷ್ಯೂರ್..." ಎನ್ನುತ್ತಾ ಭಾರತ ದೇಶದ ಪೂರ್ವದಲ್ಲಿ ಬಂಗಾಳ ಕೊಲ್ಲಿಯ ಒಂದು ಸಣ್ಣ ದ್ವೀಪವನ್ನು ಮ್ಯಾಪಿನಲ್ಲಿ ತೋರಿಸಿ, "ಬನ್ನಿ ನಿಮಗಾಗಿ ಎದುರು ನೋಡುತ್ತಿರುತ್ತೇವೆ ಎಂದ.

"ಈ ದ್ವೀಪ ಭಾರತದ ಟೂರಿಸ್ಟ್‌ಗಳಿಗೆ ಪ್ರಸಿದ್ಧವಾದ ಪ್ರಿನ್ಸ್ ಹೋಟೆ

ಲಿನ ಯಜಮಾನನದಲ್ಲವೆ?"

"ಹೌದು. ಮೇಲ್ನೋಟಕ್ಕೆ ಕಾಣುವುದು ಅದೇ" ಪ್ರತಿನಿಧಿ ನಕ್ಕು ಹೇಳಿದ. ಆದರೆ ಈ ದ್ವೀಪಕ್ಕೆ ಟೂರಿಸ್ಟ್‌ಗಳು ಬರುವುದಿಲ್ಲ.

"ಮತ್ತೆ ಯಾರು ಬರುತ್ತಾರೆ?"

"ಅನಂತಾನಂತ ಸ್ವಾಮಿಯೇ ಯಜಮಾನ. ಅವನೇ ಬರುತ್ತಾನೆ."

* * * *

ಡೆಪ್ಯುಟಿ ಕಮಿಷನರ್ ಪ್ರವಲ್ಲಿಕ ಹೇಳಿದಂತೆ ಅನಂತಾನಂತ ಸ್ವಾಮಿಯ ಶಸ್ತ್ರಗಳು ತುಂಬಾ ತೀವ್ರವಾದದ್ದು.

ಭಕ್ತಿ ಅವನ ಆಯುಧ!

ಮತ ಅವನ ವೆಪನ್!!

ಅವನಿಗೆ ಶಸ್ತ್ರಾಗಾರವಿದ್ದ ಮಾತು ನಿಜವೇ! ಒಂದು ದೇಶಕ್ಕೆ, ಆ ದೇಶದ ಟೆರ್ರರಿಸ್ಟ್‌ಗಳಿಗೆ ಕೂಡಾ ಅವನು ಶಸ್ತ್ರಗಳನ್ನು ಮಾರುವ ಮಾತು ಕೂಡಾ ನಿಜವೇ, ಕೇವಲ ಹಣಕ್ಕಾಗಿಯೇ ಅವನಿವನ್ನೆಲ್ಲಾ ಮಾಡುತ್ತಿದ್ದಾನೆಂಬುದು ಕೇವಲ ಅಜ್ಞಾನದ ಮಾತು. ಅವನು ಬಂಗಾರದ ತಟ್ಟೆಯಲ್ಲಿ ಉಂಡು, ಬಂಗಾರದ ಮಂಚದಲ್ಲಿ ಮಲಗಲು ಸಾಧ್ಯವಾಗುವಷ್ಟು ಐಶ್ವರ್ಯವನ್ನು ಅವನ ಭಕ್ತಾದಿಗಳೇ ಒಟ್ಟುಗೂಡಿಸಬಲ್ಲರು. ಪ್ರವಲ್ಲಿಕ ಹೇಳಿದಂತೆ ಕೇವಲ 'ರಾಜಕೀಯ ವ್ಯಾಪಾರ'ದಲ್ಲಿಯೇ ಅವನು ಬೇಕಾದರೆ ಕೋಟ್ಯಂತರ ಸಂಪಾದಿಸಬಲ್ಲ.

ಅನಂತಾನಂತ ಸ್ವಾಮಿಯ ಆಶಯವೇ ಬೇರೆ.

ಇನ್ನೈದು ವರ್ಷಗಳಲ್ಲಿ ಭಾರತದ ಅಧಿಪತಿಯಾಗಬೇಕೆಂಬುದೇ ಅವನ ಆಸೆ. ಅದಕ್ಕಾಗಿ ಇಪ್ಪತ್ತು ವರ್ಷಗಳ ಹಿಂದೆಯೇ ಯೋಜನೆ ಸಿದ್ಧಪಡಿಸಿ, ಹಂತ ಹಂತವಾಗಿ ಅದರಂತೆ ನಡೆಸಿಕೊಂಡು ಬರುತ್ತಿದ್ದ. ಚಾಪೆಯ ಕೆಳಗಡೆ ಹರಿಯುವ ನೀರಿನಂತೆ ಎಚ್ಚರಿಕೆಯಿಂದ ಮುನ್ನುಗ್ಗುತ್ತಿದ್ದ. ಪ್ರಜೆಗಳ ಬಗ್ಗೆ, ಅವರ ಬಲಹೀನತೆಗಳ ಬಗ್ಗೆ ಅವನಿಗೆ ಚೆನ್ನಾಗಿ ಗೊತ್ತು. ಮನುಷ್ಯ ದೇವರನ್ನು ಹೆಚ್ಚಾಗಿ ಯಾವಾಗ ನಂಬುತ್ತಾನೆ? ಸುಸ್ಥಿರತೆಯ ಭಾವನೆ ಹೋದಾಗ...! ಅದಕ್ಕೆ ಅವನು ದೇಶದ ಟೆರ್ರರಿಸ್ಟ್‌ಗಳಿಗೆ ಶಸ್ತ್ರಗಳನ್ನು ಮಾರುತ್ತಾನೆ. ಗಲಭೆಗಳು ನಡೆದರೆ ಪ್ರಜೆಗಳಿಗೆ ಸರ್ಕಾರದ ಬಗ್ಗೆ ನಂಬಿಕೆ ಹೋಗುತ್ತದೆ. ಮತ್ತೊಂದು ಕಡೆಯಿಂದ ಪ್ರಜೆಗಳಲ್ಲಿ 'ಮತ'ವನ್ನು ಇಂಜಕ್ಟ್ ಮಾಡುತ್ತಾನೆ. ಹಿಂದುಗಳು ಸಹನಶೀಲರು. ಅವರ ಸಹನೆಯನ್ನು ಹೋಗಿಸಬೇಕು.

ಸೋಷಿಯಲಿಗಿಂತಲೂ ಮತವೇ ತಮಗೆ ಹೆಚ್ಚು ಭದ್ರತೆಯನ್ನು ಉಂಟುಮಾಡುತ್ತದೆಂಬ ಭಾವನೆ ಅದರಲ್ಲಿ ಏರ್ಪಡುತ್ತದೆ. ಸೆಕ್ಯೂಲರಿಜಂನಿಂದ ಲಾಭವಿಲ್ಲವೆಂದು ಅವರಿಗೆ ನಂಬಿಕೆ ಉಂಟಾಗುತ್ತದೆ. ಉದ್ರೇಕಗಳಿಗೆ ಮಿತಿಯಿರುವುದಿಲ್ಲ. ಸರ್ಕಾರ ಬಿದ್ದು ಹೋಗುತ್ತದೆ. ತಮ್ಮನ್ನು ರಕ್ಷಿಸಬಲ್ಲ ಭಗವತ್ ಸ್ವರೂಪನಾದ ಒಬ್ಬ ಮಹನೀಯ ವ್ಯಕ್ತಿಗಾಗಿ ಪ್ರಜೆಗಳು ಆಕಾಶದ ಕಡೆ ನೋಡುತ್ತಾರೆ. ಆ ವ್ಯಕ್ತಿ ತಾನಾಗದೆ ಮತ್ಯಾರು? ಭಾರತದ ಮೂವರು ಸೈನ್ಯಾಧಿಕಾರಿಗಳೂ ನಿಶ್ಚಿತವಾಗಿಯೂ ತನ್ನ ಕಾಲ ಬಳಿ ನುಗ್ಗಿ, ತನ್ನನ್ನು ಸಿಂಹಾಸನದ ಬಳಿಗೆ ಕರೆದೊಯ್ಯುತ್ತಾರೆ. ಇರಾನಿಗೆ ಖೊಮೇನಿ ಹೇಗೋ, ಭಾರತಕ್ಕೆ ತಾನು ಹಾಗಾಗುತ್ತಾನೆ.

ಎಂತಹ ಪ್ರಚಂಡ ಯೋಜನೆ!!

ಹಿಟ್ಲರ್, ನೆಪೋಲಿಯನ್, ಅಲೆಗ್ಸಾಂಡರ್, ಛಂಗೀಖಾನ್ ಯಾರಿಗೂ ಇಂತಹ ವ್ಯೂಹವನ್ನು ರಚಿಸುವ ಬುದ್ಧಿಯಿರಲಿಲ್ಲವೇನೋ, ಅದನ್ನು ಆಚರಣೆಗೆ ತರಲು ಇಷ್ಟು ಕಾಲ ತಾಳ್ಮೆಯಿಂದ ಕಾದಿರಲಾರರು. ಇವನು ಅದನ್ನು ಸಾಧಿಸಿದ. ಎಲ್ಲಿ ಹೋದರೂ ಲಕ್ಷಾಂತರ ಜನರು ಅವನ ದರ್ಶನಕ್ಕಾಗಿ ನುಗ್ಗಾಡುತ್ತಿದ್ದರು. ಮೊದಲನೇ ಹಂತ ಪೂರ್ತಿಯಾಯಿತು. ಎರಡನೇ ಹಂತ ಉಳಿದಿದೆ. ಅದೇ ಕೊನೆಯದು–ದೇಶದಲ್ಲಿ ಅಲ್ಲೋಲ ಕಲ್ಲೋಲ ಸೃಷ್ಟಿಸುವುದು. ಅಡೆತಡೆಯಿಲ್ಲದೆ ಸಾಗುತ್ತಿದ್ದ ವಾಹನಕ್ಕೆ ಒಮ್ಮೆಗೇ ಸ್ಪೀಡ್‌ಬ್ರೇಕರ್ ಅಡ್ಡ ಬಂದಂತೆ ಸೆಂಟ್ರಲ್ ಬ್ಯೂರೋ ಆಫ್ ಇನ್‌ವೆಸ್ಟಿಗೇಷನ್ ರಿಪೋರ್ಟ್ ಅಡ್ಡಿ ಬಂದಿದೆ. ಅದು ತುಂಬಾ ಸಣ್ಣ ಸ್ಪೀಡ್ ಬ್ರೇಕರ್!

ರಾಮೋನ್ ಹರ್ಸಾಸೇಗೂ ಅನಂತಾಂನಂತ ಸ್ವಾಮಿಗೂ ನಡುವೆ ಮಾತು ಕತೆ ಗೋಲ್ಡನ್ ದ್ವೀಪದಲ್ಲಿ ನಡೆಯಿತು. ಆ ದ್ವೀಪವನ್ನು ಕಂಡ ಅತಿಥಿ ಆಶ್ಚರ್ಯಗೊಂಡ. ತುಂಬಾ ರಹಸ್ಯವಾಗಿ ನಡೆಯುತ್ತಿದೆ ಈ ಸಮಾವೇಶ ಎಂದುಕೊಂಡಿದ್ದ ಆದರೆ ಅಂತಹದ್ದೇನೂ ಇರಲಿಲ್ಲ. ಸಂಪೂರ್ಣ ಗೌರವ ರಕ್ಷೆಯೊಂದಿಗೆ ಅವನಿಗೆ ಸ್ವಾಗತ ಸಿಕ್ಕಿತ್ತು.

"ವೆಲ್‌ಕಂ ಟು ಗೋಲ್ಡನ್ ಐಲೆಂಡ್" ಎಂದು ಸ್ವಾಮಿ ಸ್ವಾಗತಿಸಿದ. ಎರಡು ಗಂಟೆಗಳ ಕಾಲ ಆಯುಧಗಳ ಪರೀಕ್ಷೆ ನಡೆಯಿತು. ರಾಮೋನ್ ಸಂತೃಪ್ತಿಗೊಂಡ. ಎರಡು ಮಿಲಿಯನ್ ಡಾಲರ್‌ಗಳಿಗೆ ವ್ಯಾಪಾರ ಕುದುರಿತು. ಸ್ವಾಮಿಯ ಆತಿಥ್ಯ ಸ್ವೀಕರಿಸುತ್ತಾ ರಿಲ್ಯಾಕ್ಸ್ ಆಗುತ್ತಿದ್ದ ಸಮಯದಲ್ಲಿ ತನನ್ನು ತುಂಬಾ ದಿನಗಳಿಂದ ಕಾಡುತ್ತಿದ್ದ ಪ್ರಶ್ನೆಯೊಂದನ್ನು ಕೇಳಿದ ರಾಮೋನ್ ಹರ್ಸಾಸೆ, "ನಮ್ಮ ದೇಶದಲ್ಲಿ ಸರ್ಕಾರವನ್ನು ಪದಚ್ಯುತಗೊಳಿಸಲು ಅಧಿಕಾರದಲ್ಲಿರುವವ

ರನ್ನು ಕೊಲ್ಲುವುದೊಂದೇ ಮಾರ್ಗವೆಂದು ತಿಳಿದಿದ್ದೇವೆ. ನೀವು ಬೇರೆ ರೀತಿಯಲ್ಲಿ ಅದನ್ನು ಹೇಗೆ ಸಾಧಿಸಬಲ್ಲಿರಿ ಸ್ವಾಮಿ?

ಸ್ವಾಮಿ ನಕ್ಕ, ''ಪ್ರಪಂಚದಲ್ಲೇ ಅತ್ಯಂತ ಸಂಪನ್ನವಾದ ದೇಶ ಯಾವುದು ರಾಮೋನ್ ಹರ್ಸಾಸೆ?"

"ನಿಶ್ಚಿತವಾಗಿಯೂ ಅಮೇರಿಕಾನೇ"

"ಇರಾನ್–ಇರಾಕ್ ಯುದ್ಧದಲ್ಲಿ ಅಮೇರಿಕ ಯಾರನ್ನು ಸಪೋರ್ಟ್ ಮಾಡುತ್ತಿದೆ?"

"ಇರಾಕ್‌ಗೆ..."

"ಮತ್ತೆ ಇರಾನಿಗೇಕೆ ರಹಸ್ಯವಾಗಿ ಶಸ್ತ್ರಗಳನ್ನು ಮಾರುತ್ತದೆ?"

ರಾಮೋನ್ ಕೂಡಲೇ ಉತ್ತರಿಸಲಾರದೆ ಹೋದ. ಸ್ವಾಮಿ ಹೇಳಿದ– "ಯುದ್ಧ ನಿಂತರೆ ಆಯುಧಗಳನ್ನು ಯಾರೂ ಕೊಳ್ಳುವುದಿಲ್ಲ. ಅದು ನಿಲ್ಲ ಕೂಡದು. ಅಮೇರಿಕಾದ ದೃಷ್ಟಿ ಅದೇ. ಇರಾನ್–ಇರಾಕ್ ಏಕೆ ಕಚ್ಚಾಡುತ್ತಿವೆ? ಇಸ್ರೇಲ್ ಏಕೆ ಹೋರಾಡುತ್ತಿದೆ?...ಮತ! ಮತ ನಮ್ಮನ್ನು ಲಾಜಿಕ್ ಆಗಿ ಯೋಚಿಸಲು ಬಿಡುವುದಿಲ್ಲ. ಪ್ರಪಂಚವಲ್ಲಿ ತಿಳುವಳಿಕೆಯಿರುವವರು, ಸಂಪತ್ತನ್ನು ಹೊಂದಿರುವವರು ಈ ಬಲಹೀನತೆಯನ್ನು ಆಧಾರ ಮಾಡಿಕೊಳುತ್ತಾರೆ. 1980 ಸೆಪ್ಟೆಂಬರ್‌ನಲ್ಲಿ ಈ ಯುದ್ಧ ಪ್ರಾರಂಭವಾಯಿತು. ವಿಶ್ವಸಂಸ್ಥೆಯ ಪ್ರಧಾನ ಕಾರ್ಯದರ್ಶಿ ಜೇವಿಯರ್ ಪ್ರೆಂಜ್ ಏನಾದರೂ ಅದ್ಭುತ ಮಾಡಿ ಇರಾನ್-ಇರಾಕ್‌ಗಳ ನಡುವಿನ ಯುದ್ಧವನ್ನು ನಿಲ್ಲಿಸದಿದ್ದರೆ ಈ ಯುದ್ಧ ಎಂಟನೇ ವರ್ಷವನ್ನು ಪ್ರವೇಶಿಸುತ್ತದೆ."

(ಕ್ರಿ. ಶ. 14ನೇ ಶತಮಾನದಲ್ಲಿ ಬ್ರಿಟನ್-ಫ್ರಾನ್ಸ್ ನಡುವೆ ನಡೆದ "ನೂರು ವರ್ಷಗಳ ಹೋಗಾಟ"ದ ನಂತರ ಗಲ್ಫ್ ಯುದ್ಧವೇ ಚರಿತ್ರೆಯಲ್ಲಿ ಅತಿ ದೀರ್ಘವಾದುದು.)

"ಎಷ್ಟೋ ನಾಗರೀಕತೆಯನ್ನು ಸಾಧಿಸಿದ್ದೇನೆಂದು ಹೇಳಿಕೊಳ್ಳುವ ಮಾನವ ಚರಿತ್ರೆಯಲ್ಲಿ ಇಷ್ಟು ದೀರ್ಘಕಾಲ ಯುದ್ಧ ನಡೆಯಿತೆಂದರೆ ಇದಕ್ಕೆ ಕಾರಣ ಮೂರ್ಖತ್ವವಲ್ಲದೆ ಮತ್ತೇನು? ನಾನೂ ಇದನ್ನೇ ಉಪಯೋಗಿಸಿಕೊಳ್ಳುತ್ತೇನೆ. ಮತವನ್ನೇ ಆಯುಧವನ್ನಾಗಿ ಮಾಡಿಕೊಂಡು ಭಾರತವನ್ನು ನನ್ನ ಕೈಗೆ ತೆಗೆದುಕೊಳ್ಳುತ್ತಿದ್ದೇನೆ. ನಾನೇ ಡಿಕ್ಟೇಟರ್! ನಾನೇ ಮತಾಧಿಪತಿ !! ನಾನೇ ದೇಶದ ಅಧಿನೇತ !!! ''ಅವನ ನಗುವಿಗೆ ಆ ದ್ವೀಪವೇ ಅಲುಗಾಡಿದಂತಾಯಿತು. ಎಷ್ಟೋ ದುಷ್ಟನಾದ ರಾಮೋನ್ ಹರ್ಸಾಸೇನೇ ಸ್ವಾಮಿಯ ನಗುವನ್ನು ಕಂಡು ಒಂದು ಕ್ಷಣ ಕಂಪಿಸಿದ. ದೇವರಿಗೆ ಕೃತಜ್ಞತೆ

ಯನ್ನು ಮನಸ್ಸಿನಲ್ಲೇ ಅರ್ಪಿಸಿದ–ಈ ಅನಂತಾನಂತಸ್ವಾಮಿ ಫಿಲಿಪ್ಪೈನ್ಸ್‌ನಲ್ಲಿ ಹುಟ್ಟಿದಿದ್ದುದಕ್ಕೆ. ಅವನ ಯೋಚನೆಗಳನ್ನು ಕಡಿಯುವಂತೆ ಸ್ವಾಮಿ ಕೇಳಿದ, "ನನ್ನೊಡನೆ ಹತ್ತು ದಿನಗಳ ಕಾಲ ಆಹ್ಲಾದಕರವಾದ ಪರ್ಯಟನೆಯನ್ನು ನಡೆಸಲು ಬರುತ್ತೀಯಾ ರಾಮೋನ್?"

"ಎಲ್ಲಿಗೆ?"

"ಭಾರತ ದೇಶಕ್ಕೆ. ನಿನಗೊಂದು ಅದ್ಭುತ ತೋರಿಸುತ್ತೇನೆ."

"ಏನು ಸ್ವಾಮಿ?"

"ನಾಲ್ಕು ಸ್ತಂಭಗಳ ಮೇಲೆ ನಿಂತ ಭವನ ನನ್ನದು. ಅದರಲ್ಲಿ ಒಂದು ಸ್ತಂಭ ನನಗೆ ಬಲಭುಜವಾದ ಒಬ್ಬ ರಾಜಕೀಯ ನಾಯಕ. ರಾಮನಿಗೆ ಚಂದಮಾಮನ ಮೇಲೆ ಆಶೆ ಹುಟ್ಟಿದಂತೆ ಆ ನಾಯಕನಿಗೊಂದು ಸಣ್ಣ ಆಶೆ ಉಂಟಾಗಿದೆ. ಒಂದು ರಾಜ್ಯದ ಮುಖ್ಯ ಮಂತ್ರಿಯಾಗಬೇಕೆಂದು.ಪಾಪ ನನ್ನೊಡನೆ ಇಷ್ಟು ದಿನ ಸಹಕರಿಸಿ ಕೆಲಸ ಮಾಡಿದ, ಅವನ ಕೋರಿಕೆಯನ್ನು ತೀರಿಸುವುದು ನನ್ನ ಧರ್ಮವಲ್ಲವೇ? ಇನ್ನು ಕೇವಲ ಹತ್ತು ದಿನಗಳಲ್ಲಿ ಅದನ್ನು ಸಾಧಿಸುತ್ತಿದ್ದೇನೆ. ಪಾಯ ಹಾಕಿದ್ದೇನೆ. ಕಟ್ಟಡ ಕಟ್ಟಬೇಕಷ್ಟೆ! ನೀವು ಬಂದರೆ ತೋರಿಸುತ್ತೇನೆ''

"ಹೇಗೆ ಸ್ವಾಮಿ?''

"ನನ್ನ ದೇಶದ ಪ್ರಜೆಗಳಿಗೆ ಭಾವಬಂಧನಗಳು ಹೆಚ್ಚು. ಅವರು ನೀತಿಪರರು. ದಯಾ ಹೃದಯಿಗಳು. ಅವರ ಈ ಗುಣಗಳನ್ನೇ ಉಪಯೋಗಿಸಿಕೊಳ್ಳುತ್ತಿದ್ದೇನೆ. ನೋಡುವಿರಂತೆ ನೀವೇ ಬನ್ನಿ? ಯಾವ ರಾಜ್ಯದಲ್ಲಿ ಇದುವರೆವಿಗೂ ವಿರೋಧಪಕ್ಷದವರಿಂದ ಕಿರುಕುಳವಿಲ್ಲದ ಮುಖ್ಯಮಂತ್ರಿ ಇದ್ದಾನೋ, ಯಾವ ರಾಜ್ಯದಲ್ಲಿ ಮುಖ್ಯಮಂತ್ರಿಯನ್ನು ತಮ್ಮ ಪ್ರಾಣಕ್ಕಿಂತಲೂ ಹೆಚ್ಚಾಗಿ ನೋಡಿಕೊಳ್ಳುವ ಪ್ರಜೆಗಳಿದ್ದಾರೋ, ಯಾವ ಮುಖ್ಯಮಂತ್ರಿ ತನ್ನ ಪ್ರಜೆಗಳನ್ನು ತನ್ನ ಪ್ರಾಣದಂತೆ ನೋಡಿಕೊಳ್ಳುತ್ತಾನೋ, ಅಂತಹ ಮುಖ್ಯಮಂತ್ರಿಯನ್ನು ಹತ್ತು ದಿನಗಳಲ್ಲಿ ಪದವಿಯಿಂದ ಇಳಿಸಿ, ನನ್ನ ಸಹಚರನ ಕೋರಿಕೆಯನ್ನು ಈಡೇರಿಸುತ್ತೇನೆ. ಬರ್ತೀರಾ?"

ರಾಮೋನ್ ಹಾರ್ಸಾಸೇಯ ಉತ್ಸಾಹ ಹೆಚ್ಚಾಯಿತು.

"ಬರ್ತಿನಿ ಸ್ವಾಮಿ!" ಅಂದ.

# 4

ಮೂರನೆ ದಿನ ಕಾರ್ಮಿಕ ಮಂತ್ರಿ ಸೂರ್ಯರಾವ್‌ನ ಮೇಲೆ ನಡೆದ ಕೊಲೆ ಪ್ರಯತ್ನವನ್ನು ಪತ್ರಿಕೆಗಳು ಪ್ರಮುಖವಾಗಿ ಪ್ರಕಟಿಸಿದವು. ಎಲ್ಲಾ ಪಾರ್ಟಿಗಳವರೂ ಇದನ್ನು ಖಂಡಿಸಿದರು. ನಿಕುಂಜ್ ವಿಹಾರಿಯ ಘಟನೆಗೆ ಯಾರೂ ಪ್ರಾಮುಖ್ಯತೆ ಕೊಟ್ಟಿರಲಿಲ್ಲ. ಮಂತ್ರಿಗಳು ಪ್ರಾಣಾಪಾಯದಿಂದ ತಪ್ಪಿಸಿಕೊಂಡದ್ದಕ್ಕೆ ಎಲ್ಲರೂ ಅವರನ್ನು ಅಭಿನಂದಿಸಿದ್ದರು. ಟೆರ್ರರಿಸ್ಟ್‌ಗಳ ಚಟುವಟಿಕೆಗಳು ಹೆಚ್ಚಾಗುತ್ತಿರುವುದಕ್ಕೆ ಆತಂಕ ವ್ಯಕ್ತಪಡಿಸುತ್ತಿದ್ದರು.

ಮಂತ್ರಿಗಳ ಮೇಲೆ ಕೊಲೆ ಪ್ರಯತ್ನ ನಡೆದದ್ದಕ್ಕೆ ನಗರಗಳಲ್ಲಿ ಒಂದ ದಿನದ ಬಂದ್ ಆಚರಿಸಲಾಯಿತು. ಆ ಸಂಜೆಯೇ ಮಂತ್ರಿಗಳು ಪ್ರಜೆಗಳನ್ನು ಉದ್ದೇಶಿಸಿ ಭಾಷಣ ಮಾಡಿದರು.

ಹಳೆಯ ಸೇಡಿನ ಕಾರಣ ಈ ಪ್ರಯತ್ನ ನಡೆಯಿತೆಂದು ಕೆಲವರು ವಾದಿಸಿದರೆ ಮಂತ್ರಿವರ್ಗದಲ್ಲಿ ಅಸ್ಥಿರತೆಯನ್ನುಂಟುಮಾಡಲು ನಡೆದ ಪ್ರಯತ್ನವೆಂದು ಮತ್ತೆ ಕೆಲವರು ವಾದಿಸಿದರು. ನಿಜ ಸಂಗತಿ ತಿಳಿದವನೆಂದರೆ ಸ್ವಾಮಿ ಮಾತ್ರ.

ಮಂತ್ರಿಯ ಪ್ರಾಣವನ್ನು ರಕ್ಷಿಸಿದ್ದಕ್ಕೆ ಆಫೀಸರುಗಳ ನಡುವೆಯೇ ಒಂದು ಸಂತೋಷಕೂಟ ನಡೆಯಿತು. ಅಲ್ಲಿಯ ಮುಖ್ಯ ಆಕರ್ಷಣೆ ಪ್ರವಲ್ಲಿಕ ಆಗಿದ್ದಳು. ಯಾವ ಪ್ರಾಣಹಾನಿಯೂ ನಡೆಯದಂತೆ ಒಬ್ಬ ಟೆರ್ರರಿಸ್ಟನ್ನು ಪ್ರಾಣಸಹಿತ ಹಿಡಿದದ್ದಕ್ಕಾಗಿ ಅವಳನ್ನು ಎಲ್ಲರೂ ಅಭಿನಂದಿಸಿದರು. ಮುಖ್ಯಮಂತ್ರಿಗಳು ಸ್ವತಃ ಸಭೆಗೆ ಹಾಜರಾಗಿ ಪ್ರವಲ್ಲಿಕ ರಾಜ್ಯ ಸರ್ಕಾರಕ್ಕೆ ಸಂಬಂಧಿಸಿದವಳಲ್ಲದಿದ್ದರೂ ಮನಃಸ್ಫೂರ್ತಿಯಾಗಿ ಹೊಗಳಿದರು.

"ಸಿಕ್ಕಿದವನು ಏನು ಹೇಳುತ್ತಿದ್ದಾನಮ್ಮಾ? ಈ ಕೊಲೆಯ ಪ್ರಯತ್ನ ಏಕೆ ಮಾಡಿದನಂತೆ?"

"ಬಾಯಿಬಿಡ್ತಿಲ್ಲ ಸಾರ್. ಆದರೂ ಎರಡು ದಿನಗಳಲ್ಲೇ ಅವನ ಹಿಂದೆ ಯಾರಿದ್ದಾರೆಂದು ಬಾಯಿ ಬಿಡಿಸುತ್ತೇವೆ," ಎದೆಯುಬ್ಬಿಸಿ ಹೇಳಿದಳು.

"ಮತ್ತೆ ಥರ್ಡ್ ಡಿಗ್ರಿ ಉಪಯೋಗಿಸಬೇಡಿ"—

ಅವಳು ಮಂತ್ರಿಯೆಡೆಗೇ ನೋಡಿದಳು. ತುಂಬಿದ ಸಭೆಯಲ್ಲಿ ಮಂತ್ರಿಯ ಪ್ರಾಣವನ್ನು ತೆಗೆಯಲು ಸಿದ್ಧನಾಗಿದ್ದ ನರರೂಪ ರಾಕ್ಷಸನ ಮೇಲೆ ಕೂಡಾ ಕಠಿಣ ಪದ್ಧತಿಗಳನ್ನು ಉಪಯೋಗಿಸಕೂಡದು ಎನ್ನುತ್ತಿರುವ ಮನುಷ್ಯ... ಸಭೆ ಮುಗಿಯುವ ವೇಳೆಗೆ ರಾತ್ರಿ ಒಂಬತ್ತಾಯಿತು. ಕಾರುಗಳು ಸಾಲಾಗಿ ನಿಂತಿದ್ದವು. ತನ್ನ ಕಾರಿನ ಬಳಿ ಬಂದು, ಬೀಗದ ಕೈಯಿಂದ ಡೋರನ್ನು ತೆಗೆದು, ಸ್ಟಾರ್ಟ್ ಮಾಡಿದಳು. ರಿವರ್ಸಿನಲ್ಲಿ ಹಿಂದೆ ಬಂದು, ಮುಂದಕ್ಕೆ ಡ್ರೈವ್ ಮಾಡಿದಳು.

ಆಗ ಕೇಳಿಸಿತು ಹಿಂದಿನಿಂದ–ನಿಧಾನವಾಗಿ, ಸ್ಥಿರವಾಗಿ-ಒಂದು ಕಂಠ "...ಕುಮಾರಿ ಕಾಳಿ ಕಾಪಾಲಿ, ಕಪಿಲೇ.. ಕೃಷ್ಣ ಪಿಂಗಳೇ ಚೆನ್ನಾಗಿದ್ದೀಯಾ ಬಾಲಿಕಾ ?"

ನಡೆಯುತ್ತಿರುವ ಕಾರಿನಲ್ಲಿ, ಕತ್ತಲಿನಲ್ಲಿ, ಅಷ್ಟು ಹತ್ತಿರದಿಂದ ಕಿವಿಯ ಪಕ್ಕದಲ್ಲೇ ಕೇಳಿಸಿದ ಆ ಸ್ವರಕ್ಕೆ ಪ್ರವಲ್ಲಿಕ ಬೆಚ್ಚಿಬಿದ್ದು ತಿರುಗಿ ನೋಡಿದಳು.

ಹಿಂದಿನ ಸೀಟಿನಲ್ಲಿ ಅನಂತಾನಂತಸ್ವಾಮಿ ಕುಳಿತಿದ್ದಾನೆ. ಅವಳು ಒಮ್ಮೆಗೇ ಹಾಕಿದ ಬ್ರೇಕಿಗೆ ಕಾರು ಕಿರ್ರೆಂದು ನಿಂತಿತು. ಅವನು ನಿಧಾನವಾಗಿ ಬಂದು ಮುಂದಿನ ಸೀಟಿನಲ್ಲಿ ಕುಳಿತುಕೊಳ್ಳುವವರೆಗೂ ಅವಳು ಈ ಲೋಕದೊಳಗೆ ಬರಲಾರದೆ ಹೋದಳು.

"ನಾಲ್ಕೂ ಬಾಗಿಲುಗಳಿಗೆ ಲಾಕ್ ಹಾಕಿದ್ದರೂ ಕಾರಿನೊಳಗೆ ಈ ವ್ಯಕ್ತಿ ಹೇಗೆ ಬಂದರು ಎಂದು ಆಶ್ಚರ್ಯಪಡುತ್ತಿದ್ದೀಯಾ ತಾಯಿ !"

"ನಿನ್ನ ಬಗ್ಗೆ ಕನಸಿನಲ್ಲಿ ಕೂಡಾ ನಾನು ಬಹುವಚನದಿಂದ ಯೋಚಿಸುವುದಿಲ್ಲ" ಸಿಟ್ಟಿನಿಂದ ಹೇಳಿದಳು.

ಸ್ವಾಮಿ ನಕ್ಕ. "ಹಾಗಾದರೆ ನಾವು ಮುಖಾಮುಖಿಯಾಗಿಯೇ ಮಾತನಾಡಿಕೊಳ್ಳಬಹುದು" ಎಂದು ನಿಲ್ಲಿಸಿ, ಮತ್ತೆ ಹೇಳಿದ—"...ಇದು ಸರ್ಕಾರಿ ಕಾರು. ಇದನ್ನು ತೆಗೆಯಲು ನಾನೇನೂ ಕಳ್ಳ ಬೀಗದ ಕೈಗಳನ್ನು ಉಪಯೋಗಿಸಲಿಲ್ಲ. ಈ ಕಾರು ನಿನಗೆ ಅಲಾಟ್ ಆದಾಗ ಇದಕ್ಕೆ ಸಂಬಂಧಿಸಿದ ಎಲ್ಲಾ ಬೀಗದ ಕೈಗಳ ಡೂಪ್ಲಿಕೇಟುಗಳನ್ನೂ ನಿಮ್ಮ ಸ್ಟೋರ್ಸ್‌ನಲ್ಲಿಡುತ್ತಾರೆ, ಅವನ್ನು ನಿಮ್ಮವರಿಂದಲೇ ತರಿಸಿ...ಈಗ ಇದರಲ್ಲಿ ಬಂದು ಕುಳಿತಿದ್ದೇನೆ. ಈಗ ಹೇಳು. ನನ್ನ ಸಾಮರ್ಥ್ಯ ಸಾಮಾನ್ಯವಾದುದೇ ?"

ಅವಳು ಅಪ್ರತಿಭಳಾಗಿ, ಅಪ್ರಯತ್ನಳಾಗಿ "ಅಲ್ಲ..." ಅಂದಳು.

"ಒಪ್ಪಿಕೊಂಡಿ ತಾನೇ ? ನಾನು ಹೇಳುತ್ತಿರುವುದು ಏನೆಂದರೆ...ಇನ್ನೂ ಚಿಕ್ಕವಳು, ಅನವಶ್ಯಕವಾಗಿ ಈ ವಿಷಯಗಳನ್ನು ಹಗುರವಾಗಿ ತೆಗೆದುಕೊಳ್ಳಬೇಡ ನನ್ನ ಮಗಳಂತೆ ಕಾಣುತ್ತಿ. ಅಫ್‌ಕೋರ್ಸ್ ನಾನು ಮದುವೆ ಆಗಲಿಲ್ಲವೆಂದುಕೋ. ಆದರೂ ಗುಬ್ಬಿಯ ಮೇಲೆ ಬ್ರಹ್ಮಾಸ್ತ್ರ ಏಕೆಂದು ! ನೀನೇನು ? ಐ. ಪಿ. ಎಸ್ಸಾ ? ಡೈರೆಕ್ಟ್ ರಿಕ್ರೂಟಾ ?"

ಅವಳು ಉತ್ತರಿಸಲಿಲ್ಲ.

"ಯಸ್ಸಾಂತಃಕರಣಂ, ನಿತ್ಯಂ ಗೀತಾಯಾಂ ರಮತೇ...ಏಸೂ ಮೊನ್ನೆ, ಮೀಟಿಂಗ್‌ನಲ್ಲಿ ನನ್ನ ಬಗ್ಗೆ ಏನೇನೋ ಹೇಳಿದೆಯಂತೆ..."

ಅವಳಿಗೆ ಸಿಂಕಿಂಗ್ ಫೀಲಿಂಗ್ ಉಂಟಾಯಿತು. ಸಿ. ಬಿ. ಐ, ಅಂದರೆ ಎಚ್ಚರಿಕೆಯ ಪ್ರತಿಷ್ಠೆಯ ಇಲಾಖೆ. ಅಂತಹುದರಲ್ಲಿಯೇ ಅರವತ್ತು ಗಂಟೆಯೊಳಗಾಗಿಯೇ ರಹಸ್ಯ ಬಯಲಾಗುತ್ತಿದೆಯೆಂದರೆ, ಮೈಗಾಡ್ ಈ ದೇಶವನ್ನು ಅದಾರು ಸರಿಪಡಿಸಬಲ್ಲರೋ?

ಅವಳು ಒಂದು ನಿರ್ಣಯಕ್ಕೆ ಬಂದವಳಂತೆ– ಕಾರನ್ನು ನಡೆಸುತ್ತಲೇ "ಹೌದು ಹೇಳಿದ್ದೇನೆ. ನಿನ್ನೆ ರವೀಂದ್ರ ಕಲಾಕ್ಷೇತ್ರ ಘಟನೆಯ ಹಿಂದಿರುವುದು, ನೀನೇ ಎಂದು ನನಗೆ ಗೊತ್ತು. ನಿನ್ನ ಮನುಷ್ಯನೊಬ್ಬ ನಮ್ಮ ಲಾಕಪ್ಪಿನಲ್ಲಿ ಇದ್ದಾನೆ, ಈ ದಿನವಲ್ಲದಿದ್ದರೂ ನಾಳೆಯಾದರೂ ಅವನು ಬಾಯಿಬಿಡುತ್ತಾನೆ."

"ನಾನೀಗ ನಿನ್ನನ್ನು ಭೇಟಿಯಾದದ್ದು ಅದಕ್ಕೆ ತಾಯಿ! ಜಾತಸ್ಯಹಿ ಧೃವೋಮೃತ್ಯುಃ, ಯಾವ ದೃಷ್ಟಿಯಿಂದ ನೋಡಿದರೂ ಮೃತ್ಯು ದುಃಖಕರವಾಗಿರಬಾರದೆಂದು ಹೇಳುತ್ತಾರೆ. ಈ ಅನಂತಾನಂತ ಸ್ವಾಮಿಯ ಬಗ್ಗೆ ನಿನಗೇನೂ ತಿಳಿಯದು. ಕಾಶ್ಮೀರದಿಂದ, ಕನ್ಯಾಕುಮಾರಿಯ ವರೆಗೂ ಹಬ್ಬಿಕೊಂಡಿರುವ ಆಲದಮರ ಇದು, ಇದರ ನೆರಳಿನಲ್ಲಿ ಆಶ್ರಯ ಪಡೆಯುವುದು ನಿನಗೆ ಶ್ರೇಯಸ್ಕರ."

"ಇಲ್ಲದಿದ್ದರೆ ಏನು ಮಾಡುತ್ತಿ? ಪ್ರಾಣ ತೆಗೆಯುತ್ತಿ. ಅಷ್ಟೇ ತಾನೇ"

"ಅದು ಸಾಮಾನ್ಯರು ಮಾಡುವ ಕೆಲಸ. ನಾನು ಮಾಡದಿದ್ದ ಕೆಲಸ ಯಾವುದೂ ಇಲ್ಲ. ಉದಾಹರಣೆಗೆ ನೀನು ಐ. ಪಿ. ಎಸ್. ಅಂದುಕೋ, ನೀನು ಯಾವ ವರ್ಷ ಪರೀಕ್ಷೆಯಲ್ಲಿ ಪಾಸಾಗಿದ್ದಿ, ಆ ವರ್ಷದ ನಿನ್ನ ಪೇಪರ್‌ಗಳನ್ನು ತೆಗೆಸುತ್ತೇನೆ. ಆ ವರ್ಷದ ಪೇಪರ್‌ಗಳ ವ್ಯಾಲ್ಯುಯೇಶನ್‌ನಲ್ಲಿ ಅನ್ಯಾಯ ನಡೆದಿರುರುವಂತೆ ಸೃಷ್ಟಿಸುತ್ತೇನೆ. ಇಷ್ಟು ದಿನ ಮಾಡಿದ ಕೆಲಸ ಹೋಗಿ, ಡಿಗ್ರೀ ಹೋಗಿ ರಸ್ತೆಯ ಮೇಲೆ ನಿಲ್ಲುವುದಕ್ಕಿಂತಲೂ ನರಕ ಬೇರೆ ಇದೆಯಾ ?" ಎಂದು ಅವನು ನಕ್ಕು ಮುಂದುವರೆಸಿದ.

"ಮಾಡದ ಅಪರಾಧವನ್ನು ಹೊರಿಸಿ ಕೆಲಸದಿಂದ ಸಸ್ಪೆಂಡ್ ಮಾಡಿಸುವುದು, ತೀರ ಬೇಕಾದವರನ್ನು ಬಂಧಿಸಿ ಇಕ್ಕಟ್ಟಿನಲ್ಲಿ ಸಿಕ್ಕಿಸುವುದು, ಇವೆಲ್ಲಾ ತುಂಬಾ ಹಳೆಯ ಪದ್ಧತಿಗಳು. ಇಷ್ಟು ದಿನ ಕಷ್ಟಪಟ್ಟು ಓದಿದ ಓದಿಗೆ, ಅದಕ್ಕೂ ಮಿಗಿಲಾಗಿ ನೀನು ಪಡೆದಿರುವ ಪದವಿಯೇ ಹೋದರೆ ಇನ್ನೂ ನರಕ ಬೇಕೆ ತಾಯಿ ?"

ತುಂಬಾ ಹೊತ್ತಿನ ನಂತರ ಅವಳು ನಕ್ಕಳು. "ಒಂದು ವೇಳೆ ಹಾಗೇ ಆದರೆ ನಿನ್ನ ಆಶ್ರಯಕ್ಕೆ ಬರುತ್ತೇನೆ. ನೀನು ಭಜನೆ ಮಾಡುತ್ತಿರುತ್ತಿ. ಹಾಲಿನ ಮಧ್ಯೆ ನಿಂತು ನಿನ್ನನ್ನು ಗುಂಡೇಟಿನಿಂದ ಹೊಡೆದುಹಾಕಿ ಜೈಲಿಗೆ ಹೊರಟು

ಹೋಗುತ್ತೇನೆ. ಈ ರೀತಿಯ ಮುಕ್ತಾಯ ಚೆನ್ನಾಗಿದೆಯಾ ನಿನಗೆ?''

"ಪರ್ವಾಗಿಲ್ಲ. ನನಗೆ ಸಮನಾದ ಸ್ಪರ್ಧಿ ಸಿಕ್ಕಿದ್ದಿ. ನೆನ್ನೆ ಆದ ನಾಟಕ ಯಾವುದು ? ಹ್ಞಾ...'ಅಂತಿಮ ಹೋರಾಟ'...ಒಳ್ಳೆ ಟೈಟಲ್."

ಒಂದು ಕಾರು ಅವಳ ಕಾರನ್ನು ಹಿಂದಕ್ಕೆ ಹಾಕಿ ಮುಂದುವರೆಯಿತು. ಅನಂತರ ಎರಡು ಬೈಕುಗಳು. ಅದರ ಹಿಂದೆ ಮತ್ತೆರಡು ಕಾರುಗಳು. ಅದರ ಹಿಂದೊಂದು ಆಡಿ ಕಾರು!

ಅವನು ಒಮ್ಮೆಗೇ ಸೀರಿಯಸ್ಸಾದ. "ಈ ದೇಶದ ಹೆಚ್ಚು ಪ್ರಜೆಗಳು ನನ್ನ ಭಕ್ತರು. ತುಂಬಾ ಜನ ರಾಜಕೀಯ ನಾಯಕರಿಗೆ ನಾನು ಆರಾಧ್ಯ ದೈವ. ತುಂಬಾ ಜನ ವ್ಯಾಪಾರಿಗಳ ಬಳಿ ನನ್ನ ಫೈನಾನ್ಸ್ ಇದೆ. ಹೀಗೆ ಇವತ್ತು ನಡೆಯಿತೆಂದು ನೀನು ತಿಳಿಸಿದರೂ ತುಂಬಾ ಜನ ಒಪ್ಪಿಕೊಳ್ಳುವುದಿಲ್ಲ. ಅದಕ್ಕೂ ಮಿಗಿಲಾಗಿ ನಾನು ಈ ರೀತಿ ಇಂಗ್ಲೀಷಿನಲ್ಲಿ ಮಾತನಾಡುತ್ತೇನೆಂದು ಹೇಳಿದರೂ ದೆ ಡೋಂಟ್ ಬಿಲೀವ್."

"ಇನ್ನೆರಡು ದಿನ ತಾಳು. ಲಾಕಪ್ಪಿನಲ್ಲಿರುವ ವ್ಯಕ್ತಿ ಬಾಯಿ ಬಿಡಲಿ–"

ಏಕೋ, ಏನೋ ಅನಂತಾನಂತ ಸ್ವಾಮಿ ಜೋರಾಗಿ ನಕ್ಕ. ತಮ್ಮೊಡನೆ ಬರುತ್ತಿದ್ದ ಆಡಿ ಕಾರು ತಮ್ಮ ಪಕ್ಕದಲ್ಲಿ ಬರುತ್ತಿದ್ದಂತೆಯೇ, ಅವಳು ಚಕ್ಕನೇ ತನ್ನ ಕಾರನ್ನು ಪಕ್ಕಕ್ಕೆ ಸರಿಸಿ ನಿಲ್ಲಿಸಬೇಕಾಯಿತು. ಆ ಕಾರಿನಿಂದ ವ್ಯಕ್ತಿಯೊಬ್ಬ ಇಳಿದು, ಅವಳ ಕಾರಿನ ಬಳಿ ಬಂದು ವಿನಮ್ರತೆಯಿಂದ ಡೋರ್ ತೆಗೆದು ನಿಂತ. ಸ್ವಾಮಿ ಕಾರಿನಿಂದ ಇಳಿದು, ''ಬರ್ತೀನಿ ತಾಯಿ. ಅಂದಹಾಗೆ ಆ ಲಾಕಪ್ಪಿನಲ್ಲಿದ್ದ ವ್ಯಕ್ತಿಯ ಬದಲಾವಣೆ ಎಂದೋ ಆಗಿದೆ. ಕುಡುಕನೊಬ್ಬನಿಗೆ ಚೆನ್ನಾಗಿ ಕುಡಿಸಿದ ಕೂಡಲೇ ಲಾಕಪ್ಪಿಗೆ ಬರಲು ಒಪ್ಪಿದ. ನೆನ್ನೆ ನೀನು ಅರೆಸ್ಟ್ ಮಾಡಿದ ವ್ಯಕ್ತಿ...A–2 ಇಗೋ ಇವನೇ !" ಅಂದ.

ಪ್ರಪಲ್ಲಿಕ ದಿಗ್ಭ್ರಾಂತಳಾದಳು. ತನ್ನ ಕಣ್ಣುಗಳೇ ಮೋಸಗೊಳಿಸುತ್ತಿದೆಯಾ ಅನ್ನಿಸಿತು. ಕಾರಿನ ಬಾಗಿಲನ್ನು ತೆಗೆದ ವ್ಯಕ್ತಿ ನೆನ್ನೆ ತಾನು ಅರೆಸ್ಟ್ ಮಾಡಿದ ವ್ಯಕ್ತಿ. ಸ್ವಾಮಿಯೊಡನೆ ಹೊರಟು ಹೋಗುತ್ತಿದ್ದಾನೆ.

ಅವಳು ರಿವಾಲ್ವರನ್ನು ತೆಗೆಯಲು ಹೋದಳು !

ಅನವಶ್ಯಕ...

ನೆನ್ನೆ ತಾನು ಅರೆಸ್ಟ್ ಮಾಡಿದ್ದು ಇವನನ್ನೇ ಎಂದು ನಿರೂಪಿಸಲಾರದೆ ಹೋದಳು. ಲಾಕಪ್ಪಿನ ಬೀಗ ಮುರಿದು ಓಡಿ ಬಂದಿದ್ದರೆ ಕೇಸ್ ಹಾಕಿ ಇನ್-ವೆಸ್ಟಿಗೇಟ್ ಮಾಡಬಹುದು. ಆದರೆ ರೆಕಾರ್ಡ್‌ಗಳು ರೆಕಾರ್ಡ್‌ಗಳಂತೇ ಇದ್ದರೆ ತಾನೇನು ಮಾಡಬಲ್ಲಳು. ಲಾಕಪ್ಪಿನಲ್ಲಿರುವ ವ್ಯಕ್ತಿ ಹತ್ತು ರೂಪಾಯಿಗಳಿಗೆ ಏನ-

ನ್ನಾದರೂ ಒಪ್ಪಿಕೊಳ್ಳುತ್ತಾನೆ. ಹತ್ತು ಸಾವಿರ ಸಿಕ್ಕಿದರೆ A-2 ಬದಲು ತನ್ನ ಬದುಕೆಲ್ಲಾ ಜೈಲಿನಲ್ಲಿ ಕಳೆಯಲು ಸಿದ್ಧನಾಗಿರುತ್ತಾನೆ. ಇಂತಹ ಪ್ರಜೆಗಳಿರುವ ದೇಶದಲ್ಲಿ ಕಾನೂನು ನಾಲ್ಕು ಪಾದಗಳ ಮೇಲೆ, ಧರ್ಮವನ್ನು ಹೇಗೆ ಹೊರುತ್ತದೆ ? ತನ್ನ ಡಿಪಾರ್ಟ್‌ಮೆಂಟಿನಲ್ಲಿ ಕನಿಷ್ಟ ನಾಲ್ಕೈದು ಜನರ ಸಹಾಯವೂ ಇಲ್ಲದೆ ಹೋದರೆ ಇದು ಸಾಧ್ಯವಾ? ಇಂತಹ ಪರಿಸ್ಥಿತಿಯಲ್ಲಿ ತಾನೇನು ಮಾಡಬಲ್ಲಳು ?

ಕಾರಿನ ಬಳಿ ನಿಂತು A-2. ಸ್ನೇಹಪೂರ್ವಕವಾಗಿ ಕೈಬೀಸಿದ. ಅವನ ಮುಖದಲ್ಲಿ ಚೇಷ್ಟೆಯ ಕಿರುನಗೆ ಕಾಣುತ್ತಿತ್ತು ಅಷ್ಟು ದೂರದಿಂದಲೂ.

ಅನಂತಾನಂತಸ್ವಾಮಿ ಹತ್ತುತ್ತಿದ್ದಂತೆ ಕಾರು ಮುಂದಕ್ಕೆ ಓಡಿತು.

* * * *

"ಇಲ್ಲಾ ಅಪ್ಪಾ...ನಾನಿನ್ನು ಈ ಕೆಲಸದಲ್ಲಿ ಮುಂದುವರೆಯಲಾರೆ" ನಿಸ್ಪೃಹಳಾಗಿ ತಲೆ ಆಡಿಸುತ್ತಾ ಹೇಳಿದಳು. ಆತ ಮಗಳೆಡೆಗೆ ಸಹಾನುಭೂತಿಯಿಂದ ನೋಡಿದ.

"ಯಾರು ನೀತಿಯಪರ ನಿಲ್ಲುವರೊ-ಯಾರು ಅನೀತಿಯಪರ ನಿಲ್ಲುವರೋ ಹೇಳುವುದೇ ಕಷ್ಟ. ಪ್ರಾಣವನ್ನು ಪಣವಿಟ್ಟು ಒಬ್ಬ ಟೆರ್‍ರಿಸ್ಟನ್ನು ಹಿಡಿದರೆ 24 ಗಂಟೆ ಕಳೆಯುವುದರೊಳಗಾಗಿ ಅವನ ಸ್ಥಾನದಲ್ಲಿ ಮತ್ತೊಬ್ಬ ಮುಗ್ಧ ಲಾಕಪ್ಪಿನಲ್ಲಿರುತ್ತಾನೆ. ರಿಕಾರ್ಡ್ ಸರಿಯಾಗಿಯೇ ಇರುತ್ತೆ. ಸಂಖ್ಯೆ ಸರಿಯಾಗಿಯೇ ಇರುತ್ತದೆ. ವಿರೋಧಿಗಳ ವ್ಯಂಗ್ಯ ನಗೆಯೇ ಕೊನೆಗೆ ಉಳಿಯುವುದು !"

"ಆ ಇನ್ಸ್‌ಪೆಕ್ಟರ್ "

"ತುಂಬಾ ಪ್ರಾಮಾಣಿಕ ಅಪ್ಪ. ನಾನು ಮೊದಲೆ ಊಹಿಸಿದ್ದೆ, ಆತನನ್ನು ಸಸ್ಪೆಂಡ್ ಮಾಡಿಸುವುದು ಕೂಡಾ ಅವರ ಯೋಜನೆಯ ಒಂದು ಅಂಗವೆಂದುಕೊಂಡಿದ್ದೇನೆ !"

"ಅವರು ತುಂಬಾ ಜಾಣರಂತೆ ಕಾಣುತ್ತಾರಲ್ಲಾ "

"ಜಾಣತನವಾ... ಆ ಅನಂತಾನಂತಸ್ವಾಮಿಯನ್ನು ನೋಡಿದರೆ ದೇವಸ್ಥಾನದಲ್ಲಿ ಅಲಂಕರಿಸಿರುವ ದಿವ್ಯಮಂಗಳ ವಿಗ್ರಹದಂತೆ ಕಾಣುತ್ತಾನೆ. ಸ್ಮಗ್ಲಿಂಗ್‌ಗೆ ಸ್ಪೆಲ್ಲಿಂಗ್ ತಿಳಿಯದವನಂತೆ ಇದ್ದಾನೆ. ಅವನಿಂದಾಗಿ ಅಲ್ಲಪ್ಪ ನನ್ನ ಯೋಚನೆ. ಅವನಿಗೆ ಸಹಾಯ ಮಾಡುತ್ತಿರುವ ನಮ್ಮ ಅಧಿಕಾರಿಗಳ ಮೇಲೆ ನನ್ನ ಕೋಪವೆಲ್ಲಾ. ದೇಶ ನಾಶವಾಗಿಬಿಡುತ್ತದೆ"

"ಇಪ್ಪತ್ತು ವರ್ಷಗಳ ಹಿಂದೆ ಚೈನಾ ಗಡಿಯಲ್ಲಿ ಪ್ರಾಣಗಳನ್ನು ಪಣ ವಿಟ್ಟು ಹೋರಾಡುತ್ತಿದ್ದಾಗಲೇ ನನಗೆ ಈ ವಿಷಯ ಸ್ಪಷ್ಟವಾಗಿತ್ತಮ್ಮ. ಆದರೆ ರಕ್ಷಿಸುವುದರಲ್ಲಿ ನಾವೇನೂ ನಿರ್ಲಕ್ಷ್ಯ ತೋರಿಸಲಿಲ್ಲ-ನಾವು ಈ ಸ್ವಾರ್ಥಿಗಳ ಕಬ್ಬಿಣದ ಪೆಟ್ಟಿಗೆಗಳನ್ನು ರಕ್ಷಿಸುವುದಕ್ಕಾಗಿ. ಅಂತಹ ಚಳಿಯಲ್ಲಿ ಹೋರಾಡ ಲಿಲ್ಲವೇ. ಪ್ರಜೆಗಳಿಗಿಂತಲೂ ದೇಶ ಮುಖ್ಯ''

ಆತ ಅವಳ ಬಳಿಗೆ ಬಂದು, "ಇಷ್ಟು ಚಿಕ್ಕ ವಯಸ್ಸಿನಲ್ಲೇ ದೊಡ್ಡ ಸ್ಥಾನ ವನ್ನು ಅಲಂಕರಿಸಿದ್ದಿ. ಸಿನಿಕ್ ಆಗಿ ಬದಲಾಗಬೇಡ'' ಎಂದು ಹೊರಟು ಹೋದರು. ಆತ ಹೊರಟುಹೋದ ಮೇಲೆ ಅವಳು ಡೈರಿಯಲ್ಲಿ ಬರೆದಳು:

"ನಾನು ಸಿನಿಕಳಾಗುವುದಿಲ್ಲ. ಆದರೆ ಈ ಭಾರಗಳೂ, ಜವಾಬ್ದಾರಿಗಳೂ ನನ್ನ ಮನಸ್ಸಿಗೆ ಹಿಡಿಸುತ್ತಿಲ್ಲ. ಹಳ್ಳಿಯೊಂದರ ಹೊಲಗದ್ದೆಗಳ ಹಸಿರಿನ ನಡುವೆ ನಿಶ್ಚಿಂತೆಯಿಂದ ಹಾರಾಡಬೇಕೆಂದು ನನ್ನ ಮನಸ್ಸು ಬಯಸುತ್ತಿದೆ. ಈ ಪದವಿ, ಈ ಆರ್ಟಿಫಿಷಿಯಲ್ ನಡತೆಗಳು, ವಿಟಿಗೆ ಎದುರೇಟುಗಳು-ಎಲ್ಲಾ ನನ್ನ ಉತ್ಸಾಹವನ್ನು ಹಿಂಡಿ ಹಿಪ್ಪೆ ಮಾಡುತ್ತಿವೆ. ಅಪ್ಪ ಹೇಳಿದಂತೆ ಇವೆಲ್ಲಾ ಅದೃಷ್ಟವೇ ಆದರೆ ಅಂತಹ ಅದೃಷ್ಟ ನನಗೆ ಬೇಡ. ಓದು, ತಿಳುವಳಿಕೆ, ಆಸ್ತಿ-ಅಂತಸ್ತುಗಳೆಲ್ಲಾ ವರಗಳಾದರೆ ಅದೆಲ್ಲಕ್ಕಿಂತಲೂ ಮಿಗಿಲಾದದ್ದು 'ಆನಂದ,' ಅದೇ ಇಲ್ಲದಿದ್ದರೆ ಇವೆಲ್ಲಾ ಏತಕ್ಕಾಗಿ? ಇಷ್ಟು ಸಣ್ಣ ವಯಸ್ಸಿನಲ್ಲೇ ಯಾರಮೇಲೆ ಯಾರು ಹತ್ಯೆಯ ಯತ್ನ ಮಾಡುತ್ತಿದ್ದಾರೆಂದು, ಯಾವ ರಾಜ ಕೀಯ ಪಾರ್ಟಿಯನ್ನು ಯಾರು ಉರುಳಿಸುತ್ತಿದ್ದಾರೆಂದು ಪರಿಶೋಧಿಸುವ ಕೆಲಸ ಮಾಡಬೇಕಾದ್ದು ದುರದೃಷ್ಟವಲ್ಲದೆ ಮತ್ತೇನು ? ನನಗಿಲ್ಲಿಂದ ಓಡಿ ಹೋಗಬೇಕೆನ್ನಿಸಿದೆ. ಯಾವುದಾದರೂ ಬೆಟ್ಟಗಳ ನಡುವೆಯೋ, ಸಮುದ್ರದ ತೀರಗಳಲ್ಲಿಯೋ ಅಡಗಿ ಕುಳಿತುಕೊಳ್ಳಬೇಕೆನ್ನಿಸಿದೆ...ಇಲ್ಲೇ ಇದ್ದರೆ ನಾನು ಇಷ್ಟರಲ್ಲೇ ಸ್ಕಿಜೋಫ್ರೇನಿಯಾ ರೋಗಿಯಾಗಿ ಬದಲಾಗುವುದು ಶತಃಸ್ಸಿದ್ಧ. ನನ್ನ ಮನಸ್ಸು ನನ್ನ ಪ್ರತಿಯೊಂದು ಚರ್ಯೆಯನ್ನೂ ವಿರೋಧಿಸುತ್ತಿದೆ. ಮುಖ್ಯವಾಗಿ ನನ್ನ ಈ ದೃಷ್ಟಿಯನ್ನು ಬದಲಾಯಿಸಿಕೊಳ್ಳಬೇಕು. ಅದೇ ನನ್ನ ಅಬ್ಸೇಷನ್. ಭಗವಂತಾ ! ನನ್ನ ತಿಳುವಳಿಕೆಯನ್ನು ಬೇಕಾದರೆ ಸ್ವಲ್ಪ ಕಡಿಮೆ ಮಾಡು. ನನಗಿಷ್ಟವಾದ ರೀತಿಯಲ್ಲಿ ಬದುಕುವಂತೆ ಆದಷ್ಟು ಬೇಗ ದಯ ಪಾಲಿಸು. ನನ್ನ ಗಮ್ಯಕ್ಕೆ ನನ್ನನ್ನು ಆದಷ್ಟು ಬೇಗ ಸೇರಿಸು.

**I want two hands**
**between which**
**I can sleep without dreams**

As life itself would
then be a dream !...

## 5

ಬೇಗ ಬೇಗ ಹೋಗು. ಒಂದು ವೇಳೆ ಬಸ್ಸು ಬೇಗ ಬಂದರೆ ಮಾತ್ರ, ಇಲ್ಲೇ ಇರು. ಕಾಲೇಜಿನಿಂದ ಬಂದು ನಾನು ಇಲ್ಲಿಂದ ಮನೆಗೆ ಕರೆದೊಯ್ಯುತ್ತೇನೆ,'' ಸುನಾದಮಾಲ ಹೇಳಿದಳು.

"ನಾನಲ್ಲ, ಒಂದು ವೇಳೆ ನೀನೇ ಕಾಲೇಜಿನಿಂದ ಬೇಗ ಬಂದರೆ ಬಯ ಪಡದೆ ಇಲ್ಲೇ ಇರು. ಸರಿಯಾಗಿ 4 ಗಂಟೆಗೆ ಸ್ಕೂಲ್ ಬಸ್ಸಿನಲ್ಲಿ ಇಳಿಯುತ್ತೇನೆ" ವಿಷ್ಣು ಹೇಳಿದ,

"ಚೋಟುದ್ದ ಇದೀಯ ಕತ್ತೆ ! ನಂಗೆ ನೀನು ಧೈರ್ಯ ಹೇಳ್ತೀಯ?'' ಸಿಟ್ಟಿನಿಂದ ಹೇಳಿದಳು ಸುನಾದಮಾಲ. ವಿಷ್ಣು ನಕ್ಕುಬಿಟ್ಟ. ಅವನು ಆರನೆ ತರಗತಿಯಲ್ಲಿ ಓದುತ್ತಿದ್ದಾನೆ. ದಿನವೂ ಸ್ಕೂಲ್‌ಬಸ್ಸಿನಲ್ಲಿ ಹೋಗಿಬರುತ್ತಾನೆ ಅವನು. ಸುನಾದಮಾಲಳೇ ಅವನಿಗೆ ತಾಯಿ, ಅಕ್ಕ, ಗುರು, ಫ್ರೆಂಡ್ ವಗೈರೆ... ಮತ್ತೊಂದು ರೀತಿಯಲ್ಲಿ ಸುನಾದಮಾಲಳಿಗೆ ಅವನು ಬಾಡಿಗಾರ್ಡ್. ಬೀದಿಯ ಮೊದಲ ರಸ್ತೆಯಲ್ಲಿ ಅವನೊಡನೆ ಬಂದು ಬಸ್ಸು ಹತ್ತಿಸುತ್ತಾಳೆ ದಿನವೂ. ನಂತರ ತಾನು ಕಾಲೇಜಿಗೆ ಹೋಗುತ್ತಾಳೆ. ಇದು ಅವರಿಬ್ಬರ ದಿನಚರಿ.

ಬೀದಿಯಲ್ಲಿ ಅಷ್ಟೇನೂ ರಷ್ ಇರಲಿಲ್ಲ. ಆದರೆ ಬೀದಿಯಲ್ಲಿ ಹೋಗುವ ಪ್ರತಿಯೊಬ್ಬರೂ ಮುಖ್ಯವಾಗಿ ಸ್ತ್ರೀಯರು ಅವಳನ್ನು ನಿಟ್ಟಿಸಿ ನೋಡಿ ಹೋಗುತ್ತಿದ್ದರು. ಸುಂದರವಾದ ಸ್ತ್ರೀಯರನ್ನು ಪುರುಷರಿಗಿಂತಲೂ ಹೆಚ್ಚಾಗಿ ಸ್ತ್ರೀಯರೇ ನೋಡುತ್ತಾರೆಂದು ಅವಳಿಗೆ ಅನುಭವವಾಗಿತ್ತು.

ನೆನ್ನೆಯಿಂದ ಅವಳು ಒಳ್ಳೆಯ ಮೂಡ್‌ನಲ್ಲಿಲ್ಲ. ನೆನ್ನೆ ಕ್ಲಾಸಿನಲ್ಲಿ ಲೆಕ್ಚರರಿಂದ ಚೆನ್ನಾಗಿ ಬೈಸಿಕೊಂಡಿದ್ದಳು. ದೇವರೇನಾದರೂ ಪ್ರತ್ಯಕ್ಷವಾಗಿ ತನ್ನ ತಲೆಯಲ್ಲಿ ಸ್ವಲ್ಪ ಬುದ್ಧಿವಂತಿಕೆಯನ್ನು ಇರಿಸಿದರೆ ಮಾತ್ರ ತಾನು ಬುದ್ಧಿವಂತಳಾಗುವುದೆಂದು ಅವಳ ನಂಬಿಕೆ. ಎಷ್ಟೇ ಓದಿದರೂ ಪಾಸ್‌ಮಾರ್ಕ್ಸ್ ಬರುವುದು ಗಗನದಷ್ಟು ದೂರವಾಗುತ್ತಿದೆ. ನೆನ್ನೆ ರಾತ್ರಿ ಅವಳಿಗೊಂದು ಕನಸುಬಿದ್ದಿತ್ತು. ದೇವರು ಕನಸಿನಲ್ಲಿ ಕಂಡು, "ನಿನಗೇನು ಬೇಕೋ ಕೋರಿಕೋ" ಅಂದ. ''ಸ್ವಾಮಿ ನನಗಿರುವ ಭಯವನ್ನು ಸ್ವಲ್ಪ ಕಡಿಮೆಮಾಡು. ಸ್ವಲ್ಪ ತಿಳುವಳಿಕೆ, ಸ್ವಲ್ಪ ಮಾತು

ಗಾರಿಕೆ ಕೊಡು .." ಅಂದಳು. "ಹಾಗೇ ಆಗಲಿ ! ಆದರೆ ಆದಕ್ಕೆ ಬದಲಾಗಿ ನೀನು ನಿನ್ನ ಸ್ವಲ್ಪ ಸೌಂದರ್ಯವನ್ನು ತ್ಯಾಗಮಾಡಬೇಕಾಗಿ ಬರುತ್ತೆ"ದೇವರು ಹೇಳಿದ. ''...ಹೇಳು ಮಾಡ್ತೀಯ ?"

ಅವಳು ಸಂತೋಷದಿಂದ ಒಪ್ಪಿಕೊಳ್ಳುತ್ತಿದ್ದಂತೆಯೇ ಕನಸಿನಿಂದ ಎಚ್ಚೆತ್ತಳು. ಅವಳೆಷ್ಟು ಮುಗ್ಧಳೆಂದರೆ–ಕೂಡಲೇ ಎದ್ದು ಕನ್ನಡಿಯ ಮುಂದೆ ಓಡಿದಳು.

ವಿಷ್ಣು, ಸುನಾದಮಾಲ ಬಸ್‌ಗಾಗಿ ನಿಂತಿರುವಂತೆಯೇ ಮುನ್ನೂರು ಗಜಗಳ ದೂರದಲ್ಲಿ ಪೇವ್‌ಮೆಂಟ್ ರೆಸ್ಟೋರೆಂಟ್‌ನ ಗಾಜಿನ ಹಿಂದೆ ಕುಳಿತು ಮಾತನಾಡಿಕೊಳ್ಳುತ್ತಿದ್ದರು ವಿಹಾರಿ, ಪದ್ಮಾಕರ್.

ಸುನಾದಮಾಲ ಕಂಡ ಕೂಡಲೇ ಪದ್ಮಾಕರನು ವಿಹಾರಿಗೆ ಹೇಳಿದ.

"ಅರೇ ..ಅಲ್ಲಿ ನೋಡು."

"ಸುನಾದಮಾಲ !"

''ಹೋಗಿ ಮಾತಾಡೋಣ ನಡೀ ಗುರು !"

ವಿಹಾರಿ ಅಷ್ಟೇನು ಉತ್ಸಾಹ ತೋರಿಸಲಿಲ್ಲ. ಅವನು ಪ್ರವಲ್ಲಿಕಳ ಬಗ್ಗೆಯೇ ಯೋಚಿಸುತ್ತಿದ್ದ. ಪ್ರವಲ್ಲಿಕ, ಸುನಾದಮಾಲಳಷ್ಟು ಸುಂದರಿಯೇನಲ್ಲ. ಆದರೆ ಯಾವುದೋ ತಿಳಿಯದ ಠೀವಿ, ಪ್ರೌಢಿಮೆ ಅವಳಲ್ಲಿತ್ತು. ಅವನ ಮನಸ್ಸು ಡೋಲಾಯಮಾನವಾಗಿತ್ತು.

ಅವರಿಬ್ಬರೂ ನೋಡುತ್ತಿದ್ದಂತೆಯೇ ಬಸ್ ಬಂತು. ಸುನಾದಮಾಲ ವಿಷ್ಣುವಿಗೆ ಎಚ್ಚರಿಕೆಯ ಮಾತುಗಳನ್ನು ಹೇಳಿ ಹೊರಟು ಹೋದಳು. ಸಾಧಾರಣವಾಗಿ ಅವಳು ವಿಷ್ಣು ಬಸ್ಸು ಹತ್ತುವವರೆಗೂ ಹೋಗುತ್ತಿರಲಿಲ್ಲ. ಆದರೆ ಅದೇ ರಸ್ತೆಯ ಅವಳಿಗೆ ತಿಳಿದವಳಾಕೆ ತನ್ನ ಮಗನನ್ನು ಕೂಡಾ ಬಸ್ಸಿಗೆ ಕಳಿಸಲು ಕಾದಿದ್ದಳು. ಆಕೆಗೆ ತಿಳಿಸಿ ಸುನಾದಮಾಲ ಕಾಲೇಜಿಗೆ ತಡವಾಗುತ್ತದೆಂದು ಹೊರಟುಹೋದಳು.

"ಹಾಯ್ ವಿನೀಲ್" ವಿಷ್ಣು ವಿಷ್ ಮಾಡಿದ.

"ಹಲ್ಲೋ" ವಿನೀಲ್ ಹೇಳಿದ. ಅವನ ಕನ್ನಡಕ ಮೇಧಾವಿತನವನ್ನು ತೋರಿಸುತ್ತಿತ್ತು. ಅವರಮ್ಮ ವಿಷ್ಣುವಿನೊಡನೆ, "ಸಂಜೆಗೆ ನಮ್ಮ ಮನೆಗೆ ಬಾ ಮರಿ. ಇವತ್ತು ವಿನೀಲನ ಬರ್ತ್‌ಡೇ'' ಎಂದು ಕರೆದರು.

"ತಪ್ಪದೇ ಬರ್ತೀನಿ ಆಂಟೀ..." ಎಂದು ವಿನೀಲನ ಕಡೆ ತಿರುಗಿ, "ನೆನ್ನೇನೆ ಯಾಕೆ ಹೇಳ್ಲಿಲ್ವೋ ವಿನೀಲ್" ಎಂದ. ವಿಷ್ಣು ಅವರ ಕ್ಲಾಸ್ ಲೀಡರ್, ಎಲ್ಲರಿಗಿಂತಲೂ ಎರಡಿಂಚು ಹೆಚ್ಚು ಎತ್ತರ. ವಿನೀಲ್ ಅವನಿಗೆ ತದ್ವಿರುದ್ಧ. "ಚಾಕ್ಲೆಟ್

ಕೊಡುತ್ತಾ ಇವತ್ತೇ ಹೇಳೋಣ ಅಂದ್ಕೊಂಡಿದ್ದೆ.'' ಮೆಲ್ಲಗೆ ಹೇಳಿದ, ಅಷ್ಟರಲ್ಲಿ ಸ್ಕೂಲಿನ ಬಸ್ ಬಂತು. ಸ್ಕೂಲಿನಲ್ಲಿ ಹಂಚಲು ಚಾಕ್ಲೆಟ್ಟುಗಳ ಪಾಕೆಟ್‌ನೊಡನೆ ವಿನೀಲ್ ಬಸ್ ಹತ್ತಿದ. ಹಿಂದೆಯೇ ವಿಷ್ಣು ಹತ್ತಿ 'ರೈಟ್' ಹೇಳಿದ. ಅಷ್ಟರಲ್ಲಿ ವಿಹಾರಿ, ಪದ್ಮಾಕರರು ಹೋಟೆಲಿನಲ್ಲಿ ಬಿಲ್ ಕೊಟ್ಟು ಹೊರಗೆ ಕಾರಿನ ಬಳಿಗೆ ಬಂದರು.

ವಿನೀಲನ ತಾಯಿ ಹೊರಗಿನಿಂದಲೇ ಪಾರ್ಟಿಗೆ ಬರುವಂತೆ ವಿಷ್ಣುಗೆ ಮತ್ತೊಮ್ಮೆ ಹೇಳುತ್ತಿದ್ದಂತೆಯೇ ಬಸ್ ಮುಂದಕ್ಕೆ ಚಲಿಸಿತು. ಅದೇ ಸಮಯ ದಲ್ಲಿ ವಿಹಾರಿ ಪದ್ಮಾಕರರಿದ್ದ ಕಾರು ಬಸ್ಸಿನ ಹಿಂದೆಯೇ ಹೊರಟಿತು. ಸ್ವಲ್ಪ ದೂರ ಪ್ರಯಾಣ ಮಾಡಿದ ನಂತರ ಬಸ್ ಒಮ್ಮೆಗೇ ನಿಂತಿದ್ದರಿಂದ, ಹಿಂದೆ ಬರುತ್ತಿದ್ದ ವಿಹಾರಿ ಸಿಟ್ಟಿನಿಂದ ತಲೆ ಹೊರಹಾಕಿ ನೋಡಿದ.

ಮುಂದಿನ ಬಸ್ಸನ್ನು ನಿಲ್ಲಿಸಿ, ಯಾರೋ ಬ್ರೇಕ್ ಇನ್ಸ್‌ಪೆಕ್ಟರ್ ಬಸ್ಸಿನೊಳಗೆ ಹೋಗುತ್ತಿದ್ದಾನೆ. ವಿಹಾರಿ ತನ್ನ ಕಾರನ್ನು ಪಕ್ಕಕ್ಕೆ ನಡೆಸಿ ಬಸ್ಸನ್ನು ದಾಟಿ ಹೊರಟ.

ಅವನಾಗಲೀ, ಪದ್ಮಾಕರ್ ಆಗಲೀ ತಲೆಯನ್ನು ಪಕ್ಕಕ್ಕೆ ತಿರುಗಿಸಿ ಬಸ್ಸಿನ ಕಡೆ ನೋಡಿದ್ದಿದ್ದರೆ ಈ ಕಥೆಗೆ ಮತ್ತೊಂದು ತಿರುವು ಸಿಗುತ್ತಿತ್ತು.

ಬಸ್ಸಿನೊಳಗೆ ಬ್ರೇಕ್ ಇನ್ಸ್‌ಪೆಕ್ಟರ್‌ನಂತೆ ಪ್ರವೇಶಿಸಿದವನು ಡ್ರೈವರ್ ಬಳಿಗೆ ಹೋಗುತ್ತಿದ್ದಂತೆಯೇ, ಅವನ ಅಸಿಸ್ಟೆಂಟ್ ಕಂಡಕ್ಟರ್ ಬಳಿಗೆ ಬಂದ. ಇಬ್ಬರೂ ತುಂಬಾ ತರಬೇತಿ ಪಡೆದವರಂತೆ ಒಂದೇ ಸಲ ಡ್ರೈವರ್, ಕಂಡಕ್ಟರು ಗಳ ಮೇಲೆ ದಾಳಿ ಮಾಡಿದರು. ಅರ್ಧಕ್ಷಣದಲ್ಲಿ ಮುಗಿದುಹೋಯಿತು. ಡ್ರೈವರನ್ನು ಪಕ್ಕಕ್ಕೆ ತಳ್ಳಿ. ಒಬ್ಬ ಡ್ರೈವಿಂಗ್ ಸೀಟಿನಲ್ಲಿ ಕುಳಿತ. ಮಕ್ಕಳ ಹಾಹಾಕಾರ ಆ ಬಸ್ಸಿನ ಶಬ್ದದಲ್ಲಿ ಲೀನವಾಯಿತು. ವೇಗವಾಗಿ ಹೊರಟ ಬಸ್ ಕೆಲವೇ ಕ್ಷಣಗಳಲ್ಲಿ ಅಲ್ಲಿಂದ ಅದೃಶ್ಯವಾಯಿತು.

* * * *

"ಹೇಯ್, ಕೆಳಗಿಳಿಯೋ" ಒಮ್ಮೆಗೇ ಕಾರನ್ನು ಆಫ್ ಮಾಡಿದ ವಿಹಾರಿ.

"ಇದು ಅನ್ಯಾಯ ಗುರು, ಪಕ್ಕದ ಸ್ಥಾನವನ್ನು ಸ್ನೇಹಿತನಿಗೆ ಕೊಡುವವನೇ ನಿಜವಾದ ಸ್ನೇಹಿತ ಅಂತ ಹೇಳಿದ್ದಿ. ಈಗ ಹುಡುಗಿ ಕಾಣುತ್ತಿದ್ದಂತೆಯೇ ಕಾರಿನಿಂದಲೇ ಇಳಿ ಅನ್ನುತ್ತಿದ್ದಿ''.

"ಗೆಳತಿ ಕಾಣುವ ವರೆಗೆ ಗೆಳೆಯನಿಗೆ ಪಕ್ಕದ ಸ್ಥಾನ. ಆನಂತರ ಮೂರನೆ

ಸ್ಥಾನ." ಸ್ವಲ್ಪ ದೂರದಲ್ಲಿ ನಡೆಯುತ್ತಿದ್ದ ಪ್ರವಲ್ಲಿಕಳನ್ನು ನೋಡುತ್ತಾ ಹೇಳಿದ ವಿಹಾರಿ.

''ಕರೆಕ್ಟ್ ! ಮೂರನೇ ಸ್ಥಾನವನ್ನೇ ಕೊಡು. ಆ ಹುಡುಗಿಯನ್ನು ನಮ್ಮಿಬ್ಬರ ನಡುವೆ ಕುಳ್ಳಿರಿಸಿಕೊಳ್ಳೋಣ.''

"ಬಾಯಿ ಮುಚ್ಚು ...ಇಳೀತೀಯೊ ಇಲ್ಲವಾ ?'' ಎಂದು ಅವನನ್ನು ಬಲವಂತದಿಂದ ಇಳಿಸಿ, ಪ್ರವಲ್ಲಿಕಳ ಬಳಿಗೆ ನಿಧಾನವಾಗಿ ನಡೆಯುತ್ತಾ, "ಹಲೋ'' ಅಂದ. ಏನನ್ನೋ ಯೋಚಿಸುತ್ತಿದ್ದ ಅವಳು ಬೆಚ್ಚಿಬಿದ್ದು. ''ಹಲೋ. ನೀವಾ?'' ಅಂದಳು.

''ಬನ್ನಿ ಡ್ರಾಪ್ ಮಾಡ್ತೀನಿ'' ಆಗ ತಾನೆ ಕಂಡವಳಂತೆ ಹೇಳಿದ.

ಅವಳು ಬಂದವಳೇ ಕಾರಿನಲ್ಲಿ ಕುಳಿತಳು...ಮನೆಗೆ ದಾರಿ ತೋರಿಸುತ್ತಾ, ''ನಿಮ್ಮ ಕಾರೇನಾಯಿತು ?"

''ಕಾರಿಲ್ಲದೆಯೇ ಹೋಗಬೇಕಾದ ಕೆಲಸವೊಂದು ಬಿತ್ತು.'' ಅದಕ್ಕಿಂತಲೂ ಹೆಚ್ಚು ವಿವರಗಳನ್ನು ಕೊಡಲು ಇಷ್ಟಪಡದವಳಂತೆ ಅಷ್ಟಕ್ಕೆ ನಿಲ್ಲಿಸಿದಳು. ಅದನ್ನು ಗಮನಿಸಿದ ಅವನು ಅಷ್ಟಕ್ಕೆ ಮಾತಿನ ಧಾಟಿ ಬದಲಾಯಿಸಿದ. ''ಮೊನ್ನೆ ನಿಂತಿದ್ದ ನಾಟಕ ಮತ್ತೆ ನಾಳೆ ಇದೆ. ಬರ್ತೀರಾ ?''

"ಅಂತಿಮ ಹೋರಾಟ ತಾನೆ ?"

"ಹೌದು"

"ಥೀಮ್ ಏನು ?''

"ಈಗಾಗಲೇ ಇರುವ ಬಡತನವನ್ನು ಮತ್ತಷ್ಟು ಹೆಚ್ಚು ಮಾಡುವ ವ್ಯವಸ್ಥೆಯ ವಿರುದ್ಧದ ಹೋರಾಟ–ಅಂತಿಮ ಹೋರಾಟ..." ಉತ್ತೇಜಿತನಾಗಿ ಹೇಳಿದ ವಿಹಾರಿ.

"ಅದಕ್ಕೆ ನೀವು ನಿರ್ದೇಶಕರಾ ? ಮಂತ್ರಿಯ ಪಾತ್ರ ಮಾಡಿದಂತಿತ್ತು".

"ಹೌದು''

"ನೀವೇನು ಮಾಡುತ್ತಿದ್ದೀರಿ ?"

ವಿಹಾರಿ ಕೂಡಲೇ ಉತ್ತರಿಸದೆ ಸುಮ್ಮನಾದ. ಉತ್ತರಿಸಲು ಏನೂ ತೋಚಲಿಲ್ಲ.

"ನಿಮ್ಮ ತಂದೆ ತಾಯಿಗಳು ಒಳ್ಳೇ ಸ್ಥಿತಿವಂತರಿರಬೇಕು."

"ನನಗೆ ತಂದೆಯಿಲ್ಲ. ತಾಯಿ ಇದ್ದಾರಷ್ಟೆ. ನಮ್ಮ ತಾತನ ಆಸ್ತಿ ಇದೆ.''

"...ತಾತ ಅಂದರೆ ನಮ್ಮ ತಾಯಿಯ ತಂದೆ" ಅವನು ಹೇಳುತ್ತಿದ್ದ ವಿಷಯ ಅವಳು ಕೇಳುತ್ತಿದ್ದಾಳಾ ಇಲ್ಲವಾ ಎಂದು ಯೋಚಿಸದೆ ಹೇಳುತ್ತಿದ್ದ.

ಅವಳು ಅವನೆಡೆಗೆ ನೋಡಿದಳು. ಬೆಳಗಿನ ಬಿಸಿಲು ಅವನ ಮುಖದ ಮೇಲೆ ಬೀಳುತ್ತಿತ್ತು. ಅವನ ಮೂಗಿನ ತುದಿಯ ಮೇಲೆ ಬಿಸಿಲು ಬೀಳುತ್ತಿದ್ದುದರಿಂದ ಅದು ಹೊಳೆಯುತ್ತಿತ್ತು. ಅವನು ಡ್ರೈವ್ ಮಾಡುತ್ತಿದ್ದಾಗ ಕೆಳಗಿನ ತುಟಿಯನ್ನು ಕಚ್ಚಿಕೊಂಡಿದ್ದ ರೀತಿ ಅದೊಂದು ರೀತಿಯ ಹಠಮಾರಿತನವನ್ನು ತೋರುತ್ತಿತ್ತು.

ಅವಳು ಹೇಳಿದಳು. . "ನನಗೆ ನಾಟಕಗಳ ಬಗ್ಗೆ ಗೊತ್ತಿಲ್ಲ. ಆದರೆ ಅದಕ್ಕೆ ಬಹುಮಾನ ಬಂದಾಗ ಅಥವಾ ಪ್ರೇಕ್ಷಕರು ಚಪ್ಪಾಳೆ ತಟ್ಟಿದಾಗ ಅದು ನಿಮಗೆ ಸ್ಫೂರ್ತಿ ನೀಡುತ್ತದೆಂದು ಕೊಂಡಿದ್ದೇನೆ."

"ಹೌದು. ಆ ಚಪ್ಪಾಳೆ ಶಬ್ದ ಕೇಳುತ್ತಿದ್ದಂತೆಯೇ ನಾವು ಪಟ್ಟ ಶ್ರಮ ಸಾರ್ಥಕವಾದಂತೆ ಅನ್ನಿಸುತ್ತದೆ, ಅಗೋ ಕೇಳಿ. ಆ ಚಪ್ಪಾಳೆಗಳೇ ಅಲ್ಲವೇ ಹಸಿದ ಕಲಾಜೀವಿಗೆ ಪಂಚಭಕ್ಷ್ಯ ಪರಮಾನ್ನ ಎಂದಿದ್ದಾನೆ ಒಬ್ಬ ಕವಿ." ಉತ್ಸಾಹದಿಂದ ಹೇಳಿದ ವಿಹಾರಿ. ಅಷ್ಟು ಸುಂದರವಾದ ಹುಡುಗಿ ಅಷ್ಟು ದೊಡ್ಡ ಹುದ್ದೆಯಲ್ಲಿರುವ ಅಧಿಕಾರಿ, ತಾನು ಕೃಷಿ ಮಾಡುತ್ತಿರುವ ರಂಗವನ್ನು ಮೆಚ್ಚಿಕೊಂಡಿದ್ದು ಅವನಿಗೆ ತುಂಬಾ ಉತ್ಸಾಹವನ್ನು ಉಂಟುಮಾಡಿತ್ತು.

ನಮ್ಮ ತಂದೆಗೆ ರಾಷ್ಟ್ರಪತಿ ಪದಕವನ್ನು ಅದೇ ಪರಮವೀರ ಚಕ್ರ-ಸಿಕ್ಕಿಸುತ್ತಿದ್ದಾಗ ಕೂಡಾ ಇಂತಹ ಚಪ್ಪಾಳೆಗಳೇ...ಅಂದ ಹಾಗೆ ನೀವೇನು ಮಾಡುತ್ತಿದ್ದೀರೋ ನನಗೆ ಗೊತ್ತಾಗಲಿಲ್ಲ. ಸಂಜೆಯ ವೇಳೆ ಸರಿ–ಬೆಳಗಿನಿಂದ ಸಂಜೆಯವರೆಗೂ–?"

"ಸ್ವಲ್ಪ ಕಾಲ ಒಂದು ಫೈನಾನ್ಸ್ ಕಂಪನಿಯಲ್ಲಿ ಮ್ಯಾನೇಜರ್ ಆಗಿ ಕೆಲಸ ಮಾಡುತ್ತಿದ್ದೆ, ಆಮೇಲೆ ಬಿಟ್ಟುಬಿಟ್ಟೆ. ಕೆಲಸಕ್ಕೂ ನನಗೂ ಸರಿಬೀಳುತ್ತಿಲ್ಲ''

ಅವಳು ನಕ್ಕು, "ಅವರು ಕೊಡುವ ಸಂಬಳ ನಿಮ್ಮ ಒಂದು ದಿನದ ಖರ್ಚಿಗೂ ಸಾಲುವುದಿಲ್ಲವೇನೋ" ಅಂದಳು. ಅದು ನಿಜವೇ. ಆದರೂ ಅವನು ಮಾತನಾಡಲಿಲ್ಲ. ಅವನ ಮನಸ್ಸಿನ ಒಂದು ಮೂಲೆಯಲ್ಲಿ ಇನ್‌ಫೀರಿಯಾರಿಟಿ ಕಾಂಪ್ಲೆಕ್ಸ್ ಕಾಡುತ್ತಿತ್ತು. ಅವಳ ಮಾತುಗಳು ಅವನ ಮನದ ಅಂತರ್ಭಾವಗಳನ್ನು ಸ್ಪಷ್ಟವಾಗಿ ತೆರೆದಿಡುತ್ತಿತ್ತು. ಅಂತರ್ಮಥನ ಎಂದು ಆರಂಭವಾಗುತ್ತದೋ ಅಂದೇ ವೈಚಾರಿಕತೆ ಪ್ರಾರಂಭವಾಗುತ್ತದೆ. ಅದಕ್ಕೆ ದೊಡ್ಡ ದೊಡ್ಡ ಘಟನೆಗಳೂ, ಕಾರಣಗಳೂ ಅಗತ್ಯವಿಲ್ಲ, ತನ್ನನ್ನು ತಾನು ನೋಡಿಕೊಳ್ಳಲು ಅವಳು ಕನ್ನಡಿಯಂತೆ ಕಂಡಳು. ತನ್ನ ಟ್ರೂಪಿನಲ್ಲಿರುವ ತುಂಬಾ ಜನ ವಿವಿಧ ಸರ್ಕಾರಿ ಕಚೇರಿಗಳಲ್ಲಿ ಕೆಲಸಮಾಡುತ್ತಾರೆ, ಸಾಕಷ್ಟು ಲಂಚ ಪಡೆಯುತ್ತಿರುತ್ತಾರೆ. ಆದರೆ ಆಡುವುದು ಮಾತ್ರ ಅಂತಿಮ ಹೋರಾಟದಂತಹ ನಾಟಕಗಳನ್ನು

ಈ ಸತ್ಯ ಅವನಿಗೆ ಜೀರ್ಣವಾಗಲಿಲ್ಲ. ಅಷ್ಟು ಬೇಗ ಜೀರ್ಣಿಸಿಕೊಳ್ಳಲೂ ಸಾಧ್ಯವಾಗಲಿಲ್ಲ.

ಅವಳೆಡೆಗೆ ಮತ್ತೊಮ್ಮೆ ನೋಡಿದ. ಗಾಳಿಗೆ ಅವಳ ಮುಂಗುರುಳು ಹಾರಾಡುತ್ತಿತ್ತು. ಸಾಮಾನ್ಯವಾಗಿ ಯಾವುದಾದರೂ ಸಿನಿಮಾ ಥಿಯೇಟರಿನಲ್ಲಿಯೋ ಬೀದಿಯಲ್ಲಿಯೋ ಅಂತಹ ಹೆಣ್ಣು ಕಂಡಿದ್ದರೆ ತಲೆಕೆಡಿಸಿಕೊಳ್ಳುತ್ತಿರಲಿಲ್ಲ. ಆದರೆ ತುಂಬಾ ಕಡಿಮೆ ಮಾತನಾಡಿ ಹೆಚ್ಚು ಭಾವನೆಗಳನ್ನು ವ್ಯಕ್ತಪಡಿಸುವ ರೀತಿ, ಅಲ್ಲದೆ ಅವಳು ಕುಳಿತುಕೊಳ್ಳುವ ಠೀವಿ, ಅವನನ್ನು ಅದೊಂದು ರೀತಿಯ ಸಂಭ್ರಮದಲ್ಲಿ ಬೀಳಿಸಿತು.

ಅವನು ಇದ್ದಕ್ಕಿದ್ದಂತೆಯೇ ಮೌನವಹಿಸಿದ್ದನ್ನು ಕಂಡ ಅವಳು ತಾನೇನಾದರೂ ಆಡಬಾರದ ಮಾತನ್ನು ಆಡಿದ್ದೇನಾ ಅಂದುಕೊಂಡಳು. ಕಾರು ವೇಗವಾಗಿ ಓಡುತ್ತಿತ್ತು.

"ನಿಮಗೆಷ್ಟು ಸಂಬಳ ಬರುತ್ತದೆ'' ಯೋಚಿಸುತ್ತಲೇ ಕೇಳಿದ ಅವಳನ್ನು. ಅವಳು ನಕ್ಕಳು.

"ಹೆಂಗಸರ ಸಂಬಳ ಕೇಳಬಾರದೆಂದೇನೂ ಇಲ್ಲವಲ್ಲಾ ಎಂದು ಹೇಳುತ್ತಿದ್ದೇನೆ...ಎಲ್ಲಾ ಹಿಡಿದು ಎರಡು ಸಾವಿರ''

"ಅಷ್ಟೇನಾ'' ಎಂಬ ಮಾತು ನಾಲಗೆಯ ತುದಿಯವರೆಗೂ ಬಂತು. ಆ ಮಾತು ಹೊರಬಿದ್ದಿದ್ದರೆ ಬಹುಶಃ ಬದುಕೆಲ್ಲಾ ನೋವನ್ನು ಅನುಭವಿಸುತ್ತಿದ್ದನೇನೋ...ಎರಡು ಸಾವಿರ !! ಪ್ರಾಣವನ್ನು ಪಣವಿಟ್ಟು ಬುಲೆಟ್‌ಗಳ ನಡುವೆ ಅವಳು ಓಡಿದ್ದು ನೆನಪಿಗೆ ಬಂತು. ಕೇವಲ ಎರಡು ಸಾವಿರ ಸಂಬಳಕ್ಕಾಗಿ!!! ಸ್ಟಾರ್ ಹೋಟೆಲ್ಲುಗಳಲ್ಲಿ ತನ್ನ ಸ್ನೇಹಿತರೊಡನೆ ಒಂದು ಸಂಜೆ ಮಾಡುವ ಖರ್ಚು ಒಂದು ವೇಳೆ 'ಅಂತಿಮ ಹೋರಾಟ' ನಾಟಕ ಖುಷಿಕೊಟ್ಟ ದಿನ ಸ್ನೇಹಿತರೂಡನೆ ಹೋಟೆಲಿನಲ್ಲಿ ಖರ್ಚು ಮಾಡುವಷ್ಟು ಹಣ ! ! !

"ನನ್ನ ಸಂಬಳವನ್ನು ಏಕೆ ಕೇಳಿದಿರಿ ?" ನಗುತ್ತಲೇ ಕೇಳಿದಳು.

"ನೀವೇನೇನು ಮಾಡಬೇಕು ? ಐಮೀನ್ ನಿಮ್ಮ ಕರ್ತವ್ಯ...?"

"ಅಪರಾಧಿಗಳನ್ನು ಹಿಡಿಯಲು ವಿವಿಧ ರೀತಿಯ ವೇಷಗಳನ್ನು ಹಾಕುವುದು."

"ನೀವೂ ವೇಷ ಹಾಕುತ್ತೀರಾ ?"

''ಯಾಕೆ ? ಹಾಕಬಾರದಾ !''

''ಡಿಟೆಕ್ಟಿವ್‌ಗಳು ಕಾದಂಬರಿಗಳಲ್ಲಿ ಮಾರುವೇಷಗಳನ್ನು ಹಾಕಿದರೆ ಓದಲು, ನಂಬಲು ಸಾಧ್ಯವಾಗಲೀ ಹೆಂಗಸರು ಎಂತಹ ಸಿಬಿಐನವರಾದರೂ

ಮಾರುವೇಷ ಹಾಕಿಕೊಂಡರೆ ಕಂಡುಹಿಡಿಯಲಾರರಾ ಅಪರಾಧಿಗಳು ?"

"ಫಿಜಿಕಲ್ ಥೆರಪಿ, ವಾಯ್ಸ್ ಮಾಡ್ಯುಲೇಷನ್ ಥೆರಪಿಗಳಿರುತ್ತವೆ. ತುಂಬಾ ಸುಲಭವಾಗಿ ಬದಲಾಗಬಹುದು."

"ನನಗೆ ನಂಬುವುದಕ್ಕೇ ಆಗುತ್ತಿಲ್ಲ''

''ಅದರ ಬಗ್ಗೆ ಆಮೇಲೆ ಮಾತನಾಡಿಕೊಳ್ಳೋಣವಾಗಲೀ ಆ ಬಲಗಡೆ ಬಿಲ್ಡಿಂಗ್ ಕಡೆ ತಿರುಗಿಸಿ. ಅದೇ ನಮ್ಮನೆ."

ಕಾರು ತೆರೆದಿದ್ದ ಗೇಟಿನೊಳಕ್ಕೆ ನುಗ್ಗಿ ಪೋರ್ಟಿಕೋದಲ್ಲಿ ನಿಂತಿತು. ''ಬನ್ನಿ ಟೀ ಕುಡಿದು ಹೋಗುವಿರಂತೆ.''

ಎರಡನೆ ಸಲ ಕರೆಸಿಕೊಳ್ಳದೆ ಅವನು ಕಾರಿನಿಂದ ಇಳಿದ. ಅವಳಲ್ಲಿ ಯಾವುದೋ ಆಕರ್ಷಣೆ ಅವನಿಗೆ ಪರಿಮಳದಂತನ್ನಿಸುತ್ತಿತ್ತು. ಅದು ಪ್ರೀತಿಯಾ ! ಅಲ್ಲ...ಪ್ರೀತಿ ಕುರುಡು. ಅವಳ ಸಾಮಿಪ್ಯದಲ್ಲಿ ಅವನ ಮನೋನೇತ್ರಗಳು ತೆರೆದು ಕೊಳ್ಳುವುದನ್ನು ಗಮನಿಸಿದ. ಇಲ್ಲವೇ ಅದು ಗೌರವವಾ ? ಅಲ್ಲ. ಅವಳು ಅವನಿಗಿಂತಲೂ ಕಿರಿಯಳು, ನಾಜೂಕಿನವಳು, ಇಲ್ಲವೇ ಗೌರವವೇ? ಅಲ್ಲ...... ಉಹ್ಞೂ ...ಆಗಿರಬಹುದು. ಆದರೆ ಅದು ನಿಶ್ಚಿತವಾಗಿಯೂ ಹೂಗಳಿಂದ ಪೂಜಿಸಬೇಕಾದ ಭಕ್ತಿಯಲ್ಲ. ಮನ್ಮಥ ಕೂಡಾ ಸ್ವಲ್ಪ ಸಹಾಯ ಮಾಡಬೇಕು.

ಅವರಿಬ್ಬರೂ ಒಳಗೆ ಹೋಗುತ್ತಿದ್ದಾಗ ಒಬ್ಬ ವಯಸ್ಸಾದ ವ್ಯಕ್ತಿ ಬಂದರು. ''ನಮ್ಮ ತಂದೆಯವರು...'' ಅವಳು ಪರಿಚಯ ಮಾಡಿಸಿದಳು. ಅವನು ನಿಶ್ಚೇತನಾಗಿ ನೋಡಿದ. ಗಾಲಿಯ ಕುರ್ಚಿಯಲ್ಲಿ ಮುಂದಕ್ಕೆ ಬರುತ್ತಾ ಕೈಚಾಚಿದರು ಆತ.

"ಗ್ಲಾಡ್ ಟು ಮೀಟ್ ಯು'' ಪ್ರತಾಪರಾವ್ ಕೈಚಾಚಿದರು.

"ಕೂತ್ಕೊಳ್ಳಿ. ಈಗ್ಲೆ ಬಂದೆ'' ಎನ್ನುತ್ತಾ ಅವಳು ಒಳಗೆ ಹೋದಳು,

''ಏನು ಮಾಡ್ತಿದೀರಿ" ಎಂದು ಕೇಳಿದರು. ಅವನಿಗೆ ಮುಜುಗರವಾಯಿತು. ಇದುವರೆವಿಗೂ ಅವನಿಗೆ ಹಾಗನ್ನಿಸುತ್ತಿರಲಿಲ್ಲ. ಮಾತು ಮರೆಸಲು, "ಯುದ್ಧದಲ್ಲಿ ಹೋಯಿತಾ ನಿಮ್ಮ ಕಾಲುಗಳು?" ಎಂದು ಕೇಳಿದ.

''ಇಲ್ಲ. ವೈಯಕ್ತಿಕ ಜಗಳದಲ್ಲಿ'' ಉಳಿದ ವಿಷಯಗಳನ್ನು ಹೇಳಲಿಷ್ಟವಿಲ್ಲದಂತೆ, ''ಪ್ರವಲ್ಲಿಕ ಬರ್ತಾಳೆ. ನಾನು ಸ್ವಲ್ಪ ಗಾರ್ಡನ್ ಕಡೆ ಹೋಗಿ ಬರ್ತೀನಿ" ಎಂದು ಹೊರಟುಹೋದರು ಆತ. ವಿಹಾರಿಯೊಬ್ಬನೇ ರೂಮಿನಲ್ಲುಳಿದ.

ಆಗ ಗಮನಿಸಿದ ಆ ಕೋಣೆಯ ಪ್ರತ್ಯೇಕತೆಯನ್ನು !

ಆ ಕೋಣೆಯಲ್ಲಿ ದೇವರ ಫೋಟೋಗಳಾಗಲೀ, ದೇವರ ವಿಗ್ರಹಗಳಾಗಲೀ ಇರಲಿಲ್ಲ.

ಒಂದು ಗೋಡೆಗೆ ಆಳೆತ್ತರದ ಭಾರತ ದೇಶದ ನಕ್ಷೆಯಿತ್ತು. ಮಧ್ಯದಲ್ಲಿ

ಬಾವುಟ. ಮತ್ತೊಂದೆಡೆಗೆ ಭಾರತಮಾತೆಯ ಚಿತ್ರ...ಉಳಿದಂತೆ ದೇಶದ ನಾಯಕರ ಚಿತ್ರಗಳು. ಅವನಿಗೆ ಏನೂ ತೋಚಲಿಲ್ಲ. ಅಡಿಗೆಯವನು ಟೀ ತಂದುಕೊಟ್ಟ. ಅದನ್ನು ಕುಡಿಯುತ್ತಾ ಟೇಬಲ್ಲಿನ ಮೇಲಿದ್ದ ಟೇಪ್‌ರೆಕಾರ್ಡರನ್ನು ಆನ್‌ಮಾಡಿದ.

"...ಸಾರೇ ಜಹಾಸೆ ಅಚ್ಛಾ ಹಿಂದೂಸ್ತಾನ್ ಹಮಾರಾ..." ಹಾಡು ಬಂತು. ಅದನ್ನು ಬದಲಾಯಿಸಿ ಅಲ್ಲೇ ಇದ್ದ ಮತ್ತೊಂದು ಕ್ಯಾಸೆಟ್ ಹಾಕಿದ. "ಭಾರತೀಯರು ನಾವು ಎಂದೆಂದು ಒಂದೇ...'' ಬಂತು.

"ನಮ್ಮ ಮನೆಯಲ್ಲಿ ನಿಮಗಿಷ್ಟವಾದ ಹಾಡುಗಳು ಕೇಳಿಸುವುದಿಲ್ಲ'' ಒಂದು ಗಂಡು ಧ್ವನಿ ಒಳಗಿನಿಂದ ಹೇಳುತ್ತಾ ಹೊರಬಂತು.

"ನನ್ನ ಹೆಸರು ಪ್ರಶಾಂತ್. ನಿಮ್ಮ ಗೆಳತಿ ಪ್ರವಲ್ಲಿಕಳ ಗಂಡನಾಗುವ ವ್ಯಕ್ತಿ," ಕೈ ಚಾಚುತ್ತಾ ಹೇಳಿದ.

ಅದು ಒಂದು ಲಕ್ಷ ಓಲ್ಟ್ ಷಾಕಲ್ಲ. ಸಣ್ಣನೆಯ ಹೃದಯದ ಅಲುಗಾಟ ಅಷ್ಟೆ. ಯೋಚನೆಯನ್ನು ಹೊತ್ತುತರುವ ಪ್ರಳಯಕಾಲದ ಝಂಝೂಕಾರದ ಬಿರುಗಾಳಿಯಲ್ಲ. ಒಬ್ಬಂಟಿತನವನ್ನು ಮತ್ತಷ್ಟು ಭೀಕರವಾಗಿಸುವ ಸುಳಿಗಾಳಿ. ಅವನು ಅನ್ಯ ಮನಸ್ಕನಾಗಿಯೇ ಪ್ರಶಾಂತನೊಡನೆ ಮಾತನಾಡಿದ,

''ಅವಳೀಗ ಬರ್ತಾಳೆ ಕುಳಿತಿರಿ. ನನಗೆ ಸ್ವಲ್ಪ ಕೆಲಸ ಇದೆ ಬರ್ತೀನಿ" ಎನ್ನುತ್ತಾ ಅವನು ಹೊರಟ ಸ್ವಲ್ಪ ಹೊತ್ತಿಗೆ ಪ್ರವಲ್ಲಿಕ ಎರಡು ಕಪ್ ಟೀಯೊಡನೆ ಬಂದಳು. ಈಗವಳು ಸೀರೆ ಉಟ್ಟು ಬಂದಿದ್ದಳು. ಮುಂಚೆ ತೊಟ್ಟಿದ್ದ ಮ್ಯಾಕ್ಸಿಯನ್ನು ಬದಲಾಯಿಸಿದ್ದಳು.

"ನಮ್ಮ ಭಾವ ನಿಮ್ಮನ್ನ ಸಕತ್ ಬೋರ್ ಹೊಡಿಸಿರಬೇಕು .....'' ನಗುತ್ತಾ ಕೇಳಿದಳು.

"ಅಂತದ್ದೇನಿಲ್ಲ-"

''ಸೈನ್ಯದಲ್ಲಿದ್ದಾನೆ. ಶ್ರೋತೃ ಸಿಕ್ಕರೆ ಸಾಕು...ಯುದ್ಧದ ಬಗ್ಗೆಯೇ ಮಾತನಾಡುತ್ತಿರುತ್ತಾನೆ. ನಮ್ಮ ತಂದೆಗೆ ಅವನೆಂದರೆ ತುಂಬಾ ಅಭಿಮಾನ.''

"ಮತ್ತೆ ನಿಮಗೆ?" ಚಕ್ಕನೆ ನಿಲ್ಲಿಸಿ, ಹಾಗೆ ಕೇಳಿದ್ದಕ್ಕೆ ಕೂಡಲೆ ನಾಲಿಗೆ ಕಚ್ಚಿಕೊಂಡ. ಅವಳು ಅದನ್ನು ಗಮನಿಸಿರಲಿಲ್ಲ.

''ನನಗೂ ಇಷ್ಟವೇ ! ಇಷ್ಟರಲ್ಲಿಯೇ ನಮ್ಮ ಮದುವೆ ನಡೆಯಲಿದೆ. ಅದೂ ಅಲ್ಲದೆ ಒಂದು ವೇಳೆ ನನಗೆ ಬೇರೆ ಅಭಿಪ್ರಾಯವಿದೆಯೆಂದು ತಿಳಿದರೆ ಕೂಡಲೇ ರೈಫಲ್‌ನಿಂದ ಮೊದಲು ನನ್ನನ್ನು ಮುಗಿಸಿ, ನಂತರ ಆತ್ಮಹತ್ಯೆ ಮಾಡಿಕೊಳ್ಳುತ್ತಾನಂತೆ," ನಕ್ಕು ಹೇಳಿದಳು. ಆ ನಗುವಿನಲ್ಲಿ ಹುಡುಗಾಟ, ಚೇಷ್ಟೆ ಮನೆಮಾಡಿದ್ದವು. ಆದರೆ ಏಕೋ ವಿಹಾರಿ ನಂತರ ಅಷ್ಟು ಫ್ರೀಯಾಗಿರಲಾರದೆ ಹೋದ.

ಅವಳು ತುಂಬಾ ಉತ್ಸಾಹದಿಂದ ಕೇಳುತ್ತಿದ್ದ ಪ್ರಶ್ನೆಗಳಿಗೆ ಅವನು ಅನ್ಯ ಮನಸ್ಕನಾಗಿಯೇ ಉತ್ತರಿಸುತ್ತಿದ್ದ.

"ನಿಮ್ಮ ಆಸ್ತಿ, ವ್ಯವಹಾರಗಳನ್ನು ಯಾರು ನೋಡಿಕೊಳ್ಳುತ್ತಿದ್ದಾರೆ?'' ಕೇಳಿದಳು.

"ನಮ್ಮ ಗುಮಾಸ್ತರು"

ಅವಳು ಆಶ್ಚರ್ಯದಿಂದ, "ಅವರೆಲ್ಲಾ ಸರಿಯಾಗಿ ನೋಡಿಕೊಳ್ಳುತ್ತಾರಾ? ಎಂದು ಕೇಳಿದಳು.

"ಏನೋ ನೋಡಿಕೊಳ್ಳುತ್ತಾರೆ" ಎಂದವನೇ ಮೇಲೆದ್ದು, ಕೈಜೋಡಿಸಿ, "ನಮಸ್ಕಾರ ಬರ್ತೀನಿ" ಅಂದ.

"ಅಷ್ಟು ಬೇಗ...?'' ಅಪ್ರಯತ್ನವಾಗಿ ಅಂದಳು. ಅವನು ಅವಳೆಡೆಗೆ ಅಪ್ರತಿಭನಾಗಿ ನೋಡಿದ. ಅವಳು ಕಣ್ಣುಗಳನ್ನು ನೆಲಕ್ಕಿಳಿಸಿದಳು. ಅವನು ಕಾರಿನ ಬಳಿಗೆ ಬಂದು ಡೋರ್ ತೆರೆದ.

ಅವಳು ಹೇಳಿದಳು, ''ಮೊನ್ನೆಯೇ ನಿಮಗೊಂದು ಥ್ಯಾಂಕ್ಸ್ ಹೇಳಬೇಕಾಗಿತ್ತು, ಮರೆತಿದ್ದೆ."

"ಯಾಕೆ ?" ಆಶ್ಚರ್ಯದಿಂದ ಕೇಳಿದ.

''ನಮಗಂದು ಮಾಡಿದ ಸಹಾಯಕ್ಕಾಗಿ''.

''ಆ ದಿನವೇ ಹೇಳಿದ್ದಿರಲ್ಲಾ"

"ಪಕ್ಕದ ಮನೆಗೆ ಕಳ್ಳರು ನುಗ್ಗಿದ್ದರೂ ತುಂಬಾ ಜನ ತಲೆ ಕೆಡಿಸಿಕೊಳ್ಳುವುದಿಲ್ಲ. ಅಂತಹದ್ದರಲ್ಲಿ ನೀವು ನಿಮ್ಮ ಪ್ರಾಣವನ್ನು ಪಣವಿಟ್ಟು ನಮ್ಮನ್ನು ರಕ್ಷಿಸಿದಿರಿ. ಆ ಸೆನ್ಸ್ ಆಫ್ ರೆಸ್ಪಾನ್ಸಿಬಿಲಿಟಿ ಮನುಷ್ಯರಿಗೆ–ಮುಖ್ಯವಾಗಿ ಭಾರತೀಯರಿಗೆ ತುಂಬಾ ಕಡಿಮೆ. ಅದಕ್ಕೆ ನಿಮಗೆ ಮತ್ತೊಂದು ಸಲ ಹೇಳಬೇಕೆಂದಿದ್ದೆ. ಅದೃಷ್ಟವಶಾತ್ ನೀವು ಇವತ್ತು ಕಂಡಿರಿ. ಮಾನವನಾಗಿ ಹುಟ್ಟಿದಮೇಲೆ ಒಂದು ಪ್ರತ್ಯೇಕ ಗುಣವನ್ನು ಬೆಳಸಿಕೊಂಡಿರುವವರೆಂದರೆ ನನಗಿಷ್ಟ. ನೆರವೇರದಿರದೇ ಇದ್ದರೂ ಆ ಪ್ರಯತ್ನ ಇರಬೇಕು. ಹೋಗಿ ಬನ್ನೀ ವಿಹಾರಿಯವರೇ ಬ್ಯಾ"

* * * *

ಸಾಯಂಕಾಲ ನಾಲ್ಕೂವರೆಯಾಗಿತ್ತು.

ಸುನಾದಮಾಲ ಬಸ್‌ಸ್ಟಾಪಿನಲ್ಲಿ ನಿಂತಿದ್ದಳು. ಅರ್ಧಗಂಟೆಯಾದರೂ ಸ್ಕೂಲ್ ಬಸ್ ಬರಲಿಲ್ಲ. ಅವಳು ಕಂಗಾಲಾಗಿದ್ದಳು. ಒಂದು ವೇಳೆ ತನಗಿಂತಲೂ

ಮುಂಚೆ ಬಸ್ಸಿನಲ್ಲಿ ಬಂದು ಮನೆ! ಹೊರಟು ಹೋಗಿರಬಹುದೇ ಅಂದುಕೊಂಡಳು. ಸ್ವಲ್ಪ ಹೊತ್ತು ಕಾದು ಮನೆಗೆ ಬಂದಳು.

"ಅದೇಕಮ್ಮಾ, ಒಬ್ಬಳೇ ಬಂದಿ ?" ಅಜ್ಜಿ ಕೇಳಿದಳು. ಸುನಾದ ಬಾಡಿದ ಮುಖದೊಡನೆ "ವಿಷ್ಣು ಬರಲಿಲ್ಲವಾ ?" ಎಂದು ಕೇಳಿದಳು.

"ಬರಲಿಲ್ಲವಲ್ಲಾ"

ಅವಳು ಗಿರ್ರನೆ ಹಿಂತಿರುಗಿದಳು. ಅಜ್ಜಿ ಹಿಂದಿನಿಂದ, "ಅದ್ಯಾಕೆ ಅಷ್ಟೊಂದು ಕಂಗಾಲು?" ಎಂದು ಕೇಳುತ್ತಿದ್ದರೂ ಕೇಳಿಸಿಕೊಳ್ಳದೆ ಬಸ್‌ಸ್ಟಾಪ್ ಬಳಿಗೆ ಓಡುತ್ತಾ ಬಂದಳು.

ಆಗಲೇ ಅಲ್ಲಿ ವಿನೀಲನ ತಾಯಿ ಇದ್ದಳು. ಆಕೆ ಕೂಡಾ ಗಾಬರಿಯಾಗಿದ್ದಳು. ಸಮಯ ಐದೂವರೆಯಾಗುತ್ತಾ ಬಂತು. ಮತ್ತೆ ಕಾಲುಗಂಟೆ ಕಾದು ಇಬ್ಬರೂ ಆಟೋದಲ್ಲಿ ಸ್ಕೂಲ್ ಬಳಿಗೆ ಬಂದರು.

ಸ್ಕೂಲಿನ ಕಂಪೌಂಡ್ ಬಳಿ ಪೋಲೀಸರನ್ನು ನೋಡುತ್ತಿದ್ದಂತೆಯೇ ಸುನಾದ ಮಾಲಳ ಹೃದಯವೇ ನಿಂತಂತಾಯಿತು.

ಅಲ್ಲಿ ಹತ್ತು ಜನರ ತನಕ ಪೋಲೀಸರಿದ್ದರು. ಆಗಲೇ ಇಪ್ಪತ್ತೈದಕ್ಕೂ ಹೆಚ್ಚು ತಂದೆ ತಾಯಂದಿರು ಅಲ್ಲಿ ಸೇರಿದ್ದರು. ಎಲ್ಲಾ ಗಲಿಬಿಲಿಗೊಂಡಿದ್ದಾರೆ. ಪ್ರಿನ್ಸಿಪಾಲ್ ಹೇಳುತ್ತಿದ್ದುದನ್ನು ಯಾರೂ ಕೇಳಿಸಿಕೊಳ್ಳುತ್ತಿರಲಿಲ್ಲ. ಯಾರೋ ಒಬ್ಬ ತಂದೆ ಜೋರಾಗಿ ಅಳುತ್ತಿದ್ದ. ಏನು ನಡೆಯಿತೆಂದು ಆತುರದಿಂದ ಕೇಳಿದಳು ಸುನಾದಮಾಲ. ವಿಷಯ ತಿಳಿದು ಅವಳ ಶರೀರದಲ್ಲಿದ್ದ ಶಕ್ತಿಯೆಲ್ಲಾ ಒಮ್ಮೆಗೇ ಬತ್ತಿದಂತಾಗಿ ಪಕ್ಕದಲ್ಲಿದ್ದ ರೈಲಿಂಗನ್ನು ಬಿಗಿಯಾಗಿ ಹಿಡಿದು ಕಣ್ಣುಮುಚ್ಚಿದಳು.

ಬೆಳಿಗ್ಗೆ ಮಕ್ಕಳನ್ನು ಕರೆತಂದ ಬಸ್ ಸ್ಕೂಲ್‌ವರೆಗೂ ಬರಲಿಲ್ಲ. ಏನಾಯಿತೆಂದು ತಿಳಿಯಲಿಲ್ಲ !!

ವಿನೀಲನ ತಾಯಿ ಅಳುತ್ತಿದ್ದಾಳೆ. ಮನೆಯಲ್ಲಿ ಹಾಲಿನ ಮಧ್ಯೆ ಇರಿಸಿದ ಕೇಕನ್ನೂ, ಬರ್ತ್‌ಡೇ ಪಾರ್ಟಿಗೆ ಬಂದಿರಬಹುದಾದ ಅತಿಥಿಗಳನ್ನೂ ನೆನೆಸಿಕೊಂಡು, ಮಗ ಏನಾಗಿದ್ದಾನೋ ತಿಳಿಯದೆ ಬಿಕ್ಕಿ ಬಿಕ್ಕಿ ಅಳುತ್ತಿದ್ದಾಳೆ. ಹಸಿವಾದರೂ ಮನೆಯಲ್ಲಿ ಬಾಯಿಬಿಟ್ಟು ಕೇಳದವನು. ರಾತ್ರಿ ಹತ್ತು ಗಂಟೆಯವರೆಗೂ ಕನ್ನಡಕ ಸರಿಪಡಿಸಿಕೊಳ್ಳುತ್ತಾ ಟೇಬಲ್ ಲ್ಯಾಂಪ್ ಮುಂದೆ ಕುಳಿತು ಓದುತ್ತಿದ್ದವನು, ಕ್ಲಾಸಿಗೆ ಫಸ್ಟ್ ಬಂದದ್ದರಿಂದ ಟೀಚರ್ ಕೊಟ್ಟ ಚಾಕ್ಲೇಟ್‌ಗಳನ್ನು ಮನೆಗೆ ತಂದು ತಾಯಿಗೆ ತೋರಿಸದೆ ತಿನ್ನದವನು, ಒಬ್ಬನೇ ಒಬ್ಬ ಮಗನನ್ನು ನೆನಸಿಕೊಂಡು ಅವಳು ಅಳುತ್ತಿದ್ದಳು. ಅವಳನ್ನು ಸಮಾಧಾನಪಡಿಸುವವರೇ ಇರಲಿಲ್ಲ. ಅಲ್ಲಿ

ಎಲ್ಲರ ಪರಿಸ್ಥಿತಿಯೂ ಹಾಗೆಯೇ ಇತ್ತು.

* * * *

ಮುಖ್ಯಮಂತ್ರಿಗಳ ಟೇಬಲ್ ಮೇಲಿದ್ದ ಫೋನ್ ಟ್ರಿಣ್‌ಗುಟ್ಟಿತು. ಅದು ಅವರ ಪರ್ಸನಲ್ ನಂಬರ್. ಪಿ. ಎ., ಸೆಕ್ರೆಟರಿಗಳಿಗೆ ಕೇಳಿಸದೆ ಅವರಿಗೇ ನೇರವಾಗಿ ಬರುತ್ತದೆ.

ಅವರು ರಿಸೀವರ್ ಎತ್ತಿ, "ಹಲೋ" ಅಂದರು.

"ಈ ದಿನ ಬೆಳಿಗ್ಗೆ ಗಾಡ್ ಫಾದರ್ ಸ್ಕೂಲಿನ ಬಸ್ ಪತ್ತೆಯಿಲ್ಲ. ಈ ಸುದ್ದಿ ನಿಮ್ಮವರೆಗೂ ಬಂದಿದೆಯಾ?"

"ಯಾರು ನೀವು ?"

"ಆ ಬಸ್ಸನ್ನು ಒಯ್ದವರು."

ಅವರ ಹಣೆಯಲ್ಲಿ ಗೆರೆಗಳು ಮೂಡಿದವು. ಆವೇಶವನ್ನು ಅತಿಕಷ್ಟದಿಂದ ತಡೆಮಕೊಳ್ಳುತ್ತಾ "ನಿಮಗೇನು ಬೇಕು ?" ಎಂದು ಕೇಳಿದರು.

"ಸದ್ಯಕ್ಕೆ ಆ ಮಕ್ಕಳೆಲ್ಲಾ ನಮ್ಮ ಬಳಿಯೇ ಇದ್ದಾರೆ. ಅಷ್ಟು ಮಕ್ಕಳನ್ನು ಹೆಚ್ಚು ಕಾಲ ಒಂದೆಡೆಯೇ ಇರಿಸಿಕೊಳ್ಳುವುದು ಕಷ್ಟ: ಅವರಿಗೆ ಊಟ, ತಿಂಡಿ''

ಮುಖ್ಯಮಂತ್ರಿಗಳಿಗೆ ಅರ್ಥವಾಯಿತು.

''ನಿಮಗೆಷ್ಟು ಬೇಕು ?" ಪಕ್ಕದಲ್ಲಿದ್ದ ಬಟನ್ ಒತ್ತುತ್ತಾ ಕೇಳಿದರು. ಪಿ. ಎ. ಓಡೋಡಿ ಬಂದ. ಕಾಗದದ ಮೇಲೆ 'ಟ್ರ್ಯಾಪ್ ದಿಸ್ ಫೋನ್' ಎಂದು ಬರೆದರು. ಪಿ. ಎ. ಅದೇ ವೇಗದಿಂದ ವಾಪಸ್ಸಾದ.

"ಹೇಳಿ, ನಿಮಗೆಷ್ಟು ಬೇಕು ?"

"ನಮಗೆ ಹಣದ ಅವಶ್ಯಕತೆಯಿಲ್ಲ ಮುಖ್ಯ ಮಂತ್ರಿಯವರೇ. ''

"ಮತ್ತೆ ?"

''ನಾಳೆ ಸಂಜೆಯೊಳಗಾಗಿ ನೀವು ರಾಜೀನಾಮೆ ನೀಡಬೇಕು ಇಲ್ಲದಿದ್ದರೆ ನಾಳೆ ಸಂಜೆಯಿಂದ ದಿನಕ್ಕೊಬ್ಬ ಹುಡುಗರನ್ನು ಕೊಲ್ಲುತ್ತೇವೆ...ಹಾಗೆ ಕೊಂದವರನ್ನು ನಿಮ್ಮ ಅಸೆಂಬ್ಲಿ ಹಾಲಿನ ಮುಂದೆಯೇ ಹಾಕುತ್ತೇವೆ."

ಫೋನ್ ಕಟ್ ಆಯಿತು.

# 6

ಆ ರಾತ್ರಿ ಹತ್ತು ಗಂಟೆಯ ವೇಳೆಯಲ್ಲಿ ವಿಹಾರಿಯ ಮನೆಗೆ ಇನ್ನೂರು ಗಜ ದೂರದಲ್ಲಿದ್ದ ಆಫೀಸಿನ ಪ್ರಾಂಗಣದಲ್ಲಿ ಗಡಿಬಿಡಿಯ ವಾತಾವರಣ. ಇಬ್ಬರು ಗುಮಾಸ್ತರು, ಮ್ಯಾನೇಜರು. ಟೈಪಿಸ್ಟ್ ಕಂಗಾಲಾಗಿ ಅತ್ತಿಂದಿತ್ತ ತಿರುಗುತ್ತಾ ಲೆಡ್ಜರ್ ಪುಸ್ತಕಗಳನ್ನು, ಫೈಲುಗಳನ್ನು ಒಳಗೆ ತೆಗೆದುಕೊಂಡು ಹೋಗುತ್ತಿದ್ದರು. ಸುಮಾರು ಆರು ಗಂಟೆಗಳಿಂದಲೂ ವಿಹಾರಿ ಆ ಕುರ್ಚಿಯಿಂದ ಮೇಲೇಳಲಿಲ್ಲ. ಅವನಿಗೆ ಆ ಕೆಲಸ ಹೊಸದು. ಆದರೆ ತುಂಬಾ ಬೇಸರವೇನೂ ಆಗಲಿಲ್ಲ ಅವನಿಗೆ. ನಾಟಕದ ರಿಹರ್ಸಲ್‌ಗೆ ಹೋಗುತ್ತಿದ್ದಾಗ ಹೀಗೆ ಗಂಟೆಗಟ್ಟಲೆ ಕುಳಿತುಕೊಳ್ಳುವ ಅಭ್ಯಾಸವಿತ್ತು ಅವನಿಗೆ. ಆದರೆ ಈಗವನು ಮಾಡುತ್ತಿದ್ದುದು ತನ್ನ ಬದುಕಿನಲ್ಲಿ ಇದುವರೆವಿಗೂ ಮಾಡದ ಕೆಲಸವೊಂದನ್ನು!

ಮೊದಲ ಸಲ ತನ್ನ ಆಸ್ತಿಯ ವಿವರಗಳನ್ನು ಪರಿಶೀಲಿಸುವುದು...! ಸುಮಾರು ೬ ಗಂಟೆಗಳ ಕಾಲ ಎಲ್ಲಾ ನೋಡಿದ ನಂತರ ಅವನಿಗೊಂದು ಅಂದಾಜು ಸಿಕ್ಕಿತು. ಅನಂತರ ಲೆಕ್ಕವನ್ನು ಪರಿಶೀಲಿಸಲು ಆರಂಭಿಸಿದ. ಲೆಡ್ಜರ್‌ಗಳು, ಡೇ ಬುಕ್ಕುಗಳು, ಟ್ರಯಲ್ ಬ್ಯಾಲನ್ಸ್‌ಗಳು, ಬ್ಯಾಲೆನ್ಸ್ ಷೀಟುಗಳು- ಒಂದು ಪದ್ಧತಿಯಂತೆ ನೋಡುತ್ತಾ ಬಂದ. ಬೆಳಗಿನಜಾವದ ವರೆಗೂ ಹಾಗೆಯೇ ನೋಡುತ್ತಿದ್ದ.

ವರ್ಧನಮ್ಮ ಬೆಳಗಾಗುತ್ತಿದ್ದಂತೆಯೇ ಎದ್ದು ಮಗನಿನ್ನೂ ಔಟ್‌ಹೌಸಿನಲ್ಲೇ ಇದ್ದಾನೆಂದು ತಿಳಿದು ಕಂಗಾಲಾಗಿ ಅಲ್ಲಿಗೆ ಬಂದಳು. ಪುಸ್ತಕಗಳ ಹಿಂದೆ ವಿಹಾರಿಯ ಮುಖ ಕಾಣಿಸುತ್ತಿರಲಿಲ್ಲ. ಪಕ್ಕದಲ್ಲೇ ಐದಾರು ಟೀ ಕಪ್ಪುಗಳಿದ್ದವು. ಅವಳಿಗೆ ಆ ದೃಶ್ಯ ಅಪೂರ್ವವಾಗಿ ಕಂಡಿತು. ಮೊದಲನೇ ಸಲ ಮಗನನ್ನು ಆ ರೀತಿ ನೋಡುತ್ತಿರುವುದು! ಆಕೆಯ ಕಣ್ಣು ಅಶ್ರುಪೂರಿತವಾದವು.

ಅಷ್ಟರಲ್ಲಿ ಅಂತಿಮ ಪುಸ್ತಕದಲ್ಲಿ ಪೆನ್ಸಿಲ್‌ನಿಂದ ಲೆಕ್ಕ ಹಾಕುತ್ತಾ ತಲೆ ಎತ್ತಿ ಅಷ್ಟು ಬೇಗ ತನ್ನ ತಾಯಿ ಬಂದುದನ್ನು ಕಂಡು ಆಶ್ಚರ್ಯಪಟ್ಟ. ಕೂಡಲೇ ತನ್ನ ಮೂಡ್‌ಗೆ ಬಂದು, "ಗೌರವಾನ್ವಿತರಾದ ನಮ್ಮ ಮ್ಯಾನೇಜರ್ ಸಾಹೇಬರು ಈಗೊಂದು ವರ್ಷದಲ್ಲಿಯೇ ನಾಲ್ಕು ಲಕ್ಷ ಇಪ್ಪತ್ತೈದು ಸಾವಿರದ ವರೆಗೂ ತಿಂದು ಹಾಕಿದ್ದಾರಮ್ಮ" ಎಂದು ಹೇಳಿದ.

ಆಕೆ ಮಾತನಾಡಲಿಲ್ಲ.!'

ಅವನೇ ಮುಂದುವರೆಸಿದ—"ಇದು ಈ ವರ್ಷದ್ದು. ಹಿಂದಿನ ಹತ್ತು ವರ್ಷಗಳಲ್ಲಿ ಅದೆಷ್ಟು ನಂಗಿದ್ದಾನೆಂದು ತಿಳಿಯಲು ಇನ್ನೊಂದು ತಿಂಗಳು ಹಿಡಿಯುತ್ತದೆ. ಆ ಸಂಖ್ಯೆಯನ್ನು ತಿಳಿದುಕೊಂಡರೆ ಬಹುಶಃ ನಮ್ಮಿಬ್ಬರ ಹೃದಯವೇ ನಿಂತುಹೋಗಬಹುದು.

ವರ್ಧನಮ್ಮ ನಕ್ಕು, "ಹೃದಯ ನಿಂತರೂ ಆಶ್ಚರ್ಯವಿಲ್ಲವಾಗಲೀ, ಅದು ಆಸ್ತಿ ಹೋಯಿತೆಂದು ಅಲ್ಲವೋ, ಇಷ್ಟು ದಿನಕ್ಕೆ ಮಗ ಪ್ರಯೋಜನಕ್ಕೆ ಬಂದನಲ್ಲ ಎಂದು ಸಂತೋಷಕ್ಕೆ" ಅಂದಳು. ಆಕೆ ಹೇಳಿದ್ದು ನಿಜವೇ. ಮಗನ ಬುದ್ಧಿವಂತಿಕೆಯ ಬಗ್ಗೆ ಆಕೆಗೆ ಅನುಮಾನವಿರಲಿಲ್ಲ. ನಾಟಕದ ಹುಚ್ಚಿನಲ್ಲಿ ಹಾಳಾಗುತ್ತಿದ್ದಾನೆಂಬ ಯೋಚನೆ ಅಷ್ಟೆ. ಒಂದು ದಿನ ಇದ್ದಕ್ಕಿದ್ದಂತೆ ಅಂತಹ ಮಗ ರಾತ್ರಿಯೆಲ್ಲಾ ನಿದ್ರೆಕೆಟ್ಟು, ಒಂದು ವರ್ಷದ ಎಲ್ಲಾ ಲೆಕ್ಕಗಳನ್ನು ಪರಿಶೀಲಿಸಿದನೆಂದರೆ ಆಕೆಗೆ ಅದಕ್ಕಿಂತಲೂ ಬೇರೇನು ಬೇಕು?

ಪ್ರತಿ ಮನುಷ್ಯನೂ ಯಾವುದೋ ಒಂದು ವಯಸ್ಸಿನಲ್ಲಿ ಜವಾಬ್ದಾರಿಯನ್ನು ನೆನಪಿಗೆ ತಂದುಕೊಳ್ಳುತ್ತಾನೆ. (ಕೆಲವರು ಸಾಯುವವರೆಗೂ ನೆನಪಿಸಿಕೊಳ್ಳುವುದಿಲ್ಲ. ಅದು ಬೇರೆ ವಿಷಯ). ಹಾಗೆ ನೆನಪು ಮಾಡಿಕೊಂಡ ವ್ಯಕ್ತಿ ಕ್ರಮೇಣ ಅದರಲ್ಲೇ ಲೀನವಾಗುತ್ತಾನೆ. ಆದರೆ ವಿಹಾರಿ ಹೀಗೆ...ಇದ್ದಕ್ಕಿದ್ದಂತೆ...ತಲ್ಲೀನನಾಗಲು ಕಾರಣ ಪ್ರವಲ್ಲಿಕ ಮಾತಾಡಿದ ನಾಲ್ಕೈದು ಮಾತುಗಳು. ಅದು ಸಾಕು...ಇದಕ್ಕೆ ತರ್ಕವಲ್ಲ. ಅವಳ ಮಾತುಗಳು ಅವನ ಹೃದಯವನ್ನು ಸೂಜಿಯಂತೆ ಚುಚ್ಚಿದವು. ಸಾಧಿಸಬೇಕೆಂದು ಕೊಂಡ–ಸಾಧಿಸಿದ.

ಅವನಿಗೆ ಈ ಸಂತೋಷ ತುಂಬಾ ತೃಪ್ತಿ ನೀಡಿತು. ತುಂಬಾ ವಿಚಿತ್ರವಾಗಿ... ಅವನಿಗೆ ಸ್ವಲ್ಪವೂ ಬೇಸರವಾಗಿರಲಿಲ್ಲ. ಬರಹಗಾರನೊಬ್ಬ ತನ್ನ ಬದುಕಿನ ಪ್ರಸಿದ್ಧ ಕಾದಂಬರಿಯೊಂದನ್ನು ಮುಗಿಸಿ 'ಶುಭಂ' ಬರೆದು ಬೆರಳುಗಳ ನೆಟಿಕೆ ಮುರಿಯುವಾಗ ಅವನಿಗಾಗುವ ಸಂತೋಷಕ್ಕೆ ಬೆಲೆ ಕಟ್ಟುವರಾರು? ಅಂತಹ ಸಂತೋಷ ಈ ಸಮಯದಲ್ಲಿ ವಿಹಾರಿಗಾಯಿತು. ಆ ಸಂತೋಷವನ್ನು ಅವನು ಅವಳೊಡನೆ ಹಂಚಿಕೊಳ್ಳಬೇಕೆಂದು ಬಯಸಿದ. ಇದರಲ್ಲಿಯೂ ಆಶ್ಚರ್ಯ ಪಡುವಂತಹದ್ದೇನೂ ಇಲ್ಲ. ಅವಳಿಗೆ ಇಷ್ಟರಲ್ಲೇ ಮದುವೆ ಆಗುತ್ತದೆಂಬ ವಿಷಯ ಗೊತ್ತು. ಆದರೆ ತನ್ನಲ್ಲಾಗುತ್ತಿರುವ ಈ ಪರಿಣಾಮದ ವಿಷಯವನ್ನು ಹೇಳಲು ಬೇರೆ ಕಾರಣಗಳು ಇರಬೇಕಾದ ಅವಶ್ಯಕತೆಯಿಲ್ಲ. ಪ್ರತಿ ಗಂಡಸೂ ಸ್ತ್ರೀಯ ಬಳಿ ಯಾವ ವಯಸ್ಸಿನಲ್ಲಾದರೂ ಕಿರಿಯನೇ. ಚಿಕ್ಕ ಹುಡುಗನೊಬ್ಬ ಕನ್ನಡಿಯಲ್ಲಿ ತನ್ನ ಮುಖ ನೋಡಿಕೊಳ್ಳಲು ಇಷ್ಟಪಡುವಂತೆ ಪ್ರತಿ ಪುರುಷನೂ ತನಗೆ ಸ್ಫೂರ್ತಿ ನೀಡಿದ ಸ್ತ್ರೀಯ ಅಭಿನಂದನಾಪೂರ್ವಕವಾದ ಮುಗುಳ್ನಗೆಯಲ್ಲಿ ತನ್ನ ವಿಜಯವನ್ನು ಕಾಣುತ್ತಿರುತ್ತಾನೆ.

ಆ ಸಂಜೆ ಅವನು ಪ್ರವಲ್ಲಿಕಳ ಆಫೀಸಿಗೆ ಹೋದ. ತುಂಬಾ ಸಣ್ಣದಾದರೂ ಆ ಕೋಣೆ ಸುಂದರವಾಗಿತ್ತು. ವುಡನ್ ಪ್ಯಾನಲ್ಸ್, ರಾಕ್ಸ್, ಎರಡು ಫೋನುಗಳು...ಯಾರೋ ಅನುಭವಸ್ಥ ಹೇಳಿದಂತೆ ಕೋಣೆಯನ್ನು ನೋಡಿ ಅದರಲ್ಲಿ ವಾಸಿಸುವವರನ್ನು ಅಂದಾಜು ಮಾಡಬಹುದು.

ಪ್ರವಲ್ಲಿಕ ಅವನನ್ನು ಕಂಡು ಸಂಭ್ರಮದಿಂದ ಆಹ್ವಾನಿಸಿದಳು. ಹಿಂದಿನ ರಾತ್ರಿ ನಡೆದದ್ದನ್ನು ಅವನು ಹೇಳುತ್ತಿದ್ದಂತೆಯೇ, ಅವಳ ಕಣ್ಣುಗಳು ಅದೊಂದು ರೀತಿಯ ಕಾಂತಿಯುತವಾಗಿ ಮಿಂಚುತ್ತಿದ್ದವು. ಅವನು ಹೇಳಿದ್ದನ್ನೆಲ್ಲಾ ಕೇಳಿದ ನಂತರ, "ಕಂಗ್ರಾಜುಲೇಷನ್ಸ್, ಒಂದು ಲಕ್ಷ ಹೋದದ್ದಕ್ಕಲ್ಲ-ಹೋಗಲಿದ್ದ ಹಲವಾರು ಲಕ್ಷಗಳು ಉಳಿದಿದ್ದಕ್ಕೆ" ಅಂದಳು ನಗುತ್ತಾ.

"ಅದೆಲ್ಲಾ ನೀವು ಮೊನ್ನೆ ಆಡಿದ ಒಂದು ಮಾತಿನ ಪ್ರಭಾವ ಪ್ರವಲ್ಲಿಕ" ಎಂದು ಹೇಳಬೇಕೆಂದುಕೊಂಡ. ಆದರೆ ಹೇಳಲಿಲ್ಲ. ಅವಳದನ್ನು ಅಪಾರ್ಥ ಮಾಡಿಕೊಳ್ಳಬಹುದು. ತಾನು ಬೇರೊಂದು ಅಭಿಪ್ರಾಯದಿಂದ ಹಾಗೆ ಹೇಳುತ್ತಿದ್ದಾನೆಂದು ಅಂದುಕೊಳ್ಳಬಹುದು. ಯಾರೋ ಲೇಖಕನೊಬ್ಬ ಬರೆದಂತೆ, 'ನಮಗೆಷ್ಟೋ ಶ್ರೇಷ್ಠವೆನ್ನಿಸುವ ಭಾವನೆಗಳು, ಬೇರೆಯವರಿಗೆ ಏನೂ ಅನ್ನಿಸದಿರಬಹುದು. 'ನನ್ನ ಒಂದು ಚಿಕ್ಕ ಮಾತಿನಿಂದ ನಿನ್ನಲ್ಲಿ ಇಷ್ಟೊಂದು ಬದಲಾವಣೆ ಬಂತಾ?' ಎಂದು ಹಗುರವಾಗಿ ನಕ್ಕು ಬಿಡಬಹುದು.

ಅವನು ಮೇಲೆದ್ದು, "ಬರ್ತೀನಿ... "ಅಂದ.

"ಇಷ್ಟು ಬೇಗ? ಕೂತ್ಕೊಳ್ಳಿ. ಕೂಲ್‌ಡ್ರಿಂಕ್ಸ್ ತಗೊಂಡು ಹೋಗುವಿರಂತೆ"

"ಬೇಡ. ಏಕೋ ಈ ವಿಷಯವನ್ನು ನಿಮಗೆ ಕೂಡಲೇ ಹೇಳಬೇಕೆನ್ನಿಸಿತ್ತು. ಬರ್ತೀನಿ" ಎಂದು ಅವಳ ಪ್ರತಿಕ್ರಿಯೆಯನ್ನೂ ಗಮನಿಸದೆ ಹೊರಟು ಹೋದ.

ಅವಳು ಅವನು ಹೊರಟ ಕಡೆಗೇ ನೋಡುತ್ತಾ ಕುಳಿತುಬಿಟ್ಟಳು.

ಏಕೋ ಏನೋ ತಿಳಿಯದಾಗಲೀ-ಹಸಿರು-ಹಸಿರಾದ ಎಲೆಗಳ ಮಧ್ಯದಿಂದ ಹಿಮದಲ್ಲಿ ಮಿಂದ ಗುಲಾಬಿ ನಿಧಾನವಾಗಿ ಬಿಚ್ಚಿಕೊಳ್ಳುವಂತೆ ಅವಳ ತುಟಿಗಳ ನಡುವೆ ಕಿರುನಗೆ ಮೂಡಿತು.

ಅವಳ ಆಹ್ಲಾದಕರ ಮನಸ್ಸನ್ನು ಡಿಸ್ಟರ್ಬ್ ಮಾಡುವಂತೆ ಆ ಕೋಣೆಯಲ್ಲಿ ಫೋನ್ ಟ್ರಿಣ್‌ಗುಟ್ಟಿತು. 'ಹಲೋ' ಅಂದಳು ಫೋನೆತ್ತಿ.

"ಕೋಡ್ ನಂಬರ್ ಪ್ಲೀಜ್"

ಅವಳು ಹೇಳಿದಳು. ತುಂಬಾ ಮುಖ್ಯವಾದ, ರಹಸ್ಯವಾದ ವಿಷಯಗಳನ್ನು ಹೇಳುವುದಕ್ಕೆ ಮುಂಚೆ ಈ ರೀತಿಯ ಕನ್‌ಫರ್ಮೇಷನ್ನುಗಳನ್ನು ಮಾಡಿಕೊಳ್ಳುತ್ತಾರೆ.

"ಪ್ರವಲ್ಲಿಕಾ, ನಾನು ಛೀಫ್ ಮಾತನಾಡುತ್ತಿದ್ದೇನೆ"

"ಹೇಳಿ ಸಾರ್"

"ನಾವು ತುಂಬಾ ಇಕ್ಕಟ್ಟಿನಲ್ಲಿ ಸಿಕ್ಕಿಹಾಕಿಕೊಂಡಿದ್ದೇವೆ. ಇನ್ನು ಇಪ್ಪತ್ನಾಲ್ಕು ಗಂಟೆಗಳೊಳಗಾಗಿ ಡಿಪಾರ್ಟ್‌ಮೆಂಟ್ ಒಂದು ಮುಖ್ಯವಾದ ಸಮಸ್ಯೆಯನ್ನು ಎದುರಿಸಲಿದೆ"

"ಏನು ಸಾರ್ ?"

ಆತ ವಿವರಿಸಿದ. ಕೇಳುತ್ತಿದ್ದಂತೆಯೇ ಅವಳ ಅಂಗೈ ರಿಸೀವರನ್ನು ಬಿಗಿಗೊಳಿಸುತ್ತಿತ್ತು. ಮೈಗಾಡ್...ಮೈಗಾಡ್...ಎಂದುಕೊಂಡಳು ಮನಸ್ಸಿನಲ್ಲೇ.

ಸಿ. ಬಿ. ಐ. ಛೀಫ್ ಹೇಳುತ್ತಿದ್ದ ಪ್ರತಿ ವಾಕ್ಯವೂ ಅವನ ಕೈಗಿದ್ದ ತಾಯಿತದೊಳಗೆ ಅಳವಡಿಸಿದ್ದ ಮೈಕ್ರೋಫೋನ್ ಮೂಲಕ ಕೇಳುತ್ತಿದ್ದ ಅನಂತಾನಂತ ಸ್ವಾಮಿಯ ತುಟಿಗಳ ಮೇಲೆ ಕಿರುನಗೆ ಮೂಡುತ್ತಿತ್ತು.

* * * *

ಮುಖ್ಯಮಂತ್ರಿ ರಾಜೀನಾಮೆಗಾಗಿ ಬಸ್ ಹೈಜಾಕ್. ಅಪಾಯದಂಚಿನಲ್ಲಿ ಶಾಲಾಮಕ್ಕಳು-ವಿವಿಧ ರೀತಿಯ ಹೆಡ್ಡಿಂಗ್‌ಗಳೊಡನೆ ಪೇಪರುಗಳಲ್ಲಿ ಸುದ್ದಿ ಬರಲಾರಂಭಿಸಿತು. ಸಂಜೆ ಪತ್ರಿಕೆಗಳು ಅತ್ಯಧಿಕ ಸಂಖ್ಯೆಯಲ್ಲಿ ಮಾರಾಟವಾದವು. ದೇಶದ ಯಾವ ಮೂಲೆಯಲ್ಲಿ ನೋಡಿದರೂ ಇದೇ ಚರ್ಚೆ. ಸಂಪಾದಕೀಯಕ್ಕೂ ಇದೇ ವಸ್ತು,

ಅತ್ಯಧಿಕ ಮೆಜಾರಿಟಿಯಿಂದ ಮುಖ್ಯಮಂತ್ರಿ ಸ್ಥಾನವನ್ನು ಹೊಂದಿರುವವರು ಈ ಬೆದರಿಕೆಗೆ ಮಣಿಯುವುದು ಸಾಧುವೇ?

ಟೆರ್ರರಿಜಂ V/s ಪ್ರಜಾಪ್ರಭುತ್ವ.

ಇಂತಹ ಟೈಟಲ್‌ಗಳೊಂದಿಗೆ ಸಂಪಾದಕೀಯಗಳನ್ನು ಬರೆಯಲಾಯಿತು. ಎಂತಹ ಪರಿಸ್ಥಿತಿಯಲ್ಲಿಯೂ ಸರ್ಕಾರ ಇಂತಹ ಬೆದರಿಕೆಗಳಿಗೆ ಮಣಿಯಕೂಡದೆಂತಲೂ ಒಮ್ಮೆ ಮಣಿದರೆ ಇದೇ ಆಟವನ್ನು ಟೆರ್ರರಿಸ್ಟ್‌ಗಳು ಪ್ರತಿಸಾರಿಯೂ ಮುಂದುವರೆಸುವರೆಂದೂ ದಿನಪತ್ರಿಕೆಯೊಂದು ಎಚ್ಚರಿಕೆ ನೀಡಿತು. ವಿರೋಧಪಕ್ಷಗಳು ಕೂಡಾ ಭಯೋತ್ಪಾದಕರ ಚರ್ಯೆಯನ್ನು ವಿರೋಧಿಸಿ ತೀರ್ಮಾನ ತೆಗೆದುಕೊಂಡಿತು. ದೇಶವೆಲ್ಲ ನಡುಗಿ ಹೋಯಿತು.

ಆಡಳಿತ ಪಕ್ಷದವರು ಹೆಚ್ಚಿನ ಸಂಖ್ಯೆಯಲ್ಲಿ ಮುಖ್ಯಮಂತ್ರಿಯವರ ಬಳಿಗೆ ಬಂದು ತಮ್ಮ ಸಹಾಯಹಸ್ತ ಮುಂದುವರೆಸುವುದಾಗಿ ಪ್ರಮಾಣ ಮಾಡುತ್ತಿದ್ದರು. ಪರಿಸ್ಥಿತಿ ಉದ್ರಿಕ್ತವಾಗಿತ್ತು. ಈ ಸುದ್ದಿ ದೂರದರ್ಶನದಲ್ಲಿ ಪ್ರಸಾರ

ವಾಗುತ್ತಿದ್ದಂತೆಯೇ ವಿವಿಧ ರಾಜ್ಯಗಳ ಮುಖ್ಯಮಂತ್ರಿಗಳೂ ತಮ್ಮ ನಿಲುವನ್ನು ಟೆಲಿಫೋನ್ ಮೂಲಕ ತಿಳಿಸುತ್ತಿದ್ದರು. ದೇಶವಲ್ಲಿ ಮಾತ್ರವಲ್ಲ ಪ್ರಪಂಚದಲ್ಲೇ ಮೊಟ್ಟಮೊದಲನೇ ಸಲ ನಡೆಯುತ್ತಿರುವ ಘೋರವಾದ ಘಟನೆಯಾಗಿತ್ತು ಇದು. ರಾಜ್ಯವೊಂದರ ಸುಸ್ಥಿರವಾದ ಸರ್ಕಾರವನ್ನು ಇಷ್ಟು ಸುಲಭವಾಗಿ ಬದಲಾಯಿಸಬಹುದೆಂಬ ಯೋಚನೆ ಬರುವುದೇ ಅದೆಂಥ ದೇಶದ್ರೋಹದ ಕೆಲಸ ? ಇಂತಹ ಹಾರ್ಡ್‌ಕೋರ್ ಟೆರ‍್ರರಿಸ್ಟ್‌ಗಳನ್ನು ಗೂಢಚಾರಿದಳ ಹೇಗೆ ಹಿಡಿಯುತ್ತದೋ ಎಂದು ಪ್ರತಿಯೊಬ್ಬರಿಗೂ ಕುತೂಹಲ. ನಾಳೆಯವರೆಗೆ ಎಲ್ಲರೂ ಎದುರುನೋಡತೊಡಗಿದರು... ಆಸಕ್ತಿಯಿಂದ.

ಇಪ್ಪತ್ತೈದು ಮಕ್ಕಳ ತಂದೆ ತಾಯಂದಿರು ನಿದ್ರಾಹಾರಗಳನ್ನು ಬಿಟ್ಟರು. ಹಗಲು ರಾತ್ರಿ ಎಂಬ ಭೇದವಿಲ್ಲದೆ, ಕಂಟ್ರೋಲ್ ರೂಮ್ ಬಳಿ ಕಾದು ಕುಳಿತಿದ್ದರು. ಯಾವ ಕ್ಷಣ ಯಾವ ಸುದ್ದಿ ಬರುತ್ತದೋ ಎಂದು ಭಯದಿಂದ ಆ ಮೆಟ್ಟಿಲುಗಳ ಮೇಲೆಯೇ ಕುಸಿದು ಕುಳಿತಿದ್ದರು. ಮುಖಗಳು ಕಳಾಹೀನವಾಗಿದ್ದವು. ಕೆಲವು ತಾಯಂದಿರು ಜೋರಾಗಿ ಅಳುತ್ತಿದ್ದಾರೆ. ಗಂಡಸರು ಮೇಲೆ ಬಿಂಕವಾಗಿದ್ದರೂ ಒಳಗೊಳಗೆ ಆತಂಕಗೊಂಡಿದ್ದರು. ಗುಂಪು ಗುಂಪುಗಳಾಗಿ ಮಾತನಾಡಿಕೊಳ್ಳುತ್ತಿದ್ದರು. ಕೆಲವರು ಪೋಲೀಸರ ಅಸಮರ್ಥತೆಯನ್ನು ಬೈಯ್ಯುತ್ತಿದ್ದರೆ. ಮತ್ತೆ ಕೆಲವರು ವಿರೋಧಪಕ್ಷದವರನ್ನು ದೂಷಿಸುತ್ತಿದ್ದರು.

ಮಾರನೆಯ ದಿನ ಸಂಜೆ ಐದು ಗಂಟೆಯಾಯಿತು. ಪೋಷಕರಲ್ಲಿ ಟೆನ್ಷನ್ ಹೆಚ್ಚಾಯಿತು.

ಸಿ. ಬಿ. ಐ. ಛೀಫ್, ಡೆಪ್ಯೂಟಿ, ಉಳಿದ ಆಫೀಸರ್‌ಗಳು ಟೆಲಿಫೋನ್ ಬಳಿ ಕುಳಿತಿದ್ದಾರೆ. ಮುಖ್ಯಮಂತ್ರಿಯ ಎಲ್ಲಾ ಟೆಲಿಫೋನ್‌ಗಳಿಗೂ ಟೇಪ್ ರಿಕಾರ್ಡ್ ಕನೆಕ್ಷನ್‌ಗಳನ್ನು ಕೊಡಲಾಗಿದೆ. ನಗರದ ಎಲ್ಲಾ ಪಬ್ಲಿಕ್ ಫೋನ್‌ಗಳ ಬಳಿಯೂ ಮಫ್ತಿಯಲ್ಲಿ ಪೋಲೀಸ್ ಆಫೀಸರುಗಳಿದ್ದಾರೆ. ಕ್ಷಣದಲ್ಲಿಯೇ ಹೊರಡಲು ವ್ಯಾನುಗಳು, ಜೀಪುಗಳು, ಕಾರುಗಳು ಸಿದ್ಧವಾಗಿವೆ.

ಆ ಕಡೆಯಿಂದ ಬರಲಿರುವ ಫೋನ್ ಕರೆಗಳಿಗಾಗಿ ಪ್ರಾಣವನ್ನು ಬಿಗಿಗೊಳಿಸಿಕೊಂಡು ಕುಳಿತಿದ್ದಾರೆ ಎಲ್ಲರೂ, ಟೆರ‍್ರರಿಸ್ಟ್‌ಗಳು ಏನು ಹೇಳುತ್ತಾರೋ ಎಂದು ಕೇಳಲು...

ನಾಲ್ಕೂ ಐವತ್ತಾಯಿತು.

ಐದಾಯಿತು.

ಐದು ಗಂಟೆ ಐದು ನಿಮಿಷವಾಯಿತು.

* * * *

"ಮಾತು ಮಾತಿಗೂ ಫೋನ್ ಮಾಡುವುದು, ಕೊಟ್ಟ ಗಡುವನ್ನು ಮತ್ತೆ ಬೆಳೆಸುವುದು, ರಾಯಭಾರಗಳನ್ನು ನಡೆಸುವುದು–ಇವೆಲ್ಲಾ ಹಳೇ ಪದ್ಧತಿಗಳು. ಅಂದುಕೊಂಡದ್ದನ್ನು ಕೂಡಲೇ ಕಾರ್ಯಗತಗೊಳಿಸಿ" ಅನಂತಾನಂತಸ್ವಾಮಿ ಹೇಳಿದ.

ರಾಮಲಾಲ್ ಸ್ವಲ್ಪ ಹಿಂತೆಗೆದ. ''ನಮ್ಮವರು ರಕ್ತ ಕುಡಿಯುವ ಕಿರಾತ-ಕರೇ...ಆದರೆ ತೀರಾ ಹತ್ತು ವರ್ಷದ ಮಕ್ಕಳನ್ನು ಕೊಲ್ಲಬೇಕೆಂದರೆ"

ಅನಂತಾನಂತಸ್ವಾಮಿ ಅವನೆಡೆಗೆ ವಿಚಿತ್ರವಾಗಿ ನೋಡಿದ. ನಂತರ ನಕ್ಕು ಹೇಳಿದ, ''ಮಕ್ಕಳಾದರೂ, ದೊಡ್ಡವರಾದರೂ ಪ್ರಾಣ ಪ್ರಾಣವೇ. ಯಾರನ್ನು ಕೊಂದರೂ ಒಂದೇ ಪಾಪ. ಸಿಂಹಾಸನದಿಂದ ಒಬ್ಬರನ್ನು ಕೆಳಗಿಳಿಸುತ್ತೇವೆಂದು ಮತ್ತೊಬ್ಬರಿಗೆ ವಾಗ್ದಾನ ಮಾಡಿದ್ದೇವೆ. ಒಂದು ಕೋಟಿ ರೂ. ಗಳ ವ್ಯವಹಾರ. ಈಗ ಚಿಕ್ಕಮಕ್ಕಳು, ಕರುಣೆ, ಹಾಳೂ ಮೂಳೂ ಅಂದ್ರೆ ಹೇಗೆ?...ಯಾರಿದ್ದಾರೆ ಆ ಮಕ್ಕಳ ಬಳಿ ಈಗ?"

"A-1, A-2, A-4."

''ನಾನೇ ಬರ್ತೀನಿ, ಅಲ್ಲಿಗೆ. ಅಷ್ಟರಲ್ಲಿ ಕೆಲ್ಸ ಪೂರ್ತಿ ಮಾಡು,'' ರಾಮಲಾಲ್ ಹೊರಟ.

ಅವನು ನರರೂಪ ರಾಕ್ಷಸ, ದೇಶದಲ್ಲೆಲ್ಲಾ ಭಯಂಕರ ಟೆರ್ರರಿಸ್ಟ್–ಆದರೆ ಅವನಿಗೊಂದೇ ಬಲಹೀನತೆ: ಸಣ್ಣ ಮಕ್ಕಳ ಪ್ರಾಣ ಮಾತ್ರ ತೆಗೆಯಲಾರ. ಬೇಕೆಂದರೆ ತನ್ನ ಹೆಂಡತಿಯನ್ನೇ ಚೂರು ಚೂರಾಗಿ ಕಡಿದು ಹಾಕುತ್ತಾನೆ. ನೂರು ಜನರ ಗುಂಪಿಗೆ ಸೀಮೆ ಎಣ್ಣೆ ಹೊಯ್ದು ಬೆಂಕಿ ಇಡುತ್ತಾನೆ, ಆದರೆ... ಅವನಿಗೆ ಆ ವಯಸ್ಸಿನ ಎರಡು ಮಕ್ಕಳಿವೆ, ಅವರೆಂದರೆ ಅವನಿಗೆ ಪ್ರಾಣ. ಅದೊಂದು ಸೆಂಟಿಮೆಂಟ್.

ಅನಂತಾನಂತ ಸ್ವಾಮಿ ಅಲ್ಲಿಗೆ ಬರುವ ವೇಳೆಗೆ ಪರಿಸ್ಥಿತಿ ಅದೇ ರೀತಿ ಇತ್ತು.

"ಏನಿದು–ಕೊಲ್ಲಲು ಕೈ ಬರುತ್ತಿಲ್ಲವೇ?''

ನಾಲ್ವರಲ್ಲಿ ಯಾರೂ ಮಾತನಾಡಲಿಲ್ಲ,

''ಅಂದು ಅರ್ಜುನನಿಗೆ ಶ್ರೀಕೃಷ್ಣ ಭಗವದ್ಗೀತೆ ಬೋಧಿಸಿದಂತೆ ನಿಮಗಿಂದು ಆಧುನಿಕ ಜೀವನ ಸಾರವನ್ನು ಬೋಧಿಸಬೇಕೇನೋ. ಧರ್ಮಕ್ಷೇತ್ರೇ, ಕುರುಕ್ಷೇತ್ರೇ ಸಮವೇತಾ ಯಯುತ್ಸವಃ–ಮಮತಾಪಾಂಡವಾಶ್ಚೈವಕಿಮಕುರ್ವತ ಸಂಜಯ ? –ಎಂದು ವಿವರಿಸಬೇಕೇನೋ ? ಆದರೆ ಅದಕ್ಕೀಗ ಸಮಯವಿಲ್ಲ, ನಾವು ಕೊಟ್ಟಿದ್ದ ಸಮಯ ಮೀರಿ ಐದು ನಿಮಿಷಗಳಾದವು. ಮಕ್ಕಳೆಲ್ಲಿ?"

ರಾಮಲಾಲ್ ಗುಡ್ಡದ ಮೇಲಿದ್ದ ಪಾಳುಮನೆಯತ್ತ ಕೈ ತೋರಿಸಿದ. ಅದಕ್ಕೆ ಮೇಲ್ಛಾವಣಿ ಇರಲಿಲ್ಲ. ಒಳಗೆ ಇಪ್ಪತ್ತೈದಕ್ಕೂ ಮಿಗಿಲಾಗಿ ಮಕ್ಕಳಿದ್ದರು. ಕೆಲವರು ಅಳುತ್ತಿದ್ದರು. ಕೆಲವರು ಎಚ್ಚರದಪ್ಪಿ ಬಿದ್ದಿದ್ದಾರೆ.

ವಿಷ್ಣು ಒಂದೊಂದೇ ಹಾಳೆಯನ್ನು ತನ್ನ ನೋಟ್ ಪುಸ್ತಕದಿಂದ ಹರಿದು ಗಾಳಿಯ ದಿಕ್ಕನ್ನು ನೋಡಿ ಬಿಸಾಕುತ್ತಿದ್ದಾನೆ. ಅವನ ಸಣ್ಣ ಮೆದುಳಿಗೆ ಅದಕ್ಕಿಂತಲೂ ದೊಡ್ಡ ಯೋಚನೆ ಹೊಳೆಯಲಿಲ್ಲ. ಮಕ್ಕಳೆಲ್ಲಾ ಮುದ್ದಾಗಿದ್ದಾರೆ. ಆದರೆ ತುಂಬಾ ಹೊತ್ತಿನಿಂದ ಹೊಟ್ಟೆಗೇನೂ ಇಲ್ಲದ್ದರಿಂದ ಅವರ ಮುಖಗಳೆಲ್ಲಾ ಬಾಡಿವೆ. ಅಳುವುದಕ್ಕೂ ಶಕ್ತಿಯಿರಲಿಲ್ಲ. ಆ ಸಣ್ಣ ಪ್ರಾಣಗಳ ವಯಸ್ಸಾದರೂ ಎಷ್ಟು? ಅವರಿಗೆ ರಕ್ತಪಾತಗಳಾಗಲೀ, ಮನುಷ್ಯರ ರಾಕ್ಷಸೀಕೃತ್ಯಗಳ ಬಗ್ಗೆಯಾಗಲೀ ಸ್ವಲ್ಪವೂ ತಿಳಿದಿಲ್ಲ. ಪ್ರಪಂಚವೆಲ್ಲಾ ಒಳ್ಳೆಯತನದಿಂದಲೇ ತುಂಬಿದೆಯೆಂದು ತಿಳಿಯುವ ಮುಗ್ಧ ಮನಸ್ಸುಗಳು. ಗಾಂಧಿ, ನೆಹ್ರೂಗಳ ಬಗ್ಗೆ ಮಾತ್ರ ಗೊತ್ತು.

ವಿಷ್ಣು ತಾನು ಮಾಡುತ್ತಿದ್ದ ಕೆಲಸ ನಿಲ್ಲಿಸಿ, ''ಏಯ್ ವಿನೀಲ್! ನಿನ್ನ ಬಳಿ ಚಾಕ್ಲೆಟ್‌ಗಳಿವೆ ಅಲ್ಲವೇನೋ?'' ಎಂದು ಕೇಳಿದ.

ವಿನೀಲ್ ತಲೆ ಆಡಿಸಿದ.

''ಮತ್ತಿನ್ನೇಕೋ ಹಾಗೆ ನೋಡ್ತಿದ್ದಿ. ಅವನ್ನೆಲ್ಲಾ ಹಂಚೋ''

ಇದ್ದ ಮಕ್ಕಳಲ್ಲೆಲ್ಲಾ ಸ್ವಲ್ಪ ಧೈರ್ಯದಿಂದಿದ್ದವನೆಂದರೆ ವಿಷ್ಣು ಒಬ್ಬನೇ. ಮನೆಯಲ್ಲಿ ಕೇಕನ್ನು ಕತ್ತರಿಸಬೇಕಾಗಿದ್ದ ಸಮಯದಲ್ಲಿ, ಇಲ್ಲಿ ವಿನೀಲ್ ಒಬ್ಬೊಬ್ಬ ಹುಡುಗನ ಬಳಿಗೂ ಹೋಗಿ ಚಾಕ್ಲೆಟ್ ಹಂಚುತ್ತಿದ್ದಾನೆ.

"ವಿನೀಲ್‌ಗೆ ಹ್ಯಾಪಿ ಬರ್ತ್‌ಡೇ ಹೇಳಿ ಎಲ್ಲಾ"

ಮಕ್ಕಳೆಲ್ಲಾ ಮುಕ್ತಕಂಠದಿಂದ ಹೇಳಿದರು—

''ಹ್ಯಾಪಿ ಬರ್ತ್‌ಡೇ ಟೂ ಯೂ ವಿನೀಲ್"–ಆ ಸೋತ ಸ್ವರಗಳ ತರಂಗಗಳು ಅಲ್ಲೆಲ್ಲಾ ವ್ಯಾಪಿಸಿತು. ಆಕಾಶ ಮೋಡಗಳಿಂದ ತುಂಬಿದೆ.

''ಮೆನಿ ರಿಟರ್ನ್ಸ್ ಆಫ್ ದಿ ಡೇ ಟು ಯು ವಿನೀಲ್" ವಿಷ್ಣು ಶುಭಾಶಯ ಕೋರಿದ. ಮತ್ತೊಮ್ಮೆ "ಮೆನಿ ರಿಟರ್ನ್ಸ್ ಆಫ್ ದಿ ಡೇ ಟು ಯು ವಿನೀಲ್" ಕೋರಸ್ಸಿನಲ್ಲಿ ಮಕ್ಕಳೆಲ್ಲಾ ಹೇಳಿದರು. ಕಣ್ಣೀರಿನ ನಡುವೆ ಮಿಂಚಿನಷ್ಟು ಸಂತೋಷ......ವಿಷಾದದ ನಡುವೆ ಆ ಸ್ವಲ್ಪ ಕಿರುನಗೆ ಮಕ್ಕಳ ಮುಖಗಳಲ್ಲಿ ಮುಗ್ಧವಾಗಿ ಕಂಡಿತು.

ಆಗ ಪ್ರವೇಶಿಸಿದ ಅನಂತಾನಂತಸ್ವಾಮಿ ಅಲ್ಲಿಗೆ, ಜಿಂಕೆಗಳ ಗುಂಪಿನೆಡೆಗೆ ನೋಡುವ ಹುಲಿಯಂತೆ ಕೆಲಕ್ಷಣ ಬಿಟ್ಟ ಕಣ್ಣಿಳಿಂದ ನೋಡಿದ, ಕಿರುನಗೆಯಿಂದ

ಕೇಳಿದ, "ನಿನ್ನ ಹೆಸರೇನು?"

"ಏನೀಲ್"

"ಏನು ಓದುತ್ತಿದ್ದಿ?"

''ಆರನೇ ತರಗತಿ"

ಅನಂತಾನಂತಸ್ವಾಮಿ ತುಂಬಾ ಎತ್ತರದ ಮನುಷ್ಯ. ಏನೀಲ್ ತಲೆಯೆತ್ತಿ ಮಾತನಾಡುತ್ತಿದ್ದಂತೆಯೇ ಮಳೆಯ ಒಂದು ಹನಿ ಅವನ ಕಣ್ಣಿನ ಮೇಲೆ ಬಿತ್ತು ಒರೆಸಿಕೊಂಡ. ಸ್ವಾಮಿ ಅವನ ಭುಜದ ಮೇಲೆ ಕೈ ಹಾಕಿ ಹೊರಗೆ ಕರೆದೊಯ್ದ. ಉಳಿದ ಮೂವರು ಟೆರ್ರರಿಸ್ಟ್‌ಗಳೂ ಒಳಗೇ ಇದ್ದರು. ಹೊರಗಿನ ಸಂಭಾಷಣೆ ಒಳಗೆ ಕೇಳಿಸುತ್ತಿತ್ತು.

"ನಿಮ್ಮ ಸ್ಕೂಲಿನಲ್ಲಿ ಯಾವ ಪ್ರೇಯರ್ ಮಾಡ್ತೀರಿ ಏನೀಲ್?" ಸ್ವಾಮಿ ಕೇಳುತ್ತಿದ್ದಾನೆ.

"ಬೆಳಗ್ಗೆ ಕನ್ನಡದ ದೇಶಭಕ್ತಿ ಗೀತೆ ..ಮತ್ತೆ ಸಾಯಂಕಾಲ ಜನಗಣ ಮನ..."

"ನಿಂಗೆ ಪೂರ್ತಿ ಬರುತ್ತಾ ಏನೀಲ್?''

''ಓ...ಪೂರ್ತಿಯಾಗಿ ಬರುತ್ತೆ ಅಂಕಲ್''

"ಹಾಡು...ಕೇಳೋಣ"

"ಜನಗಣಮನ ಅಧಿನಾಯಕ ಜಯಹೇ..."ಆ ಹುಡುಗನ ಸ್ವರದ ತುಂಬಾ ದೇಶಭಕ್ತಿ, ಪೂರ್ತಿ ಹೇಳಿದರೆ ತಮ್ಮನ್ನೆಲ್ಲ ಬಿಟ್ಟುಬಿಡುತ್ತಾರೇನೋ ಎಂಬ ಆಸೆ. ಶ್ವಾಸದ ತುಂಬಾ ಗಾಳಿ ಎಳೆದುಕೊಂಡು ಸ್ವರವೆತ್ತರಿಸಿ ರಾಷ್ಟ್ರಗೀತೆಯನ್ನು ಪೂರ್ತಿಗೊಳಿಸಿದ.

"ಜನಗಣ ಮಂಗಳ ದಾಯಕ ಜಯಹೇ
ಭಾರತ ಭಾಗ್ಯವಿಧಾತ... ಜಯಹೇ...
ಜಯಹೇ...ಜಯಹೇ...ಜಯಹೇ...
ಜಯ...ಜಯ...ಜ...ಯ...ಜಯ ...ಹೇ"

ಪಾಳುಗೋಡೆಯ ಮೇಲೆ ಕುಳಿತಿದ್ದ ಪಾರಿವಾಳಗಳ ಗುಂಪು ಒಮ್ಮೆಗೇ ಹಾರಿದವು. ವಾತಾವರಣವೆಲ್ಲ ಬೆದರುವಂತೆ ಪ್ರಕೃತಿ ಬೆದರುವಂತೆ ಪಿಸ್ತೂಲಿನ ಶಬ್ದ.

ಆಕಾಶ ರೋದಿಸಲು ಪ್ರಾರಂಭಿಸಿತು. ಮೋಡಗಳು ಕರಗಲು ಪ್ರಾರಂಭಿಸಿದವು.

*   *   *   *   *

## ಅಸೆಂಬ್ಲಿ ಮುಂದೆ ಬಾಲಕನ ಶವ

ಈ ಸುದ್ದಿ ಕಂಟ್ರೋಲ್‌ರೂಮಿನ ಬಳಿ ತಿಳಿಯುತ್ತಿದ್ದಂತೆಯೇ ತಂದೆ-ತಾಯಿಗಳ ಕಲರವವೇ ಪ್ರಾರಂಭವಾಯಿತು. ಪ್ರವಾಹದಂತೆ ಜನರೆಲ್ಲ ಅಲ್ಲಿ ಗುಂಪು ಸೇರಿದರು.

ಪಿಸ್ತೂಲಿನ ಗುಂಡು ತಗುಲಿ ನೆಲಕ್ಕೆ ಕುಸಿದಿರುವ ಹಂಸದಂತೆ ರಸ್ತೆಯ ಪಕ್ಕದಲ್ಲಿ ಬಿದ್ದಿದ್ದಾನೆ ಏನೀಲ್. ಅವನ ಸುತ್ತಲೂ ರಕ್ತ ಹರಿದು ಹೆಪ್ಪುಗಟ್ಟಿತ್ತು. ಅವನ ತಾಯಿ ಹೃದಯ ಬಿರಿಯುವಂತೆ ಅಳುತ್ತಿದ್ದಾಳೆ.

ಸುನಾದಮಾಲ ವಿದ್ಯುತ್ ತಗುಲಿದಂತೆ ಅಚೇತನಳಾಗಿ ನಿಂತಿದ್ದಾಳೆ. ವೃದ್ಧಾಪ್ಯವನ್ನೂ ಲೆಕ್ಕಿಸದೆ ಅವಳ ಅಜ್ಜ ಐದಾರು ಗಂಟೆಗಳಿಂದಲೂ ಅಲ್ಲೇ ನಿಂತಿದ್ದಾಳೆ. ನೆಲಕಾಣಿಸದಷ್ಟು ಜನ. ಕಂಟ್ರೋಲ್ ಮಾಡುವುದೇ ಕಷ್ಟವಾಗುತ್ತಿದೆ. ವರದಿಗಾರರು ಫೋಟೋಗಳನ್ನು ತೆಗೆದುಕೊಳ್ಳುತ್ತಿದ್ದಾರೆ. ಪ್ರತಿಯೊಬ್ಬರಿಗೂ ಅಲ್ಲಿ ಬಿದ್ದಿರುವ ಬಾಲಕನ ಶವ ತಮ್ಮ ಮಗನ ಶವದಂತೇ ಕಾಣುತ್ತಿದೆ.

ಪೋಲೀಸರು ತಮ್ಮ ನಿಸ್ಸಹಾಯಕತೆಗೆ ನಿದರ್ಶನವಾಗಿ ಬಿದ್ದಿರುವ ಆ ಬಾಲಕನ ಶವವನ್ನು ನೋಡಿ ನಾಚಿಕೆಯಿಂದ ತಲೆತಗ್ಗಿಸಿಕೊಂಡಿದ್ದಾರೆ. ಕತ್ತಲಾಗುತ್ತಿದೆ. ಯಾರೂ ಅಸೆಂಬ್ಲಿ ಮುಂದಿನಿಂದ ಕದಲುತ್ತಿಲ್ಲ. ಜನ ಕಾಮೆಂಟ್ಸ್, ಮಾಡುತ್ತಿದ್ದಾರೆ. ಮಕ್ಕಳ ತಂದೆ ತಾಯಿಯರಲ್ಲಿ ಸಿಟ್ಟು, ಆವೇಶ ಹೆಚ್ಚಾಗುತ್ತಿದೆ. ಸರ್ಕಾರದಿಂದ ಈ ಕೂಡಲೆ ಒಂದು ಪರಿಹಾರವನ್ನು ಅವರು ನಿರೀಕ್ಷಿಸುತ್ತಿದ್ದಾರೆ. ಸರ್ಕಾರ ತಾನೇ ಏನು ಮಾಡಲು ಸಾಧ್ಯ? ಒಂದಷ್ಟು ಜನ ಮಕ್ಕಳನ್ನು ಬಂಧಿಸಿ ಹೆದರಿಸಿದರೆ ಒಂದು ಸುಸ್ಥಿರವಾದ ಸರ್ಕಾರ ರಾಜೀನಾಮೆ ಕೊಡಬೇಕಾಗಿ ಬಂದರೆ? ಇನ್ನು ದೇಶದಲ್ಲಿ ಶಾಂತಿ, ಭದ್ರತೆಗೆ ಸ್ಥಳವೆಲ್ಲಿರುತ್ತದೆ? ಟೆರ್ರರಿಸ್ಟ್‌ಗಳು ಮತ್ತಷ್ಟು ಮೆರೆಯುತ್ತಾರೆ. ಅವರಿಗಿದೊಂದು ಮಾರ್ಗವೇ ಆಗಿಬಿಡುತ್ತದೆ.

ಮುಖ್ಯಮಂತ್ರಿ ತುರ್ತುಸಮಾವೇಶ ಕರೆದರು. ಮಂತ್ರಿವರ್ಗದವರು ವಿಧ-ವಿಧ ಭಿನ್ನಾಭಿಪ್ರಾಯಗಳನ್ನು ವ್ಯಕ್ತಪಡಿಸಿದರು.

ಮಾರನೆ ದಿನ ಪೇಪರ್‌ಗಳಲ್ಲಿ ಮೊದಲ ಪುಟದಲ್ಲೇ ಆ ಫೋಟೋ ಪ್ರಕಟವಾಯಿತು.

ಅಸೆಂಬ್ಲಿಯ ಮುಂದೆ ಮುದುಡಿ ಬಿದ್ದಿದ್ದ ಬಾಲಕನ ಶವ! ಹೃದಯ ವಿದ್ರಾವಕವಾಗಿ ಅಳುತ್ತಿದ್ದ ಆ ತಾಯಿಯ ಫೋಟೋ! ಒಂದೇ ಗಂಟೆಯಲ್ಲಿ ಆ ಸುದ್ದಿ ಎಲ್ಲಾ ಕಡೆಗೂ ಹಬ್ಬಿತು.

ಪ್ರಜೆಗಳಲ್ಲಿ ಕಲರವ!

ಅಧಿಕಾರ ವರ್ಗಗಳಲ್ಲಿ ಕಲರವ!!

ಇನ್ನೆಷ್ಟು ಮಕ್ಕಳನ್ನು ಈ ರೀತಿ ಬಲಿ ಕೊಡುತ್ತಾರೆ ಮುಖ್ಯಮಂತ್ರಿಗಳು? ಏಕಿಷ್ಟು ಟೆನ್ಷನ್? ಹೋಗಲಿ ರಾಜೀನಾಮೆ ಕೊಟ್ಟುಬಿಡಬಾರದೆ ?

ಬೀಜದಂತೆ ಪ್ರಾರಂಭವಾದ ಈ ಭಾವನೆ ಕೆಲವು ವರ್ಗಗಳಲ್ಲಿ ಬೆಳೆದು ಕ್ರಮೇಣ ಗಿಡವಾಗಿ ಬೆಳೆಯಿತು. ಪ್ರಜಾಭಿಪ್ರಾಯ ಬದಲಾಗಲು ಅದೆಷ್ಟು ಸಮಯ ಬೇಕು?

ಸಂಜೆಯ ವೇಳೆಗೆ ಮತ್ತೊಂದು ಶವ ಬೀಳುತ್ತದಾ? ಈ ಆಲೋಚನೆ ಯನ್ನೇ ಪ್ರಜೆಗಳು ಊಹಿಸಲಾರದೆ ಹೋದರು.

ಈ ನರರೂಪ ರಾಕ್ಷಸರು ವಾರ್ನಿಂಗ್ ಕೂಡಾ ಕೊಡುತ್ತಿಲ್ಲ. ಚರ್ಚೆ ಗಳನ್ನು ನಡೆಸುತ್ತಿಲ್ಲ. ಇಪ್ಪತ್ತೈದು ದಿನಗಳ ಕಾಲ ದಿನಕ್ಕೊಬ್ಬರಂತೆ ಮಕ್ಕಳನ್ನು ಸಾಯಿಸುವ ದೃಢನಿರ್ಧಾರ ಮಾಡಿಕೊಂಡಿದ್ದಾರೆ. ಈ ನಂಬಿಕೆಯನ್ನು ಪ್ರಜೆಗಳಲ್ಲಿ ನಾಟಿದ್ದಾರೆ.

ಪತ್ರಿಕಾ ಸಂಪಾದಕೀಯಗಳಲ್ಲಿ ಕೂಡಾ ನೆನ್ನೆಯಿದ್ದಷ್ಟು ಬಿಸಿ ಇರಲಿಲ್ಲ. ಮುಖ್ಯಮಂತ್ರಿಗಳೇ ಏನೋ ಮಾಡಬೇಕೆಂಬ ಅಭಿಪ್ರಾಯವನ್ನು ಎಲ್ಲರೂ ಸೂಚಿ ಸಿದರು. ಹಾಗಾಗದೆ ಸ್ವಲ್ಪ ಅತ್ತಿತ್ತ ಬರೆದರೂ ಓದುಗರ ಟೀಕೆಗೆ ಗುರಿಯಾಗ ಬೇಕಾಗುತ್ತದೆ.

"ಇನ್ನೂ ಇಬ್ಬರು ಸಾಯುವ ತನಕ ನೋಡೋಣ" ಎಂದು ಬರೆದರೆ ಪೇಪರ್ ವ್ಯಾನುಗಳೇ ಭಸ್ಮವಾಗುತ್ತವೆ. ಯಾವ ಪತ್ರಿಕೆಯಾದರೂ ಬದುಕುವುದು ಓದುಗರಿಂದಲೇ! ವರದಿಗಾರರು ತಾನೆ ಏನು ಮಾಡಿಯಾರು?

ನೆನ್ನೆಯವರೆಗೂ ಮುಖ್ಯಮಂತ್ರಿಗಳ ಬಗ್ಗೆ ಸಹಾನುಭೂತಿಯಿಂದ ಇದನ್ನು ಹೇಗೆ ಎದುರಿಸಬೇಕೆಂದು ಸಲಹೆ ನೀಡಿದವರೇ ಈಗ ಸ್ವಲ್ಪ ಹಿಮ್ಮೆಟ್ಟುತ್ತಿದ್ದಾರೆ. ವಿಮಾನವನ್ನು ಹೈಜಾಕ್ ಮಾಡಿದವರು ಕೂಡಾ ಸ್ವಲ್ಪವಾದರೂ ಸಮಯ ನೀಡು ತ್ತಾರೆ; ಇವರು ಅದನ್ನೂ ಮಾಡುತ್ತಿಲ್ಲ. ತಮ್ಮ ಹಠಕ್ಕೆ ಕಟ್ಟಿಕೊಂಡಿದ್ದಾರೆ, Ball is in your court ಎಂಬ ಅಭಿಪ್ರಾಯವನ್ನುಂಟುಮಾಡಿದ್ದಾರೆ.

ಆಡಳಿತ ಪಕ್ಷ ಇಕ್ಕಟ್ಟಿನಲ್ಲಿ ಸಿಕ್ಕಿಕೊಂಡಿತು.

* * * *

ಪ್ರವಲ್ಲಿಕಳಿಗೆ ಮುಜುಗರವಾಗಿದೆ– ಇರಿಟೇಟಿಂಗ್ ಆಗಿವೆ,

ಏನು ಮಾಡಬೇಕೆಂದು ಅರ್ಥವಾಗಲಿಲ್ಲ. ಛೀಫ್ ಅರ್ಜೆಂಟ್ ಕೆಲಸವೆಂದು ಡೆಲ್ಲಿಯಲ್ಲಿದ್ದಾನೆ. ಸರ್ಕಾರ ಈ ರೀತಿ ಇಕ್ಕಟ್ಟಿನಲ್ಲಿ ಸಿಲುಕಿಕೊಳ್ಳುವುದು ಯಾರಿಗೆ ಇಷ್ಟ? ಬ್ಲಡಿ ಪಾಲಿಟಿಕ್ಸ್...!

ಸಂಜೆಯಾಗುತ್ತಿದ್ದಂತೆಯೇ ಅವಳಿಗೆ ಭಯವಾಗತೊಡಗಿತು. ಮತ್ತೊಬ್ಬ ಮುಗ್ಧ ಬಾಲಕನ ಶವವನ್ನು ಎದುರು ನೋಡಬೇಕೇನೋ ಎಂಬ ಆತಂಕ. ವಿರೋಧ ಪಕ್ಷಗಳು ಆಗಲೇ ಬಂದ್‌ಗೆ ಕರೆ ನೀಡುತ್ತಿದ್ದನ್ನು. ಎಲ್ಲಕ್ಕಿಂತಲೂ ಮುಖ್ಯವಾಗಿ ಆ ಮಕ್ಕಳ ತಂದೆ ತಾಯಿಯರು ಮಾಡುವ ಗಲಭೆ ಹೃದಯವಿದ್ರಾವಕವಾಗಿತ್ತು. ಈ ಪರಿಸ್ಥಿತಿಯನ್ನು ದುರುಪಯೋಗಮಾಡಿಕೊಂಡು ಸಮಾಜ ವಿರೋಧೀ ಶಕ್ತಿಗಳು ವಿಧ್ವಂಸಕ ಕೃತ್ಯಕ್ಕೆ ತೊಡಗಿದರೆ ಕಷ್ಟ. ಈ ಪರಿಸ್ಥಿತಿಯಲ್ಲಿ ಪೋಲೀಸ್ ಕಮೀಷನರ್ ಲಾಠೀ ಚಾರ್ಜಿಗೆ ಆರ್ಡರ್ ಕೊಟ್ಟರೂ–ಎದುರುಬೀಳುತ್ತಾರೆ ಪ್ರಜೆಗಳು. ಮೊದಲೇ ಪೋಲೀಸರ ಬಗ್ಗೆ ಪ್ರಜೆಗಳು ಸಹಾನುಭೂತಿ ತೋರಿಸುವುದಿಲ್ಲ.

ಕಂಟ್ರೋಲ್ ರೂಮಿನ ಎದುರು ಜನ ಗುಂಪು ಗುಂಪಾಗಿ ನೆರೆದಿದ್ದಾರೆ. ಸುಮಾರು ಇಪ್ಪತ್ನಾಲ್ಕು ಗಂಟೆಗಳಿಂದ, ನಂತರದ ಸರದಿ ಯಾರದೆಂಬಂತೆ ಅಳು ಮುಖದಿಂದ ನಿಂತಿರುವ ತಂದೆ ತಾಯಿಗಳನ್ನು ನೋಡಿದರೆ ಪ್ರವಲ್ಲಿಕಳಿಗೆ ಮನಸ್ಸು ಕರಗುತ್ತಿದೆ.

ಏನು ಮಾಡಲೂ ತೋಚುತ್ತಿಲ್ಲ.

ಆ ಸಮಯದಲ್ಲಿ ಜವಾನ ಬಂದು "ಯಾರೋ ನಿಮ್ಮನ್ನು ನೋಡಬೇಕಂತೆ ಮೇಡಂ" ಎಂದು ಹೇಳಿದ.

ಅವಳು ಬೇಸರದಿಂದ "ಯಾರು?" ಎಂದು ಕೇಳಿದಳು.

"ವಿಹಾರಿ ಅಂತೆ!"

ಅವಳಿಗೆ ಆಶ್ಚರ್ಯವಾಯಿತು. ಈ ಸಮಯದಲ್ಲಿ ವಿಹಾರಿ...

"ಒಳಗೆ ಕಳಿಸು..." ಎಂದಳು ನಿರ್ಲಿಪ್ತಳಾಗಿ.

ವಿಹಾರಿ ಬಂದು ಎದುರು ಕುಳಿತುಕೊಳ್ಳುತ್ತಾ, "ಕ್ಷಮಿಸಬೇಕು. ನಿಮ್ಮ ಸಮಯವನ್ನು ಅನವಶ್ಯಕವಾಗಿ ವೇಸ್ಟ್ ಮಾಡುತ್ತಿದ್ದೇನೆ" ಅಂದ.

"ಹೇಳಿ ಏನು?"

"ಪೋಲೀಸ್ ಡಿಪಾರ್ಟ್‌ಮೆಂಟ್‌ನಿಂದಾಗಲೀ ಮಂತ್ರಿವರ್ಗದ ಕಡೆಯಿಂದಾಗಲೀ ಯಾವ ಪ್ರಕಟಣೆಯೂ ಇಲ್ಲ. ಐದಾಗಲು ಇನ್ನೊಂದು ಗಂಟೆ ಮಾತ್ರವಿದೆ."

ಅವಳು ಸ್ವಲ್ಪ ಕೋಪಗೊಂಡು, "ಹೌದು ಆ ವಿಷಯ ನಮಗೂ ಗೊತ್ತು" ಅಂದಳು.

ಅವನು ಅವಳ ಕೋಪದ ಕಡೆ ಗಮನಹರಿಸಲಿಲ್ಲ. ಪ್ರಾಮಾಣಿವಾಗಿ ಹೇಳಿದ "ನನಗೆ ಈ ವಿಷಯಗಳ ಬಗ್ಗೆ ಯಾವ ಸಂಬಂಧವೂ ಇಲ್ಲ. ಒಬ್ಬ ಸಾಮಾನ್ಯ

ಪ್ರಜೆಯಾಗಿ ಪೇಪರ್‌ಗಳನ್ನು ಓದಿ ಸುದ್ದಿ ತಿಳಿದುಕೊಳ್ಳುವುದೇ–'' ಅಷ್ಟರಲ್ಲಿ ಅವಳು ಎಚ್ಚರಗೊಂಡಳು. ತನ್ನ ವಿನಾಕಾರಣ ಕೋಪಕ್ಕೆ ನಾಚಿಕೊಂಡಳು. ಈ ಇರಿಟೇಷನ್‌ನಿಂದ ಹೊರಬೀಳದಿದ್ದರೆ ಅದು ನಿಜವಾದ ಎಕ್ಸಿಕ್ಯುಟೀವ್ ಲಕ್ಷಣಗಳಲ್ಲ.

"ಈಗಲೇ ನೀವೇನಾದರೂ ಕ್ರಮ ತೆಗೆದುಕೊಳ್ಳದಿದ್ದರೆ ಇನ್ನೊಂದು ಗಂಟೆಯನಂತರ ನಡೆಯುವ ಮತ್ತೊಬ್ಬ ಹುಡುಗನ ಹತ್ಯೆಯನ್ನು ನಿಲ್ಲಿಸಲಾರಿರಿ. ಅವರನ್ನು ಹೇಗಾದರೂ ಕಾಂಟಾಕ್ಟ್ ಮಾಡಬೇಕು.''

"ಹೌದು ಮಾಡಬೇಕು. ಆದರೆ ಅವರಾರು? ಎಲ್ಲಿರುತ್ತಾರೆ?" ಎಂದು ಕೂಡ ತಿಳಿಯುತ್ತಿಲ್ಲ. ಎಂಥ ಭೀಕರ ಟೆರ್ರರಿಸ್ಟ್‌ಗಳಾದರೂ ಸಮಯ ನೀಡು-ತ್ತಾರೆ. ತಮ್ಮ ಬೇಡಿಕೆಯಲ್ಲಿ ಇವರು ಸ್ವಲ್ಪವೂ ಸಡಿಲಿಕೆ ತೋರಿಸುತ್ತಿಲ್ಲ."

"ಈ ವಿಷಯದ ಬಗ್ಗೆ ನನಗೊಂದು ಆಲೋಚನೆ ಬಂದಿದೆ. ಯಾರನ್ನು ಕಾಂಟಾಕ್ಟ್ ಮಾಡಬೇಕೋ ಅರ್ಥವಾಗುತ್ತಿಲ್ಲ. ಅಷ್ಟರಲ್ಲಿ ನೀವು ನೆನಪಿಗೆ ಬಂದಿರಿ."

ಅವಳ ಕಣ್ಣುಗಳನ್ನು ಕಿರಿದುಗೊಳಿಸಿ "ಏನು ಆ ಆಲೋಚನೆ?"

"ಅವರು ನಮ್ಮ ಮುಖ್ಯಮಂತ್ರಿಗಳಿಗೆ ಏನು ಹೇಳಿದರೋ ಅರ್ಥವಾಗಲಿಲ್ಲ. ಮುಖ್ಯಮಂತ್ರಿ ರಾಜೀನಾಮೆ ಕೊಡುವವರೆಗೂ ಸರಿ... ಅಸೆಂಬ್ಲಿಯನ್ನು ಡಿಸಾಲ್ವ್ ಮಾಡಬೇಕಾ? ಇಲ್ಲ ತನ್ನ ಮಂತ್ರಿವರ್ಗದವರಲ್ಲಿ ಯಾರಿಗಾದರೂ ಒಬ್ಬರಿಗೆ ವಹಿಸಿ ಕೊಡಬೇಕಾ? ಅಥವಾ ವಿರೋಧ ಪಕ್ಷದವರಿಗೆ ಸರ್ಕಾರವನ್ನು ವಹಿಸಿಕೊಡಬೇಕಾ? ಈ ಮೂರರಲ್ಲಿ ಯಾವುದನ್ನು ಮಾಡಬೇಕು? ಟೆರ್ರರಿಸ್ಟ್‌ಗಳ ಸಿಟ್ಟು ಮುಖ್ಯ ಮಂತ್ರಿಗಳ ಮೇಲಾ? ಒಟ್ಟು ಅಧಿಕಾರಪಕ್ಷದ ಮೇಲಾ? ಇವೆಲ್ಲವನ್ನೂ ನಾವು ಕೇಳೋಣ. ಅವರು ಉತ್ತರಿಸುತ್ತಾರೆ. ಆ ರೀತಿಯಾಗಿ ಸ್ವಲ್ಪ ಸಮಯ ಸಿಗು-ತ್ತದೆ. ಕನಿಷ್ಟ ಒಬ್ಬ ಹುಡುಗನನ್ನಾದರೂ...''

ಅವನ ಮಾತಿನ್ನೂ ಪೂರ್ತಿಯಾಗುವುದಕ್ಕೆ ಮುಂಚೆಯೇ ಅವಳು ಮೇಲೆದ್ದು, "ಥ್ಯಾಂಕ್ಸ್" ಎಂದು ಮತ್ತೇನೂ ಹೇಳದೆ ಫೋನನ್ನು ಕೈಗೆ ತೆಗೆದು ಕೊಂಡಳು. ಅವನ ಮಾತಿನ ಅಂತರಾರ್ಥವನ್ನು ಗ್ರಹಿಸಲು ಅವಳಿಗೆ ಒಂದು ಕ್ಷಣ ಕೂಡಾ ಬೇಕಾಗಲಿಲ್ಲ. ಅವಳ ಕೈಗಳು ಯಂತ್ರಕ್ಕಿಂತಲೂ ವೇಗವಾಗಿ ಕೆಲಸ ಮಾಡಿ ದವು. "ನನಗೆ ಕೆಲಸ ಹೋದರೂ ಚಿಂತೆಯಿಲ್ಲ. ಮಕ್ಕಳ ಪ್ರಾಣ ಮುಖ್ಯ. ನೀವು ಯಾವರೀತಿಯ ಪ್ರಕಟಣೆ ನೀಡಿದರೂ ನನಗೆ ನೆಮ್ಮದಿಯೇ'' ಆ ಕಡೆಯಿಂದ ಮುಖ್ಯಮಂತ್ರಿಗಳು ಹೇಳಿದರು. ಆ ಒಂದು ದಿನದಲ್ಲೇ ಹತ್ತು ವರ್ಷ ಹೆಚ್ಚು ವಯಸ್ಸಾದಂತೆ ಕಾಣುತ್ತಿದ್ದಾರೆ ಆತ.

ಫೋನಿಟ್ಟು ತನ್ನವರಿಗೆ ಸೂಚನೆ ನೀಡಿದಳು ಪ್ರವಲ್ಲಿಕ. ಅವಳು ಚಕಚಕನೆ ಕೆಲಸ ಮಾಡುತ್ತಿದ್ದರೆ ಅದನ್ನು ನೋಡುತ್ತಾ ಕುಳಿತ ವಿಹಾರಿ. ನೋಡುತ್ತಿದ್ದಂತೆಯೇ ಅವನಿಗೆ ಅವಳ ಬಗ್ಗೆ ಗೌರವ ಹೆಚ್ಚಾಯಿತು.

ಸರಿಯಾಗಿ ಹತ್ತು ನಿಮಿಷ ಕಳೆಯಿತು.

ನಾಲ್ಕೂವರೆಯಾಯಿತು, ಎಲ್ಲಾ ರೇಡಿಯೋಗಳಲ್ಲೂ, ಟೀವಿಗಳಲ್ಲೂ ಮುಖ್ಯಮಂತ್ರಿಗಳ ಸಂದೇಶ ಪ್ರಸಾರವಾಯಿತು. ಅಸೆಂಬ್ಲಿಯನ್ನು ಡಿಸಾಲ್ವ್ ಮಾಡಿದರೆ ಆಗುವ ಖರ್ಚನ್ನು ದೃಷ್ಟಿಯಲ್ಲಿರಿಸಿಕೊಂಡು, ನಿರ್ಧಾರ ತೆಗೆದುಕೊಳ್ಳುವಂತೆ ಟೆರ್ರರಿಸ್ಟ್‌ಗಳಿಗೆ ಮನವಿ ನೀಡಲಾಯಿತು. ಆದರೆ ಇದೆಲ್ಲಾ ಕೇವಲ ಅವರಿಂದ ಸಮಯಾವಕಾಶ ಪಡೆಯಲು ಅಷ್ಟೆ.

ಐದಾಯಿತು.

ಆರಾಯಿತು.

ಮತ್ತೊಂದು ಕೊಲೆ ನಡೆಯಲಿಲ್ಲ.

ಮಕ್ಕಳ ತಂದೆ ತಾಯಿಯರು ನೆಮ್ಮದಿಯ ನಿಟ್ಟುಸಿರು ಬಿಟ್ಟರು. ಆದರೂ ಅವರ ತಳಮಳ ಪೂರ್ತಿ ಕಡಿಮೆಯಾಗಿರಲಿಲ್ಲ. ಅವಳು ವಿಹಾರಿಯೆಡೆಗೆ ಕೃತಜ್ಞಾಪೂರ್ವಕವಾಗಿ ನೋಡಿದಳು. ಅವನ ಯೋಚನೆ ಫಲ ನೀಡಿತ್ತು.

ಬರಲಿರುವ ಫೋನ್ ಕರೆಗಾಗಿ ಎಲ್ಲರೂ ಎಚ್ಚರದಿಂದಿದ್ದರು. ಫೋನನ್ನು ಟ್ರಾಪ್ ಮಾಡುವುದು ಅನವಶ್ಯಕ. ಅವು ಟ್ರಾಪ್‌ನಲ್ಲಿರುತ್ತವೆಂದು ವಿರೋಧಿಗಳಿಗೂ ಗೊತ್ತು. ಅದರ ಉಪಯೋಗವಿಲ್ಲವೆಂದು ಅವಳಿಗೂ ಗೊತ್ತು. ಮೇಲಾಗಿ ಹೀಗೆ ಮಾಡಿರುವುದು ಗೊತ್ತಾದರೆ ಅವರು ಮತ್ತೊಂದು ತೊಂದರೆಯನ್ನು ಸೃಷ್ಟಿ ಮಾಡುತ್ತಾರೆ. ತನ್ನ ಡಿಪಾರ್ಟ್‌ಮೆಂಟಿನಲ್ಲೇ ಅವರ ಮನುಷ್ಯರಿದ್ದಾರೆ.

ಆರೂವರೆ......ಏಳು......ಏಳೂವರೆಗೆ ಫೋನ್ ಬಂತು. ಆಫೀಸೆಲ್ಲಾ ಒಮ್ಮೆಗೇ ಜಾಗೃತವಾಯಿತು. "ಮುಖ್ಯಮಂತ್ರಿ ಪದವಿಗೆ ರಾಜೀನಾಮೆ ಕೊಡುವುದೇ ನಮಗೆ ಬೇಕಾಗಿರುವುದು. ಬೇರೆ ಯಾರು ಮುಖ್ಯಮಂತ್ರಿಯಾದರೂ ನಮ್ಮ ಅಭ್ಯಂತರವಿಲ್ಲ. ಆದರೆ ಈ ಬದಲಾವಣೆಯೆಲ್ಲಾ—'' ವಿಮಾನದ ಶಬ್ದದಿಂದ ಆ ಕಡೆಯಿಂದ ಬರುತ್ತಿದ್ದ ಮಾತುಗಳು ಸರಿಯಾಗಿ ಕೇಳಿಸಲಿಲ್ಲ.

"ಹಲೋ......ಹಲೋ......"

"ಈ ಬದಲಾವಣೆಯೆಲ್ಲಾ ನಾಳೆಯೊಳಗಾಗಿ ನಡೆದುಬಿಡಬೇಕು." ಫೋನ್ ಕಟ್ ಆಯಿತು, ಪ್ರವಲ್ಲಿಕ ಫೋನಿಡುತ್ತಾ "ನಿಮ್ಮ ಐಡಿಯ ಸ್ವಲ್ಪ ಫಲ ನೀಡಿತು. ನಾಳೆ ಸಂಜೆಯವರೆಗೂ ಸಮಯ ಸಿಕ್ಕಿದೆ" ಅಂದಳು.

"ಇನ್ನೂ ಸ್ವಲ್ಪ ಹೊತ್ತು ಮಾತನಾಡುತ್ತಿರಬೇಕಾಗಿತ್ತು" ವಿಹಾರಿ ಹೇಳಿದ.

"ಅವರು ಕೇಳಿದ ವಿಷಯಗಳನ್ನೆಲ್ಲಾ ಚೀಫ್ ಮಿನಿಸ್ಟರ್‌ಗೆ ಹೇಳಬೇಕಾಗಿತ್ತಲ್ಲ."

ಇವರು ಮಾತನಾಡುತ್ತಿದ್ದಂತೆಯೇ ಮುಖ್ಯಮಂತ್ರಿಗಳು ಗಡಿಬಿಡಿಯಿಂದ ಒಳಗೆ ಬಂದರು.

"ಏನು? ಅವರೇನೋ ಕೋರಿಕೆಗಳನ್ನು ಸಲ್ಲಿಸಿದರಂತಲ್ಲ. ಏನದು?" ಎಂದು ಕೇಳಿದರು. ಪ್ರವಲ್ಲಿಕ ಹೇಳಿದಳು. ಆತನ ಮುಖ ನೋಡುತ್ತಿದ್ದರೆ ಮಕ್ಕಳ ತಂದೆ ತಾಯಿಯರಿಗಿಂತಲೂ ಹೆಚ್ಚು ನೋವನ್ನು ಅನುಭವಿಸುತ್ತಿರುವಂತೆ ಕಾಣುತ್ತಿತ್ತು,

ಪ್ರವಲ್ಲಿಕ ಹೇಳಿದ್ದನ್ನು ಕೇಳಿದ ಆತನ ಮುಖ ಸಡಿಲಗೊಂಡಿತು.

"ಸದ್ಯ! ಅಷ್ಟಕ್ಕಾದರೂ ಒಪ್ಪಿಕೊಂಡರಲ್ಲ. ನಮ್ಮ ಸೂರ್ಯಾರಾವನ್ನು ಮುಖ್ಯಮಂತ್ರಿಯನ್ನಾಗಿ ಮಾಡೋಣ. ನಾನು ಪದವಿ ಬಿಡುವುದಕ್ಕೇನೂ ಅಭ್ಯಂತರವಿಲ್ಲ" ಎಂದರು. ಆತನೊಡನೆ ಬಂದಿದ್ದ ಪತ್ರಿಕಾ ವರದಿಗಾರರು ಈ ಸುದ್ದಿಯನ್ನು ಪ್ರಕಟಿಸಲು ಓಡಿದರು.

"ಆದರೆ ಸರ್..." ಹೇಳಿದಳು ಪ್ರವಲ್ಲಿಕ. "ಅವರ ಡಿಮ್ಯಾಂಡ್‌ಗಳನ್ನು ಒಪ್ಪಿಕೊಳ್ಳುವುದು ನಮ್ಮ ಸೋಲಲ್ಲವೇ ಸರ್?"

"ಒಟ್ಟು ಅಸೆಂಬ್ಲಿಯನ್ನೇ ಡಿಸಾಲ್ವ್ ಮಾಡಲು ಕೇಳುತ್ತಾರೇನೋ ಎಂದುಕೊಂಡಿದ್ದೆ. ಪುಟ್ಟ ಮಕ್ಕಳನ್ನು ಹಿಡಿದುಹಾಕಿಕೊಂಡು ಅವರೇನು ಕೇಳಿದ್ದರೂ ಒಪ್ಪಿಕೊಳ್ಳಬೇಕಿತ್ತು ನಾವು. ಅಂತಹ ದೊಡ್ಡ ಡಿಮ್ಯಾಂಡುಗಳೇನನ್ನೂ ಕೇಳಲಿಲ್ಲವಲ್ಲ ಸದ್ಯ! ಪದವಿಗೇನು? ಪ್ರಜೆಗಳು ಇಷ್ಟಪಟ್ಟರೆ ಮತೆ ಅಧಿಕಾರಕ್ಕೆ ಬಂದೇ ಬರುತ್ತೇನೆ. ನಾನು ಹೇಗೋ ಸೂರ್ಯಾರಾವ್ ಕೂಡಾ ಅಷ್ಟೇ, ಪಾಪ ಮೊನ್ನೆ ಆತನ ಮೇಲೆ ಕೂಡಾ ಕೊಲೆಯ ಪ್ರಯತ್ನ ನಡೆಯಿತು. ಆತ ಮುಖ್ಯಮಂತ್ರಿಯಾಗಲು ಅವರು ಒಪ್ಪಿಕೊಳ್ಳುತ್ತಾರೋ ಇಲ್ಲವೋ ಒಮ್ಮೆ ಕೇಳಿಬಿಡಿ. ನಾಳೆ ಬೆಳಿಗ್ಗೆಯೇ ನನ್ನ ರಾಜೀನಾಮೆಯನ್ನು ಅಸೆಂಬ್ಲಿಯಲ್ಲಿ ಪ್ರಕಟಿಸಿ ಬಿಡುತ್ತೇನೆ" ತಲೆ ತಗ್ಗಿಸಿಕೊಂಡು ಆತ ಹೊರಟು ಹೋದರು. ನಿಕುಂಜ್ ವಿಹಾರಿ ಆತನೆಡೆಗೇ ನೋಡುತ್ತಿದ್ದ. ಆತನ ಕಳಕಳಿ. ನಿರ್ಧಾರ ತೆಗೆದುಕೊಳ್ಳುವ ವಿಧಾನ, ತ್ಯಾಗಶೀಲತೆ ಅವನಿಗೆ ಇಷ್ಟವಾಯಿತು. ಅಧಿಕಾರಕ್ಕಾಗಿ ಎಷ್ಟೋ ಕ್ರೂರ ಪದ್ಧತಿಗಳನ್ನು ಅನುಸರಿಸುವ ರಾಜಕೀಯ ನಾಯಕರಿರುವ ಈ ದೇಶದಲ್ಲಿ, ಇಪ್ಪತ್ತೈದು ಮಕ್ಕಳ ಪ್ರಾಣ ಉಳಿಸುವುದಕ್ಕಾಗಿ ಈ ರೀತಿ ರಾಜೀನಾಮೆ ನೀಡಿದ್ದು ವಿಶೇಷವೇ!

ಅವನು ಡೆಪ್ಯುಟಿ ಚೀಫ್ ಕಡೆಗೆ ನೋಡಿದ.

ಅವಳ ಮುಖದಲ್ಲಿ ರಿಲಾಕ್ಸೇಷನ್ ಕಾಣುತ್ತಿತ್ತು. ಸದ್ಯಕ್ಕೆ ಈ ಸಮಸ್ಯೆ ಪರಿಹಾರವಾದಂತೆ. ಬಹುಶಃ ಈ ರಾಕ್ಷಸ ಶಕ್ತಿಗಳು ಮಕ್ಕಳನ್ನು ನಾಳೆ ಸಂಜೆಯ ವೇಳೆಗೆ ಬಿಡುಗಡೆ ಮಾಡಬಹುದು.

''ಒಟ್ಟಿನಲ್ಲಿ ಎಲ್ಲರಿಗಿಂತಲೂ ಅದೃಷ್ಟವಂತನೆಂದರೆ ಸೂರ್ಯಾರಾವ್. ಟೆರ್ರರಿಸ್ಟ್‌ಗಳಿಗೂ ಮುಖ್ಯಮಂತ್ರಿಗಳಿಗೂ ನಡುವೆಯಿದ್ದ ದ್ವೇಷ ಆತನಿಗೆ ಲಾಭ ದಾಯಕವಾಗಿ ಪರಿಣಮಿಸಿತು. ಮೊನ್ನೆ ನೀವು ಆ ಮಂತ್ರಿಯಂತೆ ವೇಷಹಾಕಿ ಕೊಳ್ಳದಿದ್ದರೆ ಆತನೆಲ್ಲಿರುತ್ತಿದ್ದನೋ!"

ವಿಹಾರಿ ಸ್ವಲ್ಪ ನಾಚಿಕೆಯಿಂದ "ಏನೋ ಆ ಕಾಲೇಜು ಹುಡುಗಿಯರನ್ನು ಸ್ವಲ್ಪ ಅಳಿಸೋಣವೆಂದು!" ಅಂದ.

"ಆ ಗ್ರೀನ್-ರೂಮಿನಲ್ಲಿ ಆಗ ನೀವು ಸಾಹಸ ಮಾಡದೆ ಇದ್ದಿದ್ದರೆ ನನಗೆ ಪಿಸ್ತೂಲ್ ತೆಗೆಯುವಷ್ಟು ಸಮಯವೂ ಸಿಗುತ್ತಿರಲಿಲ್ಲ" ಅಂದವಳು. ಅವನು ಮಾತು ಬದಲಾಯಿಸಲು, 'ನನಗೇಕೋ ಅಷ್ಟು ಸಂತೋಷವಿಲ್ಲ. ಏನೋ ಆದ ಹಾಗೆ ಅನ್ನಿಸಿ ನಾನು ನಿಮಗೆ ಹಾಗೆ ಹೇಳಿದ್ದು ನಿಜವೇ. ಆದರೆ ನಿಮ್ಮ ಡಿಪಾರ್ಟ್‌ಮೆಂಟ್ ಏನಾದರೂ ಮಾಡಿ ಹೊಸ ಮುಖ್ಯಮಂತ್ರಿ ಪ್ರಮಾಣವಚನ ಸ್ವೀಕರಿಸುವುದಕ್ಕಿಂತಲೂ ಮುಂಚೆ ಈ ಟೆರ್ರರಿಸ್ಟ್‌ಗಳನ್ನು ಓಡಿದರೆ ಉತ್ತಮ" ಅಂದ.

ಅವಳ ಮುಖದಲ್ಲಿ ರಿಲಾಕ್ಸೇಷನ್ ಹೋಯಿತು,

"ಹೌದು! ಮಕ್ಕಳ ಪ್ರಾಣಗಳನ್ನು ರಕ್ಷಿಸಿದೆವಾಗಲೀ. ವಿಜಯ ಅವರದೆ!"

"ಇದನ್ನು ಹೀಗೇ ಮುಂದುವರೆಯಲು ಬಿಟ್ಟರೆ ನಾಳೆ ಪ್ರತಿ ರಾಜ್ಯದಲ್ಲಿಯೂ. ಎಲ್ಲಾ ಡಿಮ್ಯಾಂಡ್‌ಗಳಿಗೂ ಇದೇ ಕೆಲಸವನ್ನು ಮಾಡುತ್ತಾರೆ ಈ ರಾಕ್ಷಸರು" ಅಂದಳು.

* * * *

"ಥ್ಯಾಂಕ್ಸ್" ಹೇಳಿದ ಸೂರ್ಯಾರಾವ್ ಅನಂತಾನಂತಸ್ವಾಮಿಯ ಕೈ ಹಿಡಿದು. "ನಿಮ್ಮ ಯೋಚನೆ ಅದ್ಭುತ! ನಿಮ್ಮ ಯೋಜನೆ ಅಪೂರ್ವ!! ಮೊದಲು ನೀವು ಹೇಳಿದಾಗ ಥಿಯೇಟರ್‌ನಲ್ಲಿ ನನ್ನ ಕೊಲೆ ಪ್ರಯತ್ನ ಅದೇಕೆಂದು ಆಶ್ಚರ್ಯಪಟ್ಟಿದ್ದೆ. ಆ ರೀತಿಯಾಗಿ ಪ್ರಜೆಗಳ ಸಹಾನುಭೂತಿ ಸಂಪಾದಿಸಿ ಆನಂತರ ಈ ರೀತಿ ನನಗೆ ಪದವಿ ಕೊಟ್ಟಿದ್ದೀರಿ. ನಿಮ್ಮ ಋಣವನ್ನು ನಾನು ಯಾವ ರೀತಿ ತೀರಿಸಲಿ?''

"ನನ್ನ ಮೂರನೇ ಸ್ತಂಭವಾಗಿ ನಿಲ್ಲುವ ಮೂಲಕ...ನನ್ನ ನಾಲ್ಕು ಸ್ತಂಭ

ಗಳು ಯಾವುವೆಂದು ತಿಳಿಯದ ಸಿ. ಬಿ. ಐ. ಪೆದ್ದುತನದಿಂದಿದೆ. ನನ್ನ ಮೂರನೆ ಸ್ತಂಭ ರಾಜಕೀಯ! ಅದು ನೀನೇ!! ಬುದ್ಧಿವಂತಿಕೆ. ಬಲ, ರಾಜಕೀಯ. ಪರಮೇಶ್ವರ, ರಾಮಲಾಲ್. ನೀನು-ಮೂವರೂ ನನ್ನ ಹಿಂದಿದ್ದರೆ ನಾನು ಭಾರತದ ಸರ್ವಾಧಿಕಾರಿಯಾಗುವ ದಿನ ದೂರವಿಲ್ಲ."

"ನಿಮ್ಮ ನಾಲ್ಕನೆ ಸ್ತಂಭ ಯಾರು ಸ್ವಾಮಿ?" ಉತ್ಸುಕತೆಯಿಂದ ಪ್ರಶ್ನಿಸಿದ.

ಸ್ವಾಮಿ ನಕ್ಕು–''ಅದನ್ನು ತಿಳಿಸಿದರೆ ನಿನ್ನ ಹೃದಯ ನಿಂತುಬಿಡುತ್ತದೆ. ಸಮಯ ಬಂದಾಗ ತಿಳಿಸುತ್ತೇನೆ.''

''ಅದು ಏನೇ ಆದರೂ ನಿಮ್ಮ ಋಣ ತೀರಿಸಲಾರೆ.''

"ಅಂದರೆ? ಅಂದರೆ ಕೋಟಿ ರೂಪಾಯಿ ಕೊಡಲಾರೆಯಾ?"

"ಒಂದು ಕೋಟಿ ಏನು ಸ್ವಾಮಿ! ಎರಡು ಕೋಟಿ ಕೊಟ್ಟರೂ ನಿಮ್ಮ ಋಣ ತೀರುವುದಿಲ್ಲ. ಮೊದಲು ಇದೆಲ್ಲಾ ನಿಜವೇನಾ? ನಿಜಕ್ಕೂ ನಡೆದಿದೆಯಾ? ಎಂಬ ಅನುಮಾನ ನನಗೆ. ಪಾಪ ಆ ಮುಖ್ಯಮಂತ್ರಿಗಳು ಈ ಪದವಿಗೆ ಬರಲು ಅದೆಷ್ಟೋ ಕಷ್ಟಪಟ್ಟಿದ್ದರು. ಅಹರ್ನಿಶಿ ಶ್ರಮಿಸಿದ್ದರು. ಅಂತಹ ಪದವಿಯನ್ನು ಇಷ್ಟು ಸುಲಭವಾಗಿ ಸಾಧಿಸಿ ನೀವು ನನಗೆ ಒಪ್ಪಿಸುತ್ತಿದ್ದೀರೆಂದರೆ ನಂಬಲೇ ಆಗುತ್ತಿಲ್ಲ ನನಗೆ ..''

"ಇದೆಲ್ಲಾ ವಿರೋಧಪಕ್ಷದವರ ಕುತಂತ್ರವೆಂದೋ, ವಿದೇಶೀಯರ ಕೈವಾಡವೆಂದೋ ಎಲ್ಲರೂ ತಿಳಿದುಕೊಂಡಿರುವವರೆಗೂ ನಿನ್ನ ಪದವಿಗೆ ತೊಂದರೆಯಿಲ್ಲ. ಕೇವಲ ಮುಖ್ಯಮಂತ್ರಿಯ ಮೇಲೆ ವೈಯಕ್ತಿಕ ದ್ವೇಷದಿಂದ ಆತನನ್ನು ಕೆಳಗಿಳಿಸಿದ್ದೇವೆಂದೂ ಇನ್ಯಾರು ಮುಖ್ಯಮಂತ್ರಿಯಾದರೂ ಟೆರ್ರರಿಸ್ಟ್‌ಗಳಿಗೆ ಅಭ್ಯಂತರವಿಲ್ಲವೆಂದೂ ಜನಗಳು ಅಂದುಕೊಳ್ಳುವಂತೆ ಮಾಡಿದೆವು. ನಿನ್ನ ಮೇಲೆ ಕೊಲೆ ಪ್ರಯತ್ನ ನಡೆಸಿ. ಮತ್ತೊಂದು ಕಡೆ ನಿನ್ನ ಬಗ್ಗೆ ಅನುಕಂಪ ಮೂಡುವಂತೆ ಮಾಡಿದ್ದೇವೆ.'' ಸ್ವಾಮಿ ಒಂದು ಕ್ಷಣ ಮೌನವಾಗಿ ಮತ್ತೆ ಮುಂದುವರೆಸಿದ. ''ರಾಮಲಾಲ್ ಬರುತ್ತಾನೆ. ಕೋಟಿ ರೂಪಾಯಿಗಳನ್ನು ಕೊಟ್ಟು ಕಳುಹಿಸು. ನಿನ್ನ ಕೆಲಸ ಪೂರ್ತಿಯಾದಂತೆಯೇ. ನಂತರ ನನ್ನ ದೇಶಕ್ಕೆ ಏಜೆಂಟಾಗಿ ವ್ಯವಹರಿಸು.''

"ನಾಳೆ ಪ್ರಮಾಣ ವಚನ ಸ್ವೀಕರಿಸಿದ ಕೂಡಲೇ, ಒಂದೆರಡು ದಿನಗಳ ನಂತರ..."

"ಒಂದೆರಡು ದಿನಗಳು..." ಸ್ವಾಮಿಯ ಹಣೆಯ ಸುಕ್ಕುಗಳು ಹೆಚ್ಚಾದವು.

"ಹಾಗಲ್ಲಾ...ಮುಖ್ಯವಾದ ಫೈಲುಗಳಿಗೆ ಸಹಿ ಮಾಡಿ, ಅಷ್ಟು ಹಣ

ವಸೂಲು ಮಾಡಲು ಒಂದೆರಡು ದಿನ ಬೇಕಾಗುತ್ತದಲ್ಲಾ ಸ್ವಾಮಿ?"

"ಹಾಗಾದರೆ ಈಗ ನಿನ್ನ ಬಳಿ ಅಷ್ಟು ಹಣ ಇಲ್ಲವೆನ್ನುತ್ತೀಯಾ?''

"ಇಲ್ಲಾ ಸ್ವಾಮಿ?'' ಸೂರ್ಯಾರಾವ್ ಕೈ ಹಿಸುಕಿಕೊಂಡ.

ಅನಂತಾನಂತ ಸ್ವಾಮಿ ನಕ್ಕ. "ಜಂಷೆಡ್‌ಫುರ್ ಇನ್‌ವೆಸ್ಟ್‌ಮೆಂಟ್ಸ್‌ನಲ್ಲಿ ನಿನ್ನ ಹಣ ಒಂದೂವರೆ ಕೋಟಿಯಿದೆ. ಯಾವ ಕ್ಷಣದಲ್ಲಿ ಬೇಕಾದರೂ ನೀನು ಅದನ್ನು ತೆಗೆದುಕೊಳ್ಳಬಹುದು. ತಾಜ್‌ಮಹಲ್ ಹೋಟೆಲ್ ಪಕ್ಕದ ಸ್ಲಮ್ ಡ್ವೆಲ್ಲರ್ಸ್ ಭೂಮಿಯಿಂದ ಕನಿಷ್ಠ ಮೂರುಕೋಟಿಯಾದರೂ ಸಿಗುತ್ತದೆ. ಅದರ ಮೇಲೆ ಒಂದು ಕೋಟಿಯ ತನಕ ಯಾವ ಮಾರ್ವಾಡಿಯಾದರೂ ಕೊಡುತ್ತಾನೆ. ದೆಹಲಿಯ ಮಾರುತಿ ಹೋಟೆಲ್ಸ್‌ನಲ್ಲಿ ಬೇನಾಮಿಯ ಹೆಸರುಗಳ ಮೇಲೆ ಸಾಕಷ್ಟು ಷೇರುಗಳನ್ನು ಹೊಂದಿದ್ದಿ. ನಿನ್ನ ಸೆಂಟ್ರಲ್ ಬ್ಯಾಂಕ್ ಲಾಕರ್ಸ್‌ನಲ್ಲಿ ಬಂಗಾರ ಒಂದು ಕೇಜಿಗಿಂತ ಹೆಚ್ಚಾಗಿದೆ. ಎಲ್ಲಕ್ಕಿಂತ ಮುಖ್ಯವಾಗಿ..." ನಕ್ಕು, ನಿಧಾನವಾಗಿ ಹೇಳಿದ "...ಸ್ವಿಸ್ ಬ್ಯಾಂಕ್ ಅಕೌಂಟ್ ನಂಬರ್, 0A19xv 219 cos 123 code CAT & RAT ನಲ್ಲಿ ನೆನ್ನೆ ಸಂಜೆಯ ವೇಳೆಗೆ ನಿನ್ನ ಹೆಸರಿನಲ್ಲಿ 79,24,796 ಸ್ವಿಸ್ ಫ್ರಾಂಕ್‌ಗಳಿದ್ದವು. ಅದರಲ್ಲಿ ಒಂದು ಕೋಟಿ ರೂಪಾಯಿಗಳನ್ನು ನನ್ನ ಹೆಸರಿಗೆ ಅಲ್ಲೇ ಟ್ರಾನ್ಸ್‌ಫರ್ ಮಾಡಿಸು"

ಸೂರ್ಯಾರಾವ್‌ನ ಬಾಯಿ ಒಣಗಿತು, ತನಗೇ ತನ್ನ ಆಸ್ತಿಗಳ ವಿವರ ಇಷ್ಟೊಂದು ಚೆನ್ನಾಗಿ ತಿಳಿದಿಲ್ಲ, ದಿಗ್ಭ್ರಾಂತನಾಗಿ ತಲೆಯೆತ್ತಿ ಅನಂತಾನಂತ ಸ್ವಾಮಿಯೆಡೆಗೆ ನೋಡಿದ.

ಸ್ವಾಮಿ ಅಲ್ಲಿರಲಿಲ್ಲ. ರಾಮ್‌ಲಾಲ್ ಇದ್ದ– 'ಹೊರಡೋಣವಾ' ಎಂಬಂತೆ ನೋಡುತ್ತಾ.

# 7

ನೀವು ಮಾಡಿದ ಸಹಾಯಕ್ಕೆ ಥ್ಯಾಂಕ್ಸ್" ಪ್ರವಲ್ಲಿಕ ಮೇಲೇಳುತ್ತಾ ಹೇಳಿದಳು. ವಿಹಾರಿ ಕೂಡಾ ಮೇಲೆದ್ದು. "ನಾನು ಮಾಡಿದ್ದೇನಿದೆ? ಒಟ್ಟಿನಲ್ಲಿ ಆಡಳಿತ ಪಕ್ಷ ರಾಜೀನಾಮೆ ಕೊಡಬೇಕಾ ಇಲ್ಲವೇ ಅಸೆಂಬ್ಲಿ ಡಿಸಾಲ್ವ್ ಆಗ-ಬೇಕಾ ಎಂದು ತಿಳಿದುಕೊಳ್ಳುವವರೆಗೆ ನಾನು ಮಾಡಿದೆನಾಗಲಿ, ಕೊನೆಗೆ ವಿಜಯ ಅವರದೇ ತಾನೆ. ಅಂದುಕೊಂಡದ್ದನ್ನು ಸಾಧಿಸಿದರು." ಅಂದ.

ಅವಳು ತಲೆ ಕೊಡವುತ್ತಾ "ಇನ್ನೇನೂ ಯೋಚಿಸುವ ಸ್ಥಿತಿಯಲ್ಲಿಲ್ಲ ನಾನು. ಇಪ್ಪತ್ನಾಲ್ಕು ಗಂಟೆಯಿಂದ ನಿದ್ರೆಯಿಲ್ಲ ನಂಗೆ. ಬನ್ನಿ. ನಿಮ್ಮನ್ನು ಡ್ರಾಪ್ ಮಾಡ್ತೀನಿ" ಅಂದಳು.

ಇಬ್ಬರೂ ಹೊರಬಂದರು.

ಹೊರಗೆ ಜನ. ಅವಳನ್ನು ಸುತ್ತುವರಿದರು. ವಿಧವಿಧ ಪ್ರಶ್ನೆಗಳು...

"ಮಕ್ಕಳನ್ನು ಯಾವಾಗ ಬಿಡುತ್ತಾರಂತೆ?"

"ಅವರ ದಯಾ ದಾಕ್ಷಿಣ್ಯದ ಹಂಗಿನಿಂದ ಸುಮ್ಮನಿದ್ದೀರಾ?"

"ಹೊಸ ಮುಖ್ಯಮಂತ್ರಿ ಪದವಿಗೆ ಬರುವವರೆಗೂ ನಮ್ಮ ಮಕ್ಕಳನ್ನು ನೋಡಲಾರೆವಾ?"

ಪೋಲೀಸರು ಅವರನ್ನು ಕಂಟ್ರೋಲ್ ಮಾಡಲಾರದೆ ಅವಸ್ಥೆ ಪಡು ತ್ತಿದ್ದರು, ಅವಳು ಅತಿ ಕಷ್ಟದಿಂದ ಕಾರನ್ನು ಹೊರತಂದಳು. ಅವನು ತನ್ನ ಅಡ್ರೆಸ್ಸನ್ನು ಹೇಳಿದ.

ಅವಳು ಡ್ರೈವ್‌ಮಾಡುತ್ತಾ ಕೇಳಿದಳು– "ನೀವೇನು ಓದ್ತಿದೀರಿ?"

ಅವನು ಹೇಳಿದ 'ಅಪ್ಪ ಚಿಕ್ಕಂದಿನಲ್ಲೇ ತೀರಿಕೊಂಡರು. ಅಮ್ಮನಿಗೆ ನಾನೆಂದರೆ ಅತೀ ಪ್ರೀತಿ–ನಂಗೂ ಅಷ್ಟೆ. ಈ ನಾಟಕದ ಹುಚ್ಚಿದೆ ನೋಡಿ. ಇದು ಹುಡ್ಗೀನ ಪ್ರೀತಿ ಮಾಡ್ದಾಗೆ. ದೂರದಲ್ಲಿದ್ದಷ್ಟು ಹೊತ್ತೂ ಸೆಳೆಯುತ್ತಿರುತ್ತದೆ, ಒಳಗೆ ಹೆಜ್ಜೆ ಇಟ್ಟೆವೋ–ರಂಗಸ್ಥಳಕ್ಕೆ ತಾಳಿ ಕಟ್ಟುವವರೆಗೂ ಬಿಡುವುದಿಲ್ಲ." ಪ್ರವಲ್ಲಿಕ ನಕ್ಕಳು.

ಕಾರು ಟ್ರಾಫಿಕ್‌ನಡುವೆ ಬಂತು. ಅತ್ತ ಇತ್ತ ಕಾರುಗಳು ವೇಗವಾಗಿ ಬರುತ್ತಿದ್ದವು. ಹಾರನ್ನಿನ ಶಬ್ದಗಳು ಕಿವಿಗೆ ಹಿಂಸೆಮಾಡುತ್ತಿವೆ.

"ಅವಳು ನಗುತ್ತಲೇ ಹೇಳಿದಳು–ನಿಮ್ಮ ಹಾಬಿ ಹುಡುಗಿಯ ಪ್ರೀತಿಯ ಪ್ರೀತಿಯಂತದ್ದಾದರೆ ನಮ್ಮ ಉದ್ಯೋಗ ಗಂಡಸರನ್ನು ಪ್ರೀತಿಸಿದಂತೆ. ದೂರ ದಲ್ಲಿದ್ದಷ್ಟು ಹೊತ್ತೂ ಟೆಮ್ಪ್ಟ್ ಮಾಡುತ್ತೆ. ಒಳಗೆ ಹೋದ ನಂತರ ಯಾವಾಗ ಹೊರಬರುತ್ತೇವೋ ಎನ್ನಿಸುತ್ತದೆ''

"ಇಷ್ಟು ಚಿಕ್ಕ ವಯಸ್ಸಿನಲ್ಲೇ ಇಂತಹ ದೊಡ್ಡ ಉದ್ಯೋಗ ಮಾಡುತ್ತಾ ಹೀಗೆ ಹೇಳುತ್ತಿದ್ದೀರಲ್ಲಾ–ನಿಮಗೆ ಈ ಕೆಲಸ ಇಷ್ಟವಿಲ್ಲವಾ?"

"ಇಲ್ಲ, ಸ್ವಲ್ಪಾನೂ ಇಲ್ಲ. ನಂಗೆ ಯಾವುದಾದರೂ ಹೊಲದ ಮಧ್ಯೆ ಒಂದು ಗುಡಿಸಲನ್ನು ಹಾಕಿಕೊಂಡು ಒಂದ್ನಾಲ್ಕು ಕೋಳಿ, ನಾಲ್ಕು ಮೇಕೆಗಳನ್ನು ಸಾಕ್ಕೊಂಡಿರೋದು ಇಷ್ಟ''

''ಚೆನ್ನಾಯ್ತು. ನಿಮ್ಮ ಗಂಡ ಆಗೋ ವ್ಯಕ್ತಿ''

ಪಕ್ಕದಲ್ಲೇ ವೇಗವಾಗಿ ಹಾದುಹೋದ ಕಾರಿನ ಶಬ್ದದಲ್ಲಿ ಅವನ ಮಾತು ಕೇಳಿಸಲಿಲ್ಲ.

"ಏನಂದ್ರೀ?

''ನಿಮ್ಮ ಕರ್ನಲ್ ಸಾಹೇಬರು—"

ಮತ್ತೊಂದು ಕಾರಿನ ಹಾರನ್.

"ಮೈಗಾಡ್. ಈ ಕಾರುಗಳ ಹಾರನ್ ಶಬ್ದಕ್ಕೆ ಕಿವಿಯ ಪಕ್ಕದಲ್ಲೇ ಮಾತಾಡಿದರೂ ಕೇಳಿಸುವುದಿಲ್ಲ...''

ಅವನ ಮಾತಿನ್ನೂ ಪೂರ್ತಿಯಾಗಲಿಲ್ಲ. ಅವಳು ಕಾರನ್ನು ಸರ್ರನೆ ಪಕ್ಕಕ್ಕೆ ತಂದು ನಿಲ್ಲಿಸಿದಳು. ಅವನು ಅವಳಡೆಗೆ ಏಕೆ ಎಂಬಂತೆ ವಿಸ್ಮಯದಿಂದ ನೋಡಿದ.

ಅವಳು ನಿಧಾನವಾಗಿ "ಅವರು ಫೋನಿನಲ್ಲಿ ಮಾತನಾಡುತ್ತಿದ್ದರೆ ವಿಮಾನದ ಶಬ್ದ ಕೇಳಿಸಿತು, ತುಂಬಾ ಹತ್ತಿರವಲ್ಲಿ. ಕಿವಿಯ ಪಕ್ಕದಲ್ಲೇ ಹೋಗುತ್ತಿದ್ದಂತೆ..." ಅಂದಳು. ಒಂದು ದುರ್ಭೇದ್ಯವಾದ ಕೋಟೆಯೊಳಗೆ ಪ್ರವೇಶಿಸಲು ಗಾಳಿ ಹೋಗುವಷ್ಟು ಬಿರುಕು ಸಿಕ್ಕಿದಷ್ಟು ಸಂತೋಷ......ಇಬ್ಬರೂ ಮುಖ ಮುಖ ನೋಡಿಕೊಂಡರು. ವಿಹಾರಿ ಜೇಬಿನಿಂದ ಕರ್ಚೀಫ್ ತೆಗೆದು ಹೊರಗಿಟ್ಟು ಗಾಳಿ ಬೀಸುವ ದಿಕ್ಕನ್ನು ನೋಡಿದ.

ಅವರು ಫೋನ್ ಮಾಡಿದ್ದು ಸರಿಯಾಗಿ ಬೆಂಗಳೂರಿನ ವಿಮಾನ ಇಳಿಯುವ ಸಮಯದಲ್ಲೇ! ಹೋಗುವಾಗ ಹೇಗೆ ಹೋದರೂ. ಇಳಿಯುವಾಗ ಮಾತ್ರ ಗಾಳಿಗೆ ಎದುರಾಗಿ ಇಳಿಯಬೇಕು! ಬ್ರೇಕುಗಳ ಒತ್ತಡವೊಂದೇ ಸಾಕಾಗುವುದಿಲ್ಲ. ಗಾಳಿ ಪೂರ್ವದಿಂದ ಪಶ್ಚಿಮಕ್ಕೆ ಬೀಸುತ್ತಿದೆ. ಆದರೆ ವಿಮಾನ ಪಶ್ಚಿಮದ ಕಡೆಯಿಂದ ಪೂರ್ವಕ್ಕೆ ಇಳಿದಿರುತ್ತೆ. ಆದ್ದರಿಂದ ಅವರು ಮಕ್ಕಳನ್ನು ಬಚ್ಚಿಟ್ಟಿ

ರುವ ಸ್ಥಳ ವಿಮಾನ ನಿಲ್ದಾಣದಿಂದ ಪಶ್ಚಿಮಕ್ಕಿರುವ ಸಾಧ್ಯತೆಯೇ ಹೆಚ್ಚು. ರನ್‌ವೇಗೆ ಅತ್ಯಂತ ಸಮೀಪದಲ್ಲಿ–'' ಅವಳು ಆಶ್ಚರ್ಯದಿಂದ ಅವನಡೆಗೆ ನೋಡಿದಳು. ಸಿ. ಬಿ. ಐ ನಲ್ಲಿ ಕೂಡಾ ಅಷ್ಟು ವೇಗವಾಗಿ ಯೋಚಿಸುವವರು ಅಪರೂಪ. ಅವನು ಹೇಳಿದ್ದು ಅಕ್ಷರಶಃ ನಿಜವಿರಬಹುದು. ಆದರೆ ಅದು ಕೇವಲ ಲಾಜಿಕ್...

''ಅತ್ತ ಹೋಗಿ ನೋಡೋಣವಾ? ಗಾಳಿಯಲ್ಲಿ ಬಾಣ ಬಿಡೋಣ. ತಗುಲಿದರೆ ತಗಲುತ್ತೆ''

ಅವನು ತಲೆ ಆಡಿಸಿದ.

ಕಾರು ವಿಮಾನ ನಿಲ್ದಾಣದೆಡೆಗೆ ಓಡಿತು: ರನ್‌ವೇಗೆ ಪಶ್ಚಿಮ ದಿಕ್ಕಿನಲ್ಲಿ ಬಯಲು ಪ್ರದೇಶ ..ಅಲ್ಲೊಂದು ಇಲ್ಲೊಂದು ಹಳೆಯ ಮನೆಗಳು,

"ಟೆರ್ರರಿಸ್ಟ್‌ಗಳು ಇಲ್ಲೇ ಎಲ್ಲೋ ಒಂದು ಪಬ್ಲಿಕ್ ಫೋನಿನಿಂದ ಫೋನ್ ಮಾಡಿರುತ್ತಾರೆ. ಸಣ್ಣ ಮಕ್ಕಳನ್ನು ಅಷ್ಟು ದೂರ ನಡೆಸಿಕೊಂಡು ಹೋಗಲು ಸಾಧ್ಯವಿಲ್ಲದಿರುವುದರಿಂದ. ವ್ಯಾನಿನ ಟೈರ್ ಗುರ್ತುಗಳು ಇರುತ್ತವೆ, ಮಕ್ಕಳನ್ನು ಇಳಿಸಿದ ನಂತರ ವ್ಯಾನನ್ನು ದೂರದಲ್ಲಿ ಬಿಟ್ಟಿರುತ್ತಾರೆ. ಆ ಟೈರಿನ ಗುರುತನ್ನು ಕಂಡುಹಿಡಿಯುವುದು ಕಷ್ಟವೇನಲ್ಲ!''

ಪ್ರವಲ್ಲಿಕ ನಕ್ಕಳು. "ನೀವು ಪೋಲೀಸ್ ಡಿಪಾರ್ಟ್‌ಮೆಂಟಿನಲ್ಲಿರಬೇಕಾಗಿತ್ತು." ವಿಹಾರಿ ಸೀರಿಯಸ್ಸಾಗಿ ಹೇಳಿದ– ''ಚಿಕ್ಕವನಾಗಿದ್ದಾಗಿನಿಂದಲೂ ಪತ್ತೇದಾರಿ ಕಾದಂಬರಿ ಓದುತ್ತಿದ್ದೇನೆ."

ಕಾರು ವಿಮಾನ ನಿಲ್ದಾಣ ಅತ್ತಕಡೆ ರನ್‌ವೇಗೆ ಸಮಾನಾಂತರವಾಗಿ ಹೊರಡುತ್ತಿದೆ, ದೂರದಲ್ಲಿ ಬೆಟ್ಟದಮೇಲೆ ಪಾಳುಬಿದ್ದ ಒಂದು ದೊಡ್ಡ ಮನೆ ಕಾಣಿಸುತ್ತಿದೆ. ಅದಕ್ಕೆ ಮೇಲ್ಚಾವಣಿಯಿಲ್ಲ. ಹಾಳುಗೋಡೆಗಳು ಸುತ್ತಲೂ ಗಿಡಗಳು ದಟ್ಟವಾಗಿ ಬೆಳೆದಿದೆ. ಆ ಕತ್ತಲಿನಲ್ಲಿ ಭಯಂಕರವಾಗಿ ಕಾಣಿಸುತ್ತಿದೆ.

''ನಮ್ಮ ಊಹೆ ಸ್ವಲ್ಪ ಸರಿಯಾದರೂ ಆ ಪಾಳು ಮನೆಯೇ ನಮ್ಮ ಟಾರ್ಗೆಟ್...'' ವಿಹಾರಿ ಹೇಳಿದ.

ಇಬ್ಬರೂ ಸ್ವಲ್ಪ ಹೊತ್ತು ಅದರೆಡೆಗೇ ನೋಡುತ್ತಾ ನಿಶ್ಶಬ್ದವಾಗಿ ಕುಳಿತರು.

ತುಂಬಾ ಡೆಲಿಕೇಟ್ ವ್ಯವಹಾರ. ಒಳಗೆ ಟೆರ್ರರಿಸ್ಟ್‌ಗಳು ಎಷ್ಟು ಜನರಿದ್ದಾರೋ ನೋಡಬೇಕು. ಒಮ್ಮೆಗೇ ಎಲ್ಲರನ್ನೂ ಬಂಧಿಸದಿದ್ದರೆ ಮುಗ್ಧ ಮಕ್ಕಳ ಪ್ರಾಣಕ್ಕೇ ಅಪಾಯ."

ಕಾರನ್ನು ಅಲ್ಲೇ ಇಲ್ಲಿಸಿ, ಅವರು ಸುಮಾರು ಎರಡು ಫರ್ಲಾಂಗ್ ನಡೆದು ಬೆಟ್ಟದ ಬುಡವನ್ನು ತಲುಪಿದರು.

"ಇಷ್ಟು ಗಂಟೆಗಳ ಕಾಲ ಹಗಲು–ರಾತ್ರಿ, ಬಿಸಿಲು–ಚಳಿ ಎನ್ನದೆ ಈ ಸಣ್ಣ ಮಕ್ಕಳನ್ನು ಮೇಲ್ಪಾವಣಿಯಿಲ್ಲದ ಈ ಜಾಗದಲ್ಲಿರಿಸಿದ್ದಾರೆಂದರೆ ಅವರು ಮನುಷ್ಯರಲ್ಲ; ರಾಕ್ಷಸರು" ಪ್ರವಲ್ಲಿಕ ಹೇಳಿದಳು.

"ಇದರ ಪ್ರತಿಫಲವನ್ನು ಇನ್ನು ಕೆಲವೇ ಕ್ಷಣಗಳಲ್ಲಿ ಅವರು ಅನುಭವಿಸಲಿದ್ದಾರೆ" ವಿಹಾರಿ ಮುಂದಕ್ಕೆ ನಡೆಯುತ್ತಾ ಹೇಳಿದ. ಅವನ ಕಣ್ಮುಂದೆ ವಿನೀಲನ ಶವ ಕಾಣಿಸುತ್ತಿದೆ, ರಕ್ತದಲ್ಲಿ ನೆಂದು ಗುಬ್ಬಚ್ಚಿಯಂತೆ ಮುದುಡಿಕೊಂಡಿದ್ದ ಶರೀರ...

ಬಿಲ್ಡಿಂಗ್ ಹಿಂಭಾಗ ಸೇರಿಕೊಂಡರು, ಮಿಲಿಟರಿಯವರಂತೆ ಅವಳು ಎರಡೂ ಕೈಗಳ ಬೆರಳುಗಳನ್ನು ಹೆಣೆದು ಹಿಡಿದಾಗ. ಅವನು ಅದರ ಮೇಲೆ ತನ್ನ ಕಾಲನ್ನಿಟ್ಟು, ಗೋಡೆಯನ್ನು ಹಿಡಿದುಕೊಂಡು ಗೋಡೆಯ ಆ ಕಡೆಗೆ ನೋಡಿದ.

ಒಳಗಿನ ದೃಶ್ಯ ಹೃದಯ ವಿದ್ರಾವಕವಾಗಿತ್ತು.

ಮಕ್ಕಳು ಅಳುವುದಕ್ಕೂ ಸಾಧ್ಯವಿಲ್ಲದಂತೆ ಬಿದ್ದಿದ್ದಾರೆ. ಮೂವರು ಟೆರ್ರ-ರಿಸ್ಟ್‌ಗಳಿದ್ದಾರೆ. ಮೂವರ ಬಳಿಯೂ ಮಿಷನ್‌ಗನ್‌ಗಳಿವೆ. ಹರ್ರಿಕೇನ್ ಲಾಂದ್ರ ಮಿಣುಕು ಮಿಣುಕೆಂದು ಬೆಳಗುತ್ತಿದೆ. ಒಬ್ಬ ಬಾಗಿಲ ಬಳಿ ನಿಂತು ಹೊರಗೆ ನೋಡುತ್ತಿದ್ದಾನೆ. ಒಬ್ಬ ಬ್ರೆಡ್ ತಿನ್ನುತ್ತಾ ಇದ್ದಲಿನ ತುಂಡಿನಿಂದ ಗೋಡೆಯ ಮೇಲೆ ನಗ್ನ ಸ್ತ್ರೀಯೊಬ್ಬಳ ಚಿತ್ರವನ್ನು ಗೀಚುತ್ತಿದ್ದಾನೆ. ಮತ್ತೊಬ್ಬ ಅತ್ತಿತ್ತ ಓಡಾಡುತ್ತಿದ್ದಾನೆ. ಮೂವರ ಮುಖಗಳಿಗೂ ಮಾಸ್ಕ್‌ಗಳಿವೆ. (ಮಕ್ಕಳು ನಂತರ ತಮ್ಮ ಗುರುತು ಹಿಡಿಯದಂತೆ) ಸುಮಾರು ಮಕ್ಕಳೆಲ್ಲಾ ಎಚ್ಚರತಪ್ಪಿ ಬಿದ್ದಿವೆ. ಕೆಲವರು ಜ್ವರದಿಂದ ಮಲಗುತ್ತಿದ್ದಾರೆ; ಕೆಲವರು ಚಳಿಗೆ ನಡುಗುತ್ತಾ ಕಣ್ಣೀರು ಸುರಿಸುತ್ತಿದ್ದಾರೆ. ಒಬ್ಬನಂತೂ ನಿದ್ರಿಸುತ್ತಲೇ "ಅಮ್ಮಾ–ಅಮ್ಮಾ" ಎಂದು ಗೊಣಗುತ್ತಿದ್ದಾನೆ.

ತೊಂದರೆ ಏನೆಂದರೆ ಅವರಿಬ್ಬರ ಬಳಿ ಇರುವುದು ಒಂದೇ ರಿವಲ್ವಾರ್. ಮೂವರು ಉಗ್ರವಾದಿಗಳನ್ನು ಒಂದೇ ಪಿಸ್ತೂಲಿನಿಂದ ಎದುರಿಸುವುದು ಮೂರ್ಖತನ. ಎದುರಾಳಿಗಳ ಬಳಿ ಮಿಷನ್‌ಗನ್‌ಗಳಿವೆ. ಮಕ್ಕಳ ಪ್ರಾಣ ಮುಖ್ಯ.

ಇಬ್ಬರೂ ಮತ್ತೆ ಅಲ್ಲಿಂದ ಸ್ವಲ್ಪ ದೂರ ಬಂದರು.

"ಒಳಗೆ ಮೂವರು ಟೆರ್ರರಿಸ್ಟ್‌ಗಳಿದ್ದಾರೆ. ಗೋಡೆಯ ಆಚೆ ಇನ್ನೆಷ್ಟು ಜನರಿದ್ದಾರೋ ನಾವೀಗ ಪೋಲೀಸ್ ಪಡೆಯನ್ನು ತರಿಸೋಣ" ವಿಹಾರಿ ಹೇಳಿದ.

"ನೋ! ಇದಕ್ಕೆ ಪೋಲೀಸರು ಬೇಡ. ಬ್ಲಾಕ್ ಕಮಾಂಡೋಗಳು ಬೇಕು. ಅವರೇ ಇಂತಹ ಆಪರೇಷನ್ನುಗಳನ್ನು ಮಾಡಬಲ್ಲರು. ಆದರೆ ಅವರನ್ನು ದೆಹಲಿಯಿಂದ ಕರೆಸಬೇಕು"–ಪ್ರವಲ್ಲಿಕ ಹೇಳಿದಳು.

"ಈ ಮಕ್ಕಳು ರಾತ್ರಿಯೆಲ್ಲಾ ಹಾಗೆ ಇರಲಾರರು. ಈಗಾಗಲೇ ಸಾಕಷ್ಟು ನರಳುತ್ತಿದ್ದಾರೆ ಎಂದ ತಾನು ನೋಡಿದ ದೃಶ್ಯವನ್ನು ನೆನಪಿಸಿಕೊಳ್ಳುತ್ತಾ, ಇಬ್ಬರೂ ಸ್ವಲ್ಪ ಹೊತ್ತು ಮೌನವಾಗಿದ್ದರು,

ಪ್ರವಲ್ಲಿಕ "ನನಗೊಂದು ಐಡಿಯಾ ಬಂತು.'' ಎಂದು ಹೇಳಲು ಪ್ರಾರಂಭಿಸಿದಳು. ಎಲ್ಲಾ ಕೇಳಿ. "ಗುಡ್" ಅಂದ ವಿಹಾರಿ. ಇಬ್ಬರೂ ಕಾರಿನ ಬಳಿಗೆ ಹೋದರು. ಅವಳು ಕಾರಿನಲ್ಲಿನ ವೈರ್‌ಲೆಸ್‌ನಿಂದ ತನ್ನ ಆಫೀಸಿನೊಡನೆ ಮಾತನಾಡಿದಳು.

ದೆಹಲಿಯಿಂದ ಆಗತಾನೇ ಬಂದಿದ್ದ ಛೀಫ್ ಆ ಕಾಲನ್ನು ರಿಸೀವ್ ಮಾಡಿದ್ದ.

"ನಾನು ಸರ್–ಡೆಪ್ಯುಟಿ ಮಾತಾಡ್ತಿರೋದು. ಟೆರ್ರರಿಸ್ಟ್‌ಗಳ ಸ್ಥಾವರ ಸಿಕ್ಕಿದೆ."

ಛೀಫ್ ಎಗ್ಝಯಿಟ್ ಆದ. ಆತನ ಕಂಠದಲ್ಲಿ ರಿಲೀಫ್ ಕಂಡಿತು,

"ಎಲ್ಲಿ?" ಎಂದು ಕೇಳಿದ. ಅವಳು ವಿವರಗಳನ್ನು ನೀಡಿ. ''ಇದರಲ್ಲಿ ಒಂದು ಅಪಾಯವಿದೆ ಸಾರ್. ನಾವು ಸ್ವಲ್ಪ ಫೋರ್ಸ್ ಉಪಯೋಗಿಸಿದರೂ– ಅವರು ಹಿಂದು ಮುಂದು ನೋಡದೆ ಮಕ್ಕಳ ಪ್ರಾಣ ತೆಗೆಯುತ್ತಾರೆ."

"ಮತ್ತೇನು ಮಾಡೋಣ?'' ಛೀಫ್ ಸಿನ್ಸಿಯರಾಗಿ ಕೇಳಿದ. ಆತ ದೇಶದ್ರೋಹಿಯಲ್ಲ. ಡ್ಯೂಟಿಗಿಂತಲೂ ಭಕ್ತಿ ಹೆಚ್ಚು ಅಷ್ಟೆ. ವಯಸ್ಸು ಹೆಚ್ಚಾಗುತ್ತಿದ್ದಂತೆ ಆ ಭಕ್ತಿಯನ್ನು ಮೂರ್ಖತ್ವವಾಗಿ ಬೆಳೆಸಿಕೊಂಡಿದ್ದಾನೆಯೇ ಹೊರತು- ಸಣ್ಣ ಮಕ್ಕಳ ವಿಷಯವಾಗಿ ಅವನೂ ಆತಂಕಗೊಂಡಿದ್ದಾನೆ.

ನನಗೊಂದು ಯೋಚನೆ ಬಂದಿದೆ ಸರ್. ಒಳಗೆಷ್ಟು ಜನರಿದ್ದಾರೋ ಗೊತ್ತಿಲ್ಲ, ಹುತ್ತದಿಂದ ಆ ಹಾವುಗಳನ್ನು ಹೊರಗೆ ಬರುವಂತೆ ಮಾಡಬೇಕು,"

"ಏನು ಮಾಡಬಹುದೆಂದು ನಿಮ್ಮ ಯೋಚನೆ ಮಿಸ್, ಪ್ರವಲ್ಲಿಕಾ?"

"ಆರ್ಟಿಫಿಷಿಯಲ್ ಮಳೆ ಸೃಷ್ಟಿಸಬೇಕು ಸಾರ್,''

ಛೀಫ್‌ಗೆ ತಾನು ಕೇಳುತ್ತಿರುವುದು ಅರ್ಥವಾಗಲಿಲ್ಲ. ''ಏನು?" ಎಂದರು ಸಂದಿಗ್ಧತೆಯಿಂದ.

''ಮೂರು ಫೈರಿಂಜಿನ್, ಎರಡು ಎಲೆಕ್ಟ್ರಾನಿಕ್ ಸ್ಪೀಕರ್‌ಗಳು ಒಂದು ಆರ್ಕ್‌ಬ್ಲೂಟ್‌ನಿಂದ ಒಂದೇಸಮ ಮಳೆ, ಗುಡುಗು. ಮಿಂಚನ್ನು ಸೃಷ್ಟಿಸಬೇಕು. ಆ ಪಾಳು ಭವನಕ್ಕೆ ಮೇಚ್ಚಾವಣೆಯಿಲ್ಲ. ಟೆರ್ರರಿಸ್ಟ್‌ಗಳು ಮಕ್ಕಳನ್ನು ಮತ್ತೊಂ

ದೆಡೆಗೆ ಕರೆದೊಯ್ಯುವ ಯಾವ ಪ್ರಯತ್ನವನ್ನೂ ಮಾಡುವುದಿಲ್ಲವೆಂದು ನಾನಂದು ಕೊಂಡಿದ್ದೇನೆ. ಇಲ್ಲೇ ಯಾವುದೋ ಗಿಡದ ಕೆಳಗೆ ತಲೆಮರೆಸಿಕೊಂಡು, ಮಳೆ ಕಡಿಮೆ ಆದನಂತರ ಮಕ್ಕಳನ್ನು ಮತ್ತೆ ಪಾಳು ಮನೆಯೊಳಗೆ ಕರೆದೊಯ್ಯುತ್ತಾರೆ, ತುಂಬಾ ಕತ್ತಲಿದೆ ಇಲ್ಲಿ. ತುಂಬಾ ಗಿಡಗಳೂ ಇವೆ. ಪ್ರತಿ ಗಿಡಗಳ ಕೆಳಗೂ ನಮ್ಮವರನ್ನು ಇರಿಸಿದರೆ. ಆಕಸ್ಮಿಕ ದಾಳಿ ನಡೆಸಬಹುದು. ಒಮ್ಮೆಗೆ ಫ್ಲಾಷ್ ಲೈಟುಗಳನ್ನು ಹಾಕಿ ಆ ಕಂಗಾಲಿನಿಂದ ಅವರು ಚೇತರಿಸಿಕೊಳ್ಳುವುದಕ್ಕೆ ಮುಂಚೆಯೇ ಅವರನ್ನು ಬಂಧಿಸಬೇಕು."

"ಗುಡ್..." ಅಂದ ಛೀಫ್. "ನೀವು! ಕಾರಿನ ಬಳಿಯೇ ಇರಿ. ಅರ್ಧ ಗಂಟೆಯಲ್ಲೇ ನಾನೆಲ್ಲಾ ಏರ್ಪಾಟುಗಳನ್ನೂ ಮಾಡುತ್ತೇನೆ"

"ಸರ್..." ಅವಳು ಸಂದೇಹ ವ್ಯಕ್ತಪಡಿಸಿದಳು.

''ಏನು?''

"ಇದೆಲ್ಲಾ ತುಂಬಾ ನಿಶ್ಶಬ್ಧವಾಗಿ ಮೂರನೆ ಕಣ್ಣಿಗೆ ಬೀಳದಂತೆ ನಡೆಯಬೇಕು''

ಛೀಫ್ ನಕ್ಕು ಹೇಳಿದ. ''...ತಾಯಿ ನಿನಗಿಂತಲೂ ನನಗೆ ಈ ಡಿಪಾರ್ಟ್‌ಮೆಂಟಿನಲ್ಲಿ ಇಪ್ಪತ್ತೈದು ವರ್ಷಕ್ಕಿಂತಲೂ ಹೆಚ್ಚು ಅನುಭವವಿದೆ. ನೀನೇನೂ ಯೋಚಿಸಬೇಡ. ಈ ಸ್ಥಳವನ್ನು ಕಂಡುಹಿಡಿದಿದ್ದಕ್ಕಾಗಿ ನಿನಗೆ ಮತ್ತೊಂದು ಮೆಡಲನ್ನು ರೆಕಮೆಂಡ್ ಮಾಡುತ್ತಿದ್ದೇನೆ."

ವೈರ್‌ಲೆಸ್ ಆಫ್‌ಮಾಡಿ, ಫೋನನ್ನೆತ್ತಿಕೊಂಡ ಛೀಫ್. ಮೊದಲು ಫೈರ್ ಸ್ಟೇಷನ್‌ಗೆ ಫೋನ್ ಮಾಡಿದ. ನಂತರ ಆರ್ಕ್‌ಬ್ರೂಟ್,! ಎಲೆಕ್ಟ್ರಾನಿಕ್ ಅಂಪ್ಲಿಫೈಯರ್ಸ್ ಬಂದವು. ಹತ್ತು ನಿಮಿಷಗಳಲ್ಲಿ ಐವತ್ತು ಜನ ಆಫೀಸರ್‌ಗಳು ಸಂಪೂರ್ಣ ಕಪ್ಪು ಬಟ್ಟೆಗಳಲ್ಲಿ ಸಿದ್ಧರಾದರು. ಹತ್ತು ಕಾರುಗಳು ಆ ಕತ್ತಲಲ್ಲಿ ನಿಶ್ಶಬ್ಧವಾಗಿ ವಿಮಾನ ನಿಲ್ದಾಣದೆಡೆಗೆ ಬಂದವು.

ಛೀಫ್ ಕೈಯ್ಯಲ್ಲಿದ್ದ ತಾಯಿತದೊಳಡಗಿಸಿದ್ದ ಉಪಕರಣ ಆ ಸಂಭಾಷಣೆಯನ್ನೆಲ್ಲಾ ಅನಂತಾನಂತ ಸ್ವಾಮಿಗೆ ರವಾನಿಸುತ್ತೆಂದು ಅವರಿಗೆ ಗೊತ್ತಾಗಲಿಲ್ಲ.

* * * ೦

ಆ ಕೋಣೆಯಲ್ಲಿ ಅನಂತಾನಂತಸ್ವಾಮಿ ನಿಶ್ಶಬ್ಧವಾಗಿ ಕುಳಿತಿದ್ದ.

ಮಿಸ್ ಪ್ರವಲ್ಲಿಕ...

ಸಣ್ಣ ಕಡ್ಡಿ ಅಂದುಕೊಂಡಿದ್ದು ಮುಳ್ಳಾಯಿತು. ಅದು ಪೊದೆಯಾಗು

ವುದಕ್ಕೆ ಮೊದಲೇ ನಾಶಪಡಿಸಬೇಕು, ಆದರೆ ಅದು ಮುಂದಿನ ವಿಷಯ. ಮೊದಲು ತನ್ನ ಮೂವರು ಮನುಷ್ಯರನ್ನು ರಕ್ಷಿಸಿಕೊಳ್ಳಬೇಕು.

ಆವನು ಮೇಲೆದ್ದು ಶತಪಥ ಹಾಕಲು ಪ್ರಾರಂಭಿಸಿದ. ಬೇಸರದಿಂದ ಗಡಿಯಾರದೆಡೆಗೆ ನೋಡುತ್ತಿದ್ದಂತೆಯೇ ಪರಮೇಶ್ವರ್ ಬಂದ.

"ಬಾ, ನಿನಗಾಗಿಯೇ ಕಾಯುತ್ತಿದ್ದೆ. ಒಂದು ಸಣ್ಣ ಸಮಸ್ಯೆ ಬಂದು ಬಿದ್ದಿದೆ!" ಎನ್ನುತ್ತಾ ನಡೆದದ್ದನ್ನು ವಿವರಿಸಿ. "ನಮ್ಮವರನ್ನು ಬ್ಲಾಕ್ ಕಮಾಂ-ಡೋಗಳು ಸುತ್ತುವರೆದಿದ್ದಾರೆ. ಅವರಿಗೆ ಅಪಾಯದ ಸೂಚನೆ ಕಳಿಸಬೇಕು. ಹೇಗೆಂದು ಅರ್ಥವಾಗುತ್ತಿಲ್ಲ. ನಾವೀಗ ಹೊರಗೆ ಹೋಗದೆ ನಮ್ಮವರನ್ನು ರಕ್ಷಿಸಬೇಕು. ಹೇಗೆ?"

ಪರಮೇಶ್ವರ್ ಕಣ್ಣುಮುಚ್ಚಿದ. ಪ್ರಧಾನಮಂತ್ರಿಯನ್ನು ನಾಲ್ಕು ಜನರ ಮಧ್ಯೆಯೇ ಕೊಲೆ ಮಾಡಿದವನನ್ನು ಹೇಗೆ ಬಿಡಿಸಬೇಕು ಎಂದು ಯೋಚಿಸುವ ಲಾಯರಂತೆ ಯೋಚಿಸಿದ. ಎರಡು ಕ್ಷಣಗಳ ನಂತರ ಕಣ್ಬಿಟ್ಟು ''ಆ ಮಕ್ಕಳ ತಂದೆ ತಾಯಂದಿರು ಎಲ್ಲಿದ್ದಾರೆ?" ಎಂದು ಕೇಳಿದ.

"ಆ ಕಂಟ್ರೋಲ್ ರೂಂ ಬಳಿಯೇ"

"ಮಕ್ಕಳನ್ನು ಟೆರ್ರರಿಸ್ಟ್‌ಗಳು ಎಲ್ಲಿ ಬಚ್ಚಿಟ್ಟಿದ್ದಾರೆಂದು ಪೋಲೀಸರಿಗೆ ತಿಳಿದುಹೋಗಿದೆ–ಅಲ್ಲಿಗೆ ಹೋಗಿದ್ದಾರೆ ಎಂಬ ಸುದ್ದಿಯನ್ನು ಆ ತಂದೆ ತಾಯಿಯರಿಗೆ ತಿಳಿಸಿದರೆ ಸಾಕು'' ಪೂರ್ತಿಗೊಳಿಸಿದ ಪರಮೇಶ್ವರ್.

ಒಂದು ಅದ್ಭುತವನ್ನು ಕಂಡಂತೆ ಅವನೆಡೆಗೇ ನೋಡುತ್ತಾ ಇದ್ದುಬಿಟ್ಟ ಸ್ವಾಮಿ. ಇಂತಹ 'ತಿಳುವಳಿಕೆ' ತನಗೊಂದು ಸ್ತಂಭದಂತೆ ಆಸರೆ ಕೊಡುತ್ತಿರುವುದು ಅವನಿಗೆ ಸಂತೋಷ ಕೊಟ್ಟಿತು.

ಅಷ್ಟರಲ್ಲಿ ಪರಮೇಶ್ವರ್ ವಿವರಿಸಿದ. "ನಮ್ಮವರು ದಯದಾಕ್ಷಿಣ್ಯವಿಲ್ಲದ ಕಟುಕರು, ಮಳೆಯಲ್ಲಿ ಮಕ್ಕಳು ನೆಂದರೂ ಅಷ್ಟು ಯೋಚಿಸುವುದಿಲ್ಲ. ತಾವು ಮಾತ್ರ ಹೊರಬಂದು ಮರಗಳ ಕೆಳಗೆ ನಿಂತು ಆ ಮನೆಯನ್ನೇ ಗಾರ್ಡ್ ಮಾಡುತ್ತಾರೇ ವಿನಾ ಮಕ್ಕಳನ್ನು ಹೊರತರುವುದಿಲ್ಲ. ಒಬ್ಬ ಹುಡುಗ ಆ ಕತ್ತಲಲ್ಲಿ ತಪ್ಪಿಸಿಕೊಂ-ಡರೂ ಅಪಾಯವೇ ಎಂದವರು ಯೋಚಿಸುತ್ತಾರೆ. ಇದೇ ಸಮಯಕ್ಕೆ ಮಕ್ಕಳ ತಂದೆ ತಾಯಂದಿರು ಬೇರೆ ಬೇರೆ ವಾಹನಗಳ ಮೇಲೆ ಬಂದು ಅಲ್ಲಿ ಸೇರುತ್ತಾರೆ. ಅವರನ್ನು ತಡೆಯುವ ಅಥವಾ ಹಿಂದಕ್ಕೆ ಕಳಿಸುವ ಶಕ್ತಿಯಾಗಲೀ ಪೋಲೀಸರಿಗೆ ಇರುವುದಿಲ್ಲ, ಅವರ ಆತುರ ಅವರಿಗೆ, ಅದೇ ನಮ್ಮನ್ನು ರಕ್ಷಿಸುತ್ತದೆ. ನಮ್ಮವರಿಗೆ ಬರಲಿರುವ ಅಪಾಯವನ್ನು ಸೂಚಿಸುತ್ತದೆ.. "

ಸ್ವಾಮಿ ಹಾಯಾಗಿ ನಕ್ಕ. ಐದು ನಿಮಿಷಗಳ ಹಿಂದೆ ಇದ್ದ ಟೆನ್ಷನ್ ಈಗ

ಇಲ್ಲ. ಕೈಚಾಚಿ. ''ಥ್ಯಾಂಕ್ಸ್'' ಹೇಳಿದ. ''ಇಂತಹ ಸಲಹೆಗಾಗಿಯೇ ನಿನ್ನನ್ನು ಕರೆಸಿದ್ದು''

ಪರಮೇಶ್ವರನ್ ಷೇಕ್‌ಹ್ಯಾಂಡ್ ಕೊಡಲು ಹೋದ.

ಸ್ವಾಮಿ ಚಕ್ಕನೆ ಕೈ ಹಿಂತೆಗೆದುಕೊಂಡ. ಧೃತರಾಷ್ಟ್ರ ಯಾರನ್ನು ಆಲಂಗಿಸಿ ಕೊಂಡರೂ ಆ ಉಕ್ಕಿನ ಹಿಡಿತದಲ್ಲಿ ನಲುಗಿ, ಪುಡಿಪುಡಿಯಾದಂತೆಯೇ ಪರಮೇ-ಶ್ವರ್ ಯಾರಿಗೆ ಷೇಕ್‌ಹ್ಯಾಂಡ್ ಕೊಟ್ಟರೂ ಅವರು ಸುಟ್ಟು ಬೂದಿಯಾದಂತೆಯೇ!! ಅಂತಹ ವಿಷದ ಕೈ ಅವನದು!! ಆ ವಿಷಯ ಪರಮೇಶ್ವರ್‌ಗೂ ಗೊತ್ತು. ಸ್ವಾಮಿಯಂತಹವನೇ ತಡಬಡಿಸುವುದನ್ನು ಕಂಡು ನಗುತ್ತಾ ಕೈಯನ್ನು ಹಿಂತೆಗೆದುಕೊಂಡು ''ಬರ್ತೀನಿ ಎಂದು ಹೊರಬಂದ.

* * * *

"ನಿಮ್ಮ ರಿವಲ್ವಾರ್ ನನಗೆ ಕೊಡಿ" ಎಂದ ವಿಹಾರಿ. ಪ್ರವಲ್ಲಿಕ ಅವನೆಡೆಗೆ ವಿಸ್ಮಯದಿಂದ ನೋಡಿದಳು. ಇಬ್ಬರೂ ರಸ್ತೆಯ ಮೇಲೆ ನಿಂತು, ಬರಲಿರುವ ವಾಹನಕ್ಕಾಗಿ ಎದುರು ನೋಡುತ್ತಿದ್ದರು. ಅವನು ಅವಳನ್ನು ಹಾಗೆ ಕೇಳಿದ್ದು ಅವಳಿಗೆ ಅರ್ಥವಾಗಲಿಲ್ಲ. "ಏಕೆ?" ಎಂದು ಕೇಳಿದಳು.

"ನಾನು ಈ ಮನೆಯ ಬಳಿಯೇ ..ಸಾಧ್ಯವಾದರೆ ಒಳಗೆ ಸೇರಿಸಿಕೊಳ್ಳೋಣವೆಂದುಕೊಂಡಿದ್ದೇನೆ–ನೀವು ಈ ಕೃತ್ರಿಮ ಮಳೆಯ ಪ್ರಯೋಗ ಮಾಡುತ್ತಿರುವಾಗ.''

"ಯಾಕೆ?" ಆಶ್ಚರ್ಯವಾಗಿ ಕೇಳಿದಳು.

"ನನಗೇಕೋ ಅನುಮಾನವಾಗಿದೆ. ಮಳೆಯಲ್ಲಿ ಆ ಮಕ್ಕಳನ್ನು ಹೊರಗೆ ಕರೆದು ತರುತ್ತಾರೆಂದು ನೀವು ಅಂದುಕೊಳ್ಳುತ್ತಿದ್ದೀರಾಗಲೀ ನನಗೆ ಹಾಗನ್ನಿಸುತ್ತಿಲ್ಲ. ಅಷ್ಟು ರಿಸ್ಕ್ ತೆಗೆದುಕೊಳ್ಳುವುದಿಲ್ಲ. ಅವರಿಗೆ ಮಕ್ಕಳ ಮೇಲೆ ಅಷ್ಟು ಅನುಕಂಪವಿರುತ್ತದೆಂದೂ ನಾನಂದುಕೊಂಡಿಲ್ಲ. ಮಳೆಗೆ ಹೆದರಿ ಆ ಕಾವಲುಗಾರರು ಹೊರಗೆ ಬಂದರೆ, ನಾನು ಒಳಗಿದ್ದು ಮಕ್ಕಳನ್ನು ಕವರ್ ಮಾಡಲು ಪ್ರಯತ್ನಿಸುತ್ತೇನೆ."

ಅವಳು ಮರು ಮಾತನ್ನಾಡದೆ ರಿವಲ್ವಾರನ್ನು ಕೊಟ್ಟುಬಿಟ್ಟಳು. ಅವನು ಅದನ್ನು ತೆಗೆದುಕೊಂಡು ಕತ್ತಲಲ್ಲಿ ಮರೆಯಾದ, ಅವಳು ಅವನು ಹೋದ ದಿಕ್ಕಿಗೇ ನೋಡುತ್ತಾ ಇದ್ದುಬಿಟ್ಟಳು,

ಏಕೋ ಗೊತ್ತಿಲ್ಲ......ಅವಳಿಗೆ ಅಕಸ್ಮಿಕವಾಗಿ ಪರಮೇಶ್ವರ್ ನೆನಪಾದ,

ಇವನಿಗೂ ಪರಮೇಶ್ವರ್‌ಗೂ ತುಂಬಾ ಹೋಲಿಕೆಗಳಿದ್ದವು. ಅದೇ ಷಾರ್ಪ್‌ನೆಸ್. ...ಸಿ. ಬಿ. ಐ. ಆಫೀಸರುಗಳು ಕೂಡಾ ಯೋಚಿಸಲಾರದಂಥ ಕೋನದಲ್ಲಿ. ತುಂಬಾ ವೇಗವಾಗಿ ಯೋಚಿಸುವುದು...

ತಂಪಾದ ಗಾಳಿ ಅವಳನ್ನು ಮೃದುವಾಗಿ ಸ್ಪರ್ಶಿಸಿತು. ಅವಳಿಗೆ ಒಮ್ಮೆಗೇ ತುಂಬಾ ರಿಲಾಕ್ಸ್ ಆದಂತೆ ಅನ್ನಿಸಿತು. ತಿಳುವಳಿಕೆಗೆ ಸಂಬಂಧಿಸಿದವರೆಗೂ ಧರ್ಮಕ್ಕೆ ಒಂದು ಕಡೆ ಪರಮೇಶ್ವರ್ ಇದ್ದರೆ ಇನ್ನೊಂದು ಕಡೆಗೆ ಇವನಿದ್ದಾನೆ. ಬಲ. ಅಧಿಕಾರ ಅತ್ತ ಕಡೆ ಯಿದ್ದರೆ–ಇತ್ತ ಜೊತೆಯಾಗಿ ತಾನಿದ್ದಾಳೆ! ಈ ಎರಡು ಶಕ್ತಿಗಳೂ ಒಟ್ಟಿಗೆ ಸೇರಿ ಆ ನಾಲ್ಕು ಸ್ತಂಭಗಳನ್ನು ಉರುಳಿಸುವುದು ಕಷ್ಟವಾಗ ಲಾರದು. ಈ ವೈಕುಂಠಪಾಳಿಯಲ್ಲಿ ಮೇಲೇರಲು ಇಷ್ಟು ದಿನಗಳ ನಂತರ ತನ ಗೊಂದು ಆಧಾರ ಸಿಕ್ಕಿದೆ. ಡಿಪಾರ್ಟ್‌ಮೆಂಟಿನಲ್ಲಿ ಇವನಿಗಿಂತಲೂ ಹೆಚ್ಚು ಬುದ್ಧಿ ವಂತರಿರಬಹುದಾದರೂ ಇಷ್ಟು 'ಕಮಿಟ್‌ಮೆಂಟ್' ಇರುವವರು ತುಂಬಾ ಕಡಿಮೆ. ಇದನ್ನೇ 'ಪೌರ–ಕರ್ತವ್ಯ' ಎನ್ನುತ್ತಾರೇನೋ!

ಅವಳು ಯೋಚನೆಯಲ್ಲಿದ್ದಾಗಲೇ 'ಹಲೋ ಎಂದು ಕೇಳಿಸಿತು. ಅವಳು ಬೆಚ್ಚಿಬಿದ್ದು ನೋಡಿದಳು. ಸುತ್ತಲೂ ಇಪ್ಪತ್ತು ಜನ ಆಫೀಸರುಗಳು...ಛೀಫ್ ಹತ್ತಿರ ಬಂದ. "ಎಲ್ಲಾ ಏರ್ಪಾಡುಗಳೂ ಆಗಿವೆ" ಅಂದ. ಅವಳು ತುಂಬಾ ಥ್ರಿಲ್ಲಿಂಗ್ ಅನುಭವಿಸಿದಳು, ತನ್ನ ಡಿಪಾರ್ಟ್‌ಮೆಂಟ್ ಇದು. ಅಮೆರಿಕನ್, ರಷ್ಯನ್ ಗೂಢಾಚಾರಿ ಸಂಸ್ಥೆಗಳಿಗೆ ಸ್ವಲ್ಪವೂ ಕಡಿಮೆ ಇಲ್ಲದ ಚಾಕಚಕ್ಯತೆಯ ಅಧಿಕಾರಿಗಳು ತಮ್ಮಲ್ಲಿಯೂ ಇದ್ದಾರೆ, ಇಷ್ಟು ಹತ್ತಿರದಲ್ಲೇ ಇರುವ ತನಗೆ ಸ್ವಲ್ಪವೂ ಅನುಮಾನ ಬರದಂತೆ ಫೈರ್ ಇಂಜನ್‌ಗಳೊಂದಿಗೆ ಬರುವುದು ಸಾಮಾನ್ಯ ಕೆಲಸವಲ್ಲ.

'ಸ್ಟಾರ್ಟ್ ದಿ ಆಪರೇಶನ್' ಛೀಫ್ ಆದೇಶವಿತ್ತ. ಪ್ರವಲ್ಲಿಕ ತನ್ನ ಪ್ಲಾನನ್ನು ವಿವರಿಸಿದಳು. ಫ್ಲಡ್ ಲೈಟುಗಳ ಜೋಡಣೆ ಆಯಿತು. ಒಳಗಿದ್ದ ಮಕ್ಕಳು ಪಡುತ್ತಿದ್ದ ಕಷ್ಟಗಳನ್ನು ಕಲ್ಪಿಸಿಕೊಂಡು ಪ್ರತಿಯೊಬ್ಬರೂ ಉತ್ಸಾಹ ದಿಂದ ಕೆಲಸ ಮಾಡುತ್ತಿದ್ದರು.

"ಫೈರ್ ಇಂಜನ್ ರೇಂಜ್ ಸರಿ ಹೋಗುತ್ತದಾ?" ಕೇಳಿದಳು.

"ಸರಿಹೋಗುತ್ತದೆ ಮೇಡಂ" ಕಂಟ್ರೋಲರ್ ಆಫ್ ಫೈರ್ ಸರ್ವೀಸಸ್ ಸ್ವತಃ ಬಂದಿದ್ದ. ಅಂಪ್ಲಿ ಫೈಯರ್ ಬಳಿಯ ಇಂಜಿನಿಯರ್ "ಎಲ್ಲಾ ರೆಡಿ" ಎಂಬಂತೆ ಹೆಬ್ಬೆರಳು ಎತ್ತಿದ. ಆರ್ಕ್‌ಬ್ಲ್ರೊಟ್ ಒಂದುಕ್ಷಣ ಮಿಂಚಿತು. ಕೂಡಲೇ ಕಿವಿಗಡಚಿಕುವಂತಹ ಸಿಡಿಲಿನ ಶಬ್ದ.

ಮಳೆ ಪ್ರಾರಂಭವಾಯಿತು.

ಗೋಡೆಯ ಮೇಲೆ ಎಚ್ಚರಿಕೆಯಿಂದ ಹತ್ತುತ್ತಿದ್ದ ವಿಹಾರಿಯ ಮೇಲೆ ಮೊದಲನೆಯ ಹನಿ ಬಿತ್ತು. ಅವನು ಕೂಡಾ ಇಷ್ಟು ನಿಶ್ಶಬ್ದವಾಗಿ, ಇಷ್ಟು ವೇಗವಾಗಿ ಕೆಲಸ ನಡೆಯುತ್ತಿದ್ದುದಕ್ಕೆ ಆಶ್ಚರ್ಯಪಡುತ್ತಿದ್ದ! ಟೆರ್ರರಿಸ್ಟ್‌ಗಳು ಕೂಡಾ ಆಕಾಶದ ಕಡೆ ನೋಡಿದರು. ಕತ್ತಲಲ್ಲಿ ಏನೂ ಕಾಣಿಸುತ್ತಿರಲಿಲ್ಲ. ಮಳೆ ಹೆಚ್ಚಾಯಿತು.

"ಮರದ ಕೆಳಗೆ ಹೋಗೋಣವೇ?''

"ಬೇಡ. ಮಕ್ಕಳು ತಪ್ಪಿಸಿಕೊಂಡರೆ ಕಷ್ಟ. ಯಾರೊಬ್ಬನು ಹೊರಬಿದ್ದರೂ ನಮ್ಮ ಬಗ್ಗೆ ತಿಳಿದುಬಿಡುತ್ತದೆ"

"ಹಾಳುಮಳೆ..."ಎನ್ನುತ್ತಾ ಒಬ್ಬ ಗೊಣಗಿದ. ಹುಡುಗನೊಬ್ಬ ಅಳಲು ಪ್ರಾರಂಭಿಸಿದ. "ಬಾಯಿ ಮುಚ್ಚದಿದ್ದರೆ ಸಾಯಿಸಿಬಿಡುತ್ತೇನೆ'' ಕಿರುಚಿದ ಟೆರ್ರರಿಸ್ಟ್. ಮಳೆ ಮತ್ತಷ್ಟು ಹೆಚ್ಚಾಯಿತು.

"ನಾನು ಮರದ ಕೆಳಗೆ ಹೋಗುತ್ತಿದ್ದೇನೆ. ನೀನಿಲ್ಲೇ ಇರು'' ಎಂದು ತಮ್ಮ ಜೂನಿಯರ್‌ಗೆ ಆ ಇಬ್ಬರು ಹೇಳಿ ಹೊರಗೋಡಿ ಬಂದರು.

ವಿಹಾರಿ ಉಸಿರನ್ನು ಬಿಗಿಹಿಡಿದ.

ತಮ್ಮ ಪ್ಲಾನ್ ಫಲಿಸಿತ್ತು. ಹೊರಬಂದ ಅವರಿಬ್ಬರೂ ಬಂಧಿಸಲ್ಪಡುತ್ತಿದ್ದಂತೆಯೇ ಒಳಗಿದ್ದವನನ್ನು ಸುಟ್ಟುಬಿಡುವುದು ಕಷ್ಟವಲ್ಲ.

ಎರಡು ನಿಮಿಷ ಕಳೆಯಿತು,

ಹೊರಗೆ ಕಪ್ಪು ಡ್ರೆಸ್‌ನಲ್ಲಿದ್ದ ಆಫೀಸರುಗಳು ನಿಧಾನವಾಗಿ ಟೆರ್ರರಿಸ್ಟ್‌ಗಳು ಅವಿತುಕೊಂಡಿದ್ದ ಮರಗಳನ್ನು ಆಕ್ರಮಿಸಿಕೊಂಡರು.

ವಿಹಾರಿ ಪಿಸ್ತೂಲನ್ನು ರೇಂಜ್‌ನಲ್ಲಿ ತೆಗೆದುಕೊಂಡ.

ಪ್ರವಲ್ಲಿಕಳ ಹೃದಯ ಜೋರಾಗಿ ಬಡಿದುಕೊಳ್ಳುತ್ತಿತ್ತು. ಮೀನು ಬಲೆಯ ಬಳಿಗೆ ಬಂದಿತ್ತು. ನಿಶ್ಶಬ್ಧವಾಗಿ ಹಿಡಿಯಬೇಕಷ್ಟೆ.

ಇನ್ನೊಂದು ಕ್ಷಣವಾಗಿದ್ದಿದ್ದರೆ ಅದೂ ನಡೆಯುತ್ತಿತ್ತು. ಆದರೆ ಅಷ್ಟರಲ್ಲಿ ಅನೂಹ್ಯವಾದ ಘಟನೆಯೊಂದು ನಡೆಯಿತು.

ದೂರದಲ್ಲಿ ವಾಹನಗಳು ಶಬ್ದ ಮಾಡಿಕೊಂಡು ಬರುತ್ತಿರುವುದು ಕೇಳಿಸುತ್ತಿತ್ತು, ಸ್ವಲ್ಪ ಸಮಯದ ನಂತರ ಲೈಟುಗಳು ಕಂಡವು. ಊಹಿಸದ ಈ ಘಟನೆಗೆ ಆಫೀಸರುಗಳು ಬೆಚ್ಚಿಬಿದ್ದರು. ಪ್ರವಲ್ಲಿಕ ನಿಶ್ಚೇತನಳಾದಳು,

ಕಾರುಗಳು, ಸ್ಕೂಟರ್‌ಗಳು, ಮೋಪೆಡ್‌ಗಳು–ಯಾವುದು ಸಿಕ್ಕರೆ ಅದರಲ್ಲಿ ಪೋಷಕರು ಅಲ್ಲಿಗೆ ಬಂದರು. ಆ ಎರಡು ದಿನಗಳಲ್ಲಿ ಅವರು ಒಬ್ಬರಿಗೊಬ್ಬರು ಹತ್ತಿರವಾಗಿದ್ದರು. ಒಬ್ಬರನ್ನೊಬ್ಬರು ಸಮಾಧಾನಪಡಿಸಿದ್ದರು, ಇಂತಹ ಸ್ಥಳದಲ್ಲಿ

ಮಕ್ಕಳಿದ್ದಾರೆಂದು ತಿಳಿದಾಕ್ಷಣವೇ–ಪ್ರವಾಹದಂತೆ ಹೊರಟು ಬಂದಿದ್ದರು. ಅಡ್ಡಿ ಪಡಿಸುವವರೇ ಇಲ್ಲದಂತಾಗಿತ್ತು.

ಒಮ್ಮೆಗೇ ಎಲ್ಲಾ ಲೈಟುಗಳೂ ತಾವಿದ್ದ ಸ್ಥಳಕ್ಕೆ ನುಗ್ಗಿ ಬರುತ್ತಿದ್ದುದನ್ನು ಕಂಡ ಉಗ್ರವಾದಿಗಳು ಓಡಲು ಪ್ರಾರಂಭಿಸಿದರು. ಬರುತ್ತಿರುವುದು ಪೋಲೀಸ ರೆಂದೇ ತಿಳಿದರವರು.

ಆ ಪಾಳು ಮನೆಯೆಡೆಗೆ ಓಡಿಬರುತ್ತಿದ್ದ ಟೆರ್ರರಿಸ್ಟ್‌ಗಳನ್ನು ವಿಹಾರಿ ಕೂಡಾ ನೋಡಿದ.

ಅವನ ಮೆದುಳು ಚುರುಕಾಗಿ ಕೆಲಸ ಮಾಡಿತು.

ಒಳಗೆ ನಿಂತಿದ್ದ ಮನುಷ್ಯನಿಗೆ ಗುರಿಯಿಟ್ಟು ಮತ್ತೇನೂ ಆಲೋಚಿಸದೆ ರಿವಾಲ್ವರ್‌ನಿಂದ ಷೂಟ್ ಮಾಡಿದ. ಒಳಗಿದ್ದ ಟೆರ್ರರಿಸ್ಟ್‌ನ ಕೈಗೆ ಗಾಯ ವಾಯಿತು. ಕೈಯಲ್ಲಿದ್ದ ಮಿಷಿನ್ ಗನ್ ಕೆಳಗೆ ಬಿತ್ತು.

ಆ ಶಬ್ದಕ್ಕೆ ಆ ಮನೆಯೆಡೆಗೆ ಓಡುತ್ತಿದ್ದ ಟೆರ್ರರಿಸ್ಟ್‌ಗಳು ನಿಂತುಬಿಟ್ಟರು.

ಪಾಳು ಮನೆಯೊಳಗಿಂದ ಅವರು ಪಿಸ್ತೂಲ್ ಶಬ್ದವನ್ನು ನಿರೀಕ್ಷಿಸಿರಲಿಲ್ಲ. ನಿಶ್ಚೇತನರಾದರು,

ಆ ಅರೆಕ್ಷಣ ಸಾಕಾಗಿತ್ತು. ಪ್ರವಲ್ಲಿಕಳಿಗೆ ಒಳ್ಳೆಯ ಅವಕಾಶ ಸಿಕ್ಕಿತ್ತು. ವಿಹಾರಿಯ ಚರ್ಯೆಯನ್ನು ಮನಸ್ಸಿನಲ್ಲೇ ಅಭಿನಂದಿಸುತ್ತಾ 'ಲೈಟ್ಸ್' ಎಂದು ಕಿರುಚಿದಳು. ಒಮ್ಮೆಗೇ ಎಲ್ಲಾ ಕಡೆಯಿಂದಲೂ ಲೈಟುಗಳು ಬೆಳಗಿದವು. ಊಹಿ ಸದ ಈ ಪರಿಣಾಮದಿಂದ ಹೊರಗಿದ್ದ ಟೆರ್ರರಿಸ್ಟ್‌ಗಳು ಮತ್ತಷ್ಟು ಭಯಭ್ರಾಂತ ರಾದರು.

ಈ ಗಡಿಬಿಡಿಯಿಂದ ಮಕ್ಕಳೆಲ್ಲರೂ ಚೇತರಿಸಿಕೊಂಡರು. ಮುಖ್ಯವಾಗಿ ವಿಷ್ಣು...

ಮಳೆ ನಿಂತುಹೋಯಿತು. ಲೈಟಿನ ಬೆಳಕಿನಿಂದ ಆ ಪ್ರದೇಶವೆಲ್ಲಾ ಹಗಲಿ ನಂತೆ ಆಯಿತು. ವಿಹಾರಿ ಗೋಡೆಯ ಮೇಲಿನಿಂದ ಒಳಕ್ಕೆ ಜಿಗಿದು 'ರನ್ ಬಾಯ್ಸ್ ರನ್' ಎಂದು ಕಿರುಚಿದ, ಪರಿಸ್ಥಿತಿಯನ್ನು ಎಲ್ಲರಿಗಿಂತಲೂ ಮೊದಲು ಅರ್ಥ ಮಾಡಿಕೊಂಡವನೆಂದರೆ ವಿಷ್ಣು. ಅವನು ಮೊದಲು ಹೊರಗೋಡಿಬಂದ.

ಅಲ್ಲೇ ಸಣ್ಣ ತಪ್ಪು ನಡೆದದ್ದು.

ವಿಷ್ಣುವನ್ನು ಹೊರಗೆ ನಿಂತಿದ್ದ ಟೆರ್ರರಿಸ್ಟ್ ಒಬ್ಬ ಹಿಡಿದುಕೋಡು ಮಿಷನ್ ಗನ್‌ನಿಂದ ಗುರಿಯಿಟ್ಟ. ಉಳಿದ ಮಕ್ಕಳ ಬಗ್ಗೆ ಅವರು ತಲೆ ಕೆಡಿಸಿಕೊಳ್ಳಲಿಲ್ಲ. ಪಾಳುಮನೆಯಿಂದ ಹೊರಬಂದ ಮಕ್ಕಳು ಆಗಲೇ ಅಲ್ಲಿಗೆ ಬಂದ ತಂದೆ ತಾಯಿ ಗಳ ಬಳಿಗೆ ಓಡಿದ್ದರು. ಇಷ್ಟು ಗಂಟೆಗಳ ಕಾಲ ಅನುಭವಿಸಿದ ಭಯ. ಟೆನ್ಷನ್.

ಶ್ರಮ ಎಲ್ಲವನ್ನೂ ಮರೆತು ಮಕ್ಕಳು ತಮ್ಮ ತಮ್ಮ ತಂದೆ ತಾಯಿಯವರನ್ನು ತಬ್ಬಿಕೊಂಡವು. ಅಲ್ಲಿನ ದೃಶ್ಯ ಹೃದಯವಿದ್ರಾವಕವಾಗಿತ್ತು. ತಾಯಂದಿರು ಮಕ್ಕಳನ್ನು ಎದೆಗೆ ಒತ್ತಿಕೊಂಡು ಸಂತೋಷದಿಂದ ಅಳುತ್ತಿದ್ದರು. ಮಕ್ಕಳು ತಾಯಂದಿರ ಕತ್ತಿನ ಸುತ್ತಲೂ ತಮ್ಮ ಪುಟ್ಟ ಕೈಗಳನ್ನು ಹಾಕಿ ತಬ್ಬಿ ಹಿಡಿದಿದ್ದವು. ಸುನಾದಮಾಲ ಒಬ್ಬಳೇ ಉಳಿದಳು.

ಅವಳ ದೃಷ್ಟಿ ಟೆರ್ರರಿಸ್ಟ್‌ಗಳ ಮಧ್ಯೆ ಸಿಕ್ಕಿಕೊಂಡ ವಿಷ್ಣುವಿನ ಮೇಲೆ ಬಿತ್ತು. ಅಷ್ಟೇ ಅವಳು ತಡೆಯಲಿಲ್ಲ, ಗಾಳಿಯ ವೇಗದಿಂದ ಅಲ್ಲಿಗೆ ಓಡಿದಳು. ಪ್ರವಲ್ಲಿಕ 'ನೋ'...'ನೋ' ಎಂದು ಕೂಗುತ್ತಲೇ ಇದ್ದಳು. ಸುನಾದಮಾಲ ಕೇಳಿಸಿಕೊಳ್ಳಲೇ ಇಲ್ಲ. ಅವಳ ಮೆದುಳಿನಲ್ಲಿ ಕೊರೆಯುತ್ತಿದ್ದುದು ಒಂದೇ ವಿಷಯ. ಮಕ್ಕಳೆಲ್ಲರೂ ತಮ್ಮ ತಮ್ಮ ಗೂಡುಗಳಿಗೆ ಸೇರಿಕೊಂಡಿದ್ದರು. ವಿಷ್ಣು ಮಾತ್ರ ಅವರ ಬಳಿಯೇ ಉಳಿದುಬಿಟ್ಟ. ತನ್ನ ವಿಷ್ಣುವನ್ನು ಮಾತ್ರ ಅವರು ಹಿಡಿದಿದ್ದಾರೆ.

ಅವಳು ತುಂಬಾ ಪುಕ್ಕಲಾಗಿರಬಹುದು. ಗಟ್ಟಿಯಾಗಿ ಮಾತನಾಡಲೂ ಹಿಂಜರಿಯುವಂತಹಳಾಗಿರಬಹುದು. ಆದರೆ ಆ ಕ್ಷಣ ವಿಷ್ಣುವಿನ ಮೇಲೆ ಅವಳಿಗಿದ್ದ ಪ್ರೀತಿ ಯೋಚಿಸಲು ಅವಕಾಶವನ್ನೇ ಕೊಡಲಿಲ್ಲ. ಓಡೋಡಿ ಹೋಗಿ ವಿಷ್ಣುವನ್ನು ಅವನ ಕೈಯಿಂದ ಕಿತ್ತುಕೊಳ್ಳಲು ಪ್ರಯತ್ನಿಸಿದಳು.

ಅವಳು ಆ ರೀತಿ ಬರುತ್ತಿರುವುದನ್ನು ಕಂಡು ಒಂದು ಕ್ಷಣ ಟೆರ್ರರಿಸ್ಟ್‌ಗಳು ಕಂಗಾಲಾದರೂ ಚೇತರಿಸಿಕೊಂಡರು. ಅವಳನ್ನು ಕೂಡಾ ಹಿಡಿದರು. ಒಂದು ಕ್ಷಣದಲ್ಲೇ ಇದೆಲ್ಲಾ ನಡೆದುಹೋಯಿತು. ಅಷ್ಟರಲ್ಲಿ ವಿಹಾರಿ ಒಳಗಿನಿಂದ ಟೆರ್ರರಿಸ್ಟ್‌ಗಳ ಜೊತೆ ಹೊರಬಂದ. ಆ ಉಗ್ರವಾದಿಯ ಕೈಯಿಂದ ರಕ್ತ ಬರುತ್ತಿತ್ತು. ಇಬ್ಬರಿಗೂ ಹೊರಗೆ ನಡೆಯುತ್ತಿರುವುದು ಗೊತ್ತಾಗಲಿಲ್ಲ. ವಿಹಾರಿ ಹೊರಗಡೆಯ ದೃಶ್ಯವನ್ನು ಕಂಡು ಬೆಚ್ಚಿಬಿದ್ದ.

"ಪಿಸ್ತೂಲನ್ನು ಕೆಳಗೆ ಹಾಕು" ಆಜ್ಞಾಪಿಸಿದ ಒಬ್ಬ.

ವಿಧಿಯಿಲ್ಲವೆಂಬಂತೆ ವಿಹಾರಿ ಪಿಸ್ತೂಲನ್ನು ಕೆಳಗೆ ಹಾಕಿದ. ಅದನ್ನು ತೆಗೆದುಕೊಂಡು ವಿಹಾರಿಯ ಕೆನ್ನೆಗೆ ಬಲವಾಗಿ ಬಡಿದ ಕೈಗೆ ಗಾಯವಾಗಿದ್ದ ಉಗ್ರವಾದಿ.

"ಛೀಫ್...ಒಂದು ಕಾರನ್ನು ನಮಗೆ ಬಿಟ್ಟು ನೀವೆಲ್ಲಾ ದೂರ ಹೋಗಿ, ಈ ಹುಡುಗ, ಇವರು ನಮ್ಮೊಡನೆ ಬರುತ್ತಾರೆ. ನಾವು ಸುರಕ್ಷಿತ ಸ್ಥಳಕ್ಕೆ ಹೋದ ನಂತರ ಇವರನ್ನು ಬಿಡುತ್ತೇವೆ. ನೀವು ನಮ್ಮನ್ನು ಫಾಲೋ ಮಾಡಿದರೂ ನಮಗೆ ತೊಂದರೆ ಕೊಟ್ಟರೂ ಇವರು ಪ್ರಾಣದೊಡನೆ ಉಳಿಯುವುದಿಲ್ಲ"

ಛೀಫ್, ಪ್ರವಲ್ಲಿಕ ಮುಖ, ಮುಖ ನೋಡಿಕೊಂಡರು.

ಏನು ಮಾಡಲೂ ತೋಚಲಿಲ್ಲ ಅವರಿಬ್ಬರಿಗೂ. ಈ ದುಷ್ಟರು ಹೇಳಿದ್ದನ್ನು ಮಾಡುವ ಸಮರ್ಥರು. ಅವರನ್ನು ಹಿಡಿಯಲು ಇಬ್ಬರನ್ನು ಕಳೆದುಕೊಳ್ಳುವುದು ಮೂರ್ಖತನ. ಛೀಫ್ ಒಂದು ನಿರ್ಧಾರಕ್ಕೆ ಬಂದವನಂತೆ ತನ್ನ ಆಫೀಸರುಗಳಿಗೆ ಆದೇಶ ನೀಡಿದ. ಟೆರ್ರರಿಸ್ಟ್‌ಗಳು ಸುನಾದಮಾಲಳನ್ನೂ, ವಿಷ್ಣುವನ್ನೂ ಕರೆದೊಯ್ದು ಕಾರನ್ನು ಹತ್ತಿದರು. ಅವರೆಲ್ಲಾ ಕಾರನ್ನು ಹತ್ತುತ್ತಿದ್ದಂತೆಯೇ "ನಿಲ್ಲಿರಿ!" ಎಂದು ಕಿರುಚಿದ ವಿಹಾರಿ. ಎಲ್ಲರೂ ಅತ್ತ ನೋಡಿದರು.

ವಿಹಾರಿ ಎರಡೂ ಕೈಗಳನ್ನು ಮೇಲೆತ್ತಿ ಅವರ ಬಳಿಗೆ ಹೋದ. "ನಿಮಗೆ ಬೇಕಾಗಿವುದು ನಿಮ್ಮೊಡನೆ ಒಂದಿಯಾಗಿ ಒಬ್ಬರು ತಾನೇ. ಅವರಿಬ್ಬರ ಬದಲು ನಾನು ಬರುತ್ತೇನೆ. ಅವರನ್ನು ಬಿಟ್ಟುಬಿಡಿ" ಅಂದ.

"ಸಾಧ್ಯವಿಲ್ಲ" ಅವರಲ್ಲೊಬ್ಬ ಕಿರುಚಿದ.

ಅಲ್ಲಿ ಸೂಜಿ ಬಿದ್ದರೂ ಕೇಳಿಸುವಷ್ಟು ನಿಶ್ಯಬ್ದ.

ಆ ಮೂವರಲ್ಲಿ ನಾಯಕನಂತಿದ್ದವನು. "...ಬರಲಿ" ಅಂದ. ವಿಹಾರಿ ಅವನೆಡೆಗೆ ಆಶ್ಚರ್ಯದಿಂದ ನೋಡಿದ. ಅಷ್ಟು ಸುಲಭವಾಗಿ ಅವರು ಒಪ್ಪಿಕೊಳ್ಳುತ್ತಾರೆಂದು ಅವನಂದುಕೊಳ್ಳಲಿಲ್ಲ. (ಅದಕ್ಕೆ ಕಾರಣ ಕಾರನ್ನು ಹತ್ತಿದ ನಂತರ ತಿಳಿಯಿತು.

ಒಬ್ಬ ವಿಹಾರಿಯ ಬಳಿಬಂದು "ಹತ್ತು" ಅಂದ,

ಅಲ್ಲೇ ಸುನಾದಮಾಲ ನಿಂತಿದ್ದಳು. ವಿಷ್ಣುವಿನ ಭುಜವನ್ನು ಬಿಗಿಯಾಗಿ ಹಿಡಿದಿದ್ದಳು. ಮೊದಲಿನ ಭಯ ಅವಳನ್ನು ಮತ್ತೆ ಆವರಿಸಿತು. ಭಯದಿಂದಲೇ ನೋಡುತ್ತಿದ್ದಳು. ವಿಹಾರಿ ಅವಳೆಡೆಗೆ ನೋಡಿ ನಕ್ಕ.

"...ಇನ್ನೊಂದು ಗಂಟೆಯೊಳಗಾಗಿ ಬರುತ್ತೇನೆ, ನಾಳೆ ಬಸ್ ಸ್ಟಾಪಿನಲ್ಲಿ ಭೇಟಿಯಾಗೋಣ."

ಅವಳು ಉತ್ತರಿಸಲಿಲ್ಲ.

"ನೀವು ನನಗೆ ಥ್ಯಾಂಕ್ಸ್ ಹೇಳಲಿಲ್ಲ."

"ಥಾ...ಥಾ...ಥ್ಯಾಂಕ್ಸ್..."

"ಒಂದು 'ಥಾ'ನ? ಮೂರು 'ಥಾ'ಗಳಾ?"

ಹಿಂದಿನಿಂದ ಒಬ್ಬ ವಿಹಾರಿಯನ್ನು ಕಾರಿನೊಳಗೆ ತಳ್ಳಿದ. ಅವನು ಕಾರನ್ನು ಹತ್ತುತ್ತಿದ್ದಂತೆಯೇ "ಏಯ್! ನೀನೂ ನನ್ನೊಡನೆ ಬಾ..." ಎಂದ.

ಪಿಸ್ತೂಲನ್ನು ತೋರಿಸುತ್ತ.

ಎಲ್ಲರ ಕಣ್ಣುಗಳೂ ಅತ್ತ ತಿರುಗಿದವು.

ಅಲ್ಲಿ ಪ್ರವಲ್ಲಿಕ ಇದ್ದಳು.

ಜನರಲ್ಲಿ ಕಲರವ ಪ್ರಾರಂಭವಾಯಿತು. ಛೀಫ್ ಹೆಜ್ಜೆಯನ್ನು ಮುಂದಕ್ಕೆ ಹಾಕಿದ. ಅವಳು ಆತನನ್ನು ತಡೆದು ಕಾರಿನ ಬಳಿಗೆ ನಡೆದಳು.

ಮಕ್ಕಳಿಂದ ಉಗ್ರವಾದಿಗಳನ್ನು ದೂರವಾಗಿ ಎಷ್ಟು ಬೇಗ ಸಾಧ್ಯವಾದರೆ ಅಷ್ಟು ಬೇಗ ಕಳಿಸಬೇಕು. ಇವರು ಮನಸ್ಸನ್ನು ಬದಲಾಯಿಸಿಕೊಂಡರೆ ಅಪಾಯ. ಒಬ್ಬ ಸ್ತ್ರೀಯಾಗಿ ಅವರೊಡನೆ ಹೋಗುವುದು ದುಸ್ಸಾಹಸ. ಆದರೆ ಮಕ್ಕಳಿಗಿಂತಲೂ ತನಗೆ ಬರುವ ಅಪಾಯ ಅಂತಹ ಹೆಚ್ಚೇನಲ್ಲ. ಮೇಲಾಗಿ ತಾನು ಜವಾಬ್ದಾರಿಯುತ ಪೋಲೀಸ್ ಅಧಿಕಾರಿ.

ವಿಹಾರಿ ಮುಂದಿನ ಸೀಟಿನಲ್ಲಿ ಕುಳಿತುಕೊಂಡ. ಅವಳನ್ನು ಮಧ್ಯದಲ್ಲಿ ಕೂಡಿಸಿಕೊಂಡು ಇಬ್ಬರು ಟೆರ್ರರಿಸ್ಟ್‌ಗಳು ಹಿಂದಿನ ಸೀಟಿನಲ್ಲಿ ಕುಳಿತರು.

ಕಾರು ಸ್ಟಾರ್ಟ್ ಆಯಿತು.

ಎಲ್ಲರೂ ಪ್ರೇಕ್ಷಕರಾಗಿ, ನಿಸ್ಸಹಾಯಕರಾಗಿ ನೋಡುತ್ತಿದ್ದಂತೆಯೇ ಕಾರು ಕ್ರಮೇಣ ಅದೃಶ್ಯವಾಯಿತು. ಅದನ್ನು ಹಿಂಬಾಲಿಸುವ ಪ್ರಯತ್ನವನ್ನೇನೂ ಮಾಡಲಿಲ್ಲ. ಚೀಫ್. ಅದು ಅನವಶ್ಯಕವೆಂದು ಆತನಿಗೆ ಗೊತ್ತು.

ಅರ್ಧಗಂಟೆಯ ಪ್ರಯಾಣದ ನಂತರ ದಾರಿ ಬದಲಾಯಿಸಿ ಕಾರು ಮಣ್ಣಿನ ರಸ್ತೆಯನ್ನು ಪ್ರವೇಶಿಸಿತು, ಕಾಡು ಪ್ರಾರಂಭವಾಯಿತು.

ಅಡ್ಡಾದಿಡ್ಡಿ ರಸ್ತೆಯಲ್ಲಿ ಕಾರು ಹೊರಡಲು ಪ್ರಾರಂಭಿಸುತ್ತಿದ್ದಂತೆಯೇ ಅವಳ ಬ್ಲೌಸಿನ ಗುಂಡಿ ಬಿಚ್ಚಿಕೊಂಡಿತು. ಅವಳದನ್ನು ಗಮನಿಸಲಿಲ್ಲ. ಅವಳದು ತುಂಬಾ ಆರೋಗ್ಯ ಶರೀರ. ಕತ್ತಿನ ಕೆಳಭಾಗದಿಂದಲೇ ಪ್ರಾರಂಭವಾಗಿದ್ದ ಗೆರೆ–ಎರಡನೆ ಬಟನ್ ಬಳಿ ಅದೃಶ್ಯವಾಗಿತ್ತು. ಅಂತಹ ಕತ್ತಲಿನಲ್ಲಿಯೂ ಅವಳ ಶರೀರ ಮಿಂಚುತ್ತಿತ್ತು, ಕಾರು ಹಳ್ಳಕೊಳ್ಳಗಳಲ್ಲಿ ಏರಿಳಿಯುತ್ತಿದ್ದಾಗ ಅವರ ವಕ್ಷಸ್ಥಳವೂ ಮೇಲಕ್ಕೂ ಕೆಳಕ್ಕೂ ಆಡುತ್ತಿದ್ದುದನ್ನು ಆಸಕ್ತಿಯಿಂದ ಗಮನಿಸುತ್ತಿದ್ದರು ಅಕ್ಕಪಕ್ಕದಲ್ಲಿದ್ದ ಆ ಇಬ್ಬರೂ. ಒಬ್ಬ ಅವಳ ತೊಡೆಯ ಮೇಲೆ ಕೈಹಾಕಿದ. ನಂತರ ನಿಧಾನವಾಗಿ ಕೈಯ್ಯನ್ನು ಮೇಲೆ ಸರಿಸಲು ಪ್ರಾರಂಭಿಸಿದ. ಅವಳದನ್ನು ತಳ್ಳಿಬಿಡುವ ಪ್ರಯತ್ನ ಮಾಡಿದಳು.

ಅಷ್ಟರಲ್ಲಿ ಕಾರನ್ನು ಡ್ರೈವ್ ಮಾಡುತ್ತಿದ್ದ ವ್ಯಕ್ತಿ ಹೇಳಿದ, "ಆ ಹುಡುಗನನ್ನು ಬಿಟ್ಟು ನಿಮ್ಮಿಬ್ಬರನ್ನು ಕರೆತರಲು ಏಕೆ ಒಪ್ಪಿಕೊಂಡೆವೆಂದು ನೀವು ಊಹಿಸಬಲ್ಲಿರಾ?"

ಪ್ರವಲ್ಲಿಕ, ವಿಹಾರಿ ಮಾತನಾಡಲಿಲ್ಲ.

ಪಿಸ್ತೂಲಿನ ಕೊನೆಯಿಂದ ಅವಳ ಕತ್ತಿನ ಕೆಳಭಾಗದ ಗೆರೆಯನ್ನು ತಿದ್ದುತ್ತಾ "ಪೋಲೀಸ್ ಡಿಪಾರ್ಟ್‌ಮೆಂಟ್ ತಾನೇ......ಎಲ್ಲಿ ಸ್ವಲ್ಪ ಊಹಿಸು ಬೇಬಿ–"

ಅವಳು ಪಿಸ್ತೂಲನ್ನು ಪಕ್ಕಕ್ಕೆ ತಳ್ಳುತ್ತಾ ಮತ್ತೊಂದು ಕೈಯಿಂದ ಅವನ ಕೆನ್ನೆಗೆ ಬೀಸಿ ಹೊಡೆಯುವುದಕ್ಕೂ ಮುಂಚೆ, ಆ ಕೈಯನ್ನು ಗಟ್ಟಿಯಾಗಿ ಹಿಡಿದ ಅವನು ಜೋರಾಗಿ ನಗುತ್ತಾ ಮುಖಕ್ಕೆ ಹಾಕಿಕೊಂಡಿದ್ದ ಬಟ್ಟೆಯನ್ನು ಸರಿಸಿದ.

ಅವಳು ನಿಶ್ಚೇಷ್ಟಿತಳಾದಳು.

ನಾಟಕ ನಡೆದ ದಿನ ತಾನು ಆರೆಸ್ಟ್ ಮಾಡಿದ ವ್ಯಕ್ತಿ! ಅನಂತಾನಂತ ಸ್ವಾಮಿಯ ಕಾರಿನ ಡೋರ್ ತೆಗೆದು ನಿಂತವನು–A2.

"ನಿಮ್ಮನ್ನು ಕರೆತಂದದ್ದು ಸ್ವೀಟಾಗಿ ದ್ವೇಷ ತೀರಿಸಿಕೊಳ್ಳುವುದಕ್ಕಾಗಿ ಬೇಬಿ. ಆ ದಿನ ನನ್ನನ್ನು ಪಿಸ್ತೂಲಿನಿಂದ ಗಾಯಗೊಳಿಸಿದ್ದಕ್ಕೆ ನಿನ್ನನ್ನು, ಈ ದಿನ ನಮ್ಮವನ ಕೈಗೆ ಗಾಯಗೊಳಿಸಿದ್ದಕ್ಕೆ ಇವನನ್ನು ಕರೆದೊಯ್ಯುತ್ತಿದ್ದೇವೆ. ಪಾಪ, ನಿಮ್ಮವರೆಲ್ಲ ನಾವು ನಿಮ್ಮನ್ನು ದೂರ ಕರೆದುಕೊಂಡು ಹೋಗುತ್ತಿರುವುದು ಬಿಟ್ಟು ಬಿಡಲು ಎಂದುಕೊಂಡಿದ್ದಾರೆ, ನೀವೂ ಹಾಗೆಯೇ ಅಂದುಕೊಂಡಿದ್ದೀರಾ?"

ಅವಳು ಹಾಗಂದುಕೊಂಡಿರಲೇ ಇಲ್ಲ. ಅದಕ್ಕಿಂತಲೂ ಆಶ್ಚರ್ಯ ಉಂಟು ಮಾಡುತ್ತಿದ್ದ ವಿಷಯ ಅವಳ ಮನಸ್ಸನ್ನು ಚುಚ್ಚುತ್ತಿತ್ತು. ಸೂರ್ಯರಾವ್‌ನ ಮೇಲೆ ಇವರು ಕೊಲೆ ಪ್ರಯತ್ನ ಮಾಡಿದ್ದರು. ಮತ್ತೆ ಅವನೇ ಮುಖ್ಯಮಂತ್ರಿ ಯಾಗಲು ಹೇಗೆ ಒಪ್ಪಿಕೊಂಡರು?

ಅದನ್ನೇ ಕೇಳಿದಳು.

ಆ ಮೂವರೂ ಜೋರಾಗಿ ನಕ್ಕರು.

ಕಾರು ಕಾಡಿನ ಮಧ್ಯೆ ನಿಂತಿತು. "ಇಳೀರಿ" ಜೋರುಮಾಡಿದ ನಾಯಕ. ಎಲ್ಲರೂ ಇಳಿದರು.

"ಅನಂತಾನಂತಸ್ವಾಮಿಯ ಲೀಲೆಗಳು ನಿಮಗೆ ಅರ್ಥವಾಗುವುದಿಲ್ಲ. ಮೊದಲು ಸೂರ್ಯರಾವ್‌ನ ಮೇಲೆ ಕೊಲೆಯ ಪ್ರಯತ್ನ ಮಾಡಿದಂತೆ ನಟಿಸಿ ದರೆ–ನಂತರ ಆತನನ್ನು ಮುಖ್ಯಮಂತ್ರಿ ಮಾಡಿದರೆ ಯಾರಿಗೂ ಅನುಮಾನ ಬರು ವುದಿಲ್ಲ. ಪ್ರಜೆಗಳಿಗೆ ಆತನ ಮೇಲೆ ಸಹಾನುಭೂತಿಯಿರುತ್ತದೆ! ಸ್ವಾಮಿಯ ಮುಖ್ಯವಾದ ಮೂರನೆ ಸ್ತಂಭ ಆತ! ಯಾಕೆ ಸಾಯೋಕೆ ಮುಂಚೆ ಈ ರಹಸ್ಯ ಪಾಕ್ ಆಗ್ತಿದೆಯಾ? ಇದೆಲ್ಲಾ ಸ್ವಾಮಿಯ ಪ್ಲಾನೇ...ರಾಜಕೀಯ ಚದುರಂಗ!"

"ಪಾಲಿಟಿಕ್ಸ್...ಬ್ಲಡಿ ಪಾಲಿಟಿಕ್ಸ್" ಸಿಟ್ಟಿನಿಂದ ಹೇಳಿದ ವಿಹಾರಿ.

"ಪಾಲಿಟಿಕ್ಸ್ ಬಗ್ಗೆ ಸ್ವರ್ಗದಲ್ಲಿ ಯೋಚಿಸೋಣವಾಗಲೀ..... ನಡೀ" ಎನ್ನುತ್ತಾ ಒಬ್ಬ ವಿಹಾರಿಯನ್ನು ಪಕ್ಕಕ್ಕೆ ತಳ್ಳಿದ. ವಿಹಾರಿ ಮುಂದಕ್ಕೆ ಮುಗ್ಗರಿ ಸಿದ. ಬೆನ್ನಿನ ಹಿಂದೆ ಪಿಸ್ತೂಲನ್ನು ಹಿಡಿದು ತಳ್ಳಿಕೊಂಡು, ಪ್ರವಲ್ಲಿಕಳಿಂದ ಅವ ನನ್ನು ದೂರ ಕರೆದೊಯ್ದ. ಕಾಡು ಅಲ್ಲಿಂದ ಇಳಿಮುಖವಾಗಿತ್ತು. ಕೆಳಗೆ ಆಳ

ವಾದ ದೊಡ್ಡ ಕಂದಕ. ಅಲ್ಲಿ ನಿಲ್ಲಿಸಿದ.

"ಈ ಆಳಕ್ಕೆ ಹಾರಿ ಸಾಯುತ್ತೀಯಾ? ಇಲ್ಲಾ ಪಿಸ್ತೂಲು..." ನಕ್ಕು ಕೇಳಿದ ಟೆರ್‍ರರಿಸ್ಟ್ "...ನೋಡಿದೆಯಾ ನಾನೆಷ್ಟು ಒಳ್ಳೆಯವನು! ನಿನ್ನನ್ನೇ ಏನು ಬೇಕೆಂದು ಕೋರಿಕೊಳ್ಳುತ್ತಿದ್ದೇನೆ"

ವಿಹಾರಿ ಮಾತನಾಡಲಿಲ್ಲ.

"ಬಟ್ಟೆಗಳನ್ನು ಬಿಚ್ಚು..."

ವಿಹಾರಿ ಬೆಚ್ಚಿ ನೋಡಿದ.

"ನೀನು ಸತ್ತ ನಂತರ ಹದ್ದುಗಳಿಗೆ ಪ್ರಾಣಿಗಳಿಗೆ ನಿನ್ನ ಯಾವ ಬಟ್ಟೆಗಳೂ ಅಡ್ಡಿ ಮಾಡಬಾರದು. ಪರೋಪಕಾರಾರ್ಥ ಮಿದಂ ಶರೀರಂ ಎಂದಿದ್ದಾರೆ ಸ್ವಾಮಿ. ನೋಡಿದೆಯಾ ನನಗೆಷ್ಟು ದಯಾಗುಣವಿದೆ."

ಅವನೊಬ್ಬ ಸ್ಯಾಡಿಸ್ಟ್ ಎಂದು ಗ್ರಹಿಸಿದ ವಿಹಾರಿ. ಹೇಳಿದ ಕೆಲಸವನ್ನು ಕೂಡಲೇ ಮಾಡದಿದ್ದರೆ ಮತ್ತಷ್ಟು ಹುಚ್ಚನಂತಾಗುತ್ತಾನೆಂದು ಗೊತ್ತು. ನಿಶ್ಯಬ್ಧವಾಗಿ ಬಟ್ಟೆಗಳನ್ನೆಲ್ಲಾ ಬಿಚ್ಚಿ ಕೇವಲ ಅಂಡರ್‌ವೇರ್ ಮಾತ್ರ ಉಳಿಸಿಕೊಂಡು ನಿಂತ.

ಹಿಂದಿನಿಂದ 'ಹಾಟ್' ಎಂದು ಪೆಟ್ಟು ಬಿತ್ತು, "...ಅದನ್ನೂ ಬಿಚ್ಚು" ವಿಹಾರಿ ಅದನ್ನು ಕೂಡಾ ಬಿಚ್ಚಿದ. ಇಂತಹ ಸ್ಯಾಡಿಸ್ಟ್‌ಗಳನ್ನು ಅವನು ಕೇವಲ ಸಿನೆಮಾಗಳಲ್ಲಿ ನೋಡಿದ್ದ.

"ನನ್ನ ಹೆಸರೇನೆಂದು ನಿನಗೆ ಗೊತ್ತಾ? ಗೊತ್ತಾದರೆ ಹೃದಯ ಒಡೆದು ಸಾಯುತ್ತಿ" ಎಂದು ಮುಖದ ಮೇಲಿದ್ದ ಕಪ್ಪು ಬಟ್ಟೆಯನ್ನು ಸರಿಸಿದ. "ನನ್ನ ಹೆಸರು ರಾಮಲಾಲ್" ಅಂದ ರಾಮಲಾಲ್!

ವಿಹಾರಿ ಸ್ತಬ್ಧನಾದ. ಸ್ವಾಮಿಯ ಎರಡನೆ ಸ್ತಂಭ !!

"ಈ ರಿವಲ್ವಾರ್‌ನಲ್ಲಿ ಎರಡು ಗುಂಡುಗಳಿವೆ. ಅತ್ತ ತಿರುಗಿ ಹೇಳು. ಮೊದಲನೆಯದರಿಂದ ನಿನ್ನನ್ನು ಸಾಯಿಸುತ್ತೇವೋ ಇಲ್ಲವೋ?"

ವಿಹಾರಿ ಅತ್ತ ತಿರುಗಿದ. ಹಿಂದೆ ಹತ್ತು ಗಜ ದೂರದಲ್ಲಿ ರಾಮಲಾಲ್ ನಿಂತಿದ್ದಾನೆ. ಸಾವು ತಪ್ಪಿದ್ದಲ್ಲವೆಂದು ನಿಶ್ಚಯವಾಯಿತು.

"ಸಾಯಿಸುತ್ತಿ..." ಎಂದು ಕಿರುಚಿದ ದವಡೆ ಕಚ್ಚಿಕೊಂಡು.

ಗುಂಡು ಗಾಳಿಯಲ್ಲಿ ತೂರಿತು.

"ಸಾಯಿಸಲಿಲ್ಲ.. ಅಹ್ಹಾಹ್ಹಾ...ಸಾಯಿಸಲಿಲ್ಲ. ಸುಳ್ಳು ಹೇಳಿದಿ. ಈ ಸಲ ಇನ್ನೊಂದು ಛಾನ್ಸ್ ಕೊಡುತ್ತಿದ್ದೇನೆ. ಸುಳ್ಳು ಹೇಳಿದರೆ ಸುಟ್ಟು ಬಿಡುತ್ತೇನೆ. ಆಗ ನಿನ್ನನ್ನು ಕೊಂದ ಪಾಪ ನನಗಂಟುವುದಿಲ್ಲ. ಹೌದಾ ..ಹೇಳು ಈ ಸಲ..."

"ಸಾಯಿಸುತ್ತಿ''...ನಿಜ ಹೇಳುವಂತೆ ಹೇಳಿದ.
ಪಿಸ್ತೂಲಿನಿಂದ ಎರಡು ಗುಂಡುಗಳು ಹೊರ ತೂರಿ ಬಂದವು.

* * * * *

ಪ್ರವಲ್ಲಿಕ ಇನ್ನೂ ಶಿಲಾ ಪ್ರತಿಮೆಯಂತೆ ನಿಂತಿದ್ದಳು. ಅವರು ಹೇಳಿದ ವಿಷಯ ಅವಳಿಗೊಂದು ಷಾಕ್. ಅವರು ಹೇಳುವ ವರೆಗೂ ಅನಂತಾನಂತ ಸ್ವಾಮಿಯ ಪ್ಲಾನ್ ಇಷ್ಟೊಂದು ದುಷ್ಟತನದ್ದೆಂದು ಅವಳು ಯೋಚಿಸಿರಲಿಲ್ಲ. ಈ ಮಕ್ಕಳ ಅಪಹರಣದ ಹಿಂದೆ ಸ್ವಾಮಿ ಇರುತ್ತಾನೆಂಬ ಅನುಮಾನ ಯಾರಿಗೂ ಬರದಷ್ಟು ಬುದ್ಧಿವಂತಿಕೆಯಿಂದ ಪ್ಲಾನ್ ಮಾಡಿದ್ದ. ಸೂರ್ಯಾರಾವ್ ಮೇಲೆ ಕೊಲೆಯ ಪ್ರಯತ್ನ ಮಾಡಿದ್ದು ಸ್ವಾಮಿಯೇ ಎಂದು ತನಗೆ ಗೊತ್ತು. ಟೆರ್ರರಿಸ್ಟ್‌ಗಳು ಸೂರ್ಯಾರಾವನನ್ನು ಮುಖ್ಯಮಂತ್ರಿ ಮಾಡುವಂತೆ ಸೂಚಿಸಿದಾಗ, ಇವರು ಅನಂತಾನಂತಸ್ವಾಮಿಯ ವಿರೋಧಿಗಳೆಂದು ಊಹಿಸಿದ್ದಳು. ತೆರೆಯ ಮರೆಯಲ್ಲಿ ಇಂತಹ ನಾಟಕ ನಡೆದಿರುತ್ತದೆಂದು ಅವಳು ಕನಸಿನಲ್ಲಿಯೂ ಊಹಿಸಿರಲಿಲ್ಲ.

ಭುಜದ ಮೇಲೆ ಕೈ ಬಿದ್ದಾಗ ಅವಳು ಯೋಚನೆಯಿಂದ ಎಚ್ಚೆತ್ತುಕೊಂಡಳು. A-2 ಅವಳ ಬೆನ್ನನ್ನು ಸವರುತ್ತಿದ್ದಾನೆ. ಅವನ ತುಟಿಗಳ ಮೇಲೆ ಕ್ರೂರ ನಗೆ ಕಾಣುತ್ತಿತ್ತು. ಕೈಯನ್ನು ಮತ್ತಷ್ಟು ಕೆಳಗೆ ಸರಿಸಿದ. ಅವಳು ಕೈಯ್ಯನ್ನು ಪಕ್ಕಕ್ಕೆ ತಳ್ಳುವ ಪ್ರಯತ್ನ ಮಾಡಿದಳು. ಅವನ್ನು ಅವನು ಮೊದಲೇ ಊಹಿಸಿದವನಂತೆ ಅವಳ ಬೆನ್ನಿನ ಕೆಳಭಾಗಕ್ಕೆ ಬಲವಾಗಿ ಹೊಡೆದ.

ಅವಳು ಪ್ಯಾರಾಲೈಜ್ ಆದಳು.

ಅಂತಹ ಕಿಕ್ ಬಗ್ಗೆ ಸಿ.ಬಿ.ಐ. ಟ್ರೈನಿಂಗ್‌ನಲ್ಲಿ ಕಲಿಸುತ್ತಾರಾಗಲೀ, ಅವಳಿಗೆ ಆ ಪೆಟ್ಟಿನಿಂದ ಎಚ್ಚರತಪ್ಪದಿದ್ದರೂ. ತಡೆಯಲಾರದಂತಹ ನಿಶ್ಶಕ್ತಿ ಆವರಿಸಿತು. ಅವಯವಗಳು ಸ್ವಾಧೀನ ಕಳೆದುಕೊಂಡವು.

ಬಂದೂಕನ್ನು ಉಪಯೋಗಿಸದೆ ಅವರು ತಮ್ಮನ್ನು ಸ್ವಾಧೀನಪಡಿಸಿಕೊಳ್ಳುತ್ತಿದ್ದಾರೆಂದು ಅವಳಿಗೆ ಅರ್ಥವಾಯಿತು, ಆದರೆ ಏನೂ ಮಾಡಲಾರದಂತಹ ನಿಸ್ಸಹಾಯಕ ಪರಿಸ್ಥಿತಿ. ಆ ಕಾಡಿನ ಮಧ್ಯೆ ಅಂತಹ ಅರ್ಧರಾತ್ರಿ ವೇಳೆ ಕಿರುಚಿದರೂ ಯಾರಿಗೂ ಕೇಳಿಸದು.

ಅವಳು ವಿಹಾರಿಗಾಗಿ ನೋಡಿದಳು. ಅವರ ಲೀಡರ್ ಅವಳನ್ನು ಮರೆಗೆ ಕರೆದೊಯ್ದಿದ್ದ, ಬಹುಶಃ ಸಾಯಿಸಿಬಿಡಲು ಇರಬೇಕು.

ಈ ಮೂವರು ಮಕ್ಕಳನ್ನು ಬಿಟ್ಟು ತಮ್ಮನ್ನೇಕೆ ಕರೆದುಕೊಂಡು ಬಂದಿ

ದ್ದಾರೆ—ಇವರ ರಹಸ್ಯಗಳನ್ನೆಲ್ಲ ತಮಗೇಕೆ ಹೇಳಿದ್ದಾರೆಂದು ಅವಳಿಗೆ ಅರ್ಥವಾಯಿತು. ಈ ಕಾಡಿನಲ್ಲಿ ತಮ್ಮಿಬ್ಬರನ್ನು ಸಾಯಿಸಿ ಹಳೆಯ ಸೇಡನ್ನು ತೀರಿಸಿಕೊಳ್ಳುತ್ತಾರೇನೋ?

ಅವಳು ಕದಲುತ್ತಿದ್ದಂತೆಯೇ ಅವಳೆರಡೂ ಕೈಗಳನ್ನು ಹಿಂದಕ್ಕೆ ಸರಿಸಿ ಬಿಗಿಯಾಗಿ ಹಿಡಿದ ಒಬ್ಬ, ಮತ್ತೊಬ್ಬ ಅವಳ ಬ್ಲೌಸ್ ಬಟನ್ಸ್ ಬಿಚ್ಚಿದ. ಅವಳು ವಿರೋಧಿಸಲು ಪ್ರಯತ್ನಿಸಿದರೂ ಅವರು ಹೊಡೆದ ಪೆಟ್ಟಿಗೆ ಕೈಗಳು ಸ್ವಾಧೀನ ಕಳೆದುಕೊಂಡಿದ್ದವು. ನಿಂತಿದ್ದ ಅವಳ ಮುಂದೆ ಮೊಣಕಾಲೂರಿ ಕುಳಿತು ಮತ್ತೊಬ್ಬ ಅವಳ ಸೀರೆಗೆ ಕೈಹಾಕಿ ಜೋರಾಗಿ ಎಳೆದ. ಅವಳು ನಿಸ್ಸಹಾಯಕಳಾಗಿ ನೆಲದ ಮೇಲೆ ಕುಸಿದಳು. ಅವಳ ಶರೀರದ ಕೆಳಗೆ ಸಿಕ್ಕಿದ ಒಣಕಡ್ಡಿಗಳು ಪಟಪಟ ಮುರಿದವು. ಕಾಡಿನ ಹಕ್ಕಿಯೊಂದು ದೂರದಲ್ಲಿ ವಿಕೃತವಾಗಿ ಕಿರುಚಿತು. ಮರದ ಕೊಂಬೆಗಳು ತೂಗಾಡುತ್ತಿದ್ದವು. ಎಲ್ಲಾ ನಿಶ್ಶಬ್ದ.

ಆ ನಿಶ್ಶಬ್ದವನ್ನು ಸೀಳುತ್ತಾ ಕೆಲಗಜಗಳ ದೂರದಲ್ಲಿ ಪಿಸ್ತೂಲು ಮೂರು ಸಲ ಸಿಡಿದಿದ್ದನ್ನು ಕೇಳಿದಳು. ಅದರೊಡನೆ ವಿಹಾರಿಯನ್ನು ಕರೆದೊಯ್ದವನ ಅಟ್ಟಹಾಸ ನಗೆಯೂ ಕೇಳಿಸಿತು.

ಆಗ ಮೊಟ್ಟಮೊದಲನೆ ಸಲ ಅವಳ ಕಣ್ಣಿಂದ ನೀರಿನ ಹನಿ ಜಾರಿತು.

ವಿಹಾರಿ...

...ಅವನು ಯಾವ ರಕ್ಷಣಾ ಖಾತೆಗೂ ಸಂಬಂಧಿಸಿದವನಲ್ಲ, ಯಾವ ಗೂಢಚಾರಿ ಸಂಸ್ಥೆಗೂ ಸೇರಿದವನಲ್ಲ. ಕೇವಲ ಮಕ್ಕಳನ್ನು ರಕ್ಷಿಸಲು ಬಂದವನು! ಒಬ್ಬ ಹೆಣ್ಣನ್ನು ಸೇವ್ ಮಾಡಲು ಕಾರನ್ನು ಹತ್ತಿದವನು. ಕರ್ತವ್ಯ ತಿಳಿದ ಒಬ್ಬ ಸಾಮಾನ್ಯ ಪ್ರಜೆ! ಒಂದು ನಿರ್ದಿಷ್ಟವಾದ ಗುರಿಗಾಗಿ ಪ್ರಾಣವನ್ನೇ ಅರ್ಪಿಸಿದ್ದಾನೆ!!

ಈ ಎರಡು ದುರಂತಗಳನ್ನು ಕಾಣಲೆಂಬಂತೆ ಚಂದ್ರ ಮೋಡಗಳ ಹಿಂದಿನಿಂದ ಹೊರಬಂದ. ಕಾಡೆಲ್ಲಾ ಬೆಳ್ಳಗಾಯಿತು. ಅಂಗಾತ ಬಿದ್ದಿದ್ದ ಅವಳ ಮೇಲೊಬ್ಬ ಬಗ್ಗಿದ. ಅವಳು ಕೈಗಳಿಂದ ತನ್ನ ವಕ್ಷದ್ವಯಗಳನ್ನು ಮುಚ್ಚಿಕೊಳ್ಳುವ ಪ್ರಯತ್ನ ಮಾಡಿದಳು. ಪಕ್ಕದಲ್ಲಿದ್ದವನು ತನ್ನ ಕಾಲಿನಿಂದ ಅವಳ ಮೊಣಕೈಗೆ ಒದ್ದ. ನರ ಕಳಕ್ ಎಂದಿತು. ಮೇಲೆ ಬಾಗಿದವನು ಅವಳ ಕತ್ತಿನ ಹಿಂಭಾಗಕ್ಕೆ ಕೈಹಾಕಿ ಶರೀರವನ್ನು ಮೇಲಕ್ಕೆತ್ತಿ ಹಿಂದಿದ್ದ ಬ್ರಾದ ಹುಕ್ಕನ್ನು ಬಿಚ್ಚಿ ಗಾಳಿಯಲ್ಲಿ ಬಿಸಾಕಿಬಿಟ್ಟ. ಅವಳ ಉಳಿದ ಬಟ್ಟೆಗಳೊಡನೆ ಅದೂ ಆಳವಾದ ಕಂದಕಕ್ಕೆ ಬಿತ್ತು. ತಲೆಯ ಬಳಿ ಕುಳಿತಿದ್ದವನು ಅವಳ ಕೈಗಳನ್ನು ಬಿಗಿಯಾಗಿ ಹಿಡಿದಿದ್ದ. ಅವಳು ಕಿರುಚಾಡಲಿಲ್ಲ.

ಯುದ್ಧದಲ್ಲಿ–ಸಾಯುವ ಮುಂಚೆ ಕಿರುಚುವುದು ವೀರರ ಲಕ್ಷಣವಲ್ಲ. ಒಂದು ಗಂಟೆಯ ನಂತರ ಬರಲಿರುವ ಮೃತ್ಯುವನ್ನು ಆಹ್ವಾನಿಸುತ್ತಾ ಅವಳು ಕಣ್ಮುಚ್ಚಿಕೊಂಡಳು. ಅವಳ ಮೇಲೆ ಬಗ್ಗಿದವನು ಭುಜಗಳ ಮೇಲಿನಿಂದ ತನ್ನ ಕೈಯನ್ನು ನಿಧಾನವಾಗಿ ಕೆಳಗೆ ಜಾರಿಸಿ ಅಂತಿಮ ಆಸ್ವಾದನೆಗಾಗಿ ಸಿದ್ಧನಾದ.

ಅವಳ ಬಿಳಿಯ ಶರೀರದ ಮೇಲೆ ಬೆಳದಿಂಗಳು ಮತ್ತಷ್ಟು ಬೆಳ್ಳಗೆ ಮಿಂಚುತ್ತಿತ್ತು.

ಇನ್ನೊಂದು ಕ್ಷಣ ಕಳೆದಿದ್ದರೆ ಏನಾಗುತ್ತಿತ್ತೋ ಏನೋ, ಆದರೆ ಆ ಕ್ಷಣವೇ ಪಿಸ್ತೂಲಿನ ಶಬ್ದ ಕೇಳಿಸಿತು.

ಪ್ರವಲ್ಲಿಕಳ ಮೇಲೆ ಬಾಗಲಿದ್ದ ಟೆರ್ರರಿಸ್ಟ್ ಹಾಗೆಯೇ ನಿಂತುಬಿಟ್ಟ. ಇಬ್ಬರು ಗೂಂಡಾಗಳೂ ಒಬ್ಬರ ಮುಖವನ್ನೊಬ್ಬರು ನೋಡಿಕೊಂಡರು. ಈ ಶಬ್ದವನ್ನವರು ಊಹಿಸಿರಲಿಲ್ಲ. ಯಾರು ಯಾರ ಮೇಲೆ ಗುಂಡು ಹಾರಿಸಿದ ರೆಂದು ಅವರಿಗೆ ಗೊತ್ತಾಗಲಿಲ್ಲ. ಏಕೆಂದರೆ ಆ ಮುಂಚೆ ಕೇಳಿಸಿದ ಶಬ್ದದಿಂದಲೇ ವಿಹಾರಿ ಸತ್ತಿರಬೇಕು. ಅವರ ಸಂದಿಗ್ಧತೆಯನ್ನು ಪ್ರವಲ್ಲಿಕ ಸರಿಯಾದ ಸಮಯ ದಲ್ಲಿ ಸದುಪಯೋಗಪಡಿಸಿಕೊಂಡಳು. ಬಲವನ್ನೆಲ್ಲಾ ಕಾಲಿಗೆಳೆದುಕೊಂಡು, ತನ್ನನ್ನು ಹಿಡಿದುಕೊಂಡಿದ್ದ ವ್ಯಕ್ತಿಯ ಮುಖಕ್ಕೆ ಬಡಿದಳು. ಅವನ ಕೈಯಿಂದ ತಪ್ಪಿಸಿಕೊಳ್ಳುತ್ತಿದ್ದಾಗ ಎರಡನೆಯವನು ಮತ್ತೆ ಹಿಡಿದ.

ಆಗ ಸಿಡಿಯಿತು ಹಿಂದಿನಿಂದ ಪಿಸ್ತೂಲು. ಹೊರಟ ಗುಂಡು ನುಗ್ಗಿ ಹೋಯಿತು, ರಕ್ತ ಚಿಮ್ಮುತ್ತಿದ್ದಂತೆಯೇ ಟೆರ್ರರಿಸ್ಟ್ ಮುದುಡಿ ಬಿದ್ದ. ಆ ಒದ್ದಾಟದಲ್ಲಿ ಕಾಲುಜಾರಿ ಕಂದಕದೊಳಗೆ ಬಿದ್ದುಬಿಟ್ಟ. ಅವನಿಟ್ಟ ಕೂಗು ಕಾಡೆಲ್ಲಾ ಪ್ರತಿಧ್ವನಿಸಿತು,

ವಿಹಾರಿ ಮತ್ತೊಮ್ಮೆ ಗುರಿಯಿಟ್ಟ. ಆದರೆ ಈ ಸಲ ಬುಲೆಟ್ ಶತ್ರುವಿನ ಪಕ್ಕದಿಂದ ನುಗ್ಗಿತು. ಊಹಿಸದ ಆ ದಾಳಿಗೆ ಉಳಿದೊಬ್ಬ ಶತ್ರು ಹೆದರಿದ. ಪ್ರವಲ್ಲಿಕ ಒಬ್ಬಳೇ ತಾನೇ ಎಂದು ತಮ್ಮ ಬಳಿ ಯಾವ ಆಯುಧಗಳನ್ನೂ ಇರಿಸಿ ಕೊಂಡಿರಲಿಲ್ಲ ಅವರು. ಕಣ್ಮುಂದೆಯೇ ಜೊತೆಗಾರ ಸತ್ತದ್ದನ್ನು ಕಂಡು ಅವನು ಅಧೈರ್ಯಗೊಂಡ. ವಿಹಾರಿ ಮತ್ತೊಮ್ಮೆ ಗುರಿಯಿಡುವುದರೊಳಗಾಗಿ ಅವನು ಕಾಡಿನಲ್ಲಿ ಅದೃಶ್ಯನಾದ.

ವಿಹಾರಿಯ ಮೈಮೇಲೆ ಷರ್ಟೊಂದನ್ನು ಬಿಟ್ಟು ಮತ್ತೇನೂ ಉಳಿದಿರ ಲಿಲ್ಲ. ಅದು ಅದೃಷ್ಟವಶಾತ್ ಮರದ ಕೊಂಬೆಯಲ್ಲಿ ಸಿಕ್ಕಿತು.

ಹಾಗೆ ನೋಡಿದರೆ ಅವನುಳಿದುದೇ ಒಂದು ಪವಾಡ.

ರಾಮಲಾಲ್ ಸ್ಯಾಡಿಸ್ಟಾಗಿ ಅವನಿಗೆ ಹೇಳಿದ್ದ, "ನಿಜ ಹೇಳಿದರೆ ಬಿಟ್ಟು

ಬಿಡುತ್ತೇನೆ. ಹೇಳು ನಿನ್ನನ್ನೀಗ ಸುಡುತ್ತೇನಾ ಇಲ್ಲವಾ? ಎಂದು ನಿಜ ಹೇಳಿದ್ದಿ. ಅದಕ್ಕೆ ಆಗ ಸುಡಲಿಲ್ಲ. ಹೇಳು, ಈಗ ನಿನ್ನನ್ನು ಸಾಯಿಸುತ್ತೇನಾ ಇಲ್ಲವೇ ಗಾಳಿಯಲ್ಲಿ ಈ ಗುಂಡನ್ನು ಹಾರಿಸುತ್ತೇನಾ?" ಎನ್ನುತ್ತಾ ಅವನ ಪ್ರಾಣದೊಡನೆ ಆಟವಾಡತೊಡಗಿದ.

ಆದರೆ ಅವನು ಗಾಳಿಯಲ್ಲಿ ಸಿಡಿಸಿದಾಗ, ಮರದ ಮೇಲಿದ್ದ ಹದ್ದಿಗೆ ಅದು ತಗುಲಿದ್ದು, ಅದು ಕೆಳಗೆ ಬಿದ್ದದ್ದನ್ನು ಅವನು ಗಮನಿಸಲಿಲ್ಲ. ಗಾಯಗೊಂಡ ಹದ್ದು ತನ್ನೆರಡು ರೆಕ್ಕೆಗಳನ್ನು ಚಾಚಿ ಗಾಳಿಯಲ್ಲಿ ಹಾರಿತು. ಸಿಟ್ಟಿನಿಂದಲೂ, ದ್ವೇಷದಿಂದಲೂ ಅದರ ರೆಕ್ಕೆಗಳು ಪರಪರನೆ ವೇಗವಾಗಿ ಬಡಿದುಕೊಳ್ಳುತ್ತಿತ್ತು.

ಆ ಸಮಯದಲ್ಲಿ ರಾಮಲಾಲ್ ಜೋರಾಗಿ ನಗುತ್ತಾ, "ಗೋಡೆಯ ಮೇಲಿನಿಂದ ನನ್ನ ಮೇಲೆ ಹೇಗೆ ಹಾರಿದಿ? ಹೀಗೇ ತಾನೇ..."ಎನ್ನುತ್ತಾ ಆಕ್ರೋಬ್ಯಾಟಿಕ್ಸ್ ಮಾಡುತ್ತಾ (ಈ ಸಲ ನಿಜವಾಗಿಯೂ) ವಿಹಾರಿಯನ್ನು ಷೂಟ್ ಮಾಡುವಷ್ಟರಲ್ಲಿ ರೊಚ್ಚಿಗೆದ್ದಿದ್ದ ಹದ್ದು ವೇಗವಾಗಿ ಬಂದು ರಾಮಲಾಲ್‌ನ ಹಣೆಗೆ ಒಡಿಯಿತು.

ರಾಮಲಾಲ್ ಈ ಹಠಾತ್ ಆಕ್ರಮಣಕ್ಕೆ ಬೆಚ್ಚಿದ. ಎಂತಹವನಾದರೂ ಭಯಪಡಬೇಕಾದ ಸ್ಥಿತಿ ಅದು. ಅವನ ಬಲಗಣ್ಣಿನಲ್ಲಿ ರಕ್ತಬರಲು ಪ್ರಾರಂಭವಾಯಿತು. ದಿಕ್ಕು ತೋಚದವನ ಕೈಯಿಂದ ಪಿಸ್ತೂಲ್ ಕೆಳಗೆ ಬಿದ್ದಿತ್ತು. ನೋವಿನಿಂದ ಕಣ್ಣುಗಳನ್ನು ಬಿಗಿಯಾಗಿ ಮುಚ್ಚಿಕೊಂಡ.

ವಿಹಾರಿ ಆ ಅವಕಾಶವನ್ನು ಕಳೆದುಕೊಳ್ಳಲಿಲ್ಲ. ವೇಗವಾಗಿ ಹೋಗಿ ಪಿಸ್ತೂಲನ್ನು ತೆಗೆದುಕೊಂಡ. ಆದರೆ ರಾಮಲಾಲ್ ಕೂಡಲೇ ಚೇತರಿಸಿಕೊಂಡು ಅಲ್ಲಿಂದ ಪರಾರಿಯಾಗಿದ್ದ. ಕಣ್ಣು ಸರಿಯಾಗಿ ಕಾಣದಿದ್ದರೂ ಮರಗಳ ಮರೆಯಲ್ಲಿ ಓಡಿದ್ದ.

ವಿಹಾರಿ ಅವನ ಬಗ್ಗೆ ತಲೆಕೆಡಿಸಿಕೊಳ್ಳಲಿಲ್ಲ. ಪ್ರವಲ್ಲಿಕ ಏನಾದಳೋ ಎಂಬ ಆತಂಕದಿಂದ ಹುಡುಕಾಡುತ್ತಾ ಬಂದ. ಅವನ ಮೈಮೇಲೆ ಶರ್ಟ್ ಮಾತ್ರ ಉಳಿದಿತ್ತು. ಅವನಲ್ಲಿಗೆ ಬರುವ ವೇಳೆಗೆ ಪ್ರವಲ್ಲಿಕಳ ಪರಿಸ್ಥಿತಿ ಹಾಗೆಯೇ ಆಗಿತ್ತು. ಅವಳು ಕೇವಲ ಒಂದು ಬಟ್ಟೆಯ ತುಂಡೊಂದನ್ನು ಮಾತ್ರ ಹೊದ್ದಿದ್ದಳು. ಆದರೆ ಅದು ತುಂಬಾ ಚಿಕ್ಕದು.

ಮೃತ್ಯು ಅದೆಷ್ಟು ಸಮೀಪ ಬಂದಿತ್ತೋ. ಅಷ್ಟೇ ಬೇಗ ದೂರ ಸರಿದಿತ್ತು, ಸುತ್ತಲೂ ಕಾಡು.

ಕರೆತಂದವರು ಹೊರಟು ಹೋಗಿದ್ದರು, ಪ್ರಾಣ ಭಯದಿಂದ ಇಬ್ಬರು ಓಡಿಹೋಗಿದ್ದರು. ಮೃತ್ಯು ಒಬ್ಬನನ್ನು ಕರೆದೊಯ್ದಿತ್ತು. ವಿಹಾರಿ ಪ್ರವಲ್ಲಿಕ ಇಬ್ಬರೇ ಉಳಿದಿದ್ದರು. ಪ್ರಾಣಾಪಾಯ ತಪ್ಪಿತೆಂದು ತಿಳಿದಕೂಡಲೇ, ಸಾಮಾನ್ಯ

ಭಾವನೆಗಳು ಮತ್ತೆ ಉಂಟಾಗತೊಡಗಿದವು. ವಿಹಾರಿ ಚಕ್ಕನೆ ಮುಖ ತಿರುಗಿಸಿದ. ಪ್ರವಲ್ಲಿಕ ನಾಚಿಕೆಯಿಂದ ಪೊದೆಯೊಂದರ ಹಿಂದೆ ಓಡಿದಳು. ಅವಳ ಬದುಕಿನಲ್ಲಿ ಅಷ್ಟು ನಾಚಿಕೆಯನ್ನು ಅವಳೆಂದೂ ಅನುಭವಿಸಿರಲಿಲ್ಲ. ಮುಖ ಕೆಂಪಗಾಗಿತ್ತು. ಎರಡೂ ಕೈಗಳನ್ನು ಎದೆಗವಚಿಕೊಂಡು ಅರೆಕ್ಷಣದಲ್ಲಿಯೇ ಮಾಯವಾದಳು. ಆದರೆ ಆ ಅರೆಕ್ಷಣವೇ ಆ ಕಾಡಿನಲ್ಲಿ ಒಂದು ಮಿಂಚಿನ ಬಳ್ಳಿಯಂತೆ ಉಜ್ವಲವಾಗಿ ಮಿಂಚಿ ಮಾಯವಾದಂತೆ ಅನ್ನಿಸಿತು.

ವಿಹಾರಿಯ ಪರಿಸ್ಥಿತಿ ಅಷ್ಟು ಘೋರವಾಗಿರಲಿಲ್ಲ. ಅವನಿಗೊಂದು ಬುಶ್ ಶರ್ಟ್ ಇತ್ತು.

ಅವನಿಗೇನು ಮಾಡಬೇಕೆಂದೇ ತೋಚಲಿಲ್ಲ.

ಪ್ರವಲ್ಲಿಕ ಹೊರಟ ದಿಕ್ಕಿಗೆ ನೋಡಿದ. ಅಲ್ಲಿ ಪೊದೆಗಳು ದಟ್ಟವಾಗಿದ್ದವು. ಅವಳು ಅಲ್ಲಿಂದ ಹೊರಬರುವುದಿಲ್ಲವೆಂದು. ಯಾವುದಾದರೂ ಒಂದು ಬಟ್ಟೆಯನ್ನು ಅವಳಿಗ ಪೂರೈಸಬೇಕಾದದ್ದು ತನ್ನ ಕರ್ತವ್ಯವೆಂದು ಅವನು ಗ್ರಹಿಸಿದ. ತನ್ನ ಬಟ್ಟೆಗಳನ್ನು ತುಂಬಾ ಆಳಕ್ಕೆಸೆದಿದ್ದನ್ನು ಅವನು ನೋಡಿದ್ದ. ಅದೃಷ್ಟವಶಾತ್ ತನ್ನ ಷರ್ಟ್ ಸಿಕ್ಕಿತ್ತು. ಅದನ್ನವಳಿಗೆ ಕೊಟ್ಟರೆ ತನಗೇನೂ ಉಳಿಯುವುದಿಲ್ಲ.

ಆಳಕ್ಕೆ ಬಿದ್ದ ಟೆರ್ರರಿಸ್ಟ್‌ನ ಶರೀರಕ್ಕಾಗಿ ಅವನು ಬಗ್ಗಿ ನೋಡಿದ. ದೂರದಲ್ಲಿ ಕೆಳಗೆಲ್ಲೋ ಅಸ್ಪಷ್ಟವಾಗಿ ಕಾಣುತ್ತಿತ್ತು. ಅಲ್ಲಿಯವರೆಗೂ ಇಳಿದು ಬಟ್ಟೆಗಳನ್ನು ತರದಿದ್ದರೆ ಬೇರೆ ದಾರಿಯೇ ಇಲ್ಲ. ಆದರೆ ರಿಸ್ಕ್ ತೆಗೆದುಕೊಳ್ಳದಿದ್ದರೆ ಈ ಕಾಡಿನಿಂದ ತಾವಿಬ್ಬರೂ ಆಡಮ್ ಅಂಡ್ ಈವ್‌ನಂತೆ ನಾಗರೀಕ ಪ್ರಪಂಚದೊಳಗೆ ಪ್ರವೇಶಿಸಬೇಕು.

ಪ್ರವಲ್ಲಿಕಳನ್ನೇ ಸಲಹೆ ಕೇಳೋಣವೆಂದುಕೊಂಡ. ಆದರೆ ಅವಳೇನು ತಾನೇ ಹೇಳಿಯಾಳು? ಅಷ್ಟು ಆಳಕ್ಕೆ ಇಳಿಯಬೇಡ, ಎಲೆಗಳನ್ನು ಕಟ್ಟಿಕೊಂಡು ಹೋಗೋಣವೆಂದು ಹೇಳುತ್ತಾಳೇನೋ !

ಅವನಿನ್ನು ಮತ್ತೇನನ್ನೂ ಯೋಚಿಸದೆ ಆಳಕ್ಕಿಳಿಯಲು ಪ್ರಾರಂಭಿಸಿದ. ಪ್ರವಲ್ಲಿಕ ಇದೆಲ್ಲವನ್ನೂ ನೋಡುತ್ತಲೇ ಇದ್ದಳು. ತಮ್ಮ ಪರಿಸ್ಥಿತಿಯನ್ನು ನೆನೆಸಿಕೊಳ್ಳುತ್ತಿದ್ದರೆ ಅವಳಿಗೆ ಒಮ್ಮೆಗೇ ನಾಚಿಕೆ. ನಗು ಬರುತ್ತಿತ್ತು. ಮರದ ಕೊಂಬೆಗಳನ್ನು ಹಿಡಿದುಕೊಂಡು ಅವನು ಇಳಿಯುತ್ತಿದ್ದುದನ್ನು ನೋಡಿದರೆ 'ರಾಂಬೊ' ನೆನಪಾದ. ತನಗಾಗಿ ಅವನು ರಿಸ್ಕ್ ತೆಗೆದುಕೊಳ್ಳುತ್ತಿದ್ದಾನೆಂದು ಅವಳಿಗನ್ನಿಸಿತು.

ಶವದವರೆಗೂ ಹೋಗುವ ಅಗತ್ಯವಿಲ್ಲದೆ ಅದೃಷ್ಟವಶಾತ್ ಮರದ ರೆಂಬೆಗಳಲ್ಲೇ ಅವನಿಗೆ ತಮ್ಮ ಬಟ್ಟೆಗಳು ಕಂಡವು. ಅವಳ ಬ್ರಾ ಸಿಗಲಿಲ್ಲ. ಉಳಿದವು

ಗಳನ್ನೆಲ್ಲ ತೆಗೆದುಕೊಂಡು ಮೇಲೆ ಬಂದ. ಪೊದೆಯ ಹತ್ತಿರ ಅವುಗಳನ್ನಿಟ್ಟು ಆ ವಿಷಯ ತಿಳಿಸಿ ಗಿಡದ ಮರೆಗೆ ಹೋಗಿ 5 ನಿಮಿಷಗಳ ನಂತರ ಮತ್ತೆ ಬಂದ. ಅದುವರೆವಿಗೆ ಅವಳು ಸಿದ್ಧಳಾಗಿದ್ದಳು.

ಸ್ವಲ್ಪ ಹೊತ್ತು ಇಬ್ಬರೂ ಒಬ್ಬರನ್ನೊಬ್ಬರು ನೋಡಿಕೊಳ್ಳಲು ನಾಚಿಕೊಂಡರು. ವಿಹಾರಿಗಂತೂ ಅವಳು ಮದುವೆಯಾಗಲಿರುವ ಕರ್ನಲ್‌ಗೆ ಈ ವಿಷಯ ತಿಳಿದರೆ ಹೇಗಪ್ಪ ಎಂಬ ಅನುಮಾನ ಬಂತು. ಅರೆಕ್ಷಣಗಳ ಕಾಲ ತನ್ನ ಕಣ್ಮುಂದೆ ಸುಂದರವಾಗಿ ಕಂಡ ಮಿಂಚಿನಬಳ್ಳಿಯ ನೆನಪನ್ನು ತಲೆಯಿಂದ ಓಡಿಸಲು ತುಂಬಾ ಕಷ್ಟಪಡಬೇಕಾಗಿ ಬಂತು.

ಇಬ್ಬರೂ ವಾಹನದ ಬಳಿಗೆ ಬಂದರು. ಟೆರ್ರರಿಸ್ಟ್‌ಗಳು ತಮ್ಮಿಬ್ಬರನ್ನೂ ಕರೆತಂದಿದ್ದ ವಾಹನ ಅದು. ಅದರಲ್ಲೇ ಕೀ ಇತ್ತು. ಅವನದನ್ನು ಸ್ಟಾರ್ಟ್ ಮಾಡುತ್ತಾ ಹೇಳಿದ. "ಅವನನ್ನು ಕೊಂದದ್ದಕ್ಕೆ ನನ್ನ ಮೇಲೆ ಕೇಸ್ ಆಗುತ್ತಾ?" ಅವಳಿಗೆ ನಗು ಬಂತು. "ಇರುವುದಿಲ್ಲ" ಅಂದಳು. "ರೇಪ್ ಆಗುವ ಸಂದರ್ಭದಲ್ಲಿ ಆ ಹೆಣ್ಣನ್ನು ರಕ್ಷಿಸುವಾಗ ಮಾಡುವ ಅಪರಾಧಕ್ಕೆ ಶಿಕ್ಷೆಯಿಲ್ಲ.

"ಥ್ಯಾಂಕ್ಸ್"

"ಆ ವಿಷಯವನ್ನು ನಾನು ಹೇಳಬೇಕು"

ವಾಹನ ಹೊರಟಿತು. ಅವಳಿಗೆ ತನ್ನ ಕನ್ನಡಕದ ನೆನಪಾಯಿತು. ಬುಶ್ ಶರ್ಟ್ ಜೇಬಿನಲ್ಲಿ ಹುಡುಕಾಡಿದಳು. ಅದು ಸಾವಿರ ಚೂರಾಗಿ ಕಂಡಿತು. ಅವಳದನ್ನು ತೆಗೆದುಹಾಕುವ ಪ್ರಯತ್ನದಲ್ಲಿ ಮಗ್ನಳಾಗಿದ್ದಳು.

"ನೀವು ಕನ್ನಡಕ ಹಾಕಿಕೊಂಡರೆ ಸುಂದರವಾಗಿರುತ್ತೀರಿ"

ಅವರು ಅವನೆಡೆಗೇ ಒಂದು ಕ್ಷಣ ನೋಡಿ. ನಕ್ಕಳು. "ನೀವೊಬ್ಬರು ಮಾತ್ರ ಹಾಗೆ ಹೇಳಿದಿರಿ. ನನಗೇನೋ ಈ ಕನ್ನಡಕವೆಂದರೆ ಅಲರ್ಜಿ. ಈಗ ಇದು ಒಡೆದಿದೆ. ಇನ್ನು ಹತ್ತು ದಿನಗಳ ಕಾಲ ಆರಾಮವಾಗಿರಬಹುದಲ್ಲಾ ಎಂದು ಸಂತೋಷವಾಗಿದೆ."

"ಯಾರು ಹೇಳಿದರು ಹುಡುಗಿಯರಿಗೆ ಕನ್ನಡಕ ಚೆನ್ನಾಗಿರುವುದಿಲ್ಲವೆಂದು? ಕನ್ನಡಕ ಬುದ್ಧಿವಂತಿಕೆಗೆ ಚಿಹ್ನೆ. ನಿಜಕ್ಕೂ ಈ ಕನ್ನಡಕ ನಿಮಗೆ ತುಂಬಾ ಗಾಂಭೀರ್ಯವನ್ನು ಕೊಡುತ್ತಿತ್ತು"

ಅವಳು ಸೀಟಿನ ಹಿಂದಕ್ಕೆ ಬಾಗಿ ಕಣ್ಮುಚ್ಚಿಕೊಂಡಳು. ಸುಸ್ತಾಗಿದ್ದುದರಿಂದಲೋ. ಅವನ ಮಾತಿನಿಂದಲೋ ಗೊತ್ತಿಲ್ಲ.

# 8

ಮೂರನೆ ದಿನ ಪೇಪರ್‌ಗಳಲ್ಲಿ ಮಕ್ಕಳನ್ನು ಸಿ.ಬಿ.ಐ. ಅಪಾಯದಿಂದ ತಪ್ಪಿಸಿದ ಸುದ್ದಿ ದಪ್ಪ ಅಕ್ಷರಗಳಲ್ಲಿ ಬಂತು. ಪ್ರವಲ್ಲಿಕಳ ಬಗ್ಗೆ ವಿಪುಲವಾಗಿ ಬರೆದರು. ವಿಹಾರಿಯ ಬಗ್ಗೆ ಸಣ್ಣ ಬಾಕ್ಸ್-ಐಟಮ್ ಬಿಟ್ಟು ಹೆಚ್ಚು ವಿವರಗಳಿರಲಿಲ್ಲ.

ಎಲ್ಲಾ ವಿವರಗಳನ್ನು ಅಜ್ಜಿಗೆ ವಿವರಿಸಿದಳು ಸುನಾದಮಾಲ. ಒಂದಲ್ಲ ಎರಡು ಸಲ ಎಲ್ಲವನ್ನೂ ಕೇಳಿ ತಿಳಿದುಕೊಂಡಳು ಅಜ್ಜಿ. ಆ ಸಂಜೆಯೇ ಆಕೆ ವಿಹಾರಿಯ ಮನೆಗೆ ಹೋದಳು. ಸುನಾದ ಬರುವುದಿಲ್ಲವೆಂದಳು ಆಕೆ ಕರೆದಾಗ.

"ಯಾಕೆ?" ಎಂದು ಕೇಳಿದಳು. "ಯಾಕೆ? ನಿಂಗೆ ಕೃತಜ್ಞತೆ ಅನ್ನೋದು ಇದ್ಯಾ? ಆ ಹುಡುಗ ನಿಮ್ಮಿಬ್ಬರನ್ನು ರಕ್ಷಿಸುವುದಕ್ಕೋಸ್ಕರ ಆ ರಾಕ್ಷಸರ ಜೊತೆ ಹೋದ, ಅವನೇನಾದರೂ ಸಹಾಯ ಮಾಡಿರದಿದ್ದರೆ ನಮ್ಮ ವಿಷ್ಣು ಏನಾಗಿರುತ್ತಿದ್ದನೋ ಒಂದು ಸಲ ಊಹಿಸು."

ಅದನ್ನು ಊಹಿಸಿಕೊಳ್ಳುತ್ತಿದ್ದಂತೆಯೇ ಸುನಾದಮಾಲಳ ಕೈಗಳು ನಡುಗಿದವು. ವಿಷ್ಣು ಅಂದರೆ ಅವಳಿಗೆ ಅಷ್ಟು ಅಭಿಮಾನ. ಮೇಲೆ ಮಾತ್ರ. "ಏನಾಗ್ತಿತ್ತು! ಮುಖ್ಯಮಂತ್ರಿ ಬದಲಾದ ಕೂಡಲೇ ನಮ್ಮನ್ನು ಬಿಟ್ಟುಬಿಡುತ್ತಿದ್ದರು ಅಷ್ಟೆ" ಅಂದಳು ಹಗುರವಾಗಿ.

ಅಜ್ಜಿ ಅವಳ ಬಳಿಗೆ ಬಂದು ಅವಳ ಮುಖದಲ್ಲಿ ಮುಖವಿಟ್ಟು, "ಏನೇ, ನಿಂಗೇನು ಹುಚ್ಚಾ? ಇಲ್ಲಾ ಭಯವೇ? ಪ್ರತಿಯೊಂದಕ್ಕೂ ಯಾವುದೋ ಒಂದು ವಾದವನ್ನು ಕಲ್ಪಿಸಿಕೊಳ್ಳುತ್ತಿ. ಲಾಭವಿಲ್ಲ. ನಿನ್ನನ್ನು ಹುಚ್ಚಾಸ್ಪತ್ರೆಗೇ ಸೇರಿಸ್ಬೇಕು" ಎಂದು ಗೊಣಗುತ್ತಾ ತಾನೊಬ್ಬಳೇ ವಿಹಾರಿ ಮನೆಗೆ ಹೊರಟಳು.

ಎರಡು ನಿಮಿಷಗಳಲ್ಲೇ ಅಜ್ಜಿ, ವರ್ಧಮಾನಮ್ಮ ಸ್ನೇಹಿತರಾಗಿಯೇ ಬಿಟ್ಟರು. ರಾಮದಾಸು ಚರಿತ್ರೆಯಿಂದ, ಟಿ.ವಿ. ರಾಮಾಯಣದ ವರೆಗೂ ಮಾತನಾಡಿಕೊಂಡರು. ವರ್ಧನಮ್ಮನ ಕಾಲಿನ ಪಟ್ಟಿನೋಡಿ "ಏನು?" ಎಂದು ಕೇಳಿದಳು ಅಜ್ಜಿ.

"ಮಗ ಕ್ಷೇಮವಾಗಿ ಬಂದರೆ ವಿಷ್ಣುಗುಡಿಯ ಬೆಟ್ಟದ ಮೇಲಕ್ಕೆ ಕಾಲ್ನಡಿಗೆಯಲ್ಲೇ ಹೋಗಿ ಸೇವೆ ಮಾಡುತ್ತೇನೆಂದು ಹರಸಿಕೊಂಡಿದ್ದೆ" ವರ್ಧನಮ್ಮ ಹೇಳಿದಳು.

"ನಾನೆಂದರೆ ನಮ್ಮಮ್ಮನಿಗೆ ತುಂಬಾ ಪ್ರೀತಿ" ವಿಹಾರಿ ಕಲ್ಪಿಸಿಕೊಳ್ಳುತ್ತಾ ಹೇಳಿದ.

"ಇಲ್ಲದಿದ್ದರೆ ಏನು ಹೇಳಿ– ಆ ಪರಮಾತ್ಮನೇ ನನ್ನನ್ನು ರಕ್ಷಿಸಿದನೆಂದು ಹೇಳುತ್ತಾಳೆ!'' ವ್ಯಂಗ್ಯವಾಗಿ ಹೇಳಿದ.

"ಹೋಗ್ಲಿಬಿಡಪ್ಪಾ ಅವರವರ ನಂಬಿಕೆ ಅವರವರದು. ನೀವು ನಾಟಕ ಆಡೋಕೆ ಮುಂಚೆ 'ವಾತಾಪಿ' ಅಂದ್ಕೊಳ್ಳಲ್ವಾ ಹಾಗೇನೇ!" ಎಂದಳು ಅಜ್ಜಿ. ಕೂಡಲೇ ಪೆಟ್ಟು ಬಿದ್ದಂತಾಯಿತು ವಿಹಾರಿಗೆ. ಈ ಮುದುಕಿಯನ್ನು ತುಂಬಾ ಅಂಡರ್ ಎಸ್ಟಿಮೇಟ್ ಮಾಡಿಬಿಟ್ಟೆ ಎಂದುಕೊಂಡ.

"ನಿಮ್ಮ ಮೊಮ್ಮಗಳು ಹೇಗಿದ್ದಾಳಜ್ಜಿ ಚೆನ್ನಾಗಿದ್ದಾಳಾ?" ಕೇಳಿದ.

"ಚೆನ್ನವೇನಪ್ಪಾ, ಅವಳಿಗೆ ಹೊರಗೆ ಬರುವುದೆಂದರೇ ಸಾಯೋಷ್ಟು ಭಯ. ಯಾರೊಡನೆ ಮಾತನಾಡಲೂ ಸಾವಿರ ಅನುಮಾನಗಳು. ಕೋಟಿ ಸಂದೇಹಗಳು. ಅವಳೊಡನೆ ಆದ್ದೇಗೆ ಏಗಬೇಕೋ, ಎಲ್ಲರೊಡನೆ ಬೆರೆಯುವಂತೆ ಏನು ಮಾಡಬೇಕೋ ನನಗಂತೂ ಅರ್ಥವೇ ಆಗುತ್ತಿಲ್ಲ.''

ವಿಹಾರಿ ಒಳಗೆ ಹೋಗಿ ಐದು ನಿಮಿಷಗಳ ನಂತರ ಒಂದು ಪಾಕೆಟ್‌ನೊಡನೆ ಹೊರಬಂದು "ಇವನ್ನು ನನ್ನ ಕಾಂಪ್ಲಿಮೆಂಟ್ ಆಗಿ ನಿಮ್ಮ ಮೊಮ್ಮಗಳಿಗೆ ಕೊಡಿ. ಬದಲಾಗುತ್ತಾಳೇನೋ ನೋಡೋಣ" ಎಂದ.

"ಇದೇನಪ್ಪಾ ?'' ಅನುಮಾನದಿಂದ ಕೇಳಿದಳು.

"ಅದು ಸಸ್ಪೆನ್ಸ್ ಬಿಡಿ'' ವಿನಯದಿಂದ ಹೇಳಿ ಅದನ್ನು ಅಜ್ಜಿಯ ಕೈಗೆ ಕೊಟ್ಟ. ಮಗನ ಚೇಷ್ಟೆಯನ್ನು ಗಮನಿಸಿದ ವರ್ಧನಮ್ಮ, ಅಜ್ಜಿ ಹೊರಟು ಹೋದಮೇಲೆ ವಿಹಾರಿಯನ್ನು ಕೇಳಿದಳು–''ಏನೊ? ಆ ಹುಡುಗಿಯನ್ನು ಇಷ್ಟು ಹೊತ್ತಿಗೆ ತುಂಬಾ ಸಲ ಭೇಟಿ ಮಾಡಿದಂತಿದೆಯಲ್ಲಾ, ಏನು ವಿಶೇಷ?" ಎಂದು. ಆಕೆಗೆ ಮಗ ಇನ್ನು ಸಂಸಾರಸ್ಥನಾದರೆ ಸಾಕು......ಯಾವ ಹುಡುಗಿಯಾದರೂ ಪರ್ವಾಗಿಲ್ಲ. ಅದರಲ್ಲಿಯೂ ಈ ನಡುವೆ ಆಸ್ತಿ ವ್ಯವಹಾರಗಳನ್ನೆಲ್ಲಾ ಸ್ವತಃ ತಾನೇ ನೋಡಿಕೊಳ್ಳುತ್ತಿದ್ದಾನೆ. ವಿಹಾರಿ ತಾಯಿಯ ಮನಸ್ಸು ಗ್ರಹಿಸಿದೆಯೆಂದು ಹಗುರವಾಗಿ ನಕ್ಕ.

''ಆ ಹುಡುಗಿ ಪೆದ್ದು ಅಮ್ಮ, ಸೌಂದರ್ಯ ಬಿಟ್ಟು ಬೇರೇನೂ ಇಲ್ಲ. ಹೆಂಗಸ್ರ ಜೊತೆ ಮಾತಾಡೋಕೆ ಕೂಡಾ ಐದು ಪರದೆಗಳನ್ನು ಅಡ್ಡ ಇಟ್ಟು ಕೊಳ್ಳುತ್ತಾಳೆ" ಎಂದು ಅಲ್ಲಿಂದ ಹೊರಟು ಹೋದ.

* * * *

ನಿಂಗೆ ಸ್ವಲ್ಪಾನಾರಾ ಬುದ್ಧೀನೇ ಇಲ್ಲಾಜ್ಜಿ. ಯಾರೇನು ಕೊಟ್ರೂ

ತಗೊಂಡು ಬರ್ತೀಯ" ಅಜ್ಜಿಯನ್ನು ಜೋರು ಮಾಡಿದಳು ಸುನಾದಮಾಲ.

"ಯಾರೋ ಯಾಕಾದೀತೇ–ಆ ಹುಡುಗನನ್ನು ನೋಡ್ತಿದ್ದರೆ......ಚಿನ್ನದಂಥಾ ಹುಡುಗ" ಅಜ್ಜಿ ಹೊಗಳಿದಳು.

"ವಯಸ್ಸಿನಲ್ಲಿದ್ದಿದ್ದರೆ ಅವನನ್ನು ಪ್ರೀತಿಸಿ ಬಿಡುತ್ತಿದ್ದಿರೇನೋ" ಪಕ್ಕದಲ್ಲಿದ್ದ ಮಾಲಳ ಸ್ನೇಹಿತೆ ಚುರುಕು ಮುಟ್ಟಿಸಿದಳು.

ಅಜ್ಜಿಯೇನೂ ಸಾಮಾನ್ಯದವಳಲ್ಲ. ಹಿಂತಿರುಗಿಸಿ ಹೇಳಿದಳು.

"ಹೌದಮ್ಮಾ ಹೌದು...ನಿಮ್ಮಂಥ ವಯಸ್ನೋರೆಲ್ಲಾ ಮುದುಕಿಯರ ಥರ ಆಡ್ತಿದ್ರೆ ನಾವು ನಿಮ್ಮ ಹಾಗೆ ಯೋಚಿಸ್ಬೇಕಲ್ಲಮ್ಮಾ" ಎಂದಳು.

ಸುನಾದಮಾಲಳನ್ನು ಹತ್ತಿರಕ್ಕೆ ಕರೆದು ಅವಳ ಸ್ನೇಹಿತೆ ಕೇಳಿದಳು. "ಇಷ್ಟಕ್ಕೂ ಅವನಾರೇ? ಏನೇ ಆ ಹೀರೋ ಹೆಸ್ರು?"

"ವಿಹಾರಿ ಅಂತ . ನಾಟಕದ ದಿನ ಆಮೇಲೆ ಒಂದೆರಡು ಸಲ ಸಿಕ್ಕಿದ್ದ."

"ಏನಂದ? ಈ ಥ್ಯಾಂಕ್ಸ್ ಪ್ರೀತಿಯಾಗಿ ಮಾರ್ಪಟ್ಟರೆ ಅದಕ್ಕಿಂತಲೂ ಅದೃಷ್ಟವಂತ ಬೇರೆ ಯಾರೂ ಇರುವುದಿಲ್ಲವೆಂದು ಹೇಳಿದನಾ?"

"ಸುಮ್ನಿರೆ. ನಡೆದದ್ದನ್ನು ನೆನೆಸಿಕೊಂಡರೆ ನನಗೆ ಮೈಯೆಲ್ಲಾ ನಡುಗುತ್ತೆ"

"ನಾನಾಗಿದ್ದಿದ್ದರೆ ನನಗಾಗಿ ಯಾರಾದರೂ ಅಷ್ಟು ರಿಸ್ಕ್ ತೆಗೆದುಕೊಂಡಿದ್ದರೆ ಕೂಡಲೇ ಅವನನ್ನು ಪ್ರೀತಿಸಿಬಿಡುತ್ತಿದ್ದೆ"

"ನನಗಿಂತಹ ಪ್ರೀತಿ ಪ್ರೇಮಗಳ ಬಗ್ಗೆ ನಂಬಿಕೆಯಿಲ್ಲ"

"ಪ್ರೀತಿಯೊಳಗೆ ಬೀಳುವುದಕ್ಕೆ ಮುಂಚೆ ಎಲ್ಲಾರೂ ಹೀಗೇ ಹೇಳುವುದು. ಒಂದ್ಸಲ ಬಿದ್ದು ನೋಡು ಗೊತ್ತಾಗುತ್ತೆ"

"ನನಗೆ ಗಂಡಸರೆಂದರೆ ಭಯ. ಅಷ್ಟೇ ಅಲ್ಲ ಅಸಹ್ಯ ಕೂಡಾ. ನಮ್ಮಕ್ಕ ನಮ್ಮಮ್ಮ ಎಲ್ಲಾ ಈ ಹಾಳು ಗಂಡಸರಿಂದಲೇ ಹಾಳಾದದ್ದು. ನಂಗೆ ಈ ಪ್ರೀತಿ ವಿಷಯ ಹೇಳ್ಲೇ ಬೇಡ" ಮುಖ ಕಿವುಚುತ್ತಾ ಹೇಳಿದಳು ಸುನಾದಮಾಲ.

"ಹೋಗಲಿ ಒಂದು ಕೆಲಸ ಮಾಡು. ಆ ಹೀರೋ ಎಂಥವನೆಂದು ಟೆಸ್ಟ್ ಮಾಡು. ಅವನ ಪ್ರೀತಿ ನಿಜವಾದರೆ ನೀನೂ ಪ್ರೀತಿಸು!"

"ನನಗೆ ಬೇರೆ ಗಂಡಸರೊಡನೆ ಮಾತನಾಡುವುದಕ್ಕೆ ಭಯ. ರಿಜಿಸ್ಟರ್ ಪೋಸ್ಟ್‌ಗೆ ಸೈನ್ ಮಾಡುವಾಗ ಮುಂದೆ ಗಂಡು ಪೋಸ್ಟ್‌ಮ್ಯಾನ್ ನಿಂತಿದ್ದರೆ ಕಾಲೆಲ್ಲಾ ನಡುಗುತ್ತೆ"

"ಎದುರಿಗೆ ನಿಂತು ಮಾತಾಡಬೇಡ"

"ಎದುರಿಗೆ ನಿಲ್ಲದೆ ಅದ್ಹೇಗೆ ಮಾತನಾಡುವುದು?"

"ಫೋನ್‌ನಲ್ಲಿ–"

"ಅಬ್ಬಬ್ಬಾ! ಬೇಡಪ್ಪಾ!!"

"ಯಾವುದೋ ಕಾದಂಬರಿಯಲ್ಲಿ ನಾಯಕಿ ಹಾಗೆಯೇ ಅಳಿಸುತ್ತಾಳೆ ಹೀರೋನ. ಅಫ್ ಕೋರ್ಸ್ ಅದು ದುಃಖಾಂತವೆಂದುಕೋ–ಪಾಪ ಅವನು ನಿನಗಾಗಿ ಅಷ್ಟು ಕಷ್ಟಪಟ್ಟಿರುವಾಗ. ಸ್ವಲ್ಪವಾದರೂ ಕರುಣೆ ತೋರಿಸಬೇಕಾದದ್ದು ಹೆಣ್ಣಾಗಿ ನಿನ್ನ ಕರ್ತವ್ಯ"

"ಈಗ ಚೆನ್ನಾಗಿದೆ. ಕರುಣೆ ತೋರಿ ಅವನನ್ನು ತಟ್ಟಿ ಮಲಗಿಸಿ ಹಾಲಿನ ಗ್ಲಾಸ್ ಕೊಡು ಅನ್ನಲಿಲ್ಲವಲ್ಲಾ–ಸದ್ಯ!"

"ಮದುವೆ ಆದ್ಮೇಲೆ ಅದೆಲ್ಲಾ ಹೇಗೂ ತಪ್ಪೋದಿಲ್ಲಾ ಅಂದುಕೋ. ಆ್ಞ...ಮದುವೆ ತನಕ ಬರ್ತಾನೋ ಇಲ್ವೋ ಅನ್ನೋದನ್ನ ನಿರ್ಧರಿಸಿಕೋ"

"ಬಂದರೂ ನನ್ನಂತಹ ಪುಕ್ಕಲು ಬುದ್ಧಿಹೀನ ಹೆಣ್ಣನ್ನು ನೋಡಿ ಓಡಿ ಹೋಗುತ್ತಾನೆ"

"ಬುದ್ಧಿವಂತಿಕೆ, ಧೈರ್ಯ ಇದೆಯೆಂದು ತೋರಿಸು ಅವನಿಗೆ ಫೋನಿನಲ್ಲೇ"

"ಷ್...ಆ ರಿಸ್ಕೇ ಬೇಡಾ..." ಎಂದು ಸುನಾದಮಾಲ ತಿರಸ್ಕರಿಸಿದಳು. ಮತ್ತಷ್ಟು ಹೊತ್ತು ವಾದಿಸಿ. ಬೇಸರದಿಂದ ಹೊರಟು ಹೋದಳು ಕಮಲ. ಆಗ ಬಿತ್ತು ಸುನಾದಮಾಲಳ ದೃಷ್ಟಿ—ವಿಹಾರಿ ಕಳುಹಿಸಿದ್ದ ಪ್ಯಾಕೆಟ್ ಮೇಲೆ. ಬಿಚ್ಚಿದಳು.

ಒಳಗೆ ಹತ್ತು–ಹನ್ನೆರಡು ಪುಸ್ತಕಗಳಿದ್ದವು. ಎಲ್ಲಾ ಕಾದಂಬರಿಗಳೇ! "ಉಪ್ಪು–ಇಲ್ಲದ ಸಾರಿನಂತಹ ಹುಡುಗಿಗೆ! ಇದರಲ್ಲಿರುವ ಯಾವುದಾದರೂ ಒಬ್ಬ ನಾಯಕಿಯಂತೆ ತಯಾರಾಗಲು ಕೋರಿಕೆ–ವಿಹಾರಿ" ಎಂದಿತ್ತು ಒಂದು ಸಣ್ಣ ಚೀಟಿ. ಅವಳಿಗೆ ವಿಪರೀತ ಕೋಪ ಬಂತು. ಏನೆಂದುಕೊಳ್ಳುತ್ತಿದ್ದಾನೆ ಇವನು ತನ್ನ ಬಗ್ಗೆ?

ಅವಳು ಸಿಟ್ಟಿನಿಂದಲೇ ಆ ಪುಸ್ತಕಗಳನ್ನೆಲ್ಲಾ ಕಟ್ಟಿ ಅಟ್ಟದ ಮೇಲೆ ಎಸೆದು ಸೋಪಿನಿಂದ ಶುಭ್ರವಾಗಿ ಕೈತೊಳೆದುಕೊಂಡಳು.

* * * *

ಆ ರಾತ್ರಿ ತುಂಬಾ ಹೊತ್ತು ವಿಹಾರಿಗೆ ನಿದ್ರೆ ಬರಲಿಲ್ಲ. ಕೂದಲೆಳೆಯಷ್ಟರಲ್ಲಿ ಮೃತ್ಯುವಿನಿಂದ ತಪ್ಪಿಸಿಕೊಂಡಿದ್ದರಿಂದ. ಪೊದೆಯ ಮರೆಗೆ ಪ್ರವಲ್ಲಿಕ ಓಡಿ ಹೋದವರೆಗೂ ಪ್ರತಿ ಘಟನೆಯೂ ಕಣ್ಮುಂದೆ ಬರುತ್ತಿತ್ತು.

ಅವನು ಹಾಸಿಗೆಯ ಮೇಲೆ ಅತ್ತಿತ್ತ ಹೊರಳಾಡುತ್ತಿದ್ದ.

ಸಮಯ ಹನ್ನೆರಡೂವರೆಯಾಗುತ್ತಾ ಬಂತು.

ಆ ಸಮಯದಲ್ಲಿ ಫೋನ್. ಶಬ್ದ ಮಾಡಿತು.

ವಿಹಾರಿ ಫೋನೆತ್ತಿ "ಹಲೋ..." ಎಂದ.

ಅತ್ತಲಿಂದ ಸಿಹಿ ಕಂಠವೊಂದು ಉಲಿಯಿತು.

"ಹಲ್ಲೋ..."

"ಯಾರು?"

"ನಿಮ್ಮನ್ನು ಪ್ರೀತಿಸಬೇಕೆಂದಿರುವ ಒಬ್ಬ ಹುಡುಗಿ"

ವಿಹಾರಿ ಬೆಚ್ಚಿಬಿದ್ದು, "ವ್ಹಾಟ್?'' ಎಂದ,

''ಹೌದು. ಇರುವ ವಿಷಯ ಇದ್ದಂತೆಯೇ ಹೇಳಿದರೆ ತಪ್ಪೇನು?"

"ನೀವು ಯಾರು?"

''ಹೇಳಿದ್ನಲ್ಲಾ. ಐ ಲವ್ ಯು. ಐ ವಾಂಟ್ ಯು ಟು ಟೆಲ್ ಮಿ ವೆದರ್ ಯು ಲವ್ ಮಿ"

''ಹುಚ್ಚಾಸ್ಪತ್ರೆಯಿಂದಲಾ?''

''ಅಲ್ಲ...''

"ಇಲ್ಲದಿದ್ದರೆ ಹೀಗೆ ಮೂಗು ಮುಖ ತಿಳಿಯದವನಿಗೆ ಫೋನ್ ಮಾಡಿ ಪ್ರೀತಿಯ ಬಗ್ಗೆ ಹೇಳುವುದಿಲ್ಲ.''

"ನಿಮ್ಮ ಮೂಗು ಒಂದೂವರೆ ಅಂಗುಲ ಉದ್ದ, ಕೋಲು ಮುಖ. ಯಾರು ಹೇಳಿದರು ಆ ಎರಡೂ ಗೊತ್ತಿಲ್ಲವೆಂದು? ನಿಮಗೆ ನಾನು ಪರಿಚಿತೆ, ನನಗೆ ನೀವು ಪರಿಚಿತರು, ಅದಕ್ಕೇ ಮೌತ್‌ಪೀಸ್‌ಗೆ ಅಡ್ಡವಾಗಿ ಕಾಗದವನ್ನು ಹಿಡಿದು ಮಾತನಾಡುತ್ತಿದ್ದೀನಿ. ಈಗ ಕಂಡುಕೊಳ್ಳಿ ನಾನ್ಯಾರೋ?'' ವಿಹಾರಿ ಕೂಡಲೇ ಹೇಳಬೇಕೆಂದಿದ್ದ. ಆದರೆ ಅದುವರೆವಿಗೂ ಅವಳ ಬಗ್ಗೆಯೇ ಯೋಚಿಸುತ್ತಿದ್ದುದರಿಂದ "ಪ್ರವಲ್ಲಿಕಾ?" ಎಂದು ಬಾಯ್ತಪ್ಪಿ ಹೇಳಿ ನಾಲಿಗೆ ಕಚ್ಚಿಕೊಂಡ.

''ಅವಳ್ಯಾರು?''

"ಸಾರಿ...ನಿಮಗೆ...ನಿಮಗೆ... ..ಸಾರೀ ನೀವೂ ಸುನಾದ..." ಅವನ ಮಾತಿನ್ನೂ ಪೂರ್ತಿಯಾಗಿರಲಿಲ್ಲ. ಆ ಕಡೆಯಿಂದ ''ಪ್ರೀತಿ ಯಾವುದರಿಂದ ಹುಟ್ಟುತ್ತದೆ? ಸಾರಿಯಿಂದಲಾ, ಥ್ಯಾಂಕ್ಸ್‌ನಿಂದಲಾ?'' ನಗುತ್ತಾ ಕೇಳಿದ ಪ್ರಶ್ನೆಗೆ ಬೆಚ್ಚಿಬಿದ್ದ.

''ನನಗೆ ಗೊತ್ತಾಯಿತು ನೀವಾರೆಂದು–ನಿಜ ಹೇಳೆನ್ನುತ್ತೀರಾ? ಮೊದಲ

ನೋಟದಲ್ಲೀ ಪ್ರೀತಿಯೆಂದರೇನೆಂದು, ನಿಮ್ಮನ್ನು ನೋಡಿದ ನಂತರವೇ ತಿಳಿಯಿತು. ಯು ಆರ್ ಸೋ ಬ್ಯೂಟಿಫುಲ್'' ಅಳಿಸಲು ಪ್ರಾರಂಭಿಸಿದ.

*"ಅಂದರೆ ಗುರುತಿಸಿಬಿಟ್ಟರಾ?"*

*"ಓಹೋ...ನೋಡ್ತೌಟ್!"*

ತಾನು ಕಳುಹಿಸಿದ ಪುಸ್ತಕಗಳ ಪ್ರಭಾವ ಆಗಲೇ ಅವಳ ಮೇಲಾಗಿದೆ ಎಂದಂತಾಯಿತು. ಸ್ವಲ್ಪ ಮೆದುಳು ಅಲ್ಲಾಡಿತು.

"ಹೇಳಿ ನೋಡೋಣ" ಅಂದಳು.

"ಸುನಾದ ಮಾಲ''

"ನೋಡ್ತಿದ್ದರೆ ನೀವು ಗೋಪಾಲಕೃಷ್ಣನಂತಿದ್ದೀರಲ್ಲಾ. ಈಗಾಗಲೇ ಇಬ್ಬರ ಹೆಸರು ಹೇಳಿದಿರಿ. ಇಷ್ಟಕ್ಕೂ ನೀವು ಅಂಗಾತ ಮಲಗಿ ಮಾತಾಡುತ್ತಿದ್ದೀರಾ?''

"ಕುಳಿತು ಮಾತಾಡುತ್ತಿದ್ದೀನಿ.''

''ಹುಡುಗಿಯರೊಡನೆ ಮಾತನಾಡುವಾಗ ಬೋರಲಾಗಿ ಮಲಗಿ ಮಾತನಾಡಬೇಕು. ಅದು ಮೊದಲ ಪಾಠ, ಬೋರಲಾಗಿ ಮಲಗಿ... ಅಂದ ಹಾಗೆ ನಿಮ್ಮ ಭಾರ ನಂಗೆ ಗೊತ್ತಿದೇರಿ!''

ವಿಹಾರಿ ಮತ್ತೆ ಬೆಚ್ಚಿಬಿದ್ದು, ''ವ್ಹಾಟ್'' ಅಂದ. ಅವನ ಕಣ್ಮುಂದೆ ಡ್ರಾಮಾ ಸ್ಟೇಜಿನ ಮೇಲೆ ನಡೆದ ನಾಟಕದ ಪ್ರಸಂಗ ಬರುತ್ತಿತ್ತು.

''ನಿಮ್ಮ ತೂಕ ಎಪ್ಪತ್ತೆರಡು ಕೇಜಿ'' ಎಂದು ಆ ಕಡೆಯಿಂದ ಕೇಳಿಸಿತು. ಕೂಡಲೇ ಫೋನ್ ಕಟ್ ಆಯಿತು.

* * * *

''ಬೋರಲು ಮಲಗೆಂದು ಹೇಳಿದಳಾ? ಹಾಗಾದರೆ ಆ ಹುಡುಗಿಯ ವಯಸ್ಸು ನಿಶ್ಚಿತವಾಗಿಯೂ ಇಪ್ಪತ್ತೈದು ದಾಟಿರುತ್ತದೆ" ಪದ್ಮಾಕರ್ ಹೇಳಿದ.

''ಬಾಯ್ಮುಚ್ಚು!''

''ಇಲ್ಲಾ ಬಾಸ್! ವಾತ್ಸಾಯನನ ಸೂತ್ರದ ಪ್ರಕಾರ ಆ ವಯಸ್ಸು ದಾಟಿದರೇನೇ ಗಂಡಸರಿಗೆ ಬೋರಲು...''

"ನಿನ್ನ ಸೂತ್ರೀಕರಣವನ್ನು ಸ್ವಲ್ಪ ಪಕ್ಕಕ್ಕಿಟ್ಟು ಮೊದಲು ನನಗೆ ಕಂಗ್ರಾಟ್ಸ್ ಹೇಳು. ಅಂತಹ ಸುಂದರವಾದ ಹುಡುಗಿ ಅಷ್ಟು ಧೈರ್ಯವಾಗಿ ಫೋನ್ ಮಾಡಿದಳೆಂದರೆ–ಐಯಾಮ್ ಲಕ್ಕೀ ಯಾರ್—"

"ಮತ್ತೆ? ಜಾಣೆಯಲ್ಲದವಳು ಎಷ್ಟೇ ಸುಂದರಿಯಾದರೂ ಮದುವೆ ಯಾಗುವುದಿಲ್ಲವೆಂದು ಹೇಳುತ್ತಿದ್ದಿ?''

"ಆ ಹುಡುಗಿಗೆ ಜಾಣತನ ಕೂಡ ಇದ್ದೇ ಇರಬೇಕು.''

''ಇದ್ದೇ ಇರುತ್ತೆ!..." ವ್ಯಂಗ್ಯವಾಡಿದ. "ನೀನು ಹೇಳಿದ್ದೆಲ್ಲ ಕೇಳಿದರೆ ಆ ಹುಡುಗಿಗೆ ಅಷ್ಟು ಧೈರ್ಯವಾಗಲೀ, *ಜಾಣತನವಾಗಲೀ ಇರುವ ಬಗ್ಗೆ ನನಗೆ* ಅನುಮಾನ."

"ಕೆಲವರು ಅಷ್ಟೇ ಬಾಸ್. ಎದುರು ಬಂದರೆ ಏನೂ ಮಾತನಾಡುವುದಿಲ್ಲ. ಹಾಗೆಂದು ಅವರಿಗೆ ಆ ಎರಡೂ ಇಲ್ಲವೆಂದುಕೊಳ್ಳಬೇಡ. ನಾಳೆ ಬೆಳಿಗ್ಗೆಯೇ ಕಂಡುಹಿಡಿದುಬಿಡುತ್ತೀನಲ್ಲಾ" ವಿಹಾರಿ ಹೇಳಿದ.

* * * *

ಮಾರನೆ ದಿನ ಕಾಲೇಜಿನ ಬಳಿ ನಿಂತುಬಿಟ್ಟ ವಿಹಾರಿ. ದೂರದಲ್ಲಿ ಸುನಾದ ಮಾಲ ಬರುತ್ತಿದ್ದಳು. ಹತ್ತಿರ ಬಂದನಂತರ ''ಥ್ಯಾಂಕ್ಯೂ... . ತುಂಬಾ ಸಲಿಗೆ ಯಿಂದ ಹೇಳಿದ.

ಆ ಹುಡುಗಿಯ ಕೈಯಲ್ಲಿದ್ದ ಪುಸ್ತಕಗಳು ನಡುಗುವುದನ್ನು ಚೆನ್ನಾಗಿ ಕಂಡ.

"ಎ... ಏಕೆ?" ಅಂದಳು.

"ನೆ...ನೆ...ನೆನ್ನೆ ರಾ...ತ್ರಿ ಫೋನ್ ಮಾಡಿದ್ದಕ್ಕೆ"

"ನಾ...ನಾ...ನಾನು...ಫೋನ್ ..?"

"ಇ...ಇ...ಇಲ್ವಾ?"

"ನೋಡಿ. ನೀವು ಯಾವುದೋ ಉಪಾಯ ಮಾಡಿ ನನ್ನೊಡನೆ ಮಾತಾಡಿ. ಪರಿಚಯ ಬೆಳೆಸಿಕೊಂಡು...ನಾನಂತಹವಳಲ್ಲಾ ರೀ..."

"ಎಂತಹವರಲ್ಲ ಮೇಡಂ?" ಚೇಷ್ಟೆಯ ಧ್ವನಿಯಲ್ಲಿ ಕೇಳಿದ. ಸುನಾದ ಮಾಲಳ ಮೈಯೆಲ್ಲಾ ಬೆವರಿನಿಂದ ಒದ್ದೆಯಾಯಿತು. ರಕ್ಷಿಸುವವರು ಯಾರೂ ಇಲ್ಲವೇ ಎಂಬಂತೆ ನೋಡಿದಳು.

"ನಾನು ಗೋಪಾಲಕೃಷ್ಣನಂತೆ ಕಾಣುತ್ತಿರುವುದು ದುರದೃಷ್ಟಕರ, ನಾನು ಇದುವರೆವಿಗೂ ಕೇವಲ ನಿಮ್ಮೊಬ್ಬರ ಮೇಲೆ ಮಾತ್ರ ಬೋರಲು ಮಲಗಿದ್ದೆ. ಅದು ಸತ್ಯ..."

"ನಿಮಗೆ ಈ ರೀತಿ ಮಾತನಾಡುವುದಕ್ಕೆ ನಾಚಿಕೆಯಾಗುವುದಿಲ್ಲವಾ?''

"ರಾತ್ರಿ ನೀವು ಫೋನ್‌ನಲ್ಲಿ ಮಾತಾಡಿದ್ದಕ್ಕೆ ಉತ್ತರ ಕೊಡೋಕೆ ಬಂದೆ"

"ದಯವಿಟ್ಟು ನನ್ನನ್ನು ಬಿಟ್ಟುಬಿಡಿ.''

''ಈ ರಾತ್ರಿ ಮತ್ತೆ ಫೋನ್‌ಮಾಡಿ 'ಐ ಲವ್ಯೂ' ಎಂದು ಹೇಳಿದರೆ ಮಾತ್ರ ಬಿಡುತ್ತೇನಷ್ಟೆ"

"ಸತ್ತರೂ ಹೇಳೋದಿಲ್ಲ''

''ಹಾಗಾದರೆ ಬಿಡುವುದಿಲ್ಲ" ಎಂದು ಕೈಹಿಡಿದುಕೊಂಡು ಸುನಾದಮಾಲ ಕಿಟಾರನೆ ಕಿರುಚಿಕೊಂಡಳು. ಸೈಕಲ್ ಮೇಲೆ ಹೋಗುತ್ತಿದ್ದವರು, ಕಾಲೇಜಿಗೆ ಹೋಗುತ್ತಿದ್ದವರೆಲ್ಲಾ ಗಾಬರಿಯಾಗುವಂತೆ ಕಿರುಚಿದಳು. ಕಿರುಚುತ್ತಲೇ ಇದ್ದಳು.

ಮನೆಗೆ ಬರುತ್ತಿದ್ದಂತೆಯೇ ಆ ಸಂಜೆ ಅಜ್ಜಿ, "ಯಾಕೇ ಕೈನ ಹಾಗೆ ಸೋಪು ಹಾಕಿ ತಿಕ್ಕೋತಿದ್ದಿ?'' ಎಂದು ಕೇಳಿದಾಗ ಮಾತ್ರ "ಏನಿಲ್ಲ ಅಜ್ಜಿ" ಎಂದು ತೆಂಗಿನ ನಾರನ್ನು ಬಿಸಾಡಿದಳು.

## 9

ಅಂತಿಮ ಕ್ಷಣದಲ್ಲಿ ಟೆರ್ರರಿಸ್ಟ್‌ಗಳು ಸಿಕ್ಕಿ, ಮಂತ್ರಿವರ್ಗ ರಾಜೀನಾಮೆ ಕೊಡುವ ಅವಶ್ಯಕತೆ ತಪ್ಪಿದ್ದಕ್ಕಾಗಿ ಒಂದು ಅಭಿನಂದನ ಸಭೆ ನಡೆಯಿತು. ಮುಖ್ಯ ಮಂತ್ರಿಗಳು ತಮ್ಮ ಉಪನ್ಯಾಸದಲ್ಲಿ ಪೋಲೀಸ್, ಸಿ.ಬಿ.ಐ. ಡಿಪಾರ್ಟ್‌ಮೆಂಟ್‌ಗಳನ್ನು.ಮುಖ್ಯವಾಗಿ ಪ್ರವಲ್ಲಿಕಳನ್ನು,ಹೊಗಳಿದರು. ವಿಚಿತ್ರವೇನೆಂದರೆ ಆ ಸಭೆಗೆ ಮುಖ್ಯ ಅತಿಥಿ ಸೂರ್ಯರಾವ್‌ ವಿಹಾರಿಗೆ ಕೂಡಾ ಆಹ್ವಾನ ಬಂದಿತ್ತು. ಹಿಂದೆ ಎಲ್ಲೋ ನಿಂತಿದ್ದ.

ಸೂರ್ಯರಾವ್ ಪ್ರಾರಂಭಿಸಿದ. ಅದೇ ರಾಜಕೀಯ ಉಪನ್ಯಾಸ... ''ಈ ದಿನ ಸುದಿನ. ನಮ್ಮ ಗೌರವಾನ್ವಿತ ಮುಖ್ಯಮಂತ್ರಿ–ಎಳೆಮಕ್ಕಳ ಪ್ರಾಣವನ್ನು ಉಳಿಸಲು ತಮ್ಮ ಪದವಿಯನ್ನೇ ಬಿಡಲು ನಿರ್ಧರಿಸಿದರು. ಮೇಲಾಗಿ ಆ ಪದವಿಯನ್ನು ನನಗೇ ಒಪ್ಪಿಸಿದರು. ನನಗೆ ಮುಜುಗರದ ಪರಿಸ್ಥಿತಿ ಆದರೂ ದೇಶದ ಪರಿಸ್ಥಿಯನ್ನು ಮನಗಂಡು ಈ ಜವಾಬ್ದಾರಿಯನ್ನು ಹೊರುತ್ತಿದ್ದೇನೆ. ಆದರೆ ನನ್ನ ಮನಸ್ಸಿಗೆ ನೋವಾಗುತ್ತಲೇ ಇದೆ. ಉಗ್ರವಾದಿಗಳ ಬೆದರಿಕೆಗೆ ಸೌಜನ್ಯಮೂರ್ತಿಯೂ ಪರಿಪಾಲನಾ ದಕ್ಷರೂ ಆದ ಮುಖ್ಯಮಂತ್ರಿಗಳು ಪದವಿ

ಬಿಟ್ಟದ್ದು ಆ ಪದವಿಯನ್ನು ನಾನು ಹೊಂದುತ್ತಿರುವುದೂ ನನಗೆ ನಿರಂತರ ಕ್ಷೋಭೆಯನ್ನುಂಟು ಮಾಡಿದೆ. ಈ ಪರಿಸ್ಥಿತಿಯಿಂದ ಬಿಡುಗಡೆಗೊಳಿಸಲು ದೇವರನ್ನು ನಾನು ಪ್ರಾರ್ಥಿಸದ ದಿನವಿಲ್ಲ. ಆ ದೇವರೇ ನನ್ನ ಪ್ರಾರ್ಥನೆಯನ್ನು ಅಲಕ್ಷಿಸಿದಂತಿದೆ. ಈ ವಿಷಯದಲ್ಲಿ ಸಿ.ಬಿ.ಐ.ಯನ್ನು ಮುಖ್ಯವಾಗಿ ಡೆಪ್ಯೂಟಿ ಪ್ರವಲ್ಲಿಕಳನ್ನು ಅಭಿನಂದಿಸುತ್ತಿದ್ದೇನೆ"–ಸೂರ್ಯಾರಾವ್ ಹೇಳಿದ.

ವಿಹಾರಿ ಜನರನ್ನು ತಳ್ಳಿಕೊಂಡು ಸ್ವಲ್ಪ ಮುಂದಕ್ಕೆ ಬಂದ. ಅವನ ಮುಖ ಕೆಂಪಗೆ ಉರಿಯುತ್ತಿತ್ತು. ಸೂರ್ಯಾರಾವ್ ತನ್ನ ಭಾಷಣವನ್ನು ಮುಂದು ವರೆಸಿದ.

"...ಈ ದಿನ ನಮ್ಮ ದೇಶ ಎಷ್ಟೋ ಸಮಸ್ಯೆಗಳನ್ನು ಎದುರಿಸುತ್ತಿದೆ. ಈ ಪರಿಸ್ಥಿತಿಯಲ್ಲಿ ನಮಗೆ ಸುಸ್ಥಿರವಾದ ಸರ್ಕಾರ ಬೇಕೆಂದರೆ ನಮ್ಮ ನಾಯಕರಿಗೆ ನಮ್ಮ ವಿಶ್ವಾಸವನ್ನು ಪ್ರಕಟಿಸಬೇಕು..."

"...ಸುಳ್ಳು"

ಮೂಲೆಯೊಂದರಿಂದ ಕೇಳಿಸಿದ ಈ ಕೂಗಿಗೆ ಎಲ್ಲರೂ ಅತ್ತ ತಿರುಗಿ ನೋಡಿ ದರು. ವಿಹಾರಿ ಆವೇಶದಿಂದ ನಡುಗುತ್ತಿದ್ದ.

'ಇಷ್ಟು ಮೋಸವೇ!' ಎಂಬಂತಿದೆ ಅವನ ಮುಖಭಾವ. ಇದನ್ನು ಸಹಿಸ ದವನಂತೆ ಅವದ ಮುಷ್ಟಿ ಬಿಗಿದುಕೊಂಡಿದೆ.

"ಈ ಸೂರ್ಯಾರಾವ್ ಹೇಳುತ್ತಿರುವುದೆಲ್ಲಾ ಸುಳ್ಳು."

ಹತ್ತಿರದಲ್ಲಿದ್ದ ಪೋಲೀಸರು ಓಡೋಡಿ ಬಂದು ಅವನನ್ನು ಬಲವಂತ ದಿಂದ ಎಳೆದೊಯ್ಯಲು ಪ್ರಯತ್ನಿಸಿದರು. ಅವನು ಒಂದೇ ಒಗೆತಕ್ಕೆ ಅವರನ್ನು ತಳ್ಳಿ ಸ್ಟೇಜಿನ ಬಳಿಗೆ ಬಂದ. ಮುಖ್ಯಮಂತ್ರಿಯನ್ನೂ ಗಮನಿಸದೆ ಅವನು ಮೈಕಿನ ಬಳಿಗೆ ಹೊರಟುಹೋದ. ಮಂತ್ರಿಗಳ ಬಳಿಯಿದ್ದ ಬಾಡೀಗಾರ್ಡ್‌ಗಳು ಅವನನ್ನು ತಳ್ಳುವ ಮುಂಚೆಯೇ ಅವನು ಮೈಕನ್ನು ಹಿಡಿದುಕೊಂಡು. "ಪ್ರವಲ್ಲಿಕರೊಡನೆ ಟೆರ್ರರಿಸ್ಟ್‌ಗಳು ಕರೆದೊಯ್ದದ್ದು ನನ್ನನ್ನೇ...ನನ್ನ ಹೆಸರು ವಿಹಾರಿ..." ಎಂದ.

ಕೂಡಲೇ ಆ ಸಭೆಯಲ್ಲಿ ಮೌನ ಆವರಿಸಿತು.

ತುಂಬಾ ಜನ ಆ ಮುಂಚೆ ಅವನನ್ನು ನೋಡಿರಲಿಲ್ಲ. ಆದರೆ ಅವನ ಹೆಸರು ತುಂಬಾ ಪರಿಚಿತ, ಅವನಾರೆಂದು ಹೇಳುವ ವೇಳೆಗೆ, ತಾತ್ಕಾಲಿಕವಾದ ಉದ್ವೇಗ ಆ ಸಭೆಯಲ್ಲಿ ಉಂಟಾಯಿತು. ಆ ನಿಶ್ಶಬ್ದದಲ್ಲಿ ಅವನು ಹೇಳಲು ಪ್ರಾರಂಭಿಸಿದ. ಅವನ ಮಾತುಗಳನ್ನು ನಿಲ್ಲಿಸುವಂತೆ ಪ್ರಯತ್ನಿಸಿದ ಸೂರ್ಯಾರಾವ್‌ಗೆ ಮುಖ್ಯ ಮಂತ್ರಿ ಸುಮ್ಮನಿರುವಂತೆ ಸೂಚಿಸಿದರು. ಎಲ್ಲನನ್ನೂ ವಿವರವಾಗಿ ಹೇಳಿ, "ಇವೆಲ್ಲದರ ಹಿಂದೆ ಇರುವುದು ಸೂರ್ಯಾರಾವೇ .." ಎಂದು ಪೂರ್ತಿಗೊಳಿಸಿದ.

"ನೀನು ಯಾರ ಮೇಲೆ ಆಪಾದನೆ ಮಾಡುತ್ತಿದ್ದೀಯೆಂಬ ಎಚ್ಚರ ವಿದೆಯಾ? "ಮುಖ್ಯಮಂತ್ರಿ ಕೇಳಿದ.

"ಗೊತ್ತು. ಪದವಿಯಿಂದ ನಿಮ್ಮನ್ನುರುಳಿಸಿ, ಮುಖ್ಯಮಂತ್ರಿ ಆಗೋಣ ವೆಂದುಕೊಂಡಿರುವ ಈ ಸೂರ್ಯಾರಾವ್ ಮೇಲೆ, ಅದ್ಭುತವಾದ ಪ್ಲಾನ್ ಹಾಕಿ ಅವನಿಗೆ ಸಹಾಯ ಮಾಡಿದ ಅನಂತಾನಂತಸ್ವಾಮಿಯ ಮೇಲೆ..."

ಸಭೆಯಲ್ಲಿ ಇರುವೆ ಚಿಟಕ್ ಎಂದರೂ ಕೇಳಿಸುವಷ್ಟು ನಿಶ್ಶಬ್ದ. "ನಮ್ಮನ್ನು ಹೇಗಾದರೂ ಸಾಯಿಸಿಬಿಡುತ್ತೇವೆಂಬ ಧೋರಣೆಯಿಂದ ಆ ಟೆರ್ರರಿಸ್ಟ್‌ಗಳು ನಮ್ಮ ಬಳಿ ಇವರ ಬಗ್ಗೆ ಹೇಳಿದ್ದರಿಂದ ಇವರು ಅನಂತಾನಂತಸ್ವಾಮಿಯ ಸಹ ಚರರೆಂದು ಗೊತ್ತಾಯಿತು."

''ಇದಕ್ಕೆ ಯಾರು ಸಾಕ್ಷಿ?''

''ಕಾಡಿನಲ್ಲಿ ಯಾವ ಸಾಕ್ಷಿ ಸಿಗುತ್ತದೆ? ನಾನೂ ಪ್ರವಲ್ಲಿಕ!"

ಮುಖ್ಯಮಂತ್ರಿ ಆಕೆಯ ಕಡೆ ತಿರುಗಿ 'ಹೌದಾ? ಎಂಬಂತೆ ನೋಡಿದ.

''ಅಲ್ಲ!''

"ಅಲ್ಲವಾ..." ವಿಹಾರಿಗೆ ಷಾಕ್ ತಗುಲಿದಂತಾಗಿ"ನೋ ಅವರೂ ಸುಳ್ಳು ಹೇಳುತ್ತಿದ್ದಾರೆ" ಎಂದು ಕಿರುಚಿದ. ಅವನ ಮಾತಿಗೆ ತಲೆ ಕೆಡಿಸಿಕೊಳ್ಳದೆ ಪ್ರವಲ್ಲಿಕ ಹೇಳಿದಳು.

"ನಮ್ಮನ್ನು ಕಾರಿನಲ್ಲಿ ಹತ್ತಿಸಿಕೊಂಡು ಕಾಡಿನಲ್ಲಿ ಕರೆದೊಯ್ದರು. ಅದೃಷ್ಟ ವಶಾತ್ ಅಂತಿಮ ಕ್ಷಣದಲ್ಲಿ ತಪ್ಪಿಸಿಕೊಂಡೆವು. ಅವರು ಒಂದು ಮಾತನ್ನೂ ಆಡಲಿಲ್ಲ.''

ಸಭೆಯಲ್ಲಿ ಕಲರವ ಪ್ರಾರಂಭವಾಯಿತು. ವಿಹಾರಿ ಏನೋ ಹೇಳಲು ಪ್ರಯತ್ನಿಸುತ್ತಿದ್ದಂತೆಯೇ ಪೋಲೀಸರು ಬಂದು ಅವನ ರೆಟ್ಟೆ ಹಿಡಿದರು. ಬಲ ವಂತದಿಂದ ಸ್ಟೇಜಿನಿಂದ ಎಳೆದೊಯ್ದರು.

ಆಗ ಕೆಮರಾಗಳು ಕ್ಲಿಕ್ ಆದವು.

ಸೂರ್ಯಾರಾವ್ ಮತ್ತೆ ಮೈಕ್ ತೆಗೆದುಕೊಂಡ. ''ನನಗೂ, ಮುಖ್ಯ ಮಂತ್ರಿಗೂ ನಡುವೆ ಮನಸ್ತಾಪ ಉಂಟುಮಾಡಲು. ಯಾರೋ ವಿರೋಧಪಕ್ಷ ದವರು ನಿಯಮಿಸಿದ ವ್ಯಕ್ತಿಯಿರಬೇಕು, ಅವನನ್ನು ಅರೆಸ್ಟ್‌ಮಾಡಿ ವಿಚಾರಿಸಿ."

"ಬೇಡ" ಅಂದರು ಮುಖ್ಯಮಂತ್ರಿಗಳು. ''ಎಷ್ಟೋ ಮಕ್ಕಳನ್ನು ರಕ್ಷಿಸಿ ದ್ದಾನೆ. ಆತನನ್ನು ಬಿಟ್ಟುಬಿಡಿ."

ಪೋಲೀಸರು ಹೊರಗಡೆ ಎಳೆದೊಯ್ಯುತ್ತಿದ್ದಂತೆ ಅವನು ಕಿರುಚಿದ.

''ಛೀಫ್‌ಮಿನಿಸ್ಟರ್! ಅಪಾಯದ ನೆರಳಲ್ಲಿದ್ದೀರಿ ನೀವು...ಎಚ್ಚರಿಕೆ!''

ಪ್ರವಲ್ಲಿಕ ಸುಮ್ಮನೇ ಕುಳಿತಿದ್ದಳು. ಕದಲಲೇ ಇಲ್ಲ.

ವಿಹಾರಿಯನ್ನು ಹೊರತಂದು ಬಿಟ್ಟರು ಪೋಲೀಸರು.

ಕತ್ತಲಾಗುತ್ತಿತ್ತು.

ಅವನಿಗೆ ಹುಚ್ಚು ಹಿಡಿದಂತಾಗಿತ್ತು. ಸಿಟ್ಟಿನಿಂದ ಮೈ ಉರಿಯುತ್ತಿತ್ತು. ಕಾಲಿನಿಂದ ಕಲ್ಲುಗಳನ್ನು ಒದೆಯುತ್ತಾ ಕಾರಿನ ಬಳಿ ಬಂದ.

ಮನೆಗೆ ಹೋಗಲಿಲ್ಲ. ತಾವು ನಾಟಕಗಳ ರಿಹರ್ಸಲ್ ಮಾಡುವ ರೂಮಿಗೆ ಬಂದ. ಒಳಗೆ ಮತ್ತೊಂದು ಹೊಸ ನಾಟಕದ ರಿಹರ್ಸಲ್ ನಡೆಯುತ್ತಿತ್ತು. ಅವನಿಗೆ ಅಲ್ಲಿರಲೂ ಮನಸ್ಸು ಬರಲಿಲ್ಲ. ಎಲ್ಲದರ ಮೇಲೂ ವಿರಕ್ತಿ ಉಂಟಾಗುತ್ತಿತ್ತು. ಪೋಲೀಸರು ತನ್ನ ರೆಟ್ಟೆಗಳನ್ನು ಹಿಡಿದು ಹೊರಗೆಳೆದು ತಂದ ದೃಶ್ಯ ನೆನಪಾಯಿತು. ಅದಕ್ಕಿಂತಲೂ ಪ್ರವಲ್ಲಿಕ ತನ್ನ ಸ್ಥಾನದಲ್ಲಿ ಕದಲದೆ ಕುಳಿತು, ತನಗೇನೂ ಸಂಬಂಧವಿಲ್ಲವೆಂಬಂತೆ ನೋಡುತ್ತಾ ಕುಳಿತಿದ್ದುದು ಅವನನ್ನು ಮತ್ತಷ್ಟು ಕೆರಳಿಸಿತ್ತು. ಅವಳು ಅಷ್ಟು ಸರಾಗವಾಗಿ ಸುಳ್ಳು ಹೇಳುತ್ತಾಳೆಂದು ಅವನು ಊಹಿಸಿರಲಿಲ್ಲ. ಅನವಶ್ಯಕವಾಗಿ ಈ ಕಷ್ಟಕ್ಕೆ ಸಿಕ್ಕಿಕೊಂಡೆ ಎನ್ನಿಸಿತು ಅವನಿಗೆ.

ಅವನು ತನ್ನ ಕಾರನ್ನು ಒಂದು ಚಲನಚಿತ್ರ ಮಂದಿರದ ಮುಂದೆ ನಿಲ್ಲಿಸಿ ಟಿಕೆಟ್‌ಕೊಂಡು ಒಳಗೆ ಹೋದ. ಆಗಲೇ ಸಿನೆಮಾ ಪ್ರಾರಂಭವಾಗಿತ್ತು. ತಲೆಯನ್ನು ಸೀಟಿನ ಹಿಂದಕ್ಕೆ ವಾಲಿಸಿ ಕಣ್ಮುಚ್ಚಿದ. ಪ್ರವಲ್ಲಿಕಳ ನೆನಪೇ ಕಾಡುತ್ತಿತ್ತು. ಮತ್ತಷ್ಟು ಸಿಟ್ಟು ಹೆಚ್ಚಾಯಿತು ಅವಳ ಒಗ್ಗೆ. ಸ್ವಲ್ಪ ಸಮಯದ ನಂತರ ಏನೋ ಗಲಾಟೆಯಾದಂತಾದಾಗ ಕಣ್ಬಿಟ್ಟು ನೋಡಿದ. ನೂರು ಜನಕ್ಕಿಂತಲೂ ಕಡಿಮೆಯಿದ್ದರು ಪ್ರೇಕ್ಷಕರು. ಸಿನೆಮಾ ಮುಗಿದಿತ್ತು. ಹೊರ ನಡೆಯುತ್ತಾ, "ಯಾವ ಸಿನೆಮಾ ಇದು?" ಎಂದು ಪಕ್ಕದಲ್ಲಿ ಹೊರಬರುತ್ತಾ ಕೇಳಿದ. ಆ ವ್ಯಕ್ತಿ ಇವನೆಡೆಗೆ ವಿಚಿತ್ರವಾಗಿ ನೋಡಿ ಹೊರಟುಹೋದ.

ಕಾರಿನ ಬಳಿ ಬರುತ್ತಿದ್ದಂತೆಯೇ ಥಿಯೇಟರ್‌ನಿಂದ ಆಗತಾನೇ ಹೊರಬರುತ್ತಿದ್ದ ಸುನಾದಮಾಲ ಮತ್ತು ಅವಳ ಅಜ್ಜಿ ಕಂಡರು. ಅವನು ನೋವನ್ನೆಲ್ಲಾ ಮರೆತುಬಿಟ್ಟ. ಹತ್ತಿರ ಹೋಗಿ, "ಹಲೋ" ಅಂದ.

"ಹಲೋ" ಅಂದಳು ಅಜ್ಜಿ.

"ಬನ್ನಿ ಡ್ರಾಪ್ ಮಾಡ್ತೀನಿ" ಸುನಾದಮಾಲಳ ಕಡೆ ನೋಡುತ್ತಾ ಹೇಳಿದ. ಅವಳು ಅಪ್ರಯತ್ನವಾಗಿ ಹೆಜ್ಜೆ ಹಾಕುತ್ತಿದ್ದುದನ್ನು ಗಮನಿಸಿದ. ಅಜ್ಜಿ ಮುಂದಿನ ಸೀಟಿನಲ್ಲಿ ಕುಳಿತುಕೊಂಡಿತು.

"ಹೇಗಿತ್ತು ಸಿನೆಮಾ?" ತಾನು ಕುಳಿತುಕೊಳ್ಳುತ್ತಾ ಕೇಳಿದ.

"ತುಂಬಾ ಚೆನ್ನಾಗಿತ್ತಪ್ಪಾ" ಅಜ್ಜಿ ಹೇಳಿತು. ಸುನಾದಮಾಲಳ ಕಡೆ ಓರೆ

ನೋಟ ಬೀರುತ್ತಾ ಕಾರನ್ನು ಥಿಯೇಟರ್‌ನಿಂದ ಹೊರತಂದ. ಅವನ ಕಾರನ್ನು ಮತ್ತೊಂದು ಕಾರು ಫಾಲೋ ಮಾಡುತ್ತಿದ್ದುದನ್ನು ಅವನು ಗಮನಿಸಲೇ ಇಲ್ಲ.

"ವಿಷ್ಣು ಚೆನ್ನಾಗಿದ್ದಾನಾ?"

''ಚೆನ್ನಾಗಿದ್ದಾನಪ್ಪಾ, ದಿನಕ್ಕೊಂದು ಸಲವಾದರೂ ನಿನ್ನನ್ನು ಜ್ಞಾಪಿಸಿಕೊಳ್ಳುತ್ತಾನೆ. ನಿಮ್ಮ ಅಮ್ಮ ಚೆನ್ನಾಗಿದ್ದಾರಾ. ಮೊನ್ನೆ ದೇವಸ್ಥಾನಕ್ಕೆ ಹರಿಕಥೆ ಕೇಳೋಕೆ ಬಂದಿದ್ರು"

ಅವನು ಆಕೆಯ ಕಡೆಗೆ ವಿಚಿತ್ರವಾಗಿ ನೋಡಿದ. ಒಂದು ಕಡೆ ಹರಿಕಥೆ ಅನ್ನುತ್ತಾಳೆ; ಮತ್ತೊಂದೆಡೆ ಇಂತಹ ಸಿನಿಮಾ ಹುಚ್ಚು.

"ನಿಮ್ಮ ಮೊಮ್ಮಗಳಿಗೆ ತುಂಬಾ ನಾಚಿಕೆ ಅನ್ಸುತ್ತೆ..."

"ಮೇಲೆ ಹೀಗೆ ಕಾಣ್ತಾಳೆ, ಮನೇಲಿ ತುಂಬಾ ಚೇಷ್ಟೆ ಮಾಡ್ತಾಳೆ'' ಎಂದು ಕಿಟಾರ್‌ನೆ ಕಿರುಚಿದಳು ಅಜ್ಜಿ. ಸಡನ್ ಬ್ರೇಕ್ ಒತ್ತಿದ ವಿಹಾರಿ.

"ನೋಡಿದೆಯಾ...ಕೆಳಗಡೇನೇ ಹೇಗೆ ಚಿವುಟ್ತಾಳೆ" ಎಂದಳು ತೊಡೆಯನ್ನು ಸವರಿಕೊಳ್ಳುತ್ತ.

ವಿಹಾರಿ ಕನ್ನಡಿಯಲ್ಲಿಯೇ ಹಿಂದೆ ಕುಳಿತಿದ್ದ ಸುನಾದಮಾಲಳನ್ನು ನೋಡಿದ. ಅವಳು ತಲೆ ತಗ್ಗಿಸಿಕೊಂಡು ಕುಳಿತಿದ್ದಳು. ಮೇಲೆ ಗಂಭೀರವಾಗಿ ಕಾಣುವ ಈ ಹೆಣ್ಣುಗಳು ಸಾಕಷ್ಟು ಚೇಷ್ಟೆ ಮಾಡುತ್ತಾರೆ ತಮ್ಮ ಮನೆಗಳಲ್ಲಿ, ಎಂದು ಅವನಿಗೆ ತಿಳಿದಿತ್ತಾದರೂ, ಗಂಡಸರನ್ನು ಕಂಡರೆ ಹೊರಗೆ ಹೀಗೆ ನಡುಗುತ್ತಾ ಫೋನಿನಲ್ಲಿ ಛೇಡಿಸುತ್ತಾಳೆಂದು ಅವನು ಊಹಿಸಿರಲಿಲ್ಲ. ಆಕಸ್ಮಿಕವಾಗಿ ಅವನಿಗೆ ನೆನಪಾಯಿತು ಒಂದು ವಿಷಯ.

...ಜೀನ್ಸ್

ಅಜ್ಜಿಯ ಮೊಮ್ಮಗಳು ಸುನಾದಮಾಲ!

ಹರಿಕಥೆ, ದೇವರು, ಪೂಜೆ ಎಲ್ಲವನ್ನೂ ನಂಬುತ್ತ, ಎಷ್ಟೋ ವಿಶಾಲವಾಗಿ ನಗುತ್ತಾ, ಆಗಾಗ ಇಂಗ್ಲಿಷಿನಲ್ಲಿ ಮಾತನಾಡುತ್ತಾ ಇರುವ ಈ ಅಜ್ಜಿಯ ರಕ್ತವೇ ಸುನಾದಮಾಲಳಲ್ಲಿ ಕೂಡಾ ಹರಿಯುತ್ತಿದೆ. ಇವಳು ಮತ್ತಷ್ಟು ಚೇಷ್ಟೆಯ ಹುಡುಗಿಯಾಗಿರಬಹುದು. ಮೇಲೆ ಎಷ್ಟೋ ಗಂಭೀರ ಹುಡುಗಿಯಂತೆ ಕಂಡರೂ...

ಅವನು ಮತ್ತೆ ಕನ್ನಡಿಯಲ್ಲಿ ನೋಡಿದ, ಅದರಲ್ಲಿ ತನ್ನನ್ನೇ ನೋಡುತ್ತಿದ್ದ ಮಾಲ ಚಕ್ಕನೆ ಕಣ್ಣನ್ನು ಪಕ್ಕಕ್ಕೆ ಹೊರಳಿಸಿದಳು. ಅವನು ಸೂಕ್ಷ್ಮವಾಗಿ ಗಮನಿಸಿದ್ದಿದ್ದರೆ ಅವಳಮುಖ ನಾಚಿಕೆಯಿಂದ ಕೆಂಪಾಗಿದ್ದುದನ್ನು ನೋಡಬಹುದಾಗಿತ್ತು. ಕಾರಣ ಅವಳ ಹಿಂದೆ ಕುಳಿತಿದ್ದ ಮಾಲ ಅವಳ ಅಜ್ಜಿಯನ್ನು ಚಿವುಟಲೂ ಇಲ್ಲ.

ಅಜ್ಜಿಗೆ ನೋವೂ ಆಗಿರಲಿಲ್ಲ. ಸುಮ್ಮನೇ ಕಿರುಚಿದ್ದರು ಅಷ್ಟೇ. ವಯಸ್ಸಿನಲ್ಲಿದ್ದಾಗ ಅಜ್ಜಿ ತುಂಬಾ ರಸಿಕಳಾಗಿರಬೇಕು. ಮೊಮ್ಮಗಳ ಫ್ರಿಜಿಡಿಟಿಯನ್ನು ಕಡಿಮೆ ಮಾಡಲು ಅವಳು ಮಾಡುವ ಪ್ರಯತ್ನದಲ್ಲಿ ಅದೂ ಒಂದು. ಅದಕ್ಕೆ ವಿಹಾರಿಯನ್ನು ಆಸರೆಯಾಗಿ ಉಪಯೋಗಿಸಿಕೊಂಡಳು.

ಇಷ್ಟು ರೀತಿಯ ಆಲೋಚನೆಯಲ್ಲಿದ್ದ ಅವನು ಹಿಂದೆ ತನ್ನನ್ನೇ ಫಾಲೋ ಮಾಡಿಕೊಂಡು ಬರುತ್ತಿದ್ದ ಕಾರನ್ನು ಗಮನಿಸಲಿಲ್ಲ. ಸುನಾದಮಾಲಳ ಮನೆಯ ಬಳಿ ಕಾರನ್ನು ನಿಲ್ಲಿಸಿದ. "ಸ್ವಲ್ಪ ಕಾಫಿ ಕುಡಿದು ಹೋಗುವಿಯಂತೆ ಬಾಪ್ಪ" ಅಜ್ಜಿ ಆಹ್ವಾನಿಸಿದಳು. ಸುನಾದಮಾಲ ಅಜ್ಜಿಯನ್ನು ನುಂಗುವಂತೆ ನೋಡಿದಳು. ಮೊದಲೇ ಪರಪುರುಷನ ಕಾರಿನಲ್ಲಿ ಬಂದದ್ದು ಅವಳಿಗೆ ಮುಜುಗರವಾಗಿತ್ತು. ಯಾವಾಗ ಮನೆಯ ಒಳಗೆ ಹೋದೆನೋ ಭಗವಂತಾ ಎಂದುಕೊಳ್ಳುತ್ತಿದ್ದಾಗ ಅಜ್ಜಿಯಿಂದ ಮತ್ತೆ ಅವನಿಗೆ ಆಹ್ವಾನ! ''ಕಾಫಿ ತಾನೇ–ಬಂದೆ ನಡೀರಿ" ಎನ್ನುತ್ತಾ ವಿಹಾರಿ ಕಾರಿನಿಂದ ಇಳಿದ. ಆಗಲೇ ಹಿಂದಿನ ಕಾರಿನಿಂದ ಇಳಿದ ಮೂವರು, ವಿಹಾರಿಯ ಬಳಿಗೆ ನುಗ್ಗಿ ತಮ್ಮ ಕೈಯಲ್ಲಿದ್ದ ಆಯುಧಗಳನ್ನು ಝಳಪಿಸಿದರು. ಕೂಡಲೇ ಎಚ್ಚರಗೊಂಡ ವಿಹಾರಿ ಕಾರಿನ ಹಿಂದಿನ ಸೀಟಿಗೆ ಹಾರಲು ಪ್ರಯತ್ನಿಸಿದ. ಗಾಭರಿಗೊಂಡು ನೋಡುತ್ತಿದ್ದ ಸುನಾದಮಾಲ ತಾನು ಕುಳಿತಿದ್ದ ಹಿಂದಿನ ಸೀಟಿನಲ್ಲಿ ಅಂಗಾತ ಮಲಗಿಬಿಟ್ಟಳು. ಒಳಗೆ ಹಾರಿದ ವಿಹಾರಿ ಅವಳ ಮೇಲೆ ಬೋರಲು ಬಿದ್ದ. ಅವಳು ಕಿಟಾರನೆ ಕಿರುಚಿದಳು, ಮತ್ತೆ ಮುನ್ನುಗ್ಗಿದ ಮತ್ತೊಬ್ಬನನ್ನು ಕಾಲಿನಿಂದ ಬಲವಾಗಿ ಜಾಡಿಸಿದ. ಕೆಳಗೆ ಬಿದ್ದ ಅವನನ್ನು ಮತ್ತೊಂದು ಕಾರಿನಲ್ಲಿ ಬಂದ ಆಗಂತುಕರು ಎತ್ತಿ ಹಾಕಿಕೊಂಡು ಹೊರಟು ಹೋದರು. ವಿಹಾರಿಯ ಬಳಿ ಒಂದು ಕಾಗದ ಬಿದ್ದಿತು.

"ಅನವಶ್ಯಕ ವಿಷಯಗಳಲ್ಲಿ ತಲೆಹಾಕಿದರೆ ನಿನ್ನ ಪ್ರಾಣ ಉಳಿಯುವುದಿಲ್ಲ ಇದೊಂದು ಸ್ಯಾಂಪಲ್ ಮಾತ್ರ" ಎಂದು ಬರೆದಿತ್ತು ಅದರಲ್ಲಿ. ಅವನಿಗೆ ಅರ್ಥವಾಗಲಿಲ್ಲ. ಆದರೂ ಅದರ ಬಗ್ಗೆ ಹೆಚ್ಚು ತಲೆಕೆಡಿಸಿಕೊಳ್ಳದೆ ಸುನಾದಮಾಲಳ ಕಡೆ ನೋಡಿದ. ಅವಳು ಎಚ್ಚರ ತಪ್ಪಿ ಬಿದ್ದಿದ್ದಳು, ಸೀಟಿನಲ್ಲಿ. ಅಜ್ಜಿ ಕಂಗಾಲಾದಳು. ಆದರೆ ಮಾಲಳಂತೆ ಕಿರುಚಲಿಲ್ಲ, ಅವನು ಎರಡೂ ಕೈಗಳಲ್ಲಿ ಅವಳನ್ನೆತ್ತಿಕೊಂಡು ಮನೆಯೊಳಗೆ ತಂದ. ಅವಳನ್ನು ಹಾಸಿಗೆಯ ಮೇಲೆ ಮಲಗಿಸಿ, ಡಾಕ್ಟರನ್ನು ಕರೆತರುತ್ತೇನೆ" ಎಂದು ಹೊರಟ.

"ಬೇಡ ಬಿಡಪ್ಪ, ಸುಮ್ಮನೆ ಹೆದರಿದಾಳೆ ಅಷ್ಟೇ... ಸರಿಹೋಗುತ್ತೆ ಬರೀ ರೋಲ್ಡ್‌ಗೋಲ್ಡ್ ಒಡವೆಗಳಿಗೂ ಕತ್ತಿ ಉಪಯೋಗಿಸ್ತಾರೆ ಈ ಕಳ್ರು" ಎಂದು ಅಜ್ಜಿ ಗೊಣಗಿದಳು, ಆಕೆ ಹಾಗೆ ತಿಳಿದುಕೊಂಡಿರುವುದೇ ಒಳ್ಳೆಯದೆಂದುಕೊಂಡ.

ಐದು ನಿಮಿಷಗಳ ನಂತರ ಮಾಲಳಿಗೆ ಎಚ್ಚರವಾಯಿತು, ಆಜ್ಜಿ ಅವನನ್ನು ಹೊಗಳುತ್ತಿದ್ದಳು. ಇನ್ನೂ ಅಲ್ಲಿರಲು ಇಷ್ಟವಿಲ್ಲದೆ ಬಂದುಬಿಟ್ಟ.

ಕಾರು ಮನೆಯ ಕಡೆ ಹೊರಡುತ್ತಿದೆ.

ವಿಹಾರಿ ತುಂಬಾ ಒರಟ. ಬೇರೆ ಯಾರಾದರೂ ಆಗಿದ್ದಿದ್ದರೆ ಐದು ನಿಮಿಷಗಳ ಹಿಂದೆ ನಡೆದ ಆ ಘಟನೆಗೆ ಹೆದರಿಬಿಟ್ಟರುತ್ತಿದ್ದರು. ಅವರು ಅದನ್ನು ಆಗಲೇ ಮರೆತುಬಿಟ್ಟಿದ್ದ. ಮನೆಯೊಳಗೆ ಕಾರಿನಿಂದ ಅವಳನ್ನೆತ್ತಿಕೊಂಡು ಹೋಗುವಾಗ ಅವನಿಗೆ ಒತ್ತಿದ್ದ ಅವಳ ದೇಹದ ಆಹ್ಲಾದ ಅನುಭವ ಮಾತ್ರ ಅವನಿಗೀಗ ಉಸಿರಾಟಕ್ಕೆ ತೊಂದರೆ ಕೊಡುವಷ್ಟು ಉದ್ವೇಗ ತಂದಿತ್ತು. ಅವನ ತುಟಿಗಳ ಮೇಲೆ ಸಂತೃಪ್ತಿಯ ಮಂದಹಾಸ ಕಾಣುತ್ತಿತ್ತು.

ಅವನು ಮನೆಗೆ ಬರುವುದನ್ನೇ ಕಾಯುತ್ತಿದ್ದಳು ವರ್ಧನಮ್ಮ. ಅವನು ಭುಜದ ಮೇಲಿದ್ದ ರಕ್ತದ ಕಲೆಗಳನ್ನು ಆಕೆ ನೋಡದಂತೆ ಎಚ್ಚರ ವಹಿಸಿದ.

"ನಿನಗಾಗಿ ಯಾರೋ ಬಂದಿದ್ದಾರೋ, ಹಾಲಿನಲ್ಲಿ ಕುಳಿತಿದ್ದಾರೆ ತುಂಬಾ ಹೊತ್ತಿನಿಂದ'' ಅಂದಳು. ಅವನು ಹಾಲಿನೊಳಗೆ ಪ್ರವೇಶಿದ.

"ನೀವೇನಾ ವಿಹಾರಿ?''

"ಹೌದು! ನೀವ್ಯಾರು?''

"ನಿಮಗೋಸ್ಕರವೇ ಒಂದು ಗಂಟೆಯಿಂದ ಕಾಯುತ್ತಿದ್ದೇನೆ ಸಾರ್. ಅಲ್ಲಿ ನಿಮಗಾಗಿಯೇ ಅವರೆಲ್ಲಾ ಕಾಯುತ್ತಿದ್ದಾರೆ. ನೀವು ಬಂದರೆ ಈಗಲೇ ಹೋಗೋಣ.''

"ಯಾರು ಕಾಯ್ತಿದಾರೆ?'' ಆಶ್ಚರ್ಯದಿಂದ ಕೇಳಿದ.

"ಮುಖ್ಯಮಂತ್ರಿಗಳು.''

ರಾತ್ರಿ ಅಷ್ಟು ಹೊತ್ತಿನಲ್ಲಿ ಮುಖ್ಯಮಂತ್ರಿಗಳು ತನಗೆ ಕಾಯುತ್ತಿರುವುದು, ಅವನಿಗೆ ಆಶ್ಚರ್ಯ ತಂದಿತು. ಅದಕ್ಕಿಂತಲೂ ಹೆಚ್ಚಾಗಿ 'ಥ್ರಿಲ್' ಆಯಿತು ಐದು ನಿಮಿಷಗಳ ನಂತರ ಅವನಿಗೆ ಕರೆಬಂತು.

ಛೇಂಬರಿನಲ್ಲಿ ಛೀಫ್ ಮಿನಿಸ್ಟರ್ ಒಬ್ಬರೇ ಕುಳಿತಿದ್ದಾರೆ. ಅವರ ಎದುರಿಗಿದ್ದ ಕುರ್ಚಿಯಲ್ಲಿ ಕುಳಿತ ವಿಹಾರಿ.

ಸ್ವಲ್ಪ ಹೊತ್ತು ಸಾಮಾನ್ಯ ವಿಷಯಗಳನ್ನು ಮಾತನಾಡಿ, ''ಸಂಜೆ ನೀವು ಹೇಳಿದ್ದೆಲ್ಲಾ ಸರಿ ತಾನೇ?" ಎಂದು ಕೇಳಿದರು. ವಿಹಾರಿ ಆಶ್ಚರ್ಯವನ್ನು ತಡೆಹಿಡಿದು, "ಅಕ್ಷರಶಃ ನಿಜ ಸಾರ್. ನಾನು ಹೇಳಿದ್ದನ್ನು ನೀವಾರೂ ನಂಬದಿದ್ದುದು ದುರದೃಷ್ಟಕರ" ಎನ್ನುತ್ತಾ ಆ ನಂತರ ತನ್ನ ಮೇಲೆ ನಡೆದ ದಾಳಿಯನ್ನೂ ವಿವರಿಸಿದ.

"ವ್ಹಿ ಆರ್ ಸಾರಿ'' ಅವನ ಕತ್ತಿನ ಪಕ್ಕದಲ್ಲಾಗಿದ್ದ ಗಾಯವನ್ನು ನೋಡುತ್ತಾ ಹೇಳಿದರು ಮುಖ್ಯಮಂತ್ರಿ. "ಅವರು ಏನಕ್ಕೂ ಹೇಸದ ಜನ. ಒಂದು ವಿಷಾದದ ಸಂಗತಿಯೆಂದರೆ ಆ ಗುಂಪಿನಲ್ಲಿ ನನ್ನ ಸಹೋದ್ಯೋಗಿ ಸೂರ್ಯಾರಾವ್ ಕೂಡಾ ಸೇರಿಕೊಂಡಿರುವುದು. ರಾಜಕೀಯವೆಂದರೆ ತೆರೆಮರೆಯಲ್ಲಿ ಸಾಕಷ್ಟು ಅನ್ಯಾಯ ನಡೆಯುವುದನ್ನು ಕಂಡಿದ್ದೇನಾಗಲೀ ಇಷ್ಟು ಹೊಲಸೆಂದುಕೊಂಡಿರಲಿಲ್ಲ."

"ನೀವಾದರೂ ನಂಬುತ್ತೀರಾ ಸಾರ್ ನಾನು ಹೇಳಿದ್ದೆಲ್ಲಾ ನಿಜವೆಂದು–"

"ನಾನೇ ಅಲ್ಲ, ಸಿ.ಬಿ.ಐ. ಇಲಾಖೆಯೆಲ್ಲಾ ನಂಬಿದೆ."

ಅವನು ತುಂಬಾ ಆಶ್ಚರ್ಯಗೊಂಡು "ಮತ್ತೆ...ನಾನು ಆಗ ಹೇಳ್ತಿದ್ರೆ ನನ್ನನ್ನೆಲ್ಲೂ ಹುಚ್ಚ ಅಂದ್ರು'' ಇರಿಟೇಟಿಂಗಾಗಿ ಹೇಳಿದ.

''ಅದೇ ವಿಷಯವಾಗಿ ಡೆಪ್ಯೂಟಿ ಛೀಫ್ ಪ್ರವಲ್ಲಿಕರನ್ನು ವಿಚಾರಿಸಿದೆ–ನೀವು ಹೇಳಿದ್ದೆಲ್ಲಾ ಅಕ್ಷರಶಃ ನಿಜವೆಂದು ಹೇಳಿದರು."

"ಮತ್ತೇಕೆ ಆಗ ಹಾಗೆ ಮೌನವ್ರತ ವಹಿಸಿದರು" ವ್ಯಂಗ್ಯವಾಗಿ ಕೇಳಿದ.

"ವಿಹಾರಿ! ನಾನು ಈ ರಾಜ್ಯದ ಮುಖ್ಯಮಂತ್ರಿ, ಈ ರಾಜ್ಯದ ಕಷ್ಟಸುಖಗಳನ್ನು ನೋಡುವುದಷ್ಟೇ ನನ್ನ ಕೆಲಸ. ಪ್ರವಲ್ಲಿಕ ಹೇಳಿದ್ದನ್ನು ಕೇಳಿದ ನಂತರ–ಇದೆಲ್ಲಾ ಸಣ್ಣ ವಿಷಯವಲ್ಲ...ಇದರ ಹಿಂದೆ ಒಂದು ದೊಡ್ಡ ಅಂತರ್ರಾಷ್ಟ್ರೀಯ ಗುಂಪೇ ಇದೆ– 'ಇಂಟರ್ ನ್ಯಾಷನಲ್ ಮಾಫಿಯ'– ಅನ್ನುತ್ತೆ, ಆದರೆ ಅದು ಸ್ಮಗ್ಲರ್‌ಗಳ ಗ್ಯಾಂಗ್ ಅಲ್ಲ; ಮತ್ತು ಸೆಂಟಿಮೆಂಟ್‌ಗಳ ಮೇಲೆ ಆಟವಾಡುತ್ತಿರುವ ಗುಂಪು. ನನ್ನನ್ನು ಕೆಳಗಿಳಿಸಿ, ಸೂರ್ಯಾರಾವ್‌ನನ್ನು ಮುಖ್ಯಮಂತ್ರಿಯನ್ನಾಗಿ ಮಾಡುವುದು ತುಂಬಾ ಸಣ್ಣ ವಿಷಯ. ಅವರ ಸಹಚರ ಆಸೆಯಿಂದ ಕೇಳಿದ ಕೂಡಲೇ ಆ ಪದವಿಯನ್ನು ಬಹುಮಾನವಾಗಿ ಕೊಡಲು ಸಿದ್ಧರಾಗಿದ್ದಾರೆ. ಈ ಗುಂಪಿನ ಬಗ್ಗೆ, ಈ ದಿನ ನಡೆವ ಘಟನೆಯ ಬಗ್ಗೆ ಇದುವರೆವಿಗೂ ಮಾತಾಡಿದೀನಿ"

"ಯಾರೊಡನೆ—"

"ನಮ್ಮ ಪ್ರಧಾನಮಂತ್ರಿಯವರೊಡನೆ—"

ವಿಹಾರಿ ಉಸಿರು ಬಿಗಿಹಿಡಿದು ಕುಳಿತ. ''ಏನಂದರು ಅವರು?"

"ನಾನೇ ಇದನ್ನು ದೊಡ್ಡ ಸಮಸ್ಯೆ ಅಂದುಕೊಂಡಿದ್ದೇನೆ. ಆದರೆ ಪ್ರಧಾನ ಮಂತ್ರಿ ಇದಕ್ಕಿಂತ ಹತ್ತುಪಟ್ಟು ಹೆಚ್ಚು ಅಪಾಯವನ್ನು ಊಹಿಸಿದರು. 'ಮತ' ವೆಂಬ ಆಯುಧದಿಂದ ಆ ಸ್ವಾಮಿ ದೇಶವನ್ನೇ ಕಬಳಿಸುವ ಸಂಚನ್ನು ಹಾಕಿದ್ದಾನೆ. ಒಂದು ಮತಕ್ಕೆ ಸೇರಿದ ಕನಿಷ್ಟ ಐವತ್ತು ಕೋಟಿ ಜನ ಅವನನ್ನು ಬೆಂಬಲಿ

ಸುತ್ತಿದ್ದಾರೆ"—

"ಇಂಪಾಸಿಬಲ್''

ಆತ ವಿಷಾದದ ನಗೆ ನಕ್ಕರು. "ನಾನು ಕನಿಷ್ಟ ಎಂಬ ಪದವನ್ನು ಉಪಯೋಗಿಸಿದ್ದೇನೆ. ಅಂದರೆ ಕಡಿಮೆಯಲ್ಲಿ ಕಡಿಮೆ ಎಂಬ ಮಾತು. ಬೇರೆ ಯಾವ ಮತದ ದೇವರ ಬಗ್ಗೆ ಒಂದು ಮಾತಾಡು...ಸೀಳಿ ಬಿಡುತ್ತಾರೆ. ಅದೇ ನಮ್ಮ ಬಗ್ಗೆಯಾದರೆ ಎಷ್ಟು ಬೇಕಾದರೂ ಅವಹೇಳನ ಮಾಡಬಹುದು. ಇತರೆ ಮತಗಳ ಕಾನೂನುಗಳನ್ನು ಬದಲಾಯಿಸಲು ಸರ್ಕಾರ ಕೂಡಾ ಹೆದರುತ್ತದೆ. ನಮ್ಮ ದೇಶದಲ್ಲಿ ನಮಗಿರದ ಎಷ್ಟೋ ಅವಕಾಶಗಳು ಉಳಿದವರಿಗಿದೆ. ಅದನ್ನು 'ಕ್ಯಾಷ್' ಮಾಡಿಕೊಂಡರೆ ಆವೇಶವನ್ನು ರೊಚ್ಚಿಗೆಬ್ಬಿಸಬಹುದು. ಅವರ ಮೆಚ್ಚುಗೆ ಸಂಪಾದಿಸಬಹುದು."

"ಆದರೆ ಲಾಭಕ್ಕಾಗಿ ಯೋಚಿಸಿದರೆ—"

'ಲಾಜಿಕ್ ? ಮತ, ಆಚಾರ–ಇದರ ಮುಂದೆ ಲಾಜಿಕ್ ಕೆಲಸ ಮಾಡುವುದಿಲ್ಲ. ರಾಜಾಸ್ಥಾನದಲ್ಲಿ 'ಸತಿ'ಯನ್ನು ನೀವು ಸಪೋರ್ಟ್ ಮಾಡಿದರೆ ಶೇ. ೫೫ ಓಟುಗಳು ಸಿಗುತ್ತವೆ. ಗಂಡ ಸತ್ತರೆ ಅವನೊಡನೆ ಹೆಂಡತಿಯನ್ನು ಸುಡುವುದೆಂದರೇನು ನಾನ್ಸೆನ್ಸ್ ಎಂದು ನೀವು ಹೇಳಿದರೆ ಶೇ. ೪೫ ಓಟುಗಳು ಸಿಗುತ್ತವೆ. ಮನುಷ್ಯರಲ್ಲಿ 'ಮತ ತತ್ವ' ಕೇವಲ ನಮ್ಮ ದೇಶದಲ್ಲಿ ಮಾತ್ರವಲ್ಲ–ಪ್ರಪಂಚವೆಲ್ಲ ತುಂಬಿದೆ. ಇದನ್ನು ಚೆನ್ನಾಗಿ ಗಮನಿಸಿದ್ದಾನೆ ಸ್ವಾಮಿ. ಪ್ರಜಾತಂತ್ರ ಸರ್ಕಾರವನ್ನು ಇಕ್ಕಟ್ಟಿನಲ್ಲಿರಿಸಲು ತುಂಬಾ ಹರಿತವಾದ ಈ 2 ಆಯುಧಗಳನ್ನು ಉಪಯೋಗಿಸುತ್ತಿದ್ದಾನೆ. ಒಂದು ಮತ; ಮತ್ತೊಂದು ಟೆರ್ರರಿಸಂ! ಉಗ್ರವಾದಿಗಳನ್ನು ಆ ರೀತಿ ಉಪಯೋಗಿಸಿ ತನ್ನ ಮತಸ್ಥರನ್ನು ಒಂದು ಕಡೆಯಿಂದ ಸಾಯಿಸುತ್ತಾನೆ. ಅದನ್ನು ಬೇರೆ ಮತಸ್ಥರು ಮಾಡುತ್ತಿದ್ದಾರೆಂದು ಹಬ್ಬಿಸುತ್ತಾನೆ. ಒಂದು ಒಳ್ಳೆಯ ಸಮಯದಲ್ಲಿ. ಇಂತಹ ಮತಸ್ಥರನ್ನು ದೇಶದಿಂದ ಹೊರಗೋಡಿಸುವವರೆಗೂ ನಾನು ನಿರಾಹಾರ ದೀಕ್ಷೆ ತೆಗೆದುಕೊಂಡು ಪ್ರಾಣ ಕಳೆದುಕೊಳ್ಳುತ್ತೇನೆ' ಎಂದು ಘೋಷಿಸುತ್ತಾನೆ. ಪ್ರಜೆಗಳ ಸಪೋರ್ಟ್ ಯಾರಿಗೆ ಸಿಗುತ್ತದೆ...? ನಿಶ್ಚಿತವಾಗಿಯೂ ಸ್ವಾಮಿಗೇ. ಅದಕ್ಕಿಂತಲೂ ಮುಂಚೆ ಪ್ರಜೆಗಳು ತಮ್ಮ ಮತದವರಿಗೆ ನಡೆದ ಅನ್ಯಾಯವನ್ನು ನೋಡಿರುವುದರಿಂದ ಅವನನ್ನು ತಮ್ಮ ಪರಿರಕ್ಷಕನಂತೆ ಪೂಜಿಸಲು ಪ್ರಾರಂಭಿಸುತ್ತಾರೆ. ಈ ದೇಶಕ್ಕೆ ಸ್ವಾಮಿಯನ್ನು ಬಿಟ್ಟು ಬೇರೆ ಯಾರೂ ಇಲ್ಲವೆಂಬ ಅಭಿಪ್ರಾಯಕ್ಕೆ ಬರುತ್ತಾರೆ. ಅಧಿಕಾರದಲ್ಲಿರುವ ಸರ್ಕಾರ ನೀವಂದ ಲಾಜಿಕ್ ಪ್ರಕಾರ ಮೈನಾರಿಟಿ ವರ್ಗಕ್ಕೆ ರಕ್ಷಣೆ ಕಲ್ಪಿಸಬೇಕು, ಆದರೆ ಅದು ಸಾಧ್ಯವಾ? ಕೊತ ಕೊತ ಕುದಿಯುವ ಮತ ತತ್ವದ ಮುಂದೆ ಪ್ರಜಾ

ಸ್ವಾಮ್ಯ ನಿಲ್ಲುವುದಿಲ್ಲ. ಇದೇ ಸ್ವಾಮಿಯ ಪ್ಲಾನು. ಎರಡು ಮೂರು ವರ್ಷ ಗಳಿಂದ ತೀವ್ರ ಪ್ರಯತ್ನಮಾಡಿ ಶೋಧಿಸಿ ಡೆಪ್ಯೂಟಿ ಛೀಫ್ ತಯಾರಿಸಿದ ವಿವರ ಗಳು ಇವು—"

ವಿಹಾರಿಗೆ ಕೊಟ್ಟಿದ್ದ ಅಪಾಯಿಂಟ್ ಸಮಯ ಮುಗಿಯಿತೆಂದು ಸೆಕ್ರೆಟರಿ ಬಂದು ನೆನಪಿಸಿದ. ಆತನಿಗೆ ಹೋಗೆಂಬಂತೆ ಸನ್ನೆ ಮಾಡಿ, ವಿಹಾರಿಯ ಕಡೆಗೆ ನೋಡಿದರು ಮುಖ್ಯಮಂತ್ರಿಗಳು.

"ನಿಮ್ಮನ್ನು ಕರೆಸಲು ಪ್ರತ್ಯೇಕವಾದ ಕಾರಣವೇನಿಲ್ಲ. ಸಾಮಾನ್ಯ ಪ್ರಜೆ ನೀವು. ಆದರೆ ನಿಮ್ಮಷ್ಟು ಸಿವಿಕ್‌ಸೆನ್ಸ್ ಇರುವ ವ್ಯಕ್ತಿಯನ್ನು ನಾನು ಈ ನಡುವೆ ನೋಡಿಲ್ಲ. ನೀವು ಹೇಳುತ್ತಿದ್ದಾಗ ಇದೆಲ್ಲಾ ಸೂರ್ಯಾರಾವ್ ಅಂದಂತೆ ವಿರೋಧ ಪಕ್ಷಗಳ ನಾಟಕವೆಂದುಕೊಂಡೆ. ಆದರೆ ನಿಜ ಡೆಪ್ಯೂಟಿ ಛೀಫ್‌ನಿಂದ ಗೊತ್ತಾ ಯಿತು"

"ಆಕೆ ಆಗ ಏಕೆ ಸುಳ್ಳು ಹೇಳಿದ್ದು ?"

ಛೀಫ್ ಮಿನಿಸ್ಟರ್ ಉತ್ತರಿಸದೆ ಬಜರ್ ಒತ್ತಿ. "ಪ್ರವಲ್ಲಿಕ ಇಲ್ಲೇ ಇದ್ದಾರೆ" ಎಂದರು. ಅಟೆಂಡರ್ ಅವಳಿಗಾಗಿ ಹೋದನಂತರ, "ಆ ಕ್ಷಣವೇ ಆಕೆ ನಿಜ ಹೇಳಿದ್ದಿದ್ದರೆ ಆ ಕಾನ್ಫರೆನ್ಸ್ ಹಾಲ್ ಚಿಂದಿ ಚಿಂದಿಯಾಗುತ್ತಿತ್ತು. ಬಾಂಬ್ ಬ್ಲ್ಯಾಸ್ಟ್‌ನಲ್ಲಿ ಒಬ್ಬರೂ ಉಳಿಯುತ್ತಿರಲಿಲ್ಲ. ಏನು ನಡೆಯಿತೆಂದು ಪತ್ರಿಕೆಯವ ರಿಗೆ ತಿಳಿಸಲೂ ಯಾರೂ ಇರುತ್ತಿರಲಿಲ್ಲ ಅಷ್ಟೆ."

ವಿಹಾರಿ ದಿಗ್ಭ್ರಾಂತನಾದ.

ಕೆಲವು ವಿಷಯಗಳು. ಅವು ಎಷ್ಟೇ ಸಣ್ಣವಾದರೂ ಊಹೆಗೆ ನಿಲುಕುವು ದಿಲ್ಲ. ತಾನು ಸಣ್ಣ ಮಗುವಿನಂತೆ ವರ್ತಿಸಿದ. ಆವೇಶ ಬಿಟ್ಟು ತನಗೇನೂ ಇಲ್ಲ. ತನಗಿಂತಲೂ ಸುಮಾರು ಐದು ವರ್ಷ ಚಿಕ್ಕವಳಾದ ಪ್ರವಲ್ಲಿಕ ಯೋಚಿಸಿದಂತೆ ಯೋಚಿಸಲು ತನ್ನಿಂದಾಗಲಿಲ್ಲ. ಅನಂತಾನಂತಸ್ವಾಮಿಯ ಬಲಕ್ಕೆ ಹೋಲಿಸಿದರೆ ಅಲ್ಲಿದ್ದ ಸೆಕ್ಯೂರಿಟಿ ತುಂಬಾ ಚಿಕ್ಕದು. ನಿಜ ಸಂಗತಿ ಗೊತ್ತಾಗದೆ ಸಮಾಧಿ ಆಗಿ ಬಿಡುತ್ತಿದ್ದರು.

"ಮತ್ತೆ ನಾನು ನಿಮಗೀಗ ತಿಳಿಸಿದ ವಿಷಯದ ಬಗ್ಗೆ ಎನ್‌ಕ್ವಯಿರಿ ಮಾಡು ತ್ತೀರೆಂಬ ಅನುಮಾನ ಅವರಿಗೆ ಅವರಿಗೆ ಬರುವುದಿಲ್ಲವಾ?"

"ಬರುತ್ತೆ, ಆದರೆ ನಾವೇನೂ ಮಾಡಲಾರೆವೆಂದು ಅವರಿಗೆ ಗೊತ್ತು. ಎಳೆ ಮಕ್ಕಳ ಕೊಲೆಗೆ ಅನಂತಾನಂತಸ್ವಾಮಿ ಕಾರಣನೆಂದು ಹೇಳಿದರೆ ನನಗೇ ತಲೆಕೆಟ್ಟಿದೆ ಯೆಂದು ಹೇಳುತ್ತಾರೆ ಜನ"

"ಸ್ವಾಮಿಯನ್ನು ನೀವೇನೂ ಮಾಡಲಾರಿರಿ. ಆದರೆ ಸೂರ್ಯಾರಾವ್

ನಿಮ್ಮ ಕ್ಯಾಬಿನೆಟ್‌ನಲ್ಲಿ ಮಂತ್ರಿ . . ''

ಮುಖ್ಯಮಂತ್ರಿ ಮಾತನಾಡಲಿಲ್ಲ. ನೋವು, ನಿಸ್ಸಹಾಯಕತೆ ಕೇವಲ ಅವರ ತುಟಿಯ ಮೇಲೆ ಪ್ರತಿಬಿಂಬಿಸಿತು. ಪಕ್ಕದ ಡ್ರಾಯರ್ ತೆಗೆದು ಕವರೊಂದನ್ನು ಟೇಬಲ್ ಮೇಲಿಟ್ಟರು.

''ಇದೇನೆಂದು ಊಹಿಸಬಲ್ಲಿರಾ?''

"ಸಾರಿ...ಗೊತ್ತಿಲ್ಲ..."

"ಮಂತ್ರಿಮಂಡಲದಿಂದ ರಾಜೀನಾಮೆ ಕೊಡುತ್ತಿರುವಂತೆ ಸೂರ್ಯರಾವ್ ಬರೆದ ಕಾಗದ." ಬಲವಾಗಿ ಬಂದ ಕಲ್ಲೊಂದು ಅವನ ಮುಖಕ್ಕೆ ಬಿದ್ದಂತಾಯಿತು. ಆತ ಹೇಳಲು ಪ್ರಾರಂಭಿಸಿದರು. "ಈ ದಿನ ನಡೆದ ಘಟನೆಯಿಂದ ಆತನ ಮನಸ್ಸಿಗೆ ತುಂಬಾ ಆಘಾತವಾಗಿರುವುದಾಗಿಯೂ. ಅದರಿಂದ ತಾನು ಇನ್ನು ಈ ಪದವಿಯಲ್ಲಿ ಮುಂದುವರೆಯುವುದಿಲ್ಲವೆಂದೂ ರಾಜೀನಾಮೆ ನೀಡಿದ್ದಾರೆ. ಆತನ ಹಿಂದೆ ಎರಡು ಮೂರು ದಿನಪತ್ರಿಕೆಗಳಿವೆ. ನಾಳೆ ಅವೆಲ್ಲಾ ಆತನ ನೈತಿಕ ಜವಾಬ್ದಾರಿಯ ಬಗ್ಗೆ ಹೊಗಳುತ್ತವೆ. ಆಕಾಶಕ್ಕೆ ಎತ್ತಿಹಾಕುತ್ತವೆ. ಪ್ರಜೆಗಳದೇನಿದೆ? ಪತ್ರಿಕೆಗಳು ಜನರ ಅಭಿಪ್ರಾಯವನ್ನು ತುಂಬಾ ಸುಲಭವಾಗಿ ಬದಲಾಯಿಸಬಲ್ಲವು, ಆತನಿಗೆ ಮುಖ್ಯಮಂತ್ರಿಯ ಪದವಿಯನ್ನು ಆಫರ್ ಮಾಡಿದ್ದು ನಾನೇ. ಆತನೇನೂ ಕೇಳಿಕೊಳ್ಳಲಿಲ್ಲ. ಆ ವಿಷಯಗಳೇ ಹೆಡ್‌ಲೈಟಾಗಿ ಬರುತ್ತವೆ ಅಂತಹವನು ರಾಜೀನಾಮೆ ನೀಡುತ್ತಾನೆಂದು ತಿಳಿದಾಗ ಪ್ರಜೆಗಳ ಅಭಿಮಾನ ಆತನ ಬಗ್ಗೆ ಮತ್ತಷ್ಟು ಹೆಚ್ಚಾಗುತ್ತದೆ. ನನಗೆ ಸರಿಯಾದ ಕಡೆಗೇ ಪೆಟ್ಟುಕೊಟ್ಟ ಸ್ವಾಮಿಯ ಮೇಲಾಗಲೀ ಆತನ ಮೇಲಾಗಲೀ ನಾನೇನಾದರು ದೂರಿದರೆ–"ಆತ ಸ್ವಲ್ಪ ಹೊತ್ತು ಸುಮ್ಮನಾಗಿ ನಂತರ ನಿಧಾನವಾಗಿ ಪೂರ್ತಿಗೊಳಿಸಿದ,

"ಕೂಡಲೇ ನಮ್ಮ ಮಂತ್ರಿವರ್ಗ ಕುಸಿದು ಬೀಳುತ್ತದೆ."

ಆತ ಎಷ್ಟು ಮುಂದಾಲೋಚನೆ ಹೊಂದಿದ್ದಾರೆಂದು ವಿಹಾರಿ ಊಹಿಸಿದ. ಆತನ ತಿಳಿವಳಿಕೆಗೆ ಹೋಲಿಸಿಕೊಂಡರೆ ತಾನೆಷ್ಟು ಕೆಳಮಟ್ಟದಲ್ಲಿದ್ದೇನೆಂದು ಕೂಡಾ ಅರ್ಥವಾಯಿತು. ಅವನ ಮನಸ್ಸು ವ್ಯಾಕುಲಗೊಂಡಿತು. ಸಾಮಾನ್ಯ ಮನುಷ್ಯ ಕನಸಿನಲ್ಲಿಯೂ ಊಹಿಸದಂಥ ಆಟಗಳಿವು. "ಮತ್ತೆ ಈಗೇನು ಮಾಡುತ್ತಿದ್ದೀರಿ?" ಕೇಳಿದ.

"ನಾನೇನೂ ಮಾಡಲಾರೆ. ಹೇಳಿದೆನಲ್ಲಾ! ಕೇವಲ ಒಂದು ರಾಜ್ಯಕ್ಕೆ ಮಾತ್ರ ನಾನು ಮುಖ್ಯಮಂತ್ರಿ. ಇದು ದೇಶಕ್ಕೆ ಸಂಬಂಧಿಸಿದ್ದು. ಅಪಾಯ ಹತ್ತಿರದಲ್ಲೇ ಇದೆ. ಬರುವ ಏಕಾದಶಿಯಿಂದ ಸ್ವಾಮಿ ತನ್ನ ಕಾರ್ಯಕಲಾಪಗಳಿಗೆ ಒಂದು ರೂಪುರೇಖೆ ಕೊಡಲು ಪ್ರಾರಂಭಿಸುತ್ತಾನೆಂದು ಸಿ.ಬಿ.ಐ. ವರದಿಗಳು

ಬಂದಿವೆ. ಅವರ ಅಂದಾಜು ಸರಿಯೇ. ಆದರೆ ಸರಿಯಾಗಿ ಇನ್ನೊಂದು ತಿಂಗಳಲ್ಲಿ ನಮ್ಮ ದೇಶ ಆತನ ಕೈಯ್ಯಲ್ಲಿರುತ್ತದೆ. ಒಂದು ವೇಳೆ ಸರ್ಕಾರ ಯಾವುದೇ ರೀತಿಯಲ್ಲಿ ಆತನಿಗೆ ವಿರೋಧವಾದರೂ ಆತ ಸಾರ್ವಭೌಮತ್ವವನ್ನು ಡಿಕ್ಲೇರ್ ಮಾಡಿದ ಕೆಲವೇ ಗಂಟೆಗಳಲ್ಲಿ ಆತನ ರಾಜಕೀಯ ಅಧಿಕಾರವನ್ನು ಭದ್ರಪಡಿಸಲು ಫಿಜಿ ಐಲೆಂಡ್, ಮೊರಾಕೋ, ಫಿಲಿಪೈನ್ಸ್‌ನೊಡನೆ ಮತ್ತೆರಡು ಬಲವಾದ ದೇಶಗಳಿವೆ–ಸಿದ್ಧವಾಗಿಯೇ."

"ನಾನು ನಂಬುವುದಿಲ್ಲ. ಇಷ್ಟೊಂದು ಅಪಾಯ ತುಂಬಾ ಹತ್ತಿರದಲ್ಲಿದ್ದರೂ ಯಾರಿಗೂ ಅದರ ಸುಳಿವು ಸಿಕ್ಕಿಲ್ಲವೆಂದರೆ ನಾನು ನಂಬಲಾರೆ."

"ಮಳೆಗೆ, ಪ್ರವಾಹಕ್ಕೆ ಮುನ್ಸೂಚನೆಗಳಿವೆ. ಚಾಪೆಯ ಕೆಳಗೆ ಹರಿಯುವ ನೀರು ಮೇಲಕ್ಕೆ ಕಾಣುವ ವರೆಗೂ ತಿಳಿಯುವುದಿಲ್ಲ.''

ಅಷ್ಟರಲ್ಲಿ ಬಾಗಿಲ ಶಬ್ದವಾಯಿತು, ಪ್ರವಲ್ಲಿಕ ಒಳಗೆ ಬಂದಳು. ತುಂಬಾ ಸುಸ್ತಾದವಳಂತೆ ಕಂಡಳು. ವಿಹಾರಿಯ ಮನಸ್ಸಿನಲ್ಲಿ ಯಾವುದೋ ತಿಳಿಯದ ಅಪ್ಯಾಯತೆ ಉಂಟಾಯಿತು. ತುಂಬಾ ಹತ್ತಿರದವಳಂತೆ ಕಂಡಳು. ಬಹುಶಃ ಅವನಾಗ ಮಾಡಿಕೊಂಡಿದ್ದ ಅಪಾರ್ಥದಿಂದಿರಬಹುದು.

ಅವರಿಬ್ಬರೂ ಮಾತಾನಾಡಿಕೊಳ್ಳುತ್ತಿದ್ದಾರೆಂದು ಗ್ರಹಿಸಿ ಅವನು ಮೇಲೆದ್ದ, ಹೊರಡುತ್ತಾ "ಒಂದು ಪ್ರಶ್ನೆ ಕೇಳಬಹುದಾ?''

ಪ್ರವಲ್ಲಿಕ, ಆತ ಅವನೆಡೆಗೆ ನೋಡಿದರು.

''ನನ್ನನ್ನೇಕೆ ಕರೆಸಿದಿರಿ? ಇದೆಲ್ಲಾ ನನಗೇಕೆ ಹೇಳಿದಿರಿ?''

ಆತ ಕೂಡಲೇ ಉತ್ತರಿಸಲಿಲ್ಲ. ನಂತರ ನಿಧಾನವಾಗಿ ಹೇಳಿದ, "ನನ್ನ ಒಬ್ಬನೇ ಮಗ ಕೆನಡಾದಲ್ಲಿ ಇಂಜಿನಿಯರಿಂಗ್ ಓದುತ್ತಿದ್ದ. ಕೆನಡಾ ಟೆರ್ರರಿಸ್ಟ್‌ಗಳ ಬೀಡು. ಅವರ ಮೊಟಂಗೊಂದರಲ್ಲಿ ಬಹಿರಂಗವಾಗಿ ಎದುರಾಡಿದವನು ಅವನೊಬ್ಬನೇ. ಸಾಮಾನ್ಯರು ಸದಾ ಭಯಪಡುತ್ತಾರೆ. ಮನಸ್ಸಿನಲ್ಲಿರುವುದನ್ನು ಹೊರಗೆಡುವುದಿಲ್ಲ. ಕೆಲವೇ ಜನ ಮಾತ್ರ ತಮಗೆ ಸಂಬಂಧವಿಲ್ಲದಿದ್ದರೂ ಧೈರ್ಯವಾಗಿ ಎದುರು ಬೀಳುತ್ತಾರೆ: ಅಧರ್ಮವನ್ನು ವಿರೋಧಿಸುತ್ತಾರೆ. ನನ್ನ ಮಗನೂ ಹಾಗೆಯೇ ಎದುರು ಬಿದ್ದ. ನಿನ್ನಲ್ಲಿ ಅವನ ಹೋಲಿಕೆಗಳು ಕಂಡವು. ಅದಕ್ಕೆ ಕರೆಸಿದೆ.'' ಆವನು ಪ್ರವಲ್ಲಿಕಳ ಕಡೆ ನೋಡಿದ. ಅವನೆಡೆಗೇ ನೋಡುತ್ತಿದ್ದ ಅವಳು ಕಣ್ಣಗಳನ್ನು ಮತ್ತೊಂದೆಡೆಗೆ ತಿರುಗಿಸಿದಳು. ಅವನು ಹೊರಬಂದ.

ಹೊರಗೆ ಬೆಳದಿಂಗಳು ಹಿಟ್ಟನ್ನು ಹಾಸಿದಂತಿದೆ. ಕಾರಿಡಾರ್‌ನಲ್ಲಿ ನಿಂತ. ಐದು ನಿಮಿಷಗಳ ನಂತರ ಪ್ರವಲ್ಲಿಕ ಹೊರಬಂದಳು. ಇಬ್ಬರೂ ಕಾರಿನ ಕಡೆಗೆ ನಡೆಯುತ್ತಿದ್ದಂತೆಯೇ "ಐಯಾಮ್ ಸಾರಿ" ಅಂದ.

ಅವಳು ಕಿರುನಗೆಯಿಂದ ಅವನೆಡೆಗೆ ನೋಡಿದಳು. ಆವನು ಮತ್ತಷ್ಟು ನಾಚಿಕೊಂಡು "ನನಗೆ ತುಂಬಾ ಸಿಟ್ಟು ಬಂದಿದೆ, ನಿಜಹೇಳಬೇಕೆಂದರೆ ಅಲ್ಲೇ ಒದ್ದು ಬಿಡುವಷ್ಟು ಆಕ್ರೋಶ ಬಂದಿತ್ತು" ಅಂದ. ಅವಳು ಪಕಪಕನೆ ನಕ್ಕಳು. ಅದುವರೆವಿಗೂ ಇದ್ದ ಟೆನ್ಷನ್ ಹೋದಂತೆ ಅನ್ನಿಸಿತು.

ಅವಳು ಕಾರುಹತ್ತಲು ಹೋಗುತ್ತಿದ್ದಂತೆಯೆ ''ನಡೆದದ್ದನ್ನೆಲ್ಲ ಮರೆತು ಬಿಡುತ್ತೀರಿ ತಾನೇ'' ಕೇಳಿದ.

ಅವಳು ಅಪ್ರಯತ್ನವಾಗಿ ಅವನ ಕೈಮೇಲೆ ಕೈಹಾಕಿ. "ಏನು ನಡೆಯಿತೀಗ ಅಂತ? ಹಾಯಾಗಿ ನಿದ್ರಿಸಿ, ಸ್ವೀಟ್‌ಡ್ರೀಮ್ಸ್."

ಅವನು ಹಾಗೆಯೇ ನಿಂತುಬಿಟ್ಟ.

ಅವಳ ಇಂಟಿಮೇಟ್ ಪರಿಮಳ ಅವನನ್ನು ಆವರಿಸಿತ್ತು. ಇಂಟಿಮೇಟ್ ಸೆಂಟಿನ ಹೆಸರಲ್ಲ. ಇಂಟಿಮೇಟ್ ಅಂದರೆ ಹತ್ತಿರತನ. ತನ್ನ ಯೋಚನೆ ತನಗೇ ಕ್ಷುಲ್ಲಕವೆಂದು ಅನ್ನಿಸಿತು. ಮದುವೆ ನಿಶ್ಚಯವಾಗಿರುವ ಹುಡುಗಿಯ ಬಗ್ಗೆ ಅಂತಹ ಆಲೋಚನೆ ಬಂದಿದ್ದಕ್ಕೆ...

ಆ ಮಾರನೆ ದಿನ 4–50 ಕ್ಕೆ ಅವನಿಗೆ ಫೋನ್ ಬಂತು.

"ಹಲೋ"

"ನಾನು"

"ನಾನೆಂದರೆ"

"ನಿನ್ನೆ ಫೋನ್ ಮಾಡಿದ ಹುಡುಗಿ–"

''ಓ! ನೀನಾ?"

"ಏನು? ಗುರುತಿಸಿಬಿಟ್ಟರಾ?"

"ನೆನ್ನೆ ಭೇಟಿಯಾಗಿದ್ದವಲ್ಲಾ"

"ಕರೆಕ್ಟ್"

''ನೆನ್ನೆ ನಿಮಗೆ ಸ್ವಲ್ಪ ಭಯವಾಗಿತ್ತೆಂದು ಕಾಣುತ್ತೆ–''

"ಸ್ವಲ್ಪ ಅಲ್ಲ, ತುಂಬಾನೇ_"

"ಏಕೆ ನಿಮಗಷ್ಟು ಭಯ?"

''ಅದರಲ್ಲಿ ಸುಮಾರು ನಟನೆಯೇ–ಅದನ್ನು ತಿಳಿಯಲಾರದೆ, ಮೇಲೆ ಕಾಣುವುದೆಲ್ಲಾ ನಿಜವೆಂದು ನಿಮ್ಮಂಥ ಪೆದ್ದುಗಳು ನಂಬುತ್ತಿರುತ್ತಾರೆ.''

"ಏನು ಪೆದ್ದುಗಳಾ?"

''ಮತ್ತೇನು? ನಿಮಗಿಂತಲೂ ಅದ್ಯಾವುದೋ ಕಾದಂಬರಿಯ ಹೀರೋನೇ ವಾಸಿ. ಮೂತಿ, ಮುಖ ತಿಳಿಯದ ಹುಡುಗಿಯನ್ನು ಹಿಡಿದ. ನಾನಿನ್ನು ಫೋನ್

ಮಾಡಲಾರೆ...ಒಂದೇ ಒಂದು ಸಲ ಮಾತ್ರ."

"ಫೋನಿನಲ್ಲಿ ಹೀಗೆ ರೋಫ್ ಹಾಕುತ್ತಿ...ಎದುರಿಗೆ ಬಂದಾಗ ನಡುಗುತ್ತಿ ...ಯಾಕೆ?''

"ಎದುರಿಗೆ ಸಿಕ್ಕಿದಾಗ ಮಾತನಾಡಲು ಭಯಪಡುವವರೇ ಹೀಗೆ ಫೋನಿನಲ್ಲಿ ಮಾತನಾಡುವುದು."

''ನೀನು ಹೇಳಲಿಲ್ಲ. ನಾನೇ ಹೇಳಿದೆನೆಂದಿಟ್ಟುಕೋ. ಆದರೂ ಕೈಹಿಡಿಯುತ್ತಿದ್ದಂತೆಯೇ ನಡುಗುತ್ತಿ''

"ಅದನ್ನು 'ನಡುಗುವುದು' ಎನ್ನುವುದಿಲ್ಲ... 'ಕಂಪನ' ಅನ್ನುತ್ತಾರೆ"

''ಮೈಗಾಡ್...ಕೈ ಹಿಡಿದರೇನೇ ಸಾಬೂನಿನಿಂದ ಸ್ನಾನಮಾಡುವ ಹುಡುಗಿಯಾ ಹೀಗೆ ಮಾತನಾಡುತ್ತಿರುವುದು?''

"ಹುಡುಗಿಯರು ಸ್ನಾನ ಮಾಡುವುದಿಲ್ಲವೆಂಬ ದುರಭಿಪ್ರಾಯವಿದ್ದಂತಿದೆಯಲ್ಲಾ ನಿಮಗೆ!

"...ಸ್ನಾನ ಮಾಡಿದ ವಿಷಯ ನಿಜವೇ ಆದರೂ ಸ್ನಾನ ಮಾಡುವುದಕ್ಕಿಂತ ಮುಂಚೆ, ನೀವು ಹಿಡಿದಿದ್ದ ಕೈಯನ್ನು 16,832 ಸಲ ಚುಂಬಿಸಿದ್ದೆ. ಪ್ಸ್...ಪ್ಸ್.. ಪ್ಸ್...ಹೀಗೇ"

ವಿಹಾರಿ ಚಕ್ಕನೇ ಎದ್ದು, ''ನಾನಿನ್ನು ಇರಲಾರೆ. ಈಗಲೇ ಬರುತ್ತೇನೆ" ಅಂದ. ಅವನಿಗೆ ಆವೇಶಕ್ಕಿಂತಲೂ–ತನ್ನನ್ನು ಇಷ್ಟೊಂದು ಪೀಡಿಸುತ್ತಾ, ಕಂಡಾಗ ಮುಗ್ಧತೆ ನಟಿಸುವ ಆ ಹುಡುಗಿಯ ಮೇಲೆ ತುಂಬಾ ಸಿಟ್ಟಿತ್ತು, ಹಾಗೋ–ಹೀಗೋ ನಿರ್ಧರಿಸಿ ಬಿಡಬೇಕೆಂದು ಕೊಂಡ.

''ನೋಡು ಹುಡುಗಾ! ತುಂಬಾ ಹುಡುಗಿಯರು ಮುಖಕ್ಕೆ ಮೇಕಪ್ ಮಾಡಿಕೊಂಡಂತೆ ಮನಸ್ಸುಗಳಿಗೂ ಮೇಕಪ್ ಮಾಡಿಕೊಂಡಿರುತ್ತಾರೆ. ಶೋಧಿಸಿ ಸಾಧಿಸಬೇಕು. ಅದೇ ಧೀರಗುಣ ಎಂದಿದ್ದಾನೊಬ್ಬ ಕವಿ."

"ಶೋಧನೆಯೂ ಇಲ್ಲ: ಸಾಧನೆಯೂ ಇಲ್ಲ, ನಾಳೆ ನೋಡ್ಕೊತೀನಿ''

''ನಾಳೆಯವರೆಗೂ ಏಕೆ? ಇವತ್ತು ಸರಿಯಾಗಿ 6 ಗಂಟೆಗೆ ಪ್ರೇಂನಗರ್ ಜಂಕ್ಷನ್ ಬಳಿ ಬಂದರೆ ನಾಲ್ಕು ಜನರ ಮುಂದೆ ನಿಜವಾಗಿಯೂ ಚುಂಬಿಸುತ್ತೇನೆ.''

ವಿಹಾರಿ ಬೆಚ್ಚಿಬಿದ್ದು "ಅಷ್ಟು ಧೈರ್ಯವಿದೆಯೆ?'' ಎಂದು ಕೇಳಿದ.

''ಬಂದು ನೋಡು ತಿಳಿಯುತ್ತದೆ. ಅಂದಹಾಗೆ ನನ್ನನ್ನು ಗುರುತಿಸುತ್ತೀಯೋ ಇಲ್ಲವೋ–ಕೇವಲ 2 ನಿಮಿಷ ಮಾತ್ರ ಇರುತ್ತೇನೆ. ಹ್ವಾ ವೈಟ್ ಡ್ರೆಸ್ಸಿನಲ್ಲಿರುತ್ತೇನೆ'' ಫೋನ್ ಕಟ್ ಆಯಿತು.

"ಯಾವ ಡ್ರೆಸ್ಸೂ ಇಲ್ಲದಿದ್ದರೂ ಕಂಡು ಹಿಡಿಯಬಲ್ಲೆ" ಫೋನನ್ನು ಸಿಟ್ಟಿನಿಂದ ಕುಕ್ಕಿಬಿಟ್ಟ.

* * * *

ಆ ಸಂಜೆ ಅವನು ಆರುಗಂಟೆಗೆ ಸರಿಯಾಗಿ ಪ್ರೇಂನಗರ್ ಜಂಕ್ಷನ್‌ಗೆ ಹೋಗಿ ಟೆನ್ಷನ್‌ನಿಂದ ಕಾಯತೊಡಗಿದ.

ರಸ್ತೆ ತುಂಬಾ ಸಂಚಾರ.

ಸುನಾದಮಾಲ ಎರಡು ನಿಮಿಷಗಳ ಕಾಲ ಮಾತ್ರ ಇರುತ್ತೇನೆಂದಿದ್ದಳು. ಅಷ್ಟು ಸಮಯ ಸಾಕು. ಅವನು ಎಲ್ಲಾ ದಿಕ್ಕುಗಳತ್ತಲೂ ನೋಡುತ್ತಾ ನಿಂತ. ರಸ್ತೆಯಲ್ಲಿ ಹೆಂಗಸರು ಹೆಚ್ಚಿಲ್ಲ. ದೇವಸ್ಥಾನದ ಗಂಟೆ ಶಬ್ದ ಮಾಡುತ್ತಿತ್ತು. ದೂರದಲ್ಲಿ ಚರ್ಚ್ ಕಾಣುತ್ತಿತ್ತು. ಕಾನ್ವೆಂಟ್‌ನಿಂದ ಮಕ್ಕಳು ಎನ್.ಸಿ.ಸಿ. ಮುಗಿಸಿಕೊಂಡು ಬರುತ್ತಿದ್ದವು. ಮತ್ತೊಂದು ಕಡೆ ನರ್ಸ್ ಕ್ವಾರ್ಟರ್ಸ್ ಇತ್ತು. ಚರ್ಚ್‌ನಿಂದ ಹೊರಬರುತ್ತಿದ್ದ ನನ್ಸ್ ಕಾಣುತ್ತಿದ್ದರು.

ಅವನು ನೆಟ್ಟಗೆ ನಿಂತ.

ಎಲ್ಲರೂ ಬಿಳಿಯುಡಿಗೆಯಲ್ಲೇ ಇದ್ದರು.

ಎರಡು ನಿಮಿಷಗಳಲ್ಲಿ ಅಲ್ಲೆಲ್ಲಾ ಬಿಳುಪು ಪಸರಿಸಿತ್ತು. ಅವನು ಗಲಿಬಿಲಿಗೊಂಡ. ಹದಿಮೂರು ವರ್ಷದ ಎನ್. ಸಿ. ಸಿ. ಹುಡುಗಿಯರಿಂದ, ಅರವತ್ತು ವರ್ಷದ ಮುದುಕಿಯರ ವರೆಗೂ ಎಲ್ಲರೂ ಬಿಳಿ ಬಟ್ಟೆಗಳನ್ನೇ ಧರಿಸಿದ್ದರು.

ಆ ಗುಂಪಿನಲ್ಲಿ,

ಅವನ ತೀಕ್ಷ್ಣವಾದ ಕಣ್ಣುಗಳು ಗುರುತಿಸಿದವು. ಬಿಳಿ ಸೀರೆಯಲ್ಲಿ ಬರುತ್ತಿದ್ದಾಳೆ. ಆದರೆ ಅಲ್ಲಿ ಬರುತ್ತಿದ್ದುದು ಸುನಾದಮಾಲ ಅಲ್ಲ: ಅವಳ ಅಜ್ಜಿ!

ಕೈಯ್ಯಲ್ಲಿ ತೆಂಗಿನಕಾಯಿಗಳನ್ನು ಹಿಡಿದು ಬರುತ್ತಿದ್ದಳು, ಅವನು ಆಕೆಯೆಡೆಗೆ ಬೇಗ ಬೇಗನೆ ಹೆಜ್ಜೆ ಹಾಕಿದ.

''ಚೆನ್ನಾಗಿದ್ದೀಯಾಪ್ಪಾ?'' ಕೇಳಿದಳು.

''ಚೆನ್ನಾಗಿದೀನಿ... ನಿಮ್ಮ ಹುಡುಗಿ ಚೆನ್ನಾಗಿದಾಳಾ?"

"ಚೆನ್ನಾಗೇ ಇದಾಳಪ್ಪಾ''

ಅವನು ಕೋಪವನ್ನು ನುಂಗಿಕೊಂಡು. ''ನೀವು ಪ್ರತಿದಿನವೂ ಇದೇ ಸಮಯಕ್ಕೆ ದೇವಸ್ಥಾನಕ್ಕೆ ಬರುತ್ತೀರಾ?" ಎಂದು ಕೇಳಿದ.

"ಅಬ್ಬಾ! ಇಷ್ಟು ದೂರ ದಿನಾ ನನ್ಕೈಲಿ ಬರೋಕ್ಕಾಗಲ್ಲಪ್ಪಾ..... ನೆನ್ನೆ

ನಡೆದದ್ದಕ್ಕೆ! ನನ್ನ ಮೊಮ್ಮಗಳು ತುಂಬಾ ಹೆದರಿ ದೇವರಿಗೆ ಹರಕೆ ಹೊತ್ತಿದ್ದಳಂತೆ. ಅದನ್ನು ತೀರಿಸಲು ನನ್ನನ್ನು ಕಳುಹಿಸಿದ್ದಳು. ತೆಂಗಿನಕಾಯಿ ಒಡೆಸಿಕೊಂಡು ಬಂದೆ.''

ಸುನಾದಮಾಲ ತನ್ನನ್ನು ಹೇಗೆ ಫೂಲ್ ಮಾಡಿದಳೆಂದು ಅವನಿಗನ್ನಿಸಿತು.

"ನಾಳೆ ನಿಮ್ಮ ಮೊಮ್ಮಗಳು ಕಾಲೇಜಿಗೆ ಬರುತ್ತಾಳೆ ತಾನೆ?''

"ಶಾಲೆ ಇದೆ...ಯಾಕೆ ಹಾಗೆ ಕೇಳ್ತಿದ್ದಿ ?"

"ಅಬ್ಬಾ ಏನಿಲ್ಲ...ಬರ್ತೀನಿ ನಾನು...''

ಅವನು ಸಿಟ್ಟಿನಿಂದ ಬಂದವನೇ ಕಾರಿನಲ್ಲಿ ಕುಳಿತು ವೇಗವಾಗಿ ಅಲ್ಲಿಂದ ಹೊರಟ.

ಅವನು ಕಾಲು ಗಂಟೆಯ ಕಾಲ ಕಾರಿನಲ್ಲೇ ಕುಳಿತು ಅತ್ತಿತ್ತ ನೋಡಿದ್ದನ್ನು, ನಂತರ ಯಾರೋ ಮುದುಕಿಯೊಡನೆ ಮಾತನಾಡಿದ್ದನ್ನು ಪ್ರವಲ್ಲಿಕ ದೂರದಲ್ಲಿ ನಿಂತು ನೋಡಿದಳು. ಅವಳಿಗೆ ಏನೂ ಅರ್ಥವಾಗಲಿಲ್ಲ. ಅವನು ಸಿಟ್ಟಿನಿಂದ ಹೊರಟು ಹೋದಮೇಲೆ ಕೈಯಲ್ಲಿ ಬೈನಾಕ್ಯುಲರ್ಸನ್ನು ಪಕ್ಕದಲ್ಲಿ ಸೀಟಿನ ಮೇಲೆ ಹಾಕಿ, ತನ್ನಲ್ಲೇ ತಾನು ನಗುತ್ತಾ ಕಾರನ್ನು ಸ್ಟಾರ್ಟ್ ಮಾಡಿದಳು.

ಅವಳೂ ಬಿಳಿ ಸೀರೆಯಲ್ಲಿದ್ದಳು.

* * * *

"ನೆನ್ನೆ ಉಡುತ್ತೇನೆಂದು ಹೇಳಿದ್ದ ಸೀರೆಯನ್ನು ಇವತ್ತೂ ಉಟ್ಟಿದ್ದೀಯಲ್ಲಾ ?"

ಸುನಾದಮಾಲ ಬೆಚ್ಚಿಬಿದ್ದು ಕೈಯಲ್ಲಿದ್ದ ಪುಸ್ತಕಗಳನ್ನು ಬಿಟ್ಟುಬಿಟ್ಟಳು. ಹುಡುಗಿಯರು ಗುಂಪು ಗುಂಪಾಗಿ ಬರುತ್ತಿದ್ದರು.

''ಈ ದಿನ ಎರಡರಲ್ಲೊಂದು ತೀರ್ಮಾನ ಮಾಡೋಣಾಂತ ಬಂದೆ" ನಿಶ್ಚಿತವಾಗಿ ಹೇಳಿದ. ಅವಳು ನಡುಗುವ ಕೈಗಳಿಂದ ಪುಸ್ತಕಗಳನ್ನು ಜೋಡಿಸಿಕೊಳ್ಳುತ್ತಾ ''ಪ್ಲೀಸ್ ನನ್ನ ತಂಟೆಗೆ ಬರಬೇಡಿ" ಅಂದಳು.

"ತುಂಬಾ ಚೆನ್ನಾಗಿ ನಟಿಸ್ತೀಯ.. ಮೊದಲು ಬರೀ ಮಣ್ಣಿನ ಮೆದುಳು ಅಂದುಕೊಂಡಿದ್ದೆ; ಅಲ್ಲವೆಂದು ನಿರೂಪಿಸಿದ್ದಿ. ಇನ್ನೂ ಏಕೆ ಈ ಮುಸುಕಿನಲ್ಲೇ ಗುದ್ದಾಟ?"

"ನೋಡಿ! ನಾನು ಅಂತಹವಳಲ್ಲವೆಂದು ಹೇಳಿದೆನಲ್ಲಾ" ಅವನು ಎರಡೂ ಕೈಗಳನ್ನು ಜೋಡಿಸಿ, ''ನೀನು ಸೋತೆಯೆಂದು ಒಪ್ಪಿಕೋ" ಅಂದ.

ಅವಳು ಏನೂ ಮಾತನಾಡದೆ ಮುಂದಕ್ಕೆ ನಡೆದಳು.

"ನನಗೆ ನನ್ನ ನೀನು ಚುಂಬಿಸುತ್ತೇನೆಂದು ಹೇಳಿದ್ದೆಯಲ್ಲಾ......ನಾನೇ ಈ ನಡು ರಸ್ತೆಯಲ್ಲಿ ಆ ಕೆಲಸ ಮಾಡಿಬಿಡುತ್ತೇನೆ,"

ಅವಳು ಸ್ತಂಭೀಭೂತಳಾಗಿ ನಿಂತುಬಿಟ್ಟಳು.

"ಸಾರಿ ನಾನೊಬ್ಬ ಅನಾಗರೀಕನೆಂದುಕೊಂಡಿದ್ದೆ. ನನ್ನ ಉದ್ದೇಶ–ಫೋನ್ ಮಾಡುತ್ತಿರುವುದು ನೀನೇ ಎಂದು ನನಗೆ ತಿಳಿದುಬಿಟ್ಟಿದೆ. ಅದನ್ನು ನೀನು ನನ್ನ ತೂಕದ ಬಗ್ಗೆ ಹೇಳಿದಾಗಲೇ ಗೊತ್ತಾಯಿತು."

ಅವಳು ಬಿಳಿಚಿಕೊಂಡು, "ತೂಕ...ತೂಕ!" ಎಂದು ಗೊಣಗಿದಳು.

"ತೂಕ ಹೇಳಲಿಲ್ಲವಾ? ಆ ನಿನ್ನ ಕೈಯನ್ನು ಎಷ್ಟು ಸಲ ಚುಂಬಿಸಿಕೊಂಡಿ ಎಂದೂ ಹೇಳಲಿಲ್ಲವಾ?"

ಇದ್ದಕ್ಕಿದ್ದಂತೆಯೇ ಅವಳು ಅಳಲು ಪ್ರಾರಂಭಿಸಿದಳು.

ರಸ್ತೆಯ ಮೇಲೆ ಜನರೆಲ್ಲಾ ಗುಂಪುಗೂಡಿದರು.

ಕೆಲ, ಕೆಲವು ಘಟನೆಗಳಿಗೆ ಲಿಂಕುಗಳಿರುವುದಿಲ್ಲ. ಎಲ್ಲಿಯೋ ಪ್ರಾರಂಭವಾಗಿ ಎಲ್ಲಿಯೋ ಪೂರ್ತಿಯಾಗುತ್ತದೆ. ಅಂತಹ ಘಟನೆಯೇ ಇಂದು ವಿಹಾರಿಗೆ ನಡೆಯಿತು. ಅವನು ಸಾಮಾನ್ಯವಾಗಿ ಡ್ರಿಂಕ್ಸ್ ತೆಗೆದುಕೊಳ್ಳುವುದಿಲ್ಲ. ಆದರೆ ಅಂದೇಕೋ ಅವನಿಗೆ ಬಾರ್‌ಗೆ ಹೋಗಬೇಕೆನಿಸಿತು.

ಅವನ ಮನಸ್ಸು ಡೋಲಾಯಮಾನವಾಗಿತ್ತು. ಪ್ರವಲ್ಲಿಕಳ ಸಾಮಿಪ್ಯ ಅವನಿಗೆಷ್ಟೋ ಹಾಯೆನ್ನಿಸುತ್ತದೆ. ಮುಖ್ಯಮಂತ್ರಿಗಳ ಛೇಂಬರ್‌ನಿಂದ ಹೊರ ಬರುತ್ತಾ ಅವಳು ತೋರಿದ ಗಾಂಭೀರ್ಯ ಅವನಿಗೆ ಅವಳು ತನಗೆಷ್ಟೋ ಹತ್ತಿರವೆಂಬ ಭಾವನೆಯನ್ನು ಉಂಟುಮಾಡಿತ್ತು.

ಆ ಗ್ರೇಸ್ ಸಾಮಾನ್ಯವಾಗಿ ಸಂಬಂಧಪಡದವರಿಗೆ ಇರುವುದಿಲ್ಲ. ಅವಳನ್ನು ಮದುವೆಯಾಗುವವನು ಅದೃಷ್ಟವಂತ. ಅಷ್ಟೇ! ಅವನ ಆಲೋಚನೆ ಅಲ್ಲಿಯವರೆಗೂ ಬಂದು ನಿಂತು ಬಿಡುತ್ತದೆ. ಪ್ರತಿಸಲವೂ ಅವಳನ್ನು ಮದುವೆಯಾಗಲಿರುವ ಗಂಡು ನೆನಪಾಗುತ್ತಾನೆ. ಬಲವಂತವಾಗಿ ತನ್ನ ಯೋಚನೆಗಳನ್ನು ಅದುಮಿಕೊಳ್ಳುತ್ತಾನೆ.

ಈ ಸಲ ಸುನಾದಮಾಲ ನೆನಪಾಗುತ್ತಿದ್ದಾಳೆ. ಸ್ಟೇಜಿನ ಮೇಲೆ ಅವಳನ್ನು ಕಂಡು ಮೊದಲ ನೋಟಕ್ಕೆ ಅವಳ ಅದ್ಭುತವಾದ ಸೌಂದರ್ಯಕ್ಕೆ ಮುಗ್ಧನಾ-ಗಿದ್ದ. ನಂತರ ಅವಳ ಪುಕ್ಕಲುತನ, ಹೆದರಿಕೆ ಕಂಡು ಸುಮ್ಮನೆ ಹೆದರಿಸುತ್ತಿದ್ದನಾಗಲೀ ಪ್ರತ್ಯೇಕವಾದ ಪ್ರೀತಿಯಾಗಲೀ, ಅಭಿಪ್ರಾಯವಾಗಲೀ ಏನನ್ನೂ ಬೆಳೆಸಿಕೊಳ್ಳಲಿಲ್ಲ. ಆದರೆ ಒಂದೇ ಸಮನೆ ಅವಳಿಂದ ಫೋನ್‌ಕಾಲ್‌ಗಳು ಬಂದು, ಅವಳ

ಬುದ್ಧಿವಂತಿಕೆ ಅದರ ಮೂಲಕ ತಿಳಿಯುತ್ತಿದ್ದಂತೆಯೇ. ಅವಳ ಬಗ್ಗೆ ಅಭಿಮಾನ, "ನಿನ್ನನ್ನು ಪ್ರೀತಿಸುತ್ತಿದ್ದೀನಿ'' ಎಂದು ಅವಳಿಂದ ಅನ್ನಿಸಿಕೊಳ್ಳಬೇಕೆಂಬ ಹಠ ಹೆಚ್ಚಾಯಿತು.

ಒಬ್ಬ ವ್ಯಕ್ತಿ ಒಮ್ಮೆಗೇ ಇಬ್ಬರನ್ನು ಪ್ರೀತಿಸಬಲ್ಲನಾ ಅಂದರೆ...ಕಥೆಗಾರರು, ಪವಿತ್ರ ಸಂಘ ಸದಸ್ಯರು, ಸಾಮಾಜಿಕ ತಜ್ಞರು, "ಇಲ್ಲಾ...ಇಲ್ಲಾ, ಅದು ಅಸಂಭವ"ವೆಂದು ಒತ್ತಿ ಒತ್ತಿ ಹೇಳುತ್ತಾರಾದರೂ ಮನಸ್ಸು ನಿಯಮ, ನಿಬಂಧನೆಗಳಿಗೆ ಅತೀತವಲ್ಲವೇ? ಅದು ಕೋತಿಯಂತೆ. 'ಇಬ್ಬರನ್ನು ಒಂದೇ ಸಲ ಪ್ರೀತಿಸುವ ಪರಿಸ್ಥಿತಿ ನನಗೆಂದೂ ಬಂದಿರಲಿಲ್ಲ'ವೆಂದು ಯಾರಾದರೂ ಹೇಳಿದರೆ, ಅವರನ್ನು ಈರ್ಷ್ಯೆಯಿಂದ ನೋಡುವ ಸ್ಥಿತಿಗೆ ಬಂದಿದ್ದ ವಿಹಾರಿ. ಅವನು ಸಂಸ್ಕಾರವಂತನಾದ್ದರಿಂದ ಪ್ರವಲ್ಲಿಕಳ ಮೇಲಿದ್ದ ಪ್ರೀತಿಯನ್ನು ತನ್ನಲ್ಲೇ ಅಡಗಿಸಿಕೊಂಡು ಕಷ್ಟಪಡುತ್ತಿದ್ದ. ಅಷ್ಟರಲ್ಲಿ ಸುನಾದಮಾಲ ಕ್ರಮೇಣ ಅವನ ಹೃದಯವನ್ನು ಆಕ್ರಮಿಸಿಕೊಂಡಳು. ಅದೇನೇ ಆದರೂ ಅವನಂದು ಒಂಟಿಯಾಗಿ ಬಾರಿನಲ್ಲಿ ಕುಳಿತುಕೊಳ್ಳಲು ಕಾರಣ ಆ ಎರಡು ಹೆಣ್ಣುಗಳೇ!

ಬಿಲ್ಲನ್ನು ಪೇ ಮಾಡುತ್ತಿದ್ದ ವಿಹಾರಿಯ ಕಣ್ಣಿಗೆ ಬಾರಿನಲ್ಲಿ ಕುಳಿತಿದ್ದ ಒಬ್ಬ ವಿದೇಶೀಯ ಕಂಡ. ಅವನು ಪೂರ್ತಿಯಾಗಿ ಅತ್ತ ಪಶ್ಚಿಮ ದೇಶಗಳಿಗೂ ಸಂಬಂಧಿಸಿದವನಲ್ಲ; ಇತ್ತ ರಷ್ಯ, ಚೈನಗಳಿಗೂ ಸಂಬಂಧಿಸಿದವನಲ್ಲ-ಕ್ರಾಸ್ ಬ್ರೀಡ್‌ನಂತಿದ್ದಾನೆ. ಅವನನ್ನು ಸೂಕ್ಷ್ಮವಾಗಿ ಗಮನಿಸಿ ಕಣ್ಣನ್ನು ತಿರುಗಿಸುತ್ತಿದ್ದಂತೆಯೇ ಮತ್ತೊಬ್ಬ ವ್ಯಕ್ತಿ ಬಂದು ಅವನನ್ನು ಮಾತನಾಡಿಸಲು ಪ್ರಾರಂಭಿಸಿದ.

ಆ ವ್ಯಕ್ತಿಯನ್ನು ಕಂಡ ವಿಹಾರಿ ಬೆಚ್ಚಿಬಿದ್ದ.

ಕಾಡಿನೊಳಗೆ ತನ್ನನ್ನು ಕರೆದೊಯ್ದ ಟೆರ್ರರಿಸ್ಟ್‌ಗಳಲ್ಲಿ ಒಬ್ಬ!

ಅವನು ಅವರ ಕಣ್ಣಿಗೆ ಬೀಳದಂತೆ ಕಂಬವೊಂದರ ಮರೆಯಲ್ಲಿ ನಿಂತು. ಅವರ ಮಾತುಗಳನ್ನು ಕೇಳಿಸಿಕೊಳ್ಳಲು ಪ್ರಯತ್ನಿಸಿದ. ಮಾತಿನ ಮಧ್ಯೆ ಆ ವಿದೇಶೀಯನ ಹೆಸರು ಕೇಳಿಸಿತು. ಅದು ಮತ್ತೊಂದು ಷಾಕು! ಅವನ ಹೆಸರು ರಾಮೋನ್ ಹಾರ್ಸಾಸೇ!! ವಿಹಾರಿಗೆ ಪೇಪರ್ ನಾಲೆಡ್ಜ್ ಇದೆ. ಪೂರ್ವ ದ್ವೀಪಗಳಲ್ಲಿ ತಿರುಗಾಡುತ್ತಾ ಕ್ರಾಂತಿಯೆಬ್ಬಿಸಲು ಪ್ರಯತ್ನಿಸುತ್ತಿದ್ದ ಕರ್ನಲ್ ಇಲ್ಲಿ ಫೈವ್ ಸ್ಟಾರ್ ಬಾರಿನಲ್ಲಿ...ಅತಿ ಸಾಮಾನ್ಯನಾಗಿ...

ಅವನ ಪಕ್ಕದಿಂದಲೇ ಹೋಗಿ ರಿಸೆಪ್ಷನ್‌ನಿಂದ ಪ್ರವಲ್ಲಿಕಳಿಗೆ ಫೋನ್ ಮಾಡಿದ. ತಮ್ಮನ್ನು ಸಾಯಿಸಲು ಪ್ರಯತ್ನಿಸಿ ಆಳವಾದ ಕಮರಿಗೆ ಬಿದ್ದ ಟೆರ್ರ-ರಿಸ್ಟ್ ಕಂಡನೆಂದ ಕೂಡಲೇ ಅವಳು ತುಂಬ ಎಗ್ಸೈಟ್ ಆದಳು. ಉದ್ವೇಗದಿಂದಲೇ ಏನನ್ನೂ ಯೋಚಿಸದೆ ಅಲ್ಲೇ ಇರಿ, ಬಂದು ಬಿಡುತ್ತೇನೆಂದು ಹೇಳಿ

ಹೊರಟಳು,

ಅವಳಲ್ಲಿಗೆ ಸೇರುವಷ್ಟರಲ್ಲಿ ರಾಮೋನ್ ಹಾರ್ಸಾಸೆ ಮೇಲೆದ್ದು ಆ ಟೆರ್ರ-ರಿಸ್ಟ್‌ಗೆ ಷೇಕ್‌ಹ್ಯಾಂಡ್ ಕೊಟ್ಟು ಹೊರಗೆ ನಡೆದ. ಹೀಗೆ ನಡೆಯುತ್ತದೆಂದು ಅವಳಂದುಕೊಳ್ಳಲಿಲ್ಲ. ಫೋನಿನಲ್ಲಿ ಸೂಚನೆ ನೀಡಿದಾಗ ವಿಹಾರಿ ಇಕ್ಕಟ್ಟಿನಲ್ಲಿ ಸಿಕ್ಕಿಕೊಂಡ. ಅವನನ್ನು ಫಾಲೋ ಮಾಡಬೇಕೋ ಅಲ್ಲಿಯೇ ಇರಬೇಕೋ ತಿಳಿಯ ಲಿಲ್ಲ. ಅದೇ ಸಮಯಕ್ಕೆ ಅವನು ಮತ್ತೊಂದು ಪೆಗ್ ತರಿಸಿಕೊಂಡ. ಅಂದರೆ ಇನ್ನೂ ಕಾಲು ಗಂಟೆಯಾದರೂ ಇರುತ್ತಾನೆಂದುಕೊಂಡು ರಾಮೋನ್ ಹಾರ್ಸಾಸೇ ಯನ್ನು ಅನುಸರಿಸುವ ನಿರ್ಧಾರಮಾಡಿಕೊಂಡ. ಹೊರಬಂದು ಅವನನ್ನು ಫಾಲೋ ಮಾಡಿದ.

ವಿಹಾರಿ ಸಾಮಾನ್ಯ ಪ್ರಜೆ. ಅವನಿಗೆ ಪರಿಶೋಧನೆ ಪದ್ಧತಿಗಳು ಗೊತ್ತಿಲ್ಲ. ಅದೇ ಇನ್ನೊಬ್ಬ ಸಿ.ಬಿ.ಐ. ಆಫೀಸರ್ ಆಗಿದ್ದಿದ್ದರೆ, ಕೈಗೆ ಸಿಕ್ಕಿದ ಟೆರ್ರರಿಸ್ಟ್ ನನ್ನು ಬಿಡುತ್ತಿರಲಿಲ್ಲ. ಹಾರ್ಸಾಸೇನನ್ನೇ ಬಿಡುತ್ತಿದ್ದ. ತಿಳಿಯದೆ ಮಾಡಿದರೂ ವಿಹಾರಿ ರಾಮೋನ್‌ನನ್ನು ಅನುಸರಿಸಿದ್ದೇ ಒಳ್ಳೆಯದಾಯಿತು.

ಅವನು ಹೊರಟು ಹೋದ ಹತ್ತು ನಿಮಿಷಕ್ಕೆ ಪ್ರವಲ್ಲಿಕ ಮಫ್ತಿಯಲ್ಲಿದ್ದ ಆರೇಳು ಜನ ಸಿ.ಬಿ.ಐ. ಅಫೀಸರುಗಳೊಡನೆ ಆ ಬಾರಿನ ಬಳಿಗೆ ಬಂದಳು. ಒಳ ಗಿದ್ದವನನ್ನು ಅರೆಸ್ಟ್ ಮಾಡಲು ಅವಳಿಗಿಷ್ಟವಿರಲಿಲ್ಲ. ಅವನ ಮೂಲಕ ಬೇಕಾದ ವ್ಯಕ್ತಿಯನ್ನು ಹಿಡಿಯಬೇಕೆಂದು ಅವಳ ಉದ್ದೇಶ, ಹೊರಗೇ ಕಾಯತೊಡಗಿ ದಳು.

ಒಂದು ಗಂಟೆಯ ನಂತರ ಅವನು ಹೊರಬಂದ. ಆಫೀಸರುಗಳು ನಿಶ್ಶಬ್ದ ವಾಗಿ ಅವನನ್ನು ಫಾಲೋ ಮಾಡಿದರು. "ದೀನ ಜನರ ರಕ್ಷಕ ಸಮಿತಿ" ಆಶ್ರಮ ದೊಳಗೆ ಅವನು ಪ್ರವೇಶಿಸಿದ. ಅವಳಿಗೆ ಆಶ್ಚರ್ಯವಾಯಿತು. ಆ ಟ್ರಸ್ಟಿಗೆ ಅನಂತಾನಂತಸ್ವಾಮಿ ಮ್ಯಾನೇಜರೆಂದು ಅವಳಿಗೆ ಗೊತ್ತು. ತುಂಬಾ ಅವಶ್ಯಕತೆ ಯಿಲ್ಲದೆ ಆ ಟೆರ್ರರಿಸ್ಟ್ ಇಲ್ಲಿಗೆ ಬರಲಾರ. ಏನೋ ವ್ಯವಹಾರ ನಡೆಯುತ್ತಿದೆ ಯೆಂದಂತಾಯಿತು.

ಏನದು?

ಅವಳು ಅದರ ಬಗ್ಗೆ ಹೆಚ್ಚು ಯೋಚಿಸದೆ ಆಫೀಸರುಗಳಿಗೆ ಸೂಚನೆ ನೀಡುತ್ತಿದ್ದಳು.

ಸ್ಟೇಜಿನ ಮೇಲೆ ಸ್ವಾಮಿ–ಮೆಟ್ಟಿಲಿನ ಮೇಲೆ ನಿಸ್ಸಹಾಯಕಳಾಗಿ ಬಿದ್ದಿದ್ದ ಪ್ರವಲ್ಲಿಕ ಇಬ್ಬರೇ ಅಲ್ಲುಳಿದರು. ಅವಳು ಮುದುಡಿ ಮಲಗಿದ್ದಳು. ಅವಳಿಗೆ ಜ್ಞಾನ ತಪ್ಪಿತ್ತು. ಅವಳಿಗೆ ಸ್ವಲ್ಪ ಎಚ್ಚರವಾಗುತ್ತಿದ್ದಂತೆಯೇ ಸ್ವಾಮಿ ಅವಳ

ಸುಮಾರು ಹತ್ತು ನಿಮಿಷಗಳ ನಂತರ ಅವರಿಗೆ ಬೇಕಾದ್ದು ಸಿಕ್ಕಿತು. ಆಯುಧಗಳ ಪೆಟ್ಟಿಗೆ–ಸಣ್ಣದು. ಒಂದೆರಡು ಲಕ್ಷ ಬೆಲೆಬಾಳುವ ಆಯುಧಗಳಿರ ಬಹುದು ಅದರಲ್ಲಿ.

ಆಶ್ರಮವನ್ನು ಸುತ್ತುಗಟ್ಟಿ ಎರಡು ನಿಮಿಷಗಳಲ್ಲೇ ಅದನ್ನು ವಶಪಡಿಸಿ ಕೊಂಡರು. ಪ್ರತಿಭಟನೆಯೇನೂ ಇರಲಿಲ್ಲ. ಟೆರ್ರರಿಸ್ಟ್ ತಪ್ಪಿಸಿಕೊಂಡ, ಆದರೂ ಅವಳು ತಲೆಕೆಡಿಸಿಕೊಳ್ಳಲಿಲ್ಲ. ಸ್ವಾಮಿಗೆ ವಿರುದ್ಧವಾಗಿ ಸಾಕ್ಷಿ ಸಿಕ್ಕಿತು. ಅಷ್ಟು ಸಾಕು. ಇಷ್ಟು ವರ್ಷಗಳ ಶ್ರಮ ಫಲಿಸಲಿದೆ, ಇಷ್ಟು ವರ್ಷಗಳ ಹಗೆ ನೆರವೇರ ಲಿದೆ.

ಅವಳು ಡೆಲ್ಲಿಗೆ ಫೋನ್ ಮಾಡಿ ಹೋಂ ಮಿನಿಸ್ಟರ್ ಪರಿಸ್ಥಿತಿಯ ವಿವರಣೆ ನೀಡಿದಳು. ಆತ ಈ ಸುದ್ದಿ ಕೇಳಿ ಎಷ್ಟು ಗಲಿಬಿಲಿಗೊಂಡನೆಂದರೆ ಒಂದು ನಿಮಿಷ ಮೌನವಾಗಿದ್ದು ಬಿಟ್ಟ.

"ನೀವು...ನೀವು ಹೇಳುತ್ತಿರುವುದು ನಿಜಾತಾನೇ?"

"ನಿಜ ಸರ್. ಈ ಅನುಮಾನ ನನಗೆಂದಿನಿಂದಲೋ ಇತ್ತು. ಇವತ್ತಿಗೆ ರೆಡ್-ಹ್ಯಾಂಡಾಗಿ ಸಿಕ್ಕಿದ."

"ಅಲ್ಲಿ ಯಾರಾದರೂ ಸರಂಡರ್ ಆದರಾ?"

"ನಾಲ್ಕೈದು ಜನ ಬೈರಾಗಿಗಳು ಸಿಕ್ಕಿದ್ದಾರೆ. ಅವರಿಂದ ನಿಜ ಹೇಳಿಸ ಬೇಕು."

"ಎಚ್ಚರಿಕೆಯಿಂದ ಹ್ಯಾಂಡಲ್ ಮಾಡಿ."

ಅವಳು ಮನಸ್ಸಿನಲ್ಲೇ ಆತನಿಗೆ ಕೃತಜ್ಞತೆ ಅರ್ಪಿಸಿದಳು. ಪೊಲಿಟಿಕಲ್ ಪ್ರೆಷರ್ ಇಲ್ಲದಿದ್ದರೆ ಏನನ್ನಾದರೂ ಸರಿಪಡಿಸಬಹುದು.

ಆಗಿಂದಾಗ್ಗೆ ಅರೆಸ್ಟ್ ವಾರೆಂಟ್ ತಯಾರಿಸಿ, ಸ್ವತಃ ಆಫೀಸರುಗಳೊಡನೆ ಸ್ವಾಮಿ ಬಳಿಗೆ ಹೊರಟಳು. ಸ್ವಾಮಿ ತನ್ನ ಭವನದ ಅಂಗಳದಲ್ಲಿ ಉಪನ್ಯಾಸ ನೀಡುತ್ತಿದ್ದ. ಮನುಷ್ಯನಿಗೆ ಅಗತ್ಯವಾದ ಆಧ್ಯಾತ್ಮಿಕ ಚಿಂತನೆಯ ಬಗ್ಗೆ ವಿವರಿ ಸುತ್ತಿದ್ದ. ಭಕ್ತರೆಲ್ಲಾ ಆಸಕ್ತಿಯಿಂದ ಕೇಳುತ್ತಿದ್ದರು.

ಅವಳು ನೇರವಾಗಿ ಸ್ಟೇಜಿನ ಬಳಿಗೆ ಹೋಗಿ ಆರೆಸ್ಟ್ ವಾರೆಂಟ್ ತೋರಿ ಸಿದಳು. ಮತ್ತೊಬ್ಬ ಆಫೀಸರ್ ಬೇಡಿಗಳನ್ನು ಹೊರತೆಗೆದ. ಜನರಲ್ಲಿ ಕಲರವ ಪ್ರಾರಂಭವಾಯಿತು. ನಡೆದಿರುವುದೇನೆಂದು ತಿಳಿಸುವುದು ಅವಳ ಕರ್ತವ್ಯವೆಂದು ಭಾವಿಸಿ, ಅವಳು ಮೈಕನ್ನು ತೆಗೆದುಕೊಂಡು ಆಯುಧಗಳು ಸಿಕ್ಕಿದ ಬಗ್ಗೆ. ಸ್ವಾಮಿಯ ನಿಜ ಸ್ವರೂಪ ಎಲ್ಲವನ್ನೂ ವಿವರಿಸಿದಳು. ಜನರೆಲ್ಲಾ ದಿಗ್ಭ್ರಾಂತ ರಾಗಿ ಕೇಳುತ್ತಿದ್ದರು. ಅವರು ಕನಸಿನಲ್ಲಿಯೂ ಊಹಿಸದ ವಿಷಯ ಅದು.

ಆದರೂ ಕೂಡಾ ತಮ್ಮ ಆರಾಧ್ಯ ದೇವರು ಹಾಗೆ ಮಾಡಿದ್ದಾನೆಂದರೆ ನಂಬಲೇ ಸಿದ್ಧರಿಲ್ಲ. ಆ ಸಭೆಯಲ್ಲಿ ಗಾಢವಾದ ಮೌನ ಆವರಿಸಿತ್ತು.

ಸ್ವಾಮಿಯ ಮುಖದಲ್ಲಿ ಬದಲಾವಣೆಯಿರಲಿಲ್ಲ. ನಿರ್ವಿಕಾರನಾಗಿ ನೋಡುತ್ತಿದ್ದ.

''ಇಷ್ಟು ದಿನಕ್ಕೆ ನಿನ್‌ಮೇಲೆ ಸೇಡು ತೀರಿಸಿಕೊಳ್ಳುವ ಅವಕಾಶ ಸಿಕ್ಕಿತು. ಇನ್ನು ಯಾವ ಶಕ್ತಿಯೂ ನಿನ್ನನ್ನು ರಕ್ಷಿಸಲಾರದು; ನಡಿ" ಎಂದಳು.

"ಇನ್ನೊಂದು ನಿಮಿಷದಲ್ಲಿ ವರ್ಜ್ಯ ಹೋಗುತ್ತದೆ. 'ಅದು ವರೆವಿಗೂ ತಡೆಯಲಾರೆಯಾ ಬಾಲಿಕಾ'' ಸ್ವಾಮಿ ಕೇಳಿದ.

"ಅರೆಸ್ಟಿಗೆ ಕೂಡಾ ವರ್ಜ್ಯವೇನು? ನಡಿ!"

"ಗ್ರಹಗಳನ್ನು ನಿರ್ಲಕ್ಷ್ಯ ಮಾಡಿದರೆ ಚಿಂತಿಸುತ್ತಿ" ಎನ್ನುತ್ತಾ ಸ್ವಾಮಿ ಸ್ಟೇಜನ್ನು ಇಳಿದ. ಅದೇ ಸಮಯಕ್ಕೆ ಸರಿಯಾಗಿ ಒಂದು ಆಕಸ್ಮಿಕ ಘಟನೆ ನಡೆಯಿತು. ಸುಮಾರು ನಲ್ವತ್ತು ವರ್ಷದ ವ್ಯಕ್ತಿಯೊಬ್ಬ ಓಡೋಡಿ ಬಂದು ಸ್ವಾಮಿಯ ಕಾಲಿನ ಬಳಿ ಕುಸಿದು ಬಿದ್ದ.

"ರಕ್ಷಿಸಿ ಸ್ವಾಮಿ–ರಕ್ಷಿಸಿ"

''ಏನು ಮಗು, ಏನು ನಡೆಯಿತು'' ಗಂಭೀರವಾಗಿ ಕೇಳಿದ.

"ಪೋಲೀಸರು ಅರೆಸ್ಟ್ ಮಾಡುತ್ತಿದ್ದಾರೆ ಸ್ವಾಮಿ''

"ಏತಕ್ಕೆ?"

"ನಿಮ್ಮ ಆಶ್ರಮದಲ್ಲಿಡುವಂತೆ ನನಗೆ ಕೆಲವು ಆಯುಧಗಳನ್ನು ಕೊಟ್ಟರು. ಅವನ್ನು ಅವರು ತಿಳಿಸಿದಂತೆ ಇಡದಿದ್ದರೆ ಯಾವುದೋ ಒಂದು ಅಪರಾಧವನ್ನು ನನ್ನ ಮೇಲೆ ಹೊರಿಸಿ ವರ್ಷಾನುಗಟ್ಟಲೆ ಜೈಲಿನಲ್ಲಿರಿಸುವ ಬೆದರಿಕೆ ಹಾಕಿದರು.''

ಜನರಲ್ಲಿ ಒಮ್ಮೆಗೇ ಕಲರವ ಪ್ರಾರಂಭವಾಯಿತು. ಸ್ವಾಮಿ ಕೈಯೆತ್ತುತ್ತಿದ್ದಂತೆಯೇ ಕ್ರಮೇಣ ಧ್ವನಿಗಳು ಕಡಿಮೆಯಾದವು.

''ಏಳು ಮಗು! ಮನುಷ್ಯರಲ್ಲಿ ಪಾಪ ಬೆಳೆಯುತ್ತಿದ್ದಂತೆಯೇ, ಆ ಪಾಪವನ್ನು ಹೋಗಲಾಡಿಸುವ ನೆಪದಲ್ಲಿ ತಮ್ಮ ಖ್ಯಾತಿಯನ್ನು ಹೆಚ್ಚಿಸಿಕೊಳ್ಳಲು ಕೆಲವು ಅಧಿಕಾರಿಗಳು ಹೀಗೆ ಮಾಡುತ್ತಾರೆ. ಪಾಪ! ಪರಮ ಪೂಜನೀಯವೂ ಶಾಂತಿ ವನವೂ ಆದ ಈ ಆಶ್ರಮದಲ್ಲಿ ಆಯುಧಗಳನ್ನಿರಿಸಿ, ನಿಷ್ಕಳಂಕ ಚರಿತ್ರನಾದ ಸ್ವಾಮಿಯ ಮೇಲೆ ಅಪವಾದ ಹೊರಿಸುವಂತೆ ಪ್ರೋತ್ಸಾಹಿಸಿದ್ದು ಯಾರು?''

ಆ ವ್ಯಕ್ತಿ ಅತ್ತಿತ್ತ ನೋಡಿದ. ಅವನ ದೃಷ್ಟಿ ಪ್ರವಲ್ಲಿಕಳ ಮೇಲೆ ಬಿತ್ತು, ''ಈಕೆಯೇ ಸ್ವಾಮಿ" ಎಂದು ಪ್ರವಲ್ಲಿಕಳ ಕಡೆ ತೋರಿಸಿದ. ಒಂದೇ ನೇರವಾಗಿ

ಬಂದು ಡೀ ಹೊಡೆದಂತಾಯಿತು ಪ್ರವಲ್ಲಿಕಳಿಗೆ. ಸ್ವಾಮಿಯ ಪ್ರಾಬಲ್ಯ ಇಷ್ಟೊಂದು ವೇಗವಾಗಿ ಅನೂಹ್ಯವಾಗಿರುತ್ತದೆಂದು ಅವಳು ಊಹಿಸಿರಲಿಲ್ಲ, ಉಳಿದ ಆಫೀಸರುಗಳು ಕೂಡಾ ಆಶ್ಚರ್ಯಚಕಿತರಾದರು. ತಮ್ಮ ಕಣ್ಮುಂದೆಯೇ ಬೈರಾಗಿಗಳು ಗಡಗಡ ನಡುಗುತ್ತಾ ಓಡಿ ಅಡಗಿಕೊಂಡಿದ್ದನ್ನು ಎಲ್ಲರೂ ನೋಡಿದ್ದರು, ಆದರೆ ಅವರೆಲ್ಲಾ ಈಗ ಎದುರುಬೀಳುತ್ತಾರೆ, ತಮಗೇನೂ ಗೊತ್ತಿಲ್ಲವೆಂದು ಹೇಳುತ್ತಾರೆ, ಕೇವಲ ಸ್ವಾಮಿಯನ್ನು ನೋಟೋರಿಯಸ್ ಮಾಡಲು ಸಿ.ಬಿ.ಐ. ಆಡಿದ ನಾಟಕವೆಂದು ಪತ್ರಿಕೆಗಳು ವರ್ಣಿಸುತ್ತವೆ. ಪತ್ರಿಕೆಗಳು ಸ್ವಾಮಿಯ ಮಾತನ್ನು ನಂಬೇ ನಂಬುತ್ತವೆ. ಇದರಿಂದ, ನೋಡು ನೋಡುತ್ತಾ ಯಾವ ಸರ್ಕಾರ ಪ್ರಜೆಗಳಿಂದ ದೂರವಾಗಲು ಸಿದ್ಧವಿರುತ್ತದೆ? ಡಿಪಾರ್ಟ್‌ಮೆಂಟ್ ಮೇಲೆ ಕ್ರಮ ತೆಗೆದುಕೊಳ್ಳುತ್ತಾರೆ.

ಸ್ವಾಮಿ ಹೇಳಿದ–"ಪ್ರಜೆಗಳು ಶಾಂತಿಸ್ವರೂಪರು. ಅವರು ಉದ್ರೇಕಗೊಂಡರೆ ನೀನೆಲ್ಲಿರುತ್ತೀಯೋ ಗೊತ್ತಾ! ಬಾಲಿಕಾ, ನಾನು ಕ್ಷಮಿಸಿದರೂ ನನ್ನ ಭಕ್ತರು ಕ್ಷಮಿಸರು ನಿನ್ನನ್ನು" ಎನ್ನುತ್ತಾ ಏನು ಮಾಡಬೇಕೆಂದು ಇಂಡೈರೆಕ್ಟಾಗಿ ಭಕ್ತರಿಗೆ ಹೇಳಿದ. ಆವೇಶದ ಅಣೆಕಟ್ಟು ಒಡೆಯಲು ಒಂದು ಕೊಡಲಿಪೆಟ್ಟು ಸಾಕು. ಜನ ಎದುರು ಬಿದ್ದರು.

ಯಾರೋ ಬಾಳೆಹಣ್ಣನ್ನು ಎಸೆದರು. ಮತ್ತೊಬ್ಬರು ಸೇಬಿನಹಣ್ಣು. ಮತ್ಯಾರೋ ಮತ್ತಷ್ಟು ಮುಂದಕ್ಕೆ ಬಂದು ಚಪ್ಪಲಿಯನ್ನು ಎಸೆದರು. ಒಂದೇ ಕ್ಷಣದಲ್ಲಿ ಗಲಾಟೆ ಪ್ರಾರಂಭವಾಯಿತು. ವಿರುದ್ಧವಾಗಿ ಸಾಕ್ಷಿ ಹೇಳಿದವನು ಗುಂಪಿನಲ್ಲಿ ಸೇರಿಹೋದ, ಆಫೀಸರುಗಳೆಲ್ಲಾ ನಿಸ್ಸಹಾಯಕರಾಗಿ ನೋಡುತ್ತಾ ನಿಂತುಬಿಟ್ಟರು. ಎಲ್ಲಾ ಕ್ಷಣಕಾಲದಲ್ಲೇ ನಡೆದುಹೋಯಿತು.

...ಸ್ಟೇಜಿನ ಕೆಳಗೆ ಮೇಲಿನ ಮೆಟ್ಟಿಲಿನ ಮೇಲೆ ಅವಳು ಬಿದ್ದಿದ್ದಾಳೆ ಅವಳ ಕೆನ್ನೆಗೆ ಯಾರೋ ಎಸೆದ ಚಪ್ಪಲಿ ಬಿದ್ದು ರಕ್ತ ಬರುತ್ತಿದೆ. ಬಾಳೆಹಣ್ಣೊಂದು ಅವಳ ತಲೆಗೆ ಬಿದ್ದು ಅಸಹ್ಯವಾಗಿ ತಲೆಯೆಲ್ಲಾ ಹರಡಿಕೊಂಡಿದೆ. ಜೋರಾಗಿ ಬಿದ್ದ ಸೇಬು ಹಣ್ಣಿನ ಪೆಟ್ಟು ಅವಳ ಹಣೆಗೆ ಗುರುತು ಮಾಡಿದೆ.

ಜನ ಅವಳನ್ನು ಸಾಯಿಸಿಯೇ ಬಿಡುತ್ತಿದ್ದರು. ಉದ್ರೇಕದ ಕಟ್ಟೆ ಒಡೆಯುತ್ತಿದ್ದಂತೆಯೇ ಜನ ಪ್ರವಾಹ ಸ್ಟೇಜಿನ ಕಡೆಗೆ ನುಗ್ಗಿತ್ತು. ಅಷ್ಟರಲ್ಲಿ ಸ್ವಾಮಿಯೇ ತನ್ನೆರಡೂ ಕೈಗಳನ್ನು ಮೇಲಕ್ಕೆತ್ತಿ "ಪ್ರಜೆಗಳಿರಾ ಇದು ಶಾಂತಿವನ. ಇಲ್ಲಿ ಆವೇಶಕ್ಕೆ ಅವಕಾಶವಿಲ್ಲ" ಎಂದು ವಿನಂತಿಸಿಕೊಂಡ. ಜನರೆಲ್ಲಾ ಮಂತ್ರಮುಗ್ಧರಂತೆ ಹಿಂದಕ್ಕೆ ಸರಿದರು. ಅಷ್ಟರಲ್ಲಿ ಆಫೀಸರುಗಳು ಪರಿಸ್ಥಿತಿಯನ್ನು ಹತೋಟಿಗೆ ತಂದು ಜನರನ್ನೆಲ್ಲಾ ಹೊರಗೆ ಕಳುಹಿಸುತ್ತಿದ್ದರು.

ಬಳಿಗೆ ಬಂದ.

ಅವನ ನೆರಳು ಉದ್ದವಾಗಿ ಅವಳ ಮೇಲೆ ಬೀಳುತ್ತಿತ್ತು. ಹೊರಗೆ ಜನರ ಗಲಾಟೆ ಕೇಳಿಸುತ್ತಿತ್ತು. ಅದನ್ನು ಡಾಮಿನೇಟ್ ಮಾಡುವಂತೆ ಸ್ವಾಮಿಯ ನಗು ಗಾಳಿಯ ತರಂಗಗಳನ್ನು ತಳ್ಳುತ್ತಾ ಕೇಳಿಸುತ್ತಿತ್ತು.

"ನಾನು ಹೇಳಿದ್ದೆನಲ್ಲಾ ಪ್ರವಲ್ಲಿಕ-ಕಾಶ್ಮೀರದಿಂದ ಕನ್ಯಾಕುಮಾರಿಯ ವರೆಗೂ ಹಬ್ಬಿದ ಮನೆ ನನ್ನದು-ಅದರಲ್ಲಿ ನೀನೂ ಆಶ್ರಯ ಪಡೆದುಕೋ ಎಂದು. ನೀನು ಕೇಳಲಿಲ್ಲ. ನನ್ನ ಮೊದಲ ಸ್ಥಂಭವಾದ ರಾಜಕೀಯ-ಸೂರ್ಯಾರಾವ್ ನೀನು ಹೋಂ ಮಿನಿಸ್ಟರ್‌ಗೆ ಫೋನ್ ಮಾಡಿದಾಗ ಅಲ್ಲಿಯೇ ಇದ್ದ. ಮುಂದಿನ ಕ್ಷಣದಲ್ಲಿಯೇ ಸುದ್ದಿ ನಮಗೆ ತಲುಪಿತ್ತು- ನನ್ನ ಎರಡನೇ ಸ್ತಂಬವಾದ ತಿಳು ವಳಿಕೆ-ಲಾಯರ್ ಪರಮೇಶ್ವರನ್-ಡೆಲ್ಲಿಯಿಂದ ಏನು ಮಾಡಬೇಕೆಂದು ಸೂಚಿ ಸಿದ. ನನ್ನ ಮೂರನೆ ಸ್ತಂಭ ರಾಮಲಾಲ್-ಉಳಿದ ಏರ್ಪಾಟುಗಳನ್ನು ಮಾಡಿದ್ದ ಫಲಿತಾಂಶ...? ಇದೇ-ನೀನೀಗ ಇರುವ ಸ್ಥಿತಿ!"

ಅವನ ನಗು ಮತ್ತೆ ಆ ಪ್ರದೇಶವನ್ನೆಲ್ಲಾ ಆಕ್ರಮಿಸಿಕೊಂಡಿತು.

"ಸೆಂಟ್ರಲ್ ಬ್ಯೂರೋ ಆಫ್ ಇನ್ವೆಸ್ಟಿಗೇಷನ್ ಡೆಪ್ಯೂಟಿ ಡೈರೆಕ್ಟರನನ್ನು ಕೂಡಾ ತನ್ನ ಪಾದಗಳ ಬಳಿ ಬೀಳಿಸಿಕೊಳ್ಳಬಲ್ಲ ಈ ಅನಂತಾನಂತಸ್ವಾಮಿ. ಈಗ ಹೇಳು ಬಾಲಿಕಾ......ಈ ಸ್ವಾಮಿಗೆ ಈ ದೇಶದ ಪ್ರಭುವಾಗುವ ಅರ್ಹತೆ ಇದೆಯಾ...? ಇಲ್ಲವಾ?"—

ಅವಳು ಕಣ್ತೆರೆಯಲು ಪ್ರಯತ್ನಿಸಿದಳು. ಕಣ್ಣಿನ ಕೆಳಗೆ ಪೆಟ್ಟು ಬಿದ್ದಿದ್ದ ರಿಂದ ನೋಟ ಸರಿಯಾಗಿ ಕಾಣುತ್ತಿರಲಿಲ್ಲ. ಒಂದು ಬೆಳಕಿನ ಕಿರಣ ಕಣ್ಣಿನಲ್ಲಿ ನೇರವಾಗಿ ಬೀಳುತ್ತಿತ್ತು. ಮೇಲೇಳಲು ಕೂಡಾ ಸಾಧ್ಯವಾಗದಷ್ಟು ನಿಶ್ಶಕ್ತಿ. ಮುಖದ ಬಳಿ ನಿಂತಿದ್ದ ಸ್ವಾಮಿ ಮತ್ತಷ್ಟು ಎತ್ತರವಾಗಿ ವಿಗ್ರಹದಂತೆ ಕಾಣು ತ್ತಿದ್ದ.

"ಈಗ ಹೇಳುತ್ತೇನೆ ಕೇಳು ಪ್ರವಲ್ಲಿಕಾ! ನನ್ನ ನಾಲ್ಕನೆ ಸ್ತಂಭ ಯಾವು ದೆಂದು ತಿಳಿದುಕೊಳ್ಳಲು ಇಷ್ಟು ದಿನ ಪ್ರಯತ್ನಿಸಿದೆಯಲ್ಲಾ. ಅದೇನೆಂದು ಹೇಳು ತ್ತೇನೆ ಕೇಳು. ನನ್ನ ನಾಲ್ಕನೆ ಸ್ತಂಭ ಜನರ ಅಜ್ಞಾನ!! ಯಸ್. ಇನ್ನೋಸೆನ್ಸ್ ಆಫ್ ಪೀಪಲ್!!!"

**ಶಕ್ತಿ-ರಾಜಕೀಯ-ತಿಳುವಳಿಕೆ-ಜನರ ಅಜ್ಞಾನ**

ಆ ಕೊನೆಯದನ್ನೇ ಈಗ ನಿನಗೆ ಪ್ರತ್ಯಕ್ಷವಾಗಿ ತೋರಿಸಿದೆ. ನೋಡಿ ದೆಯಾ ನನ್ನ ವಿಶ್ವರೂಪವನ್ನು. ಇನ್ನು ನನ್ನನ್ನು ಏನು ತಡೆಯಬಲ್ಲದು? ಬರುವ ವಿಜಯದಶಮಿಯಂದು ವಿಜಯದ ಶಂಖವನ್ನು ಊದಿಸುತ್ತೇನೆ. ಪ್ರಜೆಗಳನ್ನೆಲ್ಲಾ

ಭಯ ಭ್ರಾಂತರನ್ನಾಗಿ ಮಾಡುತ್ತೇನೆ. ಸೆಕ್ಯೂಲರಿಜಂನಿಂದ ಮತ ತತ್ವದೆಡೆಗೆ ನಡೆಸಿಕೊಂಡು ಹೋಗುತ್ತೇನೆ. ಭದ್ರತೆಯ ಆಸೆಯನ್ನು ಕಳೆದುಕೊಂಡ ಜನ-ಸರ್ಕಾರವನ್ನು ನಂಬಲಾರರು. ಅಷ್ಟೇ ನನಗೆ ಬೇಕಾಗಿದ್ದುದು. ಸರ್ಕಾರ ಉಳಿದ ಮತಸ್ಥರನ್ನು ಕಾಪಾಡುವುದರಲ್ಲಿ ಮಗ್ನವಾಗಿರುವಾಗ ನಾನು ನನ್ನವರಿಗೆ ಮತ್ತಷ್ಟು ಮತತ್ವವನ್ನು ಅರೆದು ಕುಡಿಸುತ್ತೇನೆ. ಐಯಾಮ್ ದಿ ಗಾಡ್. ಐಯಾಮ್ ದಿ ಸುಪ್ರೀಮ್. ಕೇವಲ ನನ್ನ ಪ್ರಜೆಗಳನ್ನು ರಕ್ಷಿಸಲು ಅವತರಿಸಿದ ಭಗವತ್ ಸ್ವರೂಪ ನಾನು. ಹ್ಹಹ್ಹಾ ...ಹ್ಹಾಹ್ಹಾ ..."

ಸ್ಯಾಡಿಜಂ, ಬುದ್ಧಿವಂತಿಕೆ ಕಲೆತರೆ ಕಷ್ಟ.

ಅಂತಹ ನರರೂಪ ರಾಕ್ಷಸನ ಮುಂದೆ ನಿಸ್ಸಹಾಯಕಳಾಗಿ ಬಿದ್ದಿದ್ದಾಳೆ ಅವಳು.

ಅವನು ಹೇಳಿದಂತೆ ಪ್ರಜೆಗಳ ಮುಂದೆ ಏನೇ ಆದರೂ ತಲೆಬಗ್ಗಿಸಬೇಕಾಗಿದ್ದೆ. ಸಿ.ಬಿ.ಐ., ಸಿ.ಐ.ಡಿ., ಪೋಲೀಸ್, ರಾ, ಆರ್ಮಿ ಯಾವುದೂ ತನ್ನ ಮುಂದೆ ನಿಲ್ಲಲಾರದೆಂಬಂತೆ ಜಂಭದಿಂದ ಅವನು ಅಲ್ಲಿಂದ ನಡೆಯುತ್ತಾ ಹೊರಟ.

* * * *

ರಾಮೋನ್ ಹಾರ್ಸಾಸೇನನ್ನು ಅನುಸರಿಸುತ್ತಾ ಹೊರಟ ವಿಹಾರಿ. ಅವನೊಂದು ಕಾರುಗಳ ಬಿಡಿಭಾಗಗಳನ್ನು ತಯಾರುಮಾಡುವ ಕಾರ್ಖಾನೆಯೊಳಗೆ ಪ್ರವೇಶಿಸುವುದನ್ನು ಕಂಡ.

ಅಲ್ಲಿ, ಹೊರಗೆಲ್ಲಾ ಸಾಮಾನ್ಯವಾಗೇ ಇತ್ತು. ಒಳಗೆ ಕೆಲವರು ವ್ಯಾನುಗಳಿಗೆ ಮಿಲಿಟರಿ ಬಣ್ಣವನ್ನು ಹಚ್ಚುತ್ತಿದ್ದರು. ಸ್ವಾಮಿ ಹಾರ್ಸಾಸೇ ನಡುವೆ ನಡೆದಿದ್ದ ಕಾಂಟ್ರ್ಯಾಕ್ಟ್ ಪ್ರಕಾರ ಆಯುಧಗಳನ್ನು ಹಾರ್ಬರ್‌ವರೆಗೂ ತಲುಪಿಸುವ ಜವಾಬ್ದಾರಿ ಸ್ವಾಮಿಯದೇ. ಆ ಕೆಲಸವೇ ಅಲ್ಲಿ ನಡೆಯುತ್ತಿತ್ತು. ಆಶ್ರಮದಲ್ಲಿ ಪ್ರವಲ್ಲಿಕಳಿಗೆ ಹೆಚ್ಚು ಆಯುಧ ಸಿಗದಿದ್ದುದಕ್ಕೆ ಕಾರಣವೂ ಅದೇ. ಅವೆಲ್ಲ ಆಗಲೇ ಇಲ್ಲಿಗೆ ಸೇರಿಕೊಂಡಿತ್ತು. ಸಿ.ಬಿ.ಐ. ರೈಡ್ ನಡೆದಿದೆಯೆಂದು ತಿಳಿದರೂ ಸ್ವಾಮಿ ಹೆದರದಿದ್ದುದು ಅದಕ್ಕೆ.

ಸುಮಾರು 50 ಲಕ್ಷ ಬೆಲೆಬಾಳುವ ಲ್ಯಾಂಡ್‌ಮೈನ್ಸ್, ಗ್ರೆನೇಡ್ಸ್, ಸ್ಟೆನ್‌ಗನ್ಸ್ ವ್ಯಾನುಗಳಿಗೆ ತುಂಬಿದ್ದರು. ಒಟ್ಟು ಎರಡು ವ್ಯಾನುಗಳು. ಮಿಲಿಟರಿ ಬಣ್ಣ ಹಚ್ಚಿದರೆ ಅನುಮಾನ ಬರುವುದಿಲ್ಲ- ಆ ಕೆಲಸವೇ ನಡೆಯುತ್ತಿತ್ತು.

ವಿಹಾರಿ ಅಲ್ಲೊಂದು ವಿಷಯವನ್ನು ಗಮನಿಸಿದ,

ಆತುರದ ಕೆಲಸ, ಗಲಿಬಿಲಿ ಗಾಬರಿ ಏನೂ ಇಲ್ಲ. ಸೆಕ್ಯೂರಿಟಿ ಗಾರ್ಡ್‌ಗಳು ಕೂಡ ಅಲ್ಲಿರಲಿಲ್ಲ. ಯಾರಾದರೂ ಕಂಡರೆ ಯಾವುದೋ ವ್ಯಾನಿಗೆ ರಿಪೇರಿ ಮಾಡುತ್ತಿದ್ದಾರೆಂದುಕೊಳ್ಳುತ್ತಾರೆ. ಕಮಾಂಡರ್ ಡ್ರೆಸ್ ಹಾಕಿಕೊಂಡಿದ್ದ ಇಬ್ಬರು ಮಾತ್ರ ಅತ್ತಿಂದಿತ್ತ ತಿರುಗುತ್ತಿದ್ದರು.

"ಇನ್ನೂ ಕೆಲಸ ಪೂರ್ತಿಯಾಗಲಿಲ್ಲವಾ?" ಹಾರ್ಸಾಸೇ ಕೇಳುತ್ತಿದ್ದ!

''ಇನ್ನೈದು ನಿಮಿಷಗಳು!"

ವಿಹಾರಿ ಕತ್ತಲಲ್ಲಿ ನಿಂತಿದ್ದ. ಅವನ ಮನಸ್ಸೆಲ್ಲಾ ಅದೊಂದು ರೀತಿಯಿತ್ತು. ಅವನ ಕಣ್ಮುಂದೆ ಪ್ರಾಣಗಳನ್ನು ಅಂಗೈಯಲ್ಲಿಟ್ಟುಕೊಂಡು ಓಡುತ್ತಿದ್ದ ಶರಣಾರ್ಥಿಗಳಾದ ತಮಿಳರು, ಇರಾನಿಯನ್‌ಗಳು, ಪ್ಯಾಲೆಸ್ತೀನರು, ಟಿಬೇಟಿಯನ್ನರು, ಫಿಜಿಯನ್ನರು, ದಕ್ಷಿಣ ಆಫ್ರಿಕದವರು ಕಾಣುತ್ತಿದ್ದರು. ಪ್ರಪಂಚದ ಎಲ್ಲಾ ದೇಶಗಳ ಚರಿತ್ರೆಯೂ ಅಷ್ಟೆ. ಕೆಲ ಸ್ವಾರ್ಥಪರರ ಆಸೆ ತೀರಿಸುವ ಸಲುವಾಗಿ ಮತ್ತೊಬ್ಬ ಸ್ವಾರ್ಥಿ ತಯಾರಿಸಿದ ಆಯುಧಗಳು, ಸಾವಿರಾರು ಮುಗ್ಧ ಪ್ರಜೆಗಳ ಪ್ರಾಣಗಳನ್ನೇರಿ ಹೋಗುತ್ತವೆ. ಮಕ್ಕಳನ್ನು ಸಾಯಿಸುತ್ತವೆ. ಹೆಂಗಸರನ್ನು ನಾಶಪಡಿಸುತ್ತದೆ. ಮನೆ–ಮಠ ಸಂಪಾದಿಸಿ ನೆಮ್ಮದಿಯಿಂದ ಇರುವವರ ನೆಮ್ಮದಿ ಕೆಡಿಸುತ್ತದೆ. ಕೇವಲ ಸ್ವಾರ್ಥ.

"ಯಾರದು?"

ವಿಹಾರಿ ಬೆಚ್ಚಿಬಿದ್ದ. ಯೋಚನೆಯಲ್ಲಿ ಗಮನಿಸಿರಲಿಲ್ಲ ಅವನು. ಒಂದು ಆಕಾರ ಅವನೆಡೆಗೇ ಬರುತ್ತಿತ್ತು.

''ರಾಮಲಾಲ್...'' ಅಪ್ರಯತ್ನವಾಗಿ ಅವನ ಬಾಯಿಂದ ಹೊರಟಿತು.

ಅದೊಂದೇ ಅವನಿಗೆ ತಿಳಿದಿದ್ದ ಹೆಸರು.

ಕತ್ತಲಲ್ಲಿ ಎದುರಾಗಿ ಬರುತ್ತಿದ್ದವನು 'ಸರ್' ಅಂದ. ವಿಹಾರಿ ಇನ್ನೇನನ್ನೂ ಯೋಚಿಸಲಿಲ್ಲ. ಮುಷ್ಟಿಯಲ್ಲಿ ಬಿಗಿಗೊಳಿಸಿ ಎದುರಾದ ವ್ಯಕ್ತಿಯ ಸೂಕ್ಷ್ಮವಾದ ಭಾಗಕ್ಕೆ ಹೊಡೆದ. ಅವನು ಸ್ವಲ್ಪ ಕಿರುಚಿದರೂ ತನ್ನ ಪ್ರಾಣ ಹೋಗುತ್ತದೆಂದು ಗೊತ್ತು. ಆದರೆ ಅದೃಷ್ಟ ಚೆನ್ನಾಗಿದ್ದುದರಿಂದ ಅಂದುಕೊಂಡ ಜಾಗಕ್ಕೆ ಪೆಟ್ಟು ಬಿದ್ದಿತ್ತು.

ಏನೋ ಅನುಮಾನ ಬಂದು ಬಗ್ಗಿ ನೋಡಿದ.

ಕೆಳಗೆ ಬಿದ್ದ ವ್ಯಕ್ತಿಯ ಪ್ರಾಣ ಹಾರಿ ಹೋಗಿತ್ತು.

ವಿಹಾರಿಗೆ ಏನು ಮಾಡಬೇಕೆಂದೇ ತೋಚಲಿಲ್ಲ. ಆದರೆ ಕ್ಷಣ ಮಾತ್ರ. ನಂತರ ಚೇತರಿಸಿಕೊಂಡ. ಈ ಟೆರ್ರರಿಜಂ–ನ್ಯಾಯದ ಪರಿಧಿಗಿಂತ ಯಾವಾಗಲೂ ಹೊರಗೇ ಇರುತ್ತದೆ. "ಕೊಲ್ಲು–ಇಲ್ಲವೇ ಸಾಯಿ" ಎಂಬುದೇ ಇಲ್ಲಿಯ ನ್ಯಾಯ.

ಅದೇ ಪ್ರಸ್ತುತ ಸಮಾಜವನ್ನು ಆಳುತ್ತಿರುವುದು.

ಆ ಭಾವನೆ ಬರುತ್ತಿದ್ದಂತೆಯೇ ಅವನಲ್ಲಿ ಯಾವುದೋ ಹೊಸಶಕ್ತಿ ತುಂಬಿದಂತೆ ಆಯಿತು. ತಾನೊಬ್ಬ ವ್ಯಕ್ತಿಯ ಪ್ರಾಣ ತೆಗೆದದ್ದು ಕೆಲವು ನೂರು ಜನರ ಪ್ರಾಣ ರಕ್ಷಿಸಿದಂತೆ. ಅಂತಹುದರಲ್ಲಿ ಸಾಯಿಸಿದರೆ ತಪ್ಪೇನು? ಅದೇ ತಾನೆ ಯುದ್ಧವೆಂದರೆ!

ಅವನು ವ್ಯಾನ್ ಪಕ್ಕದಿಂದ ವರಾಂಡ ಬಳಿಗೆ ಬಂದ. ಬಣ್ಣ ಬಳಿಯುತ್ತಿದ್ದವರು ಅತ್ತ ಕಡೆ ಇದ್ದರು. ಪೆಟ್ಟಿಗೆಗಳಲ್ಲಿ ಕಪ್ಪನೆಯ ಗಂಟುಗಳಂಥ ವಸ್ತುಗಳಿದ್ದವು. ಹ್ಯಾಂಡ್ ಗ್ರೆನೇಡ್ಸ್–ಅದರ ಬಗ್ಗೆ ವಿಹಾರಿಗೆ ತಿಳಿಯದು. ಇಂಗ್ಲಿಷ್ ಸಿನಿಮಾಗಳಲ್ಲಿ ನೋಡಿದ್ದನಷ್ಟೆ. ಒಂದು ಕೊನೆಯಲ್ಲಿ ಸಣ್ಣ ರಿಂಗ್ ಇರುತ್ತದೆ. ಅದನ್ನು ಎಳೆದ ಮುಂದಿನ ನಿಮಿಷ ಸಿಡಿಯುತ್ತದೆ.

ಪಕ್ಕದಲ್ಲೇ ಸ್ವರಗಳು ಕೇಳಿಸಿದ್ದರಿಂದ ಚಕ್ಕನೇ ಕತ್ತಲಲ್ಲಿ ಅಡಗಿಕೊಂಡ ಗಾಮೋನ್ ಹಾರ್ಸಾಸೇ ಬಂದು ವ್ಯಾನಿನಲ್ಲಿ ಕುಳಿತ. ಡ್ರೈವರ್ ಸ್ಟಾರ್ಟ್ ಮಾಡಿದ. ಬಣ್ಣ ಬಳಿಯುತ್ತಿದ್ದವರು ಕೂಡಾ ವ್ಯಾನಿನ ಹಿಂಭಾಗದಲ್ಲಿ ಹತ್ತಿ ಕುಳಿತರು. ವ್ಯಾನುಗಳು ಹೊರಟವು.

*  *  *  *

ವಿಹಾರಿಗೆ ಏನು ಮಾಡಬೇಕೆಂದೇ ತೋಚಲಿಲ್ಲ. ಒಂದು ಸಲ ಅವು ಹೊರಟುಹೋದರೆ–ಇನ್ನು ಹಿಡಿಯುವುದು ಕಷ್ಟ. ಪ್ರವಲ್ಲಿಕ ಏನಾದಳೋ ಗೊತ್ತಿಲ್ಲ. ಅವನು ಅಪ್ರಯತ್ನವಾಗಿ ಕೈಯಲ್ಲೊಂದು ಗ್ರೆನೇಡನ್ನು ತೆಗೆದುಕೊಂಡು ಅದರ ರಿಂಗನ್ನು ಎಳೆದು ಗಾಳಿಯಲ್ಲಿ ಬಿಸುರಿದ. ಅದು ಹೋಗುತ್ತಿದ್ದ ಎರಡನೇ ವ್ಯಾನಿನೊಳಗೆ ಬಿತ್ತು. ಒಳಗಿದ್ದವರು ಅದೇನೆಂದು ಕೇಳಿಕೊಳ್ಳುತ್ತಿದ್ದರು. ಎರಡು ವ್ಯಾನುಗಳೂ ಸುಮಾರು ನೂರು ಗಜಗಳಷ್ಟು ದೂರ ಹೋಗಿರಬಹುದು, ಅಷ್ಟೇ!

ಮೊದಲು ಆ ಗ್ರೆನೇಡ್ ಸಿಡಿಯಿತು, ಮುಂದಿನ ಕ್ಷಣದಲ್ಲೇ ಆ ಎರಡೂ ವ್ಯಾನುಗಳಲ್ಲಿದ್ದ ಮದ್ದು ಗುಂಡುಗಳು ಅಂಟಿಕೊಂಡು ಹೇಗೆ ಸಿಡಿದವೆಂದರೆ ಅದರಲ್ಲಿದ್ದ ರಾಮೋನ್ ಹಾರ್ಸಾಸೇ, ಉಳಿದವರು, ವ್ಯಾನ್‌ನ ಬಿಡಿಭಾಗಗಳು ಒಂದು ಚೂರೂ ಕಾಣಿಸದಂತೆ ಮಾಯವಾದವು. ಐವತ್ತು ಲಕ್ಷಕ್ಕೂ ಮಿಗಿಲಾಗಿ ಬೆಲೆಬಾಳುತ್ತಿದ್ದ ಮೈನ್, ಬಾಂಬ್‌ಗಳು ಅವು. ಮನುಷ್ಯರ ರಕ್ತ ಕೂಡಾ ಕಾಣಿಸಲಿಲ್ಲ. ಕಣ್ಣುಗಳು ಮುಚ್ಚಿಕೊಳ್ಳುವಂತಹ ಅಗಾಧ ಬೆಳಕು. ಭೂಮಿ ನಡುಗಿ

ಹೋಯಿತು. ದೂರದಲ್ಲಿದ್ದ ಮನೆಗಳು ಬಿರುಕುಬಿಟ್ಟವು. ಮೆಕ್ಯಾನಿಕ್ ಷೆಡ್ ಕುಸಿದುಬಿತ್ತು. ವಿಹಾರಿಯ ಪಕ್ಕದಲ್ಲೇ ಮೂರ್ನಾಲ್ಕು ಕಬ್ಬಿಣದ ತುಂಡುಗಳು ನುಗ್ಗಿ ಹೋದವು ಬುಲೆಟ್‌ಗಳಂತೆ.

ಸಣ್ಣ ಸಣ್ಣ ಚೂರುಗಳು ಉರಿಯುತ್ತಿದ್ದವು. ಏನು ನಡೆಯಿತೆಂದು ತಿಳಿಯದ ಪ್ರಜೆಗಳು ಭಯಭ್ರಾಂತರಾಗಿ ಮನೆಗಳಿಂದ ಹೊರಗೋಡಿ ಬಂದು ದಿಗ್ಭ್ರಾಂತರಾಗಿ ನಿಂತುಬಿಟ್ಟರು.

ವಿಹಾರಿ ಅಲ್ಲಿಂದ ತಪ್ಪಿಸಿಕೊಂಡ.

"ನಿಜವಾ?" ನಂಬದವಳಂತೆ ಕೇಳಿದಳು ಪ್ರವಲ್ಲಿಕ,

ವಿಹಾರಿ ತಲೆ ಆಡಿಸಿದ. "ಸುಮಾರು ಒಂದು ಕೋಟಿ ರೂಪಾಯಿಗಳಷ್ಟಿರ ಬಹುದೆಂದು ಕೊಂಡಿದ್ದೇನೆ. ನನಗೆ ಸರಿಯಾಗಿ ಗೊತ್ತಿಲ್ಲ. ನಾನು ಎಸೆದ ಬಾಂಬ್ ಸಿಡಿಯುತ್ತದೆಂದೂ ನನಗೆ ಗೊತ್ತಿರಲಿಲ್ಲ. ಆ ದೃಶ್ಯವನ್ನು ನೋಡಬೇಕಷ್ಟೇ ವರ್ಣಿಸಲು ಸಾಧ್ಯವಿಲ್ಲ."

ಅವಳು ಕೇಳಿಸಿಕೊಳ್ಳುತ್ತಿರಲಿಲ್ಲ, ಅವಳ ಮನಸ್ಸು ಅಲ್ಲಿರಲಿಲ್ಲ. ಸ್ವಾಮಿಗೆ ಇಷ್ಟು ಹೊತ್ತಿಗೆ ವಿಷಯ ತಲುಪಿರುತ್ತದೆ. ಅವನ ಮುಖವನ್ನು ನೆನಪಿಸಿಕೊಳ್ಳುತ್ತಿದ್ದಂತೆಯೇ ಅವಳಿಗೆ ಸಂತೋಷ ತೆರೆತೆರೆಯಾಗಿ ಬರುತ್ತಿತ್ತು. ಅದರಲ್ಲಿಯೂ ಈಗೊಂದು ಗಂಟೆಗೆ ಮುಂಚೆಯಷ್ಟೇ ಅವಳಿಗೆ ಅವಮಾನ ನಡೆದಿತ್ತು. ಮಾನಸಿಕವಾಗಿ ತುಂಬಾ ಕುಗ್ಗಿ ಹೋಗಿದ್ದಳು. ಅಂತಹ ಸಮಯದಲ್ಲಿ ವಿಹಾರಿ ಮಾಡಿದ ಈ ಕೆಲಸ ಅವಳನ್ನು ಆನಂದ ಸಾಗರದಲ್ಲಿ ಮುಳುಗಿಸಿತು. ಚೇಳು ಕಡಿದ ಕಳ್ಳನಂತೆ ಸ್ವಾಮಿ ಏನನ್ನೂ ಹೇಳಿಕೊಳ್ಳಲಾರ, ಅಷ್ಟು ಸಾಕು. ಆ ಸಂತೋಷದಲ್ಲಿ ಅವನೆರಡೂ ಕೈಗಳನ್ನು ಬಿಗಿಯಾಗಿ ಹಿಡಿದುಬಿಟ್ಟಳು.

ಅವಳ ಮಾನಸಿಕ ಸ್ಥಿತಿಯನ್ನು ಅರ್ಥಮಾಡಿಕೊಂಡವನಂತೆ ಅವನು ಮೃದುವಾಗಿ ಅವಳ ಕೈಗಳಿಂದ ಬಿಡಿಸಿಕೊಂಡು, "ನೀವು ತುಂಬಾ ಎಗ್ಸೈಟ್ ಆಗಿದ್ದೀರಿ. ಕರ್ನಲ್ ಸಾಹೇಬರು ನೋಡಿದರೆ ಚೆನ್ನಾಗಿರುವುದಿಲ್ಲ" ಎಂದು ನಕ್ಕ. ಅವಳಿಗೆ ಅರ್ಥವಾಗದೆ, "ಕರ್ನಲ್ ಯಾರು?" ಅಂದಳು.

"ನಿಮ್ಮ ಭಾವೀ ಗಂಡ, ಕರ್ನಲ್ ಪ್ರಶಾಂತ್" ಎಂದು ಅಲ್ಲಿಂದ ಹೊರಟು ಹೋದ ಗುಡ್‌ನೈಟ್ ಹೇಳಿ. ಅವಳು ತನ್ನ ಕೈಯಿಂದ ಬಾಯಿಮುಚ್ಚಿಕೊಂಡು ನಗಲು ಪ್ರಾರಂಭಿಸಿದಳು.

ಆಗತಾನೇ ಹೊರಬಂದ ಪ್ರತಾಪರಾವ್, "ಏನಮ್ಮಾ?" ಎಂದು ಕೇಳಿದರು.

"ಏನು ಇಲ್ಲಪ್ಪಾ" ಎಂದು ಒಳಗೋಡಿದಳು.

ರೋಬ್‌ನಲ್ಲಿ ವಿವಿಧ ರೀತಿಯ ಬಟ್ಟೆಗಳಿದ್ದವು. ಅದರಲ್ಲಿದ್ದ ಮಿಲಿಟರಿ ಡ್ರೆಸ್ಸನ್ನು ಸವರಿದಳು ಇನ್ನೂ ನಗು ಬರುತ್ತಲೇ ಇತ್ತು. ಕ್ಯಾಪನ್ನು ತಲೆಯ ಮೇಲಿರಿಸಿಕೊಂಡು ಕನ್ನಡಿಯ ಮುಂದೆ ನಿಂತು ಪ್ರತಿಬಿಂಬಕ್ಕೆ ಸೆಲ್ಯೂಟ್ ಮಾಡುತ್ತಾ "ಹೌ ಆರ್ ಯು ಕರ್ನಲ್?'' ಅಂದಳು. ಆ ಸ್ವರ ಇಪ್ಪತ್ತೈದು ವರ್ಷದ ತರುಣನದಂತಿತ್ತು.

ವಾಯ್ಸ್ ಥೆರಪಿ.

* * * * *

"ಹಲ್ಲೋ.''

ಅತ್ತ ಕಡೆಯಿಂದ ಕೇಳಿಸುತ್ತಿದ್ದಂತೆಯೇ ವಿಹಾರಿ ಚಿಟಿಕೆ ಹಾಕುತ್ತಾ ಪದ್ಮಾಕರ್‌ನನ್ನು ಕರೆದ.

ಪದ್ಮಾಕರ್ ಓಡೋಡಿ ಬಂದು ಫೋನೆತ್ತಿದ- "ಹಲೋ ನಾನು ಪದ್ಮಾಕರ್. ನಿಲ್ಲಿ, ಫೋನಿಟ್ಟು ಬಿಡಬೇಡಿ. ವಿಹಾರಿಗೆ ನೆನ್ನೆ ರಾತ್ರಿಯಿಂದ ತುಂಬಾ ಸೀರಿಯಸ್ಸಾಗಿದೆ'' ಕಂಗಾಲಾಗಿ ಹೇಳಿದ.

"ಮೈ ಗಾಡ್. ಎಲ್ಲಿದ್ದಾನೆ."

"ಆಸ್ಪತ್ರೆಯಲ್ಲಿ–"

"ಯಾವ ಆಸ್ಪತ್ರೆ?"

''ಹೇಳಬೇಡವೆಂದಿದ್ದಾನೆ.'' ಪದ್ಮಾಕರನ ಕಂಠ ವಿಷಾದದಿಂದ ನುಡಿಯಿತು.

"ನಿಮಗೊಂದು ಕಾಗದ ಕೊಡಲು ತಿಳಿಸಿದ್ದಾನೆ ಅದು ನನ್ನ ಬಳಿಯಿದೆ. ನಿಮಗೆ ಹೇಗೆ ತಲುಪಿಸಬೇಕೆಂದು ಹೇಳಿದರೆ–ಬಂದು ಕೊಡುತ್ತೇನೆ."

ಅತ್ತ ಕಡೆಯಿಂದ ಸ್ವಲ್ಪ ಹೊತ್ತು ನಿಶ್ಶಬ್ದ. ಪದ್ಮಾಕರ್. ವಿಹಾರಿ ಇತ್ತ ಕಡೆ ಟೆನ್ಷನ್‌ನಿಂದ ಬರಲಿರುವ ಉತ್ತರಕ್ಕಾಗಿ ಕಾದಿದ್ದಾರೆ.

"ಮೆಯಿನ್ ರೋಡ್‌ನಲ್ಲಿ ಸಾಯಿಬಾಬಾ ಮೆಡಿಕಲ್ ಸ್ಟೋರ್ಸ್ ಗೊತ್ತಲ್ಲಾ, ಅಲ್ಲಿ ಕೊಡಿ. ನಾನು ತೆಗೆದುಕೊಳ್ಳುತ್ತೇನೆ," ಫೋನ್ ಕಟ್ ಆಯಿತು.

ವಿಹಾರಿ ಕುಣಿದು ಕುಪ್ಪಳಿಸಿದ.

"ನಡಿ ಗುರೂ. ಇನ್ನು ಸಿಕ್ಕಿದ್ದಾಗೆ."

"ಆ ಹುಡುಗಿ ಈಗಲೇ ಬರುತ್ತಾಳೆಂಬ ನಂಬಿಕೆಯೇನು? ನಾಳೆಯ ವರೆಗೂ

ಕಾದು, ನಾಳೆ ಬಂದು ತೆಗೆದುಕೊಂಡರೆ?"

"ಪ್ರೀತಿಯಲ್ಲಿ ಸಿಕ್ಕಿಕೊಂಡರೆ ನಿನಗೆ ತಿಳಿಯುತ್ತೆ. ಅಷ್ಟು ತಡ ಯಾವ ಹುಡುಗಿಯೂ ಮಾಡುವುದಿಲ್ಲ. ನಡಿ.''

ಇಬ್ಬರೂ ಮೆಡಿಕಲ್ ಸ್ಟೋರ್ ಬಳಿಗೆ ಹೋದರು. ಅಷ್ಟರಲ್ಲಿ ಕವರೊಂದರಲ್ಲಿ ಒಂದು ಬಿಳಿ ಕಾಗದವಿಟ್ಟು ಸೀಲ್ ಮಾಡಿದರು.

''ಆ ಹುಡುಗಿ ಬಹುಶಃ ದೂರದಿಂದ ಗಮನಿಸುತ್ತಿರಬಹುದು. ನಾವು ಇದನ್ನು ಕೊಟ್ಟು ಹೊರಟು ಹೋದಂತೆ ನಟಿಸಿ ಬಚ್ಚಿಟ್ಟುಕೊಳ್ಳೋಣ."

ವಿಹಾರಿ ಸಲಹೆ ಕೊಟ್ಟ.

ಇಬ್ಬರೂ ಅಲ್ಲಿಗೆ ಹೋಗಿ ಅಂಗಡಿಯ ಯಜಮಾನನಿಗೆ ಕವರ್ ಕೊಟ್ಟರು. ಪದ್ಮಾಕರನನ್ನು ತೋರಿಸುತ್ತಾ, "ಈತನ ತಂಗಿ ಬರುತ್ತಾಳೆ. ಈ ಕವರನ್ನು ಸ್ವಲ್ಪ ಆಕೆಗೆ ಕೊಡಿ'' ಎಂದು ಹೊರಗೆ ಬಂದು, ಕಾರಿನಲ್ಲಿ ಒಂದು ರೌಂಡು ಬಂದು. ದೂರದಲ್ಲಿ ನಿಲ್ಲಿಸಿ ಎದುರಿಗಿದ್ದ ಹೋಟೇಲಿನಲ್ಲಿ ಹೊಕ್ಕು ಅಂಗಡಿಯ ಕಡೆಗೇ ನೋಡುತ್ತಾ ಕುಳಿತರು.

ಐದು ನಿಮಿಷಗಳು...

ಹತ್ತು ನಿಮಿಷಗಳಾದವು,

"ಕೇವಲ ನಮ್ಮನ್ನು ಅಳಿಸಲು ಓಗೆ ಮಾಡಿದ್ದಾಳೆ ಗುರು," ಪದ್ಮಾಕರ್ ನಿರಾಸೆಯಿಂದ ಹೇಳಿದ.

"ನಂಗೆ ಹಾಗೆನ್ನಿಸೋಲ್ಲ."

''ಇಲ್ಲದಿದ್ದರೆ ನಿಮ್ಮ ಮನೆಗೆ ಮತ್ತೆ ಫೋನ್ ಮಾಡಿ ನಿಮ್ಮಮ್ಮನನ್ನು ಕೇಳಿ ನಿನಗೆ ಆರೋಗ್ಯವಿರುವ ಬಗ್ಗೆ ತಿಳಿದುಕೊಂಡರೆ "

"ಅಪಶಕುನ ಮಾತನಾಡಬೇಡ."

ಮತ್ತೈದು ನಿಮಿಷಗಳು ಕಳೆದವು. ವಿಹಾರಿ ಕೂಡಾ ಬೇಸರದಿಂದ ಗಡಿಯಾರ ನೋಡಿಕೊಂಡ. ಯಾರೂ ಬರುತ್ತಿರುವ ಸೂಚನೆಗಳಿಲ್ಲ.

"ಏನ್ಮಾಡೋಣ?'' ಎಂದು ಪದ್ಮಾಕರ್ ಕೇಳುತ್ತಿದ್ದಂತೆಯೇ ವಿಹಾರಿ ಹಠಾತ್ತನೆ ಎದ್ದು ನಿಂತ.

ದೂರದಲ್ಲಿ ಸುನಾದಮಾಲ ಬರುತ್ತಿದ್ದಳು.

ಇಬ್ಬರೂ ಉಸಿರು ಬಿಗಿ ಹಿಡಿದರು. ಸುನಾದಮಾಲ ಮೆಡಿಕಲ್ ಸ್ಟೋರ್ಸಿನ ಮೆಟ್ಟಿಲನ್ನು ಹತ್ತುತ್ತಿದ್ದಳು.

''ನಡಿ" ಅಂದ. ಇಬ್ಬರೂ ಬಿಲ್ಲನ್ನು ಕೊಟ್ಟು ಹೊರಗೆ ಬಂದರು.

ಅಲ್ಲಿ–ಅಂಗಡಿಯವನು, "ಪದ್ಮಾಕರ್ ತಂಗಿ ನೀವೇನಾ?'' ಎಂದು ಕೇಳು

ತ್ತಿದ್ದ.

ಆಶ್ಚರ್ಯದಿಂದ, "ಇಲ್ಲವಲ್ಲಾ ..." ಎನ್ನುತ್ತಿದ್ದಾಳೆ ಮಾಲ.

"ನೆವ್ರೋಕ್ವೀನ್ ಟಾಬ್ಲೆಟ್‌ಗಳು ಆರು ಬೇಕು." ಅವಳ ಅಜ್ಜಿಗೆ ಎರಡು ದಿನಗಳಿಂದಲೂ ಮಲೇರಿಯ. ಅಂಗಡಿಯವನು ಮಾತ್ರೆಗಳನ್ನು ಕವರಿನಲ್ಲಿರಿಸಿ ಅವಳಿಗೆ ಕೊಟ್ಟ. ಅದನ್ನು ತೆಗೆದುಕೊಂಡು ಅವಳು ಮೆಟ್ಟಿಲುಗಳನ್ನು ಇಳಿಯುತ್ತಿದ್ದಂತೆಯೇ ಹಠಾತ್ತನೆ ವಿಹಾರಿ ''ಸಿಕ್ಕಿಬಿದ್ದಿರಿ" ಎಂದು ಕಿರುಚಿದ.

ಕಿಟಾರನೆ ಕಿರುಚಲು ಬಾಯಿ ತೆರೆದು, ಅದು ನಡುಬೀದಿಯೆಂದು ಗ್ರಹಿಸಿ ತುಂಬ ಕಷ್ಟದಿಂದ ತಡೆಹಿಡಿದಳು.

''ಇಷ್ಟು ದಿನ ಅಳಿಸಿದ್ದಕ್ಕೆ ನಾವು ಬೀಸಿದ ಬಲೆಯಲ್ಲಿ ಸಿಕ್ಕಿಹಾಕಿಕೊಂಡಿರಿ, ರೆಡ್ ಹ್ಯಾಂಡೆಡ್ಡಾಗಿ ಸಿಕ್ಕಿಬಿಟ್ಟಿರಿ.''

"ದಯವಿಟ್ಟು ನನ್ನನ್ನು ಹೀಗೆ ಹಿಂಬಾಲಿಸಬೇಡಿ'' ಅಳುಮುಖದಿಂದ ವಿನಂತಿಸಿಕೊಂಡಳು.

''ಇನ್ನೇಕೆ ಹಿಂಬಾಲಿಸಬೇಕು. ಸಿಕ್ಕಿಬಿಟ್ಟಿದ್ದೀರಲ್ಲಾ?"

ಪದ್ಮಾಕರ್ ಎಚ್ಚರಗೊಂಡವನಂತೆ, "ಇನ್ನು ಸಾಕು ಮೇಡಂ. ನಿಮ್ಮ ಕೈಯಲ್ಲಿರುವ ಕವರ್ರೇ ಎಲ್ಲಾ ಕಥೆ ಹೇಳುತ್ತಿದೆ'' ಅಂದ.

''ಇವು ನೆವ್ರೋಕ್ವೀನ್ ಮಾತ್ರೆಗಳು"

"ಹಾಗಾದರೆ ಬರಿ ಕಾಗದ ನೋಡಿದ್ದೀರೆಂದಂತಾಯಿತು.''

"ಬರೀ ಕಾಗದ? ಏನು..."

''ನೀವು ಅದ್ಭುತವಾಗಿ ನಟಿಸಬಲ್ಲಿರಿ. ಮೆಚ್ಚಿಕೊಂಡೆ.''

ಅವಳು ಧೈರ್ಯ ತಂದುಕೊಂಡಳು. "ನೋಡಿ ಮಿಸ್ಟರ್. ನಾನು ಮೆತ್ತಗಿರುವುದರಿಂದ ನೀವು ತುಂಬಾ ಉಪಯೋಗ ಪಡೆಯುತ್ತಿದ್ದೀರಿ."

"ಹಾಗಾದರೆ ನೀವು ಬರೀ ಫೋನಿನಲ್ಲಿ ಆಟವಾಡಿಸಿ ತೃಪ್ತಿಪಡುತ್ತೀರೆಂದಂತಾಯಿತು."

"ಬೋರಲು ಮಲಗಿ'' ಸಿಟ್ಟಿನಿಂದ ಹೇಳಿದ.

ಸುನಾದಮಾಲಳ ಕಣ್ಣುಗಳು ದೊಡ್ಡವಾದುವು. "ವ್ಹಾಟ್?'' ಅಂದಳು.

"ಕೆಲವರು ಹಾಗೇ. ಮೇಲೆ ಧೈರ್ಯ ತೋರಿಸಲಾರರು. ಎಲ್ಲಾ ಒಳಗೊಳಗೇ''–ಅವಳ ಮುಖ ಕೆಂಪಗಾಯಿತು. ''ವಾಡ್ಡೂಯುಮೀನ್?" ಕೋಪದಿಂದ ಕೇಳಿದಳು.

''ನೋಡಿ ಮಿಸ್, ಯಾವ ಕೆಲಸವನ್ನೇ ಆದರೂ ಧೈರ್ಯದಿಂದ ಮಾಡಬೇಕು. ಭಾರ ನೋಡಬೇಕೆಂದಿದ್ದರೆ ನೇರವಾಗಿ ಎತ್ತಬೇಕು. ಚುಂಬಿಸಬೇಕೆಂದಿ

ದ್ದರೆ ಕೆನ್ನೆಗೆ ತುಟಿ ತಾಗಿಸಬೇಕು. ಮನೆಗೆ ಹೋಗಿ ನಾನು ಹಿಡಿದುಕೊಂಡಿದ್ದ ಕೈಗೆ ಹತ್ತುಸಾವಿರ ಸಲ ಮುದ್ದಿಸುವುದಲ್ಲ. ನನ್ನ ಭಾರವನ್ನು ಊಹಿಸಿಕೊಂಡು ರಾತ್ರಿಯೆಲ್ಲಾ ತೃಪ್ತಿಪಡುವುದಲ್ಲ."

''ನೀವು ಕೂಡಲೇ ನನ್ನ ದಾರಿಯಿಂದ ದೂರ ಹೋಗದಿದ್ದರೆ ಪೋಲೀಸ ರನ್ನು ಕರೆಯಬೇಕಾಗುತ್ತದೆ."

''ಕರೆಯಿರಿ. ನಾನೂ ನೋಡ್ತೀನಿ."

"ಏನು ಹೇಳ್ತೀರಿ. ಏನು ಹೇಳ್ತೀರ್ರೀ ನೀವು?''

''ನೀವು ನನ್ನನ್ನು ಪ್ರೀತಿಸಿ, ಆ ವಿಷಯ ಹೇಳಲು ಭಯಪಡುತ್ತಿದ್ದೀ ರೆಂದು''

''ನಾನು ನಿಮ್ಮನ್ನು ಪ್ರೀತಿಸಿದ್ದೀನಾ? ನನ್ನ ಕೊನೆಯ ಉಸಿರಿರುವವ ರೆಗೂ ಅದು ಸಾಧ್ಯವಿಲ್ಲ."

ಅವನು ಅವಳ ಕೈಹಿಡಿದುಕೊಂಡು ''ಹಾಗಾದರೆ ನಿಮ್ಮ ಉಸಿರಿರು ವಾಗಲೇ-ನಿಮ್ಮ ಬಾಯಿಂದ 'ಐ ಲವ್ ಯು' ಎಂಬ ಪದಗಳನ್ನು ಆಡಿಸುತ್ತೇನೆ. ಇಪ್ಪತ್ನಾಲ್ಕು ಗಂಟೆಗಳೊಳಗಾಗಿ ಹಾಗೆ ಮಾಡದಿದ್ದರೆ ನನ್ನ ಹೆಸರು ವಿಹಾರಿ ಅಲ್ಲ'' ಅಂದ.

''ಕೈ ಬಿಡು."

"ಪಾಣಿಗ್ರಹಣದ ವರೆಗೂ ಬಿಡುವುದಿಲ್ಲ''

ಅಷ್ಟರಲ್ಲಿ ಪೋಲೀಸು ಬಂದ ಅಲ್ಲಿಗೆ.

''ಏನಿದು ಗಲಾಟೆ—''

"ಏನೋ ಪ್ರೇಮಿಗಳ ಜಗಳ. ನಮಗ್ಯಾಕೆ ಬಿಡಿ ಸ್ವಾಮಿ–"ಪದ್ಮಾಕರ್ ಹೇಳಿದ,

"ಯು ಆರ್ ಅಂಡರ್ ಅರೆಸ್ಟ್'' ವಿಹಾರಿ ಕಡೆ ನೋಡುತ್ತಾ ಹೇಳಿದ ಪೋಲೀಸು.

''ಐವಾಂಟೆಡ್ ಟುಬಿ ಅರೆಸ್ಟೆಡ್ ಅಂಡರ್ ಹರ್ ಓನ್ಲಿ" ವಿಹಾರಿ ಹೇಳಿದ.

"ಇಗೋ! ನನಗೆ ಇಂಗ್ಲಿಷ್ ಬರುವುದಿಲ್ಲವೆಂದು ಏನೇನೋ ಮಾತನಾಡ ಬೇಡ. ನಡಿ ಪೋಲೀಸ್ ಸ್ಟೇಷನ್‌ಗೆ" ಎನ್ನುತ್ತಾ ವಿಹಾರಿಯನ್ನು ಎಳೆದುಕೊಂಡು ಹೊರಟ.

ಅವನೊಡನೆ ಹೋಗುತ್ತಾ ವಿಹಾರಿ ಕಿರುಚಿದ. "ಹೇಗಾದರೂ ನಿಮ್ಮಿಂದ ಅನ್ನಿಸಿಯೇ ಅನ್ನಿಸುತ್ತೇನೆ ಮೇಡಂ-ಐಲವ್‌ಯು-ಎಂದು. ನೆನಪಿಟ್ಟುಕೊಳ್ಳಿ.''

ಓಡುತ್ತಿದ್ದಂತೆ ನಡೆಯುತ್ತ ಸುನಾದಮಾಲ ಅಲ್ಲಿಂದ ಬೇಗ ಬೇಗನೆ

ಹೊರಟಳು.

"ನಡಿಯಯ್ಯಾ—ಪೋಲೀಸ್ ಸ್ಟೇಷನ್‌ಗೆ''

''ಏಕೆ? ನಿನಗೆ ಮಕ್ಕಳಿಲ್ಲವಾ? ನೀನು ಪ್ರೀತಿಸುವುದಿಲ್ಲವಾ?''

''ಬಾಯ್ಮುಚ್ಚು"

"ಏಕೆ ಮುಚ್ಚಬೇಕು? ಅಂಗೈಯಿಂದ ಸೂರ್ಯನನ್ನು ತಡೆಯಲು ಸಾಧ್ಯವಿಲ್ಲ.ಲಾಠಿಯಿಂದ ಪ್ರೀತಿ ಯನ್ನು ತಡೆಯಲು ಸಾಧ್ಯವಿಲ್ಲ. ಕುತಕುತನೆ ಕುದಿಯುತ್ತಿರುವ ಗಂಡಿನ ಪ್ರೀತಿಯನ್ನು ಶೀತಲ ಗಾಳಿಯಂತಹ ಲಂಗ, ದಾವಣಿ ಬಿಟ್ಟು ಲಾಠಿ ತಣ್ಣಗೆ ಮಾಡಲಾರದು'' ಆವೇಶದಿಂದ ಕಿರುಚಿದಪದ್ಮಾಕರ್.

ಆ ಮೂವರೂ ಆ ರೀತಿ ಜಗಳವಾಡುತ್ತಿದ್ದಂತೆಯೇ ಅಲ್ಲಿಗೊಂದು ಕಾರು ಬಂದು ನಿಂತಿತು. ಅದರಿಂದ ಪ್ರವಲ್ಲಿಕ ಇಳಿದಳು. "ಏನಾಯಿತು?" ಎನ್ನುತ್ತಾ ಅಲ್ಲಿಗೆ ಬಂದಳು.

"ಇವನೊಬ್ಬ ದೊಡ್ಡ ರೌಡಿ ಮೇಡಂ"

''ಈತ ನನಗೆ ಪರಿಚಯ. ಬಿಟ್ಟುಬಿಡು" ಅಂದಳು.

"ಓಹೋ. ಹಾಗಾದರೆ ನೀವೂ ಕೇಸೇ ಅಂದಂತಾಯಿತು'' ಹಗುರವಾಗಿ ಹೇಳಿದ ಪೋಲೀಸ್.

''ಷಟಪ್—"ಎನ್ನುತ್ತಾ ಕಾರ್ಡನ್ನು ತೆಗೆದು ತೋರಿಸುತ್ತಾ. "ಸಿ.ಬಿ.ಐ. ಡೆಪ್ಯೂಟಿ ಛೀಫ್" ಅಧಿಕಾರಯುತವಾಗಿ ಹೇಳಿದಳು.

ತಕ್ಷಣವೇ ಪೋಲೀಸ್ ಸೆಲ್ಯೂಟ್ ಮಾಡಿದ. "ಸಾರಿ ಮೇಡಮ್!" ಎರಡು ನಿಮಿಷಗಳ ನಂತರ ಅವಳನ್ನು ಕಾರಿನ ಬಳಿ ಕರೆದೊಯ್ದು ಹೇಳಿದ ವಿಹಾರಿ. ''ಥ್ಯಾಂಕ್ಯೂ ಸಮಯಕ್ಕೆ ಸರಿಯಾಗಿ ಬಂದಿರಿ''

"ನಿಜವಾಗಿಯೂ ಸಮಯಕ್ಕೆ ಸರಿಯಾಗಿ ಬಂದಿದ್ದೇನಾ?" ನಗುತ್ತಾ ಕೇಳಿದಳು.

''ಒಂದೈದು ನಿಮಿಷ ಮುಂಚೆ ಬಂದಿದ್ದರೆ ನಾಟಕ ನೋಡುತ್ತಿದ್ದಿರಿ"

"ನಿಜವಾ. ಹಾಗಾದರೆ ನಾನು ಅದೃಷ್ಟವಂತಳು" ಕಾರನ್ನು ಹತ್ತುತ್ತಾ ನಕ್ಕಳು.

"ನಾಟಕವೆಂದರೆ ನೆನಪಾಯಿತು. ನಾಳೆ ಒಂದು ನಾಟಕವಿದೆ ತಪ್ಪದೆ ಬನ್ನಿ. 'ಲವಕುಶ' ಎಂದು ನಮ್ಮ ಜೂನಿಯರ್ಸ್ ಆಡುತ್ತಾರೆ"

"ಮತ್ತೆ ನಮ್ಮ ವಿಲನ್ಸ್ ಕೂಡಾ ಬರುತ್ತಾರೇನೋ"

"ಈ ಸಲ ನಮ್ಮಿಂದ ತಪ್ಪಿಸಿಕೊಳ್ಳಲಾರರು"

"ಬರ್ತೀನಿ ಇಪ್ಪತ್ನಾಲ್ಕು ಗಂಟೆಗಳೊಳಗಾಗಿ ಮಾಡಬೇಕಾದ ಮುಖ್ಯ

ಕೆಲಸವೊಂದಿದೆ"

"ಹಾಗಾ-ಆಲ್‌ದಿಬೆಸ್ಟ್. ಗುಡ್‌ಬೈ"

"How to tell somebody that you are in love with him/her" ಎಂಬ ವಿಷಯದ ಬಗ್ಗೆ ಯಾರೂ ಇದು ವರೆವಿಗೂ, ಒಂದು ಪುಸ್ತಕವನ್ನೂ ಬರೆಯದಿದ್ದುದಕ್ಕೆ, ಯಾವ ಪ್ರತಿಬಂಧವೂ ಬರದಿದ್ದುದಕ್ಕೆ ಕಾರಣ ಬಹುಶಃ ಅಷ್ಟು ಅವಶ್ಯಕವಾದ ಸಬ್ಜೆಕ್ಟ್ ಮತ್ತೊಂದು ಇರದಿರುವುದೇ ಆಗಿರ ಬಹುದು.

ಹತ್ತು ಜನರ ನಡುವೆ ಇರುವಾಗ ಪರಧ್ಯಾನದಿಂದಿರುವುದು, ಮಾಡು ತ್ತಿರುವ ಕೆಲಸವನ್ನು ಅಷ್ಟಕ್ಕೆ ನಿಲ್ಲಿಸಿ ಯೋಚಿಸಲು ಆರಂಭಿಸುವುದು, ವಿನಾ-ಕಾರಣ ತನ್ನಲ್ಲೇ ತಾನು ನಗುವುದು, ಅಗತ್ಯಕ್ಕಿಂತಲೂ ಹೆಚ್ಚು ಎಚ್ಚರಿಕೆ... ಇಲ್ಲವೇ ಅಗತ್ಯಕ್ಕಿಂತಲೂ ಹೆಚ್ಚು ಭಯ-ಒಟ್ಟಿನಲ್ಲಿ ಸಾಮಾನ್ಯ ಪರಿಸ್ಥಿತಿಗಿಂತಲೂ ಒಂದು ಭಿನ್ನ ರೀತಿಯಲ್ಲಿರುವುದು-ಇವೆಲ್ಲಾ ಪ್ರೀತಿಯ ಲಕ್ಷಣಗಳು. ಆದರೆ ಪ್ರೀತಿ ಯಲ್ಲಿ ಸಿಲುಕಿಕೊಳ್ಳುವುದು ಬೇರೆ ಅದನ್ನು ಬೇರೆಯವರಿಗೆ ತಿಳಿಯಪಡಿಸುವುದು ಬೇರೆ.

ಕೆಲವರಿಗೆ ಇದು ಕಷ್ಟಕರ ಕೆಲಸವಾಗಿ ಕಾಣಬಹುದಾದರೂ ಆ ಶೇಕಡಾ ವಾರು ತುಂಬಾ ಕಡಿಮೆ. ಮಗುವಿಗೆ ಹಾಲು ಕುಡಿಯುವುದು ತಿಳಿದಂತೆ, ಸೃಷ್ಟಿ ಕರ್ತನ ಅವಶ್ಯಕತೆಯಾಗಲೀ, ಡಾರ್ವಿನ್ನನ ಸೂತ್ರವಾಗಲೀ ಇಲ್ಲದೆ, ವಯಸ್ಸಿಗೆ ಬಂದವರಿಗೆ ತಮ್ಮಲ್ಲಿ ಉಂಟಾದ ಪ್ರೀತಿಯನ್ನು ಬೇರೆಯವರಿಗೆ ತಿಳಿಸುವ ವಿಧಾನ ಗೊತ್ತಾಗುತ್ತದೆ;ಕಿರುನಗೆ, ಮಿಂಚಿನ ನೋಟ ಅಷ್ಟೇ ಸಾಕು.

ಈ ಎರಡೂ ಅಲ್ಲದೆ ಮೂರನೆ ರೀತಿಯು, 'ನಾನು ಮದುವೆಯನ್ನೇ ಮಾಡಿ ಕೊಳ್ಳುವುದಿಲ್ಲ' ಎಂದು ಕೊನೆಯವರೆಗೂ ತಡೆದು, ಕೊನೆಗೆ ವಿಧಿಯಿಲ್ಲವೆಂದು ಮದುವೆಯಾಗಿ ಸುಖಪ್ರಸವ ಗೃಹಕ್ಕೆ ದಾರಿತೋರುವ ಮನಸ್ಸತ್ವ ಮಾನವ ಪ್ರಪಂಚದಲ್ಲಿ ಲಿಂಡಲ್ ಥಿಯರಿಯಷ್ಟೇ ಸಹಜ.

ಹೀಗೆ ಯೋಚಿಸುತ್ತಾ ಹೋದರೆ ಕೊನೆಗೆ ಉಳಿಯುವುದು ಇಂಟ್ರಾವರ್ಟ್‌ಗಳು, ಪ್ಲೇಕಾಟ್ಸ್‌ಗಳು, ಕಾಕ್‌ಟೇಲುಗಳು, ಸೂಡೋ-ಫಿಲಾಸಫರ್‌ಗಳು, ವಯ ಸ್ಸಿಗಿಂತಲೂ ಮುಂಚೆಯೇ ಮೆಚ್ಯೂರ್ ಆಗಿ ಹೋಗಿದ್ದೇವೆಂದುಕೊಳ್ಳುವವರು ಇತ್ಯಾದಿ...ಇದರಲ್ಲಿ ಸುನಾದಮಾಲ ಎರಡನೆ ವರ್ಗಕ್ಕೆ ಸೇರುತ್ತಾಳೆ.

ಕ್ಲಾಸಿನಲ್ಲಿ ಲೆಕ್ಚರರ್ ಹೇಳುತ್ತಿದ್ದ ಪಾಠ ಅವಳ ಕಿವಿಯ ಮೇಲೆ ಬೀಳುತ್ತಿ ತ್ತಾಗಲೀ, ಸುನಾದಮಾಲಳ ಮನಸ್ಸು ಮತ್ತೆಲ್ಲೋ ಇತ್ತು. ಅವಳು ತನಗೆ ಹಿಂದಿನ ರಾತ್ರಿ ಬಿದ್ದಿದ್ದ ಎರಡು ಕನಸುಗಳಿಂದ ಇನ್ನೂ ಚೇತರಿಸಿಕೊಂಡಿರಲಿಲ್ಲ.

ಮೊದಲನೆ ಕನಸಿನಲ್ಲಿ ಹತ್ತು ಜನ ನಿಕುಂಜ್ ವಿಹಾರಿಗಳು ಹತ್ತು ರೀತಿಯ ಆಯುಧಗಳನ್ನು ಹಿಡಿದುಕೊಂಡು ಅವಳನ್ನು ಸಿಗಿದು ಚೆಂಡಾಡುತ್ತಿರುವಂತೆ ಕನಸು ಕಂಡಿದ್ದಳು. ಬೆಳಗ್ಗೆ ಏಳುತ್ತಿದ್ದಂತೆಯೇ ಹತ್ತು ಸಲ ರಾಮಚರಿತ ಮಾನಸ ಓದಿದರೂ ಅವಳ ಎದೆ ಬಡಿತ ಕಡಿಮೆಯಾಗಲಿಲ್ಲ. ಅವಳಿಗೆ ಭಯ ಹುಟ್ಟಿಸಿದ್ದು ನಿಜವಾಗಿಯೂ ಎರಡನೆ ಕನಸು. ಅದರಲ್ಲಿ ಅವಳು ಒಂದು ಹಂಸ ತೂಲಿಕಾ ತಲ್ಪದ ಮೇಲೆ ಮಲಗಿ ನಿದ್ರಿಸುತ್ತಿದ್ದಂತೆಯೇ ವಿಹಾರಿ ಬಂದು ಅವಳ ಕೆನ್ನೆಯ ಮೇಲೆ ಮುದ್ದಿಸಿದ. ಅದುವರೆವಿಗೂ ಚೆನ್ನಾಗಿಯೇ ಇದ್ದಳು. ಎರಡು ದಿನಗಳ ನಂತರ ಕೆನ್ನೆಯನ್ನು ಸೀಳಿಕೊಂಡು ಒಂದು ಗಿಡ ಬೆಳೆಯಿತು. ಜನ ತಂಡೋಪತಂಡದಿಂದ ಬಂದು ನೋಡಿ ಇದರ ಬಗ್ಗೆಯೇ ಚರ್ಚಿಸಲು ಪ್ರಾರಂಭಿಸಿದರು. ಆ ವೈಪರೀತ್ಯವನ್ನು ಸರಿಪಡಿಸಿದವನಿಗೆ ತನ್ನ ಮಗಳನ್ನು ಕೊಟ್ಟು ವಿವಾಹ ಮಾಡುವುದಾಗಿ ರಾಜ ಪ್ರಕಟಿಸಿದ. ಒಬ್ಬ ವೈದ್ಯ ದೂರದಿಂದ ಬಂದವನೇ ಅವಳ ಕೆನ್ನೆಗಳನ್ನು ಮೊದಲಿನಂತೆಯೇ ಮಾಡಿದ. ಅವನಾರೂ ಅಲ್ಲ– ವಿಹಾರಿಯೇ. ರಾಜ ಸಂತೋಷದಿಂದ ತನ್ನ ಮಗಳನ್ನು ಮದುವೆಯಾಗುವಂತೆ ಹೇಳಿದ. ವಿಹಾರಿ ಆಗಲೇ ತನಗೆ ಇಬ್ಬರು ಹೆಂಡತಿಯರಿದ್ದಾರೆಂದು ಹೇಳಿ ನಿರಾಕರಿಸಿದ. ಆನಂತರ ಸುನಾದಮಾಲ ಜೀವಿತಾಂಶವೂ ಅವಿವಾಹಿತಳಾಗಿಯೇ ಉಳಿದಳು.

ಅದು ಕನಸು.

ಎಂತಹ ಮಾನಸಿಕ ಸ್ಥಿತಿಯಲ್ಲಿರುವಾಗ ಮನುಷ್ಯರಿಗೆ ಎಂಥ ಕನಸುಗಳು ಬೀಳುತ್ತವೆಂದು ತಿಳಿದವರಿಗೆ, ಸುನಾದಮಾಲಳ ಪ್ರಸ್ತುತ ಸ್ಥಿತಿಯನ್ನು ವಿಶ್ಲೇಷಿಸುವುದು ಕಷ್ಟವಾಗಲಾರದು.

* * * *

ಯಾವ ಪುಸ್ತಕದಲ್ಲಿಯೂ ಓದುವ ಅವಶ್ಯಕತೆಯಿಲ್ಲದೆ, ಪ್ರೀತಿಯನ್ನು ಮತ್ತೊಬ್ಬರಿಗೆ ತಿಳಿಸುವ ಕ್ರಿಯೆ ಮನುಷ್ಯರಿಗೆ ಹೇಗೆ ತಿಳಿಯುತ್ತದೆಯೋ, ಪ್ರೀತಿಯಲ್ಲಿ ಸಿಕ್ಕಿಕೊಂಡ ಮನುಷ್ಯನನ್ನು ಗುರುತಿಸುವುದು ಕೂಡಾ ಅಷ್ಟೇ ಸುಲಭವೆಂದು ಹೇಳಬಹುದು.

"ಈ ವಿಹಾರಿಯ ತಂದೆ ಏನು ಮಾಡುತ್ತಿದ್ದಾರಮ್ಮಾ?" ಎಂದು ಪ್ರತಾಪರಾವ್ ಕೇಳಿದಾಗ ಪ್ರವಲ್ಲಿಕ ಆಶ್ಚರ್ಯಪಟ್ಟಳು, ಎಷ್ಟೇ ಸಿ. ಬಿ. ಐ. ಆಫೀಸರಾದರೂ, ಎಷ್ಟೇ ಎಕ್ಸ್ ಪ್ರೆಷನ್ ಥೆರಪಿ ತಿಳಿದಿದ್ದರೂ ಕೆಲ ಭಾವನೆಗಳನ್ನು ಅಡ

ಗಿಸಿಕೊಳ್ಳುವುದು ಅಸಾಧ್ಯವೆಂದು ಅವಳಿಗಾಗಲೇ ಮನವರಿಕೆಯಾಗಿತ್ತು. ಅದು ನೆನಪಾಗಿ ನಕ್ಕಳು. ಆತ ಕೂಡಾ ನಕ್ಕುಬಿಟ್ಟರು.

"ವಿಹಾರಿಗೆ ತಂದೆ ಇಲ್ಲವಂತೆ ಅಪ್ಪ, ಚಿಕ್ಕಂದಿನಲ್ಲೇ ಹೋಗಿಬಿಟ್ಟರಂತೆ. ತಾಯಿ ಇದ್ದಾರೆ. ಆತನ ತಾತ ರಾಜಾ ನರೇಂದ್ರವರ್ಮರಂತೆ"

"ಓಹ್-ಆತನ ಮೊಮ್ಮಗನಾ? ಹಾಗಾದರೆ ನನಗೆ ಚೆನ್ನಾಗಿ ಗೊತ್ತು" ಪ್ರವಲ್ಲಿಕ ತಂದೆಯ ಕಡೆಗೆ ನೋಡಿದಳು.

"ಆ ದಿನಗಳಲ್ಲೇ ಆತ ಕೋಟ್ಯಾಧಿಪತಿ, ಎಷ್ಟೋ ಗುಪ್ತದಾನಗಳನ್ನು ಮಾಡುತ್ತಿದ್ದ. ನನ್ನ ಓದೂ ಆತನಿಂದಲೇ. ನನ್ನನ್ನು ಸೈನ್ಯದಲ್ಲಿ ಸೇರಿಸಿದ್ದೂ ಆತನೇ." ಪ್ರತಾಪರಾವ್ ಹೇಳುತ್ತಿದ್ದ. "...ಆದರೆ ಆತ ದುರದೃಷ್ಟವಂತ. ಇದ್ದ ಒಬ್ಬಳೇ ಮಗಳು ಯಾರೋ ಒಬ್ಬ ಲಾಯರನ್ನು ಮದುವೆಯಾದಳು. ಇಬ್ಬರನ್ನೂ ಮನೆಯಿಂದ ಓಡಿಸಿದರು. ಆ ಲಾಯರ್ ತನ್ನ ಮಗಳನ್ನು ಕೇವಲ ಆಸ್ತಿಗಾಗಿ ಮದುವೆಯಾಗಿದ್ದಾನೆಂದು ಆತನ ದೃಢವಾದ ಅಭಿಪ್ರಾಯ. ಇಬ್ಬರೂ ಬೇರೆ ಹೋಗಿ ಸಂಸಾರ ಮಾಡಿದರು. ವರ್ಧನಮ್ಮನ ಗಂಡನನ್ನು ನಾನು ನೋಡಿದ್ದೆ. ತುಂಬಾ ಬುದ್ಧಿವಂತನಂತೆ ಕಾಣುತ್ತಿದ್ದ. ಆದರೆ ಆ ಮುದುಕನ ಅಭಿಪ್ರಾಯವೂ ನಿಜವೇನೋ ಎಂಬುವಷ್ಟು "ಕ್ರುಕೆಡ್‌ನೆಸ್" ಕೂಡಾ ಕಾಣುತ್ತಿತ್ತು ಆ ಲಾಯರನ ಕಣ್ಣುಗಳಲ್ಲಿ......ಏನೇ ಆದರೂ ಆ ಮುದುಕ ತನ್ನ ಹಠವನ್ನು ಬಿಡಲಿಲ್ಲ.

ಎರಡು ವರ್ಷಗಳ ಕಾಲ ಸಾಕಷ್ಟು ಕಷ್ಟವನ್ನು ಅನುಭವಿಸಿದರು. ಎಲ್ಲಿದ್ದಾರೋ ಗೊತ್ತಿರಲಿಲ್ಲ. ಹೇಗೆ ಬದುಕುತ್ತಿದ್ದಾರೋ ಗೊತ್ತಿರಲಿಲ್ಲ. ಆ ಲಾಯರ್ ಸತ್ತುಹೋದನೆಂದು ಒಂದು ದಿನ ಟೆಲಿಗ್ರಾಂ ಬಂತು. ಆತ ಹೋಗಿ ಮಗಳನ್ನು ಕರೆತಂದ. ಅವಳ ಮಗನೇ ವಿಹಾರಿ"

ಪ್ರವಲ್ಲಿಕ ಕೇಳುತ್ತಿದ್ದಳು, ಅವಳ ಊಹೆ ನಿಜವಾದದ್ದರಿಂದ ಮನಸ್ಸಿನಲ್ಲೇ ಸಂತೋಷಪಡುತ್ತಿದ್ದಳು. ಮೇಲೆ ಎಷ್ಟೇ ಸಾಮಾನ್ಯವಾಗಿ ಕಂಡರೂ ವಿಹಾರಿಯಲ್ಲಿ ಕೆಲವು ಅದ್ಭುತ ಗುಣಗಳಿವೆಯೆಂದು ಅವಳು ಮೊದಲನೇ ನೋಟದಲ್ಲೇ ಗಮನಿಸಿದ್ದಳು. ಅದಕ್ಕೆ ಅಷ್ಟು ದೊಡ್ಡ ಪೊಸಿಷನ್‌ನಲ್ಲಿದ್ದರೂ ಕೂಡ ಎರಡು ಮೂರು ಭೇಟಿಗಳಲ್ಲೇ ಅವನನ್ನು ಅಭಿಮಾನದಿಂದ ನೋಡಲು ಪ್ರಾರಂಭಿಸಿದ್ದಳು. ಅವನಿಗೆ ನಿಶ್ಚಿತವಾಗಿಯೂ ತಂದೆಯ ಬುದ್ಧಿವಂತಿಕೆ ಬಂದಿರುತ್ತದೆಂದು ಅಂದುಕೊಂಡಳು. ಅವನ ತಂದೆಯನ್ನು ತನ್ನ ತಂದೆ 'ಕ್ರೂಕ್' ಎಂದದ್ದು ಅವಳಿಗೆ ಸರಿಬರಲಿಲ್ಲ. ಒಂದೇ ನೋಟದಲ್ಲಿ ಆ ನಿರ್ಧಾರಕ್ಕೆ ಬರಲು ಸಾಧ್ಯವಿದ್ದಿದ್ದರೆ ಇಷ್ಟು ದೊಡ್ಡ ಸಿ.ಬಿ.ಐ. ಇಲಾಖೆ ಏಕೆ ಬೇಕಾಗಿತ್ತು? ತಮ್ಮ ಮನೆಯ ಹೆಣ್ಣು

ಮಗಳನ್ನು ಕರೆದೊಯ್ದದಕ್ಕೆ ಹಾಗೆ ಅಂದುಕೊಂಡಿರುತ್ತಾರೆ. ಆದರೂ ಮರಣ ಹೊಂದಿದವನ ಬಗ್ಗೆ ಕೆಟ್ಟದಾಗಿ ಯೋಚಿಸಬಾರದು, ಮಾತನಾಡಕೂಡದು.

"ಅವನೊಡನೆ ಮಾತನಾಡುತ್ತೇನೆ" ಎಂದು ಪ್ರತಾಪರಾವ್ ಹೇಳಿದಾಗ ಪ್ರವಲ್ಲಿಕ ತಡಬಡಿಸಿ "ವಿಹಾರಿಯ ತಾಯಿಯೊಡನೆ ಮಾತನಾಡಿದರೆ ಚೆನ್ನಾಗಿರು-ತ್ತದೇನೋ ಅಪ್ಪ!" ಅಂದಳು.

"ಅಂದರೆ ನೀನು ಈಗಾಗಲೇ ಹುಡುಗನೊಡನೆ ಮಾತನಾಡಿದ್ದೀಯಾ?"

ಅವಳು ಮತ್ತಷ್ಟು ಬಿಕ್ಕಟ್ಟಿನಲ್ಲಿ ಬಿದ್ದು "ಮಾತನಾಡಿಲ್ಲವೆಂದುಕೊಳ್ಳಿ. ಇವತ್ತೇ ಹೇಳ್ತೀನಿ. ಆದರೆ ದೊಡ್ಡವರ ಮೂಲಕ ಪ್ರಸ್ತಾಪಿಸಿದರೆ ಆಕೆಗೆ ಗೌರವ ಕೊಟ್ಟಂತೆ ಅಲ್ಲವಾ!" ಅಂದಳು.

"ಹೌದೌದು ಅದೇ ಸರಿ, ನಾಲ್ಕೈದು ದಿನಗಳಲ್ಲಿ ಹೊರಡುತ್ತೇನೆ ಒಳ್ಳೆದಿನ ನೋಡಿ" ಎನ್ನುತ್ತಾ ಕ್ಯಾಲೆಂಡರ್ ಕಡೆಗೆ ನೋಡಿದರು.

''ನೀವು ಹೋಗುತ್ತೀರಾ?" ಸಂದೇಹದಿಂದ ಕೇಳಿದಳು.

ಆತ ನಕ್ಕ. "ಹೆಣ್ಮಗಳ ತಂದೆ ನಾನು ಹೋದರೇನೇ ಚೆನ್ನ ತಾಯಿ. ಕಾಲಿಲ್ಲ ದಿದ್ದರೂ ಕಾಲು ತೊಳೆಯುವುದು ಧರ್ಮವಲ್ಲವಾ?''

ಅವಳಿಗೆ. ಟಾಪಿಕ್ ಇಷ್ಟವಾಗದೆ ಮಾತು ಮರೆಸುವಂತೆ, ''ಸೈನ್ಯದಲ್ಲಿ ಕೆಲಸ ಮಾಡಿದವರಿಗೆ ಈ ಎಲ್ಲಾ ನಂಬಿಕೆಗಳಾ ಅಪ್ಪಾ?" ಎಂದು ಕೇಳಿದಳು.

"ಅದೇನಮ್ಮಾ ಹಾಗೇ ಕೇಳುತ್ತೀ...? ನಮ್ಮಲ್ಲಿ ಕೆಲವರು ಶಕ್ತಿ ಸ್ಥಾವರದ ಮೇಲೆ ಆಕ್ರಮಣ ಮಾಡುವ ಮುಂಚೆ ಪಂಚಾಂಗ ನೋಡಿಕೊಳ್ಳುತ್ತಿದ್ದರು" ಎಂದು ಕ್ಯಾಲೆಂಡರ್ ಕಡೆ ನೋಡುತ್ತಾ. ''ಆ.....ಇಗೋ...ಈ ದ್ವಾದಶಿ ಉತ್ತಮವಾಗಿದೆ. ಅವತ್ತೇ ಹೋಗಿ ಬರ್ತೀನಿ'' ಅಂದರು.

ಅವಳು ನಗುತ್ತಾ ಅಲ್ಲಿಂದ ಹೊರಟು ಹೋಗಲು ಸಿದ್ಧಳಾಗುತ್ತಿದ್ದಂತೆ– "ಆ ಹುಡುಗನಿಗೆ ಇದುವರೆವಿಗೂ ಹೇಳಿರದಿದ್ದರೆ, ನೀನು ಸೂಕ್ಷ್ಮವಾಗಿ ತಿಳಿಸಿರು. ನೇರವಾಗಿ ತಾಯಿಯನ್ನು ಕೇಳಿದರೆ ಹುಡುಗ ತಪ್ಪು ತಿಳಿದುಕೊಂಡಾನು'' ಅಂದರು.

"ಆ ವಿಷಯವನ್ನು ನಾನು ನೋಡಿಕೊಳ್ಳುತ್ತೇನೆ" ಎಂದು ನಾಚಿಕೆಯಿಂದ ಅವಳು ಓಡಿದಳು, ಮಗಳು ಹೋದ ದಿಕ್ಕಿಗೇ ಆತ ನೋಡುತ್ತಾ ಇದ್ದುಬಿಟ್ಟರು. ಹೆಂಗಸರಿಗೆ ಬುದ್ಧಿವಂತಿಕೆ, ಧೈರ್ಯ, ಸಾಹಸಗಳು ಆಭರಣಗಳಾಗಿರಬಹುದಾ-ಗಲೀ 'ಸ್ತ್ರೀತ್ವ'–ಎಲ್ಲಕ್ಕಿಂತಲೂ ದೊಡ್ಡ ಅಲಂಕಾರ. ಅಲ್ಲಿಂದ ಒಳಗೆ ಹೋದ ಪ್ರವಲ್ಲಿಕ ಮೊದಲು ತನ್ನ ಕೋಣೆಯಿಂದ ತಂದೆಯೆಡೆಗೆ ಬಗ್ಗಿ ನೋಡಿದಳು. ಆತ ಯಾವುದೋ ಪುಸ್ತಕ ಓದುತ್ತಿದ್ದರು. ಫೋನ್ ತೆಗೆದುಕೊಂಡು ವಿಹಾರಿಗೆ

ಡಯಲ್ ಮಾಡಿದಳು. ಅವಳ ತುಟಿಗಳ ಮೇಲೆ ನಗು ಲಾಸ್ಯವಾಡುತ್ತಿತ್ತು.

ಅತ್ತಕಡೆಯಿಂದ ವಿಹಾರಿಯ ಸ್ವರ ಕೇಳಿಸುತ್ತಿದ್ದಂತೆಯೇ, "ಐಲವ್ಯೂ" ಎಂದಳು ಗುಸಗುಸನೆ.

ಫೋನ್‌ನಲ್ಲಿ ಅಲ್ಲ. ಎದುರಿಗೆ ನಿಂತು ನಿನ್ಹತ್ರ ಆ ಮಾತು ಆಡಿಸ್ತೀನಿ, ಅದು ನನ್ನ ಸವಾಲು" ಅಂದ.

"ಸವಾಲಾ? ಅದೇನು ವಿಚಿತ್ರ?"

"ಏನೂ ಗೊತ್ತಿಲ್ದೇ ಇರೋಳ ಥರ ನಟಿಸ್ಬೇಡ. ಎದುರು ನಿಂತು ನನಗೆ ಭಯ ಹೋಗಿದೆ ವಿಹಾರಿ, ಐಲವ್ಯೂ–ಅಂದರೇನೇ ನಾನು ಒಪ್ಪಿಕೊಳ್ಳುವುದು."

"ಒಳ್ಳೆಯ ಮನೆತನಸ್ಥ ಹೆಣ್ಣು, ಎಷ್ಟೇ ಪರಿಚಯವಿದ್ದರೂ ಹಾಗೆ ಹೇಳ ಲಾರಳು. ಬೇಕಾದರೆ ಮೊದಲ ರಾತ್ರಿ ಹಾಲಿನ ಲೋಟ ಕೊಡುತ್ತಾ ಹೇಳುತ್ತೇನೆ ಬಿಡಿ."

ವಿಹಾರಿ ಕುರ್ಚಿಯಿಂದ ಒಂದೇ ನೆಗೆತದಿಂದ ಮೇಲೆದ್ದು ನಿಂತು, ''ಏನು? ಮದುವೆಯುವರೆಗೂ ಬಂದೆಯಾ?'' ಕೇಳಿದ.

ಅವಳು ಫೋನನ್ನು ಇಟ್ಟುಬಿಟ್ಟಳು.

ಗುಡಿಯಲ್ಲಿ ವಿಗ್ರಹದ ಮುಂದೆ ನೀಲಾಂಜನದಲ್ಲಿ ದೀಪಗಳು ಪ್ರಜ್ವಲ ವಾಗಿ ಉರಿಯುತ್ತಿವೆ. ಪೂಜಾರಿಯ ಕಂಠ ನಿಧಾನವಾಗಿ ಮಂತ್ರ ಪಠಿಸುತ್ತಿವೆ, ಸುನಾದಮಾಲ ಎರಡು ಕೈಗಳನ್ನು ಜೋಡಿಸಿ ಸುಮಾರು 2 ನಿಮಿಷಗಳ ಕಾಲ ಕಣ್ಮುಚ್ಚಿ ಪ್ರಾರ್ಥಿಸಿದಳು.

ಹಿಂದಿನ ರಾತ್ರಿ ಕನ್ನಡಿಯಲ್ಲಿ ಅವಳು ಮುಖ ನೋಡಿಕೊಂಡಾಗ ಅವಳ ಕೆನ್ನೆಯ ಮೇಲೆ ಸಣ್ಣ ಗುಳ್ಳೆ ಕಂಡಿತು. ಅವಳಿಗೆ ತನ್ನ ಕನಸು ನೆನಪಾಯಿತು. ಭೂಮಿಯಿಂದ ಗಿಡ ಬೆಳೆಯುವಾಗ ಮೊದಲು ಹಾಗೆಯೇ ಉಬ್ಬುತ್ತದೆ. ಭಯ ದಿಂದ ರಾತ್ರಿಯೆಲ್ಲಾ ನಿದ್ರೆ ಬರಲಿಲ್ಲ.

ಬೆಳಿಗ್ಗೆ ಎದ್ದು ಗುಡಿಗೆ ಬಂದಿದ್ದಳು. ಇನ್ನುಳಿದಿರುವುದು ಅಳುವೊಂದೇ. ಬೆಳಗಿನಜಾವದಿಂದಲೂ ಹನುಮ ಪುರಾಣವನ್ನು ಓದುತ್ತಲೇ ಇದ್ದಳು.

"ಪ್ರಸಾದ ತೆಗೆದುಕೋ ತಾಯಿ!"

ಪೂಜಾರಿ ಕೊಟ್ಟ ಪ್ರಸಾದವನ್ನು ತೆಗೆದುಕೊಂಡು ಕೊನೆಯ ಸಲ ದೇವ ರನ್ನು ಪ್ರಾರ್ಥಿಸಿದಳು. "ಭಗವಂತ ನನ್ನ ಕೆನ್ನೆಯನ್ನು ಮೊದಲಿನಂತೆ ಮಾಡು." ಅವಳು ಹೊರಬಂದು ಗುಡಿಯ ಮೆಟ್ಟಲುಗಳ ಮೇಲೆ ಕುಳಿತಳು. ಆಗ ಕೇಳಿಸಿತು ಹಿಂದಿನಿಂದ, "ಪಂದ್ಯ ಕಟ್ಟುತ್ತಿದ್ದಂತೆಯೇ ಹೆದರಿ-ಫೋನಿನಲ್ಲಿ ಹೇಳಿಬಿಟ್ಟೆಯಾ?"

ಅವಳ ಕೈಯಲ್ಲಿದ್ದ ತೆಂಗಿನ ಹೋಳು ಕೈಯಿಂದ ಜಾರಿ ಮೆಟ್ಟಲುಗಳ

ಮೇಲೆ ಗುಡಿಗಿಕೊಂಡು ಹೋದವು. ಅವಳ ಮುಖ 'ಉಪ್ಪೆಂದು' ಊದಿತು. ವಿಹಾರಿ ತುಂಬ ಸಲೀಸಾಗಿ ಬಂದು ಅವಳ ಪಕ್ಕ ಕುಳಿತ. "ನಾನು ಹೇಳಿದ್ದು - ನಿನ್ನಿಂದ ಎದುರುಬದುರಾಗಿರುವಾಗ 'ಐಲವ್ಯೂ' ಅನ್ನಿಸುತ್ತೇನೆಂದಾಗಲೀ ಫೋನಿನಿಂದಲ್ಲ."

ಅವಳು ಧೈರ್ಯ ತಂದುಕೊಂಡಳು. ಗುಡಿಯಲ್ಲಿದ್ದ ಹನುಮಂತ ಅವಳಿಗೆ ಧೈರ್ಯ ನೀಡುತ್ತಿರುವಂತೆ ಕಂಡ. "ನಾನು ಆ ಮಾತು ಹೇಳುವುದಿಲ್ಲ. ಹೇಳಲಾರೆ ಕೂಡಾ" ಅಂದಳು.

ವಿಹಾರಿಗೆ ಇರಿಟೇಷನ್ ಉಂಟಾಯಿತು. ಕೋಪವನ್ನು ಅತಿಕಷ್ಟದಿಂದ ಅಡಗಿಸಿಕೊಂಡ, ಈ ಹುಡುಗಿಯ ಮುಂದೆ ತಾನು ಪ್ರತಿಸಲವೂ ಸೋಲುತ್ತಿದ್ದಾನೆ. ತನ್ನ ಟ್ರೂಪ್‌ನಲ್ಲಿ ಇಂತಹ ಹುಡುಗಿಯಿದ್ದಿದ್ದರೆ ಅಥವಾ ಚಿತ್ರರಂಗದಲ್ಲಿದ್ದರೆ ಇದುವರೆವಿಗೆ ನಂ. ಒನ್ ಇಂಡಿಯಾ ಆಗುತ್ತಿದ್ದಳು.

ಅವನಿಗೆ ಆಶ್ಚರ್ಯ ಕೂಡಾ ಉಂಟಾಯಿತು. "ನಿನ್ನಿಂದ ಐ ಲವ್ಯೂ" ಅನ್ನಿಸುತ್ತೇನೆಂದು ಛಾಲೆಂಜ್ ಬೇರೆ ಮಾಡಿದ್ದ. ಅದೇ ಮಾತನ್ನು ಫೋನಿನಲ್ಲಿ ಹೇಳಿದಳು. ಮತ್ತೆ ಈಗ ಹೀಗೆ ಮಾತನಾಡುತ್ತಿದ್ದಾಳೆ. ಆ ಕಂಠದಲ್ಲಿಯಾಗಲೀ, ಕಣ್ಣುಗಳಲ್ಲಿಯಾಗಲೀ ಒಂದಿಷ್ಟೂ ಕಿರುನಗೆಯಾಗಲೀ, "ಸರಿ ಕಂಡುಹಿಡಿದು ಬಿಟ್ಟೆಯಲ್ಲಾ–ಇನ್ನುಮೇಲೆ ನಾವಿಬ್ಬರೂ ಒಂದು" ಎಂಬ ಭಾವನೆಯಾಗಲೀ ಇರಲಿಲ್ಲ.

ಅವನಿಗೆ ತಲೆಕೆಡುತ್ತಿತ್ತು. ಅಷ್ಟೇ ಅಲ್ಲ–ಅದರಿಂದ ಹಠ ಕೂಡಾ ಹೆಚ್ಚಾಗುತ್ತಿತ್ತು. ಅವಳಿಗೆ ನಾಲ್ಕು ಒದ್ದಾದರೂ ಸರಿ "ಅಯ್ಯಯ್ಯೋ–ನಿಜ ಹೇಳ್ತೀನಿ" ಅನ್ನಿಸಬೇಕು ಎನ್ನಿಸಿತು. ಆದರೆ ಅದಕ್ಕಿಂತಲೂ ನಿಜವಾದ ಸೋಲು ಬೇರೆ ಇರುವುದಿಲ್ಲ. ತನ್ನನ್ನು ಇಷ್ಟು ಆಟ ಆಡಿಸುತ್ತಿರುವ ಹುಡುಗಿಗೆ ತಾನೂ ಅಷ್ಟೇ ಬುದ್ಧಿವಂತಿಕೆಯಿಂದ ಪಾಠ ಕಲಿಸಬೇಕು–ಗೆಲ್ಲಬೇಕು. "ಓಕೆ! ಮಾಲಾ...... ನಿನ್ನಿಂದಲೇ ಹಾಲಿನ ಲೋಟ ತೆಗೆದುಕೊಳ್ಳುತ್ತೇನೆ. ಆಗಲೇ ಆ ಮಾತನ್ನು ಹೇಳುತ್ತೇನೆ"

ತಲೆ ತಿರುಗಿಸಿ ಗುಡಿಯ ಒಳಗೆ ನೋಡಿದಳು ಸುನಾದಮಾಲ. ಹನುಮಂತ ಧೈರ್ಯ ನೀಡುತ್ತಿರುವಂತೆ ಕಂಡಿತು.

"ಹಾಲಿನ ಲೋಟ ಅಲ್ಲ . ನೀರಿನ ಲೋಟಾನೂ ಕೊಡುವುದಿಲ್ಲ" ಎಂದಳು. ಅವಳು ತನ್ನ ಬದುಕಿನಲ್ಲಿ ಅಷ್ಟು ಧೈರ್ಯದಿಂದ ಮಾತಾಡಿದ್ದು ಮೊದಲನೆ ಸಲ,

"ನಾಳೆ ಮದುವೆ ಬಗ್ಗೆ ಮಾತನಾಡುವಾಗ ನಿಮ್ಮಜ್ಜಿ ಬರ್ತಾರಲ್ಲಾ ಆಗ ಹಾಗೇ ಹೇಳ್ತೀನಿ. ಹೆಣ್ಣಿನ ಕಡೆಯವರು, ಹೆಣ್ಣಿನ ಮೂಲಕ ನೀರಿನ ಲೋಟ

ಕೊಡಬೇಕು. ಅದು ನಮ್ಮ ಸಂಪ್ರದಾಯವೆಂದು ಹೇಳುತ್ತೇನೆ. ಆಗೇನು ಮಾಡ್ತಿ?''

ಅವಳೆದ್ದು ನಿಂತು, "ಅದೇ ನೀರಿನ ಲೋಟದಲ್ಲಿ ಸ್ವಲ್ಪ ವಿಷ ಬೆರೆಸಿ ಕೊಂಡು ಕುಡಿಯುತ್ತೇನೆ" ಎಂದಳು.

ಅವನೂ ಎದ್ದು ನಿಂತು, ''ನಾನು ತುಂಬಾ ದಡ್ಡನೆಂದು, ಕನಿಷ್ಟ ಒಂದು ಸಲವಾದರೂ ರೆಡ್ ಹ್ಯಾಂಡೆಡ್ ಆಗಿ ಹಿಡಿಯಲಾರೆ ಎಂದು ನಿನ್ನ ಜಂಭತಾನೆ? ನಿಜವೇ! ನನ್ನ ಬುದ್ಧಿವಂತಿಕೆಯನ್ನು ನಿರೂಪಿಸಿಕೊಳ್ಳುವ ಜವಾಬ್ದಾರಿ ನನ್ನ ಮೇಲೂ ಇದೆ. ನಿನ್ನಷ್ಟೇ ಬುದ್ಧಿವಂತಿಕೆ ನನಗೂ ಇದೆಯೆಂದೂ, ನಿನಗೆ ನಾನು ಸರಿಯಾದ ಜೋಡಿಯೆಂದೂ ನಿರೂಪಿಸುತ್ತೇನೆ, ಆ ದಿನವನ್ನು ಸರಿಯಾಗಿ ಹೇಳು ತ್ತೇನೆ ಕೇಳು. ಬರುವ ದ್ವಾದಶಿಯ ದಿನ ನಿನ್ನ ಪಾಣಿಗ್ರಹಣ ಮಾಡುತ್ತೇನೆ, ನನ್ನ ಕೈಯಲ್ಲಿ ಕೈಹಾಕಿ ಆ ವಿಷಯವನ್ನು ಒಪ್ಪಿಕೊಳ್ಳುವಂತೆ ಮಾಡುತ್ತೇನೆ. ಹಾಗೆ ಮಾಡದಿದ್ದರೆ ಇನ್ನು ನಿನ್ನ ಮುಖವನ್ನೇ ನೋಡುವುದಿಲ್ಲ. ನಾನು ನಿನಗೆ ಸಮಾನ ನಲ್ಲವೆಂದೂ, ನಿನ್ನ ಗಂಡನಾಗಲು ಅಯೋಗ್ಯನೆಂದು ಒಪ್ಪಿಕೊಳ್ಳುತ್ತೇನೆ. ಸರೀ ತಾನೇ" ಕಣ್ಮುಚ್ಚಿಕೊಂಡು ಹೇಳಿದ.

"ಬರುವ ದ್ವಾದಶಿ ದಿನವಾ–''

"ಹೌದು" ಕಣ್ಮುಚ್ಚಿಕೊಂಡೇ ಉತ್ತರಿಸಿದ.

"ತುಂಬಾ ಲೇಟಾಗುತ್ತದಲ್ಲಾ...ಇನ್ನೂ ಮುಂಚೇನೇ ಆಗಿದ್ರೆ ಚೆನ್ನಾಗಿತ್ತು."

ವಿಹಾರಿ ಬೆಚ್ಚಿಬಿದ್ದು ಕಣ್ಣುಬಿಟ್ಟ. ಸುನಾದಮಾಲ ಯಾವಾಗ ಹೊರಟು ಹೋಗಿದ್ದಳೋ ಅವನಿಗೆ ತಿಳಿಯಲಿಲ್ಲ. ವಿಷ್ಣು ಇದ್ದ ಅಲ್ಲಿ,

"ನಿಜ. ದ್ವಾದಶಿಯವರೆಗೂ ಏಕೆ ಕಾಯಬೇಕು, ಆಲಸ್ಯಂ ಅಮೃತಂ ವಿಷಂ ಎಂದಿದ್ದಾರೆ ದೊಡ್ಡವರು.''

"ಅಂದರೆ ಸಂಪೂರ್ಣ ವಿಷಯವೆಲ್ಲಾ ನಿಂಗೆ ಗೊತ್ತಾ?"

"ಕಿಡ್ನಾಪರ್ಸ್ ಬಳಿ ಆ್ಯಂಟಿಯೊಡನೆ ಮಾತನಾಡುತ್ತಿದ್ದಾಗಲೇ ತಿಳಿದು ಬಿಟ್ಟಿತ್ತು."

"ಲಾಭವಿಲ್ಲ. ನಿಮ್ಮ ಆ್ಯಂಟಿ ಕಬ್ಬಿಣದ ಕುದುರೆ, ಮಣ್ಣಿನ ಬೊಂಬೆ, ನೀರಿನ ಪೆನ್ನು.''

"ಹೊಸ ರೀತಿಯ ಬೈಗಳು ಚೆನ್ನಾಗಿಯೇ ಇದೆಯಾಗಲೀ ಮೊದಲು ಆದನ್ನು ಸಾಧಿಸುವುದರ ಬಗ್ಗೆ ಯೋಚಿಸಿ ಭಾವಾ–"

ಮತ್ತೆ ಬೆಚ್ಚಿಬಿದ್ದ ವಿಹಾರಿ. ಅಷ್ಟರಲ್ಲಿ ಅಲ್ಲಿಗೆ ಆಜ್ಜಿ ಬಂದಳು. "ಬರುವ

ದ್ವಾದಶಿಯ ದಿನ ಚೆನ್ನಾಗಿಯೇ ಇದೆಯಾಗಲೀ, ನನ್ನ ಮೊಮ್ಮಗಳನ್ನು ಬಡ ಲಾಯಿಸುವುದು ಕಷ್ಟವೆಂದು ನನ್ನ ಯೋಚನೆ. ಹುಡುಗಿಯನ್ನು ಗೆಲ್ಲಬೇಕಾದರ ಸೆಂಟಿಮೆಂಟ್ ಮೇಲೆ ಪ್ಲೇ ಮಾಡಬೇಕು."

"ಅಂದರೆ ಏನು ಮಾಡಬೇಕು?"

"ನಾನು ಹೇಳುತ್ತೇನೆ. ನಾಳೆ ಬಾ ಮನೆಗೆ–"

ವಿಹಾರಿ ಮುಜುಗರದಿಂದ, ''ಆ ಪ್ಲಾನು ನಿಜವಾಗಿಯೂ ಫಲಿ ಸುತ್ತದೆಯಾ ಆಜ್ಜ?'' ಎಂದು ಕೇಳಿದ.

''ತಪ್ಪದೇ...ಫಲಿಸುತ್ತದೆ.''

''ಅದು ಹೇಗೆ ಹೇಳುತ್ತೀರಿ?''

"ಸುನಾದ ಮಾಲಳ ತಾತನ ಮೇಲೆಯೂ ನಾನು ಅದೇ ಟ್ರಿಕ್ಕನ್ನು ಪ್ಲೇಮಾಡಿದ್ದ."

* * * * *

ಅನಂತಾನಂತಸ್ವಾಮಿಯ ಮುಖ ಪಶ್ಚಿಮ ಬೆಟ್ಟಗಳ ಕಡೆ ಜಾರುತ್ತಿದ್ದ ಸೂರ್ಯನ ಕೆಂಪು ಬಣ್ಣದ ಕಡೆ ತಿರುಗಿತ್ತು. ಆ ಕೆಂಪಿಗಿಂತಲೂ ಇವನ ಮುಖವೇ ಹೆಚ್ಚು ಕೆಂಪಗಿತ್ತು. ಅವನೆಂದೂ ಅಷ್ಟು ಆವೇಶಕ್ಕೊಳಗಾಗಿರಲಿಲ್ಲ. ಕೋಟಿ ರೂಪಾಯಿ ಬೆಲೆಯ ಆಯುಧಗಳು, ಅದರೊಡನೆ ಹೋದ ಉತ್ತಮ ಕಸ್ಟಮರ್–

–ಇದೆಲ್ಲಾ ಅಲ್ಲ ಅವನಿಗೆ ಕೋಪ ತರಿಸಿದ್ದು!

ಯಾರೋ ಸಾಬೋಟೇಜ್ ಮಾಡಿ ನಷ್ಟವನ್ನುಂಟು ಮಾಡಿದ್ದಾರೆ. ತನ್ನನ್ನು ಚೇಳು ಕಚ್ಚಿದ ಕಳ್ಳನಂತೆ ಮಾಡಿದ್ದಾರೆ.

ಯಾರು?

ಯಾರು?

ಯಾರು?

ಪ್ರವಲ್ಲಿಕ ಅಲ್ಲ. ಆ ಸಮಯದಲ್ಲಿ ಅವಳು ತನ್ನ ಕಾಲಿನ ಬಳಿ ಬಿದ್ದಿದ್ದಳು. ಮತ್ಯಾರು? ತನ್ನವರಲ್ಲೇ ಯಾರೋ ಮಾಡಿದ್ದಾರೆಂಬುದಕ್ಕೆ ಆಧಾರವಿಲ್ಲ. ಹಾಗೆ ನೋಡಿದರೆ ತನ್ನ ಬಳಿ ಅಂತಹವರಾರೂ ಇಲ್ಲ. ಯಾರಿಗೆ ಲಾಭ ಅದು? ಆ ಸ್ಥಳ ಯಾರಿಗೆ ತಿಳಿದಿತ್ತು?

ಪೋಲೀಸರು ಕೂಡಾ ಅಲ್ಲ. ಅವರಾಗಿದ್ದಿದ್ದರೆ ಆಧಾರ ಸಹಿತ ಹಿಡ್ಯಿಯು

ತ್ತಿದ್ದರು. ಕನಿಷ್ಟ ಆ ಪ್ರಯತ್ನವನ್ನಾದರೂ ಮಾಡಿರುತ್ತಿದ್ದರು. ಪೇಪರುಗಳಲ್ಲಿಯೂ ಅದು ಪೋಲೀಸರ ಕೆಲಸದಂತ ಪ್ರಕಟವಾಗಿಲ್ಲ.

ಮಾಯಸಭೆಯಲ್ಲಿ ದುರ್ಯೋಧನನಂತೆ ಅವನ ಸ್ಥಿತಿ ಆಗಿತ್ತು. ಪ್ರವಲ್ಲಿಕಳನ್ನು ಕಾಲಿನ ಬಳಿ ಕೆಡವಿಕೊಂಡು ತಾನು ವಿಜಯ ಗರ್ವದಿಂದ ನಕ್ಕಿದ್ದ. ಈ ಕೋಟಿ ರೂಪಾಯಿಗಳ ನಷ್ಟದ ಬಗ್ಗೆ ಕೇಳಿ ಅವಳು ಕೂಡಾ ಈಗ ಹಾಗೆಯೇ ನಗುತ್ತಿರುತ್ತಾಳೆ. ಆ ವಿಹಾರಿಯೊಡನೆ ಕಲೆತು ನಗುತ್ತಿರುತ್ತಾಳೆ. ಆನಂದಿಸುತ್ತಿರುತ್ತಾಳೆ...

ವಿಹಾರಿ!!!

ಸ್ವಾಮಿಯ ಆಲೋಚನೆ ಅಲ್ಲಿಯೇ ನಿಂತಿತು!

ಹೌದು–ವಿಹಾರಿ ಏಕಾಗಿರಬಾರದು?

ಯೋಚಿಸುತ್ತಿದ್ದಂತೆ ಅದು ದೃಢವಾಯಿತು.

...ತಾನೇ ಸ್ವತಃ ನಿರ್ಧರಿಸಿಕೊಳ್ಳಬೇಕೆಂದು ಮೇಲೆದ್ದ.

* * * *

ಕುಡಿದ ಟೀಕಪ್ಪನ್ನು ಟೇಬಲ್ ಮೇಲಿಟ್ಟು ವಿಹಾರಿ ಮೇಲೆದ್ದ. ಪ್ರತಾಪ-ರಾವ್ ಕೈಕುಲುಕಿ "ನಾನೇ ನಾಳೆ ಐದನೆ ತಾರೀಖು ನಿಮ್ಮ ಮನೆಗೆ ಬರಬೇಕೆಂದು ಕೊಂಡಿದ್ದೆ" ಎಂದು ಹೇಳಿದರು.

"ಷ್ಯೂರ್. ತಪ್ಪದೆ ಬನ್ನಿ" ಎಂದು ಪ್ರವಲ್ಲಿಕಳೊಡನೆ ಹೊರಬಂದ.

ಬಂದನಂತರ ತನ್ನಲ್ಲೇ ತಾನು ಲೆಕ್ಕಹಾಕಿಕೊಂಡು, "ಮೈಗಾಡ್— ದ್ವಾದಶಿ!!! ಆ ದಿನ ನಾನು ಮನೆಯಲ್ಲೇ ಇರುವುದಿಲ್ಲವಲ್ಲಾ" ಕಂಗಾಲಾಗಿ ಹೇಳಿಕೊಂಡ.

ಅವಳು ನಗುವನ್ನು ತಡೆದುಕೊಂಡು, ''ಏನಾಗ್ತಿದೆ?'' ಕೇಳಿದಳು.

ಅವನು ಮುಜುಗರದಿಂದ, ''ಎಲ್ಲಾ ಆದ ಮೇಲೆ ಹೇಳ್ತೀನಿ. ತುಂಬಾ ಕಷ್ಟವಾದ ಕೆಲಸ" ಎಂದು ಹೇಳಿದ.

"ಪರ್ವಾಗಿಲ್ಲಬಿಡಿ. ನಮ್ಮಪ್ಪ ಬರೋದು ನಿಮ್ಮ ತಾಯಿನ ನೋಡೋಕೆ'' ಅಂದಳು. ಅವನು ಮತ್ತಷ್ಟು ಆಶ್ಚರ್ಯದಿಂದ "ಏತಕ್ಕೆ?" ಎಂದು ಕೇಳಿದ. ಅವಳು ತಡಬಡಿಸಿ, "ನಿಮ್ಮ ತಾತ, ನಿಮ್ಮ ಅಮ್ಮ ನಮ್ಮಪ್ಪನಿಗೆ ಗೊತ್ತಂತೆ." ಅಂದುಬಿಟ್ಟಳು.

"ಓಹೋ ಹಾಗಾ?" ಎಂದು ಕೇಳಿದ ಕಾರಿನ ಬಳಿ ನಡೆಯುತ್ತಾ.

"ಗುಡ್‌ನೈಟ್–"

"ಗುಡ್‌ನೈಟ್."

ಅವನ ಕಾರನ್ನು ಸ್ಟಾರ್ಟ್‌ಮಾಡಿ ಮುಂದಕ್ಕೆ ನಡೆಸಿದ. ಹತ್ತುಗಜ ಹೋದನಂತರ ಹಿಂದಿನಿಂದ ಕೇಳಿಸಿತು ಮೆಲ್ಲಗೆ ಸ್ಪಷ್ಟವಾದ ಸ್ವರ !

"...ಕಂಗ್ರಾಜುಲೇಷನ್" ಎಂದು.

"ಅವನು ಬೆಚ್ಚಿಬಿದ್ದು ಹಿಂತಿರುಗಿ ನೋಡಿದ.

"ನನ್ನ ಹೆಸರು ಅನಂತಾನಂತ ಸ್ವಾಮಿ."

"ನೀವ್ಯಾರು?"

"ನಾನ್ಯಾರೆಂದು ಗೊತ್ತಿಲ್ಲವಾ?"

"ಬಹುಶಃ ಹೀಗೆಯೇ ಕಾರುಗಳಲ್ಲಿ ಕಳ್ಳತನ ಅದೂ ಇದೂ ಮಾಡುವವರಿರಬೇಕು."

''ಹುಚ್ಚು ಹುಡುಗಾ! ಮನಸ್ಸು ಮಾಡಿದರೆ ನಾನಿಂಥ ಹತ್ತು ಕಾರುಗಳ ಫ್ಯಾಕ್ಟರಿ ಇಡಬಲ್ಲೆ."

"ಮತ್ತೆ ನನ್ನ ಕಾರಿನಲ್ಲಿ ಬಂದು ಏಕೆ ಕುಳಿತಿದ್ದಿ?"

"ಎಚ್ಚರಿಕೆ ಕೊಟ್ಟು ಹೋಗೋಣವೆಂದು ಬಂದಿದ್ದೇನೆ. ಹಾಗೆಯೇ ಕಂಗ್ರ್ಯಾಟ್ಸ್ ಕೂಡಾ."

"ಏತಕ್ಕೆ?"

"ಮಿಲಿಟರಿ ವ್ಯಾನನ್ನು ಬ್ಲಾಸ್ಟ್ ಮಾಡಿದ್ದಕ್ಕೆ."

"ಅದು ನಿಮ್ಮದೇನಾ?"

"ಹಾಗಾದರೆ ಅದು ನಿನ್ನ ಕೆಲಸವೇ.''

"ನನ್ನ ಕೆಲಸಾ...?''

"ನೀನೇ ತಾನೇ ಆ ಎಕ್ಸ್‌ಪ್ಲೋಸೀವ್ಸನ್ನು ಬ್ಲಾಸ್ಟ್ ಮಾಡಿದ್ದು! ಕತ್ತಲಲ್ಲಿ ಬಾಣ ಬಿಟ್ಟೆ. ಸರಿಯಾಗಿ ತಗುಲಿದೆ.''

''ಇದಕ್ಕೆ ಕತ್ತಲಲ್ಲಿ ಬಾಣವೇಕೆ? ನನ್ನನ್ನು ಕೇಳಿದ್ದಿದ್ದರೆ ನಾನೇ ಹೇಳುತ್ತಿದ್ದೆನಲ್ಲಾ. ನಾನೇ ಆ ಕೆಲಸ ಮಾಡಿದ್ದು"

ಪಕ್ಕದಲ್ಲಿ ಮತ್ತೊಂದು ಉದ್ದವಾದ ಬೆಲೆ ಬಾಳುವ ಕಾರು ಬಂದು ನಿಂತಿತು. ''ನಿನಗೆ ನಮ್ಮವರು ಈಗಲೇ ಒಮ್ಮೆ ವಾರ್ನಿಂಗ್ ಕೊಟ್ಟಿದ್ದಾರೆ. ಇಲ್ಲದಿದ್ದರೆ ನಿನ್ನನ್ನು ಅವತ್ತೇ ಸೂರ್ಯಾರಾವ್ ಸಭೆಯಲ್ಲಿ ಕೊಂದುಬಿಡುತ್ತಿದ್ದ. ಈಗ ನನಗೆ ನಡೆದ ನಷ್ಟಕ್ಕೆ ನಿನ್ನನ್ನು ಮತ್ತೊಂದು ಸಲ ಸಾಯಿಸಬಹುದು. ಆದರೆ ಏಕೆ ಸಾಯಿಸುವುದಿಲ್ಲ ಗೊತ್ತಾ? ವಿರೋಧಪಕ್ಷವಿಲ್ಲದಿದ್ದರೆ ಪಾರ್ಲಿ

ಮೆಂಟ್ ಇಲ್ಲದಿದ್ದಂತೆ. ಶತ್ರುವು ಇಲ್ಲದಿದ್ದರೆ 'ಗೇಮ್' ಇರುವುದಿಲ್ಲ. ಎಲ್ಲರೂ ನನ್ನ ಭಕ್ತರೇ ಅಂದುಕೊ–ನನಗೇನು ಥ್ರಿಲ್ ಇರುತ್ತದೆ? ಆದರಲ್ಲಿಯೂ ನಿನ್ನಂಥ ಅಲ್ಪ ಪ್ರಾಣಿಗಳು ಶತ್ರುಗಳಾದರೆ ಮತ್ತಷ್ಟು ರಂಜನೀಯವಾಗಿರುತ್ತದೆ. ವಿಜಯ ನಿಶ್ಚಿತವೆಂದು ತಿಳಿದಾಗ ಅದೇ ಆಟದಂತಿರುತ್ತದೆ"–ಎನ್ನುತ್ತಿದ್ದಂತೆ ಕ್ರಮೇಣ ಅವನ ಕಂಠ ಸಿನಿಕಲ್ ಆಗಿ ಬದಲಾಗತೊಡಗಿತು.

"ಈ ದೇಶದ ರಾಜಕೀಯ ನಾಯಕರೆಲ್ಲಾ ನನ್ನ ಭಕ್ತರೇ. ಈ ದೇಶದ ಸರ್ಕಾರೀ ಯಂತ್ರಗಳೆಲ್ಲಾ ನನ್ನ ಮೊಣಕೈ ಕೆಳಗೆ ನೀರು ಕುಡಿಯುತ್ತಿರುತ್ತದೆ. ನೋಡಿದೆಯಾ ಒಂದು ಕೋಟಿ ನಷ್ಟ ಉಂಟಾದರೂ ನಾನೆಷ್ಟು ನೆಮ್ಮದಿಯಿಂದ ಇದ್ದೇನೆ. ಅಷ್ಟು ಹಣವಿದೆ ನನ್ನ ಬಳಿ! ಅಷ್ಟು ಬಲವಿದೆ ನನ್ನ ಬಳಿ!! ಬೇಕೆಂದರೆ ನಾನು ಈಗಲೇ ನಿನ್ನನ್ನು ಸಾಯಿಸಿಬಿಡಬಲ್ಲೆ. ಆದರೂ ಸಾಯಿಸುವುದಿಲ್ಲ. ಪ್ರಾಣಿ ಹಿಂಸೆ ಪಾಪ. ಆದಕ್ಕೆ ಪ್ರಜೆಗಳಿಗೆಲ್ಲಾ ನಾನು ಬೇಕಾದ ದೇವರಾಗಿದ್ದೇನೆ· ಕ್ಷಮಾ ಗುಣ ದೈವತ್ವ. ನಾನೇ ದೇವರು!! ನಾನೇ ದೇವರು!!!" ಎನ್ನುತ್ತಾ ತನ್ನ ಕಾರಿನ ಕಡೆಗೆ ನಡೆಯುತ್ತಿದ್ದ ಆ ಹಿಟ್ಲರ್‌ನಂತಹ ಸಿನಿಕನನ್ನು ಕಣ್ರೆಪ್ಪೆ ಬಡಿಯದೆ ನೋಡುತ್ತಿದ್ದ ವಿಹಾರಿ. ಅವನ ಕಾರು ಮುಂದಕ್ಕೆ ಹೋಗುತ್ತಿದ್ದಂತೆಯೇ ಏನೋ ಹೊಳೆಯದಂತೆ. ವೇಗವಾಗಿ ಹೋಗಿ. "ನಿಮ್ಮೊಡನೆ ಎರಡು ನಿಮಿಷ ಮಾತನಾಡಬಹುದಾ ಸ್ವಾಮಿ?" ವಿನಮ್ರತೆಯಿಂದ ಕೇಳಿದ. ಸ್ವಾಮಿಯು ಸನ್ನೆಯಂತೆ ಡ್ರೈವರ್ ಕೆಳಗಿಳಿದ. ವಿಹಾರಿಯೇ ಕಾರನ್ನು ನಡೆಸಲು ಮುಂದಾದ, ವಿಹಾರಿಯ ಕಾರನ್ನು ಆ ಡ್ರೈವರ್ ನಡೆಸುತ್ತಾ ಹಿಂಬಾಲಿಸುತ್ತಿದ್ದ. ಆದರೆ ಆ ಸ್ಪೀಡಿಗೆ ಹೊಂದಿಕೊಳ್ಳಲಾರದೇ ಹಿಂದೆಯೇ ಉಳಿದ.

"ಏನು ಹೇಳು—"

"ನೀವಿಷ್ಟು ಶ್ರೇಷ್ಠ ವ್ಯಕ್ತಿ ಹೇಗೆ ಆದಿರಿ?"

"ರಾಜಕೀಯ, ಬಲ. ತಿಳುವಳಿಕೆ–ಎಲ್ಲಾ ನನ್ನ ಸ್ವತ್ತೇ" ನಕ್ಕು ಹೇಳಿದ.

"ಆದರೆ ನ್ಯಾಯ, ಕಾನೂನು ಇರುತ್ತದಲ್ಲಾ ಸ್ವಾಮಿ!"

"ಇವೆಲ್ಲಾ ಏಕೆ ಕೇಳುತ್ತಿದ್ದಿ?"

"ನಾನು ನಿಮ್ಮಲ್ಲಿ ಸೇರಿದರೆ ಹೇಗೆ ರಕ್ಷಣೆ ಸಿಗುತ್ತದೆ ಎಂದು,"

"ಹುಚ್ಚು ಹುಡುಗಾ-ಆಗ ರಕ್ಷಣೆಯ ಪ್ರಶ್ನೆಯೇ ಇರುವುದಿಲ್ಲ"

"ಆದರೆ ಕಾನೂನು"

"ಸಾಕ್ಷಿ ಇಲ್ಲದೆ ಕಾನೂನಿಲ್ಲ"

ವಿಹಾರಿ ಕಾರಿನ ವೇಗವನ್ನು ಮತ್ತಷ್ಟು ಹೆಚ್ಚಿಸಿದ. ನೂರು ಕಿಲೋ ಮೀಟರ್ ದಾಟಿತು. "ಏನಿದು?" ಸ್ವಾಮಿ ಕೇಳಿದ.

"ನಿಮ್ಮೊಡನಿದ್ದರೆ ರಕ್ಷಣೆಯ ಅವಶ್ಯಕತೆಯೇ ಇಲ್ಲವೆಂದು ಹೇಳಿದ್ದಿರಲ್ಲಾ. ಹ್ಞ ಮತ್ತೆ ಈಗ ನಿಮಗೇ ರಕ್ಷಣೆಯಿಲ್ಲ"

"ನೀನೇನು ಮಾತನಾಡುತ್ತಿದ್ದಿ ?"

"ನೀವು ಹೇಳಿದ್ದು ನಿಜವೇ. ಸರ್ಕಾರ ನಿಮ್ಮ ಆಧೀನದಲ್ಲಿದೆ. ರಾಜಕೀಯ ನಾಯಕರು ನಿಮ್ಮ ಭಕ್ತರು. ಆದರೆ ಸರ್ಕಾರೀ ಅಧಿಕಾರಿಗಳಿಗೆ ಪ್ರಮೋಷನ್ ದಾಹ, ನಾಯಕರಿಗೆ ಪದವಿಯ ಭದ್ರತೆ ಮುಖ್ಯ. ಅವರೆಲ್ಲಾ ಕೆಲವು ನೀತಿ ನಿಬಂಧನೆಗಳಿಗೊಳಪಟ್ಟು ಕೆಲಸ ಮಾಡಬೇಕಾಗುತ್ತದೆ. ಉದಾಹರಣೆಗೆ ನೀವು ಕೆಲ ದಿನಗಳ ಹಿಂದೆ ಒಬ್ಬಾಕೆಯ ಕಾರಿನಲ್ಲಿ ಹತ್ತಿದ್ದಿರಿ. ಆಕೆ ನಿಮ್ಮನ್ನು ಏನೂ ಮಾಡಲಾರದೆ ಹೋದಳು. ಕಾರಣ? ಆಕೆ ಒಬ್ಬ ಸರ್ಕಾರೀ ಅಧಿಕಾರಿಣಿ! ನಾನು ಹಾಗಲ್ಲ. ನಾನು ಪ್ರೈವೇಟ್ ಮನುಷ್ಯ. ಈ ದೇಶದ ಸ್ವತಂತ್ರ ಮನುಷ್ಯ. ನನ್ನನ್ನು ನೀವೇನೂ ಮಾಡಲಾರಿರಿ. ನಾನೇ ಏನಾದರೂ ಮಾಡಬಲ್ಲೆ"

"ಅಂದರೆ...ಈಗೇನು ಮಾಡುತ್ತಿ?'' ಅನುಮಾನದಿಂದ ಕೇಳಿದ.

"ಪ್ರೀತಿ-ಕರುಣೆ, ದಯಾ ದಾಕ್ಷಿಣ್ಯ, ಇವ್ಯಾವೂ ನನ್ನಲ್ಲಿಲ್ಲ. ಈಗ ನೀವೇ ಹೇಳಿದ ಪಾಠದ ಪ್ರಕಾರ ಸಾಕ್ಷಿಗಳಿಲ್ಲದಿದ್ದರೆ ಕೇಸುಗಳಿರುವುದಿಲ್ಲ. ಅದನ್ನೇ ಈಗ ನಿಮ್ಮ ಮೇಲೆ ಪ್ರಯೋಗಿಸೋಣವೆಂದಿದ್ದೇನೆ.''

"ನನ್ನನ್ನು ಕೊಲ್ಲುತ್ತೀಯಾ?"

''ಇಲ್ಲ. ಸಾಯಿಸುವುದಿಲ್ಲ. ನಿಮ್ಮಂಥ ಅಲ್ಪ ಪ್ರಾಣಿಗಳು ಶತ್ರುಗಳಾದರೆ ಹೋರಾಟ ರಂಜನೀಯವಾಗಿರುತ್ತದೆ. ನನಗೇನೋ ಚೆಲ್ಲಾಟ. ನಿಮಗೆ ಮಾತ್ರ ಸಾವು-ಬದುಕಿನ ನಡುವೆಯ ಅಂತಿಮ ಹೋರಾಟ,

''ನೀನು ಯಾರೊಡನೆ ಮಾತನಾಡುತ್ತಿದ್ದೀಯೆಂದು ನೆನಪಿದೆಯಾ?''

''ಈ ದೇಶದ ಅತ್ಯಂತ ಕ್ರೂರಿಯಾದ ವ್ಯಕ್ತಿಯೊಡನೆ. ಈ ದೇಶಕ್ಕೆ ಸದ್ಯ ದಲ್ಲೇ ಸರ್ವಾಧಿಕಾರಿಯಾಗಬೇಕೆಂಬ ಕನಸು ಕಾಣುತ್ತಿರುವ ಮಹನೀಯನೊಡನೆ. ಸದ್ಯಕ್ಕೆ ನನ್ನೊಡನೆ ಪ್ರಾಣವನ್ನು ಅಂಗೈಯಲ್ಲಿ ಹಿಡಿದುಕೊಂಡು ಬರುತ್ತಿರುವ ವ್ಯಕ್ತಿಯೊಡನೆ ಅನಂತಾನಂತಸ್ವಾಮಿ! ಅನವಶ್ಯಕವಾಗಿ ನನ್ನ ಸಹವಾಸ ಮಾಡು ತ್ತಿದ್ದಿ, ಅದಕ್ಕೆ ಅನುಭವಿಸದೆ ತಪ್ಪದು'' ಎನ್ನುತ್ತಾ ಕಾರನ್ನು ನಿಲ್ಲಿಸಿದ, ಪಕ್ಕಕ್ಕೆ ತಿರುಗಿ ತನ್ನೆಡೆಗೇ ನೋಡುತ್ತಿದ್ದ ಸ್ವಾಮಿಯ ತಲೆಗೆ ಒಂದು ಪೆಟ್ಟುಕೊಟ್ಟು ''ಸಭೆಯಲ್ಲಿ ನನಗೆ ಅವಮಾನ ಮಾಡಿದ್ದಕ್ಕೆ. ಇದಕ್ಕೆ ಸಾಕ್ಷಿ ಇಲ್ಲ'' ಅಂದ. ಸಣ್ಣ ಬೆಟ್ಟದ ಮೇಲಿತ್ತು ಕಾರು. ಕೆಳಗೆ ಊರಿನ ದೀಪಗಳು ಕಾಣುತ್ತಿತ್ತು.

ಸ್ವಾಮಿಯ ಮುಖ ಕೆಂಪಗಾಯಿತು. ಅಲ್ಲಿಂದ ಇಳಿಯುವ ಪ್ರಯತ್ನ ಮಾಡಿದ. ಈ ಸಲ ಅವನ ಕೆನ್ನೆ ಒಡೆಯುವಂತೆ ಬೀಸಿ ಹೊಡೆದ ವಿಹಾರಿ. "ಇದು

ಮಗುವನ್ನು ಕೊಂದದ್ದಕ್ಕೆ.. ಇದಕ್ಕೂ ಸಾಕ್ಷಿಯಿಲ್ಲ''

ಸ್ವಾಮಿ ಸೀಟಿನಲ್ಲಿ ಅಂಗಾತಬಿದ್ದ. ವಿಹಾರಿ ಕಾರಿನ ಡೋರನ್ನು ಭದ್ರಪಡಿಸಿದ. 4ನೇ ಸ್ತಂಭಯಾರು? ಸಾಮಾನ್ಯನಾ? ಈ ದೇಶದ ಸಾಮಾನ್ಯ ಅಷ್ಟು ಕಡಿಮೆ ತಿಳುವಳಿಕೆಯವನಲ್ಲ ಸ್ವಾಮಿ! ಅಂತಹ ಪುಕ್ಕಲು ವ್ಯಕ್ತಿಯೂ ಅಲ್ಲ, ಅದೇನೆಂದು ನಿಮ್ಮ ಮುಂದೆಯೇ ನಿರೂಪಿಸಿದೆ ಈಗ. ಈ ದೇಶದ ಪ್ರಜೆ 'ಮನುಷ್ಯ'ನಾಗಿ ಬದುಕಲು ನಿಮ್ಮಂತಹ ದುರ್ಮಾರ್ಗರನ್ನು ಸಹಿಸಿಕೊಂಡಿರುತ್ತಾನೆ. ಪಾಪ ...ಇಲ್ಲದಿದ್ದರೆ ಪರಿಸ್ಥಿತಿ ಹೇಗಾಗುತ್ತೆ'' ಎನ್ನುತ್ತಾ ಕಾರನ್ನು ಸ್ವಲ್ಪ ಮುಂದಕ್ಕೆ ತಳ್ಳಿದ.

ಕಾರು ಇಳಿಜಾರಿನಲ್ಲಿ ಇಳಿಯಲು ಪ್ರಾರಂಭಿಸಿತು. ಸ್ವಾಮಿ ಒಳಗಿನಿಂದ ಕಿರುಚುತ್ತಿದ್ದ.

ಕಾರು ಕಲ್ಲುಬಂಡೆಗಳಿಗೆ ಡಿಕ್ಕಿ ಹೊಡೆದು ಪಕ್ಕಕ್ಕೆ ತಿರುಗಿ, ಮತ್ತೆ ಜಾರಲು ಪ್ರಾರಂಭಿಸಿತು. ವಿಹಾರಿ ಸ್ವರವೆತ್ತಿ ಹೇಳಿದ:

''ಹತ್ತು ಕಾರುಗಳ ಫ್ಯಾಕ್ಟರಿಗಳನ್ನು ಇಡಬಲ್ಲಿರಾ ಸ್ವಾಮಿ! ಬದುಕಿದ್ದರೆ ಹೊಸ ಕಾರೊಂದನ್ನು ಕೊಂಡುಕೊಳ್ಳಿ. ಬೆಸ್ಟಾಫ್ ಲಕ್!"

ಕಾರು ಮತ್ತಷ್ಟು ಕೆಳಗೆ ಜಾರಿತು. ಕೆಳಗೆ ಕೆಸರು ತುಂಬಿದ ಹಳ್ಳವಿತ್ತು. ವಿಹಾರಿ ಗುಡ್ಡದ ಮೇಲೆ ನಿಂತು ಹಾಗೆಯೇ ಅದನ್ನು ನೋಡುತ್ತಾ ತನ್ನ ಜೇಬಿನಿಂದ ಸಿಗರೇಟೊಂದನ್ನು ತೆಗೆದು ತುಟಿಗಿರಿಸಿಕೊಂಡು ಆರಾಮವಾಗಿ ಹಚ್ಚಿದ. ಬೆಂಕಿಕಡ್ಡಿಯನ್ನು ಕೆಳಗೆ ಬಿಸುಟು, ಎರಡೂ ಕೈಗಳನ್ನು ಪ್ಯಾಂಟಿನ ಜೇಬುಗಳಲ್ಲಿರಿಸಿಕೊಂಡು, ಅಲ್ಲಿಂದ ಹಿಂತಿರುಗಿ, ನಿಧಾನವಾಗಿ ನಗರದ ಕಡೆಗೆ ನಡೆಯಲು ಪ್ರಾರಂಭಿಸಿದ.

ಕೆಸರಿನಿಂದ ಮೊದಲು ಗುಳ್ಳೆಗಳು ಮೇಲೆ ಬಂದವು. ನಂತರ ಅತಿ ಕಷ್ಟದಿಂದ ಸ್ವಾಮಿ ಹೊರಬಂದ. ಮೊದಲು ಅವನ ತಲೆ ಬಂತು. ಅದರ ಮೇಲಿಂದ ಕೆಸರು ಸುರಿಯುತ್ತಿತ್ತು. ಕಬ್ಬಿಣದ ಅಚ್ಚಿನಿಂದ ಹೊರಬಂದ ಆಕಾರದಂತಿತ್ತು ಅದು,

"ವಿಹಾರಿ! ಇದುವರೆವಿಗೂ ಈ ಅನಂತಾನಂತಸ್ವಾಮಿಯೊಡನೆ ಯಾರೂ ಈ ರೀತಿ ಆಡಿರಲಿಲ್ಲ. ನಾನೇನು ಮಾಡುತ್ತೇನೊ-ಏನು ಮಾಡಬಲ್ಲೆನೋ ನಿನಗೆ ಮಾಡಿ ತೋರಿಸುತ್ತೇನೆ."

* * * *

ಸ್ವಾಮಿಯ ಮೇಲೆ ವಿಹಾರಿ ಈ ರೀತಿ ಸೇಡು ತೀರಿಸಿಕೊಂಡ ರಾತ್ರಿಯಿಂದ, ಸ್ವಾಮಿ ದೇಶದಲ್ಲಿ ಅಲ್ಲೋಲಕಲ್ಲೋಲ ಉಂಟುಮಾಡಲು ನಿಗದಿಪಡಿಸಿ ಕೊಂಡಿದ್ದ ಮುಹೂರ್ತದ ದಿನ ಅಂದಿಗೆ ಸರಿಯಾಗಿ ಹದಿನೈದು ದಿನಗಳಿದ್ದವು.

ಈ ಕಾರ್ಯಕ್ಕಾಗಿ ಸ್ವಾಮಿ ಸುಮಾರು ಹತ್ತು ಜಾಗ ಆರಿಸಿಕೊಂಡಿದ್ದ. ಕಾಶಿ, ಹರಿದ್ವಾರ, ರಾಮೇಶ್ವರ, ತಿರುಪತಿಯಂತಹ ಪ್ರದೇಶಗಳಲ್ಲಿ ಆರ್ಗನೈಸ್ಡ್ ಕ್ರೈಮ್‌ನಿಂದ ಆ ದಿನ ಈ ಘಾತುಕ ಕೆಲಸಕ್ಕೆ ಪ್ರಾರಂಭೋತ್ಸವ ನಡೆಯುತ್ತಿತ್ತು.

ಮೊದಲು ಕಾಶಿಯಲ್ಲಿ ಒಂದು ಸಣ್ಣ ಗಲಭೆ ನಡೆದು, ಒಂದು ಮತದ ಜನ ಯಾವುದೋ ಪ್ರಾಣಿಯ ಮಾಂಸವನ್ನು ಸೂಕ್ಷ್ಮವಾದ ಸ್ಥಳದಲ್ಲಿ ಎಸೆಯುತ್ತಾರೆ. ಆ ಸುದ್ದಿ ಮಾರನೆ ದಿನದ ಪೇಪರುಗಳಲ್ಲಿ ಬರುತ್ತದೆ. ಅದು ಬಂದ ಕೆಲವು ಗಂಟೆ ಗಳಲ್ಲೇ ಉಳಿದ ಒಂಬತ್ತು ಪಟ್ಟಣಗಳಲ್ಲಿ ಕೂಡಾ ಗಲಭೆಗಳು ನಡೆಯುತ್ತವೆ. ವಿಚಿತ್ರವೆಂಬಂತೆ, ಆ ಗಲಭೆಗಳಲ್ಲಿ ಒಂದು ಮತಸ್ಥರು ಮಾತ್ರ ಪೆಟ್ಟು ತಿನ್ನುತ್ತಾರೆ.

ಅದೇ ಸಂಜೆ ಸ್ವಾಮಿ 'ಪ್ರಾಯೋಪವೇಶ ದೀಕ್ಷಾ' ಪ್ರವೇಶ ಮಾಡುತ್ತಾನೆ. "ನಮ್ಮ ದೇಶದಲ್ಲಿ ನಮಗೇ ಭದ್ರತೆಯಿಲ್ಲ. ನಮ್ಮ ಜಾತಿಯನ್ನು ರಕ್ಷಿಸಿಕೊಳ್ಳಲು ನಾನು ಆಮರಣ ನಿರಾಹಾರ ದೀಕ್ಷೆ ತೆಗೆದುಕೊಳ್ಳುತ್ತೇನೆ."

ಸುಮಾರು ಒಂದು ಕೋಟಿ ರೂಪಾಯಿ ಬೆಲೆ ಬಾಳುವ ಸ್ವಾಮಿಯ ಷೇರು ಗಳು ದೇಶದಲ್ಲಿನ ವಿವಿಧ ಅತ್ಯಧಿಕ ಪ್ರಸಾರವುಳ್ಳ ದಿನಪತ್ರಿಕೆಗಳಿದ್ದವು. ಕೇವಲ ಮುಂದಾಲೋಚನೆಯಿಂದ ಮಾಡಿದ್ದ ಇನ್‌ವೆಸ್ಟ್‌ಮೆಂಟ್ ಅದು. ಆ ಪತ್ರಿಕೆಗಳ ವರು ತುಂಬಾ ಎಚ್ಚರಿಕೆಯಿಂದ ಸಂಪಾದಕೀಯ ಬರೆಯುತ್ತಾರೆ. "ನಮ್ಮ ದೇಶ ಒಂದು ತಿಪ್ಪೆಯ ಗುಂಡಿಯಂತೆ! ಕ್ರಿಕೆಟ್‌ನಲ್ಲಿ ಪಾಕೀಸ್ಥಾನ ಸೋತರೆ ನಮ್ಮ ದೇಶ ದಲ್ಲಿ ಗಲಭೆಗಳು ನಡೆಯುತ್ತವೆ. ಭಾರತ ಸೋತರೆ ಬಾಣ ಬಿರುಸುಗಳನ್ನು ಸಿಡಿಸಿ ಸಂತೋಷ ಪಡುತ್ತಾರೆ. ಈ ದೇಶದಲ್ಲಿ ಈ ದೇಶದವನಾಗಿ ಹುಟ್ಟುವುದಕ್ಕಿಂತ ಮತ್ತೊಂದು ದೇಶದಲ್ಲಿ ಹುಳು ಆಗಿ ಹುಟ್ಟುವುದು ಒಳ್ಳೆಯದು" ಈ ಸಂಪಾದ ಕೀಯವನ್ನು ಬರೆದ ಎಡಿಟರನ್ನು ಪೋಲೀಸರು ಅರೆಸ್ಟ್ ಮಾಡುತ್ತಾರೆ. (ಮಾಡ ದಿದ್ದರೆ ಸ್ವಾಮಿಯೇ ಮಾಡಿಸುತ್ತಾನೆ) ಅಷ್ಟೇ. ಈ ಸುದ್ದಿ ಗಾಳಿಗಿಂತಲೂ ವೇಗ ವಾಗಿ ಹಬ್ಬುತ್ತದೆ. ಮತ್ತಷ್ಟು ಗಂಭೀರ ಸ್ಥಿತಿ ಉಂಟಾಗುತ್ತದೆ.

ಇಲ್ಲೊಂದು ವಿಷಯವನ್ನು ಗಮನಿಸಬೇಕು. ಮೇಲೆ ತಿಳಿಸಿದ್ದೆಲ್ಲಾ ವಾಸ್ತವ ಗಳೇ! ಪ್ರತಿ ಮನುಷ್ಯರ ಎದೆಗಳಲ್ಲಿಯೂ ಅಷ್ಟೋ ಇಷ್ಟೋ ಸುಡುತ್ತಿರುವುವೇ. ಸ್ವಾಮಿ ಆ ಉರಿಗೆ ಸ್ವಲ್ಪ ತುಪ್ಪ ಹೊಯ್ಯುತ್ತಾನಷ್ಟೇ. ನಂತರ ಅದರಷ್ಟಕ್ಕೆ ಅದೇ ಉರಿಯಲು ಪ್ರಾರಂಭವಾಗುತ್ತದೆ. ಉಳಿದ ಸಮಸ್ಯೆಗಳಂತೆ ಇದು ಕೆಲವು ಮಿಲಿ

ಯನ್, ಕೆಲವು ಕೋಟಿ ಜನಕ್ಕೆ ಸಂಬಂಧಿಸಿರುವುದರಿಂದ ವೇಗ ಹೆಚ್ಚಿಸಿಕೊಳ್ಳಲು ಕೆಲವೇ ದಿನಗಳು ಸಾಕು.

ಜಾತಿಗಾಗಿ, ಮತಕ್ಕಾಗಿ ತ್ಯಾಗ ಮಾಡುತ್ತಿರುವ ಸ್ವಾಮಿಯೆಂದರೆ ಸಹಾನುಭೂತಿ ಬೆಳೆಯದೆ ಇರುತ್ತದೆಯೇ? ಅಲ್ಲಿ ನಡೆಯುವ ಇಂಚಿಂಚು ವಿಷಯಗಳನ್ನು ಸ್ವಾಮಿಯ ಬಲ ಭುಜವಾದ ಲಾಯರ್ ಪರಮೇಶ್ವರನ್ ನಿರ್ವಹಿಸುತ್ತಾನೆ. ಗಲಭೆಗಳ ವಿಷಯವನ್ನು ರಾಮಲಾಲ್ ನೋಡಿಕೊಳ್ಳುತ್ತಾನೆ.

ಆ ಮೇಲೆ ಸೂರ್ಯರಾವ್ ಈ ಕಾರ್ಯಕ್ರಮದ ಪ್ರಧಾನ ಪಾತ್ರವಹಿಸುತ್ತಾನೆ.

ಸೆಂಟ್ರಲ್ ಮಿನಿಸ್ಟರಾಗಿ ಅವನು ಬರಲಿರುವ ವಾರ, ಹತ್ತು ದಿನಗಳಲ್ಲಿ ಜಪಾನ್‌ನೊಡನೆ ಒಂದು ಅಗ್ರಿಮೆಂಟ್‌ಗೆ ಸಹಿ ಮಾಡಲಿದ್ದಾನೆ– ಭಾರತ ದೇಶದ ಮಕ್ಕಳಿಗಾಗಿ ಜಪಾನ್ ಹತ್ತು ಕೋಟಿ ರೂ. ಬೆಲೆಬಾಳುವ ಬೊಂಬೆಗಳು, ಆಟದ ವಸ್ತುಗಳನ್ನು, ಸಣ್ಣ ಸಣ್ಣ ಎಲೆಕ್ಟ್ರಾನಿಕ್ ವಸ್ತುಗಳನ್ನು ಕಳಿಸಲಿದೆ. ಸ್ವಾಮಿ ನಡೆಸುತ್ತಿದ್ದ ಅಂಗವಿಕಲರ ಟ್ರಸ್ಟ್, ಬಾಲಾನಂದ ಪರಿಷತ್‌ಗೆ ಇದನ್ನು ಉಚಿತ ಬಹುಮಾನವಾಗಿ ಜಪಾನ್ ಕಳಿಸುತ್ತಿದೆ. ಅಲ್ಲಿಯವರೆಗೂ ಸುಮ್ಮನೆ ಪೇಪರ್ ಮೇಲೆ ನಡೆಯುವ ಈ ವ್ಯವಹಾರದ ಹಿಂದೆ ಒಂದು ದೊಡ್ಡ ಆರ್ಗನೈಜ್ಡ್ ಕ್ರೈಮ್ ಇದೆ.

ಜಪಾನ್‌ಗೆ ಸಂಬಂಧಿಸಿದ "ಕ್ರಿ–ಟಟ್ಟೂ" ಎಂಬ ಪ್ರಸಿದ್ಧ ಮಾಫಿಯಾ ಈ ರವಾನೆಯನ್ನು ಕಂಟ್ರೋಲ್ ಮಾಡುತ್ತದೆ. ಷಿಪ್ ಕ್ಯಾಪ್ಟನ್ ಈ ಮಾಫಿಯಾ ಆಜ್ಞೆಗಳಿಗೆ ಒಳಪಟ್ಟು ಕೆಲಸ ಮಾಡುತ್ತಾನೆ. ಜಪಾನ್‌ನಿಂದ ಬರುವ ಮಾರ್ಗ ಮಧ್ಯದಲ್ಲಿ ಗೋಲ್ಡನ್ ಐಲೆಂಡ್ ಬಳಿ ವಸ್ತುಗಳ ಬದಲಾವಣೆ ನಡೆಯುತ್ತದೆ. ಆ ದ್ವೀಪದಲ್ಲಿ ತಯಾರಾದ ಮಾರಣಾಯುಧಗಳು ಈ ಹಡಗಿಗೆ ಸೇರಿಸಲ್ಪಡುತ್ತದೆ. ಒಂದುಸಲ ಜಲ ಪ್ರದೇಶದೊಳಗೆ ಷಿಪ್ ಪ್ರವೇಶಿಸಿದ ನಂತರ ಉಳಿದ ವ್ಯವಸ್ಥೆಗಳನ್ನು ರಾಮಲಾಲ್ ನೋಡಿಕೊಳ್ಳುತ್ತಾನೆ.

ಸ್ವಾಮಿ ಸಿದ್ಧಪಡಿಸಿದ ಮುಹೂರ್ತಕ್ಕೆ ನಾಲ್ಕು ದಿನಗಳ ಮುಂಚೆ ಇದು ನಡೆಯುತ್ತದೆ. ಪೂರ್ವ ಕಡಲಿನಿಂದ ಈ ಆಯುಧಗಳನ್ನು ದೇಶದ ವಿವಿಧ ಭಾಗಗಳಿಗೆ ಸ್ವಾಮಿಯ 'ಅಂಗವೈಕಲ್ಯ ಆಂಬುಲೆನ್ಸ್'ಗಳು ಸರಬರಾಜು ಮಾಡುತ್ತವೆ. ಮಕ್ಕಳ ಆಟದ ಸಾಮಾನುಗಳು 'ಗಿಫ್ಟ್–ಫ್ರಂ–ಜಪಾನ್'–ಆದ್ದರಿಂದ, ಮೇಲಾಗಿ ಮಂತ್ರಿಗಳ ಸಹಿಯಿರುವ ಕಾಗದಗಳಿರುವುದರಿಂದ ಇವುಗಳನ್ನು ಯಾರೂ ಪರೀಕ್ಷಿಸುವುದಿಲ್ಲ.

ಗಲಭೆಗಳು ಪ್ರಾರಂಭವಾದ ಐದಾರು ದಿನಗಳಲ್ಲೇ ಶರಣಾರ್ಥಿಗಳ ವಲಸೆ

ಪ್ರಾರಂಭವಾಗುತ್ತದೆ. ಪಕ್ಕದ ದೇಶಕ್ಕೆ ಇದು ಸಮಸ್ಯೆಯಾಗುವುದರಿಂದ ಐ.ಆರ್. ಎಸ್. ಇದರಲ್ಲಿ ತಲೆ ತೂರಿಸಲೇಬೇಕಾಗುತ್ತದೆ. ದೇಶವ ಸಮಸ್ಯೆ ಅಂತರಾಷ್ಟ್ರೀಯ ಸಮಸ್ಯೆಯಾಗುತ್ತದೆ. ಸರ್ಕಾರದ ಮೇಲೆ ಒತ್ತಡ ಬರುತ್ತದೆ. ಸರಿಯಾಗಿ ಇದೇ ಸಮಯಕ್ಕೆ ಯುದ್ಧ ಪ್ರಾರಂಭವಾಗುವ ಸ್ಥಿತಿ ಏರ್ಪಾಡಾಗುತ್ತದೆ. ಒಂದು ದೇಶದ ಆಂತರಿಕ ವ್ಯವಹಾರಗಳಲ್ಲಿ ಮತ್ತೊಂದು ದೇಶ ಮೂಗು ತೂರಿಸಿತು... ಎಂಬ ಆಪಾದನೆ-ಕೇವಲ 'ಶರಣಾರ್ಥಿಗಳ' ಸಹಾಯಕ್ಕಾಗಿ–ಪ್ರಪಂಚದ ಸಹಾನುಭೂತಿ ಭಾರತದ ಮೇಲಿರುವುದಿಲ್ಲ. ಸರ್ಕಾರಕ್ಕೆ ದೇಶದ ಹೊರಗಿನಿಂದಲೂ, ಒಳಗಿನಿಂದಲೂ ಈ ರೀತಿಯ ಒತ್ತಡ ಹೆಚ್ಚಾಗುತ್ತದೆ. ಸರಿಯಾಗಿ ಇದೇ ಅವಕಾಶಕ್ಕಾಗಿ ಕಾಯುತ್ತಿರುವ ಶಕ್ತಿಯುತ ದೇಶವೊಂದು ಇದನ್ನು ಗಮನಿಸುವುದರಿಂದ ನಲವತ್ತು ವರ್ಷಗಳ ಭಾರತ ದೇಶದ ಸೆಕ್ಯೂಲರಿಜಂ ಕುಸಿದು ಬೀಳುತ್ತದೆ.

ಗ್ರೇಟೆಸ್ಟ್ ಕ್ರಿಮಿನಲ್ ಲಾಯರ್ ಆಫ್ ಇಂಡಿಯಾ–ಪರಮೇಶ್ವರನ್‌ನ ಅದ್ಭುತವಾದ ಯೋಜನೆಯ ಜೊತೆಗೆ ಸ್ವಾಮಿ ಹಾಕಿದ ಈ ಪ್ಲಾನ್ ಇಲ್ಲಿಯವರೆಗೂ ಸರಿಯಾಗಿಯೇ ನಡೆದುಕೊಂಡು ಬಂದಿತ್ತು. ಇದಕ್ಕೆ ಎದುರು ಬೀಳುವವರು ಪ್ರವಲ್ಲಿಕ–ವಿಹಾರಿಯಂತಹವರು. ಆದರೆ ಅವರೆಲ್ಲರೂ ಅಕ್ಕಿಯಲ್ಲಿ ಕಲ್ಲುಗಳಿದ್ದಂತೆ. ಸ್ವಾಮಿ ಮನಸ್ಸು ಮಾಡಿದರೆ ಒಂದೇ ನಿಮಿಷದಲ್ಲಿ ಆರಿಸಿ ಬಿಸಾಡಬಲ್ಲ. ಪ್ರವಲ್ಲಿಕಳ ಬಗ್ಗೆ ಅವನೆಂದೂ ಸೀರಿಯಸ್ಸಾಗಿ ತೆಗೆದುಕೊಂಡಿರಲಿಲ್ಲ. ಆದರೆ ಈಗ ವಿಹಾರಿ ಬಗ್ಗೆಯೇ ಅವನು ಚಿಂತಿತಗಿದ್ದಾನೆ. ಆ ಚಿಕ್ಕ ಹುಡುಗ ತನ್ನ ಮೇಲೆ ಸಾಧಿಸಿದ ವಿಜಯ ಅವನಿಂದ ಮರೆಯಲಾಗುತ್ತಿಲ್ಲ.

ದುರ್ಯೋಧನನಿಂದ, ಕ್ಲಿಯೋಪಾತ್ರದ ವರೆಗೂ ಎಷ್ಟೇ ದೊಡ್ಡ ರಾಜನೀತಿ ತಜ್ಞರಾದರೂ, ತಮ್ಮ ಅಹಂಗೆ ಪೆಟ್ಟು ಬೀಳುವ ವಿಷಯಗಳಲ್ಲಿ ಸಹನೆಯನ್ನು ಪ್ರದರ್ಶಿಸದ ಕಡೆಯೇ ಪೆಟ್ಟು ತಿಂದಿದ್ದಾರೆ. ಅಹಂಗೆ ಪೆಟ್ಟು ಬಿದ್ದಾಗ ಕೂಡಾ ಸಾಮಾನ್ಯವಾಗೇ ಇದ್ದುಬಿಡುವುದು ಶ್ರೇಷ್ಠ ರಾಜಕೀಯ ತಜ್ಞರ ಚಿನ್ಹೆ. ಈ ಲೌಕಿಕ (ಕ್ಷಮಿಸಿ ಇದನ್ನು ಲೌಕಿಕವೆನ್ನಬಾರದಿತ್ತು) ಸುಮಾರು ಜನರಲ್ಲಿ ಇಲ್ಲ. ಇದ್ದರೂ ಪ್ರಜೆಗಳು ಅದಕ್ಕೆ "ಸೋಲು" ಎಂಬ ಹೆಸರಿಡುತ್ತಾರೆಂದು ರಾಜಕೀಯ ತಜ್ಞರು ಈ ವಿಷಯವನ್ನು ಅಷ್ಟು ಹಗುರವಾಗಿ ಬಿಡಲಾರರು.

ವಿಹಾರಿಯ ವಿಷಯವನ್ನು ಸ್ವಾಮಿ ಅಷ್ಟು ಸೀರಿಯಸ್ಸಾಗಿ ತೆಗೆದುಕೊಳ್ಳದಿದ್ದಿದ್ದರೆ ಈ ಕಥೆ ಇಲ್ಲಿಗೇ ನಿಂತುಬಿಡುತ್ತಿತ್ತೇನೋ! ಆದರೆ ವಿಹಾರಿ-ಸ್ವಾಮಿಯ ಮನಸ್ಸಿನ ಪೊರೆಯ ಅತಿ ಸೂಕ್ಷ್ಮವಾದ ಕಡೆ ಪೆಟ್ಟುಕೊಟ್ಟಿದ್ದ. ಇಂತಹ ವಿಷಯಗಳಲ್ಲಿ ತೆಗೆದುಕೊಳ್ಳುವ ನಿರ್ಧಾರಕ್ಕೆ ಲಾಜಿಕ್ ಇರುವುದಿಲ್ಲ.

ಇನ್ನೊಂದೆರಡು ತಿಂಗಳಲ್ಲಿ ಭಾರತದ ಸಾರ್ವಭೌಮತ್ವವನ್ನು ಹೊಂದಲು

ಬಲೆ ನೇಯುತ್ತಿದ್ದ ಸ್ವಾಮಿಯ ಮನಸ್ಸಿಗೆ ಆ ಆಲೋಚನೆಗಿಂತಲೂ ಪ್ರಸ್ತುತ ವಿಹಾರಿಯೇ ಹೆಚ್ಚು ಯೋಚನೆ ಕೊಡುತ್ತಿದ್ದಾನೆಂದರೆ, ಈ ಒಂದು ಘಟನೆ ಸಾಕು ಮೇಲಿನ ವಿಷಯವನ್ನು ನಿರೂಪಿಸಲು.

ನಡೆದದ್ದನ್ನೆಲ್ಲಾ ಕೇಳಿದ ಪ್ರವಲ್ಲಿಕ ಬೆಚ್ಚಿಬಿದ್ದಳು. ಸ್ವಲ್ಪ ಹೊತ್ತು ಬಾಯಿ ಮಾತು ಬರದೆ, ವಿಹಾರಿಯನ್ನೇ ಸ್ತಬ್ಧಳಾಗಿ ನೋಡುತ್ತಾ ಇದ್ದುಬಿಟ್ಟಳು. ಮೆದುಳು ಯೋಚಿಸುವುದನ್ನು ನಿಲ್ಲಿಸಿತ್ತು.

ಈ ಯುವಕ ಸ್ವಾಮಿಯನ್ನು ಕೆಸರಿನಲ್ಲಿ ಮುಳುಗಿಸಿದ್ದ. ಸ್ವಾಮಿಯನ್ನು ಕೆಸರಿನಲ್ಲಿ ಮು...ಳು...ಗಿ...ಸಿ...ದ್ದ !!! ಅವಳು ಕಣ್ಣುಗಳನ್ನು ಅರಳಿಸಿಕೊಂಡು ಹಾಗೆಯೇ ನೋಡುತ್ತಾ ಇದ್ದುಬಿಟ್ಟಳು. ಬೆನ್ನಿನಲ್ಲಿ ಸಣ್ಣನೆಯ ನಡುಕ. ಮತ್ತೊಂದೆಡೆ ಕುಣಿದಾಡುವಷ್ಟು ಸಂತೋಷ. ತನ್ನ ಮುಂದೆ ನಿಂತಿದ್ದ ವಿಹಾರಿ ಎಷ್ಟೋ ಪ್ರೌಢನಂತೆ ಕಂಡ. ಯಾರೂ ಸಾಧಿಸದಿದ್ದುದನ್ನು ಈ ಯುವಕ ಸಾಧಿಸಿದ್ದ. ಆದರೆ...ಆದರೆ...

ಎಂತಹ ಮಹಾವೃಕ್ಷವಾದರೂ ಮಳೆ, ಬಿರುಗಾಳಿಗೆ ಕುಸಿದುಬೀಳುತ್ತದೆ. ಈ ವಿಜಯ ಕೇವಲ ತಾತ್ಕಾಲಿಕವೇ ಎಂದು ಅವಳ ಮನಸ್ಸು ಹೇಳುತ್ತಿತ್ತು.

"ಅದೇಕೆ ಹಾಗೆ ಸುಮ್ಮನಾದೆ?" ನಗುತ್ತಾ ಕೇಳಿದ ವಿಹಾರಿ.

ಅವಳು ತಡಬಡಿಸಿ, ''ನಾನು ನಂಬಲು ಆಗುತ್ತಿಲ್ಲ ವಿಹಾರಿ" ಅಂದಳು.

"ನಂಬಿದರೂ, ನಂಬದಿದ್ದರೂ ಅಷ್ಟು ನಡೆದದ್ದು ನಿಜವೇ"

"ನಿನಗರ್ಥವಾಗುವುದಿಲ್ಲ ವಿಹಾರಿ! ಸ್ವಾಮಿ ಸುಮ್ಮನೆ ಬಿಡುವುದಿಲ್ಲ."

''ಏನೂ ಮಾಡಲಾರ, ಏನು ಮಾಡ್ತಾನೆ? ಅವನದೂ ಪ್ರಾಣವೇ. ನಂದೂ ಪ್ರಾಣವೇ. ವಿಷಯ ಅಲ್ಲಿಯವರೆಗೂ ಬಂದರೆ ಆಗ ನೋಡ್ಕೊಳ್ಳೋಣ," ನಿರ್ಲಕ್ಷ್ಯವಾಗಿ ಹೇಳಿದ.

"ಮೈ ಗಾಡ್. ನಿಂಗೆ ಹೇಗೆ ಹೇಳಲಿ?"

"ನೋಡು ಪ್ರವಲ್ಲಿಕ! ನಿಮ್ಮ ಕಾನೂನುಗಳಿಂದ ಬಂದ ಕಷ್ಟವೇ ಇದು. ಪ್ರತಿಯೊಂದಕ್ಕೂ ಸಾಕ್ಷಿ ಕೇಳುತ್ತೀರಿ. ಆಧಾರಗಳನ್ನು ಕೇಳುತ್ತೀರಿ. ನನಗೆ ಅದರ ಅವಶ್ಯಕತೆಯಿಲ್ಲವಲ್ಲಾ–ಅವನೂ ಮನುಷ್ಯನೇ. ಅವನಿಗೂ ಪ್ರಾಣಭಯವಿರುತ್ತದೆ ಅಷ್ಟೆ" ಎನ್ನುತ್ತಾ ಮತ್ತೆ ನಕ್ಕುಬಿಟ್ಟ.

"ಆಗಲೀ. ಅವನ ವಿಷಯ ನಿಂಗೆ ಗೊತ್ತಿಲ್ಲ ವಿಹಾರಿ. ಇಷ್ಟು ಪಡೆಗಳಿದ್ದೇ ನಾನೇನೂ ಮಾಡಲಾರದೆ ಹೋದೆ. ಅವನೆಂಥ ನರರೂಪ ರಾಕ್ಷಸನೆಂದು ನನಗೆ ಗೊತ್ತು. ನಾನು ಕಣ್ಣಾರೆ ಕಂಡಿರುವುದರಿಂದ ಹೇಳುತ್ತಿದ್ದೇನೆ. ತನಗೆ ಬೇಕಾದ್ದನ್ನು ಹೇಗಾದರೂ ಸಂಪಾದಿಸುತ್ತಾನೆ. ಕೊಲೆಗಳನ್ನು ಮಾಡಿಯಾದರೂ ಸರಿ,

ಎಷ್ಟೇ ರಕ್ತಪಾತಗಳಾದರೂ ಸರಿ...ಆ ದಿನವನ್ನು ನಾನಿನ್ನೂ ಮರೆಯಲಾರೆ...!"

"ಏನಾಯ್ತು ಅವತ್ತು?''

"ಅವನ ಈ ಯೋಜನೆ ಇಂದಿನದಲ್ಲ. ಸುಮಾರು ಹತ್ತು ವರ್ಷಗಳಿಂದ ಬೀಜ ನೆಟ್ಟು ನೀರು ಹೊಯ್ಯುತ್ತಲೇ ಬರುತ್ತಿದ್ದಾನೆ. ಅವನು ಈ ಅವತಾರ ಎತ್ತುವುದಕ್ಕೆ ಮುಂಚೆ ಸೈನ್ಯದಲ್ಲಿ ಸ್ವಲ್ಪ ದಿನ ಕೆಲಸ ಮಾಡಿದ್ದಾನೆ. ಅದಕ್ಕೇ ಅವನಿಗೆ ಸೈನ್ಯದ ಬಗ್ಗೆ ಚೆನ್ನಾಗಿ ಗೊತ್ತು. ಯುದ್ಧ ಪೂರ್ತಿಯಾಗಿ ಅಪ್ಪ ಮನೆಗೆ ಬಂದರು. ನಾನಾಗ ಗ್ರ್ಯಾಜುಯೇಷನ್ ಪೂರ್ತಿ ಮಾಡಿದ್ದೆ ಅಷ್ಟೆ. ಆ ರಜೆಗಳಲ್ಲೇ ಅಣ್ಣನ ಮದುವೆ ನಿಶ್ಚಯವಾಯಿತು. ಮಾರನೇ ದಿನ ಮದುವೆ ಎಂದಾಗ ಅಣ್ಣ, ಅಪ್ಪ ರಹಸ್ಯವಾಗಿ ಮಾತನಾಡಿಕೊಳ್ಳುತ್ತಿದ್ದುದನ್ನು ನಾನೇ ಕೇಳಿದೆ. ಯಾವುದೋ ಮಿಲಿಟರಿ ಅವ್ಯವಹಾರವನ್ನು ಅಪ್ಪ ಆಧಾರಸಹಿತ ಹಿಡಿದಿದ್ದರು. ಅದಕ್ಕೆ ಸಾಕ್ಷಿಗಳಿತ್ತು. ಅವು ಹೊರಬಂದರೆ ಕೆಲವು ರಾಜಕೀಯ ನಾಯಕರ ಜೀವನ ತಲೆಕೆಳಗಾಗುತ್ತಿತ್ತು. ಐವತ್ತು ಕೋಟಿ ರೂಪಾಯಿಗಳ ಡೀಲ್, ಹತ್ತು ಕೋಟಿ ಲಂಚದೊಡನೆ ಕೈಗಳನ್ನು ಬದಲಾಯಿಸಿತ್ತು.

ಸರಿಯಾಗಿ ಅದೇ ಸಮಯಕ್ಕೆ ಅನಂತಾನಂತಸ್ವಾಮಿ ಆ ಕೋಣೆಗೆ ಪ್ರವೇಶಿಸಿದ. ನಾನು ಅಷ್ಟು ಹಣವನ್ನು ನೋಡಿದ್ದು ಅದೇ ಮೊದಲ ಸಲ. ಕೋಟಿ ರೂಪಾಯಿಗಳು......ಕಟ್ಟುಗಳನ್ನು ಅಪ್ಪನ ಮುಂದಿಟ್ಟು ಕಾಲಿನ ಬಳಿ ಕುಳಿತ. ಆ ಆಧಾರಗಳನ್ನು, ಡಾಕ್ಯುಮೆಂಟ್‌ಗಳನ್ನೂ ಕೊಟ್ಟುಬಿಡುವಂತೆ ಕೇಳಿಕೊಂಡ. ಅಪ್ಪ ಕಾಲಿನಿಂದ ಒದ್ದರು. ಛೀ...ಹೋಗೆಂದರು. ಸ್ವಾಮಿಗೆ ಕೋಪ ಬರಲಿಲ್ಲ.

"ಕೋಟಿ ರೂ. ಕೊಡುತ್ತೇನೆಂದರೆ ಬೇಡವೆನ್ನುತ್ತಿದ್ದಿ. ಅದರಲ್ಲಿ ಶೇ. ಹತ್ತರಷ್ಟು ಖರ್ಚು ಮಾಡಿದರೆ ಸಾಕು, ನಿನ್ನ ಬಳಿಯಿಂದಲೇ ಆ ಡಾಕ್ಯುಮೆಂಟುಗಳನ್ನು ಹೇಗೆ ಸಂಪಾದಿಸುತ್ತೇನೋ ನೋಡು" ಎಂದು ಹೊರಟುಹೋದ.

"ಮಾರನೆ ದಿನ ಸಂಜೆ ನಡೆಯಿತು ಆ ಘಟನೆ! ಮದುವೆಯ ಅರತಕ್ಷತೆ ನಡೆಯುತ್ತಿದ್ದಾಗ ಪ್ರವೇಶಿಸಿದ ರಾಮಲಾಲ್ ಕೈಯ್ಯಲ್ಲಿ ಮಿಷನ್ ಗನ್ ಇತ್ತು. ಮದುವೆಯ ಗಡಿಬಿಡಿಯಲ್ಲಿ ಅವನನ್ನಾರೂ ಗಮನಿಸಿರಲಿಲ್ಲ. ಅಣ್ಣ–ಅತ್ತಿಗೆಯರು ಪ್ಲಾಟ್‌ಫಾರಂ ಮೇಲೆ ನಿಂತು ಉಡುಗೊರೆಗಳನ್ನು ತೆಗೆದುಕೊಳ್ಳುತ್ತಿದ್ದರು. ಓಂದಿನಿಂದ ಮೇಲಿನ ಕೋಣೆಗಳಿಗೆ ಪ್ರವೇಶಿಸಿದರು ಕೆಲವರು. ಒಂದಂಗುಲವೂ ಬಿಡದಂತೆ ಶೋಧಿಸಿದರು. ಅವರನ್ನು ಮೊದಲು ಗಮನಿಸಿದ್ದು ಅಮ್ಮ. ಅವರಲ್ಲೊಬ್ಬ ಅಮ್ಮನನ್ನು ನಿರ್ದಾಕ್ಷಿಣ್ಯವಾಗಿ ಇರಿದುಬಿಟ್ಟ. ಮೇಲಿನ ಅಂತಸ್ತಿನಿಂದ ಆಕೆ ಕೆಳಗೆ ಬಿದ್ದು ಮರಣ ಹೊಂದಿದಾಗಲೇ ನಮಗೆಲ್ಲಾ ತಿಳಿದಿದ್ದು ಅದು.

ಅಪ್ಪ ರಿವಾಲ್ವಾರ್‌ಗಾಗಿ ಹುಡುಕುತ್ತಿದ್ದ ..ಆದರೆ ತಡವಾಗಿತ್ತು, ರಾಮಲಾಲ್ ಕೈಯ್ಯಲ್ಲಿನ ಮಿಷನ್‌ಗನ್ ಬೆಂಕಿಯನ್ನು ಉಗುಳುತ್ತಿತ್ತು. ಮೊದಲು ಸತ್ತಿದ್ದು ಅಣ್ಣ–ಅತ್ತಿಗೆಯರು. ಅರಿಶಿನದ ಒದ್ದೆ ಆರುವುದಕ್ಕೆ ಮುಂಚೆಯೇ ರಕ್ತದ ಹೊಳೆಯಲ್ಲಿ ಮುಳುಗಿದರು. ಐಸ್‌ಕ್ರೀಂ ತಿನ್ನುತ್ತಿದ್ದ ಮಕ್ಕಳು ಹಾಗೆಯೇ ಕಿರುಚುತ್ತಾ ಕುಸಿದವು. ಅತಿಥಿಗಳು ಹೆಂಗಸರು...ಮಕ್ಕಳು ..ಎಲ್ಲಾ ಬಂಧುವರ್ಗದವರನ್ನೂ ಉಳಿಸದಂತೆ ಮಾಡುವ ಕಂಕಣ ಕಟ್ಟಿಕೊಂಡವರಂತೆ ರಾಮಲಾಲನ ಕೈಯ್ಯಲ್ಲಿದ್ದ ಮಿಷನ್‌ಗನ್ ಬೆಂಕಿಯನ್ನು ಉಗುಳುತ್ತಿತ್ತು. ಓಳಗೋಡಿ ಹೋಗಲು ಕೂಡಾ ಸಮಯ ಸಿಕ್ಕದಷ್ಟು ಬೇಗ ನಡೆದುಹೋಯಿತು ಆ ಘಟನೆ. ಅವರು ಅಪ್ಪನನ್ನು ಸಾಯಿಸಲಿಲ್ಲ. ಐಸ್ ಕತ್ತರಿಸುವ ಕತ್ತಿಯಿಂದ ಅಪ್ಪನ ಕಾಲಿಗೆ ಹೊಡೆದರು. ಅದು ಸ್ವಾಮಿಯ ಇನ್‌ಸ್ಟ್ರಕ್ಷನ್ ಇರಬಹುದು. ಅಪ್ಪ ರಕ್ತದ ಮಡುವಿನಲ್ಲಿ ಕುಸಿದು ಕುಳಿತ. ಆ ದೃಶ್ಯ ಇಂದಿಗೂ ನನ್ನ ಕಣ್ಮುಂದೆ ಕಟ್ಟಿದಂತಿದೆ. ಕರಗಿದ ಐಸ್‌ಕ್ರೀಂ. ಒಡೆದ ಕೂಲ್‌ಡ್ರಿಂಕ್ಸ್ ಬಾಟಲುಗಳು ರಕ್ತದಲ್ಲಿ ತೋಯುತ್ತಿದ್ದುದು ಇಂದಿಗೂ ಕಣ್ಣಿಗೆ ಕಟ್ಟಿದಂತಿದೆ.

...ಡಾಕ್ಯುಮೆಂಟ್ ತೆಗೆದುಕೊಂಡು ರಾಮಲಾಲ್ ವಿಜಯದ ನಗೆಯೊಡನೆ ಹೊರಟ. ಮಿಷನ್ ಗನ್ನನ್ನು ಅಲ್ಲಿಯೇ ಬಿಟ್ಟಿದ್ದ. ಎರಡು ದಿನಗಳ ನಂತರ ಪೋಲೀಸರು ಅವನನ್ನು ಅರೆಸ್ಟ್ ಮಾಡಿದರು.

ಎಲ್ಲಕ್ಕಿಂತಲೂ ವಿಚಿತ್ರವೇನೆಂದರೆ, ಎಣಿಸದ ಘಟನೆ ಆಗಲೇ ನಡೆಯಿತು.

ರಾಮಲಾಲ್‌ಗೆ ಮರಣದಂಡನೆ ಶಿಕ್ಷೆ ಆಗುತ್ತದೆಂದುಕೊಂಡಿದ್ದೆವು !!!

ಭಾರತ ದೇಶದ ಪ್ರಖ್ಯಾತ ಕ್ರಿಮಿನಲ್ ಲಾಯರ್ ಪರಮೇಶ್ವರ್ ಆ ಕೇಸನ್ನು ತೆಗೆದುಕೊಂಡ.

ಬಿರುಗಾಳಿಗೆ ಎಲೆಗಳೆಲ್ಲಾ ಹಾರಿಹೋದರೂ, ಕೆಲವು ಸಿಕ್ಕಿಹಾಕಿಕೊಂಡು ಉಳಿಯುವಂತೆ ನಾವು ಕೆಲವು ಸಾಕ್ಷಿದಾರರು ಉಳಿದೆವು.

ರಾಮಲಾಲ್‌ನಂತಹ ಎತ್ತರ ದಪ್ಪ ಇದ್ದ ನಾಲ್ವರನ್ನು ಪರಮೇಶ್ವರ್ ಕಟಕಟೆಯಲ್ಲಿ ನಿಲ್ಲಿಸಿದ.

''ರಾಮಲಾಲ್‌ನನ್ನು ನಾನು ಗುರುತಿಸಿದೆ, ಆದರೆ ಗಾಭರಿಯಲ್ಲಿ ಅತ್ತಿತ್ತ ಓಡಿದ ಅತಿಥಿಗಳು ಆ ನಾಲ್ವರಲ್ಲಿ ಯಾರು ಮಿಷನ್‌ಗನ್ ಉಪಯೋಗಿಸಿದರೆಂದು ಸರಿಯಾಗಿ ಹೇಳಲಾರದೆ ಹೋದರು. ಲಾಯರ್ ಪರಮೇಶ್ವರ್‌ನ ವಾಗ್ದಾಟಿ ಅವರ ನೆನಪಿನ ಶಕ್ತಿಯನ್ನು ಛಿದ್ರಛಿದ್ರ ಮಾಡಿತು. ಅವನ ಪ್ರಶ್ನೆಗಳ ಬಾಣಗಳು ಅವರನ್ನು ಗಲಿಬಿಲಿಗೊಳಿಸಿತು. ಆ ಪರಿಸ್ಥಿತಿಯನ್ನು ಪ್ರಖ್ಯಾತ ಕ್ರಿಮಿನಲ್ ಲಾಯರ್ ಕ್ಯಾಷ್ ಮಾಡಿಕೊಂಡ.

ಮಿಷನ್‌ಗನ್ ಮೇಲಿದ್ದ ಬೆರಳಿನ ಗುರ್ತುಗಳು ಕೋರ್ಟಿನಲ್ಲಿ ಪರಿಶೀಲನೆಗೆ ಬಂತು. ಪರಮೇಶ್ವರ್ ತನ್ನಲ್ಲೇ ತಾನು ಅದೇಕೆ ನಕ್ಕನೋ ನನಗಾಗ ಅರ್ಥ ವಾಗಲಿಲ್ಲ.

"ಮಿಷನ್‌ಗನ್ ಮೇಲಿದ್ದ ಬೆರಳು ಗುರ್ತುಗಳು ಆ ನಾಲ್ವರಲ್ಲಿ ಯಾರದೂ ಅಲ್ಲ!!!" ಆಗ ತಿಳಿಯಿತು ಅದರ ಅರ್ಥ, ಇದೆಲ್ಲಾ ಪ್ರಿ ಪ್ಲಾನ್ಡ್! ಪರಮೇಶ್ವರ್ ಕ್ರಿಮಿನಲ್ ಲಾಯರ್ ಅಲ್ಲ–ಮಾಸ್ಟರ್ ಬ್ರೈನ್ ಆಫ್ ದಿ ಕ್ರೈಮ್ ಎಂದು.

ಅಷ್ಟು ಜನರನ್ನು ಕೊಂದು ರಕ್ತವನ್ನು ಕಾಲುವೆಯಂತೆ ಹರಿಸಿದ ನರರೂಪ ರಾಕ್ಷಸ ನ್ಯಾಯಾಲಯದಲ್ಲಿ 'ಬೆನಿಫಿಟ್ ಆಫ್ ಡೌಟ್' ಆಧಾರದ ಮೇಲೆ ಬಿಡು ಗಡೆ ಹೊಂದಿದ. ರಾಮಲಾಲ್ ಭುಜದ ಮೇಲೊಂದು ಕೈ, ಪರಮೇಶ್ವರನ್‌ನ ಭುಜದ ಮೇಲೊಂದು ಕೈಯನ್ನಿರಿಸಿಕೊಂಡು ವಿಜಯದ ಗರ್ವದಿಂದ ಅನಂತಾ-ನಂತಸ್ವಾಮಿ ನಮ್ಮೆಡೆಗೆ ನೋಡಿಕೊಂಡು ಹೋದ ರೀತಿ ಚರಿತ್ರೆಯಲ್ಲಿ ಯಾವ ಟೆರ್‍ರರಿಸ್ಟೂ ಬರೆಯದ ರಕ್ತಾಕ್ಷರಗಳನ್ನು ನನ್ನ ಹೃದಯದ ಮೇಲೆ ಬರೆದಂತಾ ಯಿತು.

ಅಪ್ಪ ಶಾಶ್ವತವಾಗಿ ಕುಂಟನಾದ. ಶತ್ರುಗಳೊಡನೆ ಯುದ್ಧದಲ್ಲಿ ಹೋರಾಡಿ ಪರಮವೀರ ಚಕ್ರವನ್ನು ಗಳಿಸಿದ್ದ ಅಪ್ಪ. ದೇಶದ್ರೋಹಿಗಳಿಗೆ ಕಾಲನ್ನು ಅರ್ಪಿಸಿ ಕೊಳ್ಳಬೇಕಾಯಿತು. ಓದು, ಆಟ, ಬದುಕನ್ನು ತುಂಬಾ ಹಗುರವಾಗಿ ತೆಗೆದು ಕೊಳ್ಳುವ ನನ್ನ ರೀತಿ, ಆ ಕ್ಷಣದಿಂದ ಸಂಪೂರ್ಣ ಬದಲಾಯಿತು. ನನ್ನ ಬದುಕಿ ನಲ್ಲಿ ಏಕೈಕ ಶತ್ರುವಾಗಿ ಅನಂತಾನಂತಸ್ವಾಮಿ, ಅವನ ಗುಂಪು ಉಳಿದುಬಿಟ್ಟಿತು. ಅದೇ ಕೊನೆಯವರೆಗೂ ನನ್ನ ಹೋರಾಟವಾಗಬೇಕೆಂದು ನಿರ್ಧರಿಸಿದೆ. ಡಿಪಾರ್ಟ್ ಮೆಂಟಿನಲ್ಲಿ ಆಫೀಸರರಾದೆ. ಆದರೆ ಸ್ವಾಮಿಯ ಶಕ್ತಿಯೊಡನೆ ಹೋಲಿಸಿಕೊಂಡರೆ ನನ್ನ ಅಧಿಕಾರ ಎಷ್ಟು ಚಿಕ್ಕದೋ ಡಿಪಾರ್ಟ್‌ಮೆಂಟಿಗೆ ಸೇರಿದ ನಂತರ ತಿಳಿ ಯಿತು. ನನ್ನ ಆಫೀಸಿನಲ್ಲೆಲ್ಲಾ ನನಗೆ ಶತ್ರುಗಳು, ಶತ್ರುಗಳಿಗೆ ಎಲ್ಲಿಂದಲೋ ಸಹಾಯ, ನಾನೇನೂ ಮಾಡಲಾರೆ ಎಂದುಕೊಂಡ ಇಂತಹ ಸಮಯದಲ್ಲಿ ನಿಮ್ಮ ಪರಿಚಯವಾಯಿತು. ನಿಮ್ಮ ತಂದೆ ಯಾರೋ ಗೊತ್ತಿಲ್ಲವಾಗಲಿ ಅವರ ತಿಳು ವಳಿಕೆ ನಿಮಗೆ ಬಂದಿರಬಹುದು. ಅದಕ್ಕಿಂತ ಮುಖ್ಯವಾಗಿ ಧೈರ್ಯ–ಒಬ್ಬ ಸೈನಿಕ ನಿಗೆ ಇರುವ ಧೈರ್ಯ, ಪ್ರಾಣದ ಬಗ್ಗೆ ನಿರ್ಲಕ್ಷ್ಯ ನಿಮ್ಮಲ್ಲಿ ಕಂಡಿತು. ಆದರೆ ಈ ರೀತಿ ಯಾಗಿ ನೀವು ಮುನ್ನುಗ್ಗುತ್ತಿರುವುದು ನನಗೆ ಭಯವಾಗುತ್ತಿದೆ. ಅವನು ಸುಮ್ಮನೆ ಬಿಡುವುದಿಲ್ಲ. ಏನಾದರೂ ಮಾಡುತ್ತಾನೆ. ಏನೋ ಮಾಡುತ್ತಾನೆ."

ಅದುವರೆವಿಗೂ ಆ ವೇದನೆಯಿಂದ, ಉದ್ವೇಗದಿಂದ ಕೇಳುತ್ತಿದ್ದ ವಿಹಾರಿ ಈ ಕೊನೆಯ ಮಾತಿಗೆ ಸಣ್ಣಗೆ ನಕ್ಕ. ಅವನ ಮನಸ್ಸೆಲ್ಲಾ ಅವಳು ತೋರಿಸು

ತ್ತಿದ್ದ ಕಾಳಜಿಯ ಬಗ್ಗೆ ಚಿಂತಿಸಿತು. ಆದರೂ ಕೊನೆಯ ಮಾತಿಗೆ ನಗು ಬಂತು.

"ಇದನ್ನೆಲ್ಲಾ ನನಗೆ ಸ್ವಲ್ಪ ಮುಂಚೆ ತಿಳಿಸಿರಬೇಕಾಗಿತ್ತು ಪ್ರವಲ್ಲಿಕಾ" ಅಂದ.

ಅವಳು ಆಶ್ಚರ್ಯದಿಂದ, ಹೇಳಿದ್ದಿದ್ದರೆ ಏನು ಮಾಡುತ್ತಿದ್ದಿರಿ?" ಎಂದು ಕೇಳಿದಳು.

"ಕೆಸರಿನಲ್ಲಲ್ಲದೆ ಕಂದಕದೊಳಗೆ ತಳ್ಳಿಬಿಡುತ್ತಿದ್ದ."

* * * *

ಐ.ಸಿ. 539 ಏಯರ್ ಬಸ್ ಮದ್ರಾಸಿನಿಂದ ನುಗ್ಗಿ ಬಂತು. ಎಡಗಡೆ ಕಿಟಕಿಯ ಕಡೆ ಕುಳಿತಿದ್ದ ಲಾಯರ್ ಪರಮೇಶ್ವರ್. ಅವನ ಕೈಯಲ್ಲಿ ದೊಡ್ಡ ಪುಸ್ತಕವಿತ್ತು. ಮೇಲಿನಿಂದ ಬೀಸುತ್ತಿದ್ದ ತಂಪಾದ ಗಾಳಿಗೆ ಅವನ ತಲೆಗೂದಲು ಹಾರುತ್ತಿತ್ತು. ಅವನ ಕೈ ಬೆರಳುಗಳು ಪುಸ್ತಕದ ಹಾಳೆಗಳನ್ನು ತಿರುಗಿಸುತ್ತಿದ್ದವು.

ಅವನ ಕನ್ನಡಕದ ಹಿಂದೆ ಗೂಡುಕಟ್ಟಿಕೊಂಡಿದ್ದ ಬುದ್ಧಿವಂತಿಕೆ, ಅವನ ಹಣೆಯ ಗೆರೆಗಳ ಹಿಂದೆ ಎಷ್ಟೋ ಜನ ಕ್ರಿಮಿನಲ್‌ಗಳನ್ನು ರಕ್ಷಿಸಿದ್ದ ಅನುಭವ, ಅವನ ಬಿಗಿದುಕೊಂಡಿದ್ದ ತುಟಿಗಳ ಹಿಂದಿನ ಲಾಸ್ಯ, ಅವನ ಮುಖದಲ್ಲಿ ಗೆಲುವು ತರುತ್ತಿದ್ದ ತೇಜಸ್ಸು –

ಡೆಲ್ಲಿಯಿಂದ ತನ್ನನ್ನು ಅಷ್ಟು ಅರ್ಜೆಂಟಾಗಿ ಸ್ವಾಮಿ ಏಕೆ ಕರೆಸಿದನೆಂದು ಅವನಿಗೆ ಅರ್ಥವಾಗಲಿಲ್ಲ. ಡೈರೆಕ್ಟ್ ಫ್ಲೈಯಿಟ್ ಸಿಗದೆ ಇದ್ದುದರಿಂದ ಮದ್ರಾಸ್ ಮೂಲಕ ಬರುತ್ತಿದ್ದ ಅವನು.

ಅವನಿಗಾಗಿ ವಿಮಾನ ನಿಲ್ದಾಣದಲ್ಲಿ ಕಾರು ಸಿದ್ಧವಾಗಿತ್ತು. ಸೇರುವ ವೇಳೆಗೆ ಸ್ವಾಮಿ ಎದುರು ನೋಡುತ್ತಿದ್ದ. ಅದು ಭಕ್ತರಿಗೆ ದರ್ಶನ ಕೊಡುವ ಸಮಯ. ಆದರೂ ಪರಮೇಶ್ವರನ್‌ನೊಡನೆ ಮಾತನಾಡಬೇಕೆಂಬ ಉದ್ದೇಶದಿಂದ ಅಂತಃಪುರದಲ್ಲೇ ಇದ್ದುಬಿಟ್ಟಿದ್ದ. ಪರಮೇಶ್ವರ್‌ನನ್ನು ಕಂಡು, 'ಬಾ ಕುಳಿತುಕೋ' ಅಂದ.

"ನನ್ನ ಈ ನಲವತ್ತು ವರ್ಷಗಳ ಕ್ರಿಮಿನಲ್ ಬದುಕಿನಲ್ಲಿ ಎಷ್ಟೋ ಗ್ಯಾಂಗ್ ಲೀಡರ್‌ಗಳು, ಆಯುಧಗಳ ವ್ಯಾಪಾರಿಗಳು, ಸೈನಿಕಾಧಿಕಾರಿಗಳು, ಪೋಲೀಸರು ಒಂದಲ್ಲ ಒಂದುರೀತಿ ನನ್ನ ಮೇಲೆ ಸೇಡು ತೀರಿಸಿಕೊಳ್ಳಲು ಪ್ರಯತ್ನಿಸಿದ್ದರು. ನನ್ನನ್ನು ಮುಗಿಸಿಬಿಡಲೇ ನೋಡಿದರು. ಜೈಲಿನಲ್ಲಿರಿಸಲು ಪ್ರಯತ್ನಿಸಿದರು. ಎಲ್ಲರನ್ನೂ ಸೋಲಿಸಿದ್ದೇನೆ."

ಸ್ವಾಮಿ ಹೇಳುತ್ತಿದ್ದಂತೆ ಪರಮೇಶ್ವರನ್ ಮೌನವಾಗಿ ಕೇಳುತ್ತಿದ್ದ. "ನನಗೆ ಎದುರು ತಿರುಗಿದವರು ನಿಶ್ಶಬ್ಧವಾಗಿ ಪ್ರಾಣ ಕಳೆದುಕೊಂಡರು. ನನ್ನ ದಾರಿಗೆ ಅಡ್ಡ ಬಂದವರು. ಎಂಬುವರಿಲ್ಲದೆ ಸುಟ್ಟು ಬೂದಿಯಾದರು. ನನ್ನವರು. ಆದರೆ...ಇಷ್ಟು ದಿನಕ್ಕೆ ಒಬ್ಬ ಯುವಕ ನನ್ನೊಡನೆ ಹಗುರವಾಗಿ ಜೋಕ್ ಮಾಡಿದ್ದಾನೆ. ಕಾರಿನಲ್ಲಿ ಕೂರಿಸಿ ಕಿರುಬೆರಳಿನಿಂದ ಅದನ್ನು ಕೆಸರಿನಲ್ಲಿ ತಳ್ಳಿದ್ದಾನೆ. ನಾನು ಸಾಯುವುದಿಲ್ಲವೆಂದು ಅವನಿಗೆ ಗೊತ್ತು. ಕಲ್ಲು ಬಂಡೆಗಳ ಮಧ್ಯೆ ಡಿಕ್ಕಿ ಹೊಡೆಯುತ್ತಾ ಕೆಳಗುರುಳಿತು ಕಾರು–ಅತಿ ಕಷ್ಟದಿಂದ ನಾನು ಹೊರಬರುತ್ತಿದ್ದರೆ, ಎರಡೂ ಕೈಗಳನ್ನು ಜೇಬಿನಲ್ಲಿರಿಸಿಕೊಂಡು ಅಲಕ್ಷ್ಯದಿಂದ ನಡೆದುಹೋದ. ಐ ಲೈಕ್ ಹಿಮ್! ಮೊದಲ ಸಲ ನನಗೆ ಪೆಟ್ಟುಕೊಟ್ಟ ವ್ಯಕ್ತಿ. ಅವನನ್ನು ಕೊಲ್ಲುವುದು–ಅವನನ್ನು ಹೆದರಿಸುವುದು–ಇಂತಹವು ನನಗಿಷ್ಟವಿಲ್ಲ. ಅದಕ್ಕೆಲ್ಲಾ ರಾಮು-ಲಾಲ್ ಇದ್ದಾನೆ. ಪರಮೇಶ್ವರ್! ನೀನೇನು ಮಾಡುತ್ತೀಯೋ ನನಗೆ ಗೊತ್ತಿಲ್ಲ. ಅವನು ವಿಲವಿಲ ಒದ್ದಾಡಬೇಕು. ಮಾನಸಿಕವಾಗಿ ಚಿತ್ರಹಿಂಸೆ ಅನುಭವಿಸಬೇಕು. ನಿನ್ನ ಕ್ರಿಮಿನಲ್ ಬ್ರೈಯಿನ್ ಉಪಯೋಗಿಸಿ ಯೋಚಿಸು. ಒಬ್ಬ ಅನಾಮಿಕನಂತಿದ್ದ ನಿನ್ನನ್ನು ದೇಶದಲ್ಲೇ ಶ್ರೇಷ್ಠ ಲಾಯರನ್ನಾಗಿ ಮಾಡಿದೆ. ನೀನು ಇದುವರೆವಿಗೂ ನನಗೆ ಮಾಡಿದ ಸಹಾಯಕ್ಕೆ ನಿನ್ನ ಅಕೌಂಟಿನಲ್ಲಿ ಲಕ್ಷಾಂತರ ರೂ. ಜಮಾ ಮಾಡಿದ್ದೇನೆ. ಇಷ್ಟು ದಿನಕ್ಕೆ ನೀನು ನನ್ನ ಮೇಲೆ ನಿಜವಾದ ಕೃತಜ್ಞತೆ ತೋರಿಸಬೇಕಾದ ಸಮಯ ಇದೀಗ ಒದಗಿಬಂದಿದೆ. ಇದೆಲ್ಲಾ ನಿನಗೆ ಆಶ್ಚರ್ಯವೆನ್ನಿಸಬಹುದು. ಪರಮೇಶ್ವರ್!... ಇದೇನು ಎಷ್ಟೋ ಗಂಭೀರವಾಗಿರುವ ಅನಂತಾನಂತಸ್ವಾಮಿ ಈ ದಿನ ಹೀಗೇಕೆ ಮಾತನಾಡುತ್ತಿದ್ದಾನೆ ಎಂದು! ನಿಜವೇ... ಕೋಟಿ ರೂಪಾಯಿಗಳ ಯೋಜನೆಯನ್ನು ಅವನು ನಾಶಮಾಡಿದಾಗ ಕೂಡಾ ಅವನ ಮೇಲೆ ನನಗೆ ಅಷ್ಟು ಸಿಟ್ಟು ಬಂದಿರಲಿಲ್ಲ. ಆದರೆ ನನ್ನ ಅಹಂಗೆ ಅವನು ಭಾರೀ ಪೆಟ್ಟುಕೊಟ್ಟಿದ್ದಾನೆ. ಇದುವರೆವಿಗೂ ಯಾರೂ ಮಾಡದ ಕೆಲಸವನ್ನು ಅವನು ಮಾಡಿದ್ದಾನೆ, ಈ ಎಲ್ಲಕ್ಕೂ ಅವನಿಗೆ ಬುದ್ಧಿ ಕಲಿಸಬೇಕು. ಅದಕ್ಕೆ ನಿನ್ನನ್ನು ಡೆಲ್ಲಿಯಿಂದ ಕರೆಸಿದ್ದೇನೆ. ನಿನಗಿದೆಲ್ಲಾ ಹಾಸ್ಯವಾಗಿ ಕಾಣುತ್ತಿದೆಯೊ?"

"ಇಲ್ಲ" ಪರಮೇಶ್ವರ್ ಹೇಳಿದ...''ನಾನು ಅರ್ಥಮಾಡಿಕೊಳ್ಳಬಲ್ಲೆ."

"ಗುಡ್. ಇಂದಿನಿಂದಲೇ ನಿನ್ನ ಕೆಲಸದ ಪ್ರಾರಂಭ. ಏನು ಮಾಡುತ್ತೀಯೋ ಹೇಗೆ ಮಾಡುತ್ತೀಯೋ ಅದನ್ನು ನಿನಗೇ ಬಿಟ್ಟಿದ್ದೇನೆ. ಎಷ್ಟು ದಿನ ಬೇಕು?"

ಪರಮೇಶ್ವರ್ ನಗುತ್ತಾ, "ಒಂದು ವಾರ ಸಾಕೆಂದುಕೊಂಡಿದ್ದೇನೆ. ಮೊದಲು ನಾನು ಆ ಯುವಕನನ್ನು ನೋಡಬೇಕು.''

"ಅದೇನು ಮಹಾ? ಅವನೆಲ್ಲೋ ಒಂದು ಕಡೆ ನಾಟಕಗಳನ್ನಾಡುತ್ತಿರುತ್ತಾನೆ" ಎಂದು ಇಂಟರ್ಕಾಮ್‌ನಲ್ಲಿ ಕೇಳಿದ.

"ಇಷ್ಟು ಸಣ್ಣ ಕೆಲಸಕ್ಕೆ ಅಷ್ಟು ದೂರದಿಂದ ನಿನ್ನನ್ನು ಕರೆಸಿದ್ದೇಕೆಂದರೆ ಅವನು ಹೇಗೆ ವಿಲಿವಿಲಿ ಒದ್ದಾಡಬೇಕೆಂದು ನಾನಂದುಕೊಳ್ಳುತ್ತಿದ್ದೇನೋ ಊಹಿಸಬಲ್ಲೆ ತಾನೇ ನೀನು...''

"ಈ ಕೈಯನ್ನು ನೋಡಿದ್ದೀರಲ್ಲಾ? ಇದಕ್ಕೊಂದು ಶ್ರೇಷ್ಠ ಗುಣವಿದೆ. ಒಂದು ಸಲ ಷೇಕ್ ಹ್ಯಾಂಡ್ ಕೊಟ್ಟರೆ ಸಾಕು–ಎದುರಿಗಿರುವವನು ಎಂತಹವನೆಂದು ಕಂಡುಹಿಡಿದುಬಿಡುತ್ತೇನೆ."

ಅಷ್ಟರಲ್ಲಿ ಇಂಟರ್‌ಕಾಮಿನಲ್ಲಿ ಉತ್ತರ ಬಂತು. "ಈ ಸಂಜೆ ಕಲಾಕ್ಷೇತ್ರದಲ್ಲಿ ಅವನ ಕಾರ್ಯಕ್ರಮವಿದೆಯಂತೆ" ಸ್ವಾಮಿ ಅದನ್ನೇ ಹೇಳಿದ.

"ಗುಡ್. ಮೊದಲನೇ ಸಾಲಿನಲ್ಲೇ ನನಗೂ ಒಂದು ಸೀಟನ್ನು ಅರೇಂಜ್ ಮಾಡಿಸಿ" ಪರಮೇಶ್ವರ್ ಮೇಲೇಳುತ್ತಾ ಹೇಳಿದ.

"ಹಾಗೇ ಆಗಲಿ"

ಪರಮೇಶ್ವರ್ ಕೈಚಾಚಿದ. ಸ್ವಾಮಿ ನಗುತ್ತಾ "ಬೇಡ......ಬೇಡ ನಿನಗೆ ಷೇಕ್ ಹ್ಯಾಂಡ್ ಕೊಡುವಷ್ಟು ಅಪಾಯವಿಲ್ಲ" ಅಂದ ಗಾಭರಿಯನ್ನು ನಟಿಸುತ್ತಾ.

ಪರಮೇಶ್ವರ್ ನಗುತ್ತಾ–"ಬರ್ತೀನಿ" ಎಂದ.

ಅವನು ಹೊರಟುಹೋದ ಮೇಲೆ ಸ್ವಾಮಿ ಟೇಬಲ್ ಮೇಲಿದ್ದ ಫೈಲನ್ನು ತೆಗೆದುಕೊಂಡ. ಅದರ ಮೇಲೆ ಸಣ್ಣ ಅಕ್ಷರಗಳಲ್ಲಿ 'ವಿಹಾರಿ' ಎಂದು ಟೈಪ್ ಮಾಡಲಾಗಿತ್ತು. ಅವನ ಜೀವನ ಚರಿತ್ರೆಯೆಲ್ಲಾ ಅದರಲ್ಲಿ ಸಂಗ್ರಹಿಸಲಾಗಿತ್ತು.

"ಏನು ನಮ್ಮ ಹುಡುಗನ ನಾಟಕಕ್ಕೆ ನೀವು ಕೂಡಾ ಬಂದಿದ್ದೀರಲ್ಲಾ" ಕೇಳಿದಳು ವರ್ಧನಮ್ಮ–ಸುನಾದಮಾಲಳನ್ನೂ ಅವಳ ಅಜ್ಜಿಯನ್ನೂ ನೋಡುತ್ತಾ.

ಅದು ವಿಹಾರಿಯ ನಾಟಕವೆಂದು ತಿಳಿಯುತ್ತಿದ್ದಂತೆಯೇ ಸುನಾದಮಾಲಳ ಹೃದಯ ನಿಂತಂತಾಯಿತು. 'ಲವಕುಶ'...ಆಧುನಿಕ ಯಕ್ಷಗಾನವೆಂದು ತಿಳಿದ ಕೂಡಲೇ ಹಠ ಹಿಡಿದು ಅಜ್ಜಿಯನ್ನು ಕರೆತಂದಿದ್ದಳು. ವಿಹಾರಿ ಟ್ರೂಪಿನದೆಂದು ಕೊಂಡಿರಲಿಲ್ಲ.

"ನಮ್ಮ ಹುಡುಗನ ನಾಟಕಗಳನ್ನು ನಾನು ನೋಡುವುದೇ ಇಲ್ಲ. ಇದೇನೋ 'ಲವಕುಶ' ಅಂತ ಬಂದೆ ಅಷ್ಟೇ" ವರ್ಧನಮ್ಮ ವಿವರಣೆ ನೀಡಿದಳು.

"ನಾನೂ ಅಷ್ಟೇನಮ್ಮಾ. ನಿಮ್ಮ ಹುಡುಗನದೆಂದು ಗೊತ್ತಿರಲಿಲ್ಲ, ಇವಳ

ಬಲವಂತಕ್ಕೆ ಬಂದೆ ಅಷ್ಟೆ" ಎಂದಳು ಅಜ್ಜಿ ಕೂಡ.

ಸುನಾದಮಾಲ ಅಜ್ಜಿಯನ್ನು ನುಂಗಿಹಾಕುವಂತೆ ನೋಡಿದಳು. ತನ್ನನ್ನು ಒಬ್ಬ-ಆಧುನಿಕ ಹುಡುಗಿಯಂತೆ ತೋರಿಸಲು ಅಜ್ಜಿ ಪಡುವ ಕಷ್ಟವನ್ನು ನೋಡುತ್ತಿದ್ದರೆ ಅಜ್ಜಿಯ ಮೇಲೆ ಸಿಟ್ಟೂ, ಇಷ್ಟ ಎರಡೂ ಉಂಟಾಗುತ್ತದೆ. ತೆರೆಯ ಹಿಂದಿನಿಂದ ಇವರನ್ನು ಗಮನಿಸಿದ ಪದ್ಮಾಕರ್ ವಿಹಾರಿಯೊಡನೆ, "ಆಗಲಿರುವ ಅತ್ತೆ ಸೊಸೆಯರು ಚೆನ್ನಾಗಿಯೇ ಮಾತನಾಡಿಕೊಳ್ಳುತ್ತಿದ್ದಾರೆ ಗುರೂ..." ಎಂದು ಗುಸುಗುಸು ಹೇಳಿದ. ವಿಹಾರಿ ನಕ್ಕು ಹೇಳಿದ "ಇನ್ನೂ ದ್ವಾದಶಿಯ ವರೆವಿಗೂ ಟೈಮಿದೆಯಲ್ಲಾ."

ಅದೇ ಸಮಯಕ್ಕೆ ಹಾಲಿನ ಹೊರಗೆ ಎರಡು ಕಾರುಗಳು ಒಂದಕ್ಕೊಂದು ಎದುರಾಗಿ ಬಂದು ನಿಂತವು. ಒಂದರಿಂದ ಪರಮೇಶ್ವರ್, ಮತ್ತೊಂದರಿಂದ ಪ್ರವಲ್ಲಿಕ ಇಳಿದರು. ಒಬ್ಬರನ್ನೊಬ್ಬರು ನೋಡಿಕೊಳ್ಳುತ್ತಾ ಮುಖ್ಯದ್ವಾರದ ಬಳಿಗೆ ಬಂದರು. ಪರಮೇಶ್ವರ್ ವ್ಯಂಗ್ಯವಾಗಿ ಮರ್ಯಾದೆ ತೋರಿಸುತ್ತಾ, "ನಡಿಯಮ್ಮಾ! ಲೇಡೀಸ್ ಫಸ್ಟ್" ಅಂದ.

"ಮುಂದೆ ಕ್ರಿಮಿನಲ್ಸ್ ನಡೆಯುತ್ತಿದ್ದರೆ ಹಿಂದಿನಿಂದ ಪೋಲೀಸರು ಬರುವುದು ಮರ್ಯಾದೆ" ಅಂದಳವಳು.

ಪರಮೇಶ್ವರ್ ಜೋರಾಗಿ ನಗುತ್ತಾ, "ಈ ಒಂದು ಮಾತಿಗೇ ನಿಮ್ಮ ಮೇಲೆ ಹತ್ತು ಲಕ್ಷಕ್ಕಿಂತ ಹೆಚ್ಚು ಮಾನನಷ್ಟ ಮೊಕದ್ದಮೆ ಹೂಡಬಹುದು" ಅಂದ. ಅವಳು ಮುಖ ತಿರುಗಿಸಿಕೊಂಡು ಒಳಗೆ ಹೊರಟು ಹೋದಳು.

ಗ್ರೀನ್ ರೂಮಿನಲ್ಲಿ ವಿಹಾರಿಯನ್ನು ಭೇಟಿಮಾಡಿ, "ಸಾರಿ. ಅರ್ಜೆಂಟ್ ಕೆಲಸವಿತ್ತು. ಹೋಗಬೇಕು" ಅಂದಳು.

"ಅದನ್ನು ಹೇಳಲು ಇಷ್ಟು ದೂರ ಬರಬೇಕಾಯಿತೇ?" ಆಶ್ಚರ್ಯದಿಂದ ಕೇಳಿದ.

"ಪ್ರೋಗ್ರಾಂಗೆ ನೀವು ಆಹ್ವಾನಿಸಿದ್ದಿರಿ. ಹೇಳಿ ಹೋಗಬೇಕಲ್ಲಾ–"

"ಏನಷ್ಟು ಅರ್ಜೆಂಟ್ ಕೆಲಸ?"

ಅವಳು ನಕ್ಕು–"ಸಿ.ಬಿ.ಐ. ಕೆಲಸಗಳನ್ನು ಹೇಳಕೂಡದು" ಎಂದಳು.

ಪಕ್ಕದಲ್ಲಿದ್ದ ಪದ್ಮಾಕರ್ "ಸಿಬಿಐ ಅಂದರೆ ನೆನಪಾಯಿತು. ನಿಮ್ಮದೆಲ್ಲಾ ಸರ್ಕಾರಿ ಕೆಲಸಗಳೇನಾ? ನಮಗೆ ಸ್ವಲ್ಪ ಪ್ರೈವೇಟ್ ಡಿಟೆಕ್ಟಿವ್ ಕೆಲಸ ಕೊಡುತ್ತೀರಾ?'' ಎಂದು ಕೇಳಿದ.

"ನಿಮಗೇನು ಕೆಲಸ ಆಗಬೇಕು?'' ಕಿರುನಗುತ್ತ ಕೇಳಿದಳು.

"ನಮಗೆ ಒಬ್ಬ ಹುಡುಗಿ ಫೋನ್ ಮಾಡುತ್ತಿರುತ್ತಾಳೆ. ಎದುರಿರುವಾಗ

ಏನೂ ತಿಳಿಯದವಳಂತೆ ವರ್ತಿಸುತ್ತಾಳೆ. ಆ ಹುಡುಗಿಯನ್ನು ಹಿಡಿಯಬೇಕು,''

"ಯಾರಾ ಹುಡುಗಿ? ಈಗೆಲ್ಲಿದ್ದಾಳೆ?" ಓರೆನೋಟ ಬೀರಿ ಕೇಳಿದಳು.

"ಈಗ ಈ ಆಡಿಟೋರಿಯಂನಲ್ಲೇ ಇದ್ದಾಳೆ"

ಪ್ರವಲ್ಲಿಕ ನಗುವನ್ನು ತಡೆದುಕೊಂಡು ಸಮಯ ನೋಡಿಕೊಂಡು "ಮೈಗಾಡ್ ಟೈಮಾಯ್ತು. ಹೋಗಬೇಕು. ನಾಳೆ ಬರ್ತೀನಿ'' ಎಂದು ಹೊರಟು ಹೋದಳು.

''ಆಕೆಯೊಡನೆ ಸುನಾದಮಾಲಳ ವಿಷಯವನ್ನು ಏಕೆ ಹೇಳಿದೆ?" ಎಂದು ವಿಹಾರಿ ಕೇಳುತ್ತಿದ್ದಂತೆಯೇ ಬೆಲ್ ಹೊಡೆದುಕೊಂಡಿತು. ನಾಟಕದ ಪರದೆ ತೆರೆದುಕೊಂಡಿತು.

'ಲವಕುಶ' ಯಕ್ಷಗಾನ ಪ್ರಾರಂಭವಾಯಿತು.

ಅದರಲ್ಲಿ ವಿಹಾರಿಯದು ಸೂತ್ರಧಾರನ ಪಾತ್ರ. ಮೇಲಿನಿಂದ ಸ್ಪಾಟ್ ಬಿತ್ತು. ಪಾತ್ರಧಾರಿಗಳೆಲ್ಲಾ ಲೀನವಾಗಿ ನಟಿಸುತ್ತಿರುವಾಗ ಸೂತ್ರಧಾರಿ ಹೇಳುತ್ತಿದ್ದಾನೆ; "ಆ ರೀತಿಯಾಗಿ ಲವಕುಶರರು ತಂದೆಯೊಡನೆ ಯುದ್ಧ ಮಾಡಿ ತಾಯಿಯ ಗೌರವ ಉಳಿಸಿದ ಸಂದರ್ಭದಲ್ಲಿ...

ರಘುಕುಲ ಪತಿಗೆ ವಾರಸುದಾರರಾಗಿ
ಯುದ್ಧ ಭೂಮಿಗೇ ಅಧಿಪತಿಗಳಾಗಿ
ಜನನೀ ಜನಕರ ಸಮಾಗಮಕ್ಕೆ
ಕಾರಣಭೂತರಾಗಿ .."

ಸ್ಪಾಟ್‌ನಲ್ಲಿ ನಿಂತಿದ್ದ ವಿಹಾರಿಯ ದೃಷ್ಟಿ ಮುಂದಿನ ಸಾಲಿನಲ್ಲಿದ್ದ ಪರಮೇಶ್ವರನ್ ಮೇಲೆ ಬಿತ್ತು. ಅವನ ಸ್ಮೃತಿಪಟಲದ ಮೇಲೆ ಏನೋ ಚಿತ್ರ ಮೂಡಿತು...ನೆನಪಾಯಿತು.

ಅಷ್ಟೆ.

ಗಂಟಲು ತಡಬಡಿಸಿತು.

ಚಕ್ಕನೆ ತನ್ನ ತಾಯಿ ಕುಳಿತಿದ್ದೆಡೆಗೆ ನೋಡಿದ.

ಆಗಲೇ ಆಕೆಯ ದೃಷ್ಟಿ ಕೂಡಾ ಅತ್ತ ಬಿತ್ತು. ಆಕೆ ಕುರ್ಚಿಯಿಂದ ಮೇಲೇಳುತ್ತಿದ್ದಾಳೆ.

ಹಿಂದೆ ಪರದೆ ಬಿತ್ತು. ಮುಂದೆ ಸ್ಪಾಟ್‌ನಲ್ಲಿ ಅವನಿದ್ದುಬಿಟ್ಟ. ಪ್ರೇಕ್ಷಕರಿಂದ ಕರತಾಡನದ ಅಬ್ಬರ. ಅವನು ಅದನ್ನು ಕೇಳಿಸಿಕೊಳ್ಳುತ್ತಿಲ್ಲ. ತಾಯಿಯನ್ನೇ ನೋಡುತ್ತಿದ್ದಾನೆ, ಪರಮೇಶ್ವರನನ್ನು ನೋಡುತ್ತಿದ್ದಾನೆ. ದೇವರ ಮನೆಯಲ್ಲಿದ್ದ ಫೋಟೋ ಅವನ ಕಣ್ಮುಂದೆ ಬಂತು.

ಈ ವ್ಯಕ್ತಿಯೇ...ಈ ವ್ಯಕ್ತಿಯೇ ತನ್ನ ತಂದೆ!

ಸತ್ತುಹೋಗಿದ್ದಾನೆಂದು ತಿಳಿದಿದ್ದ ತನ್ನ ತಂದೆ . ಬದುಕಿಯೇ ಇದ್ದಾನೆ!!! ಆ ವ್ಯಕ್ತಿ ಕೂಡಾ ತಾಯಿಯನ್ನು ಗುರುತಿಸಿದಂತಿದೆ. ಅಷ್ಟು ದಿನಗಳ ನಂತರ ಗಂಡನನ್ನು ಕಂಡ ಸಂತೋಷದಲ್ಲಿ ತಾಯಿ ಜನರನ್ನು ಮರೆತಳು. ವಿಹಾರಿ ಗಂಟಲಿನಿಂದ ಹೊರಡಲಿದ್ದ 'ಅಪ್ಪಾ' ಎಂಬ ಪದವನ್ನು ಸಂತೋಷ ಡಾಮಿನೇಟ್ ಮಾಡಿತ್ತು. ಆಕೆ ಮಗನ ಕೈಹಿಡಿದುಕೊಂಡು ಆವೇಶದಿಂದ "ಗುರುತಿಸಿದೆ ಕಣೋ......ನಿಮ್ಮಪ್ಪ ಕಣೋ......ನಿಮ್ಮಪ್ಪ" ಎನ್ನುತ್ತಾ ಅತ್ತುಬಿಟ್ಟಳು. ಪರಮೇಶ್ವರ್ ಆಕೆಯ ತಲೆಯನ್ನು ಪ್ರೀತಿಯಿಂದ ಸವರಿದ. ಇಷ್ಟು ದಿನಗಳ ನಂತರ ಅವರನ್ನು ಕಂಡ ಆಶ್ಚರ್ಯ ಅವನ ಮುಖದಲ್ಲಿ ಸ್ಪಷ್ಟವಾಗಿ ಕಂಡಿತು. ಆದರೆ ಅಷ್ಟೇ ಬೇಗ ಅದರಿಂದ ಹೊರಬಂದ.

ಅಷ್ಟರಲ್ಲಿ ವಿಹಾರಿ ತಂದೆಯ ಬಳಿಗೆ ಬಂದ. ಇಪ್ಪತ್ತೈದು ವರ್ಷಗಳ ನಂತರ ನೋಡಿದ ತಂದೆಯನ್ನು ಹೇಗೆ ಸಂಬೋಧಿಸಬೇಕೋ, ಏನು ಮಾತನಾಡಬೇಕೋ ತಿಳಿಯುತ್ತಿಲ್ಲ. ತಾಯಿಯ ನಿಜವಾದ ಸಂತೋಷವನ್ನು ಇಷ್ಟು ದಿನಗಳ ನಂತರ ಕಾಣುತ್ತಿದ್ದಾನೆ.

ಈ ಮುಜುಗರದಿಂದ ತಪ್ಪಿಸಿಬಿಡಲು ಎಂಬಂತೆ ಪರಮೇಶ್ವರನೇ ಮೊದಲು ಕೈಚಾಚಿದ. "ಇಪ್ಪತ್ತೈದು ವರ್ಷಗಳ ಹಿಂದೆ ಆಗಿದ್ದಿದ್ದರೆ 'ಮಗೂ' ಎಂದು ಎತ್ತಿಕೊಳ್ಳುತ್ತಿದ್ದೆ. ಈಗ ಆಶೀರ್ವದಿಸಿ ಮುದ್ದಿಸಲಾಗುವುದಿಲ್ಲ. ಪರಿಚಯ ಮಾಡಿಕೊಳ್ಳುತ್ತೇನೆ ಎನ್ನುತ್ತಾ ತನ್ನ ಕೈಯನ್ನು ಮತ್ತಷ್ಟು ಮುಂದಕ್ಕೆ ಚಾಚಿದ.

"ನಾನು...ನಾನು ವಿಹಾರಿ ಅಪ್ಪ" ಎನ್ನುತ್ತಾ ಆ ಕೈಯನ್ನು ಹಿಡಿದ ವಿಹಾರಿ.

ಆ 'ಷೇಕ್ ಹ್ಯಾಂಡ್' ಬೆಚ್ಚಗಿತ್ತು.

ವಿಹಾರಿ ಅಷ್ಟು ಸಂತೋಷವನ್ನು ಎಂದೂ ಅನುಭವಿಸಿರಲಿಲ್ಲ. ತಂದೆ ಸಿಕ್ಕಿದ್ದರಿಂದ ಬಂದ ಸಂತೋಷವಲ್ಲ ಅದು. ತಾಯಿ ಸಂತೋಷದಿಂದಿರುವುದರಿಂದ ಬಂದ ಸಂತೋಷ. ಅವನಿಗೆ ನೆನಪು ಬಂದಾಗಿನಿಂದಲೂ ತಾಯಿಯ ಇಷ್ಟು ಸಂತೋಷವನ್ನು ಅವನು ಮೊದಲನೆ ಸಲ ನೋಡುತ್ತಿದ್ದಾನೆ. ಅದು ಅವನಿಗೆಷ್ಟೋ ಸಂತೃಪ್ತಿಯನ್ನು ಕೊಡುತ್ತಿದೆ.

ತನ್ನ ತಂದೆ ಡೆಲ್ಲಿಯಲ್ಲಿ ಸುಪ್ರಸಿದ್ಧ ಲಾಯರ್ ಎಂದು ತಿಳಿದು ಮತ್ತಷ್ಟು ಸಂತೋಷಪಟ್ಟ. ಆ ಸಂತೋಷದಲ್ಲಿ ಪ್ರವಲ್ಲಿಕ ಹೇಳಿದ್ದ 'ಆ ಲಾಯರ್ ಈತನೇ' ಎಂಬ ಮಾತು ಮರೆತುಹೋಗಿತ್ತು. ಅವನಿಗೆ ಪ್ರವಲ್ಲಿಕ ಯಾವ ಹೆಸರನ್ನು ಹೇಳಿ

ದ್ದಳೋ ನೆನಪಿಲ್ಲ. ಅನಂತಾನಂತಸ್ವಾಮಿಯ ಕೇಸಿನಲ್ಲಿ ವಾದಿಸುವುದು ತನ್ನ ತಂದೆಯೇ ಎಂಬ ವಿಷಯ ಅವನಿಗೆ ತಿಳಿಯುವ ಅವಕಾಶ ಆ ಎರಡು ದಿನಗಳಲ್ಲಿಯೂ ಬರಲಿಲ್ಲ.

ತಂದೆ ಸಿಕ್ಕಿದ ಸಂದರ್ಭವಾಗಿ ಅವನು ಪಾರ್ಟಿ ಏರ್ಪಾಟು ಮಾಡಿದ. ತನ್ನ ಸ್ನೇಹಿತರೇ ಅಲ್ಲದೆ ಆ ಊರಿನ ತುಂಬಾ ಜನ ಪ್ರಮುಖರನ್ನು ಆಹ್ವಾನಿಸಿದ್ದ. ಈ ಊರಿನಲ್ಲಿಯೂ ತನ್ನ ತಂದೆಗೆ ಇದ್ದ ಪ್ರಸಿದ್ಧಿಯನ್ನು ಕಂಡು ಆಶ್ಚರ್ಯಪಟ್ಟ.

'ಅಪ್ಪಾ! ನಿಮ್ಮ ಫೋಟೋ ಒಮ್ಮೆಯಾದರೂ ಪೇಪರ್‌ಗಳಲ್ಲಿ ಬಂದಿದ್ದರೆ ನೀವು ನಮಗೆಂದೋ ಸಿಗುತ್ತಿದ್ದಿರಿ" ಅಂದ.

ಪರಮೇಶ್ವರ್ ಆಪ್ಯಾಯದಿಂದ ನಕ್ಕು, "ಫೋಟೋ ನೋಡಿ ಗುರುತಿಸಿಬಿಡುತ್ತಿದ್ದಿಯಾ?" ಎಂದು ಕೇಳಿದ.

"ಗುರುತಿಸದೆ ಏನಪ್ಪಾ? ಅಮ್ಮ ದಿನಾ ನಿಮ್ಮ ಫೋಟೋಗೆ ನಮಸ್ಕಾರ ಮಾಡುತ್ತಿದ್ದಳು."

ಪರಮೇಶ್ವರ್ ಆಶ್ಚರ್ಯದಿಂದ, ''ಇಪ್ಪತ್ತೈದು ವರ್ಷಗಳಿಂದಲೂ?" ಎಂದು ಪ್ರಶ್ನಿಸಿದ.

"ಹೌದು ಇಪ್ಪತ್ತೈದು ವರ್ಷಗಳಿಂದಲೂ ತಪ್ಪದೇ..." ಎನ್ನುತ್ತಾ ತಾಯಿಯ ಕಡೆಗೆ ನೋಡಿದ. ಸ್ವಲ್ಪ ನಾಚಿಕೆ ಬೆರೆಸಿದ ಸ್ವರದಲ್ಲಿ ವರ್ಧಸಮ್ಮ ತನಗೆ ತಾನೇ ಹೇಳಿಕೊಳ್ಳುವಂತೆ, ನಾನೆಷ್ಟು ಪಾಪಿ–ಫೋಟೋಗೆ ನಮಸ್ಕಾರ ಮಾಡುತ್ತಿದ್ದೆ'' ಅಂದಳು. ಪರಮೇಶ್ವರ್ ನಗುತ್ತಾ ಆಕೆಯ ಭುಜ ತಟ್ಟಿದ.

ವಿಹಾರಿ ತಾಯಿಯ ಕಡೆಗೆ ನೋಡಿದ.

ಈ 'ಹಣೆಗೆ ಕುಂಕುಮ' ಎಂಬುದನ್ನು ಯಾರು ಕಂಡುಹಿಡಿದನೋ ಅವನಿಗೆ ಸಹಸ್ರಕೋಟಿ ವಂದನೆಗಳು. ವಿಜ್ಞಾನ ಬೆಳೆಯುತ್ತಿದ್ದಂತೆ ವಿವಿಧ ರೀತಿಯ ಲಿಪ್‌ಸ್ಟಿಕ್, ಐ–ಲೈನರ್‌ಗಳು. ಕ್ರೀಮ್ಸ್‌ಗಳನ್ನು ಕಂಡುಹಿಡಿದು, ಪ್ರಪಂಚದ ಸ್ತ್ರೀಯರನ್ನೆಲ್ಲಾ ಮತ್ತಷ್ಟು ಸೌಂದರ್ಯವತಿಯರನ್ನಾಗಿ ಮಾಡಿರಬಹುದಾಗಲೀ...! ಈ ಕುಂಕುಮದಂತಹ ಸೌಂದರ್ಯವರ್ಧಕವನ್ನು ಈ ಹತ್ತು ಸಾವಿರ ವರ್ಷಗಳಿಂದ ಯಾರೂ ಕಂಡು ಹಿಡಿಯಲಿಲ್ಲ. ತಾಯಿಯ ಹಣೆಯ ಮೇಲೆ ಅದು ಮತ್ತಷ್ಟು ಕಳೆಯಿಂದ ಮೆರೆಯುತ್ತಿತ್ತು.

"ನಿನ್ನ ತಪ್ಪೇನಿದೆ ವರ್ಧಾ! ತಪ್ಪೆಲ್ಲಾ ನಂದೆ. ರೈಲು ಆಕ್ಸಿಡೆಂಟಾದಾಗ ಒಂದು ತಿಂಗಳು ಆಸ್ಪತ್ರೆಯಲ್ಲಿದ್ದು ಬಂದಾಗ ಮನೆ ಖಾಲಿಯಾಗಿತ್ತು. ನಿಮ್ಮ ತಂದೆಯ ಬಳಿಗೆ ಬಂದು ವಿಚಾರಿಸಬೇಕೆಂದು ನನಗೆ ಹೊಳೆಯದಿದ್ದುದು ನನ್ನ ತಪ್ಪೇ" ಎಂದು ಹೇಳುತ್ತಿದ್ದ ಪರಮೇಶ್ವರ್. ಆ ರಾತ್ರಿ ಹನ್ನೆರಡು ಗಂಟೆಯ

ವೇಳೆಯಲ್ಲಿ ನೀರು ಕುಡಿಯಲು ಏಳೆದ್ದ ವಿಹಾರಿ ಫ್ರಿಜ್ ಬಾಗಿಲು ತೆಗೆಯುತ್ತ ತೆರೆದಿದ್ದ ಕಿಟಕಿ ಬಾಗಿಲಿನೊಳಗೆ ನೋಡಿದ. ತನ್ನ ಅಮ್ಮ ಅಪ್ಪನ ಕಾಲನ್ನು ಒತ್ತುತ್ತಿದ್ದಳು. ಆ ದೃಶ್ಯ ಅವನಿಗೆಷ್ಟೋ ಮನೋಹರವಾಗಿ ಕಂಡಿತು. ಶಬರಿಯ ನಡುಗುವ ಕೈಗಳು ಜಟಾಯುವಿನ ಮುರಿದ ರೆಕ್ಕೆಗಳು 'ಸೇವೆ'ಯಲ್ಲಿರುವ ಸಂತೋಷವನ್ನು ತೋರಿಸುತ್ತವೆ. ತನ್ನನ್ನು ತಾನು ಅರ್ಪಿಸಿಕೊಳ್ಳುವುದರಿಂದ ಸ್ತ್ರೀ ಹೊಂದುವ ಸಂತೋಷಕ್ಕೆ ವಯಸ್ಸಿನ ಮಿತಿ ಇರುವುದಿಲ್ಲ.

ವಿಹಾರಿ ನಿಶ್ಶಬ್ಧದಿಂದ ಅಲ್ಲಿಂದ ಹೊರಬಂದ.

* * * * *

"ಹೇಗೆ ಹೇಳಲಿ ಅಪ್ಪಾ ಅವನಿಗೆ? ನಾನು ತಿಳಿಸಿದ ಡೆಲ್ಲಿ ಲಾಯರ್ ನಿನ್ನ ತಂದೆಯೇ ಎಂದು ವಿಹಾರಿಗೆ ಹೇಗೆ ಹೇಳಲಿ? ಅವನ ಸಂತೋಷವನ್ನು ಹೇಗೆ ಹಾಳುಮಾಡಲಿ?''ನೊಂದು ಕೇಳುತ್ತಿದ್ದಳು ಪ್ರವಲ್ಲಿಕ.

"ಬೇಡಮ್ಮ ಹೇಳಬೇಡ, ಲಾಯರ್ ಆಗಿ ಆತ ಮಾಡುತ್ತಿರುವುದರಲ್ಲಿ ತಪ್ಪೇನೂ ಇಲ್ಲ. ನಮಗೆ ಅತೀ ದೊಡ್ಡ ತಪ್ಪಾಗಿ ಕಾಣಬಹುದು ಬೇರೆಯವರಿಗೆ ಸಣ್ಣದಾಗಿ ಕಾಣಬಹುದು. ಆದರೆ ನಮಗೂ ಸ್ವಾಮಿಗೂ ಇರುವಷ್ಟು ಸ್ಪರ್ಧೆ ವಿಹಾರಿಗೂ–ಸ್ವಾಮಿಗೂ ನಡುವೆ ಇಲ್ಲವಲ್ಲ. ಇಂದಿನಿಂದ ಅದೂ ಹೊರಟು ಹೋಗುತ್ತದೆ. ಇಲ್ಲವೇ ಹೊಸದಾಗಿ ಉಂಟಾದ ಈ ಬಂಧದಿಂದ ಪರಮೇಶ್ವರ್ ಸ್ವಾಮಿಯಿಂದ ಕ್ರಮೇಣ ದೂರವಾಗಬಹುದು. ನಾವು ಆತುರಪಟ್ಟು ಆ ಹುಡುಗನಿಗೆ ಏನಾದರೂ ಹೇಳಿದರೆ ಅವನು ನಮ್ಮನ್ನು ಅಪಾರ್ಥ ಮಾಡಿಕೊಳ್ಳಬಹುದು.''

"ಆದರೆ ಎಂದೋ ಒಂದುದಿನ ವಿಹಾರಿಗೆ ತನ್ನ ತಂದೆ ಸ್ವಾಮಿಯ ಬಲಭುಜವೆಂದು ತಿಳಿದೇ ತಿಳಿಯುತ್ತದೆ."

"ತಿಳಿಯಲಿಬಿಡು. ಆದರೆ ನಮ್ಮ ಮೂಲಕ ಬೇಡ ಅಷ್ಟೇ"

ಪ್ರವಲ್ಲಿಕ ಉತ್ತರಿಸಲಿಲ್ಲ. ಅವಳ ಮನಸ್ಸು ಯಾವುದೋ ಕೇಡನ್ನು ಶಂಕಿಸುತ್ತಿತ್ತು. ಪರಮೇಶ್ವರನ್‌ನ ಬುದ್ಧಿವಂತಿಕೆಯ ಬಗ್ಗೆ ಅವಳಿಗೆ ಚೆನ್ನಾಗಿ ಗೊತ್ತು. ತನ್ನ ಸಂಸಾರದ ಬಗ್ಗೆ ಅವನು ತೋರಿಸುತ್ತಿರುವುದು ನಿಜವಾದ ಪ್ರೀತಿಯೇ ಆದರೆ ಅದಕ್ಕಿಂತಲೂ ಹೆಚ್ಚು ಏನು ಬೇಕು?

ಆ ಆಲೋಚನೆಯಿಂದ ಅವಳ ಮನಸ್ಸು ಹಗುರವಾಯಿತು. ತಂದೆ ಹೇಳಿದಂತೆ ತಾನು ಅನವಶ್ಯಕವಾಗಿ ತುಂಬಾ ಊಹಿಸುತ್ತಿದ್ದಾಳೆ. ಹೆಂಡತಿ ಮಕ್ಕ

ಳೆಂದರೆ ಯಾರಿಗೆ ತಾನೆ ಪ್ರೀತಿ ಇರುವುದಿಲ್ಲ?

ಮಗಳ ಮೌನವನ್ನು ಪ್ರತಾಪರಾವ್ ಮತ್ತೊಂದು ರೀತಿ ಅರ್ಥಮಾಡಿಕೊಂಡ. "ಈ ಸಮಯದಲ್ಲಿ ನಾನಲ್ಲಿಗೆ ಹೋಗಿ ಮದುವೆಯ ಬಗ್ಗೆ ಮಾತನಾಡಿದರೆ ಅಷ್ಟು ಚೆನ್ನಾಗಿರುವುದಿಲ್ಲವೇನೋ ತಾಯಿ, ತನ್ನ ಮಗನಿಗೆ ನಿನ್ನನ್ನು ತಂದುಕೊಳ್ಳುವುದಕ್ಕೆ ಆತ ನಿರಾಕರಿಸಬಹುದು" ಎಂದರು. ಅವಳು ಆ ಕೋನದಿಂದ ಯೋಚಿಸಿಯೇ ಇರಲಿಲ್ಲ. ವಿಹಾರಿಯ ತಂದೆ ಯಾರೆಂದು ತಿಳಿದಾಗಿನಿಂದ ಅವನು ಯಾವುದಾದರೂ ತೊಂದರೆಯಲ್ಲಿ ಸಿಕ್ಕಿಹಾಕಿಕೊಳ್ಳುತ್ತಾನೇನೋ ಎಂದು ಯೋಚಿಸುತ್ತಿದ್ದಳೇ ವಿನಾ ತನ್ನ ಪ್ರೀತಿಯ ಬಗ್ಗೆ ತಲೆಕೆಡಿಸಿಕೊಳ್ಳಲೇ ಇಲ್ಲ.

ಅವಳ ಮನಸ್ಸು ಕಂಪಿಸುತ್ತಿತ್ತು. ಈ ಹೊಸ ಸಮಸ್ಯೆ ಅವಳನ್ನು ಮತ್ತಷ್ಟು ಕುಗ್ಗಿಸುತ್ತಿತ್ತು. ಒಂದು ವೇಳೆ ವಿಹಾರಿ ತನ್ನ ತಂದೆ ಅಂತಹವನೆಂದು ತಿಳಿದ ಮೇಲೆಯೂ, ಅವನನ್ನೇ ಸಮರ್ಥಿಸಿಕೊಂಡರೆ? ಪ್ರಿನ್ಸಿಪಲ್ಸ್ ಬೇರೆ: ಬದುಕು ಬೇರೆ.

ತುಂಬಾ ಕಡಿಮೆ ಜನಕ್ಕೆ ಆ ಎರಡು ಅಂಶಗಳ ನಡುವಿನ ವ್ಯತ್ಯಾಸ ಬಹಳ ಕಡಿಮೆ ಇರುತ್ತದೆ.

ಆದರೆ ಪ್ರವಲ್ಲಿಕ 'ಆ ಕೆಲವೇ' ಲಿಸ್ಟಿನಲಿದ್ದಾಳೆ.

ಅವಳೊಂದು ನಿರ್ಧಾರಕ್ಕೆ ಬಂದಳು. ಕಾದು ನೋಡುವುದು...ಅದೇ ಸದ್ಯದ ಸ್ಥಿತಿಯಲ್ಲಿ ಸರಿಯಾದ ಮಾರ್ಗ.

ಒಂದು ಸಲ ಈ ನಿರ್ಧಾರಕ್ಕೆ ಬಂದಾದ ಮೇಲೆ ಅವಳು ಈಗ ತನ್ನ ಆಫೀಸು, ಕರ್ತವ್ಯಗಳ ಬಗ್ಗೆ ಯೋಚಿಸಲು ಪ್ರಾರಂಭಿಸಿದಳು.

ತನ್ನ ಆಫೀಸಿನಿಂದ ಯಾರೋ ರಹಸ್ಯಗಳನ್ನು ಹೊರಹಾಕುತ್ತಿದ್ದಾರೆಂಬುದು ನಿರ್ವಿವಾದ. ಮೊದಲು ಅವರನ್ನು ಹಿಡಿಯಬೇಕು.

ಅದಕ್ಕಾಗಿ ಅವಳೊಂದು ಸಣ್ಣ ಟ್ರಿಕ್ ಉಪಯೋಗಿಸಲು ಯೋಚಿಸಿದಳು. ಆದರೆ ಆ ಟ್ರಿಕ್ ಅವಳನ್ನು ಪ್ರಾಣಾಪಾಯದಲ್ಲಿ ಸಿಲುಕಿಸಿತು.

* * * *

'ಉದ್ಯೋಗಂ ಪುರುಷ ಲಕ್ಷಣ' ಎಂಬ ಪ್ರವಲ್ಲಿಕಳ ಮಾತಿಗೆ ಪ್ರಭಾವಿತನಾಗಿ ಆಫೀಸಿನ ವ್ಯವಹಾರವನ್ನೆಲ್ಲಾ ಒಂದು ಹದಕ್ಕೆ ತಂದ. ಪರಮೇಶ್ವರ್ ಮಗನ ಜಾಣ್ಮೆಯನ್ನು ಅಭಿನಂದಿಸಿದ.

"ಎಲ್ಲವನ್ನೂ ತುಂಬಾ ಅಪ್–ಟು–ಡೇಟ್ ಮಾಡಿದೆಯಲ್ಲಾ –"

"ಒಂದೇ ತಿಂಗಳಲ್ಲಿ..." ಅವನ ತಾಯಿ ಹೇಳಿದಳು.

"ನಿಜವಾ–"

"ನಿಜಾಪ್ಪ, ಅಕೌಂಟಿಂಗು, ಬೇಸಿಕ್ ಇನ್‌ಕಂ ಟ್ಯಾಕ್ಸ್ ಸಿದ್ಧಾಂತಗಳು ಮೊದಲು ಅರ್ಥವಾಗಲಿಲ್ಲ. ಒಂದ್ಹತ್ತು ದಿನ ಕಷ್ಟಪಟ್ಟೆ. ಎಲ್ಲಾ ಗೊತ್ತಾಯಿತು."

ವಿಹಾರಿ ಹೋದಮೇಲೆ ಪರಮೇಶ್ವರ್ ಹೆಂಡತಿಯೊಡನೆ ಹೇಳಿದ, "ನನ್ನ ಮಗ ಇಷ್ಟು ಬುದ್ಧಿವಂತನಾಗುತ್ತಾನೆಂದುಕೊಂಡಿರಲಿಲ್ಲ. ಚೆನ್ನಾಗಿ ಬೆಳೆಸಿದ್ದಿ."

ಆ ನಾಟಕದ ಹುಚ್ಚು ಇಲ್ಲದಿದ್ದರೆ ಮತ್ತಷ್ಟು ಸರಿಹೋಗುತ್ತಿದ್ದ.''

"ಅದರಲ್ಲಿ ತಪ್ಪೇನಿದೆ? ತುಂಬಾ ಕಷ್ಟಪಡುವ ಪ್ರತಿಯೊಬ್ಬನಿಗೂ ವಿರಾಮಕ್ಕಾಗಿ ಯಾವುದಾದರೊಂದು ಹವ್ಯಾಸ ಇರಲೇಬೇಕು. ನಾಟಕಗಳನ್ನಾಡುವುದು ಅಪರಾಧವೇನಲ್ಲ, ಅದೂ ಒಂದು ಹವ್ಯಾಸ."

ವಿಹಾರಿಯ ಕಿವಿಗೆ ಈ ಮಾತುಗಳು ಬೀಳುತ್ತಿದ್ದಂತೆಯೇ ಸಂತೋಷಗೊಂಡ. ಇಷ್ಟು ವರ್ಷದ ಬದುಕಿನಲ್ಲಿ ತನ್ನವರಾರೂ ಈ ಹವ್ಯಾಸವನ್ನು ಮೆಚ್ಚಿಕೊಂಡಿರಲಿಲ್ಲ. ತಾಯಿಯೂ ಸೇರಿದಂತೆ ಎಲ್ಲರೂ ನಿಂದಿಸುವವರೇ, ''ಥ್ಯಾಂಕ್ಸ್ ಅಪ್ಪಾ" ಎಂದ ಮಿಂಚುತ್ತಿರುವ ಕಣ್ಣಗಳಿಂದ..."ಇಷ್ಟು ದಿನಗಳಿಗೆ ನೀವೊಬ್ಬರು ನನ್ನನ್ನು ಸಮರ್ಥಿಸಿದಿರಿ."

ಆ ಮನೆಯೊಳಗೆ ಮೂರನೆ ವ್ಯಕ್ತಿಯೊಬ್ಬನ ಪ್ರವೇಶ ಅವನಿಗೆಷ್ಟೋ ಚೆನ್ನಾಗಿದೆ. ತಾನೂ, ತನ್ನ ತಾಯಿ ಮಾತ್ರವಿದ್ದಾಗ ಅದೊಂದು ರೀತಿಯ ನಿಶ್ಶಬ್ಧ ಗೂಡುಕಟ್ಟಿಕೊಂಡಿರುತ್ತಿತ್ತು ಆ ಮನೆಯಲ್ಲಿ. ಎಷ್ಟೇ ಆಪ್ಯಾಯತೆಯಿದ್ದರೂ ವಯಸ್ಸಿನ ಅಂತರ–ಆ ತಾಯಿ ಮಗನನ್ನು ಬೇರೆ ಬೇರೆ ಅಂತಸ್ಥುಗಳಲ್ಲಿರಿಸಿತ್ತು. ಕೇವಲ ಒಬ್ಬ ವ್ಯಕ್ತಿಯ ಪ್ರವೇಶದಿಂದ ಆ ಅಂತರ ಕಡಿಮೆಯಾದಂತಾಯಿತು.

ರಾತ್ರಿ ತುಂಬಾ ಹೊತ್ತು ಈಸಿ ಛೇರಿನಲ್ಲಿ ಕುಳಿತು ಪರಮೇಶ್ವರ್ ಓದುತ್ತಾ ಇರುತ್ತಿದ್ದ. ಅವನ ಪಕ್ಕದಲ್ಲೇ ಸ್ಟೂಲಿನ ಮೇಲೆ ಪೀನಲ್‌ಕೋಡಿನಿಂದ ಕೇಸ್‌ಸ್ಟಡೀಸ್‌ವರೆಗೂ ದೊಡ್ಡ ದೊಡ್ಡ ಬೌಂಡ್ ಪುಸ್ತಕಗಳನ್ನು ಜೋಡಿಸಲಾಗಿತ್ತು. ಆ ದೃಶ್ಯವೇ ವಿಹಾರಿಗೆ ಇಷ್ಟವಾಗುತ್ತಿತ್ತು, ತಮ್ಮ ತಮ್ಮ ವಿಷಯಗಳಲ್ಲಿ ತುಂಬಾ ಆಳವಾಗಿ ಅಭ್ಯಸಿಸಿದವರು–ಆ ರಂಗದ ವ್ಯವಹಾರಗಳಲ್ಲಿ ಲೀನವಾಗಿರುವಾಗ ಎಷ್ಟು ತಾದಾತ್ಮ್ಯ ಹೊಂದುತ್ತಾರೋ, ಹೊರ ಪ್ರಪಂಚವನ್ನು ಎಷ್ಟು ಏಕಾಗ್ರತೆಯಿಂದ ಮರೆಯುತ್ತಾರೋ ಅವನು ಪ್ರತ್ಯಕ್ಷವಾಗಿ ನೋಡುತ್ತಿರುವುದು ಅದೇ ಮೊದಲನೆ ಸಲ. ಅದಕ್ಕೇ ತನ್ನ ತಂದೆ ಅಷ್ಟು ದೊಡ್ಡ ಲಾಯರ್ ಆಗಿದ್ದಾನೆಂದುಕೊಂಡ. ಅವನಿಗೆ ಆ ಊಹೆಯೇ ಎಷ್ಟೋ ಹೆಮ್ಮೆಯನ್ನುಂಟು ಮಾಡಿತು.

ಮತ್ತೆರಡು ದಿನಗಳಲ್ಲಿ ಪರಮೇಶ್ವರ್ ಡೆಲ್ಲಿಗೆ ಹೊರಟುಹೋಗಬೇಕು. "ನೀನೂ ನನ್ನೊಡನೆ ಬಂದುಬಿಡು" ಎಂದು ಹೇಳಿದ ವರ್ಧನಮ್ಮಳಿಗೆ.

"ವಿಹಾರಿಯನ್ನು ಇಲ್ಲಿ ಒಂಟಿಯಾಗಿ ಬಿಟ್ಟಾ?"

"ಒಂಟಿ ಯಾಕೆ? ಇಪ್ಪತ್ತೈದು ವರ್ಷಗಳಾದುವಲ್ಲ. ಮದುವೆ ಮಾಡಿ ಬಿಡೋಣ" ಎನ್ನುತ್ತಾ ಮಗನ ಕಡೆ ನೋಡುತ್ತಾ, "ಏನು-ನಿನ್ನ ಮನಸ್ಸಿನಲ್ಲಿ ಯಾರಾದರೂ ಇದ್ದಾರಾ?" ಎಂದು ಕೇಳಿದ.

ವಿಹಾರಿ ನಾಚಿಕೊಳ್ಳಲಿಲ್ಲ. "ಬರುವ ದ್ವಾದಶಿಯ ವರೆಗೂ ತಡೆಯಿರಿ ಅಪ್ಪ"–ಅಂದ.

"ಆ ದಿನ ಏನಾಗುತ್ತದೆ?" ವರ್ಧನಮ್ಮ ಆಶ್ಚರ್ಯದಿಂದ ಕೇಳಿದಳು. ಮಗ ಇಷ್ಟು ದೊಡ್ಡವನಾಗಿದ್ದಾನೆಂದು ಆಕೆಗೆ ತಿಳಿದಿರಲಿಲ್ಲ. "ಹೇಳ್ತೀನಿ"

ವಿಹಾರಿ ಮದುವೆ ಆಗುವವರೆಗೂ ವರ್ಧನಮ್ಮ ಅಲ್ಲಿಯೇ ಇರುವಂತೆಯೂ ಹೊಸ ಸಂಸಾರ ಒಂದು ಹಂತಕ್ಕೆ ಬಂದನಂತರ ಡೆಲ್ಲಿಗೆ ಹೋಗುವಂತೆಯೂ ನಿರ್ಧರಿಸಲಾಯಿತು.

ಅವಳು ಒಳಗೆ ಹೋದ ಮೇಲೆ ಪರಮೇಶ್ವರ್ ಮಗನ ಕಡೆ ತಿರುಗಿ, "ಯಾರೋ ಆ ಹುಡುಗಿ?" ಎಂದು ಕುತೂಹಲದಿಂದ ಕೇಳಿದ. ತಂದೆಯ ಉತ್ಸಾಹವನ್ನು ಕಂಡು ವಿಹಾರಿಗೆ ನಗು ಬಂತು.

"ಹೇಳ್ತೀನಿ ಅಂದ್ನಲ್ಲಾ ಅಪ್ಪಾ-ಸ್ವಲ್ಪ ತಡಕೊಳ್ಳಿ-" ಎಂದು ಕಣ್ಣು ಮಿಟುಕಿಸಿದ. "ಪ್ರೀತಿಯ ವ್ಯವಹಾರಗಳಲ್ಲಿ ನನ್ನ ಅನುಭವವೇನಾದರೂ ನಿನಗೆ ಸಹಾಯಕ್ಕೆ ಬರುತ್ತದೇನೋ ನೋಡು. ಈಗೇನೋ ಹೀಗಿದ್ದಾಳಾಗಲೀ ಆ ದಿನ ಗಳಲ್ಲಿ ನಿಮ್ಮಮ್ಮ ತುಂಬಾ ಕೊಬ್ಬು ಮಾಡ್ತಿದ್ಲು. ಆದರಲ್ಲಿ ಕೋಟ್ಯಾಧೀಶನ ಒಬ್ಬಳೇ ಒಬ್ಬ ಮಗಳು. ಕಣ್ಣು ತಗ್ಗಿಸಿ ನೋಡುತ್ತಲೇ ಇರಲಿಲ್ಲ. ಅಂತಹವಳನ್ನೇ ನಾನು ಪ್ರೀತಿಯಲ್ಲಿ ಬೀಳಿಸಿಕೊಂಡೆ. ಬೇಕೆಂದರೆ ನಿನಗೇನಾದರೂ ಸಲಹೆ ನೀಡ ಬಲ್ಲೆ. ಫೀಜು ಮಾತ್ರ ಸ್ವಲ್ಪ ಜಾಸ್ತಿ ಅಷ್ಟೇ" ನಗುತ್ತ ಹೇಳಿದ.

"ನನ್ನ ಕೇಸಿನಲ್ಲಿ ಅಂತಹ ಜಂಭ, ಗರ್ವಗಳೇನೂ ಇಲ್ಲ. ಕೇವಲ ಮನಸ್ತತ್ವ ಶಾಸ್ತ್ರ ಮಾತ್ರ ಇದೆ" ವಿನಯದಿಂದ ಹೇಳಿದ ವಿಹಾರಿ.

"ವಿಷ್‌ಯು ಬೆಸ್ಟ್ ಆಫ್ ಲಕ್ ಮೈ ಸನ್"

"ಥ್ಯಾಂಕ್ಸ್ ಅಪ್ಪಾ"

* * * *

"ಬಂಧ-ಬಾಂಧವ್ಯಗಳನ್ನು ಹಿಂದೆ ತಳ್ಳಿಬಿಡು ಪರಮೇಶ್ವರ್. ಹೊಸದಾಗಿ ಬಂದ 'ಗೃಹ' ಹಳೆಯ ಅನುಗ್ರಹಗಳನ್ನು ಮರೆಯುವಂತೆ ಮಾಡಿದೆಯಾ?"

"ಇಲ್ಲಾ ಸ್ವಾಮಿ. ಈ ಪರಮೇಶ್ವರ್ ಎಂದಿಗೂ ಗುರುದ್ರೋಹವನ್ನು ಮಾಡಲಾರ. 2-3 ದಿನಗಳು ಅಲ್ಲಿಯ ವಾತಾವರಣವನ್ನು ಪರೀಕ್ಷಿಸಿದೆನಷ್ಟೇ. ಇನ್ನೊಂದೆರಡು ದಿನಗಳಲ್ಲಿ ನಿರ್ಧರಿಸಿ ಬಿಡುತ್ತೇನೆ."

"ಹೇಳಿದೆನಲ್ಲಾ ಅವನಿಗೇನೂ ಆಗಬಾರದು. ಆದರೆ ನರಳಿ ನರಳಿ ಸಾಯ ಬೇಕು."

"ಅದನ್ನೇ ಯೋಚಿಸುತ್ತಿದ್ದೇನೆ"

"ಯೋಚಿಸುವುದಲ್ಲ; ಆಚರಣೆ ಬೇಕು ನನಗೆ... ಪರಮೇಶ್ವರ್...! ಹಣ ವಿರುವ ಹುಡುಗಿಯನ್ನು ಬಲೆಗೆ ಕೆಡವಿಕೊಂಡು ಆಸ್ತಿಯನ್ನೆಲ್ಲಾ ಹೊಡೆಯಲು ಉಪಾಯ ಮಾಡಿದಿ. ಚಿಕ್ಕಂದಿನಿಂದಲೂ ನಿನ್ನ ತಿಳುವಳಿಕೆಯನ್ನು ಹೇಗೆ ಹಣ ಸಂಪಾದಿಸಬೇಕೆಂಬ ವಿಷಯದ ಬಗ್ಗೆಯೇ ಕೇಂದ್ರೀಕರಿಸಿದ್ದಿ. ವಿವಾಹದಿಂದಾಗಿ ಅದು ಸಾಧ್ಯವಾಗದಾದಾಗ, ಆಕ್ಸಿಡೆಂಟ್‌ನಲ್ಲಿ ಮರಣ ಹೊಂದಿದ ನಾಟಕವಾಡಿ ಹೆಂಡತಿಯನ್ನು ವಿಧವೆಯನ್ನಾಗಿ ಮಾಡಿದಿ. ನಿನ್ನ ಬುದ್ಧಿವಂತಿಕೆಯನ್ನು ಮೊದಲು ಗುರುತಿಸಿದವನು ನಾನೇ! ಗಿಡದ ಕೆಳಗಿನ ಪ್ಲೀಡರನನ್ನು ಗ್ರೇಟೆಸ್ಟ್ ಲಾಯರನ್ನಾಗಿ ಮಾಡಿದೆ. ಕೋಟ್ಯಾಂತರ ಕಮಿಷನ್ ಕೊಟ್ಟೆ. ನಿನ್ನಲ್ಲಿಯ ಕ್ರಿಮಿನಲ್ ಲಾಯರ್ ತಿಳುವಳಿಕೆಗಿಂತಲೂ, ನಿನ್ನ ಕ್ರಿಮಿನಲ್ ತಿಳುವಳಿಕೆಯೇ ನನಗೆ ಬೇಕಾಗಿರುವುದು. ನನ್ನನ್ನು ಅವಮಾನಗೊಳಿಸಿದ ವ್ಯಕ್ತಿ ಇಷ್ಟು ದಿನಗಳಿಂದ ಸಂತೋಷದಿಂದಿದ್ದಾನೆಂದರೆ ಅವಮಾನ! ಹೋಗು ಪರಮೇಶ್ವರ್. ಎರಡು ದಿನಗಳಲ್ಲಿ ನನಗೆ ಸಮಾಧಾನ ಬೇಕು. ಮಾತಿನಲ್ಲಲ್ಲ; ಕೆಲಸದಲ್ಲಿ."

* * * *

"ಯಾರೋ ಅವಳು ದ್ವಾದಶಿ ಹುಡುಗಿ? ಪ್ರವಲ್ಲಿಕ ತಾನೇ?" ಮಗನನ್ನು ಕೇಳಿದ.

"ಅಲ್ಲ ಲಪ್ಪ! ಆ ಹುಡುಗಿಯ ಹೆಸರು ಸುನಾದಮಾಲ. ತುಂಬಾ ಪುಕ್ಕಲು ಹುಡುಗಿ"

"ಪ್ರವಲ್ಲಿಕಳೊಡನೆ ನಿನ್ನ ಸಲುಗೆ ಕಂಡು ಅವಳನ್ನು ಮದುವೆ ಆಗುತ್ತಿಯೇನೋ ಅಂದುಕೊಂಡಿದ್ದೆ"

"ಅವಳ ಮದುವೆ ಯಾರೋ ಮಿಲಿಟರಿ ಕರ್ನಲ್‌ನೊಡನೆ ನಿಶ್ಚಯವಾಗಿ

ಹೋಗಿದೆಯಂತೆ!"

"ಇಲ್ಲದಿದ್ದರೆ ಮಾಡಿಕೊಳ್ಳುತ್ತಿದ್ದೆಯಾ ನೀನು?"

ಮೊದಲ ಸಲ ವಿಹಾರಿ ನಾಚಿಕೊಂಡ.

ಪರಮೇಶ್ವರ್ ಏನೋ ಗಡಿಬಿಡಿಯಿಂದ ಕೇಳುತ್ತಿದ್ದಂತೆಯೇ ಪದ್ಮಾಕರ್ ಕೈಯಲ್ಲಿ ಕೆಲವು ಪೋಸ್ಟರ್‌ಗಳನ್ನು ಹಿಡಿದು ಬಂದ. ಮಾರನೆ ದಿನದ ಕಾರ್ಯಕ್ರಮವೇ 'ಅಂತಿಮ ಹೋರಾಟ' ನಾಟಕ. ಮುಖ್ಯ ಅತಿಥಿ ಪರಮೇಶ್ವರ್. ಮೊದಲು ಅವನು ಒಪ್ಪಿಕೊಳ್ಳಲಿಲ್ಲ. ಆದರೆ ಸ್ನೇಹಿತರಿಬ್ಬರೂ ಸೇರಿ ಒಪ್ಪಿಸಿದರು.

"ನೀವು ಮುಖ್ಯ ಅತಿಥಿಗಳಾಗಿದ್ದರೆ ಆದು ನಮಗೆ ಹೆಮ್ಮೆಯ ವಿಷಯ ಸರ್" ಅಂದಿದ್ದ ಪದ್ಮಾಕರ್. ಕೊನೆಗೆ ಒಪ್ಪಿಕೊಂಡಿದ್ದ.

"ನಾಳೆ ಪ್ರೇಕ್ಷಕರು ಭಾರೀ ಸಂಖ್ಯೆಯಲ್ಲಿ ಬರುತ್ತಾರೆ ಸಾರ್. ಟಿಕೆಟ್‌ಗಳೆಲ್ಲಾ ಮಾರಾಟವಾಗಿವೆ," ಉತ್ಸಾಹದಿಂದ ಹೇಳಿದ ಪದ್ಮಾಕರ್.

"ಏನು ಆ ನಾಟಕದ ಥೀಮು?" ಇನ್ವಿಟೇಷನ್ ಕಾರ್ಡನ್ನು ಪರಿಶೀಲಿಸುತ್ತ ಕೇಳಿದ ಪರಮೇಶ್ವರ್.

"ಹೊಸ ರೀತಿಯ ಕಥೆ ಸರ್. ಒಬ್ಬ ಕ್ರಾಂತಿಕಾರನನ್ನು ಮಂತ್ರಿಯೊಬ್ಬ ಕೊಲ್ಲುವುದು'' ಪದ್ಮಾಕರ್ ಹೇಳಿದ. "ಮಂತ್ರಿ ವಿಹಾರಿ. ಕ್ರಾಂತಿಕಾರ ನಾನು."

"ಕಥೆ ನನಗೆ ಹಿಡಿಸುವುದಿಲ್ಲ.''

''ಇಲ್ಲಾ ಅಪ್ಪಾ! ನಿಜದ ಪ್ರತಿರೂಪ ನಮ್ಮ ನಾಟಕದ ವಸ್ತು. ಅದನ್ನು ಸಹಿಸಲಾರದ ಭಯಸ್ಥರೂ, ಹಾಗೆ ಬರೆಯಲಾರದ ಲೇಖಕರೂ ಮೆಚ್ಚಿಕೊಳ್ಳದಿರಬಹುದಷ್ಟೇ. ನಮ್ಮ ಪಕ್ಕದಲ್ಲೇ ಕುಳಿತು ನಮ್ಮೊಡನೆ ಮಾತನಾಡುವವನು ಹಾರ್ಡ್‌ಕೋರ್ ಟೆರ‍್ರರಿಸ್ಟ್ ಆದರೂ ಅವನನ್ನು ನಾವು ಗುರುತಿಸುವುದಕ್ಕಾಗುತ್ತಿಲ್ಲ. ಅಷ್ಟು ಭಯಂಕರವಾಗಿದೆ ಪರಿಸ್ಥಿತಿ,'' ಆವೇಶದಿಂದ ಹೇಳಿದ ವಿಹಾರಿ.

ಪರಮೇಶ್ವರ್ ನಕ್ಕು ಮಗನ ಭುಜತಟ್ಟಿದ. ಸ್ನೇಹಿತರಿಬ್ಬರೂ ಹೊರಟು ಹೋದ ಮೇಲೆ ಅವನು ರಾಮಲಾಲ್‌ಗೆ ಫೋನ್ ಮಾಡಿದ. "ರಾಮಲಾಲ್, ನಾಳೆ ಆಡಿಟೋರಿಯಂನಲ್ಲಿ ನನ್ನ ಪಕ್ಕದ ಸೀಟಿನಲ್ಲಿ ನಮ್ಮವರಾರಾದರೂ ಕುಳಿತುಕೊಳ್ಳುವ ಏರ್ಪಾಡನ್ನು ಮಾಡು"

"ಹಾಗೇ ಆಗಲೀ''

ಪರಮೇಶ್ವರ್ ಫೋನಿಟ್ಟು, ಮತ್ತೆ ಇನ್ನೊಬ್ಬನಿಗೆ ಫೋನ್ ಮಾಡಿದ. ಸುನಾದಮಾಲಳ ವಿವರಗಳನ್ನು ತಿಳಿಸಿ, "ಆ ಹುಡುಗಿಯ ಕೈ ಬರಹವನ್ನು ಸಂಪಾದಿಸಿ, ಅಂತಹ ಅಕ್ಷರಗಳಿಂದಲೇ ಕೆಲವು ಪ್ರೇಮ–ಪತ್ರಗಳನ್ನು ಬರೆಸಿ

ಪದ್ಮಾಕರ್ ಮನೆಯಲ್ಲಿ, ಅವನ ಕೋಣೆಯಲ್ಲೇ ಸಿಗುವ ಏರ್ಪಾಟು ಮಾಡಿ. ನಾಳೆ ರಾತ್ರಿಯ ವೇಳೆಗೆ ಇದೆಲ್ಲಾ ನಡೆದಿರಬೇಕು"

ಆ ಕಡೆಯಿದ್ದ ವ್ಯಕ್ತಿ ಈ ವಿಷಯಗಳಲ್ಲಿ ಎಕ್ಸ್‌ಪರ್ಟ್.

''ಹಾಗೇ ಆಗಲಿ ಸಾರ್" ವಿನಯದಿಂದ ಹೇಳಿದ.

ಪರಮೇಶ್ವರ್ ಮೇಲೆದ್ದು ವಿಹಾರಿ ರೂಮಿಗೆ ಹೋದ. ನಾಟಕದ ವಸ್ತುಗಳೆಲ್ಲಾ ಒಂದು ಬ್ಯಾಗಿನಲ್ಲಿತ್ತು. ಅವನ ಕೈ ಯಾವುದಕ್ಕೋ ಹುಡುಕಿತು. 2 ನಿಮಿಷಗಳ ನಂತರ ಅದು ಸಿಕ್ಕಿತು.

ಡಮ್ಮಿ ಪಿಸ್ತೂಲು ನಾಟಕಗಳಲ್ಲಿ ಉಪಯೋಗಿಸುವುದು.

* * * * *

ನಾಟಕ ರಸವತ್ತಾಗಿ ನಡೆಯುತ್ತಿದೆ.

ಎರಡು ದೃಶ್ಯಗಳು ಮುಗಿದಿವೆ.

ಪರಮೇಶ್ವರನ್‌ನ ಒಂದು ಪಕ್ಕದಲ್ಲಿ ವರ್ಧನಮ್ಮ ಕುಳಿತಿದ್ದಾಳೆ. ಮತ್ತೊಂದು ಪಕ್ಕದಲ್ಲಿ ಒಬ್ಬ ಸೂಟುಧಾರಿ ಕುಳಿತಿದ್ದಾನೆ.

ಕಥೆ ಕ್ಲೈಮ್ಯಾಕ್ಸ್‌ನೆಡೆಗೆ ಸಾಗುತ್ತಿದೆ.

ಪರಮೇಶ್ವರ್ ಸನ್ನೆ ಮಾಡಿದ. ಪಕ್ಕದಲ್ಲಿದ್ದ ವ್ಯಕ್ತಿ ಎದ್ದು ಪರದೆಯ ಪಕ್ಕದಲ್ಲಿ ಹೊರಟ. ನಾಟಕದಲ್ಲಿ ಪಾತ್ರಧಾರಿಗಳು ರಂಗಸ್ಥಳದ ಮೇಲೆ ತೆಗೆದುಕೊಂಡುಹೋಗುವ ವಸ್ತುಗಳನ್ನು ಅಲ್ಲಿರಿಸಿರುತ್ತಾರೆ.

ಉಳಿದ ನಟರೆಲ್ಲಾ ತೆರೆಯಮರೆಯಲ್ಲಿ ನಿಂತು ನಾಟಕವನ್ನು ಉತ್ಸಾಹದಿಂದ ನೋಡುತ್ತಿದ್ದರು. ಸೂಟುಧಾರಿ ನಿಧಾನವಾಗಿ ಬಗ್ಗಿದ.

ಡಮ್ಮಿ ಪಿಸ್ತೂಲು ತೆಗೆದು, ಅಂತಹುದೇ ಮತ್ತೊಂದು ಪಿಸ್ತೂಲನ್ನು ಅಲ್ಲಿಟ್ಟ ನಂತರ ತನ್ನ ಸ್ಥಾನಕ್ಕೆ ಬಂದು ಕುಳಿತ.

ನಾಟಕ ಮುಕ್ತಾಯ ಹಂತಕ್ಕೆ ಬಂತು. ಪರಮೇಶ್ವರ್ ಹೆಂಡತಿಯ ಕಡೆ ತಿರುಗಿ, "ಈ ಸುನಾದಮೂಲ ಯಾರೆಂದು ನಿನಗೆ ಗೊತ್ತಾ?" ಎಂದು ಕೇಳಿದ.

"ಇಲ್ಲಾರೀ " ಆಕೆ ಹೇಳಿದಳು.

"ನನ್ನ ಉದ್ದೇಶದಲ್ಲಿ ಆ ಹುಡುಗಿ ಯಾವುದೋ ನಾಟಕವಾಡುತ್ತಿದ್ದಾಳೆ. ಅವಳಿಗೂ, ಪದ್ಮಾಕರ್‌ಗೂ ನಡುವೆ ಏನೋ ರಹಸ್ಯ ನಡೆಯುತ್ತಿದೆಯೆಂದು ನನ್ನ ಅನುಮಾನ."

"ನಿಜವಾ?" ಆತಂಕದಿಂದ ಕೇಳಿದಳು ವರ್ಧನಮ್ಮ. "ನಮ್ಮ ಹುಡುಗ

ಅಷ್ಟರಲ್ಲೇ ಮೋಸ ಹೋಗುತ್ತಿದ್ದಾನಾ? ಅವನನ್ನು ಎಚ್ಚರಿಸಬೇಕು."

"ಅದನ್ನು ಹೇಗೋ ಮಾಡ್ತಿಸಿ ಅಂತಿಟ್ಕೋ. ಆದರೆ ಅವನು ಇದೆಲ್ಲಾ ತಿಳಿದು ಪದ್ಮಾಕರನನ್ನೋ, ಆ ಹುಡುಗಿಯನ್ನೋ ಏನಾದರೂ ಮಾಡಿದರೆ-" ಪರಮೇಶ್ವರ್‌ನ ಮಾತಿನ್ನು ಪೂರ್ತಿಯಾಗಿರಲಿಲ್ಲ.

'ಢಂ'... ಎಂದು ಪಿಸ್ತೂಲು ಸಿಡಿದಿತ್ತು ಸ್ಟೇಜಿನ ಮೇಲೆ! ಮಂತ್ರಿಯ ವೇಷಧಾರಿ ವಿಹಾರಿ ವಿಕಟಾಟ್ಟಹಾಸದಿಂದ ನಗುತ್ತಿದ್ದ. ತೆರೆ ಬಿತ್ತು.

ಆಡಿಟೋರಿಯಂನಲ್ಲಿ ಚಪ್ಪಾಳೆಗಳ ಸುರಿಮಳೆ,

ಪರಮೇಶ್ವರ್ ಹೆಂಡತಿಯೊಡನೆ ಎದ್ದು ಸ್ಟೇಜಿನ ಕಡೆ ನಡೆದ. ಅಲ್ಲಿನ ಪರಿಸ್ಥಿತಿ ಹೊರಗಿನದಕ್ಕಿಂತ ಭಿನ್ನವಾಗಿತ್ತು. ಪದ್ಮಾಕರ್ ರಕ್ತದ ಮಡುವಿನಲ್ಲಿದ್ದ. ಒಂದು ಬುಲೆಟ್ ಮೆದುಳಿನಿಂದ, ಮತ್ತೊಂದು ಎದೆಯಿಂದ ಹೊರ ಬಂದಿತ್ತು. ಪ್ರಾಣ ಹೋಗಿ ಎಷ್ಟು ಸಮಯವಾಗಿತ್ತೋ ಗೊತ್ತಿಲ್ಲ. ವಿಹಾರಿ ಶಿಲಾಪ್ರತಿಮೆಯಂತೆ ನಿಂತಿದ್ದ. ಕೈಯಲ್ಲಿ ಪಿಸ್ತೂಲು ಇನ್ನೂ ಹಾಗೆಯೇ ಇತ್ತು. ವರ್ಧನಮ್ಮ ಕಿಟಾರನೆ ಕಿರುಚಿ ಮುಂದಕ್ಕೆ ಓಡಿದಳು.

ಪರಮೇಶ್ವರ್ ಹೋಗಲಿಲ್ಲ. ಮೆಲ್ಲನೆ ಹೇಳಿದ, "ಒಂದೇ ಹುಡುಗಿಯನ್ನು ಇಬ್ಬರು ಪ್ರೀತಿಸಿದ್ದಾರೆ. ಸ್ಟೇಜಿನ ಮೇಲೆ ನಾಟಕ ಆಡಿದಂತೆ ನಟಿಸಿ ಸ್ನೇಹಿತನನ್ನು ಕೊಲೆಮಾಡಿದ ಕೋಲ್ಡ್ ಬ್ಲಡೆಡ್ ಕೊಲೆಗಾರ ವಿಹಾರಿ! ಮಾಲಳ ಪ್ರೇಮ ಪತ್ರಗಳು ಪದ್ಮಾಕರನ ಕೋಣೆಯಲ್ಲಿ ಸಿಕ್ಕಿವೆ! ಹದಿನಾಲ್ಕು ವರ್ಷಗಳಿಗೆ ಕಡಿಮೆ ಇಲ್ಲದಂತೆ ವಿಹಾರಿಗೆ ಶಿಕ್ಷೆ ಆಗುತ್ತದೆ. ಹೋಗು, ಹೋಗಿ ಸ್ವಾಮಿಗೆ ಹೇಳು. ಪರಮೇಶ್ವರ್ ಹೇಳಿದ ಮಾತನ್ನು ಉಳಿಸಿಕೊಂಡಿದ್ದಾನೆಂದು ಹೇಳು... ಹೋಗು"

ಪಕ್ಕದಲ್ಲಿದ್ದ ವ್ಯಕ್ತಿ ಅಲ್ಲಿಂದ ಹೊರಟು ಹೋದ.

ಪರಮೇಶ್ವರ್ ಮಗನ ಬಳಿಗೆ ಹೋದ. "ವಿಹಾರಿ––ಏನೋ ಇದೆಲ್ಲಾ ?" ಎಂದ ಆತಂಕದಿಂದ.

"ಎಂತಹ ಕೆಲಸ ಮಾಡಿದೆ ವಿಹಾರೀ––"

ವಿಹಾರಿಯ ಕೈಯಿಂದ ಪಿಸ್ತೂಲು ಕೆಳಗೆ ಬಿತ್ತು.

ವರ್ಧನಮ್ಮ ಅಳುತ್ತಿದ್ದಾಳೆ. "ಏನ್ರೀ–– ನಮ್ಮಗೂಗೆ ಏನಾಗುತ್ತೇರಿ?" ಪರಮೇಶ್ವರ್ ಉತ್ತರಿಸಲಿಲ್ಲ. ಈ ದೇಶದಲ್ಲಿಯ ಯಾವ ಲಾಯರೂ ಇನ್ನು ವಿಹಾರಿಯನ್ನು ರಕ್ಷಿಸಲಾರನೆಂದು ಅವನಿಗೆ ಗೊತ್ತಿತ್ತು.

* * * *

ಪರಮೇಶ್ವರ್ ಹೆಂಡತಿಯ ಬಳಿಗೆ ಹೋದ. ಯಾವ ಕ್ಷಣದಲ್ಲಾದರೂ ಆಕೆ ಎಚ್ಚರತಪ್ಪಬಹುದು. ಬೆನ್ನಿನ ಮೇಲೆ ಕೈಯ್ಯಾಡಿಸುತ್ತಾ ''ಸಮಾಧಾನ ತಂದುಕೋ ವರ್ಧಾ'' ಎಂದು ಸಮಾಧಾನ ಹೇಳಿದ. ಪಕ್ಕದಲ್ಲಿದ್ದ ಮತ್ತೊಬ್ಬ ನಟ "ಕೂಡಲೇ ಅಂಬುಲೆನ್ಸ್‌ಗೆ ಫೋನ್‌ಮಾಡಿ'' ಎಂದು ಕಿರುಚುತ್ತಿದ್ದ.

''ಬೇಕಾಗಿಲ್ಲ. ಪ್ರಾಣ ಹೋಗಿಬಿಟ್ಟಿದೆ'' ಮತ್ಯಾರೋ ಹೇಳುತ್ತಿದ್ದಾರೆ.

ಪರಮೇಶ್ವರ್ ಪಿಸ್ತೂಲಿನ ಕಡೆ ನೋಡಿದ. ಜೇಬಿನಿಂದ ಕರ್ಚೀಫನ್ನು ತೆಗೆದು ಅದನ್ನು ತೆಗೆದುಕೊಂಡ. ಪಕ್ಕದಲ್ಲಿ ಯಾರೋ–''ಹಾಗೇಕೆ ಮಾಡುತ್ತಿದ್ದೀರಿ?'' ಎಂದು ಕೇಳಿದಳು.

ಪರಮೇಶ್ವರ್ ಉತ್ತರಿಸುವುದಕ್ಕಿಂತ ಮುಂಚಿತವಾಗಿಯೇ ''ನ್ಯಾಯದ ದೃಷ್ಟಿಯಲ್ಲಿ ಎಲ್ಲರೂ ಒಂದೇ. ಮಗನಾದರೂ ಅಷ್ಟೇ. ನೇಣುಗಂಬ ಹತ್ತ ಬೇಕಾದ್ದೆ–ಎಂದು ಆತನ ಉದ್ದೇಶವಿರಬಹುದು" ಎಂಬ ಸ್ತ್ರೀಕಂಠ ಕೇಳಿಸಿತು.

ಪಕ್ಕದಲ್ಲಿ ಕೇಳಿಸಿದ ಈ ಮಾತುಗಳಿಗೆ ಪರಮೇಶ್ವರ್ ಬೆಚ್ಚಿಬಿದ್ದು ನೋಡಿದ. ಯಾವಾಗ ಬಂದಿದ್ದಳೋ ತಿಳಿಯದು–ಪ್ರವಲ್ಲಿಕ ಅಲ್ಲಿ ನಿಂತಿದ್ದಳು! ಅವನ ಮುಖದ ಬಣ್ಣ ಬದಲಾಯಿತು, ಅವಳು ನಕ್ಕಳು.

ಅಷ್ಟರಲ್ಲಿ ಪರಮೇಶ್ವರ್ ಎಚ್ಚೆತ್ತುಕೊಂಡ, "ಹೌದು ಮಗನಾದರೂ ಅಷ್ಟೇ. ಮಾಡಿದ್ದಕ್ಕೆ ಶಿಕ್ಷೆ ಅನುಭವಿಸಲೇಬೇಕು'' ಎಂದ ಕಠಿಣವಾಗಿ.

"ಅದರಲ್ಲಿಯೂ ಇದು ಕೋಲ್ದ್–ಬ್ಲಡೆಡ್ ಮರ್ಡರ್ ಸಾರ್. ಸಾವಿರ ಜನ ಪ್ರೇಕ್ಷಕರ ಮುಂದೆ ನಿರ್ದಾಕ್ಷಿಣ್ಯವಾಗಿ ಸಾಯಿಸುವುದೆಂದರೆ" ಪ್ರವಲ್ಲಿಕ ಹೇಳಿದಳು.

ಆಗಬಂತು ಅವನಿಗೆ ಅನುಮಾನ! ಸಂದಿಗ್ಧತೆಯಿಂದ ಪ್ರವಲ್ಲಿಕಳ ಕಡೆಗೆ ನೋಡಿದ. ಅವಳ ತುಟಿಗಳ ಮೇಲೆ ತೆಳುವಾಗಿ ನಗು ಹರಡಿತ್ತು. ಅನುಮಾನ ಸ್ಥಿರವಾಗಿ ಪದ್ಮಾಕರ್ ಕಡೆಗೆ ನೋಡಿದ. ನೆಲದ ಮೇಲೆ ಬಿದ್ದಿದ್ದ ಪದ್ಮಾಕರ್ ಆಗಲೇ ಎದ್ದು ಕುಳಿತಿದ್ದ. ಅದು ವರೆವಿಗೂ ಸೀರಿಯಸ್ ಆಗಿ ಭಯವನ್ನು ನಟಿಸುತ್ತಿದ್ದ ವಿಹಾರಿ ಕೂಡಾ ನಗಲು ಪ್ರಾರಂಭಿಸಿದ. ಉಳಿದ ನಟರೆಲ್ಲರೂ ಅದು-ವರೆವಿಗೂ ನಡೆದ ಸೀನನ್ನು ತಾವು ನಟಿಸಿದಂತೆ ನಗಲು ಪ್ರಾರಂಭಿಸಿದರು. ವರ್ಧನಮ್ಮನಿಗೆ ಮಾತ್ರ ತುಂಬಾ ಸಿಟ್ಟು ಬಂತು. "ಏನೋ ಇದೆಲ್ಲಾ?'' ಎಂದು ಮಗನನ್ನು ಬೈಯ್ದಳು.

ಪದ್ಮಾಕರ್ ನಗು ನಿಲ್ಲಿಸಿ, "ಸ್ಟೇಜಿನ ಮೇಲೆ ಮಾತ್ರವಲ್ಲ. ತೆರೆಬಿದ್ದ ನಂತರವೂ ಎಷ್ಟು ಹೊತ್ತು ನಟಿಸಬಲ್ಲೆ ಎಂದು ಪ್ರವಲ್ಲಿಕರೊಡನೆ ಪಂದ್ಯ ಕಟ್ಟಿದ್ದೆ" ಎಂದು ನಕ್ಕ.

"ಏನು ಹುಡುಗಾಟಾನೋ. ಇನ್ನು ಸ್ವಲ್ಪ ಹೊತ್ತಾಗಿದ್ದಿದ್ದರೆ ನನ್ನ ಹೃದಯವೇ ನಿಂತ್ಹೋಗ್ತಿತ್ತು'' ಎಂದಳು ವರ್ಧನಮ್ಮ. ಅಷ್ಟರಲ್ಲಿ ಪ್ರವಲ್ಲಿಕ, "ಇಂಥ ಸಣ್ಣ ಸಣ್ಣ ವಿಷಯಗಳಿಗೇ ಹೃದಯ ಬಡಿತ ನಿಂತರೆ ಇನ್ನು ಮುಂದೆ ಬರಲಿರುವ ದೊಡ್ಡ ದೊಡ್ಡ ಷಾಕುಗಳಿಗೆ ಹೇಗೆ ತಡೆದುಕೊಳ್ಳುತ್ತೀರೋ ಎಂದು ನೋಡಲು ಒಂದು ಎಕ್ಸ್‌ಪೆರಿಮೆಂಟ್ ಮಾಡಿದ್ದಾರೆ. ಅಷ್ಟೇ ತಾನೇ ಮಿಸ್ಟರ್ ಪರಮೇ-ಶ್ವರ್?" ಎಂದು ನಗುತ್ತಾ ಕೇಳಿದಳು.

ಪರಮೇಶ್ವರ್ ಇಕ್ಕಟ್ಟಿನಲ್ಲಿ ಸಿಕ್ಕಿಕೊಂಡವನಂತೆ ಪ್ರವಲ್ಲಿಕಳ ಕಡೆನೋಡಿ ''ನನಗೇನೂ ಅರ್ಥವಾಗುತ್ತಿಲ್ಲ" ಎಂದ.

"ನಿಜವಾಗಿಯೂ ಅರ್ಥವಾಗುತ್ತಿಲ್ಲವಾ-ನಿಜವಾಗಿ ಪಿಸ್ತೂಲನ್ನು ಬದಲಾಯಿಸಿದ್ದು ಯಾವಾಗ ನಡೆಯಿತು?" ರಹಸ್ಯವಾಗಿ ಅವನಿಗೆ ಮಾತ್ರ ಕೇಳಿಸುವಂತೆ ಕೇಳಿದಳು. ಅವನ ಮುಖ ಕೆಂಪಗಾಯಿತು. ವರ್ಧನಮ್ಮ ಇನ್ನೂ ಮಗನನ್ನು, ಪದ್ಮಾಕರನನ್ನು ಬೈಯ್ಯುತ್ತಲೇ ಇದ್ದಳು. ಆದರೆ ಆಕೆಯ ಮುಖದಲ್ಲಿ ಅಪಾಯದಿಂದ ತಪ್ಪಿಸಿಕೊಂಡ ಸಂತೋಷವಿತ್ತು.

ಪ್ರವಲ್ಲಿಕಳ ಮಾತಿಗೆ ಏನು ನಡೆದಿರಬಹುದೆಂದು ಅರ್ಥವಾದವನಂತೆ "ಇದೆಲ್ಲ ಮಾಡಿದ್ದು ನೀನೇನಾ?" ಎಂದು ಕೇಳಿದ ಪರಮೇಶ್ವರ್ ತುಟಿಕಚ್ಚಿಕೊಂಡು. "ಹೌದು, ಪ್ರವಲ್ಲಿಕ ಅಂದರೆ 'ಪಜಲ್' ಎಂದರ್ಥ" ಸಣ್ಣಗೆ ನಗುತ್ತ ಹೇಳಿದಳು.

"ಕಂಗ್ರಾಜುಲೇಷನ್ಸ್, ಇದನ್ನೆಲ್ಲಾ ಹೇಗೆ ಕಂಡುಹಿಡಿದಿ?"

"ಇಷ್ಟು ದಿನಗಳ ನಂತರ ಹೆಂಡತಿ ಮಕ್ಕಳನ್ನು ನೋಡಿದ ನೀವು ಬದಲಾಗುತ್ತೀರಿ ಎಂಬ ನಂಬಿಕೆ ನನಗಿರಲಿಲ್ಲ. ಟೆಲಿಫೋನ್ ಟ್ರಾಪ್ ಮಾಡಿದ್ದೆ, ಎಲ್ಲಾ ಬಯಲಾಯಿತು.'' ಅವಳ ಉತ್ತರದಿಂದ ಪರಮೇಶ್ವರನ್‌ನ ಹಣೆಯಲ್ಲಿ ಗೆರೆಗಳು ಮೂಡಿದವು.

"ನನ್ನನ್ನು ನೀನೇನೂ ಮಾಡಲಾರಿ.. ನಿನಗ್ಯಾವ ಸಾಕ್ಷಿಗಳೂ ಇಲ್ಲ" ಹಗುರವಾಗಿ ಹೇಳಿದ.

"ಹೆತ್ತ ಮಗನನ್ನೇ ಜೈಲಿಗೆ ಕಳಿಸಬೇಕೆಂದು ಸಂಚು ಹೂಡಿದ ರಾಕ್ಷಸ ನೀನು, ನಿನ್ನಂಥವನಿಗೆ ನಮ್ಮ ನ್ಯಾಯಾಸ್ಥಾನಗಳು ಸಾಕಾಗುವುದಿಲ್ಲ. ನರಕವೇ ಸರಿಯಾದ ಸ್ಥಾನ. ಅದಕ್ಕೆ ಯಾವ ಸಾಕ್ಷಿಗಳೂ ಬೇಕಾಗಿಲ್ಲ."

''ಇದನ್ನೆಲ್ಲಾ ನಾನು ಮಾಡಿದ್ದೆಂದು ನನ್ನ ಮಗನಿಗೆ ಹೇಳುತ್ತೀಯಾ? ಅವನು ನಂಬುವುದಿಲ್ಲ."

"ನಂಬುವುದಿಲ್ಲವೆಂದು ಗೊತ್ತು. ಅದಕ್ಕೇ ಈಗಲೇ ಹೇಳುವುದಿಲ್ಲ ನಾನು;

ಅದಕ್ಕೂ ಸಮಯ ಬರುತ್ತೆ."

"ಬೆಸ್ಟಾಫ್ ಲಕ್–"

ಅಷ್ಟರಲ್ಲಿ ವರ್ಧನಮ್ಮ ಇಬ್ಬರೊಡನೆ ಹತ್ತಿರ ಬಂದಳು.

"ಸ್ವಲ್ಪದರಲ್ಲಿ ಅಪಾಯದಿಂದ ಪಾರಾದ! ಅದೇನಾದರೂ ನಿಜವಾದ ಪಿಸ್ತೂಲಾಗಿದ್ದಿದ್ದರೆ ಏನಾಗುತ್ತಿತ್ತೋ? ಇನ್ನು ಈ ನಾಟಕಗಳು ಸಾಕೆಂದು ಇಬ್ಬರಿಗೂ ಬುದ್ಧಿ ಹೇಳಿ" ಅಂದಳು.

"ನಿಂಗೆಲ್ಲೋ ಹುಚ್ಚಮ್ಮ. ನಾಟಕದಲ್ಲಿ ನಿಜವಾದ ಪಿಸ್ತೂಲು ಹೇಗೆ ಬರುತ್ತೆ?"

"ನನಗದೆಲ್ಲಾ ಗೊತ್ತಿಲ್ಲ. ಇನ್ನು ಈ ನಾಟಕಗಳನ್ನು ಬಿಟ್ಟುಬಿಡುತ್ತೇನೆಂದು ನನ್ನ ಮೇಲೆ ಪ್ರಮಾಣ ಮಾಡಿ ಹೇಳು!"

ಪ್ರವಲ್ಲಿಕ ಪರಮೇಶ್ವರ್ ಕಡೆಗೆ ನೋಡಿ, "ನಾಟಕಗಳನ್ನು ಬಿಡುವುದು ಒಳ್ಳೆಯದೇ ಅಲ್ಲವೇ, ನೀವೇನನ್ನುತ್ತೀರಿ?" ಎಂದು ಕೇಳಿದಳು. ಪರಮೇಶ್ವರ್ ಮಾತನಾಡಲಿಲ್ಲ.

"ನಾವೇನೋ ಸ್ವಲ್ಪ ನಾಟಕದಲ್ಲಿ ನಾಟಕವಾಡಿದರೆ ನೀನಿಷ್ಟು ಸೀರಿಯ-ಸ್ಸಾಗಿ ತಗೊಂಡಿದೀಯಲ್ಲಮ್ಮಾ. ಏನಪ್ಪಾ! ನಿಮಗೂ ಭಯವಾಯ್ತಾ?"

ಪರಮೇಶ್ವರ್ ಬಲವಂತದ ನಗೆ ನಕ್ಕು, "ಸ್ವಲ್ಪ ಭಯಪಟ್ಟಿದ್ದೇನೋ ನಿಜವೇ ಅಂದುಕೋ. ಆದರೆ ಇದೆಲ್ಲಾ ನಾಟಕವೆಂದು ಮೊದಲೇ ನನಗೆ ಅನುಮಾನ ಬಂದಿತ್ತು" ಅಂದ.

"ನಿಮ್ಮಪ್ಪ ದೊಡ್ಡ ಕ್ರಿಮಿನಲ್ ಲಾಯರ್ ಅಲ್ಲವೇ ವಿಹಾರಿ! ಇಂತಹ ಸಣ್ಣ ಸಣ್ಣ ಕ್ರೈಮ್‌ಗಳಿಗೆ ಭಯಪಟ್ಟರೆ ಆಗುತ್ತಾ? ಇದನ್ನು ತುಂಬಾ ಹಗುರವಾಗಿ ತೆಗೆದುಕೊಳ್ಳುತ್ತಾರೆ, ಆದರೆ ಇದಕ್ಕಿಂತಾ ದೊಡ್ಡ ಪ್ಲಾನ್ ಹಾಕಿದರೆ ಕಷ್ಟ ಅಷ್ಟೆ!" ಪ್ರವಲ್ಲಿಕ ವ್ಯಂಗ್ಯವಾಗಿ ಹೇಳಿದಳು.

"ನನಗೇನೂ ಅರ್ಥವಾಗುತ್ತಿಲ್ಲ."

"ಕೆಲವು ವಿಷಯಗಳು ಅರ್ಥವಾಗದಿರುವುದೇ ಒಳ್ಳೆಯದು."

ಪರಮೇಶ್ವರ್ ಇನ್ನು ಈ ವಿಷಯ ಸಾಕೆಂಬಂತೆ "ಹೊರಡೋಣವಾ ವರ್ಧಾ..."ಎಂದ.

"ನಾನು ಮೇಕಪ್ ತೆಗೆದು ಮತ್ತೆ ಬರುತ್ತೇನೆ" ಎಂದು ಹೇಳಿದ ವಿಹಾರಿ.

"ನಾನು ಕಾರಿನವರೆಗೂ ಬರುತ್ತೇನೆ ನಡೆಯಿರಿ–" ಅಂದಳು ಪ್ರವಲ್ಲಿಕ,

"ಬೇಕಾಗಿಲ್ಲ ತಾಯಿ, ನಾವು ಹೋಗ್ತೀವಿ. ನಿನಗೇಕಮ್ಮಾ ಶ್ರಮ?" ಪರಮೇಶ್ವರ್ ಹೇಳಿದ.

"ನಿಮ್ಮ ಹಿಂದೆ ಬರುವುದರಲ್ಲಿ ಯಾವ ಶ್ರಮವಿದೆ? ನಡೆಯಿರಿ."

ವರ್ಧನಮ್ಮ ಮಗನೊಡನೆ, "ಬೇಗ ಮನೆಗೆ ಬಾರೋ'' ಎಂದು ಹೇಳಿದಳು. ಅವರು ಹೊರಟ ನಂತರ ಪದ್ಮಾಕರ್ ವಿಹಾರಿಯೊಡನೆ "ಅನವಶ್ಯಕವಾಗಿ ಈ ನಾಟಕವನ್ನು ಆಡಿದೆವೇನೋ ಗುರೂ. ನಿಮ್ಮಮ್ಮ ನಿನ್ನನ್ನು ಈ ಸ್ಟೇಜಿನ ಬಳಿಗೆ ಬರಲು ಬಿಡುವುದಿಲ್ಲ'' ಅಂದ.

"ಅಂಥದ್ದೇನಿಲ್ಲ ಬಿಡು."

"ಮತ್ತೆ ಬೇಗ ಬಂದುಬಿಡಲು ಹೇಳುತ್ತಿದ್ದಾರೆ.''

''ಬಹುಶಃ ದೃಷ್ಟಿ ತೆಗೆಯಲಿರಬೇಕು."

ಇಲ್ಲಿ ಈ ಸಂಭಾಷಣೆ ನಡೆಯುತ್ತಿದ್ದ ಸಮಯದಲ್ಲಿ ಅಲ್ಲಿ ಪರಮೇಶ್ವರ್ ಹೆಂಡತಿಯೊಡನೆ ಕಾರು ಹತ್ತಿದ. ಪ್ರವಲ್ಲಿಕ ಮರ್ಯಾದೆಯಿಂದ ಡೋರ್ ಹಾಕಿದಳು. "ಥ್ಯಾಂಕ್ಸ್" ಅಂದ.

"ಇಷ್ಟಕ್ಕೇನಾ?"

"ಅಲ್ಲ. ನಿಜವಾದ ಪಿಸ್ತೂಲಿನ ವಿಷಯನ್ನು ವಿಹಾರಿಗೆ ಹೇಳದಿದ್ದುದಕ್ಕೆ" ಅವನ ಮಾತು ಪೂರ್ತಿಯಾಗುವುದಕ್ಕೆ ಮುಂಚೆಯೇ ಕಾರು ಅಲ್ಲಿಂದ ವೇಗವಾಗಿ ಹೊರಟುಹೋಯಿತು. ಪ್ರವಲ್ಲಿಕ ಹಾಗೆಯೇ ನಿಂತುಬಿಟ್ಟಳು. ಅವಳ ಮನಸ್ಸಿನಲ್ಲಿ ವಿವಿಧ ರೀತಿಯ ಯೋಚನೆಗಳು ಮನೆ ಮಾಡಿದವು. ಅದೃಷ್ಟ ಚೆನ್ನಾಗಿದ್ದುದರಿಂದ ವಿಹಾರಿಯನ್ನು ಒಂದು ಸಲ 'ಸೇವ್' ಮಾಡಿಕೊಂಡಳು. ಈ ಸಲ ಪರಮೇಶ್ವರ್ ಇಷ್ಟೊಂದು ಸಣ್ಣ ಪ್ಲಾನ್ ಹಾಕಲಾರ. ಮತ್ತೇನು? ಮಗ, ಆತ ಇಬ್ಬರೂ ಒಂದೇ ಮನೆಯಲ್ಲಿರುತ್ತಾರೆ. ಅವನು ಏನು ಮಾಡಲೂ ಮನೆಯಲ್ಲಿ ಅವಕಾಶಗಳು ಕಡಿಮೆ.

ಹೋಗಲಿ ವಿಹಾರಿಗೆ ಇದೆಲ್ಲಾ ಹೇಳಿಬಿಟ್ಟರೆ?

ಅವನ ತಂದೆ ಎಂತಹ ಭೀಕರ ಪ್ಲಾನ್ ಮಾಡಿ ಅವನನ್ನು ಹದಿನಾಲ್ಕು ವರ್ಷಗಳ ಕಾಲ ಜೈಲಿನಲ್ಲಿ ಕೊಳೆ ಹಾಕುತ್ತಿದ್ದನೆಂಬುದನ್ನು ತಿಳಿಸಿ ಬಿಟ್ಟರೆ? ಅವನಷ್ಟು ಷಾಕನ್ನು ತಡೆದುಕೊಳ್ಳಬಲ್ಲನಾ?

ಅವಳು ಏನನ್ನೂ ನಿರ್ಧರಿಸಿಕೊಳ್ಳಲಾರದೇ ಹೋದಳು. ಆ ಯೋಚನೆಯ ಸಂದಿಗ್ಧತೆಯಲ್ಲಿಯೇ ಅವಳು–ಪರಮೇಶ್ವರ್‌ನಿಂದ ಟ್ರಾಪ್ ಮಾಡಿದ್ದ ಒಂದು ಟೆಲಿಫೋನ್ ಸಂಭಾಷಣೆಯನ್ನು ಮರೆತುಬಿಟ್ಟಿದ್ದಳು...ಸುನಾದಮಾಲಳ ಕೈ ಬರಹದಂತೆಯೇ ಪದ್ಮಾಕರನ ಮನೆಯಲ್ಲಿ ಕೆಲವು ಪ್ರೇಮ ಪತ್ರಗಳನ್ನಿಡು" ಎಂಬುದೇ ಅದು. ಹಾಗೇಕೆ ಅವನು ಹೇಳಿದ್ದನೆಂದು ಅವಳು ಯೋಚಿಸಿದ್ದಿದ್ದರೆ ಚೆನ್ನಾಗಿರುತ್ತಿತ್ತು. ಸ್ನೇಹಿತನನ್ನು ರಕ್ಷಿಸಿಕೊಳ್ಳುವ ಪ್ರಯತ್ನದಲ್ಲಿ ಆ ಪ್ರೇಮ

ಪತ್ರಗಳ ವಿಷಯಕ್ಕೆ ಅವಳು ಅಷ್ಟು ಪ್ರಾಮುಖ್ಯತೆ ಕೊಡದೆ ಹೋದದ್ದು ಮತ್ತೊಂದು ತಿರುವಿಗೆ ಕಾರಣವಾಯಿತು.

* * * * *

"ನಾನು ಮಾನಸಿಕ ಶಾಸ್ತ್ರಜ್ಞನಾಗದಿದ್ದಿದ್ದರೆ ಒಬ್ಬ ಶ್ರೇಷ್ಠ ಹಸ್ತ-ಸಾಮುದ್ರಿಕನಾಗುತ್ತಿದ್ದೆ" ಎಂದಿದ್ದ ರಾಬರ್ಟ್‌ಸನ್ ಎಂಬ ಒಬ್ಬ ಸೈಕಾಲಜಿ ಪ್ರೊಫೆಸರ್. ಎರಡಕ್ಕೂ ಅಷ್ಟು ಹತ್ತಿರ ಸಂಬಂಧವಿತ್ತು. ಹೂವಿನ ಹೆಸರು ಹೇಳಿದರೇ ಅಥವ ಪ್ರಶ್ನೆ ಕೇಳಿದ ಸಮಯ ಹೇಳಿದರೆ ಭವಿಷ್ಯ ಹೇಳುವ ಒಬ್ಬ ಜೋತಿಷಿಯನ್ನು ಒಮ್ಮೆ ಕಂಡಿದ್ದೆ. ರಾಬರ್ಟ್‌ಸನ್‌ನ ಸೂಕ್ತಿ ಅದೆಷ್ಟರ ಮಟ್ಟಿಗೆ ನಿಜವೋ ಏನೋ ಸೂಡೋ ಜೋತಿಷಿಗಳ (ಕಳ್ಳಸನ್ಯಾಸಿಗಳ) ವಿಷಯದಲ್ಲಿ ಮಾತ್ರ ಇದು ಶೇ. ನೂರರಷ್ಟು ನಿಜವೆನ್ನಿಸಿತು.

"ಚಿಕ್ಕಂದಿನಲ್ಲಿ ನಿಮಗೆ ಆಕ್ಸಿಡೆಂಟ್ ನಡೆದಿತ್ತು" ಎಂಬುದಕ್ಕೆ 2 ಉತ್ತರಗಳು–'ಹೌದು! ಅಥವಾ 'ಇಲ್ಲ', ಇಲ್ಲವೆಂದರೆ, 'ಚೆನ್ನಾಗಿ ನೆನಪಿಸಿಕೊಳ್ಳಿ, ನೀವು ಮರೆತಿರಬಹುದು" ಎಂಬ ಸೂಚನೆ. ಒಂದು ಸಣ್ಣ ಸಂದಿಗ್ಧತೆಯ ಉತ್ತರ ಅಪೆಂಡಿಸೈಟಿಸ್ ಆಪರೇಷನ್ ನಡೆದಿತ್ತು ಎಂದೇನಾದರೂ ಹೇಳಿದಿರೋ ಕೂಡಲೇ.. "ಹ್ಞಾ ...ಅದೇ ಅದನ್ನೇ ನಾನು ಹೇಳಿದ್ದು. ಆ ಆಕ್ಸಿಡೆಂಟ್‌ನಲ್ಲಿ ನಿಮ್ಮ ಪ್ರಾಣ ಹೋಗಬೇಕಾಗಿತ್ತು" ಎನ್ನುತ್ತಾ ಜಂಭದಿಂದ ಕಿರುನಗು!! ಇನ್ನು ಹೌದೆಂದರೆ "ನೋಡಿದಿರಾ! ಈ ಲೈಫ್‌ಲೈನ್ ನೋಡುತ್ತಿದ್ದಂತೆಯೇ ನನಗೆ ಅರ್ಥವಾಯಿತು. ಅಂದಹಾಗೆ ನೀವೊಬ್ಬ ಹುಡುಗಿಯನ್ನು ಪ್ರೀತಿಸಿದ್ದಿರಿ, ಆದರೆ ಅವಳೊಡನೆ ಮದುವೆ ನಡೆಯಲಿಲ್ಲ. "ಇದಕ್ಕೆ ಮತ್ತೆ ಎರಡು ಉತ್ತರಗಳು–ಹೌದು, ಅಲ್ಲ, ಹೆಚ್ಚೂ ಕಡಿಮೆ ಪ್ರತಿಯೊಬ್ಬನೂ ತನ್ನ ಹದಿಹರೆಯದಲ್ಲಿ ಯಾರಾದರೂ ಹುಡುಗಿಯನ್ನು ಲವ್ ಮಾಡಿಯೇ ಮಾಡಿರುತ್ತಾನೆ; ಮನಸ್ಸಿನಲ್ಲಿ ಯಾದರೂ. ಆ ಮದುವೆ ನಡೆದಿರುವುದಿಲ್ಲ. ಶೇ. ತೊಂಬತ್ತು ಜನ ಆ ನೆನಪಿನಾಳಕ್ಕೆ ಇಳಿದು "ಹೌದು ಎನ್ನುತ್ತಾರೆ! ಒಂದು ವೇಳೆ ನೀವು 'ಇಲ್ಲ'ವೆಂದಿರೆಂದಿಟ್ಟುಕೊಳ್ಳಿ. "ಇಲ್ಲವಾ! ಹಾಗಾದರೆ ನಿಮಗೆ ತಿಳಿಯದಂತೆ ಹುಡುಗಿಯೊಬ್ಬಳನ್ನು ನಿಮ್ಮನ್ನು ಪ್ರೀತಿಸುತ್ತಿದ್ದಳು." "ಹೌದು ಇಪ್ಪತ್ತು ವರ್ಷಗಳ ಹಿಂದೆ ನಮ್ಮ ಪಕ್ಕದ ಮನೆಯ ಹುಡುಗಿ..." "ಬೇಡ. ಬೇಡ. ಈ ಹಾರ್ಟ್ ಲೈನೇ ಹೇಳುತ್ತಿದೆ. ನೀವು ಆ ಪ್ರೀತಿಯನ್ನು ಗುರುತಿಸಲಿಲ್ಲ. ಹೋಗಲಿ ಬಿಡಿ, ಅದು ಒಳ್ಳೆಯದಕ್ಕೆ ಆಯಿತು. "ಆಮೇಲೆ ನೀವೀಗ ಯಾವುದೋ ಕಷ್ಟದಲ್ಲಿದ್ದೀರಿ–

ಒಂದು ಸಣ್ಣ ಸಮಸ್ಯೆ." ಹೀಗೆ ನಡೆಯುತ್ತದೆ ಆ ಸಂಭಾಷಣೆ. ಇದನ್ನೇ ಸ್ವಲ್ಪ ಹೆಚ್ಚಿನ ಸ್ತರದಲ್ಲಿ ನಿರ್ವಹಿಸಿದರೆ...

ಅನಂತಾನಂತಸ್ವಾಮಿಗೆ, ಭಕ್ತಿಯಿಂದ ಅಡ್ಡಬಿದ್ದ ಅನಂತಾನಂತ ಭಕ್ತ ಕೋಟಿಯ ನಡುವೆ ನಡೆಯುತ್ತಾ ಅಲ್ಲಲ್ಲೇ ನಿಂತು ಕೆಲವರಿಗೆ ವಿಭೂತಿ ಕುಂಕುಮ ಕೊಡುವುದು ರೂಢಿಯಾಗಿತ್ತು. ಹಾಗೊಮ್ಮೆ–ಒಬ್ಬ ಭಕ್ತಳಿಗೆ ಕುಂಕುಮ ಕೊಟ್ಟ. ಆಕೆ ಗಾಭರಿಯಿಂದ "ಸ್ವಾಮೀ" ಎಂದಳು. ಪಕ್ಕದಲ್ಲೇ ಇದ್ದ ಮತ್ತೊಬ್ಬಾಕೆ "ಸ್ವಾಮಿ ಈಕೆ...ಕುಂಕುಮ ಅರಿಶಿನ ಉಪಯೋಗಿಸುವುದಿಲ್ಲ" ಅಂದಳು. ತನ್ನ ಸಹಜ ಗಾಂಭೀರ್ಯದಿಂದ ಸ್ವಾಮಿ ನಕ್ಕು, "ಒಳ್ಳೆಯದೇ ಆಗುತ್ತದೆ" ಎಂದು ಮುಂದಕ್ಕೆ ನಡೆದಿದ್ದ. ಆಕೆ ಹಾಗೆಯೇ ಕುಂಕುಮದೊಡನೆ ನಿಂತುಬಿಟ್ಟಿದ್ದಳು. ಆಕೆ ವರ್ಧನಮ್ಮ.

ಆ ದಿನ ನಡೆದ ಆ ಘಟನೆ ಈ ದಿನ ವರ್ಧನಮ್ಮಳಿಗೆ ಸ್ವಾಮಿಯ ಮೇಲಿದ್ದ ಗೌರವಾಭಿಮಾನಗಳನ್ನು ವಿಪರೀತವಾಗಿ ಬೆಳೆಸಿತು. ತನ್ನ ಹಣೆಯಲ್ಲಿ ಕುಂಕುಮ ಮತ್ತೆ ಬರುವಂತಾದದ್ದು ಸ್ವಾಮಿಯ ಅನುಗ್ರಹದಿಂದಲೇ ಎಂದು ದೃಢವಾಗಿ ನಂಬಿದಳು.

ಇದರಲ್ಲಿ ವಿಚಿತ್ರವೇನೂ ಇರಲಿಲ್ಲ. ಸಿ. ಬಿ. ಐ. ಮುಖ್ಯಸ್ಥನ ಅಜ್ಞಾನಕ್ಕಿಂತಲೂ ಇದು ದೊಡ್ಡದೇನೂ ಅಲ್ಲ. ನಡೆಯುತ್ತಿದ್ದ ಘಟನೆಗಳನ್ನೆಲ್ಲಾ ಜೋತಿಷಿ ಹೇಳುವ ಮಾತುಗಳಿಗೆ ಅನ್ವಯಿಸಿಕೊಂಡು ಸಂತೃಪ್ತಿ ಪಡುವುದು (ಹಾಗೆ ನಡೆಯದಿದ್ದುದನ್ನು ಮರೆತು ಬಿಡುವುದು) ಸಾಮಾನ್ಯರ ಅಭ್ಯಾಸ.

ಎಷ್ಟೋ ವರ್ಷಗಳ ಹಿಂದೆ ಸತ್ತುಹೋದ ನೆಂದುಕೊಂಡಿದ್ದ ಗಂಡ ಮತ್ತೆ ಸಿಕ್ಕಿದ್ದರಿಂದ ಉಂಟಾದ ಸಂತೋಷವನ್ನು ಆಕೆ ಸ್ವಾಮಿಯ ಮಹಿಮೆಗೆ ಅನ್ವಯಿಸಿಕೊಂಡು, ಮತ್ತೆ ಆತನನ್ನು ದರ್ಶಿಸಬೇಕೆಂದುಕೊಂಡಳು. ಆದರೆ ಈ ಸಲ ಪರಮೇಶ್ವರ್ ಹೆಂಡತಿಯಾಗಿ ಆಕೆಯ ಅಂತಸ್ತು ಬೇರೆ. ಭಕ್ತರ ದರ್ಶನಕ್ಕಾಗಿ ನಿಗದಿಯಾಗಿದ್ದ ಸಮಯದಲ್ಲಲ್ಲದೆ, ಪ್ರತ್ಯೇಕವಾಗಿ ಸ್ವಾಮಿಯ ಅಂತಃಪುರದೊಳಗೆ ಪ್ರವೇಶಿಸುವ ಅವಕಾಶ ಈ ದಂಪತಿಗಳಿಗೆ ಸಿಕ್ಕಿತ್ತು.

"ವಿಹಾರಿಯನ್ನೂ ಕರೆದುಕೊಂಡು ಹೋಗೋಣ" ಎಂದ ಪರಮೇಶ್ವರ್. ವಿಹಾರಿ ಹಠ ಹಿಡಿದ, "ನಾನು ಸ್ವಾಮಿಯ ಬಳಿಗಾ?" ಕೋಪದಿಂದ ಕೇಳಿದ.

"ತಪ್ಪೇನಿದೆ ಅದರಲ್ಲಿ?" ವರ್ಧನಮ್ಮ ಪ್ರಶ್ನಿಸಿದಳು.

ಸ್ವಾಮಿ ಎಂತಹವನೆಂದು ತಾಯಿಗೆ ಹೇಳುವುದು ಅನವಶ್ಯಕವೆನ್ನಿಸಿತು. "ನಾನು ಬರುವುದಿಲ್ಲ" ಅಂದ.

"ನಮಗೆಷ್ಟೋ ಸಹಾಯ ಮಾಡಿದ ಸ್ವಾಮಿಯ ಬಗ್ಗೆ ಹಾಗೆ ನಿರ್ಲಕ್ಷ್ಯ

ದಿಂದ ಮಾತಾಡಬೇಡ" ಪರಮೇಶ್ವರ್ ಬುದ್ಧಿ ಹೇಳಿದ. ವಿಹಾರಿ ಸ್ವಲ್ಪ ಯೋಚಿಸಿ 'ಸರಿ' ಅಂದ.

ಆ ಸಂಜೆಯೇ ಮೂವರೂ ಸ್ವಾಮಿಯ ಬಳಿಗೆ ಹೋದರು. ವರ್ಧನಮ್ಮ ಭಕ್ತಿಯಿಂದ ಹೂವು ಹಣ್ಣುಗಳನ್ನು ಅರ್ಪಿಸಿದಳು. ಸಾಮಾನ್ಯರಿಗೇ ಅಲ್ಲ. ದೊಡ್ಡ ದೊಡ್ಡ ಅಧಿಕಾರಿಗಳಿಗೂ ಸಿಗದ ಆ ವಿಶೇಷ ದರ್ಶನ ತನಗೆ ಸಿಕ್ಕಿದ್ದು ಅದೃಷ್ಟವೆಂದು ಭಾವಿಸಿದಳು. ಎಲ್ಲಾ ತನ್ನ ಗಂಡನಿಗಿರುವ ಅಧಿಕಾರದ ಫಲ ವೆಂದುಕೊಂಡಳು. ಆಕೆಯ ಬಾಳಿನಲ್ಲಿ ಅಷ್ಟು ಸಂತೋಷ ನೀಡಿದ ಘಟನೆಗಳು ತುಂಬಾ ಕಡಿಮೆ. ಹಾಗೆ ನೋಡಿದರೆ ಆಕೆಯ ಬಾಳೆಲ್ಲಾ ವಿಷಾದವೇ. ತಿಳಿದೂ ತಿಳಿಯದ ವಯಸ್ಸಿನಲ್ಲಿ ಪ್ರೇಮಿಸಿದ್ದು, ಪ್ರೀತಿಸಿದವನೊಡನೆ ಮನೆ ಬಿಟ್ಟು ಬಂದದ್ದು, ಅವನ ಸಾವು ಎಲ್ಲಾ ದುಃಖಕರ ಘಟನೆಗಳೇ. ಈಗಲೇ ಅವಳು ಬದುಕಿನ ಮಾಧುರ್ಯವನ್ನು ಅನುಭವಿಸುತ್ತಿರುವುದು.

ಆ ಸಂತೋಷದಲ್ಲಿ ಭಕ್ತಿಯಿಂದ ಸ್ವಾಮಿಯ ಕಾಲಿಗೆ ನಮಸ್ಕರಿಸಿದಳು. ಸ್ವಾಮಿ ವಿಹಾರಿಯ ಕಡೆ ನೋಡಿ 'ನೀನಾ?' ಎಂಬಂತೆ ಮುಖದ ಬಣ್ಣ ಬದಲಾಯಿಸಿದ. ವರ್ಧನಮ್ಮ ಮಗನಿಗೆ ಸನ್ನೆ ಮಾಡಿದಳು. ವಿಹಾರಿ ಸ್ವಲ್ಪ ತಡ ಬಡಿಸಿ ಸ್ವಾಮಿಗೆ ನಮಸ್ಕರಿಸಿದ. ಸ್ವಾಮಿ ಪರಮೇಶ್ವರ್ ಕಡೆಗೆ ನೋಡಿ ಕಿರುನಕ್ಕ. ಪರಮೇಶ್ವರ್ ಜಂಭದಿಂದ ಮುಗುಳ್ನಕ್ಕ.

ಸ್ವಾಮಿ ತಾಯಿತ ತೆಗೆದ "ಮಂಡೂಕ ಮಹತ್ವವಿರುವ ತಾಯಿತ ಇದು. ಇದನ್ನು ಸಾಧಾರಣವಾಗಿ ಯಾರಿಗೂ ಕೊಡುವುದಿಲ್ಲ. ನನ್ನ ಭಕ್ತರ ಮಗನೆಂದು ನಿನಗೆ ಕೊಡುತ್ತಿದ್ದೇನೆ" ಎನ್ನುತ್ತ ಕಟ್ಟಿದ. ವರ್ಧನಮ್ಮ ಬೀಗಿ ಹೋದಳು,

ವಿಹಾರಿ ಜೇಬಿನಿಂದ ಒಂದು ಸಣ್ಣ ಪೆಟ್ಟಿಗೆ ತೆಗೆದ. "ಮಾರ್ಜಾಲ ಪೂಜೆ ಮಾಡಿ ಭಕ್ತಿಯಿಂದ ನಿಮಗೆ ಸಮರ್ಪಿಸೋಣವೆಂದು ತಂದಿದ್ದೇನೆ. ಭಕ್ತನ ಕಾಣಿಕೆ ಯಾಗಿ ತೆಗೆದುಕೊಳ್ಳಿ. ಸಾವಿರಾರು ಭಕ್ತರು ಕೊಟ್ಟಿದ್ದ ಕಾಣಿಕೆಗಳ ರಾಶಿಯೇ ಅಲ್ಲಿತ್ತು. ಇದನ್ನು ಸ್ವಾಮಿ ತೆಗೆದುಕೊಂಡು ಆ ರಾಶಿಯೊಳಗೆ ಸೇರಿಸಿದ.

ಮತ್ತೊಮ್ಮೆ ನಮಸ್ಕರಿಸಿ ತಾಯಿ, ಮಗ ಅಲ್ಲಿಂದ ಹೊರಬಂದರು, ಅಲ್ಲಿಯೇ ನಿಂತ ಪರಮೇಶ್ವರ್ "ಏಕಿಷ್ಟು ಬೆಲೆ ಬಾಳುವ ಮೈಕ್ರೋ ಫೋನನ್ನು ಅವನಿಗೆ ಕಟ್ಟಿದಿರಿ?" ಎಂದು ಕೇಳಿದ. "ವಿಹಾರಿಯಿಂದ ತಿಳಿದುಕೊಳ್ಳಬೇಕಾಗಿ ರುವ ಯಾವ ರಹಸ್ಯವೂ ಇಲ್ಲವಲ್ಲಾ" ಎಂದು ಅವನ ಮಾತಿನ ಅರ್ಥವಾಗಿತ್ತು. ಸ್ವಾಮಿ ನಕ್ಕು, "ನೀನೇನೋ ಸುನಾದಮಾಲ ಪ್ರೇಮಪತ್ರಗಳು ಎನ್ನುತ್ತಿದ್ದಿ. ಅಲ್ಲಿ ಪ್ರವಲ್ಲಿಕ ಇವನನ್ನೇ ಪ್ರೀತಿಸುತ್ತಿದ್ದಾಳೆನ್ನಿಸುತ್ತಿದೆ. ನಿಜವೇನೆಂದು ತಿಳಿದು ಕೊಳ್ಳೋಣವೆಂದು..." ಅಂದ.

ಪರಮೇಶ್ವರ್ ತಲೆ ಆಡಿಸಿ, ಅಲ್ಲಿಂದ ಹೊರಟು ಹೋದ.

ವಿಷಯ ನಿಜಕ್ಕೂ ಅದಲ್ಲ!

ಸ್ವಾಮಿಗೆ ಅನುಮಾನ ಬಂದಿದೆ! ಇಷ್ಟು ವರ್ಷಗಳಲ್ಲಿ ಪರಮೇಶ್ವರ್ ಹಾಕಿದ ಪ್ಲಾನುಗಳಲ್ಲಿ ಮೊದಲನೇ ಸಲ ಫೇಲಾದದ್ದು 'ಅದೇ'.

ಇಷ್ಟು ಸಣ್ಣ ವಿಷಯಕ್ಕೆ ಇಷ್ಟು ದಿನ ತೆಗೆದುಕೊಂಡನಲ್ಲ–ಆದರೂ ವಿಫಲ ನಾದನಲ್ಲ ಎಂದು ಸ್ವಾಮಿಗೆ ಅನುಮಾನ ಬಂತು. ಮಗನೊಡನೆ ಸೇರದೇ ಇರ ಬಹುದು. ಆದರೆ 'ಸಂಬಂಧ' ಪರಮೇಶ್ವರ್‌ನನ್ನು ತಡಬಡಿಸುವಂತೆ ಮಾಡು ತ್ತಿದೆಯೇನೋ ಎಂಬ ಅನುಮಾನ ಉಂಟಾಯಿತು. ಅದು ಸಾಕು.

ತನ್ನ ಅನುಚರರಲ್ಲಿ ಅಷ್ಟು ಸಣ್ಣ ಕ್ರಮ ಶಿಕ್ಷಣರಾಹಿತ್ಯವನ್ನು ಕೂಡಾ ಸ್ವಾಮಿ ಸಹಿಸುವುದಿಲ್ಲ. ತನ್ನ ಅನುಮಾನ ಎಷ್ಟರಮಟ್ಟಿಗೆ ನಿಜವೋ ತಿಳಿದು ಕೊಳ್ಳಲು ವಿಹಾರಿಗೆ ತಾಯಿತ ಕಟ್ಟಿದ.

ಆದರೆ ಮುದ್ರಣಾಲಯದಿಂದ ಹೊರಬಂದ ರೂಪಾಯಿ ನೋಟು ಬೇರೆ ಬೇರೆ ಜೇಬುಗಳನ್ನು ಬದಲಾಯಿಸಿದಂತೆ ಈ ತಾಯಿತ ಬೇರೆ ಬೇರೆಯವರ ಕತ್ತು ಗಳಲ್ಲಿ ತೂಗಾಡುತ್ತದೆಂದು ಸ್ವಾಮಿ ಊಹಿಸಿರಲಿಲ್ಲ.

ಸ್ವಾಮಿಯ ಅಂತಃಪುರದಿಂದ ಹೊರಬಂದ ವಿಹಾರಿ ಮೊದಲು ಮಾಡಿದ ಕೆಲಸವೆಂದರೆ ಆ ತಾಯಿತವನ್ನು ಸುನಾದಮಾಲಳ ಅಜ್ಜಿಗೆ ಕೊಟ್ಟು, ಏನು ಮಾಡ ಬೇಕೆಂದು ತಿಳಿಸಿದ್ದು...

ಆ ನಂತರ ಅಜ್ಜಿ ತಾಯಿತವನ್ನು ಆಗ ತಾನೇ ಕಾಲೇಜಿನಿಂದ ಮರಳಿ ಬಂದ ಸುನಾದಮಾಲಳ ಕತ್ತಿಗೆ ಬಲವಂತದಿಂದ ಕಟ್ಟಿಬಿಟ್ಟಳು.

"ಏನಜ್ಜಿ ಇದೆಲ್ಲಾ?" ಎಂದು ಬೇಸರದಿಂದ ಕೇಳಿದಳು ಸುನಾದಮಾಲ.

"ಪುರುಷ ಭಯ ನಿನ್ನಲ್ಲಿ ಹೋಗಲು ಅದ್ಭುತವಾದ ತಾಯಿತ ಇದು. ಎಷ್ಟೋ ಭಕ್ತಿಯಿಂದ ಸೇವೆ ಮಾಡಿ ನಿನಗಾಗಿ ತಂದಿದ್ದೇನೆ. ಇದನ್ನು ಕತ್ತಿನಲ್ಲಿ ಹಾಕಿಕೊಂಡರೆ ಯಾವ ಗಂಡಸಿಗೂ ನಿನ್ನೆಡೆಗೆ ನೋಡುವ ಧೈರ್ಯ ಬರುವುದಿಲ್ಲ."

ಸುನಾದಮಾಲ ನಂಬದವಳಂತೆ ನೋಡಿದಳು. "ಹೌದು...ನಿಜಾ ಕಣೆ" ಎಂದು ಅಜ್ಜಿ ಐದು ನಿಮಿಷಗಳ ಕಾಲ ಕನ್ವಿನ್ಸ್ ಮಾಡಿದಳು. ಕೊನೆಗೆ ಮಾಲ ಒಪ್ಪಿಕೊಂಡಳು.

ನಿಜಕ್ಕೂ ಆ ತಾಯಿತ ಅದ್ಭುತವಾಗಿ ಕೆಲಸ ಮಾಡಿತು!

ಅವಳು ಬಾಗಿಲು ತೆಗೆಯುತ್ತಿದ್ದಂತೆಯೇ ಪೋಸ್ಟ್‌ಮನ್ ಅಪ್ರಯತ್ನ ವಾಗಿ ಹೆಜ್ಜೆಯನ್ನು ಹಿಂದಕ್ಕೆ ಹಾಕಿದ. ರಸ್ತೆಯ ಕೊನೆಯಲ್ಲಿ ನಿಂತು ಸದಾ ಅವ ಳನ್ನು ನೋಡುತ್ತಿದ್ದ ಜೀನ್ಸ್‌ಪ್ಯಾಂಟ್‌ಧಾರಿ, ಅವಳು ಕಾಲೇಜಿಗೆ ಹೋಗುತ್ತಿ

ದ್ದಂತೆಯೇ ಅವಳನ್ನು ಕಂಡು ಷಾಕ್ ತಗುಲಿದವನಂತೆ ತಲೆ ತಗ್ಗಿಸಿಕೊಂಡು ಹೊರಟು ಹೋದ. ಕ್ಲಾಸಿನಲ್ಲಿ ಸದಾ ಅವಳ ಕಡೆಗೇ ನೋಡುತ್ತಾ ಪಾಠ ಮಾಡುತ್ತಿದ್ದ ತರುಣ ಲೆಕ್ಚರರ್ ಒಬ್ಬ ಅಂದು ಅವಳೆಡೆಗೆ ನೋಡಲೇ ಇಲ್ಲ. ಅಷ್ಟೇಕೆ? ಏನೂ ತಿಳಿಯದ ವಿಷ್ಣು ಕೂಡಾ, "ಆಂಟೀ! ನಿಮ್ಮನ್ನ ನೋಡ್ತಿದ್ರೆ ಏನೋ ಭಯ ಆಗುತ್ತೆ" ಅಂದಿದ್ದ. ಪಕ್ಕದ ಮನೆಯಾತ ಕೂಡಾ ಪೇಪರನ್ನು ಓದುವ ನೆಪದಲ್ಲಿ ಕನ್ನಡಕದ ಹಿಂದಿನಿಂದ ಅವಳನ್ನು ನುಂಗುವಂತೆ ನೋಡುತ್ತಿದ್ದವನು ಅಂದು ಪೇಪರಿನಿಂದ ಮುಖ ಮುಚ್ಚಿಕೊಂಡಿದ್ದ.

ಒಂದೇ ಸಮನೆ ಅಂದು ನಡೆಯುತ್ತಿದ್ದ ಘಟನೆಗಳಿಂದ ಮಾಲಳಿಗೆ ತಾನು ಧರಿಸಿದ ತಾಯಿತದ ಮೇಲೆ ನಂಬಿಕೆ ಬಂತು. ಅವಳಿಗೆ ಸೈಕಲಾಜಿಕಲ್ ಧೈರ್ಯ ಬಂತು. ಮನಸ್ಸಿನಲ್ಲೇ ಅಜ್ಜಿಗೆ ಕೃತಜ್ಞತೆ ಹೇಳಿಕೊಂಡಳು. ನಡೆದ ಘಟನೆಗಳಿಗೆಲ್ಲಾ ಸ್ವಲ್ಪ ವಿಹಾರಿ, ಸ್ವಲ್ಪ ಅಜ್ಜಿ ಕಾರಣವೆಂದು ಅವಳಿಗೆ ತಿಳಿಯಲಿಲ್ಲ.

ದ್ವಾದಶಿ ಬರಲು ಇನ್ನೂ ನಾಲ್ಕು ದಿನ ಸಮಯವಿತ್ತು.

ವಿಹಾರಿ ತಾಯಿಯೊಡನೆ ಮನೆಗೆ ಬಂದ ಎರಡು ಗಂಟೆಗಳಲ್ಲೇ ವಿವಿಧ ಪತ್ರಿಕೆಗಳವರಿಗೆ ಫೋನ್ ಮಾಡಿದ. ಸ್ವಾಮಿಯ ಭವನದಲ್ಲಿ ಬಾಂಬ್ ಇದೆಯೆಂದು ಅಧಿಕಾರಯುತ ಸ್ವರದಲ್ಲಿ ಹೇಳಿ ಫೋನಿಟ್ಟುಬಿಡುತ್ತಿದ್ದ. ತುಂಬಾ ಜನ ಅದನ್ನು ನಂಬಲಿಲ್ಲ. ನಂಬಿದ ಒಂದಿಬ್ಬರು ವರದಿಗಾರರು ಗಡಿಬಿಡಿಯಿಂದ ಸ್ವಾಮಿಯ ಅರಮನೆಗೆ ಧಾವಿಸಿದರು. ವಿಹಾರಿ ಕೂಡಾ ಮನೆಯಿಂದ ಹೊರ ಬಂದು ಸ್ವಾಮಿಗೆ ಪಬ್ಲಿಕ್ ಟೆಲಿಫೋನ್ ಬೂತ್‌ನಿಂದ ಫೋನ್ ಮಾಡಿದ.

"ಸ್ವಾಮಿಯವರು ಈಗ ಕೋಟಿ ಪುಷ್ಪಾರ್ಚನೆಯಲ್ಲಿದ್ದಾರೆ. ಅವರು ಯಾರೊಡನೆಯೂ ಮಾತನಾಡುವುದಿಲ್ಲ" ಎಂದು ಸೆಕ್ರೆಟರಿ ಅತ್ತಲಿಂದ ಹೇಳಿದಳು.

"ವಿಹಾರಿ ಎಂದು ಹೇಳಿ. ತಾಯಿತದ ಬಗ್ಗೆ ಎಂದು ಹೇಳಿದರೆ ಓಡಿಬರುತ್ತಾರೆ" ಅಂದ. ಅವನು ಹೇಳಿದಂತೆಯೇ ಸ್ವಾಮಿ ನಿಮಿಷದ ನಂತರ ಲೈನಿನಲ್ಲಿ ಬಂದ.

"ಏನು ತಾಯಿತ ಅಂದೆಯಲ್ಲಾ–" ಸ್ವಾಮಿ ಕೇಳಿದ. ಅವನ ಸ್ವರದಲ್ಲಿ ಅನುಮಾನ ಪ್ರತಿಧ್ವನಿಸುತ್ತಿತ್ತು.

"ಮಂಡೂಕ ಮಹತ್ವದ ತಾಯಿತಕ್ಕೆ ಬದಲಾಗಿ ಮಾರ್ಜಾಲ ಮಹತ್ವವಿರುವುದನ್ನು ಬಹುಮಾನವಾಗಿ ಕೊಟ್ಟಿದ್ದೇನೆ. ಏನು ಮಾಡಿದಿರಿ ಸ್ವಾಮಿ?" ಎಂದು ಕೇಳಿದ. ಆ ಪ್ರಶ್ನೆಗೆ ಸ್ವಾಮಿ ರಿಲೀಫಾಗಿ ಫೀಲಾದ. ತಾಯಿತದ ವಿಷಯ ವಿಹಾರಿಗೆ ತಿಳಿಯಲಿಲ್ಲವೆಂದು ಸಂತೋಷದಿಂದ, "ನನಗೆ ದಿನಕ್ಕೆ ಸಾವಿರಾರು

ಬಹುಮಾನಗಳು ಕಾಣಿಕೆಗಳು ಬರುತ್ತಿರುತ್ತವೆ. ಅವನ್ನು ಬಿಚ್ಚಲು ನನ್ನ ಭಕ್ತರಿಗೆ ನಾಲ್ಕು ದಿನ ಹಿಡಿಯುತ್ತದೆ" ಅಂದ.

"ನಾಲ್ಕು ದಿನಗಳಾ? ಅಯ್ಯೋ–ಹೇಗೆ ಸ್ವಾಮಿ ಹಾಗಾದರೆ? ಇನ್ನು ನಾಲ್ಕು ನಿಮಿಷಗಳಲ್ಲಿ ಅದರಲ್ಲಿರುವ ಬಾಂಬ್ ಸಿಡಿಯುತ್ತದಲ್ಲಾ–"

"ವ್ಹಾಟ್–?"

"ರಾಶಿರಾಶಿಯಾಗಿ ಬಿದ್ದಿರುವ ನಿಮ್ಮ ಕಾಣಿಕೆಗಳಲ್ಲಿ ನಾನು ಕೊಟ್ಟಿರುವ ಪಾಕೆಟ್ಟನ್ನು ಹೊರತೆಗೆಸಿ. ಇಲ್ಲವೇ ನೀವು ನಾಲ್ಕು ನಿಮಿಷಗಳಲ್ಲಿ ಆ ಸ್ಥಳದಿಂದ ದೂರಬಂದು ಬಿಡಿ. ಶತ್ರುಗಳನ್ನು ಸಾಯಿಸುವುದು ನಮ್ಮ ಅಗ್ರಿಮೆಂಟ್‌ನಲ್ಲಿ ಇಲ್ಲವಲ್ಲಾ. ಅದಕ್ಕೇ ಫೋನ್ ಮಾಡಿ ಹೇಳುತ್ತಿದ್ದೇನೆ. ಕ್ವಿಕ್..." ಎಂದು ಫೋನಿಟ್ಟು ಹೊರಬಂದ. ದೂರದಲ್ಲಿ ಬೃಹದಾಕಾರದ ಬಂಗಲೆ ಕಾಣುತ್ತಿದೆ. ಸ್ವಾಮಿ ತನ್ನ ಅನುಚರರೊಡನೆ ಹೊರಗೋಡಿ ಬರುತ್ತಿದ್ದಾನೆ. ಅದೇ ಸಮಯಕ್ಕೆ ಒಂದಿಬ್ಬರು ಪತ್ರಿಕಾಕರ್ತರು ಅಲ್ಲಿಗೆ ಬರುತ್ತಿದ್ದಾರೆ. ವಿಹಾರಿ ಒಂದೇ ಸಮನೆ ತನ್ನ ಕ್ಯಾಮೆರಾದಿಂದ ಆ ದೃಶ್ಯವನ್ನು ವಿವಿಧ ಕೋನಗಳಿಂದ ಫೋಟೋ ತೆಗೆದುಕೊಳ್ಳುತ್ತಿದ್ದ.

ಸರಿಯಾಗಿ ಇಲ್ಲೇ ವಿಹಾರಿ ಸ್ಕೋರ್ ಮಾಡಿದ್ದು. ಯಾರೋ ಅನಾಮಿಕರಿಂದ ಫೋನ್ ಕರೆಬಂದರೆ ವರದಿಗಾರರು ಬರುವುದಿಲ್ಲ. ಆದರೆ ಈಗ ಆ ಸುದ್ದಿ ನಿಜವಾಗಿದೆ. ಕೇವಲ ಇಬ್ಬರು ಮೂವರು ವರದಿಗಾರರು ಆ ದೃಶ್ಯವನ್ನು ಪ್ರತ್ಯಕ್ಷವಾಗಿ ನೋಡಿದರು. ಉಳಿದ ಪತ್ರಿಕೆಗಳಿಗೆ ಈ 'ಬಾಂಬ್‌ಸ್ಕೇರ್' ಕೇವಲ ಸುದ್ದಿಮಾತ್ರ ಆಯಿತು, ಅಂತಹವರಿಗೆ ವಿಹಾರಿ ಈ ಫೋಟೋಗಳನ್ನು ಕೊಟ್ಟ. ಸೆನ್ಸೇಷನಲ್‌ಗಿಂತಲೂ ಬೇಕಾದ್ದೇನು? ಸ್ಪಾಟ್‌ಗೆ ಹೋದ ವರದಿಗಾರರ ಜೊತೆಗೆ ಹೋಗದಿದ್ದವರಿಗೂ ಫೋಟೋ ಸಿಕ್ಕಿತ್ತು. ಅನಂತಾನಂತಸ್ವಾಮಿ ಮೈಮೇಲೆ ಎಚ್ಚರವಿಲ್ಲದವನಂತೆ ಹೊರಗೋಡಿ ಬರುತ್ತಿದ್ದ ಫೋಟೋ. ಅವನ ಹಿಂದೆ ಓಡಿ ಬರುತ್ತಿದ್ದವರ ಹಿಂಡು, ಬೇರೆ ಬೇರೆ ಪತ್ರಿಕೆಗಳಲ್ಲಿ ಬಂದವು. ಯಾರೂ ಕೆಟ್ಟದಾಗಿ ಬರೆಯಲಿಲ್ಲ.

"ಅನಂತಾನಂತಸ್ವಾಮಿಯ ಬಂಗಲೆಯಲ್ಲಿ ಬಾಂಬ್ ಬೆದರಿಕೆ" ಎಂಬ ಹೆಡ್ಡಿಂಗ್‌ಗಳು. ಆದರೆ ಜನರ ವಾಕ್ಯಕಲ್ಪಿತ ರೂಮರ್‌ಗಳಿಗೆ ಪರಿಧಿಯೆಲ್ಲಿರುತ್ತದೆ? ಮುಗ್ಧತೆಯಿಂದ ಸ್ವಾಮಿಯನ್ನು ಪೂಜಿಸುತ್ತಿದ್ದವರೆಲ್ಲ ಒಂದು ಸಣ್ಣ ಬಾಂಬಿಗೆ ಹೆದರಿ ಭಗವತ್‌ಸ್ವರೂಪನಾದ ಸ್ವಾಮಿ ಹೊರಗೋಡಿ ಬರುವುದೆಂದರೇನು? ಎಂಬ ಸಂಶಯವನ್ನು ವ್ಯಕ್ತಪಡಿಸಿದರು. ಆ ಸುದ್ದಿ ಸ್ವಾಮಿಗೂ ತಲುಪಿತು. ಆಗಾಗ ಎದುರು ಪೆಟ್ಟುಗಳು ಬೀಳುತ್ತಿದ್ದವನಿಗೆ ಇದೇನೂ ದೊಡ್ಡ ವಿಷಯವಲ್ಲ

ವಾಗಲೀ, ಎಂದೂ ಸೋಲನ್ನು ಕಾಣದವರಿಗೆ ಇಂತಹವನ್ನು ಸಹಿಸಲು ಸಾಧ್ಯವಾಗುವುದಿಲ್ಲ. ಸ್ವಾಮಿಯ ವಿಷಯದಲ್ಲಿ ಅದೇ ನಡೆದದ್ದು. ಚಿಕ್ಕವನೆಂದುಕೊಂಡವನಿಂದ ಅದೆಷ್ಟು ತೊಂದರೆಗಳು!

ಬೇರೆ ಸಮಯಗಳಲ್ಲಾಗಿದ್ದರೆ ಏನು ಮಾಡುತ್ತಿದ್ದನೋ ಏನೋ. ಸರಿಯಾದ ಅದೇ ವೇಳೆಗೆ ರಾಮಲಾಲ್ ಬಂದು ಒಂದು ಸುದ್ದಿ ತಿಳಿಸಿದ. "ಸಿ.ಬಿ.ಐ. ಛೀಫ್‌ಗೆ ಟ್ರಾನ್ಸ್‌ಫರ್ ಮಾಡಿಸಲು ಪ್ರಯತ್ನಗಳು ನಡೆಯುತ್ತಿವೆ ಎಂಬ ರಹಸ್ಯ ಸುದ್ದಿ ತಿಳಿದಿದೆ" ಎಂದು. ಇದು ಊಹಿಸದ ಎರಡನೆ ಪೆಟ್ಟು.

"ಏನಾಯ್ತು?" ಸ್ವಾಮಿ ಕರ್ಕಶವಾಗಿ ಕೇಳಿದ.

"ನೆನ್ನೆ ಪ್ರವಲ್ಲಿಕ ಪ್ರಧಾನ ಮಂತ್ರಿಗಳನ್ನು ಭೇಟಿ ಮಾಡಿದ್ದಳು."

ಅನಂತಾನಂತಸ್ವಾಮಿ ಹಣೆಯ ಮೇಲೆ ಗೆರೆಗಳು ಸ್ಪಷ್ಟವಾಗಿ ಮೂಡಿದವು.

"ಅವಳ ಪರ್ಯಾವಸಾನವೇ ಸರಿ ಎನ್ನುತ್ತೀಯಾ?" ರಾಮಲಾಲ್ ಮಾತನಾಡಲಿಲ್ಲ. ಅನಂತಾನಂತಸ್ವಾಮಿ ಸ್ವಲ್ಪ ಹೊತ್ತು ಯೋಚಿಸಿ, ತಲೆಯನ್ನು ಅಡ್ಡಡ್ಡವಾಗಿ ಆಡಿಸಿ, "ಲಾಭವಿಲ್ಲ ರಾಮಲಾಲ್. ಅವರಿಬ್ಬರನ್ನೂ ತುಂಬಾ ಕಾಲದಿಂದಲೂ ಉಪೇಕ್ಷಿಸಿದೆವು. ಇನ್ನು ಸಾಧ್ಯವಿಲ್ಲ" ಒಂದು ನಿರ್ಧಾರಕ್ಕೆ ಬಂದವನಂತೆ ಹೇಳಿದ.

ರಾಮಲಾಲ್ ತಲೆಯಾಡಿಸಿ, "ನಾಳೆಯೊಳಗೆ ಪೂರ್ತಿ ಮಾಡುತ್ತೇನೆ" ಎಂದ.

"ಇಬ್ಬರನ್ನೂ ಸಾಧ್ಯವಾದರೆ ಒಂದೇ ಸಲ ಕೊಲ್ಲು. ಬೇರೆ ಬೇರೆಯಾಗಿ ಬೇಡ."

ರಾಮಲಾಲ್ ತಲೆಯಾಡಿಸಿ ಅಲ್ಲಿಂದ ಹೊರಟು ಹೋದ. ಎಷ್ಟೇ ದೊಡ್ಡ ನಿರ್ಧಾರಗಳಾದರೂ ಅದಕ್ಕಿಂತಲೂ ಹೆಚ್ಚು ಮಾತುಕತೆ ನಡೆಯುವುದಿಲ್ಲ ಅವರ ನಡುವೆ.

* * * *

ಸರ್ಕಾರ ಸಿ.ಬಿ.ಐ. ಛೀಫನ್ನು ಟ್ರಾನ್ಸ್‌ಫರ್ ಮಾಡುವ ನಿರ್ಧಾರವನ್ನು ಏಕೆ ತೆಗೆದುಕೊಂಡಿತೆಂದು ತಿಳಿದುಕೊಳ್ಳಲು ಮತ್ತೆರಡು ದಿನ ಹಿಂದಕ್ಕೆ ಹೋಗಬೇಕು.

ಆಗಲೇ ಪರಮೇಶ್ವರ್‌ನ ಯೋಜನೆಯಂತೆ ದೇಶದಲ್ಲಿ ಪರಿಸ್ಥಿತಿ ಅಲ್ಲೋಲ ಕಲ್ಲೋಲವಾಗಲು ಪ್ರಾರಂಭವಾಗಿತ್ತು. ಮಾಜಿ ಕೇಂದ್ರ ಮಂತ್ರಿಯೊಬ್ಬರು,

ಭಿನ್ನಮತೀಯ ಮಂತ್ರಿಯೊಬ್ಬರು ಒಂದು ದಿನದ ಅಂತರದಲ್ಲಿ ಕೊಲೆ ಮಾಡಲ್ಪಟ್ಟರು. ಪ್ರಧಾನಿಯವರಿಗೆ ತುಂಬಾ ಮುಜುಗರವಾದ ಪರಿಸ್ಥಿತಿ ಇದು. ನಿಜವನ್ನು ಹೊರತರದಿದ್ದರೆ ಆಡಳಿತ ಪಕ್ಷವೇ ಅವರ ಕೊಲೆಯ ಹಿಂದಿದೆಯೆಂದು ಸಾಮಾನ್ಯ ಪ್ರಜೆಗಳು ಅಂದುಕೊಳ್ಳಬಹುದು. ಈ ರೀತಿಯಾಗಿ ಸ್ವಾಮಿಗೆ ಮೊದಲ ಪೆಟ್ಟು ಬಿತ್ತು. (ವಿಜಯ ದಶಮಿ ಇನ್ನು ಕೆಲವೇ ದಿನಗಳಿತ್ತು.)

ಪ್ರಧಾನಿಗಳು ಈ ಕೊಲೆಗಳ ವಿಷಯವಾಗಿ ಸಿ. ಬಿ. ಐ. ಆಫೀಸರುಗಳೊಡನೆ ಚರ್ಚಿಸಿದರು. ಮೀಟಿಂಗ್ ಆದನಂತರ ಪ್ರವಲ್ಲಿಕ ಪ್ರತ್ಯೇಕವಾಗಿ ಪ್ರಧಾನಿಯವರನ್ನು ಭೇಟಿಮಾಡಿದಳು. ಡಿಪಾರ್ಟ್‌ಮೆಂಟಿನ ರಹಸ್ಯಗಳನ್ನು ಹೊರಗೆಡುಹುತ್ತಿರುವುದರಿಂದ ದೇಶ ಇಷ್ಟರಲ್ಲೇ ಎದುರಿಸಲಿರುವ ಪರಿಸ್ಥಿತಿಯ ಬಗ್ಗೆ ತಯಾರು ಮಾಡಿದ್ದ ವರದಿಯನ್ನೂ ಅವರಿಗೆ ಕೊಟ್ಟಳು. ಆತ ಆತಂಕಗೊಂಡರು. "ಏನು ಮಾಡಬೇಕು?" ಎಂದು ಕೇಳಿದರು.

"ಮೊದಲು ಈ ರಹಸ್ಯಗಳು ಹೇಗೆ ಹೊರಬರುತ್ತಿವೆಯೋ, ಅವರನ್ನು ಹಿಡಿಯಬೇಕು. ಇದಕ್ಕೆ ನಮ್ಮ ಡಿಪಾರ್ಟ್‌ಮೆಂಟ್ ಅಲ್ಲದೆ ಬೇರೆ ಮೂವರು ಆಫೀಸರುಗಳನ್ನು ನನಗೆ ಕೊಟ್ಟರೆ..." ಎನ್ನುತ್ತಾ ತನ್ನ ಪ್ಲಾನನ್ನು ವಿವರಿಸಿದಳು. ಎಲ್ಲಾ ಕೇಳಿ ಆತ "ಗುಡ್" ಅಂದರು. ರಾ(RAW) ನಿಂದ ನಂಬಿಕಸ್ಥರಾದ ಮೂವರು ಆಫೀಸರುಗಳನ್ನು ಈ ಕೆಲಸಕ್ಕೆ ನೇಮಿಸಲಾಯಿತು. ತಾನೆಂದುಕೊಂಡ ಕೆಲಸವನ್ನು ಮೊದಲು ಛೀಫ್‌ಗೆ ತಿಳಿಸಬೇಕೆಂದುಕೊಂಡಳು.

ಗಡಿಬಿಡಿಯಿಂದ ಛೀಫ್ ಬಳಿಗೆ ಹೋಗಿ, "ನಮ್ಮ ಆಫೀಸರುಗಳು ಒಬ್ಬ ಹಾರ್ಡ್‌ಕೋರ್ ಟೆರ್ರರಿಸ್ಟನ್ನು ಹಿಡಿದಿದ್ದಾರೆ ಸರ್. ಸಣ್ಣಮಕ್ಕಳ ಕಿಡ್ನಾಪ್‌ಗೆ ಸಂಬಂಧವಿರುವ ವ್ಯಕ್ತಿಯಿರಬೇಕು" ಎಂದು. ಅವನನ್ನು ಎಲ್ಲಿಂದ ಇಂಟರಾಗೇಟ್ ಮಾಡುತ್ತಿದ್ದಾರೋ ಆ ಪ್ರದೇಶದ ಬಗ್ಗೆ ತಿಳಿಸಿದಳು.

ಅದೆಲ್ಲಾ ಸುಳ್ಳು! ಆ ಪ್ರದೇಶ ಮೇಲೆ ಸಾಮಾನ್ಯ ಆಫೀಸಿನಂತೆ ಕಾಣುವ ಸಿ. ಬಿ. ಐ. ಭಾಗ! ಇಂತಹ ಸುಳ್ಳನ್ನು ಹೇಳುವುದಕ್ಕಾಗಿಯೇ ಅವಳು ಪ್ರಧಾನ ಮಂತ್ರಿಯವರಿಂದ ಅನುಮತಿ ಪಡೆದದ್ದು.

ಅವಳು ಆ ಸುದ್ದಿಯನ್ನು ಹೇಳಿದ ಅರ್ಧಗಂಟೆಯೊಳಗಾಗಿ ಉಗ್ರವಾದಿಗಳು ಆ ಮನೆಯ ಮೇಲೆ ಬಾಂಬಿನ ದಾಳಿ ನಡೆಸಿದರು. ಆ ಮನೆ ನಿರ್ಮಾನುಷ್ಯವಾಗಿತ್ತು. ಅದು ಬೇರೆ ವಿಷಯ. ಆದರೆ ಯಾರ ಮೂಲಕ ರಹಸ್ಯ ಬಯಲಾಗುತ್ತಿದೆಯೆಂದು ತಿಳಿದುಕೊಂಡಳು.

ಆದರೆ ಆ ಅರ್ಧಗಂಟೆಯ ಕಾಲವೂ ಛೀಫ್ ಯಾರೊಡನೆಯೂ ಫೋನ್ ಮಾಡಿದುದಾಗಲೀ, ಸುದ್ದಿ ಕಳಿಸಿದುದಾಗಲೀ ಮಾಡಲಿಲ್ಲವೆಂದು ಪ್ರಧಾನಮಂತ್ರಿ

ಅಪಾಯಿಂಟ್ ಮಾಡಿದ ಆಫೀಸರುಗಳು ದೃಢಪಡಿಸಿದರು. ಹಾಗಾದರೆ ಈ ಸುದ್ದಿ ಅನಂತಾನಂತಸ್ವಾಮಿಗೆ ಹೇಗೆ ತಲುಪಿತು? ಯಾವ ಸಾಕ್ಷ್ಯಾಧಾರಗಳೂ ಇಲ್ಲದೆ ಛೀಫ್ ಮೇಲೆ ಕ್ರಮ ತೆಗೆದುಕೊಳ್ಳುವುದು ಸಾಧ್ಯವಿಲ್ಲವಾದ್ದರಿಂದ ಆತನನ್ನು ಸಸ್ಪೆಂಡ್ ಮಾಡಲಿಲ್ಲ. ಆದರೆ ಕೆಲವೇ ಕ್ಷಣಗಳಲ್ಲಿ ಆತನ ಟ್ರಾನ್ಸ್‌ಫರ್ ಬಗ್ಗೆ ನಿರ್ಧರಿಸಲಾಯಿತು.

ಸ್ವಾಮಿ ಈ ಕಾರಣದಿಂದಲೇ ಪ್ರವಲ್ಲಿಕಳನ್ನು ಮುಗಿಸಿಬಿಡುವಂತೆ ರಾಮ್‌ಲಾಲ್‌ಗೆ ಆಜ್ಞಾಪಿಸಿದ.

ಅವಳೊಡನೆ ವಿಹಾರಿಯನ್ನು ಕೂಡಾ.

* * * * *

"ನಾಳೆ ಒಂದು ದಿನ ಕಿದ್ವಾಯಿ ಗಾರ್ಡನ್ಸ್‌ಗೆ ಹೋಗೋಣವಾ?" ಎಂದು ಕೇಳಿದಳು ಪ್ರವಲ್ಲಿಕ.

"ಏಕೆ?" ನಗುತ್ತಾ ಕೇಳಿದ ವಿಹಾರಿ "ಏನಾದರೂ ಸಿ.ಬಿ.ಐ. ಕೆಲಸವಾ?"

"ಇಲ್ಲ ಸ್ವಂತ ಕೆಲಸವೇ–ನಾಳೆ ದ್ವಾದಶಿ ಮರೆತು ಬಿಟ್ಟರಾ?"

"ಮರೆಯಲಿಲ್ಲ. ಅದಕ್ಕೆ ಈ ರಾತ್ರಿಯೊಳಗಾಗಿ ಪೂರ್ತಿ ಮಾಡಬೇಕಾದ ಒಂದು ಕೆಲಸವಿದೆ"–ಸುನಾದಮಾಲಳನ್ನು ನೆನಪಿಸಿಕೊಳ್ಳುತ್ತಾ ತನ್ನಲ್ಲೇ ತಾನು ಅಂದುಕೊಂಡಂತೆ ಹೇಳಿದ.

"ಸರಿ. ಆ ಕೆಲಸವನ್ನು ರಾತ್ರಿಗೆ ಪೂರ್ತಿ ಮಾಡಿಕೊಳ್ಳಿ. ನಾಳೆ ಮಾತ್ರ ನನ್ನೊಡನೆ ಬರಲು ರೆಡಿಯಾಗಿರಿ. ನಿಮಗೊಂದು ಒಳ್ಳೆಯ ಸುದ್ದಿ ತಿಳಿಸುತ್ತೇನೆ" ನಗುತ್ತಾ ಹೇಳಿದಳು. ಛೀಫ್ ಬದಲಾದದ್ದು ಅವಳಿಗೆ ಸಂತೋಷ ತಂದಿತ್ತು. ಪೇಪರಿನಲ್ಲಿ ಸ್ವಾಮಿಯ ಬಗ್ಗೆ ಬಂದ ಸುದ್ದಿಯಿಂದ ವಿಹಾರಿ ಕೂಡಾ ಸಂತೋಷದಿಂದಿದ್ದ.

"ಅಂದಹಾಗೆ ದ್ವಾದಶಿಯ ದಿನ ನಿಮ್ಮ ತಂದೆ ನಮ್ಮ ಮನೆಗೆ ಬರುತ್ತೇನೆಂದಿದ್ದರಲ್ಲಾ. ಆಗ ನಾನಲ್ಲಿರಬೇಕಾದ ಅವಶ್ಯಕತೆಯಿಲ್ಲವಾ?"

"ಬೇಕಾಗಿಲ್ಲ ಮಹಾರಾಯರೇ. ನೀವು ನನ್ನೊಡನೆ ಬನ್ನಿ. ಅವರೇನು ಮಾತನಾಡಿಕೊಂಡಿದ್ದಾರೆಂದು ನಂತರ ಕೇಳಿ ತಿಳಿದುಕೊಳ್ಳುವಿರಂತೆ."

"ಹಾಗೇ ಆಗಲಿ"

"ಬೈ–ನಾಳೆ ಸಿಗೋಣ."

"ಬೈ"

ಈ ಸಂಭಾಷಣೆ ನಡೆದ ಹತ್ತು ನಿಮಿಷಗಳ ನಂತರ ರಾಮಲಾಲ್‌ನ ಟೇಬಲ್ ಮೇಲೆ ನಗರದ ಸಂಪೂರ್ಣ ಟ್ರಾಫಿಕ್ ಪ್ಲಾನ್ ಇತ್ತು.

ಮಾರನೆ ದಿನ ವಿಹಾರಿ, ಪ್ರವಲ್ಲಿಕ ಯಾವ ದಾರಿಯಲ್ಲಿ ಪ್ರಯಾಣ ಮಾಡುತ್ತಾರೆಂದು ಬಾಣದ ಗುರುತಿನಿಂದ ಸೂಚಿಸಲಾಗಿತ್ತು. ಮಿಷನ್‌ಗನ್‌ನಿಂದ ಯಾವ ಸ್ಥಳದಲ್ಲಿದ್ದು ಹೊಡೆಯಬೇಕು, ಎಲ್ಲಿ ನಿಂತು ನಂಬರ್ ಪ್ಲೇಟನ್ನು ಬದಲಾಯಿಸಿಕೊಳ್ಳಬೇಕು ಎಂಬ ಗುರುತುಗಳನ್ನು ಸ್ಪಷ್ಟವಾಗಿ ಬರೆಯಲಾಗಿತ್ತು. ಮೊದಲನೇ ಕಾರಿನಿಂದ ಷೂಟ್ ಮಾಡಿದಾಗ ಒಂದು ವೇಳೆ ಇಬ್ಬರೂ ಸಾಯದಿದ್ದರೆ, ಹೊರಗಿನಿಂದ ಬೇರೆ ಕೋನದಲ್ಲಿ ಷೂಟ್ ಮಾಡಲು ಮತ್ತೊಂದು ಕಾರಿನಲ್ಲಿ ಎಷ್ಟು ಜನ ಇರಬೇಕೆಂದು ವಿವರವಾಗಿ ಸೂಚಿಸಲಾಗಿತ್ತು.

ಇಂತಹ ಪ್ಲಾನ್ ಹಾಕುವುದರಲ್ಲಿ ರಾಮಲಾಲನ್ನು ಮೀರಿಸಿದವರಿಲ್ಲ. ಅದರಲ್ಲಿಯೂ ಅವನಿಗೆ ಅವರ ಮೇಲೆ ಹಳೆಯ ದ್ವೇಷ ಬೇರೆ, ಇಷ್ಟು ದಿನ ಸ್ವಾಮಿಯ ಆಜ್ಞೆಗಾಗಿ ಕಾದಿದ್ದ. ಈಗವನಿಗೆ ಆ ತಡೆಯೂ ಇರಲಿಲ್ಲ, ಸೆಕೆಂಡುಗಳೊಡನೆ ಸಹ ಲೆಕ್ಕಮಾಡಿ, ಮಾರನೆ ದಿನಕ್ಕಾಗಿ ಎದುರುನೋಡತೊಡಗಿದ.

"ಈಗ ಸಿನೆಮಾಗಾ?" ಕಣ್ಣರಳಿಸಿ ಕೇಳಿದಳು ಸುನಾದಮಾಲ. ''ನಿಂಗೇನಾದರೂ ತಲೆ ಕೆಟ್ಟಿದೆಯಾ ಅಜ್ಜಿ?"

"ಟೈಮೆಷ್ಟಾಗಿದೆಯೇ–ಇನ್ನೂ ಒಂಭತ್ತೂವರೆ ಅಷ್ಟೇ"

"ಆದರೇನಂತೆ–ಸೆಕೆಂಡ್ ಷೋಗೆ ಯಾಕೀಗ?"

"ಇವತ್ತೇ ಅದರ ಕೊನೆ ದಿನಾನಂತೆ. ಫಸ್ಟ್ ಷೋ ಶುರುವಾಗೋ ಟೈಮ್‌ಗೆ ಹೇಳಿದಳು ಪಕ್ಕದ ಮನೆಯಾಕೆ."

"ಈಗ ಆ ಪುರಾಣ ಎಲ್ಲಾ ಬೇಡ. ಈಗ ಅದನ್ನ ನೋಡ್ದಿದ್ರೆ ಏನೂ ನಷ್ಟ ಇಲ್ಲ." ಅಜ್ಜಿ ವಿಷ್ಣು ಕಡೆ ತಿರುಗಿ "ನೀನು ಬರ್ತೀಯೇನೋ" ಎಂದು ಕೇಳಿದಳು. ಬರುತ್ತೇನೆಂದ ಅವನು. ಸುನಾದಮಾಲಳ ಕಡೆ ನೋಡಿ "ಒಬ್ಬಳೇ ಇರುತ್ತೀಯಾ?" ಎಂದು ಕೇಳಿದ.

"ನಂಗೇನು ಭಯ?" ಅಂದಳು ಧೈರ್ಯವಾಗಿ ಮಾಲ.

"ತಾಯಿತ ಕಟ್ಕೊಂಡ ಮೇಲೆ ಧೈರ್ಯ ಬಂತಾ?"

"ನೀವು ಹೋಗೋ ಹಾಗಿದ್ರೆ ಹೋಗಿ; ನನ್ನ ಟೈಂ ವೇಸ್ಟ್ ಮಾಡ್‌ಬೇಡಿ."

ಇಬ್ಬರೂ ಬೇಗ ಬೇಗನೆ ಸಿದ್ಧರಾದರು. ಅವರು ಹೊರಟಮೇಲೆ ಒಂದು ಗಂಟೆಯ ಕಾಲ ಓದಿ, ನಿದ್ರಿಸಲು ಪ್ರಾರಂಭಿಸಿದಳು.

ಆಗ ಅಡಿಗೆಮನೆಯಲ್ಲಿ ಸಪ್ಪಳವಾಯಿತು.

ಮೊದಲು ಅವಳಿಗೆ ಅನುಮಾನ ಬರಲಿಲ್ಲ. ಒಳಗೆ ಹೆಜ್ಜೆ ಸಪ್ಪಳಕ್ಕೆ ಎದ್ದು

ಕುಳಿತಳು. ಹಿಂದಿನ ಕೋಣೆಯಿಂದ ಕಳ್ಳನೊಬ್ಬ ಅವಳ ಕೋಣೆಗೆ ಬಂದ. ದಪ್ಪ ಮೀಸೆಯಿತ್ತು. ಜೇಬಿನಿಂದ ಚೂರಿ ತೆಗೆದು ಅವಳ ಕತ್ತಿನ ಬಳಿ ಇಟ್ಟು "ಬೀರುವಿನ ಬೀಗದ ಕೈ ಎಲ್ಲಿದೆ?" ಎಂದು ಕೇಳಿದ ಗೊಗ್ಗರು ಗಂಟಲಿನಲ್ಲಿ. ಈ ಮುಂಚೆ ಆಗಿದ್ದಿದ್ದರೆ ಎಚ್ಚರತಪ್ಪಿ ಬೀಳುತ್ತಿದ್ದಳು. ಆದರೆ ಈಗ ಅವಳ ತುಟಿಗಳ ಮೇಲೆ ಕಿರುನಗೆ ಮೂಡಿತು. ತಾಯಿತ ಸೆರಗಿನ ಮರೆಯಲ್ಲಿತ್ತು, ಅದನ್ನು ಸ್ವಲ್ಪ ಹೊರ ಕಾಣುವಂತೆ ಮಾಡಿದರೆ ಸಾಕು. ಆಗ ಈ ಕಳ್ಳ ಎಷ್ಟು ವೇಗವಾಗಿ ಇಲ್ಲಿಂದ ಓಡಿ ಬಿಡುತ್ತಾನೆ? ಅಂದುಕೊಂಡಳು.

ಅಷ್ಟರಲ್ಲಿ ಅವನು "ಬೇಗ ಬೀಗದ ಕೈಕೊಡು" ಎಂದು ಮತ್ತಷ್ಟು ಹತ್ತಿರ ಸರಿದು ಬೆದರಿಸಿದ. ಅವಳು ಅವನನ್ನು ಕ್ಷಮಿಸುವಂತೆ ಹಗುರವಾಗಿ ನೋಡಿ ಭುಜವನ್ನು ಸ್ವಲ್ಪ ಪಕ್ಕಕ್ಕೆ ಅಲ್ಲಾಡಿಸಿ, ಕತ್ತಿನ ಕೆಳಗೆ ಕೈಯನ್ನಿರಿಸಿಕೊಂಡಳು. ಅವಳು ರವಿಕೆಯೊಳಗಿಂದ ಬೀಗದ ಕೈ ತೆಗೆಯುತ್ತಾಳೇನೋ ಎಂದು ಊಹಿಸಿದ್ದ ಕಳ್ಳ ಅವಳು ತಕ್ಷಣ ಒಂದು ತಾಯಿತವನ್ನು ಹೊರತೆಗೆಯುವುದನ್ನು ಕಂಡ.

ಆ ಕಳ್ಳನಿಗೆ ಒಮ್ಮೆಗೆ ಸರ್ವಶಕ್ತಿಗಳೂ ನಶಿಸಿ, ಭಯ ಉಂಟಾಗಿ, ಕುಗ್ಗಿ ಹೋಗಿ ಬೆಕ್ಕಿನಂತೆ ಅಲ್ಲಿಂದ ಓಡಿಬಿಡುತ್ತಾನೆಂದುಕೊಂಡಳು.

ಆದರೆ ಅಂತಹದ್ದೇನೂ ನಡೆಯಲಿಲ್ಲ.

"ಬೀಗದ ಕೈ–ಬೀಗದ ಕೈ ತೆಗಿ" ಎಂದು ಹೇಳುತ್ತಾ ಮತ್ತೊಮ್ಮೆ ಚೂರಿಯನ್ನು ಝಳಪಿಸಿದ. ಅವನಲ್ಲಿ ಯಾವ ಬದಲಾವಣೆಯೂ ಕಾಣಲಿಲ್ಲ. ತನ್ನ ತಾಯಿತ ಎಲ್ಲರನ್ನೂ ಭಯಪಡಿಸಿದಂತೆ ಆ ಕಳ್ಳನನ್ನು ಭಯಪಡಿಸಲಿಲ್ಲವೆಂದು ತಿಳಿದಕೂಡಲೇ ಅವಳು ಮುಂಚಿನಂತಾದಳು. ಒಂದೇ ಓಟಕ್ಕೆ ಒಳಗೆ ಓಡಿದಳು. ಕಳ್ಳ ಅವಳ ಹಿಂದೆ ಬಿದ್ದ. ಅವಳು ಅಡಿಗೆ ಮನೆಯೊಳಗೆ ಓಡಿ ಬಾಗಿಲು ಹಾಕಿಕೊಳ್ಳಲು ನೋಡಿದಳು. ಆದರೆ ಅವನ ಶಕ್ತಿಯ ಮುಂದೆ ಅವಳ ಆಟ ನಡೆಯಲಿಲ್ಲ. ಅವನೂ ಒಳಗೆ ಪ್ರವೇಶಿಸಿದ. ಡಬ್ಬದಲ್ಲಿದ್ದ ಅಕ್ಕಿಯನ್ನೆಲ್ಲಾ ಅವನ ಮೇಲೆ ಎರಚಿದಳು. ಕೈಗೆ ಸಿಕ್ಕಿದ ಟೊಮೇಟೋ ಹಣ್ಣುಗಳನ್ನೆಲ್ಲಾ ಬಿಸಾಡಿದಳು. ಆದರೆ ಅವನು ಮೇಲೆ ಮೇಲೆ ಬರಲು ಪ್ರಾರಂಭಿಸಿದ. ಅವಳು ರವಿಕೆಯಲ್ಲೇ ಬೀಗದ ಕೈಗಳನ್ನು ಬಚ್ಚಿಟ್ಟುಕೊಂಡಿದ್ದಾಳೇನೋ ಎಂಬ ಅನುಮಾನ ಬಂತು ಅವನಿಗೆ. ಕೇವಲ ವ್ಯಕ್ತಿಯ ಮೇಲಿದ್ದ ಗೌರವದಿಂದ 'ಬೀಗದ ಕೈ–ಬೀಗದ ಕೈ' ಎಂದು ಕಿರುಚಾಡುತ್ತಿದ್ದನೇ ವಿನಾ ಆ ಬೀಗದ ಕೈ ಇರಬಹುದಾದ ಜಾಗಕ್ಕೆ ಕೈಹಾಕಲಿಲ್ಲ.

ಅವಳು ಹೇಗೋ ಅವನಿಂದ ತಪ್ಪಿಸಿಕೊಂಡು. ಅಡಿಗೆಮನೆಯಿಂದ ಹೊರಗೋಡಿಬಂದು ಅದೇ ವೇಗದಲ್ಲಿ ಮುಂದಿನ ಕೋಣೆಯೊಳಗೆ ನುಗ್ಗಲು ಬಾಗಿ

ಲನ್ನು ತಳ್ಳಿದಳು.

ಹೊರಗೆ ಓಡುವ ಯೋಚನೆಯನ್ನೇ ಮಾಡಿದ್ದಳಾಗಲೀ ಬಾಗಿಲಬಳಿ ಮತ್ತೊಂದು ಆಕಾರ ನಿಂತಿರುವುದನ್ನು ಕಂಡು ಕಿಟಾರ್‌ನೆ ಕಿರುಚಲು ಬಾಯಿ ತೆಗೆದು ಅದು ಪರಿಚಿತ ವ್ಯಕ್ತಿಯೆಂಬುದನ್ನು ಆ ಕ್ಷಣವೇ ಗ್ರಹಿಸಿ ಬಲವಂತದಿಂದ ಸುಮ್ಮನಾದಳು.

ಆ ಆಕಾರ ನಿಕುಂಜ್ ವಿಹಾರಿಯದು!

ನಾಳೆ ದ್ವಾದಶಿ. ನಾಳೆಯೊಳಗಾಗಿ ನೀವು ಐ ಲವ್ಯೂ ಎನ್ನದಿದ್ದರೆ ನೇಣು ಹಾಕಿಕೊಂಡು ಸಾಯುತ್ತೇನೆ ಎಂದು ಸಂಜೆಯಿಂದಲೂ ಮನೆಯ ಎದುರಿದ್ದ ಅಂಗಡಿಯ ಬಳಿ ನಿಂತಿದ್ದ ವಿಹಾರಿ ಆ ಸಮಯದಲ್ಲಿ ಕಂಡದ್ದು ಅವಳಿಗೆ ಬೆಟ್ಟದಷ್ಟು ಧೈರ್ಯ ತಂದಿತು.

"ಕ...ಕ...ಕಳ್ಳ..." ಅಂದಳು.

"ಕಳ್ಳ...ಅಲ್ಲ ವಿಹಾರಿ ನಾನು'' ಎಂದು..."ನಿಮ್ಮ ಮನೆಯಲ್ಲಿ ಏನೋ ಶಬ್ದವಾದಂತೆ ಕೇಳಿಸಿತು" ವಿವರಿಸಿದ.

"ನೀವಲ್ಲ ಕಳ್ಳ...ಒಳಗಿದ್ದಾನೆ" ಎಂದು ಅವನ ಮಾತನ್ನು ತುಂಡರಿಸಿದಳು.

"ಕಳ್ಳನಾ?" ಎನ್ನುತ್ತಾ ವಿಹಾರಿ ಅಡಿಗೆಮನೆಯೊಳಗೆ ನುಗ್ಗಿದ. ಆತುರದಿಂದ ನುಗ್ಗಿದವನು ಬಾಗಿಲ ಹಿಂದೆ ನಿಂತಿದ್ದ ಕಳ್ಳನನ್ನು ಗಮನಿಸಲಿಲ್ಲ. ಹಿಂದಿನಿಂದ ಬಂದ. ಅವನು ಚೂರಿಯಿಂದ ಚುಚ್ಚಲು ಬಂದ. ಅದನ್ನು ಕಂಡ ಸುನಾದಮಾಲ ಕಿಟಾರನೆ ಕಿರುಚಿದಳು. ಆ ಶಬ್ದಕ್ಕೆ ಹಿಂತಿರುಗಿದ ವಿಹಾರಿ ಬಲವಾಗಿ ಅವನ ಮುಖಕ್ಕೆ ಹೊಡೆದ. ಅವನು ಅಂಗಾತ ಕೆಳಗೆ ಬಿದ್ದು, ಕಾಲಿನಿಂದಲೇ ವಿಹಾರಿಗೆ ಒದ್ದ. ಎರಡು ನಿಮಿಷಗಳ ಕಾಲ ಭೀಕರ ಕಾದಾಟ ನಡೆಯಿತು. ಬೆಚ್ಚಿ ನಿಂತುಬಿಟ್ಟಳು ಮಾಲ. ಅವಳಿಗೇನು ಮಾಡಬೇಕೆಂದೇ ತೋಚಲಿಲ್ಲ. ಎಷ್ಟಾದರೂ ಕಳ್ಳ ಇಂತಹುದಕ್ಕೆಲ್ಲಾ ಸಿದ್ಧನಾಗೇ ಬಂದಿರುತ್ತಾನೆ. ವಿಹಾರಿಯನ್ನು ಓವರ್ ಪವರ್‌ನಿಂದ ಕೆಳಗೆ ಕೆಡವಿದ. ಚೂರಿಯಿಂದ ಎದೆಗೆ ಇರಿಯಲು ನೋಡಿದ. ಆಗ ತಾನೇ ಎಚ್ಚರಗೊಂಡವಳಂತೆ ಸುನಾದಮಾಲ ಅದನ್ನು ಕಂಡು ಕಿಟಾರನೆ ಕಿರುಚುತ್ತಾ ಹೊರಗೋಡಲು ಪ್ರಯತ್ನಿಸಿ, ಕಾಲಿಗೆ ಅಡ್ಡಬಂದ ವಿಹಾರಿಯ ಕಾಲನ್ನು ತಡವರಿಸಿಕೊಂಡು ಅವನ ಮೇಲೆಯೇ ಬಿದ್ದಳು.

ಕಳ್ಳ ತನ್ನ ಚೂರಿಯಿಂದ ಸುನಾದಮಾಲಳ ನಡುವಿಗೆ ಚುಚ್ಚಿಬಿಟ್ಟ, ತನ್ನ ಶರೀರದೊಳಗೆ ಚೂರಿ ಇಳಿದುದನ್ನು ಕಣ್ಣಾರೆ ಕಂಡಳು. ಕೆಳಗೆ ಬಿದ್ದಿದ್ದ ವಿಹಾರಿ, "ನೋ...ನೋ" ಎನ್ನುತ್ತಾ ಅವಳ ನಡುವನ್ನು ಹಿಡಿದುಕೊಂಡ. ಆಗಲೇ ನಡೆಯ

ಬೇಕಾಗಿದ್ದ ಘೋರ ನಡೆದುಹೋಗಿತ್ತು. ಅವನ ಕೈ ಕೆಂಪಗಾಯಿತು. ಅವಳನ್ನು ಪಕ್ಕಕ್ಕೆ ಮಲಗಿಸಿ ತಾನೆದ್ದು ಕುಳಿತ. ಅವಳು ಮುಲುಗುತ್ತಿದ್ದಳು.

ತಾನು ಮಾಡಿದ ಕೆಲಸ ಕೊಲೆಯಲ್ಲಿ ಮುಗಿಯುತ್ತದೆಂದು ಊಹಿಸಿದ ಕಳ್ಳ ಭಯದಿಂದ ನಡುಗಿದ. ಅವನು ಅಲ್ಲಿಂದ ಓಡುವುದನ್ನು ಸುನಾದಮಾಲ ಅರೆ ಪ್ರಜ್ಞಾವಸ್ಥೆಯಲ್ಲಿಯೇ ಗಮನಿಸಿದಳು.

ಅವಳ ಪರಿಸ್ಥಿತಿ ಆತಂಕರಕಾರಕವಾಗಿಯೂ ಇತ್ತು. ಅಗಮ್ಯಗೋಚರ ವಾಗಿಯೂ ನೋವು ತಿಳಿಯುತ್ತಿಲ್ಲ. ಎಲ್ಲಾ ಜೊಂಪು ಹಿಡಿದಂತೆ ಅನ್ನಿಸುತ್ತಿದೆ. ಕಣ್ತುಂಬಾ ನೀರು ತುಂಬಿಕೊಂಡಿದ್ದರಿಂದ ವಿಹಾರಿ ಮಸುಕು ಮಸುಕಾಗಿ ಕಾಣುತಿದ್ದ. ಈ ಗಡಿಬಿಡಿಯಲ್ಲಿ ಕಳ್ಳ ಓಡಿಹೋಗಿದ್ದಾನೆ. ಅವಳು ಕಣ್ಮುಚ್ಚಿಕೊಂಡಳು. ಪ್ರಾಣ ಹೋಗುವುದೆಂದರೆ ಇಷ್ಟು ಹಗುರವಾ? ಈ ನೋವೂ ಕಾಂಪ್ಲೆಕ್ಸ್‌ಗಳೂ—ಇದಾವುದೂ ಇನ್ನು ಇರುವುದಿಲ್ಲವಾ?

ಉಸಿರನ್ನು ಜೋರಾಗಿ ಎಳೆದುಕೊಂಡಳು. ಕಣ್ಣುಬಿಟ್ಟಳು.

ಆತುರದಿಂದ ತನ್ನೆಡೆಗೇ ನೋಡುತ್ತಿದ್ದ ವಿಹಾರಿ ಕಂಡ.

ಅವಳ ಮನಸ್ಸೆಲ್ಲಾ ಅದೊಂದು ರೀತಿಯ ಅನಿರ್ವಚನೀಯವಾದ ಅನು ಕಂಪಕ್ಕೆ ಗುರಿಯಾಯಿತು. ಸಾಯುವಾಗ ಒಂದು ತೊಟ್ಟು ತೀರ್ಥವನ್ನು ಬಾಯಲ್ಲಿ ಹಾಕುವವನು ಏಕೆ ಬೇಕೆನ್ನುತ್ತಾರೆಂದು ಅವಳಿಗೆ ಈಗ ಅರ್ಥವಾಯಿತು. ಮನುಷ್ಯ ರಿಗೆ 'ಸಂಗಾತಿ'ಯ ಅವಶ್ಯಕತೆ ಅವಳಿಗೆ ಈಗ ತಿಳಿಯಿತು. ವಿಹಾರಿಯ ಮೇಲೆ ವಿಪರೀತ ಅಭಿಮಾನ ಬೆಳೆಯಿತು. ತನ್ನ ಮೇಲೆ ತನಗೆ ಕರುಣೆ ಉಕ್ಕಿತು. ಅವನ ಬಗ್ಗೆ ಮತ್ತಷ್ಟು ಪ್ರೀತಿ ತೋರಿಸುತ್ತಾ, ಆವೇಶದಿಂದ,

"ಏನ್ರೀ..."ಎಂದಳು.

"ಹೇಳಿ"ಅಂದ ಅವನು-ಅವಳು ತನ್ನವರಿಗಾಗಿ ಏನನ್ನಾದರೂ ಹೇಳು ತ್ತಾಳೇನೋ ಎಂದು.

"ನಾನು ಇದುವರೆವಿಗೂ ನಿಮ್ಮ ಬಗ್ಗೆ ನಡೆದುಕೊಂಡ ರೀತಿಗೆ ಕ್ಷಮಿಸಿಬಿಡಿ. ನನ್ನ ಮನಸ್ಸಿನಲ್ಲಿ ನಿಮ್ಮ ಬಗ್ಗೆ ತುಂಬಾ ಪ್ರೀತಿ ಇದೆ. ಆದರೆ ಅದನ್ನು ಹೇಳಲು ಅರ್ಥವಿಲ್ಲದ ಭಯ" ಅವಳು ತಡೆದು ಏನು ಹೇಳಬೇಕೆಂದು ತೋಚದೆ ಸುಮ್ಮನೆ ಇದ್ದುಬಿಟ್ಟಳು.

"ಭಯವೇಕೆ?" ಮುಂದಕ್ಕೆ ಹೇಳು ಎಂಬಂತೆ ಕೇಳಿದ.

"ನನಗೆ ಗಂಡಸರೆಂದರೆ ಭಯ, ಅಸಹ್ಯ. ಆದರೆ ಮೊದಲನೆ ಸಲ ನಿಮ್ಮನ್ನು ನೋಡಿದಾಗ"

"ಮೊದಲನೆ ಸಲ ಅಂದರೆ ಯಾವಾಗ? ಮೇಲೆ ಮಲಗಿದ್ದಾಗಲಾ?"

ವಿಹಾರಿ ಆತುರದಿಂದ ಕೇಳಿದ.

ಅವಳು ಉತ್ತರಿಸಲಿಲ್ಲ.

"ಮರಣಕ್ಕೆ ಮುಂಚೆ ನಾಚಿಕೆ ಅನವಶ್ಯಕ. ಸುಳ್ಳು ಹೇಳಕೂಡದು."

"ಹೌದು ಮೊದಲನೆ ಸಲ ನಿಮ್ಮನ್ನು ನೋಡಿದಾಗ ನೀವೆಂದರೆ ನನಗೆ ಪ್ರೀತಿ ಉಂಟಾಯಿತು. ಆದರೆ ನೀವು ನನ್ನ ಹಿಂದೆ ಬಿದ್ದಿದ್ದರಿಂದ ನಾನು ಬಿಗುಮಾನ ತೋರಿಸಲು ಪ್ರಾರಂಭಿಸಿದೆ. ಟೆಲಿಫೋನ್ ನೆಪದಲ್ಲಿ ನೀವು ನನ್ನನ್ನು ಮಾತನಾಡಿಸಲು ಪ್ರಯತ್ನಿಸಿದಿರಿ. ನಗಬೇಕೆಂದು ಪ್ರಯತ್ನಿಸಿದಾಗಲೆಲ್ಲಾ ಅಳು ಬರುತ್ತಿತ್ತು. ಅದು ನನ್ನ ದು...ರಾ...''

"ದುರಾದೃಷ್ಟ'' ಪೂರ್ತಿಗೊಳಿಸಿದ.

"ಹೌದು ದುರಾದೃಷ್ಟ. ಮರಣಕ್ಕೆ ಮುಂಚೆ ನಾಚಿಕೆ ಅನವಶ್ಯಕ. ಅದಕ್ಕೇ ಹೇಳುತ್ತಿದ್ದೇನೆ. ಐ ಲವ್ ಯು ವಿಹಾರಿ! ಐ ಲವ್ಯೂ..."

"ಮುದ್ದಾಗಿ ಮೂರನೆ ಸಲ ಹೇಳಿ..."

ತಲೆಯ ಬಳಿಯಿಂದ ಯಾರೋ ಕೇಳಿದರು. ಅವಳು "ಐ . ಲವ್" ಎಂದು ಏನೋ ಅನುಮಾನ ಬಂದಂತಾಗಿ ತಲೆ ತಿರುಗಿಸಿ ನೋಡಿದಳು. ಆರಾಮವಾಗಿ ಊಟಕ್ಕೆ ಕುಳಿತವನಂತೆ ಕುಳಿತಿದ್ದಾನೆ ಕಳ್ಳ. ಆಗಿದ್ದ ಮೀಸೆಗಳು ಇರಲಿಲ್ಲ. ತನಗಾಗಿರುವ ಗಾಯದ ವಿಷಯವನ್ನೂ ಮರೆತು ಒಮ್ಮೆಗೇ ಎದ್ದು ಕುಳಿತಳು. ಕಳ್ಳ ಚೇಷ್ಟೆಯ ನಗು ನಕ್ಕ.

"ನೀನು...ನೀನಾ?" ಎಂದು ಕೇಳಿದಳು.

"ಸ್ವಲ್ಪ ವೇಷ ಬದಲಾಯಿಸಿದ ಕೂಡಲೇ ಗುರುತಿಸಲಾರದೆ ಹೋದಿರಿ ಮೇಡಂ. ನನ್ನನ್ನು ಪದ್ಮಾಕರ್ ಎನ್ನುತ್ತಾರೆ. ವಿಹಾರಿಯ ಸ್ನೇಹಿತ."

ಅವಳಿನ್ನೂ ಗಲಿಬಿಲಿಯಿಂದ ಚೇತರಿಸಿಕೊಂಡಿರಲಿಲ್ಲ. ಹೊಟ್ಟೆಯ ಬಳಿ ನೋವಿನ್ನೂ ಪ್ರಾರಂಭವಾಗದಿದ್ದುದಕ್ಕೆ ಕೈ ತಡವಿ ನೋಡಿಕೊಂಡಳು.

"ಅದು ಟೊಮೇಟೋ ಹಣ್ಣಿನ ರಸ ಮಾಲಾ" ವಿಹಾರಿ ಹೇಳಿದ. ಅಷ್ಟರಲ್ಲಿ ವಿಹಾರಿ ಜೇಬಿನಿಂದ ಚೂರಿಯನ್ನು ತೆಗೆದು, ಚುಚ್ಚುತ್ತಿದ್ದಂತೆಯೇ ಅದು ಹೇಗೆ ಒಳಗೆ ಮಡಿಸಿಕೊಂಡು ಬಿಡುವದೆಂದು ಡೆಮಾನ್‌ಸ್ಟ್ರೇಟ್ ಮಾಡಿದ. ಆಗ ಅವಳಿಗೆ ಅರ್ಥವಾಯಿತು ತಾನು ಹೇಗೆ ಫೂಲ್ ಆದಳೆಂದು.

"ನೀವೂ—" ಎನ್ನುತ್ತಾ ಏಳಲು ಹೋದಳು. ವಿಹಾರಿ ತಡೆಯುತ್ತಾ, "ನೋಡು ಮಾಲಾ! ನಾಳೆಯೇ ದ್ವಾದಶಿ. ನಿನ್ನ ಮನಸ್ಸಿನಲ್ಲಿದ್ದ ಮಾತನ್ನು ಹೇಳಿಬಿಟ್ಟಿದ್ದಿ. ಮತ್ತೆ ಈಗ ನೀನು ಅಲ್ಲವೆಂದರೆ ಮತ್ತೊಂದು ಛಾಲೆಂಜ್ ಮಾಡಲು ಸಮಯವಿಲ್ಲ" ಅಂದ.

"ಇನ್ನು ಏಕೆ ಇಷ್ಟೊಂದು ಬಿಂಕ?" ಅಜ್ಜಿ ಒಳಗೆ ಬರುತ್ತಾ ಹೇಳಿದಳು.

"ನಮ್ಮ ಕಾಲದಲ್ಲೇ ನಾವು ಇಷ್ಟು ನಾಚಿಕೊಳ್ಳುತ್ತಿರಲಿಲ್ಲಪ್ಪಾ. ಮನಸ್ಸಿನಲ್ಲಿ ಏನಿದ್ದರೆ ಅದನ್ನು ಯಾವುದೋ ಒಂದು ರೀತಿಯಲ್ಲಿ ಹೇಳಿಬಿಡುತ್ತಿದ್ದೆವು. ಡೈರಕ್ಟಾಗಿ ಆಗದಿದ್ದರೆ ಇನ್‌ಡೈರೆಕ್ಟಾಗಿ"

"ನಿಜವಾಗಿಯೂ ನೀನು ಅಂಕಲನ್ನು ಪ್ರೀತಿಸುತ್ತಿದ್ದರೆ ಕೈಯಲ್ಲಿ ಮುಖವನ್ನು ಮುಚ್ಚಿಕೊಂಡು ಓಡು ಆಂಟಿ––" ಎಂದು ಸಲಹೆ ನೀಡಿದ ವಿಷ್ಣು.

ಸುನಾದಮಾಲ ಅದೇ ರೀತಿ ಓಡಿದಳು.

* * * *

"ಇವತ್ತೇನು ತುಂಬಾ ಖುಷಿಯಾಗಿದ್ದೀರಿ?" ಪ್ರವಲ್ಲಿಕ ಹೇಳಿದಳು.

ವಿಹಾರಿ ಉತ್ತರಿಸಲಿಲ್ಲ. ನಕ್ಕು ಸುಮ್ಮನಿದ್ದ. ಕಾರು ಹೊರಡುತ್ತಿತ್ತು.

"ಹೇಳಿ."

"ತುಂಬಾ ದಿನಗಳಿಂದ ನನ್ನನ್ನು ಫೋನಿನಲ್ಲಿ ಗೋಳಾಡಿಸುತ್ತಿದ್ದ ಹುಡುಗಿ ನೆನ್ನೆ ಸಿಕ್ಕಿಬಿದ್ದಳು.

ಅವಳು ನಗುವನ್ನು ತಡೆದುಕೊಂಡು––"ಕರೆಕ್ಟಾಗಿ ಹಿಡಿದುಬಿಟ್ಟಿದ್ದೀರಲ್ಲಾ––" ಅಂದಳು. "ಹಾಗಾದರೆ ನಾವಿನ್ನು ಕಿದ್ವಾಯಿ ಗಾರ್ಡನ್ಸ್‌ಗೆ ಹೋಗುವ ಅವಶ್ಯ..." ಅವಳ ಮಾತಿನ್ನೂ ಪೂರ್ತಿಯಾಗದೆಯೇ ಅವನು "ಅರೇ..." ಅಂದ.

"ಏನಾಯ್ತು?"

"ಪೆಟ್ರೋಲು...ಮುಗಿದಿದೆ" ಎನ್ನುತ್ತಾ ಪಕ್ಕದ ಬಂಕಿನೆಡೆಗೆ ಕಾರನ್ನು ತಿರುಗಿಸಿದ.

"ಇವತ್ತು ದ್ವಾದಶಿ ತಾನೇ!" ಅವಳು ರಸ್ತೆಯ ಕಡೆ ನೋಡುತ್ತಾ ಕೇಳಿದಳು.

"ಹೌದು. ಯಾಕೆ?"

"ಮತ್ತೆ ಇವತ್ತೇ ಈ ಹುಲಿವೇಷ ಯಾಕೆ ಹಾಕಿದ್ದಾರೆ?" ಕೇಳಿದಳು.

"ವಿಜಯದಶಮಿ ಬರುತ್ತಿದೆಯಲ್ಲಾ. ರಿಹರ್ಸಲ್ ಮಾಡುತ್ತಿದ್ದಾರೇನೋ" ದೂರದಲ್ಲಿ ಕಾಣುತ್ತಿದ್ದ ಜನರನ್ನು ಕಂಡು ಹೇಳಿದ.

"ಹಳ್ಳಿಗಳಲ್ಲಿ ಮಾತ್ರ ಈ ದೃಶ್ಯ ಕಾಣುತ್ತಿದ್ದೆವು. ಇದೇನು ಹೊಸದಾಗಿ?" ಜೇಬಿನಿಂದ ನೂರು ರೂ. ನೋಟೊಂದು ಕೊಟ್ಟು ಪೆಟ್ರೋಲ್ ತುಂಬಿಸಲು

ತಿಳಿಸಿದ.

"ಹಾಯ್" ಎಂದು ಪಕ್ಕದಲ್ಲಿ ಕೇಳಿಸಿತು. ಮೋಟಾರು ಸೈಕಲ್ ಮೇಲೆ ಪದ್ಮಾಕರ್. "ಇದೇನು ಬೆಳಿಗ್ಗೆಯೇ ಹೊರಟಿದ್ದೀರಲ್ಲಾ?" ಎಂದು ಕೇಳಿದ. ವಿಹಾರಿ ಉತ್ತರಿಸುತ್ತಿದ್ದಂತೆಯೇ ಸ್ವಲ್ಪ ದೂರದಲ್ಲಿ ಕಾರೊಂದು ಬಂದು ನಿಂತಿತು. ಕಪ್ಪು ಕನ್ನಡಿ ಸ್ವಲ್ಪ ಕೆಳಗಿಳಿಯಿತು. ಅದರಲ್ಲಿ A-5 ಇದ್ದಾನೆ. ವಾಕಿ ಟಾಕಿಯಲ್ಲಿ ಪೆಟ್ರೋಲ್ ಬಂಕ್ ಬಳಿ ವಿಹಾರಿಯ ಕಾರು ನಿಂತಿರುವ ವಿಷಯ ವನ್ನು ರಾಮಲಾಲ್‌ಗೆ ತಿಳಿಸಿದ. "ಇದಕ್ಕಿಂತಲೂ ಒಳ್ಳೆಯ ಅವಕಾಶ ಸಿಗುವು ದಿಲ್ಲ. ಗೋ ಅಹೆಡ್" ಅತ್ತಲಿಂದ ಆದೇಶ ಬಂತು. ಪಕ್ಕದ ಜಂಕ್ಷನ್‌ನಲ್ಲಿ ಮತ್ತೊಂದು ಕಾರನ್ನು ರೆಡಿಮಾಡಿ ನಿಲ್ಲಿಸಿದ್ದ ರಾಮಲಾಲ್.

A-5 ಮಿಷನ್‌ಗನ್ನನ್ನು ಸರಿಯಾಗಿ ನೋಡಿಕೊಂಡು ತನ್ನ ಕಾರನ್ನು ಪೆಟ್ರೋಲ್ ಬಂಕ್ ಬಳಿಗೆ ತೆಗೆದುಕೊಂಡು ಬಂದ.

ವಿಹಾರಿ ಕಾರಿನಿಂದಿಳಿದು ತನ್ನ ಕಾರಿನ ಚಕ್ರಗಳ ಗಾಳಿಯನ್ನು ಪರೀಕ್ಷಿಸುತ್ತಿದ್ದ. ಪದ್ಮಾಕರ್ ಹತ್ತಿರದಲ್ಲೇ ತನ್ನ ಬೈಕಿನ ಚಕ್ರಗಳಿಗೆ ಗಾಳಿ ತುಂಬಿಸಿಕೊಳ್ಳುತ್ತಿದ್ದ. ವಿಹಾರಿ ಕಾರಿನಿಂದ ಇಳಿಯುತ್ತಿದ್ದಂತೆ A-5 ತನ್ನ ಡ್ರೈವರ್‌ಗೆ ಸನ್ನೆ ಮಾಡಿದ. ಇಂತಹ ಕೊಲೆಗಳನ್ನು ಮಾಡುವುದರಲ್ಲಿ ಅವನು ಪ್ರೊಫೆಷನಲ್. ಆದಕ್ಕೆ ರಾಮಲಾಲ್ ಅವನನ್ನು ನೇಮಿಸಿರುವುದು. ಯಾವಾಗ ಹೇಗೆ ಅಟ್ಯಾಕ್ ಮಾಡಬೇಕೆಂದು ಅವನಿಗೆ ಚೆನ್ನಾಗಿ ಗೊತ್ತು. ಎದುರಾಳಿಗಳು ಇಬ್ಬರೂ ಹತ್ತಿರವಿರುವಾಗ ಸುಟ್ಟುಬಿಡುವುದು ಉತ್ತಮ. ಒಂದೇ ರೇಂಜಿನಲ್ಲಿ ಸರಿಹೋಗುತ್ತೆ.

ಡ್ರೈವರ್ ಬಂಕಿನ ಬಳಿಗೆ ಕಾರನ್ನು ತಂದು ನಿಲ್ಲಿಸಿದ.

ಒಬ್ಬ ಹಿಪ್ಪಿ ಯುವಕ ಜೇಬಿನಿಂದ ಸಿಗರೇಟ್ ಪಾಕೆಟ್ ತೆಗೆದು, ಬಂಕಿನ ಕಡೆ ನಡೆದು ಬರುತ್ತಿದ್ದಾನೆ. ಶಾಲಾ ಮಕ್ಕಳ ಗುಂಪೊಂದು ಅತ್ತ ಕಡೆಗೇ ಬರುತ್ತಿದೆ.

"ಸಂಜೆ ಬರ್ತೀಯ?" ಪದ್ಮಾಕರ್ ಕೇಳಿದ.

"ಸಂಜೆಯಾ? ಏನೋ... ಯಾವ ಕೆಲಸಕ್ಕೆ ಕರ್ಕೊಂಡ್ಹೋಗ್ತಿರೋದು ಅನ್ನೋದನ್ನೇ ಹೇಳ್ತಿಲ್ಲ... ಬರೋ ಅಷ್ಟೊತ್ತಿಗೆ ಎಷ್ಟು ಹೊತ್ತಾಗುತ್ತೋ ಗೊತ್ತಿಲ್ಲ."

"ಆರಾಮವಾಗಿ ಬಣ್ಣ ಬಳಿದುಕೊಂಡು ಈ ಮಕ್ಕಳಂತೆ ಆಡಿಕೊಂಡಿರು ತ್ತಿದ್ದ ನಿನಗೆ ಒಂದೇ ಸಲ ಆದೇಕೆ ಈ ದೇಶಭಕ್ತಿ? ಸಿ. ಬಿ. ಐ. ಭಕ್ತಿ ಹುಟ್ಟಿತೋ ಏನೋ?"

"ಮೊದಲೇ ಹೇಳಿದ್ದೆನಲ್ಲಾ ಪ್ರತಿಯೊಬ್ಬನೂ ಮಾನಸಿಕವಾಗಿ ಯಾವಾಗಲೋ ಒಂದು ಸಲ ಮೆಚ್ಯೂರ್ ಆಗುತ್ತಾನೆಂದು. ಆ ಹುಡುಗಿಯನ್ನು ನೋಡು, ಇಷ್ಟು ಚಿಕ್ಕ ವಯಸ್ಸಿಗೇ ಎಂತಹ ಶಕ್ತಿಯುತವಾದ ವಿರೋಧಿಗಳೊಡನೆ ಹೋರಾಡುತ್ತಿದ್ದಾಳೆ! ದಸರಾ ಅಂದರೆ ಅದೇ ತಾನೆ. ಹೆಣ್ಣೊಬ್ಬಳು ಶಕ್ತಿಯಾಗಿ ಬದಲಾಗಿ ರಾಕ್ಷಸರನ್ನು ಕೊಲ್ಲುವುದು–" ವಿಹಾರಿ ಇನ್ನೂ ಏನನ್ನೋ ಹೇಳಲು ಪ್ರಾರಂಭಿಸುತ್ತಿದ್ದಂತೆಯೇ ಪದ್ಮಾಕರನ ಚಕ್ರಕ್ಕೆ ಗಾಳಿ ತುಂಬಿಸಿದ್ದು ಆಯಿತೆಂದು ಹುಡುಗ ಹೇಳಿದ.

"ಬರ್ತೀನಿ ಗುರೂ" ಪದ್ಮಾಕರ್ ಬೈಕನ್ನು ಸ್ಟಾರ್ಟ್ ಮಾಡಿದ.

ವಿಹಾರಿ ಕಾರಿನ ಬಳಿಗೆ ಬಂದು ಡ್ರೈವಿಂಗ್ ಡೋರ್ ತೆಗೆದ. ಪಕ್ಕದ ಸೀಟಿನಲ್ಲಿ ಪ್ರವಲ್ಲಿಕ ಇದ್ದಳು.

ಇಬ್ಬರೂ ಒಂದೇ ರೇಂಜಿಗೆ ಬರುತ್ತಿದ್ದಂತೆಯೇ A-5 ಡ್ರೈವರ್‌ಗೆ ಸನ್ನೆ ಮಾಡಿದ. ಕಾರು ನಿಧಾನವಾಗಿ ಹೊರಟಿತು. ವಿಹಾರಿ ಬಗ್ಗಿ ಒಳಗೆ ಕುಳಿತುಕೊಳ್ಳಲಿದ್ದ. ಮಿಷಿನ್‌ಗನ್ ಸಿಡಿಯಲು ಪ್ರಾರಂಭಿಸಿತು. ಮೊದಲು ಬಂಕಿನ ಗಾಜುಗಳೆಲ್ಲಾ ಪುಡಿ–ಪುಡಿಯಾದವು. ಸರಳರೇಖೆಯೊಂದು ಬಿದ್ದಂತೆ ಗುಂಡುಗಳ ಗುರುತು ಬೀಳುತ್ತಿದೆ. ಆದರೆ ಅದೇ ಸಮಯಕ್ಕೆ ಬಂಕಿನ ಹುಡುಗ ಚಿಲ್ಲರೆ ಕೊಡಲು ಡೋರ್ ಬಳಿಗೆ ಬಂದ. ಅವನ ಶರೀರ ಕ್ಷಣದಲ್ಲೇ ಜರಡಿಯಂತೆ ತೂತುಗಳಾಗಿ ರಕ್ತ ಹರಿದು ಬಂತು. ಮತ್ತೆರಡು ಗುಂಡುಗಳು ಪೆಟ್ರೋಲ್ ಟ್ಯೂಬಿಗೆ ಬಡಿಯಿತು, ಮೆಯಿನ್ ಕಂಟ್ರೋಲ್ ಆಫ್ ಮಾಡದಿದ್ದುದರಿಂದ ಪೆಟ್ರೋಲು ಕಾರಂಜಿಯಂತೆ ಹೊರಬರಲು ಪ್ರಾರಂಭವಾಯಿತು. ಸುತ್ತಲೂ ಇದ್ದ ಜನಕ್ಕೆ ಏನು ನಡೆಯಿತೆಂದು ತಿಳಿಯುವ ಮೊದಲೇ ಈ ಭಯಂಕರ ನಡೆದು ಬಿಟ್ಟಿತ್ತು.

ಮೊದಲನೆ ಶಬ್ದ ಕೇಳಿಸುತ್ತಿದ್ದಂತೆಯೇ ಪ್ರವಲ್ಲಿಕ ಆ ವಿಷಯವನ್ನು ಗ್ರಹಿಸಿ ಕಾರನ್ನು ಸ್ಟಾರ್ಟ್ ಮಾಡಿದಳು. ಇಂತಹ ಆಕಸ್ಮಿಕ ಚರ್ಯೆಗಳಿಗೆ ಕೂಡಲೇ ಪ್ರತಿಕ್ರಿಯಿಸುವುದನ್ನು ಸಿ.ಬಿ.ಐ. ಟ್ರೈನಿಂಗ್‌ನಲ್ಲಿ ಹೇಳಿರುತ್ತಾರೆ. ವಿಹಾರಿ ಕಾರಿನ ಬಾಗಿಲನ್ನು ಜೋರಾಗಿ ಹಾಕಿದ.

ಅಷ್ಟರಲ್ಲಿ A-5 ನ ಕಾರಿನ ವೇಗ ಹೆಚ್ಚಿತು. ತನ್ನ ಅನುಭವದಲ್ಲಿ ಮೊದಲನೆ ಸಲ ಈ ರೀತಿ ನಡೆದದ್ದರಿಂದ ಆ ಟೆರ್ರರಿಸ್ಟ್ ರಾಮಲಾಲ್‌ಗೆ ಏನು ಉತ್ತರಿಸಬೇಕೆಂದು ಭಯದಿಂದಿದ್ದ.

ಇಲ್ಲಿ ಪೆಟ್ರೋಲ್ ಬಂಕ್‌ನ ಬಳಿ ಪದ್ಮಾಕರ್ ಕೂಡಾ ಆಕಸ್ಮಿಕವಾಗಿ ಕೇಳಿಸಿದ ಮಿಷನ್‌ಗನ್‌ನ ಸಪ್ಪಳಕ್ಕೆ ಗಾಭರಿಯಾದ. ಒಂದು ಗುಂಡು ಕಿವಿಯ ಪಕ್ಕ

ದಿಂದ ನುಗ್ಗಿ ಹೋಯಿತು. ಮತ್ತೊಂದು ಏಯರ್ ಫಿಲ್ಲರ್‌ಗೆ ತಗುಲಿತು. ಅವನು ಮೋಟಾರ್ ಸೈಕಲನ್ನು ಬಿಟ್ಟುಬಿಟ್ಟ.

ಇಷ್ಟು ಗಲಭೆ ನಡೆಯುತ್ತಿದ್ದರೂ ಟ್ರಾಫಿಕ್ ವೇಗವಾಗಿತ್ತು. ಬಂಕ್‌ನ ಯಜಮಾನ, ಬಂಕಿನ ಬಳಿಯಿದ್ದ ಜನ ಮಾತ್ರ ಕಿರುಚುತ್ತಿದ್ದರು. ಸಿಗರೇಟ್ ಹಚ್ಚಿಸುತ್ತಿದ್ದ ಹಿಪ್ಪಿಯ ಮೇಲೆ ಬಿತ್ತು ಪದ್ಮಾಕರನ ದೃಷ್ಟಿ.

ಟ್ಯೂಬಿನಿಂದ ಧಾರಾಕಾರವಾಗಿ ಸುರಿದು, ರಸ್ತೆಯಲ್ಲೆಲ್ಲಾ ಹರಿಯು ತ್ತಿತ್ತು ಪೆಟ್ರೋಲು. ಅತ್ತಕಡೆಗೇ ಬರುತ್ತಿದ್ದಾರೆ ಮಕ್ಕಳೆಲ್ಲಾ ದಸರಾ ಹಬ್ಬದ ಸಂಭ್ರಮದಲ್ಲಿ ಹಾಡನ್ನು ಹಾಡುತ್ತಾ.

ಪದ್ಮಾಕರ್ ಓಡಲು ಪ್ರಾರಂಭಿಸಿದ. ಬಿದ್ದುಹೋದ ಬೈಕನ್ನು ಗಮನಿಸಲೇ ಇಲ್ಲ ಸ್ಲೋಮೋಷನ್ ಸಿನೇಮಾದಂತೆ ಅವನು ಹಿಪ್ಪಿಯನ್ನು ಸೇರಿಕೊಂಡಿದ್ದು. ಅವನು ಸಿಗರೇಟನ್ನು ಹಚ್ಚಿ ಕೆಳಗೆ ಎಸೆದ ಕಡ್ಡಿಯನ್ನು ನೆಲಕ್ಕಿಂತ ಎರಡಡಿ ಮೇಲೆಯೇ ಹಿಡಿದದ್ದು ಎಲ್ಲಾ ನಡೆದು ಹೋಯಿತು–ಒಂದೇ ಕ್ಷಣದಲ್ಲಿ.

ಅಷ್ಟರಲ್ಲಿ ನಡೆದದ್ದೇನೆಂದು ಜನರಿಗೆಲ್ಲ ತಿಳಿಯಿತು. ಎಲ್ಲರೂ ದೂರ ಓಡು ತ್ತಿದ್ದಾರೆ. ಎಲ್ಲಾ ಗಡಿಬಿಡಿ. ಪದ್ಮಾಕರ್ ಅದೇ ವೇಗದಲ್ಲಿ ಮುನ್ನುಗ್ಗಿ ಫಿಲ್ಲರನ್ನು ಆಫ್ ಮಾಡಿದ. ಪೆಟ್ರೋಲಿನ ಪ್ರವಾಹ ನಿಂತಿತು, ಯಾರೋ ಫೈರ್‌ಸ್ಟೇಷನ್‌ಗೆ ಫೋನ್ ಮಾಡಿದರು.

ಟ್ರಾಫಿಕ್ ಜಾಮ್ ಆಯಿತು. ಬಂಕ್ ಸುತ್ತಲೂ ಜನ ಬಲೆಯಂತೆ ನಿಂತಿ ದ್ದಾರೆ. ಪೆಟ್ರೋಲ್ ನಿಧಾನವಾಗಿ ಗಾಳಿಯಲ್ಲಿ ಆವಿಯಾಗಿ ಹೋಗುತ್ತಿದೆ. ಒಂದು ಸಣ್ಣ ಬೆಂಕಿಯ ಕಡ್ಡಿ ಗೀರಿದರೂ ಆ ಸ್ಥಳವೆಲ್ಲ ಸುಟ್ಟು ಬೂದಿಯಾಗುತ್ತದೆ. ಆದರೂ ಜನ ಬಂದು ಸೇರುತ್ತಿದ್ದಾರೆ. ಯಜಮಾನನಿಗೆ ಹುಚ್ಚು ಹಿಡಿದಂತಿದೆ. ಇದೇನನ್ನೂ ಗಮನಿಸದ ಪದ್ಮಾಕರ್ ಯುದ್ಧಭೂಮಿಯಲ್ಲಿ ಸೈನಿಕನಂತೆ ಓಡೋಡಿ ವಾಟರ್ ಟ್ಯಾಂಕ್ ಬಳಿಗೆ ಬಂದ. ಲಾರಿಗಳಿಗೆ ಕಾರುಗಳಿಗೆ ತುಂಬಿಸಿಕೊಳ್ಳುವ ನೀರಿತ್ತು. ಅದರ ತಳದಲ್ಲಿದ್ದ ಕಿಂಡಿಯನ್ನು ಓಪನ್‌ಮಾಡಿದ. ಆಗ ಎಚ್ಚೆತ್ತವ ರಂತೆ ಇಬ್ಬರು ಮೂವರು ಸಹಾಯಕ್ಕೆ ಬಂದರು. ನೀರು ಪೆಟ್ರೋಲೊಡನೆ ಸೇರಿ ದೂರಕ್ಕೆ ಹರಿಯಲು ಪ್ರಾರಂಭಿಸಿತು. ಪೆಟ್ರೋಲ್ ನೀರಿನೊಡನೆ ಬೆರೆತರೂ ಉರಿ ಯುವ ಗುಣವನ್ನು ಬಿಡುವುದಿಲ್ಲ. ಆದರೆ ಬಂಕ್‌ನಿಂದ ದೂರಹೋಗುತ್ತಿದೆ ಅಷ್ಟೆ. ಜನ ಕೂಡಾ ಆಟೋಮ್ಯಾಟಿಕ್ಕಾಗಿ ದೂರಹೋಗುತ್ತಿದ್ದಾರೆ. ಅದೇ ಬೇಕಾದದ್ದು!

ಐದು ನಿಮಿಷಗಳಲ್ಲಿ ಅಲ್ಲಿಯ ಸ್ಥಿತಿ ಯಥಾರೀತಿಯಾಯಿತು.

ಒಂದು ಕಡೆಯಿಂದ ಪೋಲೀಸ್ ವ್ಯಾನು. ಮತ್ತೊಂದು ಕಡೆಯಿಂದ ಫೈರ್ ಇಂಜಿನ್ ಬಂದವು. ಶವದ ಬಳಿಗೆ ಪೋಲೀಸರು ಓಡಿದರು.

ಯಜಮಾನನಿಂದ ಎಲ್ಲಾ ವಿವರಣೆ ಪಡೆದ ಇನ್ಸ್‌ಪೆಕ್ಟರ್ ಪದ್ಮಾಕರನ ಬಳಿಗೆ ಬಂದ.

"ಯಾರು ಫೈರ್ ಮಾಡಿದರೆಂದು ನಿಮಗೇನಾದರೂ ಗೊತ್ತಾ?"

"ಇಲ್ಲ. ನಾನು ಗಾಳಿ ತುಂಬಿಸಿಕೊಳ್ಳಲು ಬಂದಿದ್ದೆ."

"ಸರಿ ನೀವು ಹೊರಡಬಹುದು. ಬೈ–ದಿ–ಬೈ ಕಂಗ್ರಾಜುಲೇಷನ್ಸ್ ದೊಡ್ಡ ಅಪಾಯದಿಂದ ಈ ಪ್ರದೇಶವನ್ನು ರಕ್ಷಿಸಿದ್ದೀರಿ."

"ಥ್ಯಾಂಕ್ಸ್" ಎಂದು ಪದ್ಮಾಕರ್ ಬೈಕಿನ ಕಡೆ ನಡೆದ.

ಮತ್ತೊಂದು ದೊಡ್ಡ ಅಪಾಯ ತನಗಾಗಿ ಕಾದಿದೆಯೆಂದು ಅವನಿಗೆ ತಿಳಿದಿರಲಿಲ್ಲ.

* * * *

ವಿಹಾರಿ, ಪ್ರವಲ್ಲಿಕರಿದ್ದದ್ದು ಟಯೋಟಾ! ಟೆರ್ರರಿಸ್ಟ್‌ಗಳಿದ್ದುದು ಅಂಬಾಸಿಡರ್! ಜನಸಂದಣಿ ಹೆಚ್ಚಾಗಿದ್ದ ಸ್ಥಳಗಳಲ್ಲಿ ಟಯೋಟಾವನ್ನು ವೇಗವಾಗಿ ನಡೆಸುವುದು ಕಷ್ಟವಾದರೂ, ಪ್ರವಲ್ಲಿಕಳ ಕೈಯಲ್ಲಿ ಅದು ಬಾಣದಂತೆ ಮುನ್ನುಗ್ಗಿತು. ನಿಜಕ್ಕೂ ಅದು ವಿಹಾರಿಯ ಕಾರು. ಷೂಟಿಂಗ್ ಸಮಯದಲ್ಲಿ ಅವಳು ಆ ಕಡೆ ಸರಿದು ಸ್ಟೀಯರಿಂಗ್ ಹಿಡಿದು ಸ್ಟಾರ್ಟ್ ಮಾಡಿದ್ದರಿಂದ ಇಬ್ಬರೂ ಸುರಕ್ಷಿತವಾಗಿ ತಪ್ಪಿಸಿಕೊಂಡರು.

ತಮ್ಮ ಹಿಂದೆ ಕಾರೊಂದು ಅನುಸರಿಸುತ್ತಾ ಬರುತ್ತಿರುವುದನ್ನು ಅವರು ಗಮನಿಸಿದರು. ಅದರ ವೇಗ ಹೆಚ್ಚಾಯಿತು. ಅದರ ಡ್ರೈವರ್ ಇಂತಹ ಸಮಯಗಳಲ್ಲಿ ತಪ್ಪಿಸಿಕೊಳ್ಳಲು ಟ್ರೈನಿಂಗ್ ಹೊಂದಿದ್ದಾನೆ.

ಸರ್ಕಾರ ಕೊಟ್ಟ ತರಬೇತಿಗೂ, ಟೆರ್ರರಿಸ್ಟ್‌ಗಳು ಕೊಟ್ಟ ತರಬೇತಿಗೂ ನಡುವೆ ಸ್ಪರ್ಧೆ...

ಸಮನಾಗಿ ಓಡುತ್ತಿತ್ತು. ಎರಡು ಕಾರುಗಳೂ ಊರಿನ ಹೊರ ಬಂದು ನ್ಯಾಷನಲ್ ಹೈವೇ ಮೇಲೆ ಬಂದವು. ಮುಂದಿನ ಕಾರಿನಿಂದ ಮಿಷಿನ್‌ಗನ್ ಹೊರಬಂತು. ಒಂದೇ ಸಮನೆ ಬುಲೆಟ್‌ಗಳ ಮಳೆ.... ಪ್ರವಲ್ಲಿಕಳ ಮುಂದಿದ್ದ ಗಾಜಿನ ಮೂಲಕ ನುಗ್ಗುತ್ತಿದ್ದ ಬುಲೆಟ್‌ಗಳಿಂದ ಇಬ್ಬರೂ ತಪ್ಪಿಸಿಕೊಳ್ಳಲು ತಲೆಯನ್ನು ತಗ್ಗಿಸಿಕೊಂಡು ಕುಳಿತರು.

ಎರಡೂ ಕಾರುಗಳೂ ಜೇನ್ನೊಣಗಳಂತೆ ಓಡುತ್ತಿವೆ. ಎದುರಿನಲ್ಲಿ ಲಾರಿಗಳು ಬರುತ್ತಿದ್ದರೆ ಸಿಲ್ಲಿಸಿ, ಅವು ಹೋದಕೂಡಲೇ ಸುಡುವುದನ್ನು ಮುಂದುವರಿ

ಸುತ್ತಿದ್ದರು. ಹಾಗೆ ಆದರೆ ಯಾರಿಗೂ ಅನುಮಾನ ಬರುವುದಿಲ್ಲವೆಂದು ಅವರ ಅಭಿಪ್ರಾಯ. ಅದೂ ಸರಿಯೇ.

ಉಳಿದ ಟ್ರಾಫಿಕ್‌ಗೆ ಈ ಮಾರಣಹೋಮದ ಬಗ್ಗೆ ತಿಳಿಯಲೇ ಇಲ್ಲ. ಅಷ್ಟರಲ್ಲಿ ಮುಂದಿನ ಕಾರು ಬೇರೊಂದು ದಾರಿಯಲ್ಲಿ ಹೊರಟಿತು. ಅದು ನಿರ್ಮಾನುಷ್ಯವಾಗಿತ್ತು.

"ಪಿಸ್ತೂಲಿದೆಯಾ?" ವಿಹಾರಿ ಕೇಳಿದ.

ಡ್ರೈವ್ ಮಾಡುತ್ತಲೇ ಪ್ರವಲ್ಲಿಕ ತೆಗೆದುಕೊಟ್ಟಳು. ಅವನೂ ಷೂಟ್ ಮಾಡಲು ಪ್ರಾರಂಭಿಸಿದ. ಎರಡು ಬುಲೆಟ್‌ಗಳು ಬಾನೆಟ್‌ಗೆ ಬಿದ್ದವು. ಮೂರು ಗಾಳಿಯಲ್ಲಿ ನುಗ್ಗಿತು. ಆರನೆಯದು, ಕೊನೆಯದು ಮಾತ್ರ ಸರಿಯಾಗಿ ಹಿಂದಿನ ಟೈರಿಗೆ ಬಡಿಯಿತು.

ವೇಗವಾಗಿ ಹೋಗುತ್ತಿದ್ದ ಕಾರು, ಹಿಂದಿನ ಟೈರ್ ಸೀಳಿ ಹೋಗುತ್ತಿದ್ದಂತೆ, ಆ ಒತ್ತಡಕ್ಕೆ ತಡೆದುಕೊಳ್ಳಲಾರದಂತೆ ಪಕ್ಕಕ್ಕೆ ತಿರುಗಿತು, ಅದೇ ವೇಗದಿಂದ ಹೋಗಿ ಹೈವೇ ಪಕ್ಕದಲ್ಲಿದ್ದ ಮರಕ್ಕೆ ಬಡಿಯಿತು.

ಸ್ಟಿಯರಿಂಗ್‌ಗೂ, ಸೀಟಿಗೂ ನಡುವೆ ಸಿಕ್ಕಿಕೊಂಡ ಡ್ರೈವರನ ಕಿರುಚಾಟ ಆ ಪ್ರಾಂತ್ಯದಲ್ಲೆಲ್ಲಾ ಪ್ರತಿಧ್ವನಿಸಿತು. A-5 ಹಿಂದಿನ ಸೀಟಿನಿಂದ ಇಳಿದ. ವಿಹಾರಿಯ ಕಾರು ಸಮೀಪಿಸುವುದರೊಳಗಾಗಿ ಹೊಲಗಳಲ್ಲಿ ಓಡಿದ. ವಿಹಾರಿ ಅವನ ಹಿಂದೆಯೇ ಓಡಿದ. ಒಂದು ಫರ್ಲಾಂಗ್ ದಾಟಿದ ನಂತರ ಒಂದು ಸಣ್ಣ ಹೊಳೆ ಬಂತು. ದೋಬಿಗಳು ಅಲ್ಲಿ ಒಗೆದು ಒಣಗಿ ಹಾಕಿದ್ದ ಬಟ್ಟೆಗಳ ಮರೆಯಲ್ಲಿ A-5 ಅದೃಶ್ಯನಾದ.

ಸಾಲಾಗಿ ಹಾಕಿದ್ದಾರೆ ಸೀರೆಗಳನ್ನು . ಪ್ಯಾಂಟುಗಳನ್ನು...

ವಿಹಾರಿ ತಲೆತಗ್ಗಿಸಿ ಅವನ ಕಾಲುಗಳನ್ನು ನೋಡಲು ಪ್ರಯತ್ನಿಸುತ್ತಿದ್ದ! ಉತ್ತರವಾಗಿ ಪಿಸ್ತೂಲು ಶಬ್ದ ಮಾಡಿತು. ವಿಹಾರಿಯ ಪಕ್ಕದಲ್ಲಿದ್ದ ಸೀರೆಗೆ ತೂತು ಬಿತ್ತು. ಅಷ್ಟು ಬಟ್ಟೆಗಳ ನಡುವೆ A-5 ಕಾಣುತ್ತಿಲ್ಲ. ವಿಹಾರಿಯ ಪಿಸ್ತೂಲಿನಲ್ಲಿ ಗುಂಡುಗಳಿರಲಿಲ್ಲ.

ವಿಹಾರಿ ಒಂದು ಕಲ್ಲನ್ನು ತೆಗೆದುಕೊಂಡು ದೂರದಲ್ಲಿ ಒಂದು ಪ್ಯಾಂಟಿಗೆ ಹಾಕಿದ. ಪ್ಯಾಂಟ್ ಕದಲ್ಲಿದ್ದನ್ನು ಕಂಡ A-5 ಅತ್ತ ಗುರಿಯಿಟ್ಟ. ಇನ್ನೊಂದು ಅಂಗಿ ಕದಲಿತು. ಆದರೆ ಅಷ್ಟರಲ್ಲಿ ಅವನ ಪಿಸ್ತೂಲಿನಲ್ಲಿಯೂ ಗುಂಡುಗಳು ಮುಗಿದಿದ್ದವು. ಸರಿಯಾಗಿ ಅದೇ ಸಮಯಕ್ಕೆ ಎದುರು ನೋಡುತ್ತಿದ್ದ ವಿಹಾರಿ. ಹಿಂದಿನಿಂದ ಬಂದವನೇ ಪಿಸ್ತೂಲಿನ ಹಿಂಭಾಗದಿಂದ ಅವನ ಕತ್ತಿಗೆ ಒಂದು ಪೆಟ್ಟು ಕೊಟ್ಟ.

A-5, ಕುಸಿದು ಕುಳಿತ.

ಅದೇ ಸಮಯಕ್ಕೆ ಪ್ರವಲ್ಲಿಕ ಅಲ್ಲಿಗೆ ಬಂದಳು. ಇಬ್ಬರೂ ಸೇರಿ ಅವನನ್ನು ಎಚ್ಚರಗೊಳಿಸಲು ಹೊಳೆಯಿಂದ ಒಬ್ಬರು ನೀರು ತಂದು ಅವನ ಮುಖಕ್ಕೆ ಸಿಂಪಡಿಸಿದರು. ಮತ್ತೊಬ್ಬರು ಅಷ್ಟರಲ್ಲಿ ಅವನ ಕೈಯ್ಯನ್ನು ಹಿಂದಕ್ಕೆ ಕಟ್ಟಿದರು. ಐದು ನಿಮಿಷಗಳಲ್ಲಿ ಅವನಿಗೆ ಎಚ್ಚರವಾಯಿತು. A-5 ಪೆಟ್ಟುತಿಂದ ಹುಲಿಯಂತಿದ್ದ.

"ಇವನನ್ನೇನು ಮಾಡುತ್ತೀರಿ" ಪ್ರವಲ್ಲಿಕಳನ್ನು ಕೇಳಿದ.

ಅವಳು ಅರ್ಥವಾಗದವಳಂತೆ, "ಪೆಟ್ರೋಲ್ ಬಂಕ್ ಬಳಿ ಕೊಲೆ ಮಾಡಿದ್ದಾನೆ. ನಮ್ಮ ಮೇಲೆ ಕೊಲೆಯ ಪ್ರಯತ್ನ ಮಾಡಿದ್ದಾನೆ. ಈ ಅಪರಾಧಗಳಿಗಾಗಿ ಪೊಲೀಸರಿಗೆ ಒಪ್ಪಿಸೋಣ, ಅದಕ್ಕಿಂತಲೂ ಮತ್ತೇನು ಮಾಡೋದು?" ಅಂದಳು.

"ಇದೇ ರೀತಿ ಇದಕ್ಕೂ ಮುಂಚೆ ಒಬ್ಬ ವ್ಯಕ್ತಿಯನ್ನು ಕಲಾಕ್ಷೇತ್ರದಲ್ಲಿ ಸಿಕ್ಕಿದಾಗ ಪೊಲೀಸ್ ಕಸ್ಟಡಿಯಲ್ಲಿರಿಸಿದ್ದೆ. ಅವನೇ ಮತ್ತೆ ಬಂದು ನಿನ್ನ ಕಾರು ತೆಗೆದ ನೆನಪಿದೆಯಾ?

"ಹೌದು. ಆ ಡಿಪಾರ್ಟ್‌ಮೆಂಟಿನಲ್ಲಿ ಯಾರೋ ಅನಂತಾನಂತಸ್ವಾಮಿಗೆ ಸಹಾಯ ಮಾಡುತ್ತಿದ್ದಾರೆ."

"ಮತ್ತೆ ಈ ಸಲ ಸಹಾಯ ಮಾಡುವುದಿಲ್ಲವೆಂದು ಏನು ನಂಬಿಕೆ?"

"ಅದಕ್ಕೀಗ ಏನು ಮಾಡಬೇಕು?"

"ನಮ್ಮ ಕಸ್ಟಡಿಯಲ್ಲಿರಿಸಿಕೊಳ್ಳೋಣ."

ಅವಳು ಗಾಬರಿಯಿಂದ 'ಏಕೆ?' ಎಂದಳು.

"ಹೌದು. ಇವನನ್ನು ನೋಡುತ್ತಿದ್ದರೆ ಸೀನಿಯರ್ ಸಹಚರನಂತೆ ಕಾಣುತ್ತಿದ್ದಾನೆ. ಸ್ವಾಮಿಯ ಎಲ್ಲ ರಹಸ್ಯಗಳೂ ಇವನಿಗೆ ತಿಳಿದೇ ಇರುತ್ತವೆ. ಅದರಲ್ಲಿ ಒಂದನ್ನು ತಿಳಿದುಕೊಂಡರೂ ಸ್ವಾಮಿಯ ಅಂತ್ಯವನ್ನು ಕಾಣಬಹುದು.'

"ನನ್ನ ಪ್ರಾಣಹೋದರೂ ಒಂದು ರಹಸ್ಯವನ್ನೂ ಹೇಳಲಾರೆ" ಟೆರ್ರರಿಸ್ಟ್ ಹೇಳಿದ.

ಪ್ರವಲ್ಲಿಕ ವಿಹಾರಿಯನ್ನು ದೂರಕ್ಕೆ ಕರೆದೊಯ್ದಳು. "ಪೊಲೀಸರಿಗೆ ತಿಳಿಯದಂತೆ ಇವನನ್ನು ನಮ್ಮ ಬಳಿ ಇರಿಸಿಕೊಳ್ಳುವುದು ಅಪರಾಧ" ಅಂದಳು. "ಅದಕ್ಕೆ ನಿಮ್ಮ ಡಿಪಾರ್ಟ್‌ಮೆಂಟಿನಲ್ಲಿ ಯಾವ ಕೆಲಸವೂ ಸರಿಯಾಗಿ ಆಗುವುದಿಲ್ಲ. ಎಲ್ಲಾ ರೂಲ್ಸ್ ಪ್ರಕಾರವೇ ನಡೆಯಬೇಕೆನ್ನುತ್ತೀರಿ ಸರಿ. ಇವನು ನಿನಗೆ ಸಿಗಲಿಲ್ಲವೆಂದುಕೊಂಡು ಮರೆತುಬಿಡು, ನಾನೋಡ್ಕೊಳ್ತೀನಿ." ಅವಳು ಒಪ್ಪಿಕೊಳ್ಳುತ್ತಿದ್ದಂತೆ,

"ಸರಿ. ನಮ್ಮ ಬಳಿಯೇ ಇರಿಸಿಕೊಳ್ಳೋಣ. ಆದರೆ ಇವರೆಲ್ಲ ಒಳ್ಳೆ ತರಬೇತಿ ಹೊಂದಿದ ಟೆರ್ರರಿಸ್ಟ್‌ಗಳು. ನಮ್ಮ ಇನ್ಸ್‌ಪೆಕ್ಟರ್‌ಗಳು ಸುರಕ್ಷಿತವಾದ ಥರ್ಡ್ ಡಿಗ್ರಿ ಮೆಥೆಡ್ಸ್ ಉಪಯೋಗಿಸಿದರೇನೇ ಬಾಯಿ ಬಿಡಿಸಲು ಕಷ್ಟ. ನಿನಗೆ ಹೇಗೆ ಹೇಳುತ್ತಾರೆ ರಹಸ್ಯಗಳನ್ನು?"

"ನಾನು ಫೋರ್ತ್ ಡಿಗ್ರಿ ಮೆಥೆಡ್ಸ್ ಉಪಯೋಗಿಸುತ್ತೇನೆ ನಡಿ" ಎನ್ನುತ್ತಾ ಮತ್ತೆ ಕಾರಿನ ಬಳಿಗೆ ಬಂದರು. ಅಲ್ಲಿ ಕಟ್ಟಿ ಕೆಡವಿದ್ದ ಉಗ್ರವಾದಿಯನ್ನು ಕಂಡು ನಕ್ಕು ಕೇಳಿದ.

"ಸೂರ್ಯಾರಾವ್ ಸೆಂಟ್ರಲ್ ಮಿನಿಸ್ಟರ್ ಆದಮೇಲೆ ಸ್ವಾಮಿಗೆ ಯಾವ ರೀತಿ ಸಹಾಯ ಮಾಡುತ್ತಿದ್ದಾನೆ?"

"ನಂಗೊತ್ತಿಲ್ಲ."

"ಇನ್ನೊಂದು ಸಲ ಕೇಳ್ತೀನಿ. ಸೂರ್ಯಾರಾವ್ ಸೆಂಟ್ರಲ್ ಮಿನಿಸ್ಟರ್ ಆದಮೇಲೆ ಸ್ವಾಮಿಗೆ ಯಾವ ರೀತಿ ಸಹಾಯ ಮಾಡುತ್ತಿದ್ದಾನೆ?"

"ನಂಗೊತ್ತಿಲ್ಲ."

ಆ ಉತ್ತರದಿಂದ ವಿಹಾರಿ ಅವನ ಮುಖದ ಮೇಲೆ ಬಡಿಯುತ್ತಾನೇನೋ ಎಂದುಕೊಂಡಳು ಪ್ರವಲ್ಲಿಕ. ವಿಹಾರಿ ಹಾಗೇನೂ ಮಾಡಲಿಲ್ಲ. ಪಕ್ಕದಲ್ಲೇ ಇದ್ದ ಕಾರಿನ ಬಳಿಗೆ ಹೋಗಿ ಪರೀಕ್ಷಿಸಿದ. ಸ್ಟೀಯರಿಂಗ್ ಬಳಿ ಮತ್ತೊಬ್ಬ ಟೆರ್ರರಿಸ್ಟ್ ಸತ್ತು ಬಿದ್ದಿದ್ದ. ಅವನ ಶರೀರವನ್ನು ಹೊರಗೆಳೆದ. ಪ್ರವಲ್ಲಿಕ ಭಯಗ್ರಸ್ಥಳಾಗಿ ನೋಡುತ್ತಿದ್ದಳು. ಆಕ್ಸಿಡೆಂಟ್‌ನಲ್ಲಿ ಆ ರೀತಿ ಮಹಜರ್ ಆಗದೆ ಕೈಯಾಡಿಸುವುದು ಅಪರಾಧ. ಅವನೇನು ಮಾಡುತ್ತಿದ್ದಾನೆಂದು ಅವಳಿಗೆ ಅರ್ಥವಾಗಲಿಲ್ಲ. ಅಷ್ಟರಲ್ಲಿ ವಿಹಾರಿ ಕಾರಿನೊಳಗೆ ಹತ್ತಿ ಸ್ಟಾರ್ಟ್ ಮಾಡಿ ನೋಡಿದ. ಸ್ವಲ್ಪ ತೊಂದರೆ ಕೊಟ್ಟರೂ ನಂತರ ಸ್ಟಾರ್ಟ್ ಆಯಿತು. ವಿಹಾರಿ ತನ್ನ ಕೆಲಸದಲ್ಲಿ ನಿರತನಾಗಿದ್ದುದನ್ನೂ ಪ್ರವಲ್ಲಿಕ ಅತ್ತಲೇ ನೋಡುತ್ತಿದ್ದುದನ್ನೂ ಗಮನಿಸಿದ A-5 ತಪ್ಪಿಸಿಕೊಳ್ಳಲು ಪ್ರಯತ್ನಿಸಿದ. ಆದರೆ ಕೈಗಳನ್ನು ಹಿಂದಕ್ಕೆ ಕಟ್ಟಿ ಬಿಗಿದಿದ್ದರಿಂದ ಅದು ಸಾಧ್ಯವಾಗಲಿಲ್ಲ.

ವಿಹಾರಿ ಅವನನ್ನು ಹೊತ್ತು ತಂದು ಕಾರಿನ ಡಿಕ್ಕಿಯಲ್ಲಿ ಹಾಕಿದ. ಡಿಕ್ಕಿ ಮುಚ್ಚಿ ಸ್ಟಿಯರಿಂಗ್ ಬಳಿ ಬಂದು ಕುಳಿತ. ಒಳಗಿನಿಂದ ಅವನು...

"ನೋ...ನೋ" ಎಂದು ಕಿರುಚುತ್ತಿದ್ದ. ಕಾರನ್ನು ಸ್ಟಾರ್ಟ್ ಮಾಡಿ ರಿವರ್ಸ್‌ನಲ್ಲಿ ವೇಗದಿಂದ ಡ್ರೈವ್ ಮಾಡಿ ಮರವೊಂದಕ್ಕೆ ಡಿಕ್ಕಿ ಹೊಡೆಸಿದ. ಡಬ್ ಎಂದು ಶಬ್ದವಾಯಿತು.

ಒಳಗಿನಿಂದ ಕಿಟಾರನೆ ಕಿರುಚಿದ್ದು ಕೇಳಿಸಿತು. ಕಾರನ್ನು ಸ್ವಲ್ಪ ಮುಂದಕ್ಕೆ

ತೆಗೆದುಕೊಂಡು ಹೋಗಿ, ಮತ್ತೆ ರಿವರ್ಸ್ ಹೊಡೆದ. ಒಳಗೆ ಮೂಟೆ ಅಲ್ಲಾಡಿ ದಂತೆ ಶಬ್ದ. ಮತ್ತೆ ಕಿರುಚಾಟ! ಅವನ್ನು ಕೇಳಿಸಿಕೊಂಡು ಅಯ್ಯೋ ಎನ್ನುವವ ರಾರಲ್ಲಿ?

ಪ್ರವಲ್ಲಿಕ ದೂರದಲ್ಲಿ ನಿಂತು ಪ್ರೇಕ್ಷಕಳಾಗಿ ನೋಡುತ್ತಾ ಇದ್ದು ಬಿಟ್ಟಳು. ಗೂಢಚಾರಿ ಸಂಸ್ಥೆಯ ರಹಸ್ಯಗಳನ್ನು ಹೇಳಿಸಲು ಈ ವಿಧಾನವನ್ನು ಅನುಸರಿಸು ವುದಿಲ್ಲ. ಅವಳಿನ್ನೊಂದು ಪ್ರಪಂಚದಲ್ಲಿರುವಂತೆ ನೋಡುತ್ತಿದ್ದಳು.

ವಿಹಾರಿ ಎದುರಾಳಿಯ ಮೇಲೆ ಇಲ್ಲಿಯೇ ಟ್ರಿಕ್ಕನ್ನು ಆಡಿದ್ದು. ಪ್ರಶ್ನೆಗಳನ್ನು ಕೇಳಿ ನೋವು ಕೊಡುವುದಿಲ್ಲ. ಹೇಳ್ತೀಯಾ? ಹೇಳ್ತೀಯಾ? ಎಂದು ಬಲವಂತಪಡಿಸುವುದಿಲ್ಲ. ಕಾರಿನ ಡಿಕ್ಕಿಯಲ್ಲಿ ಕೆಡವಿದ. ಅಲ್ಲಿ ಕತ್ತಲಿತ್ತು. ಉಸಿರಾಡಲೂ ಕಷ್ಟವಾಗಿತ್ತು. ಕಾರು ಚಲಿಸುವುದು ಮಾತ್ರ ಗೊತ್ತಾಗುತ್ತದೆ. ಯಾವ ಸಮಯದಲ್ಲಿ ಪೆಟ್ಟು ಬೀಳುತ್ತದೆಯೆಂದು ತಿಳಿಯುವುದಿಲ್ಲ. ಕೈಯ್ಯೇ ಮುರಿಯಬಹುದು. ಕತ್ತೇ ಮುರಿಯಬಹುದು. ಸತ್ತುಹೋದರೆ ಆಕ್ಸಿಡೆಂಟ್‌ನಲ್ಲಿ ಸತ್ತಂತೆ ಕೈಗೆ ಕಟ್ಟಿರುವಹಗ್ಗವನ್ನು ಬಿಚ್ಚಿಕೊಂಡು ಹೊರಟು ಹೋಗುತ್ತಾರೆ ಹಣವನ್ನಲ್ಲೇ ಬಿಟ್ಟು. ಏನು ಮಾಡಬೇಕು.?

A-5 ಯೋಚಿಸುವುದರೊಳಗಾಗಿ ಕಾರು ಮತ್ತೆ ಹೊರಟು ಮರಕ್ಕೆ ಡಿಕ್ಕಿ ಹೊಡೆಯಿತು. ನೋವಿನಿಂದ ನರಳುತ್ತಿದ್ದ.

ಕಾರು ಮತ್ತೆ ಸ್ಟಾರ್ಟ್ ಆಯಿತು.

"ಹೇಳ್ತಿನಿ...ಹೇಳ್ತಿನಿ..." ಕಿರುಚಿದ ಒಳಗಿನಿಂದಲೇ.

ವಿಹಾರಿ ಕಾರನ್ನು ಆಫ್ ಮಾಡಿ ಕೆಳಗಿಳಿದು, ಡಿಕ್ಕಿ ತೆಗೆದ. ಬಟ್ಟೆ ಮೂಟೆ ಯಂತೆ ಟೆರ್ರರಿಸ್ಟ್ ಒಳಗೆ ಬಿದ್ದಿದ್ದಾನೆ.

ಅವನನ್ನೆತ್ತಿಕೊಂಡು ಹಾಗೆಯೇ ಹಿಂದಿನ ಸೀಟ್ ಮೇಲೆ ಹಾಕಿದ. ಪ್ರವಲ್ಲಿಕ ಪಕ್ಕದಲ್ಲಿ ಕುಳಿತಳು. ವಿಹಾರಿ ಕಾರನ್ನು ಸಿಟಿಯ ಕಡೆಗೆ ಓಡಿಸಿದ. ಪ್ರವಲ್ಲಿಕಳಿಗೆ ಆಶ್ಚರ್ಯವಾಗುತ್ತಿತ್ತು. ಟೆರ್ರರಿಸ್ಟ್ ಅಷ್ಟು ಸುಲಭವಾಗಿ 'ಬ್ರೇಕ್' ಆಗುತ್ತಾನೆಂದುಕೊಂಡಿರಲಿಲ್ಲ. ಬಹುಶಃ ಕಣ್ಮುಂದೆಯೇ ತನ್ನ ಅನುಚರ ಸತ್ತಿದ್ದು, ವಿಹಾರಿಯ ಒರಟು ವರ್ತನೆ, ಅವನನ್ನು 'ಬ್ರೇಕ್' ಮಾಡಿರಬಹುದು. ಅದೇ ಸಿ. ಬಿ. ಐ. ಸಲ್ಲಾಗಿದ್ದಿದ್ದರೆ ಎಷ್ಟೋ ಟ್ರೀಟ್‌ಮೆಂಟುಗಳನ್ನು ಮಾಡ ಬೇಕಾಗಿತ್ತು.

"ಇವನನ್ನು ನಮ್ಮ ಬಳಿಯೇ ಉಳಿಸಿಕೊಳ್ಳೋಣ" ವಿಹಾರಿ ಹೇಳಿದ.

"ನಿಮ್ಮ ಡಿಪಾರ್ಟ್‌ಮೆಂಟ್‌ಗೆ ವಹಿಸಿಕೊಟ್ಟರೆ ಇವನೇನು ಹೇಳುತ್ತಾ ನೆಂದು ಸ್ವಾಮಿಗೆ ತಿಳಿದುಬರುತ್ತದೆ. ಅದೂ ಅಲ್ಲದೆ ಇವನ ಬಾಯನ್ನು ಶಾಶ್ವತ

ವಾಗಿ ಮುಚ್ಚಿಬಿಡಲು ಪ್ರಯತ್ನಿಸಬಹುದು.

ಅದು ತಪ್ಪು. ಆದರೆ ಪ್ರವಲ್ಲಿಕ ಅದಕ್ಕೆ ಒಪ್ಪಿಕೊಂಡಳು. ಅವಳು ಈಗೀಗ ವಿಹಾರಿಯಂತೆ ಯೋಚಿಸಲು ಕಲಿಯುತ್ತಿದ್ದಳು.

"ಊ್ಞ ..ಹೇಳು. ಸೂರ್ಯಾರಾವ್‌ನ ಮುಂದಿನ ಯೋಜನೆ ಏನು?" ಹಿಂದಿನ ಸೀಟಿನಲ್ಲಿ ಬಿದ್ದಿದ್ದವನು ಮಾತನಾಡಲಿಲ್ಲ. ಸ್ವಲ್ಪ ಧೈರ್ಯ ತಂದು ಕೊಂಡಂತಿತ್ತು. ವಿಹಾರಿ ಮೌನವಾಗಿಯೇ ಮತ್ತೆ ಕಾರನ್ನು ಹಿಂದಕ್ಕೆ ತಿರುಗಿಸಿದ. "ಮತ್ತೆ ಎಲ್ಲಿಗೆ?" ಎಂದು ಪ್ರವಲ್ಲಿಕ ಕೇಳಿದಳು.

"ಆಕ್ಸಿಡೆಂಟ್ ನಡೆದ ಜಾಗಕ್ಕೆ, ಇವನೇನೂ ಮಾತನಾಡುತ್ತಿಲ್ಲವಲ್ಲಾ, ಮತ್ತೆ ಇವನನ್ನು ಡಿಕ್ಕಿಯೊಳಗೆ..." ಅವನ ಮಾತಿನ್ನೂ ಪೂರ್ತಿಯಾಗುವುದಕ್ಕೆ ಮುಂಚೆಯೇ— "ಹೇಳ್ತೀನಿ... ಹೇಳ್ತೀನಿ..." ಎಂದ. ಈ ಸಲ ಡಿಕ್ಕಿಯೊಳಗೆ ಸೇರಿದರೆ ಸಾವೇ ಎಂದವನಿಗೆ ಗೊತ್ತಿತ್ತು.

"ಹೇಳು ಮತ್ತೆ—" ಕಾರನ್ನು ಮತ್ತೆ ಸ್ಟಾರ್ಟ್ ಮಾಡುತ್ತಾ ಕೇಳಿದ.

"ಜಪಾನ್‌ನಿಂದ ಭಾರತಕ್ಕೆ ಬರಲಿರುವ ಆಟದ ಬೊಂಬೆಗಳ ಷಿಪ್‌ನಲ್ಲಿ..."

"ಊ್ಞ . ಷಿಪ್‌ನಲ್ಲಿ...?

ಆದೇ ಸಮಯಕ್ಕೆ ಸರಿಯಾಗಿ ನಿರೀಕ್ಷಿಸಿರದ ಒಂದು ಒಂದು ಘಟನೆ ನಡೆಯಿತು. ಆ ಟೆರ್ರರಿಸ್ಟ್ ಮೊದಲೇ ಭಯಗೊಂಡಿದ್ದ, ಹೇಳದೆ ವಿಧಿಯಿಲ್ಲ. ಹೇಳಿದರೆ ಎಂದಾದರೂ ಅವರ ಕೈಯಲ್ಲಿ ಸಾವು. ಹೇಳದಿದ್ದರೆ ಈಗಲೇ ಸಾವು. ಈ ಡೋಲಾಯಮಾನ ಪರಿಸ್ಥಿತಿಯಲ್ಲಿ ಕೊನೆಯ ಪ್ರಯತ್ನ ಮಾಡಿದ. ಕೈಗಳನ್ನು ಕಟ್ಟಿದ್ದರೂ ಹ್ಯಾಂಡಲನ್ನು ತಿರುಗಿಸುವುದು ಕಷ್ಟವಾಗಲಿಲ್ಲ. ಒಂದೇ ಪೆಟ್ಟಿಗೆ ಕಾರು ಸ್ಟಾರ್ಟಾಗುವುದಕ್ಕೆ ಮುಂಚೆಯೇ ಡೋರ್ ತೆಗೆದು ಹೊರಗುರುಳಿ ಓಡಲು ಪ್ರಾರಂಭಿಸಿದ. ಆ ಗಡಿಬಿಡಿಯಲ್ಲಿ ಹಿಂದೆ ಬರುತ್ತಿದ್ದ ಲಾರಿಯನ್ನು ಗಮನಿಸಲೇ ಇಲ್ಲ. ಲಾರಿಯಕೆಳಗೆ ಸಿಕ್ಕಿಕೊಂಡ ಅವನ ಶರೀರ ಛಿದ್ರ ಛಿದ್ರವಾಯಿತು. ಎಲ್ಲಾ ಕೆಲವೇ ಕ್ಷಣಗಳಲ್ಲಿ ನಡೆದುಹೋಯಿತು.

ವಿಹಾರಿ, ಪ್ರವಲ್ಲಿಕರು ಚಲನಾರಹಿತರಾಗಿ ಪ್ರೇಕ್ಷಕರಂತೆ ನೋಡುತ್ತಿದ್ದರು. ರಸ್ತೆಯ ಪಕ್ಕದಲ್ಲಿ ರಕ್ತದ ಮುದ್ದೆಯಂತೆ ಬಿದ್ದಿದೆ A–5 ನ ಶರೀರ. ಪ್ರಾಣವಿನ್ನೂ ಹೋಗಿರಲಿಲ್ಲ—ಆದರೆ ತಲೆ ಮಾತ್ರ ಅಪ್ಪಚ್ಚಿಯಾಗಿತ್ತು.

* * * *

* * * * *

ಅನಂತಾನಂತಸ್ವಾಮಿ ಉಗ್ರನಾದ. ನಡೆದದ್ದು ನಡೆದಂತೆಯೇ ಅವನಿಗೆ ತಿಳಿದುಬಿಟ್ಟಿತು. ಒಬ್ಬ ಸತ್ತು ಹೋದ. ಮತ್ತೊಬ್ಬ ಸಾವು ಬದುಕಿನ ನಡುವೆ ಅವರ ಕೈಗೆ ಸಿಕ್ಕಿಹಾಕಿಕೊಂಡಿದ್ದ. ಅವನು ಅಪ್ರೂವರ್ ಆಗಿ ಬದಲಾದರೆ ಕಷ್ಟ. ಅವನಿಗೆ ತುಂಬಾ ರಹಸ್ಯಗಳು ಗೊತ್ತು.

"ಬದುಕುತ್ತಾನಾ?" ಎಂದು ಸ್ವಾಮಿ ಕೇಳಿದ.

"ತುಂಬಾ ಮೇಜರ್ ಆಪರೇಷನ್ ಸ್ವಾಮಿ. ಡಾಕ್ಟರ್ ದಯಾನಂದ ಕೃಷ್ಣ ಮೂರ್ತಿ ಮಾಡುತ್ತಿದ್ದಾರೆ. ಆತ ಸೂಪರ್ ಸ್ಪೆಷಲಿಸ್ಟ್...ಈ ಪ್ರದೇಶಕ್ಕೆಲ್ಲಾ ಪ್ರಖ್ಯಾತ ನ್ಯೂರೋ ಸರ್ಜನ್", ಅವನ ಮಾತಿನ್ನೂ ಪೂರ್ತಿಯಾಗಿರಲಿಲ್ಲ. ಅವನ ಮಾತನ್ನು ಮಧ್ಯದಲ್ಲೇ ತುಂಡರಿಸುತ್ತಾ "A-5 ಬಾಯಿ ಬಿಚ್ಚಕೂಡದು" ಜೋರಾಗಿ ಹೇಳಿದ ಸ್ವಾಮಿ. ಪರಮೇಶ್ವರ್ ತಲೆಯಾಡಿಸಿ ಅಲ್ಲಿಂದ ಹೊರಟು ಹೋದ.

* * * *

"ಅವನು ಹೇಗಾದರೂ ಬದುಕಬೇಕು ಅಂಕಲ್" ವಿಹಾರಿ ಹೇಳಿದ. ಡಾಕ್ಟರ್ ಕೃಷ್ಣಮೂರ್ತಿಯವರು ಮುಖ ತೊಳೆದುಕೊಳ್ಳುತ್ತಿದ್ದರು. ಪೇಷಂಟನ್ನು ಆಪರೇಷನ್ ಥೀಯೇಟರಿನೊಳಗೆ ಕರೆದೊಯ್ದಿದ್ದಾರೆಂದು ಫೋನ್ ಬಂತು.

"ಅವನು ಬದುಕಿದರೆ ಒಂದು ಅಂತರಾಷ್ಟ್ರೀಯ ದುಷ್ಟರ ಜಾಲ ಹೊರ ಬೀಳುತ್ತದೆ" ಎಂದಳು ಪ್ರವಲ್ಲಿಕ.

ಕೃಷ್ಣಮೂರ್ತಿ ಕನ್ನಡಕ ಹಾಕಿಕೊಂಡರು.

"ಹೇಗಾದರೂ ಸರಿ-ಅವನು ಮಾತನಾಡುವಂತೆ ಮಾಡಬೇಕು. ಅವನಿಗೆ ನೀವು ಪ್ರಾಣದಾನ ಮಾಡಬೇಕು. ಅಂಕಲ್ "

ಹೋಗುತ್ತಿದ್ದ ಡಾಕ್ಟರ್ ನಿಂತು .."ಡಾಕ್ಟರ್‌ಗಳಿಗೆ ಒಬ್ಬರು ಮುಖ್ಯ, ಮತ್ತೊಬ್ಬರು ಅಮುಖ್ಯರೆಂದಿಲ್ಲ. ಅಪಾಯದಲ್ಲಿರುವ ವ್ಯಕ್ತಿ ಯಾರೇ ಆಗಿರಲಿ ಅವನ ಪ್ರಾಣವನ್ನು ಉಳಿಸುವ ಪ್ರಯತ್ನ ಮಾಡುತ್ತೇನೆ" ಎಂದರು ನಿರ್ಧಾರದ ಧ್ವನಿಯಲ್ಲಿ. ವಿಹಾರಿ ಏನನ್ನೊ ಮಾತನಾಡಲು ಹೋದಾಗ, ಪದ್ಮಾಕರ್ ಸುಮ್ಮನಿರುವಂತೆ ಸನ್ನೆ ಮಾಡಿದ. ತಂದೆಯ ವಿಷಯ ಪದ್ಮಾಕರ್‌ಗೆ ಚೆನ್ನಾಗಿ ಗೊತ್ತು. ಅಷ್ಟರಲ್ಲಿ ಡಾಕ್ಟರಿಗೆ ಫೋನ್ ಬಂತು.

"ಡಾಕ್ಟರ್ ಕೃಷ್ಣಮೂರ್ತಿ ಹಿಯರ್..." ರಿಸೀವರೆತ್ತಿ ಹೇಳಿದರು.

"ಡಾಕ್ಟರ್! ಈಗ ನೀವು ಆಪರೇಷನ್ ಮಾಡಲು ಆಸ್ಪತ್ರೆಗೆ ಹೋಗುತ್ತಿದ್ದೀರಲ್ಲಾ ?"

"ಹೌದು!"

ಆ ಪೇಷಂಟ್ ಬದುಕಬಾರದು"

"ನಾನ್ಸೆನ್ಸ್! ಯಾರ್ರೀ ನೀವು?"

"ಆ ಪೇಷಂಟ್ ಬದುಕಿದರೆ ಕಷ್ಟ ಅನುಭವಿಸಬೇಕಾದವರು" ಫೋನ್ ಕಟ್ ಆಯಿತು.

ಅದರ ಬಗ್ಗೆ ತಲೆಕೆಡಿಸಿಕೊಳ್ಳದೆ ಡಾಕ್ಟರ್ ಕಾ ರ ನ್ನು ಹತ್ತಿದರು. ಅರ್ಧಗಂಟೆಯಲ್ಲಿ ನಡೆಯಬೇಕಾದ ಆಪರೇಷನ್ ಅದು. ವಿಹಾರಿ, ಪ್ರವಲ್ಲಿಕರು ಇರಬೇಕಾದ ಅವಶ್ಯಕತೆಯಿಲ್ಲವೆಂದು ಹೇಳಿದರು ಡಾಕ್ಟರ್. ಪದ್ಮಾಕರ್‌ಗೆ ತಿಳಿಸಿ ವಿಹಾರಿ ಮನೆಗೆ ಹೊರಟ. ಅವನ ಮೂಡ್ ಸರಿಯಾಗಿರಲಿಲ್ಲ ಟೆರ್‍ರಿಸ್ಟ್ ಬದುಕಬೇಕು. ಬದುಕಿದರೆ ಅದಕ್ಕಿಂತಲೂ ಮಿಗಿಲಾದದ್ದು ಏನಿದೆ?

...ಡಾಕ್ಟರ್ ಕೃಷ್ಣಮೂರ್ತಿಯವರ ಕಾರು ಆಸ್ಪತ್ರೆಯ ಮೆಟ್ಟಲಿನ ಬಳಿ ನಿಂತಿತು. ಒಳಗೆ ಉದ್ದನೆಯ ವರಾಂಡ...ಡ್ರೈವರ್ ಬಾಗಿಲು ತೆಗೆದು ನಿಂತ. ಡಾಕ್ಟರ್ ಇಳಿದು ಒಳಗೆ ಹೋಗುತ್ತಿದ್ದಂತೆಯೇ ರಿಸೆಪ್ಷನಿಸ್ಟ್, "ಸಾರ್, ನಿಮಗೆ ಫೋನ್" ಎಂದಳು.

"ನೀವು ಈ ಆಪರೇಷನ್ ಮಾಡಿ ಅವನನ್ನು ಉಳಿಸಿದರೆ ನಿಮಗೆ ನೀವು ಊಹಿಸದಷ್ಟು ನಷ್ಟ ಕಷ್ಟ ಉಂಟಾಗುತ್ತದೆ ಡಾಕ್ಟರ್. ನಂತರ ಚಿಂತಿಸಿದರೆ ಪ್ರಯೋಜನವಾಗುವುದಿಲ್ಲ" ಆ ಕಡೆಯಿಂದ ಕೇಳಿಸಿತು. "ನೀವ್ಯಾರು?" ಸರಿಯಾಗಿ ರಿಸೆಪ್ಷನಿಸ್ಟ್ ಬಳಿಗೆ ಬರುವ ವೇಳೆಗೆ, ಲೆಕ್ಕ ಹಾಕಿಕೊಂಡು ಫೋನ್ ಮಾಡಿದವರ ಜಾಣ್ಮೆಗೆ ಮನದಲ್ಲೇ ಮೆಚ್ಚಿಕೊಂಡು ಕೇಳಿದರು.

"ನಮಗೆ ಬೇಕಾದಂತೆ ಕೆಲಸ ಮಾಡಿದರೆ ಲಕ್ಷಾಂತರ ಹಣವನ್ನು, ಇಲ್ಲದಿದ್ದರೆ ಲಕ್ಷಾಂತರ ಜನರ ರಕ್ತವನ್ನು ಕಾಣುತ್ತೀರಿ. ನಿಮಗೆ ಯಾವುದು ಬೇಕೋ ನೀವೇ ನಿರ್ಧರಿಸಿಕೊಳ್ಳಿ."

"ನಮ್ಮ ಆಸ್ಪತ್ರೆಯ ಬ್ಲಡ್ ಬ್ಯಾಂಕಿನಲ್ಲಿ ರಕ್ತವಿಲ್ಲ. ನೀವು ಬಂದು ದಾನ ಮಾಡಿದರೆ ಸಂತೋಷವೇ."

"ಹಾಸ್ಯಬೇಡ ಡಾಕ್ಟರ್. ಯೋಚಿಸ್ಬೇಕಾಗುತ್ತೆ."

"ನನ್ನ ಪ್ರಾಣವನ್ನು ಧಾರೆ ಎರೆದಾದರೂ ಆ ಪೇಷಂಟನ್ನು ರಕ್ಷಿಸುತ್ತೇನೆ."

"ಅಂತಹ ವೇಳೆಯಲ್ಲಿ ಪ್ರಾಣಕ್ಕಿಂತಲೂ ಬೆಲೆ ಬಾಳುವುದನ್ನು ನೀವು ಕಳೆದುಕೊಳ್ಳಬೇಕಾಗುತ್ತದೆ."

ಕೃಷ್ಣಮೂರ್ತಿ ಸಿಟ್ಟಿನಿಂದ ಫೋನನ್ನು ಕುಕ್ಕಿದರು.

ಇಲ್ಲಿ ಈ ಸಂಭಾಷಣೆ ನಡೆಯುತ್ತಿದ್ದ ವೇಳೆಯಲ್ಲಿ ವಿಹಾರಿ ತನ್ನ ಮನೆಯೊಳಗೆ ಪ್ರವೇಶಿಸಿದ. ಕೃಷ್ಣಮೂರ್ತಿ ಆಪರೇಷನ್ ಥಿಯೇಟರ್ ಮುಂದಿದ್ದ ರೂಮಿನಲ್ಲಿ ಗ್ಲವ್ಸ್ ತೊಟ್ಟುಕೊಂಡರು. ಥಿಯೇಟರ್ ಮುಂದಿದ್ದ ರೆಡ್‌ಲೈಟ್ ಬೆಳಗಿತು. ಅವರು ಒಳಗೆ ಪ್ರವೇಶಿಸುತ್ತಿದ್ದಂತೆಯೇ ನರ್ಸ್ ಫೋನನ್ನು ತಂದು– "ಅರ್ಜಂಟಂತೆ ಸರ್" ಎಂದಳು.

ಅವರು ಬೇಸರದಿಂದ ಫೋನನ್ನು ತೆಗೆದುಕೊಂಡರು.

"ಕೊನೆಯ ಸಲ ಎಚ್ಚರಿಸುತ್ತಿದ್ದೇನೆ, ಇನ್ನು 5 ನಿಮಿಷಗಳಲ್ಲಿ ಪೇಷಂಟ್ ಸತ್ತುಹೋದ ಸುದ್ದಿ ಹೊರಬರದಿದ್ದರೆ ನಿಮ್ಮ ಮಗ ಪದ್ಮಾಕರನ ಶವವನ್ನು ಅದೇ ಟೇಬಲ್‌ಮೇಲೆ ಪೋಸ್ಟ್‌ಮಾರ್ಟಂ ಮಾಡಬೇಕಾಗುತ್ತದೆ ಡಾಕ್ಟರ್"

"ಷಟಪ್" ಎಂದು ನರ್ಸ್‌ಕಡೆ ತಿರುಗಿ, "ಆಪರೇಷನ್ ಥಿಯೇಟರುಗಳಲ್ಲಿ ಕೂಡಾ ಫೋನನ್ನು ತಂದುಕೊಡುವ ಕೆಟ್ಟ ರೂಢಿಯನ್ನು ನೀವು ಎಂದಿನಿಂದ ಪ್ರಾರಂಭಿಸಿದಿರಿ?" ಎಂದು ಕೇಳಿದರು.

ಅವಳು ನಡುಗುತ್ತ, "ಸಾರಿ ಡಾಕ್ಟರ್" ಅಂದಳು. ಅವರು ಹೋಗೆಂದು ಸನ್ನೆ ಮಾಡಿದರು.

ಅನೇಸ್ತಸಿಷ್ಟ್ 'ರೆಡಿ' ಎಂಬಂತೆ ತಲೆ ಆಡಿಸಿದ.

ಆಪರೇಷನ್ ಪ್ರಾರಂಭವಾಯಿತು.

* * * *

"ಕೊನೆಯ ಸಲ ಎಚ್ಚರಿಸುತ್ತಿದ್ದೇನೆ" ಎಂದು ಎಚ್ಚರಿಕೆ ನೀಡಿದ್ದ ಪರಮೇಶ್ವರ್ ಅತ್ತಕಡೆಯಿಂದ 'ಷಟಪ್' ಎನ್ನಿಸಿಕೊಂಡ ಕೂಡಲೇ ಮತ್ತೊಂದು ನಂಬರಿಗೆ ಡಯಲ್ ಮಾಡಿದ.

"ಐದು ನಿಮಿಷಗಳಲ್ಲಿ A–5 ಸತ್ತ ಸುದ್ದಿ ಆಸ್ಪತ್ರೆಯಿಂದ ಬರದಿದ್ದರೆ ಆ ಡಾಕ್ಟರ್ ಮಗನನ್ನು..."ಎಂದು ಸೂಚನೆ ಕೊಟ್ಟ.

ಅತ್ತ ಕಡೆಯಿಂದ ಏನೋ ಪ್ರಶ್ನೆ.

"ಹೌದು. ಅವನ ಹೆಸರು ಪದ್ಮಾಕರ್" ಎಂದ ಫೋನಿಡುತ್ತಾ. ಬಾಗಿಲಿನ ಬಳಿ ನಿಂತಿದ್ದ ವ್ಯಕ್ತಿಯನ್ನು ಕಂಡು ಬೆಚ್ಚಿಬಿದ್ದ.

ಎಷ್ಟು ಹೊತ್ತಿನಿಂದ ಹಾಗೆ ನಿಂತಿದ್ದನೋ ತಿಳಿಯದಾಗಲೀ ವಿಹಾರಿ ತನ್ನ ತಂದೆಯನ್ನೇ ಗಮನಿಸುತ್ತಿದ್ದ. ಅವನ ಮುಖ ದಿಗ್‌ಭ್ರಮೆಯಿಂದ ಕೆಂಪಗಾಗಿತ್ತು, ತಾನು ಕೇಳಿದ ಮಾತುಗಳು ನಿಜವಾ, ಸುಳ್ಳಾ ಎಂದು ನಂಬದವನಂತೆ...ಅವನ ಶರೀರವೆಲ್ಲಾ ಕಂಪಿಸುತ್ತಿತ್ತು.

"ಅ...ಪ್ಪಾ" ನಡುಗುವ ಸ್ವರದಲ್ಲಿ ಹೇಳಿದ. 'ಅಪ್ಪ' ಎಂಬ ಪದಕ್ಕೆ ಅರ್ಥವೇ ಇಲ್ಲದಂತೆ ಇತ್ತು ಆ ಮಾತು. ಎಲ್ಲಾ ಹೊರ ಬಂದಂತಿತ್ತು! ಸರ್ವವೂ ತಿಳಿದುಬಿಟ್ಟಿತ್ತು!!!

ಲಾಯರ್ ಪರಮೇಶ್ವರ್! ಡೆಲ್ಲಿ...ಸುಪ್ರೀಂ ಕೋರ್ಟ್...ಪ್ರವಲ್ಲಿಕಳ ಮಾತುಗಳು...ಸ್ವಾಮಿಯ ಬಲಭುಜ...ಮೂಲಸ್ತಂಭ...ಪರಮೇಶ್ವರ್, ತನ್ನ ತಂದೆ...

ಏನೋ ಹೇಳಲು ಹೋಗಿ ಹಾಗೆಯೇ ನಿಂತುಬಿಟ್ಟ. ಐದು ನಿಮಿಷಗಳು ಮಾತ್ರ ಉಳಿದಿದೆ ತನ್ನ ಸ್ನೇಹಿತನನ್ನು ಉಳಿಸಿಕೊಳ್ಳಲು.

ಅಪ್ರಯೋಜಕ ವಾದದಿಂದ ಸಮಯ ಕಳೆಯಲು ಅವನಿಗಿಷ್ಟವಿಲ್ಲ. ಗಾಳಿಯಂತೆ ಹೊರನುಗ್ಗಿದ. ನಾಲ್ಕು ನಿಮಿಷಗಳಲ್ಲೇ ಅವನ ವಾಹನ ಪದ್ಮಾಕರನ ಮನೆಯ ಮುಂದೆ ಕಿರ್ರನೆ ನಿಂತಿತು. ಒಳಗೆ ಓಡಿದ. ಪದ್ಮಾಕರನ ಕೋಣೆಯೊಳಗೆ ಹೋಗುತ್ತಿದ್ದಂತೆಯೇ ಕೆಲಸದವನು ಹೇಳಿದ, "ಅವರಿಲ್ಲ ಸಾರ್ ಈಗ ತಾನೇ ಯಾವುದೋ ಫೋನ್ ಬಂತು, ಹೊರಟು ಹೋದರು."

ಷಾಕ್ ತಗುಲಿದಂತೆ...ಬೆಚ್ಚಿ ಬಿದ್ದ.

ಪದ್ಮಾಕರ್ ಶತ್ರುಗಳ ಟ್ರಾಪ್‌ನೊಳಗೆ ಹೊರಟು ಹೋದನಾ.. ಹೇಗೆ... ಹೇಗೆ ಇದನ್ನು ತಡೆಯುವುದು?

ವಿಹಾರಿಗೆ ಏನು ಮಾಡಬೇಕೆಂದೇ ತೋಚಲಿಲ್ಲ. ಪದ್ಮಾಕರ್‌ಗಾಗಿ ಎಲ್ಲೆಂದು ಹುಡುಕುವುದು?

ಕ್ಷಣಗಳು ಕಳೆಯುತ್ತಿದ್ದಂತೆಯೇ ಅವನ ಮನಸ್ಸಿನಲ್ಲಿ ಭಯ ಹೆಚ್ಚಾಯಿತು. ಎಲ್ಲಿಂದ ಫೋನ್ ಬಂತೋ ಗೊತ್ತಿಲ್ಲ. ಅನ್ಯಮನಸ್ಕನಾಗಿ ಬಂದು ಕಾರಿನಲ್ಲಿ ಕುಳಿತು, ಒಂದು ಗುರಿ ಇಲ್ಲದವನಂತೆ ಡ್ರೈವ್ ಮಾಡತೊಡಗಿದ. ಹಾಗೆ ಎಷ್ಟುಹೊತ್ತು ಕಳೆಯಿತೋ ಗೊತ್ತಿಲ್ಲ. ನೋಡಿದರೆ ಆಸ್ಪತ್ರೆಯ ಮುಂದಿದ್ದ.

ಪಾರ್ಕಿಂಗ್ ಜಾಗದಲ್ಲಿ ಕಾರನ್ನು ನಿಲ್ಲಿಸಿ ಒಳಗೆ ಹೋದ.

ಒಳಗೆ ವರಾಂಡದಲ್ಲಿ ಪ್ರವಲ್ಲಿಕ ನಿಂತು ಥಿಯೇಟರಿನಿಂದ ಬರುವ ಸುದ್ದಿಗಾಗಿ ಕಾಯುತ್ತಿದ್ದಾಳೆ, ಆಪರೇಷನ್ ಪ್ರಾರಂಭವಾಗಿ ಆಗಲೇ ಮೂರು ಗಂಟೆಗಳ ಮೇಲಾಗಿದೆ. ಅವಳ ಕಣ್ಣುಗಳು ಸುತ್ತಲಿನ ಪರಿಸರವನ್ನು ಸೂಕ್ಷ್ಮವಾಗಿ ಗಮ

ನಿಸುತ್ತಿತ್ತು. ಒಂದು ಮುಖ್ಯವಾದ ಸಾಕ್ಷ್ಯಾಧಾರ ಒಳಗಿದೆಯೆಂದು ಶತ್ರುಗಳಿಗೆ ಗೊತ್ತು. ಅವರು ಆಗಲೇ ಡಾಕ್ಟರನ್ನು ಎಚ್ಚರಿಸಿದ್ದಾರೆ. ಅವಳು ಒದಗಬಹುದಾದ ಅಪಾಯವನ್ನು ಗ್ರಹಿಸಿ ಆಗಲೇ ಆಸ್ಪತ್ರೆಗೆ ಬಂದಿದ್ದಳು. ಡಾಕ್ಟರ್ ತಮ್ಮ ಮಾತು ಕೇಳಿಲ್ಲವೆಂದು ತಿಳಿದ ಮರುಕ್ಷಣವೇ, ಅಪ್ರೂವರ್‌ನ ಪ್ರಾಣ ಅಪಾಯದಲ್ಲಿ ಬೀಳುತ್ತದೆ.

ಪೋಲೀಸರ ಸಹಾಯ ಪಡೆಯುವುದು ಅವಳಿಗಿಷ್ಟವಿರಲಿಲ್ಲ. ವಿಹಾರಿಯ ಮಾತುಗಳಿನ್ನೂ ಅವಳ ತಲೆಯಲ್ಲಿ ಪ್ರತಿಧ್ವನಿಸುತ್ತಿತ್ತು. ಈ ಸಾಕ್ಷಿಯನ್ನು ತಮ್ಮ ಬಳಿಯೇ ಇರಿಸಿಕೊಂಡು ಸ್ವಾಮಿಯನ್ನು ಆಟ ಆಡಿಸಬೇಕೆಂದು ನಿರ್ಧರಿಸಿಕೊಳ್ಳುತ್ತಿದ್ದಳು, ಅಷ್ಟರಲ್ಲೇ ವಿಹಾರಿ ಅಲ್ಲಿಗೆ ಬಂದ.

ಅವಳು ಅವನನ್ನು ಕಂಡು ಆಶ್ಚರ್ಯದಿಂದ "ಹಾಗೇಕೆ ಇದ್ದೀರಿ?" ಎಂದು ಕೇಳಿದಳು.

ಅವನು ಉತ್ತರಿಸದೆ ಅವಳ ಮುಖವನ್ನೇ ನೋಡಿದ. ಅವನ ಮನಸ್ಸೆಲ್ಲ ಅದೊಂದು ರೀತಿಯ ಕೃತಜ್ಞತಾಭಾವದಿಂದ ತುಂಬಿಹೋಗಿತ್ತು. ಅದು ಕೃತಜ್ಞತೆ ಕೂಡಾ ಅಲ್ಲ. ಅದಕ್ಕಿಂತ ಮಿಗಿಲಾದದ್ದೇನೋ...

ಇವಳಿಗೆ ತನ್ನ ತಂದೆ ಎಂತಹವನೆಂದು ಗೊತ್ತು. ಅವರ ಬದುಕಿಗೆ ಅವನೆಷ್ಟೋ ದ್ರೋಹಬಗೆದಿದ್ದ. ಆದರೂ ಅವನ ಸಂತೋಷವನ್ನು ಹಾಳುಮಾಡಲು ಇಷ್ಟವಿಲ್ಲದೆ ಆ ವಿಷಯವನ್ನು ಹೇಳಲಿಲ್ಲ. ತನ್ನ ತಂದೆಯ ಬಗ್ಗೆ ಒಂದು ಸಲವಾದರೂ ಕೆಟ್ಟದಾಗಿ ಮಾತನಾಡಲಿಲ್ಲ...ಅವಳು ಮತ್ತೇನೋ ಕೇಳಲು ಪ್ರಯತ್ನಿಸುತ್ತಿದ್ದಂತೆಯೇ ಆಪರೇಷನ್ ಥಿಯೇಟರಿನ ಕೆಂಪು ದೀಪ ಆರಿತು. ಡಾಕ್ಟರ್ ದಯಾನಂದ ಕೃಷ್ಣಮೂರ್ತಿ ಮುಖ ಒರೆಸಿಕೊಳ್ಳುತ್ತಾ ಹೊರಬಂದಳು. ಹೊರಗೆ ನಿಂತಿದ್ದ ಇಬ್ಬರ ಕಡೆಗೂ ನೋಡಿ ಆಪರೇಷನ್ ಸಕ್ಸಸ್ ಎಂಬಂತೆ ತಲೆ ಆಡಿಸಿದರು. ಹಿಂದೆಯೇ ಪೇಷಂಟ್‌ನನ್ನು ಹೊತ್ತಿದ್ದ ಸ್ಟ್ರೆಚರ್ ಆಪರೇಷನ್ ಥಿಯೇಟರಿನಿಂದ ಹೊರಬಂತು.

* * * *

'ಅರ್ಜಂಟಾಗಿ ಬಾ' ಎಂದು ಫೋನ್ ಬಂದ ಕೂಡಲೇ ಪದ್ಮಾಕರ್ ಗಡಿಬಿಡಿಯಿಂದ ಬಂದಿದ್ದರೂ ಅವನಿಗೆ ಅಲ್ಲಿ ಯಾರೂ ಕಾಣಲಿಲ್ಲ.

ಯಾರೋ ಹುಡುಗಿ.

ತನಗೆ ಕೂಡಾ ಸುನಾದಮಾಲಳಂತಹ ಹುಡುಗಿಯೇನಾದರೂ ಫೋನ್ ಮಾಡುತ್ತಿದ್ದಾಳಾ ಎಂದು ಗಡಿಬಿಡಿಯಿಂದ ಹೊರಟಿದ್ದ.

ಪಾರ್ಕು ನಿರ್ಮಾನುಷ್ಯವಾಗಿತ್ತು. ಮಟಮಟ ಮಧ್ಯಾಹ್ನ ಹನ್ನೆರಡಾಗಿತ್ತು. ತನ್ನನ್ನು ಯಾರಾದರೂ ಫೂಲ್‌ಮಾಡಲು ಪ್ರಯತ್ನಿಸುತ್ತಿದ್ದಾರಾ ಎಂಬ ಅನುಮಾನವೂ ಬಂತು. ದೂರದಲ್ಲಿ ಯಾರೋ ಹುಲಿಯವೇಷ ಹಾಕಿಕೊಂಡು ಡ್ಯಾನ್ಸ್ ಮಾಡುತ್ತಿದ್ದುದು ಕಂಡಿತು.

ತನಗೆ ಫೋನ್‌ಮಾಡಿದ ಹುಡುಗಿಯ ಕಂಠವನ್ನು ಇದಕ್ಕೂ ಮುಂಚೆ ಎಂದಾದರೂ ಕೇಳಿದ್ದೀನಾ ಎಂದು ಯೋಚಿಸಿದ. ಯೋಚಿಸುತ್ತಲೇ ಬೈಕಿನ ಬಳಿಗೆ ನಡೆಯತೊಡಗಿದ. ಮತ್ತೊಬ್ಬ ಹುಲಿವೇಷದವನು ಹತ್ತಿರವಾದ.

ವಿಜಯದಶಮಿ ಹತ್ತಿರವಾಗುತ್ತಿದೆಯೆಂದುಕೊಂಡ. ಅಷ್ಟೇ ವಿನಾ ಬಳಿಗೆ ಬಂದಿರುವ ಮೃತ್ಯುವನ್ನು ಗಮನಿಸಲಿಲ್ಲ. ಇಬ್ಬರು ಮೂವರಾದರು, ಮೂವರು ನಾಲ್ವರಾದರು. ವಿಕೃತವಾಗಿ ಡ್ಯಾನ್ಸ್ ಮಾಡುತ್ತಾ ಹತ್ತಿರವಾದರು. ಅವರ ಕೈಗಳಲ್ಲಿ ಕತ್ತಿಗಳಿದ್ದವು. ಆಗಲೂ ಅವನಿಗೆ ಅನುಮಾನ ಬರಲಿಲ್ಲ.

ನಗುತ್ತಾ ಜೇಬಿನಿಂದ ಪರ್ಸ್ ತೆಗೆಯಲು ಹೋದ. ಹಿಂದಿನಿಂದ ಯಾರೋ ಕತ್ತಿಯಿಂದ ಚುಚ್ಚಿದರು. ಮೊಣಕೈಗೆ ತಗುಲಿತ್ತು. ತಕ್ಷಣ ಹಿಂತಿರುಗಿ ನೋಡಿದ. ಮತ್ತೆ ಕತ್ತಿಯನ್ನು ಎತ್ತಿದ ಆ ವ್ಯಕ್ತಿ. ಪದ್ಮಾಕರ್ ಅವನನ್ನು ಪಕ್ಕಕ್ಕೆ ತಳ್ಳಿದ. ಅಷ್ಟರಲ್ಲಿ ಪಕ್ಕಗಳಲ್ಲಿ ನಿಂತಿದ್ದವರು ಅವನ ಹೊಟ್ಟೆಗೆ ಇರಿದರು. ರಕ್ತ ಚಿಮ್ಮಲು ಪ್ರಾರಂಭಿಸಿತು. ಕುಸಿದು ಬಿದ್ದ ..ಮತ್ತೊಂದು ಇರಿತ...ಅದರ ನಂತರ ಮತ್ತೊಂದು.

ಅವರು ತನ್ನ ಪ್ರಾಣವನ್ನು ತೆಗೆಯಲು ಬಂದಿದ್ದಾರೆಂದು ತಿಳಿದು ಹೋಯಿತು. ಕಾರಣವೇ ಗೊತ್ತಿಲ್ಲ. ತುಂಬಾ ಭಯಂಕರವಾದ, ನಿಸ್ಸಹಾಯಕವಾದ ಪರಿಸ್ಥಿತಿ. ಯಾರು ಸಾಯಿಸುತ್ತಿದ್ದಾರೋ ಏತಕ್ಕೆ ಸಾಯಿಸುತ್ತಿದ್ದಾರೋ ತಿಳಿಯುತ್ತಿಲ್ಲ.

ಹುಲಿವೇಷಧಾರಿಗಳು ಮತ್ತೆ ಸುತ್ತುವರೆದರು.

ಪದ್ಮಾಕರ್ ತನ್ನ ಶಕ್ತಿಯನ್ನೆಲ್ಲಾ ಮತ್ತೆ ಕೈಗಳಲ್ಲಿ ತೆಗೆದುಕೊಂಡ. ಸಾವು ಹೇಗೂ ನಿಶ್ಚಿತವೆಂದು ಅವನಿಗೆ ತಿಳಿದುಬಿಟ್ಟಿತ್ತು. ಹಠಾತ್ತನೆ ಮೇಲೆದ್ದು ಒಬ್ಬನ ಕೈಯಲ್ಲಿದ್ದ ಕತ್ತಿಯನ್ನು ಕಸಿದುಕೊಂಡ. ಎದುರಾಳಿ ಇದನ್ನು ನಿರೀಕ್ಷಿಸಿರದಿದ್ದುದರಿಂದ, ಅವನಿನ್ನೂ ಚೇತರಿಸಿಕೊಳ್ಳುವ ಮುಂಚೆಯೇ ಅವನ ಕತ್ತಿನ ಬಳಿ ಚುಚ್ಚಿದ. ಅವನ ಕಿರುಚಾಟದ ಧ್ವನಿ ಪಾರ್ಕಿನಲ್ಲೆಲ್ಲಾ ಪ್ರತಿಧ್ವನಿಸಿತು. ಅಷ್ಟರಲ್ಲಿ ಮತ್ತೊಬ್ಬ ಪದ್ಮಾಕರನ ಬೆನ್ನಿಗೆ ಕತ್ತಿಯಿಂದ ಚುಚ್ಚಿದ್ದ. ಪ್ರಾಣಹೋಗುತ್ತಿರುವ ವಿಷಯ ಅವನಿಗೆ ತಿಳಿಯಿತು. ಪದ್ಮಾಕರ್ ಹಿಂತಿರುಗಿ ಅದೇ ವೇಗದಲ್ಲಿ ಎರಡನೆಯವನ ಎದೆಗೂ ಕತ್ತಿಯಿಂದ ಚುಚ್ಚಿದ.

ಪದ್ಮಾಕರನೊಡನೆ ಇನ್ನಿಬ್ಬರೂ ಕುಸಿದು ಬಿದ್ದರು ನೆಲದ ಮೇಲೆ. ಉಳಿದವರು ಹೊರಟು ಹೋದರು. ಕೆಲದಿನಗಳ ಹಿಂದೆ ಇದೇ 'ಸೀನ'ನ್ನು ನಟಿಸಿದ್ದ. ಈಗ ನಿಜವಾಗಿತ್ತು ಅದು. ವಿಧಿ ಆಡಿದ ದುಬಾರಿ ಆಟದಲ್ಲಿ ನಾಣ್ಯ ಆಗಿ ಅಂಗಾತ ಬಿದ್ದಿದ್ದ ಪದ್ಮಾಕರ್. ಒಂದೊಂದೇ ಪ್ರಾಣಹೋಗುತ್ತಿತ್ತು. ಮೇಲೆ ಆಕಾಶ ಕಾಣುತ್ತಿತ್ತು. ಸೂರ್ಯಕಿರಣಗಳು ನೇರವಾಗಿ ಕಣ್ಣಗಳಲ್ಲಿ ಬೀಳುತ್ತಿವೆ. ಕಣ್ಮುಚ್ಚಲು ಪ್ರಯತ್ನಿಸಿದ. ರೆಪ್ಪೆಗಳು ಸಹಕರಿಸಲಿಲ್ಲ. ಪ್ರಾಣಹೋಗುವುದೆಂದರೇನೆಂದು ಅರ್ಥವಾಗುತ್ತಿತ್ತು. ಅವನಿಗೆ ದುಃಖ ಬರಲಿಲ್ಲ. ವಿಹಾರಿ ನೆನಪಾದ. ಸ್ನೇಹ, ನಾಟಕದ ಗುಂಪು, ಬಾಲ್ಯ, ಯೌವ್ವನದ ಮೊದಲ ದಿನಗಳು ನೆನಪಾದವು. ಸಾವೆಂದರೆ ಏನು? ಯಾರೋ ಬುದ್ಧಿವಂತ ಹೇಳಿದಂತೆ ನಮ್ಮನ್ನು ಬಿಟ್ಟು ಉಳಿದೆಲ್ಲಾ ಪ್ರಪಂಚ ಹಾಗೆಯೇ ಇರುವುದು! ತನ್ನನ್ನು ಯಾರು ಕೊಂದರೋ, ಏಕೆ ಕೊಂದರೋ ಅವನಿಗೆ ತಿಳಿಯಲೇ ಇಲ್ಲ. ಅವನಿಗೆ ಚಿಕ್ಕಂದಿನಲ್ಲಿ ಮರಣ ಹೊಂದಿದ ತನ್ನ ತಾಯಿಯ ನೆನಪಾಯಿತು. ಸಾಕಿ ಬೆಳೆಸಿದ ತಂದೆಯ ನೆನಪಾಯಿತು. ಆತ ಈಗ ತನ್ನನ್ನು ನೋಡಿದರೆ ಬದುಕಿಸಬಲ್ಲರಾ? ಅಷ್ಟು ದೊಡ್ಡ ಡಾಕ್ಟರ್ ಬದುಕಿಸಲಾರರಾ? ಅವರು ತನ್ನ ಶರೀರವನ್ನು ಈ ಪಾರ್ಕಿನಲ್ಲಿ ಎಷ್ಟು ಹೊತ್ತಿಗೆ ನೋಡುತ್ತಾರೆ? ಅದುವರೆವಿಗೂ ಈ ಪ್ರಾಣ ಅದೆಷ್ಟು ದೂರ ಪ್ರಯಾಣ ಮಾಡಿರುತ್ತದೆ? ತನ್ನ ತಂದೆ ಕೂಡಾ ವಾಪಸ್ಸು ತರಲಾದಷ್ಟು ದೂರ...ಅಂದಹಾಗೆ ತಾನು ಸ್ವರ್ಗಕ್ಕೆ ಹೋಗುತ್ತಾನಾ? ನರಕಕ್ಕಾ? ಇನ್ನು ಕೆಲವೇ ಕ್ಷಣಗಳಲ್ಲಿ ಗೊತ್ತಾಗುತ್ತಲ್ಲಾ, ಏಕಿಷ್ಟು ಆತುರ ತನಗೆ? ಅವನಿಗೆ ನಗು ಬಂತು.

ನಗುವಿನಲ್ಲೇ ಪ್ರಾಣಹೋಯಿತು.

## 15

ವೆರಾಂಡದಲ್ಲಿ ನಿಂತಿದ್ದ ವಿಹಾರಿ ಡಾಕ್ಟರ್ ಕೃಷ್ಣಮೂರ್ತಿಯವರ ಬಳಿಗೆ ಬಂದ. "ಸಂಜೆಗೆ ಎಚ್ಚರ ಬರುತ್ತದೆ. ಆದರೆ ಅವನನ್ನು ಇನ್ನೂ ಎರಡು ಮೂರು ದಿನಗಳ ಕಾಲ ಮಾತನಾಡಿಸದೇ ಇರುವುದು ಉತ್ತಮ" ಎಂದು ಹೇಳಿದರು ಡಾಕ್ಟರ್.

"ಅವನು ನಮ್ಮ ಬಳಿಯಲ್ಲಿರುವ ವಿಷಯವನ್ನು ರಹಸ್ಯವಾಗಿ ಇಡಬೇಕು

ಡಾಕ್ಟರ್" ಪ್ರವಲ್ಲಿಕ ಹೇಳಿದಳು.

ಡಾಕ್ಟರ್ ತಲೆ ಆಡಿಸಿದರು,

ಅಷ್ಟರಲ್ಲಿ A-5 ನ್ನು ತರುತ್ತಿದ್ದ ಸ್ಟ್ರೆಚರ್ ಅವರ ಬಳಿಗೆ ಬಂತು. ಡಾಕ್ಟರ್ ಅದರ ಕಡೆಗೆ ನೋಡಿದರು. ಆ ನೋಟದಲ್ಲಿ ಸಂತೃಪ್ತಿ ಇತ್ತು, ಎಷ್ಟೋ ಗಂಟೆಗಳ ಕಾಲ ಕಷ್ಟಪಟ್ಟಿದ್ದರ ಫಲ. ತಮ್ಮ ಮೆದುಳಿನ ಏಕಾಗ್ರತೆ, ತಮ್ಮ ವೃತ್ತಿಯ ಬಗ್ಗೆ ಕೃತಜ್ಞತೆ-ಆ ನೋಟದಲ್ಲಿತ್ತು. ಕೇವಲ ಡಾಕ್ಟರ್‌ಗಳಿಗೆ ಮಾತ್ರ ತಿಳಿಯುತ್ತದೆ ಆ ಸಂತೃಪ್ತಿ.

ಸ್ಟ್ರೆಚರ್ ಸ್ಪೆಷಲ್ ವಾರ್ಡ್ ಬಳಿಗೆ ಬಂತು.

ಎದುರಿನಲ್ಲಿ ಮತ್ತೊಂದು ಸ್ಟ್ರೆಚರ್ ಬಂತು.

ಕೃಷ್ಣಮೂರ್ತಿಯವರ ಹಣೆಯ ಮೇಲೆ ಅಡ್ಡ ಗೆರೆಗಳು ಮೂಡಿದವು. ಮತ್ತೆ ಇನ್ನೊಂದು ಆಪರೇಷನ್?

—ಬೇಕಾಗಿಲ್ಲವೆಂಬಂತೆ ಆ ಸ್ಟ್ರೆಚರ್ ಅವರ ಮುಂದೆ ನಿಂತಿತು. ಸುಮ್ಮನೆ ಅದರೆಡೆಗೆ ನೋಡಿದ ಡಾಕ್ಟರ್ ಕೃಷ್ಣಮೂರ್ತಿ ಸಂಪೂರ್ಣವಾಗಿ ನಡುಗಿ ಹೋದರು. ನೋಡುತ್ತಿರುವುದು ಕನಸಾ, ನಿಜವಾ, ಎಂಬ ಸಂದಿಗ್ಧತೆಯಲ್ಲಿ ಸ್ವಲ್ಪ ಹೊತ್ತು ಗಲಿಬಿಲಿಗೊಂಡವರಂತೆ ಕಂಡರು. ಆ ನಂತರ ಎಲ್ಲಾ ದಿಕ್ಕುಗಳಿಗೂ ಕೇಳಿಸುವಂತೆ "ಪದ್ಮಾಕರಾ..." ಎಂದು ಕಿರುಚಿದ ಶಬ್ದವನ್ನು ಸಂಸ್ಕಾರ ಮುಚ್ಚಿಬಿಟ್ಟಿತ್ತು. ಆದರೆ ಆ ವಾತ್ಸಲ್ಯವನ್ನು ಮುಚ್ಚಲಾಗಲಿಲ್ಲ. ಸತ್ತುಹೋದ ಒಬ್ಬನೇ ಒಬ್ಬ ಮಗನನ್ನು ಕೈಗಳಲ್ಲಿ ತೆಗೆದುಕೊಂಡು ಹೃದಯವಿದ್ರಾವಕವಾಗಿ ಗೋಳಾಡಿದರು. ಉಳಿದ ಸ್ಟಾಫೆಲ್ಲಾ ಪ್ರೇಕ್ಷಕರಂತೆ ದೂರ ನಿಂತು ಸಹಾನುಭೂತಿಯಿಂದ ನೋಡುತ್ತಿದ್ದರೇ ವಿನಃ ಸಮಾಧಾನಗೊಳಿಸುವ ಸಾಹಸವನ್ನು ಯಾರೂ ಮಾಡಲಿಲ್ಲ.

ವಿಹಾರಿ ಸ್ತಬ್ಧನಾಗಿ ನಿಂತುಬಿಟ್ಟ. ಆ ತಂದೆ ಪದ್ಮಾಕರನನ್ನು ಎಷ್ಟು ಪ್ರೀತಿಸುತ್ತಿದ್ದರೆಂದು ಅವನಿಗೆ ಗೊತ್ತಿತ್ತು. ಒಬ್ಬನೇ ಮಗನನ್ನು ಅವನು ಕೇಳಿದ್ದನ್ನೆಲ್ಲಾ ಇಲ್ಲವೆನ್ನದೆ ಕೊಡುತ್ತಾ ಬೆಳೆಸಿದ್ದರು. ಹೆಂಡತಿ ಸತ್ತ ನಂತರ ಮಗನೇ ಅವರಿಗೆ ಪ್ರಪಂಚ ಆಗಿದ್ದ. ವೃತ್ತಿ, ಮಗ ಎರಡನ್ನು ಬಿಟ್ಟರೆ ಡಾಕ್ಟರ್ ಕೃಷ್ಣಮೂರ್ತಿಗೆ ಪ್ರಪಂಚದಲ್ಲಿ ಬೇರೇನೂ ಇರಲಿಲ್ಲ. ಈಗ ವೃತ್ತಿಗಾಗಿ ಮಗನನ್ನು ಕಳೆದುಕೊಳ್ಳಬೇಕಾಯಿತು. ವಿಹಾರಿಯ ಮನಸ್ಸನ್ನೆಲ್ಲಾ ಶೂನ್ಯ ಆವರಿಸಿತ್ತು. ಪದ್ಮಾಕರ್ ತುಂಬಾ ಬುದ್ಧಿವಂತನಾಗಿರದೇ ಇರಬಹುದು. ಹೆಚ್ಚು ಓದಿರದೇ ಇರಬಹುದು. ಆದರೆ ಅವನ ಹೃದಯ ಕೋಮಲ, ನಗು ಅವನ ಆಭರಣ, ಅವನಿಗೆ ನೋವೆಂದರೇನೆಂದೇ ತಿಳಿಯದಷ್ಟು ನಿಷ್ಕಲ್ಮಷ ಮನಸ್ಸು, ಸದಾ ನಗು

ನಗುತ್ತಲೇ ಇರುತ್ತಿದ್ದ.

ಅವನಿಗೆ 'ಏನೀ ಪ್ರಪಂಚ' ಎನ್ನಿಸಿತು, ಸತ್ತು ಹೋದ ವಿನೀಲ್ ನೆನಪಾದ. ಆಗ ವಿನೀಲ್... ಈಗ ಪದ್ಮಾಕರ್... ಪಂಜಾಬಿನಲ್ಲಿ ಸಾಯುತ್ತಿರುವ ಮುಗ್ಧ ರೈತರ ಪ್ರತೀಕ, ತಮ್ಮ ತಪ್ಪೇನೂ ಇಲ್ಲದೆ ಟೆರ್ರರಿಸ್ಟ್‌ಗಳು ಆಡುವ ಆಟದಲ್ಲಿ ಬಲಿಯಾಗುವ ಕಾಯಿಗಳು.

ಅವನ ಕಣ್ಣಲ್ಲಿ ನೀರುಬಂತು.

ಅಚೇತನನಾದ ಪದ್ಮಾಕರನನ್ನು ನೋಡಲು ಮನಸ್ಸಾಗಲಿಲ್ಲ, 'ಇದೆಲ್ಲಾ ನಿನ್ನಿಂದಲೇ–ನಿನ್ನಿಂದಲೇ' ಎಂದು ತನ್ನ ಸ್ನೇಹಿತ ತಲೆಯೆತ್ತಿ ಹೇಳುತ್ತಿರುವಂತೆ ಅನ್ನಿಸುತ್ತಿತ್ತು. ಪ್ರೀತಿ ಎಂಬುದು ಕೊನೆಯ ನೋಟದಲ್ಲಿರುವುದಿಲ್ಲ. ಅವನು ತನ್ನ ಹೃದಯದಲ್ಲಿದ್ದಾನೆ. ತನ್ನ ಕಣ್ರೆಪ್ಪೆಯಂತಿದ್ದ ಸ್ನೇಹಿತನನ್ನು ನೋಡಲು ಸ್ಟ್ರೆಚರ್ ಬಳಿಗೆ ಏಕೆ ಹೋಗಬೇಕು?

ಒಂದು ರೀತಿಯ ವೇದಾಂತದಿಂದ ಕೂಡಿದ ನಿರ್ಲಿಪ್ತ ಭಾವನೆ ಮನಸ್ಸೆಲ್ಲಾ ತುಂಬಿದ್ದರಿಂದ ಅವನು ಹೊರಗೆ ವರಾಂಡದಲ್ಲಿ ಬಂದು ನಿಂತ. ದುಷ್ಟ ಹುಡುಗನೊಬ್ಬ ಕ್ಯಾಟಾಪುಲ್ಟ್‌ನಿಂದ ರೆಕ್ಕೆ ಮೂಡದ ಪಕ್ಷಿಗೆ ಕಲ್ಲಿನಿಂದ ಹೊಡೆದುರುಳಿಸಿದಾಗ ಮರದ ಮೇಲಿನಿಂದ ನೋಡುವ ಅದರ ತಾಯಿ ಪಕ್ಷಿಯಂತಾಗಿದೆ ಅವನ ಪರಿಸ್ಥಿತಿ. ಬಿರುಗಾಳಿಗೆ ಸಿಕ್ಕಿದ ಸಸ್ಯಗಳಂತೆ, ಕೆಳಗೆ ತೂಗಾಡುವ ಮಳೆ ಮೋಡಗಳು, ಆತ್ಮ ಹೊರಟುಹೋದ ಶರೀರದಂತೆ, ವೇದನೆಯಿಂದ ಭಾರವಾದ ನಿಶ್ಶಬ್ದ, ದುಃಖಾಶ್ರುಗಳನ್ನು ಜಪಮಾಲೆಗಳನ್ನಾಗಿಸಿಕೊಂಡು ಎಣಿಸುವ ಋಷಿಯಂತೆ...

"ಇದನ್ನೆಲ್ಲಾ ನಿನ್ನ ತಂದೆ...ನಿನ್ನ ದುಷ್ಟ ತಂದೆಯೇ ಮಾಡಿದ್ದು" ಮೌನವನ್ನು ಸೀಳಿಕೊಂಡು, ಹಿಸ್ಟೀರಿಕ್ ಆಗಿ ಕಿರುಚಿದ ಪ್ರವಲ್ಲಿಕಳ ಮಾತು ಎಲ್ಲರ ಕೂದಲೂ ನಿಮಿರುವಂತೆ ಮಾಡಿತು. "ಹೌದು.. ಇದನ್ನೆಲ್ಲಾ ನೀನು ನೊಂದುಕೊಳ್ಳುತ್ತೀಯೆಂದು ಹೇಳಲಿಲ್ಲ ವಿಹಾರಿ! ನಿನ್ನ ಸಂತೋಷ, ನಿನ್ನ ಮನೆಯ ಸಂತೋಷವನ್ನು ಹಾಳುಮಾಡುವ ಇಷ್ಟವಿಲ್ಲದೆ ಸುಮ್ಮನಿದ್ದೆ, ಈಗ ನಾನಿದನ್ನೆಲ್ಲಾ ಮುಚ್ಚಿಡಲಾರೆ, ನನ್ನ ಕುಟುಂಬವನ್ನು ಸರ್ವನಾಶ ಮಾಡಿದ್ದು– ಆ ದಿನ ಸ್ಟೇಜಿನ ಮೇಲೆ ಪಿಸ್ತೂಲನ್ನು ಬದಲಾಯಿಸಿ ನಿನ್ನನ್ನು ಜೈಲಿಗೆ ಕಳುಹಿಸುವ ಏರ್ಪಾಟು ಮಾಡಿದ್ದು–ದಿ ಗ್ರೇಟ್ ಲಾಯರ್ ಪರಮೇಶ್ವರ್–ನಿನ್ನ ತಂದೆ! ನನ್ನನ್ನು ಕ್ಷಮಿಸು,ನಿನಗೀ ವಿಷಯವನ್ನು ತಿಳಿಸದೆಯೇ ನಿನ್ನನ್ನು ರಕ್ಷಿಸಬೇಕೆಂದಿದ್ದೆ. ಸ್ವಾಮಿಯ ಅಂತ್ಯವಾದರೆ ನಿನ್ನ ತಂದೆ ನಿನಗೆ ಉಳಿಯುತ್ತಾನೆಂದುಕೊಂಡಿದ್ದೆ. ನಾನೆಷ್ಟು ನಿಸ್ಸಹಾಯಕಳೆಂದು ನನಗೀಗ ಅರ್ಥವಾಗಿದೆ. ನನ್ನನ್ನೂ ನಿನ್ನನ್ನೂ ಕೊಂದು ಮಾಫಿಯಾಗೆ ರಕ್ಷಣೆ ಕೊಡುವ ಯೋಚನೆ ಮಾಡಿದ್ದಾನೆ ನಿಮ್ಮಪ್ಪ...!"

ಆವೇಶದಿಂದ ಹೇಳುತ್ತಿದ್ದರೂ—"ನನಗೆ ಗೊತ್ತು" ಎಂದು ಅವನು ಕಾಮ್ ಆಗಿ ಹೇಳಿದ್ದನ್ನು ಕೇಳಿ ದಿಗ್ಭ್ರಾಂತಳಾದಳು.

"ಹೌದು ಪ್ರವಲ್ಲಿಕಾ! ಅರ್ಧಗಂಟೆಗೆ ಮುಂಚೆ ನಮ್ಮಪ್ಪನ ನಿಜಸ್ವರೂಪ ನಾನು ಕಂಡೆ. ಪದ್ಮಾಕರ್‌ನನ್ನು ಕೊಲ್ಲಲು ಪ್ಲಾನ್ ಹಾಕಿದ್ದು ಅವನೇ. ಟೆರ್ರರಿಸ್ಟ್‌ಗಳು ಸುಮ್ಮನೆ ಬೆದರಿಸುವುದಿಲ್ಲವೆಂದೂ ಹೇಳಿದಂತೆ ಮಾಡುತ್ತಾರೆಂದು ನಿರೂಪಿಸಿದ್ದೂ ಅವನೇ. ನಾನು ನಾಚಿಕೊಳ್ಳುತ್ತಿದ್ದೇನೆ ಪ್ರವಲ್ಲಿಕಾ! ಇಷ್ಟು ದಿನ ಇಷ್ಟು ಬುದ್ಧಿವಂತ ನನ್ನ ತಂದೆ ಎಂದು ಸಂತೋಷಪಡುತ್ತಿದ್ದೆ. ಈಗ ಆ ..ಆ...ಆ" ಹಲ್ಲು ಕಡಿದ ವಿಹಾರಿ.

* * * *

ವಿಹಾರಿ ಮನೆಗೆ ಬರುವ ವೇಳೆಗೆ ಅವನ ತಾಯಿ ಮನೆಯಲ್ಲಿರಲಿಲ್ಲ. ಪದ್ಮಾಕರನ ಸಾವು-ವರ್ಧನಮ್ಮನಿಗೆ ಸಿಡಿಲು ಬಡಿದಂತಾಗಿತ್ತು, ಅವನನ್ನು ತನ್ನ ಸ್ವಂತ ಮಗನಂತೆಯೇ ನೋಡಿಕೊಳ್ಳುತ್ತಿದ್ದಳು. ನಿಜಕ್ಕೂ ವಿಹಾರಿಯದು ಸ್ವಲ್ಪ ರಿಜರ್ವ್‌ಡ್ ಸ್ವಭಾವವಾದರೆ, ಪದ್ಮಾಕರ್ ಅದಕ್ಕೆ ಸಂಪೂರ್ಣ ವಿರುದ್ಧ. ಅಡಿಗೆ ಮನೆಗೇ ನುಗ್ಗಿ ಡಬ್ಬಗಳನ್ನು ಹುಡುಕಿ ತಿಂಡಿಯನ್ನು ತಿನ್ನುವಷ್ಟು ಸಲಿಗೆಯಿತ್ತು. ಅಂತಹ ಪದ್ಮಾಕರ್ ಸತ್ತಿದ್ದಾನೆಂದರೆ ಆಕೆ ಸುಮ್ಮನೆ ಕುಳಿತಾಳೇ? ಆಸ್ಪತ್ರೆಗೇ ಓಡಿದಳು.

ಮನೆಯಲ್ಲಿ ಪರಮೇಶ್ವರ್ ಒಬ್ಬನೇ ವರಾಂಡದಲ್ಲಿ ಕುಳಿತು ಪುಸ್ತಕ ಓದುತ್ತಿದ್ದ. ನಡೆದಿದ್ದ ಈ ಘೋರ ಅವನ ಮೇಲೆ ಯಾವ ಪರಿಣಾಮವನ್ನೂ ಬೀರಿದಂತೆ ಕಾಣಿಸಲಿಲ್ಲ.

"ಕಂಗ್ರಾಜುಲೇಷನ್ಸ್ ಮಿ. ಪರಮೇಶ್ವರ್" ಎಂಬ ಮಾತು ಕೇಳಿ ತಲೆ ಎತ್ತಿದ. ವಿಹಾರಿ ತನ್ನನ್ನೇ ನೋಡುತ್ತಾ ನಿಂತಿದ್ದಾನೆ. ಆವೇಶವನ್ನು ಬಲವಂತದಿಂದ ತಡೆದುಕೊಳ್ಳುತ್ತಿರುವಂತೆ ಕಾಣುತ್ತಿದೆ. ಮಗನ ಸ್ಥಿತಿ ಅರ್ಧಂಬರ್ಧ ಅರ್ಥವಾಯಿತು.

"ಅದ್ಯಾವ ಸಂಬೋಧನೆ?" ಕೇಳಿದ.

"ನೀನು ಮಾಡಿದ ಕೆಲಸಕ್ಕೆ 'ಏಯ್' ಎಂದು ಕರೆಯಬೇಕಾಗಿತ್ತಪ್ಪಾ. ಹೆಸರು ಕರೆದು ಗೌರವ ಕೊಡುತ್ತಿದ್ದೇನೆ ಸಂತೋಷಪಡು"–

"ಓಹೋ! ಇದ್ಯಾವ ನಾಟಕದ ಡೈಲಾಗ್?" ವ್ಯಂಗ್ಯವಾಗಿ ಕೇಳಿದ.

"ಅಪ್ಪನ ಪಾತ್ರದಲ್ಲಿ ನೀನಾಡುತ್ತಿರುವ ನಾಟಕದ ಕ್ಲೈಮ್ಯಾಕ್ಸ್ ಡೈಲಾಗ್."

"ತುಂಬಾ ಭಾರಿ ಭಾರಿ ಮಾತುಗಳನ್ನಾಡುತ್ತಿದ್ದೀಯಲ್ಲಾ! ನಾನು ನಿನ್ನ ತಂದೆ ಎಂದು ನೆನಪಿದೆ ತಾನೆ?"

"ತಂದೆ ತಾಯಿಗಳೆಲ್ಲಾ ತಲೆತಗ್ಗಿಸಬೇಕಾದಂತಹ ಮಾತಾಡುತ್ತಿದ್ದಿ ಪರಮೇಶ್ವರ್. 'ತಂದೆ' ಎಂಬುದು ತುಂಬಾ ಗೌರವಯುತವಾದ ಪದ, ಹಣವಿರುವ ಹುಡುಗಿಯನ್ನು ಬಲೆ ಒಡ್ಡಿ ಹಿಡಿದು ಹಾಕಿಕೊಂಡು, ಮದುವೆ ಆಗಿ ಅವಳನ್ನು ತಾಯಿಯಾಗುವಂತೆ ಮಾಡಿದಿ. ಆಸ್ತಿ ಬರುವುದಿಲ್ಲವೆಂದು ತಿಳಿದು ಆತ್ಮಹತ್ಯೆ ಮಾಡಿಕೊಂಡಂತೆ ನಟಿಸಿದಿ, ನಿನ್ನ ದಾರಿಯಲ್ಲಿ ನೀನು ಹೊರಟು ಹೋದಿ. ಅಂತಹ ನಿನಗೆ ಈಗ 'ತಂದೆ' ಎಂಬ ಪದದ ಬಗ್ಗೆ ಮಾತನಾಡುವ ಹಕ್ಕು ಎಲ್ಲಿದೆ?"

"ಓ...ನಿನಗೆ ತುಂಬಾ ವಿಷಯಗಳು ಗೊತ್ತು!"

"ತುಂಬಾ ತಡವಾಗಿ ತಿಳಿಯಿತು. ಅದೇ ದುಃಖಕರ ವಿಷಯ. ಎಷ್ಟು ಮೆರೆದುಬಿಟ್ಟೆ ಅಪ್ಪ ನಿನ್ನನ್ನು ಕಂಡು! ಸದಾ ಮೌನವಾಗಿರುವ ಈ ಮನೆಯಲ್ಲಿ ಒಂದು ಅಪರೂಪವಾದ ವ್ಯಕ್ತಿ ಪ್ರವೇಶಿಸಿದನೆಂದುಕೊಂಡೆ. ಇಷ್ಟು ಕಾಲ ತನ್ನ ಪ್ರಾಣಕ್ಕಿಂತಲೂ ಮಿಗಿಲಾಗಿ ನನ್ನನ್ನು ನೋಡಿಕೊಂಡ ಅಮ್ಮನಿಗಿಂತಲೂ ಹೆಚ್ಚಾಗಿ ನಿನ್ನನ್ನು ಅಭಿಮಾನಿಸಿದೆ. ಬುದ್ಧಿವಂತನೆಂದು ಪ್ರಖ್ಯಾತಿಯಾದ ನೀನು ನನ್ನ ತಂದೆಯಾಗಿರುವುದು ನನ್ನ ಅದೃಷ್ಟವೆಂದುಕೊಂಡಿದ್ದೆ. ಆದರೆ ನನ್ನ ಆ ಅದೃಷ್ಟ ಪ್ರಾಣ ಸ್ನೇಹಿತನೊಬ್ಬನನ್ನು ನುಂಗುವ ರಾಕ್ಷಸಿಯೆಂದು ಅಂದು ಕೊಂಡಿರಲಿಲ್ಲ."

"ಹಾಗೆಂದುಕೊಳ್ಳದಿದ್ದುದು ನಿನ್ನ ಪೆದ್ದುತನ, ನಾನು ಅಂದುಕೊಂಡಿದ್ದನ್ನು ಸಾಧಿಸುವಾಗ ಯಾವ ಬಂಧವೂ ಅಡ್ಡ ಬರುವುದಿಲ್ಲ ನನಗೆ,"

"ಕೊನೆಗೆ ಮಗ ಕೂಡಾ–"

"ಮಗನೇ ಏನು? ಕೊನೆಗೆ ಹೆಂಡತಿ ಕೂಡಾ–! ಆ ವಿಷಯ ಈಗ 25 ವರ್ಷಗಳ ಮುಂಚೆಯೇ ನಿರೂಪಿಸಲಾಗಿತ್ತಲ್ಲ" ಎಂದು ನಗಲು ಪ್ರಾರಂಭಿಸಿದ. ವಿಹಾರಿ ದಿಗ್ಭ್ರಾಂತನಾದ.

"ನೀನು ಮನುಷ್ಯನಾ ಅಪ್ಪಾ?"

"ಹೌದು ಮನುಷ್ಯನೇ! ಈ ಪ್ರಪಂಚದಲ್ಲಿ ಮನುಷ್ಯನಿಗೆ ಬೇಕಾದ ಆರು ಅವಶ್ಯಕತೆಗಳೇನು ನಿನಗೆ ಗೊತ್ತಾ? ಗಾಳಿ, ನೀರು, ಊಟ, ಹಣ, ಹಣ, ಹಣ. ಕೊನೆಯ ಮೂರು ಅವಶ್ಯಕತೆಗಳಿಗಾಗಿ, ಮೊದಲ ಮೂರನ್ನು ಬಿಡಬಲ್ಲವನೇ ನಿಜವಾದ ಮನುಷ್ಯ. ಚಿಕ್ಕಂದಿನಿಂದಲೂ ನಾನು ಹಣಕ್ಕಾಗಿಯೇ ಬದುಕಿದೆ. ಬಡತನವೆಂದರೇನೆಂದು ತಿಳಿದಾಗ ಹಣದ ಬೆಲೆ ತಿಳಿಯುತ್ತದೆ. ನಾನು ಓದಿದ ನ್ಯಾಯ

ಶಾಸ್ತ್ರ ನನಗೆ ಹಣದ ಅವಶ್ಯಕತೆಯನ್ನು ಮತ್ತಷ್ಟು ತಿಳಿಸಿತು. ಹಣವೊಂದನ್ನು ಬಿಟ್ಟು ನನಗೆ ಬೇರೆ ಯಾವುದರ ಮೇಲೂ ಪ್ರೀತಿಯಿಲ್ಲ. ನಿನ್ನ ತಾಯಿಯ ಮೂಲಕ ನನಗೆ ಹಣ ಸಿಗುವುದಿಲ್ಲವೆಂದು ತಿಳಿದಕೂಡಲೇ ಅವಳಿಂದ ದೂರವಾದೆ. ಈಗ ಹೇಳು ನೀನೇನು ಮಾಡಬಲ್ಲೆ? ಏನು ಮಾಡಬಲ್ಲೆ ನೀನು?" ಪರಮೇಶ್ವರ್‌ನ ಕಿರುಚಾಟ ಆ ಕೋಣೆಯಲ್ಲೆಲ್ಲಾ ಪ್ರತಿಧ್ವನಿಸಿತು.

ವಿಹಾರಿ ಕೂಡಾ ಅಷ್ಟೇ ಆವೇಶದಿಂದ ಮಾತನಾಡುತ್ತಾನೆಂದು ಕೊಂಡಿದ್ದ. ಆದರೆ ಅದಕ್ಕೆ ವಿರುದ್ಧವಾಗಿ ಮೆಲ್ಲಗೆ ಅಪ್ಪಾ ಎಂದ. ಪರಮೇಶ್ವರ್‌ಗೆ ಆಶ್ಚರ್ಯವಾಯಿತು. ವಿಹಾರಿಯ ಮುಖ ನಿರ್ಮಲವಾಗಿತ್ತು.

"ಅಪ್ಪಾ! ಕೆನ್ ಐ ಆಸ್ಕ್ ಯು ತ್ರೀ ಕೊಶ್ಚನ್ಸ್?...ನಿಮ್ಮನ್ನು ನಾನು ಮೂರೇ ಮೂರು ಪ್ರಶ್ನೆ ಕೇಳಬಹುದಾ?"

"ಏನದು?"

"ಇಷ್ಟು ದಿನ ನೀವೇನು ಮಾಡುತ್ತಿದ್ದಿರೋ, ಎಲ್ಲಿದ್ದಿರೋ ಎಂಬುದನ್ನೂ ವಿಚಾರಿಸದೆ ಅಮ್ಮ ನಿಮ್ಮನ್ನು ತನ್ನ ಬದುಕಿನಲ್ಲೇಕೆ ಆಹ್ವಾನಿಸಿದಳು?"

"ಗಂಡನಾದದ್ದರಿಂದ–" ನಿರ್ಲಕ್ಷ್ಯದಿಂದ ಹೇಳಿದ.

"ನಾನಿಷ್ಟು ಕಾಲ ಮನೆ ಸೇರದೆ ಓಡಾಡುತ್ತಿದ್ದರೂ ಜವಾಬ್ದಾರಿಯಿಲ್ಲದವನಂತೆ ವರ್ತಿಸುತ್ತಿದ್ದರೂ ಅವಳೇಕೆ ಪ್ರೀತಿಯಿಂದ ನೋಡುತ್ತಾಳೆ?"

"ಮಗನಾದ್ದರಿಂದ–"

"ಕೊನೆಯ ಪ್ರಶ್ನೆ...ಸ್ವಾಮಿಗೂ, ನಿಮಗೂ ಏನು ಸಂಬಂಧ?"

"ಆತ ನನ್ನ ಗಾಡ್‌ಫಾದರ್. ನಾನು ಭಿಕಾರಿಯಾಗಿದ್ದ ದಿನಗಳಲ್ಲಿ ನನ್ನ ಬುದ್ಧಿವಂತಿಕೆಯನ್ನು ಗುರುತಿಸಿದ ಮೊದಲ ವ್ಯಕ್ತಿ! ಪರಮಪದ ಸೋಪಾನದಿಂದ ನನ್ನನ್ನು ಮೇಲಂತಸ್ತಿಗೆ ತಂದವರು! ನ್ಯಾಯದ ವಿಷಯದಲ್ಲಿ ನಾನು ಆತನಿಗೆ ಕಲ್ಪಿಸುತ್ತಿರುವ ರಕ್ಷಣೆಗೆ ಪ್ರತಿಯಾಗಿ ಸಮಾಜದಲ್ಲಿ ನನಗೆ ಸ್ಥಾನ ದೊರಕಿಸಿ ಕೊಟ್ಟ. ಸ್ವಂತ ತಮ್ಮನಂತೆ ನನ್ನನ್ನು ನೋಡಿಕೊಳ್ಳುತ್ತಿದ್ದಾರೆ."

"ಆದರೆ ನಿನ್ನಂತಹ ಮತ್ತೊಬ್ಬ ಸ್ವಂತ ತಮ್ಮ ಆಸ್ಪತ್ರೆಯಲ್ಲಿ ತನ್ನ ರಹಸ್ಯಗಳನ್ನು ಹೊರಗೆಡುಹುತ್ತಾನೆಂದು ಅನುಮಾನ ಬರುತ್ತಿದ್ದಂತೆಯೇ, ಇನ್ನೊಬ್ಬ ತಮ್ಮನಿಂದ ಅವನನ್ನು ಕೊಲ್ಲುವ ಯೋಚನೆಯಲ್ಲಿದ್ದಾನೆ, ನೋಡಿದೆಯಾ ಅಪ್ಪಾ– ನಮ್ಮ ಮನೆಗೂ, ಆ ನಿನ್ನ ಮನೆಗೂ ಇರುವ ವ್ಯತ್ಯಾಸ! ಈ ಮನೆ ಪ್ರೀತಿ ವಾತ್ಸಲ್ಯಗಳ ಇಟ್ಟಿಗೆಗಳಲ್ಲಿ ಕಟ್ಟಿದ ಮನೆ. ಅದು...? ಯಾವ ಕ್ಷಣದಲ್ಲಿ ಯಾದರೂ ಕುಸಿದು ಬೀಳುವ ಅರಗಿನ ಮನೆ. ಇಲ್ಲಿ ಬಂಧಗಳಿಗೆ ಬುನಾದಿ ಪ್ರೀತಿ. ಅಲ್ಲಿ ನಿಮ್ಮ ಮಧ್ಯದ ಬಂಧಗಳಿಗೆ ಬುನಾದಿ ಹಣ. ಇಲ್ಲಿ ತಪ್ಪು ಮಾಡಿದರೆ ಪ್ರೀತೀ

ಯಿಂದ ಬೈಯ್ಯುತ್ತೇವೆ. ಅಲ್ಲಿ ತಪ್ಪು ಮಾಡಿದರೆ–ತಲೆ ತೆಗೆಯುತ್ತಾರೆ. ಈ ಪ್ರೀತಿ, ಮಮತೆ, ಅಪ್ಯಾಯತೆಗಳು ಮನುಷ್ಯನಿಗೆ ನೈತಿಕ ಧರ್ಮವನ್ನು, ಕರ್ತವ್ಯಗಳನ್ನು ಬೋಧಿಸುತ್ತಿರುತ್ತವೆ. ಅದೇ ಇಲ್ಲದಿದ್ದರೆ ಇದುವರೆವಿಗೆ ಎಲ್ಲರೂ ಒಂದು ಪಿಸ್ತೂಲನ್ನೋ, ಚೂರಿಯನ್ನೋ ಹಿಡಿದು ಹಣ ಸಂಪಾದಿಸುತ್ತಿದ್ದರು." 'ಭೇಷ್' ಹಿಂದಿನಿಂದ ಕೇಳಿಸಿತು. ಸ್ವಾಮಿ ಚಪ್ಪಾಳೆ ಹೊಡೆಯುತ್ತಾ ಮತ್ತೊಮ್ಮೆ, 'ಭೇಷ್' ಅಂದ. ಅವನು ತಮ್ಮ ಮನೆಯಲ್ಲಿರುವುದನ್ನು ನಿರೀಕ್ಷಿಸಿರದ ವಿಹಾರಿ ಒಂದು ಕ್ಷಣ ಬೆಚ್ಚಿಬಿದ್ದರೂ ಕೂಡಲೇ ಚೇತರಿಸಿಕೊಂಡು ಅವನೆಡೆಗೆ ನೋಡಿದ. ಅವನ ಕೋಪ ಇಮ್ಮಡಿಯಾಯಿತು. ಅಷ್ಟರಲ್ಲಿ ಸ್ವಾಮಿ ಹೇಳಿದ,

"ಪರಮೇಶ್ವರ್! ಇಷ್ಟು ಬುದ್ಧಿವಂತ ಮಗ ನಿನಗಿರುವುದು ನನಗೆ ತುಂಬಾ ಸಂತೋಷಕೊಡುತ್ತಿದೆ. ಆದರೆ ಇವನಿನ್ನೂ ಮಗುವಿನಂತೆ, ಬುದ್ಧಿ ಬೆಳೆಯದವ ನಂತೆ ಯೋಚಿಸುತ್ತಾನೆ. ಯುವ ರಕ್ತದ ಆವೇಷದಲ್ಲಿ ಮಾತನಾಡುತ್ತಾನೆ. ಕೆಲವು ಪಾಠಗಳನ್ನು ತಿಳಿಸಬೇಕು" ಎಂದು ವಿಹಾರಿಯ ಕಡೆ ತಿರುಗಿ"...ನೀನು ನನ್ನದು ಅರಗಿನ ಮನೆಯೆಂದು ಹೇಳಿದಿ ತಾನೇ.. ತುಂಬಾ ಅಜ್ಞಾನದಿಂದ ಕೂಡಿದ ಮಾತದು. ನನ್ನದು ಸ್ತಂಭಗಳ ಮೇಲೆ ನಿರ್ಮಿಸಲಾಗಿರುವ ವಿಶಿಷ್ಟವಾದ ಭವನ. ಈ ದೇಶದ ಪಾರ್ಲಿಮೆಂಟ್ ಭವನದಷ್ಟೇ ಶ್ರೇಷ್ಠವಾದದ್ದು."

"ಎಷ್ಟೇ ಗಟ್ಟಿ ಭವನವಾದರೂ ಬುದ್ಧಿವಂತಿಕೆಯೆಂಬ ಉಳಿಯಿಂದ ಕೊರೆದು ಧೈರ್ಯವೆಂಬ ಡೈನಮೈಟ್‌ನಿಂದ ಸಿಡಿಸಿದರೆ ಕುಸಿದುಬೀಳುತ್ತದೆ."

"ಅದೇ ನಡೆದ ಪಕ್ಷದಲ್ಲಿ ನಿನ್ನ ತಾಯಿಯ ಹಣೆಯಲ್ಲಿ 'ಹೊಸದಾಗಿ ಹಚ್ಚಲ್ಪಟ್ಟ ಕುಂಕುಮ' ಅಳಿಸಿಹೋಗುತ್ತದೆ. ಸಂತೋಷದಿಂದಿರುವ ಆಕೆ ಮತ್ತೆ ದುಃಖಸಾಗರದಲ್ಲಿ ತೇಲಬೇಕಾಗುತ್ತದೆ" ಎಂದು ನಗುತ್ತಾ, "..ನೀನು ನಿನ್ನ ಪ್ರಯತ್ನಗಳನ್ನು ಪ್ರಾರಂಭಿಸಿದ ದಿನ–ಹಾಗೆ ತಿಳಿದ ಮಾರನೇ ಕ್ಷಣವೇ ನಿನ್ನ ತಾಯಿಗೆ, ನಿನ್ನ ತಂದೆ ಎಂತಹವನೆಂದು ತಿಳಿಯುತ್ತದೆ. ಆಕೆ ಏನು ಮಾಡುತ್ತಾಳೆ? ನ್ಯಾಯಕ್ಕಾಗಿ, ಧರ್ಮಕ್ಕಾಗಿ ಗಂಡನನ್ನು ಬಿಡುತ್ತಾಳಾ? ಮಗನ ಪರನಿಲ್ಲುತ್ತಾಳಾ? ಮೊದಲು ಅವಳ ಹೃದಯ ಈ ಷಾಕ್‌ಗೆ ತಡೆದುಕೊಳ್ಳುವುದು ಸಾಧ್ಯವೆ? ಆದರೂ ಗಂಡ ಹೋಗುವುದು ಬೇರೆ, ಗಂಡ ಬಿಡುವುದು ಬೇರೆ. ಸಮಾಜದಲ್ಲಿ ನಿನ್ನ ತಾಯಿಯ ಸ್ಥಾನ ಕೆಳಗಿಳಿಯುತ್ತದೆ. ಸೇರಿದ ಒಂದು ತಿಂಗಳಾಗದೇನೇ ಗಂಡ ಏಕೆ ಬಿಟ್ಟನೆಂದು ಎಲ್ಲರೂ ಕಿವಿ ಕಚ್ಚಿಕೊಳ್ಳುತ್ತಾರೆ. ನೋಡಿದೆಯಾ ವಿಹಾರಿ ನಿನ್ನನ್ನೆಷ್ಟು ಇಬ್ಬಂದಿಯಲ್ಲಿ ಸಿಕ್ಕಿಸಿಬಿಟ್ಟೆ......ನನ್ನನ್ನು ಕೆಸರಿನಲ್ಲಿ ತಳ್ಳಿದ್ದಕ್ಕೆ ಇದು ಪ್ರತಿಫಲ. ಇನ್ನು ಮೇಲೆ ಪ್ರತಿಕ್ಷಣವೂ ನಿನಗೆ ನರಕಯಾತನೆ ನೀಡುತ್ತಾನೆ ನಿನ್ನ ತಂದೆ. ಇದೆಲ್ಲವನ್ನೂ ಸಹಿಸಲಾರದೆ ಯಾವ ಕ್ಷಣ ನೀನು ನಿನ್ನ ತಂದೆಗೆ

ವಿರುದ್ಧ ಎದುರು ಬೀಳುತ್ತೀಯೋ ಆ ಕ್ಷಣವೇ ನಿನ್ನ ತಾಯಿ ವಿಧವೆಯಾಗುತ್ತಾಳೆ. ನಿನ್ನ ತಾಯಿಯ ಕುಂಕುಮವನ್ನು ನೀನೇ ಅಳಿಸಿದ ಪಾಪಿಯಾಗುತ್ತಿ. ಗಂಡ ಚಿಕ್ಕಂದಿನಲ್ಲೇ ಸಾಯುವುದು ಬೇರೆ. ಕಳೆದುಹೋಗಿದ್ದ ಗಂಡ ಮತ್ತೆ ಸಿಕ್ಕನಂತರ ನಿಜವಾಗಿಯೂ ಇನ್ನೊಮ್ಮೆ ಸಾಯುವುದು ಬೇರೆ. ಹೇಳು... ಆಕೆಯನ್ನು ಕೈಯ್ಯಾರೆ ನೀನೇ ವಿಧವೆಯನ್ನಾಗಿ ಮಾಡುತ್ತೀಯಾ? ಯಾವ ಪುರಾಣಗಳಲ್ಲಿಯೂ ಯಾವ ಶಾಸ್ತ್ರಗಳಲ್ಲಿಯೂ ಯಾವ ತಾಯಿಗೂ ಮಗ ಕೊಡದಿದ್ದ 'ಕುಂಕುಮ ಅಳಿಸುವ' ಬಹುಮಾನ ನೀಡುತ್ತೀಯಾ?"

"ಹ್ಞು...ಅನಂತಾನಂತಸ್ವಾಮಿ ಎಂದು ಹೆಸರು ಇಟ್ಟುಕೊಂಡಿರುವುದಕ್ಕೆ ಶಾಸ್ತ್ರಗಳನ್ನೂ, ಪುರಾಣಗಳನ್ನೂ ಚೆನ್ನಾಗಿ ವಿಶ್ಲೇಷಿಸುತ್ತಿದ್ದಿ. ನಾನು ಹೇಳುವುದನ್ನೂ ಚೆನ್ನಾಗಿ ಕೇಳು. ನನ್ನ ತಂದೆಯನ್ನು ನಿನ್ನ ಭವನದ ಅಂತಸ್ಥಿನಲ್ಲಿ ಬಂಧಿಸಿದ್ದಿ. ಕಾಲುಗಳನ್ನು ಅಧಿಕಾರವೆಂಬ ಮಳೆಗಳಿಂದಲೂ, ಕೈಗಳನ್ನು ಹಣವೆಂಬ ಸರಪಳಿಗಳಿಂದಲೂ ಬಿಗಿಸಿದ್ದಿ. ನನ್ನ ತಂದೆಯನ್ನು ಆ ಬಂಧನದಿಂದ ಬಿಡಿಸಿ, ಆ ಅಂತಸ್ತುಗಳನ್ನು ಇಳಿಸಿ ಒಬ್ಬ ಸಾಮಾನ್ಯ ಮನುಷ್ಯನಂತೆ ನನ್ನ ತಾಯಿಗೆ ಒಪ್ಪಿಸುತ್ತೇನೆ. ಯಾವ ಪುರಾಣಗಳಲ್ಲಿಯೂ, ಯಾವ ಶಾಸ್ತ್ರಗಳಲ್ಲಿಯೂ ಯಾವ ಮಗನೂ ತನ್ನ ತಾಯಿಗೆ ಕೊಡದ 'ಗಂಡ'ನೆಂಬ ಬಹುಮಾನವನ್ನು ನಾನು ಕೊಡುತ್ತೇನೆ–"

ಸ್ವಾಮಿ ಗಹಗಹಸಿ ನಕ್ಕ. "...ವಿಹಾರೀ! ನನ್ನ ನಾಲ್ಕನೇ ಸ್ತಂಭವೇನೆಂದು ಪ್ರವಲ್ಲಿಕಳಿಗೆ ಮಾತ್ರ ತಿಳಿಸಿದ್ದೆ, ಈಗ ನಿನಗೂ ಹೇಳುತ್ತೇನೆ. ನನ್ನ ನಾಲ್ಕನೇ ಸ್ತಂಭ ನೀನು–"

"ಹ್ಞು...ನಾನಾ?"

"ಹೌದು ನಿನ್ನಂಥ ಸಾಮಾನ್ಯ. ತನ್ನ ಬೆನ್ನಿನ ಮೇಲೆ ನಮ್ಮನ್ನು ಹೊತ್ತು ತಿರುಗುತ್ತಾನೆ. ನಮ್ಮ ಬುದ್ಧಿವಂತಿಕೆಗೆ ಮರುಳಾಗಿ ಮಿತಿಮೀರಿದಷ್ಟು ಹಣ ಕೊಡುತ್ತಾ, ನಮ್ಮ ಸುಖ ಸೋಪಾನಗಳಿಗೆ ಅಡಿಗಲ್ಲಾಗಿರುವ ಮುಗ್ಧ. ನಮ್ಮ ರಾಜಕೀಯಗಳಿಗೆ ಸೋತುಹೋಗಿ. ಅದೇ ಸ್ವರ್ಗವೆಂದುಕೊಂಡು ಓಟು ಕೊಡುತ್ತಾ ನಮಗೆ ಅಧಿಕಾರ ನೀಡಿರುವ ದುರ್ಭಾಗ್ಯ. ನಾವು ಮಾಡುವುದೆಲ್ಲಾ ನ್ಯಾಯವೆಂದು ನಂಬಿದವನು. ಅವನು ಪುಕ್ಕಲ. ಅವನು ಅಜ್ಞಾನಿ. ಅವನು ಭಯಸ್ಥ. ಅಂತಹ ಆಲೋಚನಾರಹಿತರಿಂದ ಬಿಡುಗಡೆಬೇಕೆಂದರೆ ನೀನೂ ಬಾ. ಈ ಭವನದಲ್ಲಿ ಸಾಕಷ್ಟು ಸುಖಗಳಿವೆ. ಬಯಸಿದಷ್ಟು ಹಣವಿದೆ."

"ಮನುಷ್ಯನಿಗೆ ಹಣವೊಂದೇ ಅಲ್ಲ. ತುಂಬಾಬೇಕು."

"ಆ ತುಂಬಾ ಬೇಕೆಂದರೆ ಹಣ ಬೇಕು."

"ಆ ಹಣದೊಡನೆ ನೀತಿ–ನಿಯತ್ತುಗಳೂ ಬೇಕು"

"ತಾತಂದಿರು ಸಂಪಾದಿಸಿರುವ ಹಣವನ್ನು ಖರ್ಚುಮಾಡುತ್ತಾ, ಬೀದಿಗಳಲ್ಲಿ ಕುಣಿದಾಡುತ್ತಾ, ಸ್ಟೇಜಿನ ಮೇಲೆ ಬಣ್ಣ ಬಳಿದುಕೊಂಡು ನಾಟಕಗಳನ್ನಾಡುವ ನೀನು ಹೇಳುತ್ತಿದ್ದಿ 'ನೈತಿಕತೆ'ಯ ಬಗ್ಗೆ...? ತಪ್ಪೋ ಸರಿಯೋ... ಪ್ರಾಣಗಳನ್ನು ಪಣವಿಟ್ಟು ನಾವು ಕಷ್ಟಪಡುತ್ತೇವೆ. ಆದರೂ ಕುಳಿತು ತಿಂದು ಮಾತನಾಡುವುದಿಲ್ಲ."

ವಿಹಾರಿ ಬಿಳಿಚಿಕೊಂಡ, ಸ್ವಾಮಿಯ ಮಾತುಗಳು ಬಾಣಗಳಂತೆ ಎದೆಯಲ್ಲಿ ನಾಟಿದವು. ಇದುವರೆವಿಗೂ ತಾನು ಈ ಕೋನದಿಂದ ಯೋಚಿಸಿರಲಿಲ್ಲ. ಡ್ರಿಂಕ್ಸ್ ಬೆರೆಸಿಕೊಳ್ಳುತ್ತಾ, ಕ್ರಾಂತಿಯ ಬಗ್ಗೆ ಮಾತನಾಡುವವನಿಗಿಂತಲೂ ಹೀನ ಅವನು. ಸಹಿಸಲಾಗಲಿಲ್ಲ ಅವನಿಂದ.

"ವಿಹಾರೀ! ನೀನು ನಿಜ ಮರೆಯುತ್ತಿದ್ದಿ, ಈ ಆಸ್ತಿಗೆ 'ಮಗ'ನಾಗಿ ನಿನಗಿಂತಲೂ 'ಗಂಡ'ನಾಗಿ ನಾನು ಮೊದಲ ಹಕ್ಕುದಾರ! ನೀನು ನನಗೆ ಸ್ವಲ್ಪ ವಿರುದ್ಧವಾಗಿ ಕೆಲಸ ಮಾಡಿದರೂ ಈ ಆಸ್ತಿಯಲ್ಲಿ ಒಂದು ಚಿಕ್ಕಾಸೂ ನಿನಗೆ ಸಿಗುವುದಿಲ್ಲ."

ವಿಹಾರಿ ಕೇಳಿಸಿಕೊಳ್ಳುತ್ತಿಲ್ಲ. ಅವನಾಗಲೇ ಒಂದು ನಿರ್ಧಾರಕ್ಕೆ ಬಂದಿದ್ದ. ಪರಮೇಶ್ವರ್ ಹೇಳಬೇಕೆಂದುಕೊಂಡಿದ್ದನ್ನು ಆಗಲೇ ಅರ್ಥ ಮಾಡಿಕೊಂಡಿದ್ದ.

ಅವನು ತಂದೆಯ ಕಡೆಗೂ, ಸ್ವಾಮಿಯ ಕಡೆಗೂ ನೋಡಿ ಸ್ಥಿರವಾಗಿ ಹೇಳಿದ–"ನಾನು ಈ ಕ್ಷಣದಿಂದಲೇ ಮನೆಬಿಟ್ಟು ಹೋಗುತ್ತಿದ್ದೇನೆ" ಅವನ ಮಾತಿನಲ್ಲಿ ಒಂದು ನಿರ್ಧಾರ ಇಣುಕಿ ನೋಡುತ್ತಿತ್ತು.

"ಕೋಟೆಯ ಒಳಗಿನಿಂದ ತಿರುಗಿಬಿದ್ದರೆ ಅದು ನಂಬಿಕೆ ದ್ರೋಹ ಆಗುತ್ತದೆ. ಕೋಟೆಯ ಹೊರಗಿನಿಂದ ಹೋರಾಡಿದರೆ ಅದು ಯುದ್ಧವಾಗುತ್ತದೆ. ನೀವಂದಂತೆ ನಾನು ತೀರಾ ಸಾಮಾನ್ಯ. ಈ ದೇಶದ ಶಕ್ತಿಯುತ ದುಷ್ಟನನ್ನು ಎದುರಿಸುವ ಶಕ್ತಿ ಕೇವಲ ಸಾಮಾನ್ಯನಿಗೆ ಮಾತ್ರವಿದೆಯಾಗಲೀ. ಅಧಿಕಾರಿಗಳಿಗಾಗಲೀ, ಬ್ಯೂರೋಕ್ರಾಟ್‌ಗಳಿಗಾಗಲೀ ಇಲ್ಲ."

ಹೊರಡುತ್ತಾ ಅವನು ಹೇಳಿದ. "ನೋಡಿದೆಯಾ ಸ್ವಾಮಿ...ನಾಲ್ಕು ಸ್ತಂಭಗಳ ಭದ್ರಭವನವೆಂದಿ. ಸ್ವಾರ್ಥವನ್ನೂ, ಭದ್ರತೆಯಿಂದ ಭಯವನ್ನೂ, ಸುಖವನ್ನೂ ತ್ಯಜಿಸಿ ಸಾಮಾನ್ಯನೊಬ್ಬ ತಿರುಗಿಬಿದ್ದರೆ ಎಷ್ಟು ಸುಲಭವಾಗಿ ನಿನ್ನ ಮೊದಲನೆ ಸ್ತಂಭ ಕುಸಿದುಬೀಳುತ್ತದೆ ನೋಡು. ಇನ್ನು ಮೂರು ಸ್ತಂಭಗಳೇ ಇರುವುದು. ನಿನ್ನ 'ಬಲ'ವನ್ನು. 'ರಾಜಕೀಯ'ವನ್ನು ಛಿದ್ರಗೊಳಿಸಿ 'ಬುದ್ಧಿವಂತಿಕೆ'ಯನ್ನು ನನ್ನ ತಾಯಿಗೆ ಹೇಗೆ ಬಹುಮಾನವಾಗಿ ಅರ್ಪಿಸುತ್ತೇನೋ

ನೋಡುವಿಯಂತೆ."

ಗೋಲ್ಡನ್ ಐಲೆಂಡ್‌ನಲ್ಲಿ ಸ್ವಾಮಿಯ ಸ್ವಂತ ಹೆಲಿಕಾಪ್ಟರ್ ಇಳಿಯಿತು. ಹೆಲಿಪ್ಯಾಡ್‌ನಿಂದ ಕಾರಿನವರೆಗೂ ಕೆಂಪು ಕಾರ್ಪೆಟ್, ಸುತ್ತಲೂ ಹೂವಿನ ಮಳೆ. ಶಿಸ್ತಿನಿಂದ ಸೈನಿಕರ ಗೌರವ ರಕ್ಷೆ ಸ್ವೀಕರಿಸುತ್ತಾ ಸ್ವಾಮಿ ಕಾರನ್ನು ಹತ್ತಿದ.

ರಸ್ತೆಯ ಎರಡೂ ಬದಿ ತೆಂಗಿನಮರಗಳು. ಮಧ್ಯದಲ್ಲಿ ಒಳ್ಳೆಯ ರಸ್ತೆ. ಸುಮಾರು ಹತ್ತು ನಿಮಿಷ ಪ್ರಯಾಣ ಮಾಡಿದ ನಂತರ ಅವರ ಕಾರು ದೊಡ್ಡ ಕಾಂಪೌಂಡೊಂದರಲ್ಲಿ ಪ್ರವೇಶಿಸಿತು, ಸುತ್ತಲೂ ಬಾರ್ಬಡ್‌ವೈರ್ ಫೆನ್ಸಿಂಗ್, ಗಾರ್ಡ್‌ಗಳು, ತರಬೇತುಗೊಳಿಸಿದ ಅಲ್ಸೇಷಿಯನ್ ನಾಯಿಗಳು. ಅದೊಂದು ಹೊಸ ರೀತಿಯ ಪ್ರಪಂಚದಂತಿತ್ತು.

ಪ್ರಜೆಗಳ ಅಜ್ಞಾನವನ್ನೆಲ್ಲಾ ಹಣವಾಗಿ ಮಾರ್ಪಡಿಸಿ ಕಟ್ಟಿದಂತೆ ಆ ದ್ವೀಪದ ಮಧ್ಯದಲ್ಲಿ ವಿಶಾಲ ಭವನ–ಎತ್ತರವಾದ ಮರಗಳು.

ಸ್ವಾಮಿ ಠೀವಿಯಿಂದ ಹತ್ತುತ್ತಿದ್ದಂತೆ. ಬಾಗಿಲು ತೆಗೆದ ಸೈನಿಕರು ಸೆಲ್ಯೂಟ್ ಮಾಡಿದರು.

ಅವನು ದ್ವೀಪವನ್ನು ಸೇರಿಕೊಂಡ ಒಂದು ಗಂಟೆಯೊಳಗಾಗಿಯೇ ಮತ್ತೆರಡು ಹೆಲಿಕಾಪ್ಟರ್‌ಗಳು. ಮೂರು ಫ್ರೆಂಡ್ಸ್ ಹಾಕರ್ಸ್ ಬಂದು ಇಳಿದವು, ಮೊರಾಕ್ಕೋ, ಈಕ್ವಡಾರ್ ದೇಶಗಳಿಂದ, ಕೇಪ್‌ಟೌನ್. ಪ್ರಿಟೋರಿಯಾ, ಬ್ಲೂಮ್ ಫೀಲ್ಡ್ ಮುಂತಾದ ನಗರಗಳಿಂದ ಪ್ರತಿನಿಧಿಗಳು ಬಂದಿದ್ದರು. ಭಾರತ ದೇಶದ ಶತ್ರು ದೇಶಗಳು ಸಂಭ್ರಮದಿಂದ ಪಾಲ್ಗೊಂಡಿದ್ದವು, ದಕ್ಷಿಣ ಆಫ್ರಿಕದ ವಿಷಯ ತಿಳಿಯದವರಾರು? ಎರಡು ಕೋಟಿಗೂ ಮೀರಿ ಜನಸಂಖ್ಯೆಯಿರುವ ದೇಶದಲ್ಲಿ ಕೇವಲ ಮುವ್ವತ್ತೇಳು ಲಕ್ಷ ಜನರಿಗೆ ಮಾತ್ರ ಓಟು ಕೊಡುವ ಹಕ್ಕು! ದೌರ್ಭಾಗ್ಯ ದೇಶ. ಅಂತಹ ದೇಶದ ಪ್ರತಿನಿಧಿಗಳು ಸ್ವಾಮಿಯಂತಹವರಿಗೆ ಸಹಾಯ ಮಾಡುವುದರಲ್ಲಿ ವಿಚಿತ್ರವೇನು? ಏಷಿಯಾ ಖಂಡದಲ್ಲಿ ಭಾರತದ ಪ್ರಾಬಲ್ಯ ತಗ್ಗಿಸಿದರೆ ಕೆಲವು ದೇಶಗಳಿಗೆ ಒಳ್ಳೆಯದು. ಅವರೂ ಪಾಲ್ಗೊಂಡಿದ್ದರು.

ಕೆಲವು ಜನ ಸ್ವಾರ್ಥಪೂರಿತ ವ್ಯಕ್ತಿಗಳು. ತಮ್ಮ ಲಾಭಕ್ಕಾಗಿ ಬೀಸುವ ಬಲೆಗೆ ಮತ್ತೊಂದು ಹೆಸರು ರಾಜನೀತಿ!! ಫಿಲಿಪೀನ್ಸ್ ಆದರೂ ಫಿಜಿದ್ವೀಪದಲ್ಲಾದರೂ, ದಕ್ಷಿಣ ಆಫ್ರಿಕದಲ್ಲಾದರೂ ಇವರು ಉಪಯೋಗಿಸುವುದು ಇದೇ ಹೆಸರೇ, ಮೊಟ್ಟಮೊದಲನೇ ಸಲ ಭಾರತದಲ್ಲಿ ದಂಗೆ ಏಳುವ ಸನ್ನಾಹ ನಡೆದಿತ್ತು.

ಸ್ವಾಮಿಯೊಡನೆ ಕೇಂದ್ರ ಮಂತ್ರಿ ಮಂಡಲದ ನಂಬರ್ ಟು ಆದ

ಸೂರ್ಯರಾವ್ ಚಾಪೆಯ ಕೆಳಗಿನ ನೀರಿನಂತೆ ವಿಜೃಂಭಿಸುತ್ತಿದ್ದ. ಈಗಾಗಲೇ ಸಾಕಷ್ಟು ಸಮಸ್ಯೆಗಳಿಂದ ತಲೆನೋವನ್ನು ಅನುಭವಿಸುತ್ತಿದ್ದ ಪ್ರಧಾನಮಂತ್ರಿಗಳು, ಅವನನ್ನು ಕಿತ್ತು ಹಾಕಿದರೆ ಮತ್ತಾವ ಸಮಸ್ಯೆ ಉದ್ಭವಿಸುವುದೋ ಎಂದು ಸುಮ್ಮನಿದ್ದರು. ಸೂರ್ಯರಾವ್ ಎಷ್ಟು ಅಪಾಯಕರ ವ್ಯಕ್ತಿಯೆಂದು ಇನ್ನೂ ಹೊರಬಿದ್ದಿರಲಿಲ್ಲ. ದೇಶದಲ್ಲಿ ಸ್ವಾಮಿಗೆ ಸಹಾಯವಾಗಬಲ್ಲಂತಹ ಪರಿಸ್ಥಿತಿ ಉಂಟಾಗುತ್ತಿದ್ದ ಸಮಯದಲ್ಲಿ,

ಇಲ್ಲಿ ಈ ದ್ವೀಪದಲ್ಲಿ...ಸಮಾವೇಶ ಪ್ರಾರಂಭವಾಯಿತು. ಅದೇನು ರಹಸ್ಯ ಸಮಾವೇಶವಾಗಿರಲಿಲ್ಲ. ರೋಮನ್ ಸಾಂಪ್ರದಾಯಿಕ ಪದ್ಧತಿಯಲ್ಲಿ ಸುಂದರ ಹೆಣ್ಣುಗಳು ವೈನನ್ನು ತುಂಬಿಸುತ್ತಿದ್ದರು. ಒಂದು ಮೂಲೆಯಲ್ಲಿ ಸುಂದರಿಯೊಬ್ಬಳು ಸಂಗಾತಿಯನ್ನು (ಸಿತಾರಿನಂತಹ ವಾದ್ಯ)ನುಡಿಸುತ್ತಿದ್ದಳು. ಕೆಲವು ಸಖಿಯರು ತಿಂಡಿ ತೀರ್ಥಗಳನ್ನು ನಗುನಗುತ್ತಾ ಸರಬರಾಜು ಮಾಡುತ್ತಿದ್ದಾರೆ. ಅತಿಥಿಗಳ ಮಾತುಗಳನ್ನೂ ಗಮನಿಸುತ್ತಿದ್ದಾರೆ,

ಅದೇ ಅನುಮಾನ ಯಾರಿಗೋ ಬಂತು. "ನಾವು ಮತ್ತಾವುದಾದರೂ ಮಂದಿರದಲ್ಲಿ ಕುಳಿತು ಮಾತನಾಡಿದರೆ ಚೆನ್ನಾಗಿರುತ್ತದೇನೋ" ಎಂದುಕೊಂಡರು.

ಸ್ವಾಮಿ ನಕ್ಕು ಹೇಳಿದ "ಈ ದ್ವೀಪವೇ ಒಂದು ಮಂದಿರ. ಇಲ್ಲಿಂದ ಒಂದು ಹುಳು ಕೂಡಾ ಅನುಮತಿಯಿಲ್ಲದೆ ಹೊರ ಹೋಗಲಾರದು."

ನಿಜವೇ ಆಗಿರಬಹುದು. ಸಾಮಾನ್ಯವಾಗಿ ಇಂತಹ ಸಮಾವೇಶಗಳು ಅಂಡರ್‌ಗ್ರೌಂಡ್‌ಗಳಲ್ಲೋ, ಕತ್ತಲ ಕೋಣೆಗಳಲ್ಲೋ ನಡೆಯುತ್ತವೆ. ಅದೇನೇ ಆದರೂ ಅಲ್ಲಿಯ ವಾತಾವರಣ ಆಹ್ಲಾದಕರವಾಗಿತ್ತು. ಮರಗಳ ನೆರಳು ಗಾಜುಗಳ ಹೊರಗಿನಿಂದ ಸುಂದರವಾಗಿ ಕಾಣುತ್ತಿತ್ತು. ಷಾಂಡ್ಲಿಯರ್ ಕಾಂತಿ ಆ ಹಾಲಿನಲ್ಲಿ ಮಿಂಚುತ್ತಿತ್ತು. ಮೆತ್ತನೆಯ ಕುರ್ಚಿಗಳಲ್ಲಿ ಕುಳಿತಿದ್ದಾರೆ, ಎಲ್ಲರೂ ಅಗರಬತ್ತಿಯ ಪರಿಮಳ ಅಲ್ಲೆಲ್ಲಾ ತುಂಬಿದೆ. ಆ ವಾತಾವರಣದಲ್ಲಿ ತಮ್ಮ ಭವಿಷ್ಯತ್ ಬಗ್ಗೆ ಚರ್ಚಿಸಲು ಪ್ರಾರಂಭಿಸಿದರು.

ಜಪಾನ್‌ನಿಂದ ಬರುವ ಷಿಪ್‌ನಲ್ಲಿ ಮರಣಾಯುಧಗಳನ್ನು ಹೇಗೆ ಬದಲಿಸಬೇಕು, ದೇಶದೊಳಗೆ ಅವು ಹೇಗೆ ವಿತರಿಸಲ್ಪಡಬೇಕು, ಈಗಾಗಲೇ ದೇಶದ ವಿವಿಧ ಪ್ರಾಂತ್ಯಗಳಲ್ಲಿ ಸೇರಿಕೊಂಡಿರುವ ತರಬೇತು ಪಡೆದ ಸೈನಿಕರು(?) ವಿವಿಧ ಪುಣ್ಯಕ್ಷೇತ್ರಗಳಲ್ಲಿ ಹೇಗೆ ಗಲಭೆಯನ್ನು ಸೃಷ್ಟಿಸಬೇಕು. ಹಿಂದೂ ದೇಶದ ಮೆಜಾರಿಟಿ ಮತಸ್ಥರನ್ನು ಹೇಗೆ ರೊಚ್ಚಿಗೆಬ್ಬಿಸಬೇಕು–ಎಷ್ಟು ದಿನಗಳ ನಂತರ ಸೂರ್ಯ–ರಾವ್ ಪ್ರಧಾನ ಮಂತ್ರಿಗಳ ಎದುರು ಬೀಳಬೇಕು, ಯಾವಾಗ ಅನಂತಾನಂತ ಸ್ವಾಮಿ ಉನ್ನತ ಸೈನಿಕಾಧಿಕಾರಿಯಾಗಿ, ಮತ ಸಂರಕ್ಷಕನಾಗಿ, ದೇಶದ ರಕ್ಷಣೆಯ

ಭಾರವನ್ನು ವಹಿಸಿಕೊಳ್ಳಬೇಕು–ಕೂಡಲೇ ಯಾವಾಗ ಈ ರಾಜ್ಯಗಳೆಲ್ಲಾ ಅವನನ್ನು ರಾಜನಾಗಿ ಗುರುತಿಸಬೇಕು–ಎಂಬ ವಿಷಯಗಳ ಬಗ್ಗೆ ಸಾಕಷ್ಟು ಚರ್ಚೆ ನಡೆದು, ಯೋಜನೆಗಳು ಸಿದ್ಧವಾದವು.

ನಂತರ ಎಲ್ಲರೂ ಊಟಕ್ಕೆ ಎದ್ದರು.

ಅದ್ಭುತವಾದ ಲಂಚ್ ಅದು. ಫಿಲಿಪೀನ್ಸ್‌ರಿಗೆ ಇಷ್ಟವಾದ ಆಸ್ ಪೆರ ಗಸ್‌ನಿಂದ, ಟೋರ್ನೆಂಟೋವರೆಗೂ ಅರವತ್ತು ರೀತಿಯ ಭಕ್ಷ್ಯಗಳು, ಇಂಥದು ಇಲ್ಲವೆಂಬಂತೆ ಸುಮಾರು ಇಪ್ಪತ್ತು ಸುಂದರ ಕನ್ಯೆಯರು ಅತ್ಯಾಧುನಿಕ ಬಿಕನಿಗಳನ್ನು ಧರಿಸಿ ಮುನಿಕನ್ಯೆಯರಂತೆ ಊಟ ಬಡಿಸುತ್ತಿದ್ದರೆ ಪ್ರತಿನಿಧಿಗಳು ಸಂತೃಪ್ತಿಯಿಂದ ಊಟ ಮುಗಿಸಿದರು. ಸುಗಂಧ ಭರಿತ ತಂಪಾದ ಕೋಣೆಗಳಲ್ಲಿ ಎರಡು ಗಂಟೆಗಳ ವಿಶ್ರಾಂತಿಯ ನಂತರ, ಅವರಿಗೆಲ್ಲಾ ತನ್ನ ದ್ವೀಪವನ್ನು ತೋರಿಸಿದ ಸ್ವಾಮಿ.

ಮೇಲೆ ಸಾಧಾರಣವಾಗಿ ಕಾಣುವ ಆ ದ್ವೀಪದ ಭವನದ ಕೆಳಗೆ ವಿಶಾಲವಾದ ಐದಾರು ಹಾಲುಗಳಿದ್ದವು. ಫ್ಲೆಮಿಂಗ್ ಕಾದಂಬರಿಗಳಲ್ಲಿ ಬರುವಂತೆ ಸಂಪೂರ್ಣ ವಾಟರ್ ಫ್ರೂಫ್ ಕೋಣೆಗಳು...ಅಗ್ರದೇಶಗಳ ಆಧುನಿಕ ಯುದ್ಧ ಸಾಮಗ್ರಿಗಳನ್ನು ಮೀರಿಸುವಂತಹ ಆಯುಧಗಳನ್ನು ತಯಾರಿಸುತ್ತಿದ್ದರು ಅದರೊಳಗೆ.

ಆ ಕೋಣೆಯೊಳಗೆ ತೆಂಗಿನಕಾಯಿಗಳಂತಹ ಆಕಾರದಲ್ಲಿದ್ದ ಬಾಂಬುಗಳು ಅತಿಥಿಗಳನ್ನು ಆಕರ್ಷಿಸಿದವು. ಮೊದಲು ಅವರು ಅದನ್ನು ತೆಂಗಿನಕಾಯಿ ಅಂದುಕೊಂಡುಬಿಟ್ಟಿದ್ದರು. ಕೆಲವರು ಕೂಡಲೇ ಕಂಡುಹಿಡಿದುಬಿಟ್ಟರು. ಸಾಮಾನ್ಯರಿಗೆ ವ್ಯತ್ಯಾಸ ಒಂದಿಷ್ಟೂ ತಿಳಿಯುವುದಿಲ್ಲ. ಅವರ ಅನುಮಾನವನ್ನು ಗ್ರಹಿಸಿದಂತೆ ಸ್ವಾಮಿ ಹೇಳಿದ. ನ್ಯೂಕ್ಲಿ–ಥರ್ಮೋ–ಎಕ್ಸ್‌ಪ್ಲೋಸಿವ್ಸ್-ದೇವರ ಮುಂದೆ ಪೂಜಾರಿ ಅದನ್ನು ಒಡೆಯುತ್ತಿದ್ದಂತೆಯೇ ಸುಮಾರು ಸಾವಿರ ಗಜ ಸುತ್ತಮುತ್ತಲಿನ ಪ್ರದೇಶದಲ್ಲಿರುವ ಎಲ್ಲಾ ವಸ್ತುಗಳೂ ಚೂರು ಚೂರಾಗುತ್ತವೆ. ಈ ರೀತಿಯ ವಿಸ್ಫೋಟನೆಯನ್ನು ಇದೀಗ ತಾನೇ ಕಂಡುಹಿಡಿಯಲಾಗಿದೆ–ವೆರಿ ಮಚ್ ಲೇಟೆಸ್ಟ್! ಸುಮಾರು ನೂರು ಗ್ರೆನೇಡ್‌ಗಳಿಗೆ ಸಮಾನವಾದದ್ದು.

ಅವರು ಮುಂದಕ್ಕೆ ನಡೆದರು.

ಅನಂತರದ ರೂಮಿನಲ್ಲಿದ್ದ ದೃಶ್ಯವನ್ನು ಕಂಡು ಅವರ ಶರೀರಗಳೆಲ್ಲಾ ಅಪ್ರಯತ್ನವಾಗಿ ನಡುಗಿದವು. ಅದರಲ್ಲಿ ಸಾಲಾಗಿ ಬೀರುಗಳಿದ್ದವು. ನಾಲ್ಕು ಕಡೆಯೂ ಗಾಜು, ಒಳಗೆ ಯಾವುದೋ ಹರಳೆಣ್ಣೆಯಂತಹ ದ್ರವ ತುಂಬಿತ್ತು. ಅದಲ್ಲ ಅವರನ್ನು ಭಯಭ್ರಾಂತರನ್ನಾಗಿ ಮಾಡಿದ್ದು...

ಆ ಬೀರುಗಳಲ್ಲಿ ಸಜೀವ ಪ್ರತಿಮೆಗಳಂತೆ ಶವಗಳಿದ್ದವು, ಮನುಷ್ಯರು ಬೋನಿನಲ್ಲಿ ನಿಂತಂತೆಯೇ ಕಾಣುತ್ತಿತ್ತು. ಕಣ್ಣುಗಳಲ್ಲಿ ಮಾತ್ರ ಜೀವವಿರಲಿಲ್ಲ.

"ನನಗೆ ಎದುರುಬಿದ್ದ ಪ್ರಮುಖರು, ನನಗೆ ಮೋಸಮಾಡಲು ಪ್ರಯತ್ನಿಸುವ ಹಿಂಬಾಲಕರು" ಹೇಳುತ್ತಿದ್ದ ಸ್ವಾಮಿ. "ನನ್ನ ವಿಜಯಕ್ಕೆ ಪ್ರತೀಕ...ಕೆಲವರಿಗೆ ಹೂಗಳನ್ನು ಕಂಡರೆ ಮನಸ್ಸಿಗೆ ಸಂತೋಷವಾಗುತ್ತದೆ. ಮತ್ತೆ ಕೆಲವರಿಗೆ ಮೀನುಗಳು...ಹಾಗೆಯೇ ನನಗೆ ಈ ಶವಗಳನ್ನು ನೋಡುತ್ತಿದ್ದರೆ ಸಂತೋಷವಾಗುತ್ತದೆ. ಇದನ್ನು ಇಂಗ್ಲೀಷಿನಲ್ಲಿ ಏನು ಹೇಳುತ್ತಾರೆ? 'ಸ್ಯಾಡಿಜಂ' ತಾನೇ? ಹ್ಹಾ ಹ್ಹಾ..."

ಯಾರೂ ಮಾತನಾಡಲಿಲ್ಲ. ಆ ದೃಶ್ಯ ಉಂಟುಮಾಡಿದ್ದ ಷಾಕ್‌ನಿಂದ ಅವರಿನ್ನೂ ಚೇತರಿಸಿಕೊಂಡಿರಲಿಲ್ಲ.

ಮುಂದಕ್ಕೆ ನಡೆದರು. ಕೆಲವು ಬೀರುಗಳು ಖಾಲಿಯಾಗಿದ್ದವು. ಇನ್ನೂ ಅವನ್ನು ತುಂಬಿಸಿರಲಿಲ್ಲ. ಆದರೆ ಹೊಸದಾಗಿ ಮಾಡಿಸಿದ್ದ ಒಂದು ಬೀರು ಅವರನ್ನು ಆಕರ್ಷಿಸಿತು.

"ಇದೇನು? ಬೇರೆಯದಕ್ಕಿಂತಲೂ ಇದು ಸ್ವಲ್ಪ ಭಿನ್ನವಾಗಿದೆಯಲ್ಲಾ? ಎಂದು ಯಾರೋ ಕೇಳಿದರು. ಸ್ವಾಮಿ ಮತ್ತೆ ನಕ್ಕುಬಿಟ್ಟ.

"ನಮ್ಮ ಹಿಂದೂ ಧರ್ಮದ ಪ್ರಕಾರ ಕೆಲವು ಪ್ರದೇಶಗಳಲ್ಲಿ ಸತ್ತ ಗಂಡನೊಡನೆ ಹೆಂಡತಿಯನ್ನೂ ಸುಡುತ್ತಾರೆ. ನಾನು ಸ್ವಲ್ಪ ಮುಂದುವರೆದು ಪ್ರೇಯಸಿ–ಪ್ರಿಯಕರರನ್ನೂ ಕೂಡಾ ಮರಣಾನಂತರ ಒಂದೇ ಕಡೆ ಇರಿಸುವ ಏರ್ಪಾಟನ್ನು ಮಾಡುವ ಸಲುವಾಗಿ ಇದನ್ನು ಸ್ಪೆಷಲ್ಲಾಗಿ ತಯಾರಿಸಿದ್ದೇನೆ. ಇನ್ನೆರಡು ಮೂರು ದಿನಗಳಲ್ಲಿ ಆ ಜೋಡಿ ಶವಗಳು ಇಲ್ಲಿಗೆ ಬರುತ್ತವೆ."

"ಯಾರು ಆ ಪ್ರಿಯಕರ?"

"ನಿಕುಂಜ್ ವಿಹಾರಿ ಎಂದು..."

## 17

ರಾತ್ರಿ ಒಂದು ಗಂಟೆಯಾಗುತ್ತಾ ಬರುತ್ತಿದ್ದಾಗ ಅಕಸ್ಮಿಕವಾಗಿ ವಿಹಾರಿಗೆ ಎಚ್ಚರವಾಯಿತು.

ಸ್ವಲ್ಪ ಹೊತ್ತು ತಾನೆಲ್ಲಿದ್ದೇನೆಂದೇ ಅವನಿಗೆ ಅರ್ಥವಾಗಲಿಲ್ಲ. ತಲೆ

ತಿರುಗಿಸಿ ನೋಡಿದರೆ ಪಕ್ಕದಲ್ಲಿ ಸುನಾದಮಾಲ ಹಳೆಪತ್ರಿಕೆಯೊಂದರಿಂದ ಗಾಳಿ ಬೀಸುತ್ತಿದ್ದುದನ್ನು ಕಂಡ.

ಅವನು ಚಕ್ಕನೆ ಮೇಲೆದ್ದು ಕುಳಿತು, "ಏನಿದು ಮಾಲಾ?" ಎಂದು ಕೇಳಿದ. ಅವಳು ನಕ್ಕಳು.

"ನಿಮಗೆ ಫ್ಯಾನು ಅಭ್ಯಾಸವೆಂದುಕೊಂಡಿದ್ದೇನೆ. ತುಂಬಾ ಹೊತ್ತಿನಿಂದ ಅತ್ತಿತ್ತ ಹೊರಳಾಡುತ್ತಲೇ ಇದ್ದೀರಿ. ಹೀಗೆ ಮಲಗಿದರೆ ಕೆನ್ನೆಯ ಮೇಲೆ ಸೊಳ್ಳೆ ಕಚ್ಚುತ್ತದೆ. ಹಾಗೆ ತಿರುಗಿದರೆ ಆ ಕೆನ್ನೆಗೆ ಮತ್ತೊಂದು ಸೊಳ್ಳೆ ಮುದ್ದಿಸುತ್ತದೆ." ಅವಳೆಡೆಗೆ ನೋಡಿ ಪ್ರೀತಿಯಿಂದ ನಕ್ಕ.

"ಹೀಗೆ ನಿಮ್ಮ ಬಳಿಗೆ ಓಡಿಬರುವುದು ನನಗೆಷ್ಟು ನಾಚಿಕೆ ಗೊತ್ತಾ?"

"ನಂಗೆ ತುಂಬಾ ಸಂತೋಷ ಆಗಿದೆ ನೀವು ಬಂದದ್ದು."

"ನನಗೆ ಮಾತ್ರ ತುಂಬಾ ಗಿಲ್ಟಿಯಾಗಿದೆ."

ಅಷ್ಟರಲ್ಲಿ ಹೊರಗೆ ದೊಡ್ಡ ಶಬ್ದ ಕೇಳಿಸಿತು. 'ಏನದು?' ಎಂದು ಕೇಳಿದ.

"ಮಳೆ ಬರುವಾಗ ನಮ್ಮ ಮನೆ ಹೆಂಚುಗಳು ಮಾಡುವ ಶಬ್ದ" ಮತ್ತೆ ನಕ್ಕಳು. "ಹೇಳ್ರೀ...ನಿಮಗ್ಯಾಕೆ ಗಿಲ್ಟಿ?"

"ಒಂದು ದೊಡ್ಡ ಆಸ್ತಿಗೆ ವಾರಸುದಾರನಾಗಿದ್ದಾಗ ನಿಮ್ಮನ್ನು ಪ್ರೀತಿಸಿದೆ. ಈಗ ಏನೂ ಇಲ್ಲದ ಭಿಕಾರಿಯಾಗಿ ನಿಮ್ಮ ಮನೆಯಲ್ಲಿ ಇರುತ್ತೇನೆ."

ಅವಳ ಮುಖದಲ್ಲಿ ನಗು ಮಾಯವಾಯಿತು. ಯೋಚಿಸುತ್ತಾ ಹೇಳಿದಳು.

"ಹಾಗನ್ನಬೇಡಿ. ನನಗೆ ಹೀಗೇ ಚೆನ್ನಾಗಿದೆ. ನಾನು ನಿಮಗೊಂದು ವಿಷಯ ತಿಳಿಸಲಾ? ಎಲ್ಲರೂ ನನ್ನನ್ನು ಪುಕ್ಕಲು. ಭಯಸ್ತೆ ಎಂದುಕೊಂಡಿದ್ದಾರೆ. ಆದರೆ ನಾನು ಅಂತಹ ಬಲಹೀನತೆ ಇದ್ದವಳಲ್ಲ. ಪ್ರೀತಿಯೆಂದರೂ, ಗಂಡಸರೆಂದರೂ ನನಗೆ ಕೆಲವು ಖಚಿತವಾದ ಅಭಿಪ್ರಾಯಗಳಿವೆ. ಪ್ರೀತಿಯೆಂದರೆ ಒಬ್ಬರ ಬಗ್ಗೆ ಬದುಕಿನಲ್ಲಿ ಒಂದುಸಲ ಮಾತ್ರ ಏರ್ಪಡುವ ಅಪರೂಪವಾದ ಅನುಭವವೆಂದು ನನ್ನ ನಂಬಿಕೆ. 'ನಾನು ಒಬ್ಬರಿಗೇ, ನನ್ನ ಪ್ರೀತಿ ಒಬ್ಬರಿಗೇ' ಎಂದು ನಾನಂದುಕೊಳ್ಳುತ್ತಿರುತ್ತೇನೆ. ನೀವು ನಮ್ಮ ಅಜ್ಜಿಯೊಡನೆ ನಗುತ್ತಾ ಮಾತನಾಡಿದರೂ ನನಗೆ ಅಳು ಬರುತ್ತದೆ. ದಯವಿಟ್ಟು ನನ್ನ ಮಾತುಗಳನ್ನು ಕೇಳಿ ನಗಬೇಡಿ. ನಾನಿಲ್ಲದಾಗ ನೀವು ನನ್ನನ್ನು ನೆನೆಸಿಕೊಂಡು ನಗುತ್ತೀರೆಂದರೂ ನನಗೆ ನೋವಾಗುತ್ತದೆ. ಪ್ರೇಮ ಸಂಬಂಧಿಸಿದವರೆಗೂ ನಾನೆಷ್ಟು ಸ್ವಾರ್ಥಪರಳು. ಅಷ್ಟು ಆಳವಿಲ್ಲದಿದ್ದರೆ ಅದು ನಿಜವಾದ ಪ್ರೀತಿಯಲ್ಲವೆಂದೇ ನನ್ನ ಅಭಿಪ್ರಾಯ."

ವಿಹಾರಿ ಅವಳೆಡೆಗೆ ವಿಭ್ರಾಂತನಾಗಿ ನೋಡುತ್ತಿದ್ದ. ಒಂದು ಸುಂದರವಾದ

ಚಿತ್ರವನ್ನು ನೋಡುತ್ತಿರುವಂತೆನ್ನಿಸಿತು ಅವನಿಗೆ. ಅವಳ ಕೈಗಳನ್ನು ತನ್ನ ಕೈಯ್ಯೊಳಗೆ ತೆಗೆದುಕೊಂಡು "ನಾನು ತುಂಬಾ ಅದೃಷ್ಟವಂತ" ಎಂದು ಮಾತ್ರ ಹೇಳಿದ.

ಅಷ್ಟರಲ್ಲಿ ಒಂದು ಹನಿ ನೀರು ಅವರ ಮೇಲೆ ತೊಟ್ಟಿಕ್ಕಿತು. ಇಬ್ಬರೂ ತಲೆಯೆತ್ತಿ ನೋಡಿದರು.

ಮಾಲ ಮೇಲೆದ್ದು ಹೋಗಿ ಒಂದು ಪಾತ್ರೆಯನ್ನು ತಂದು ಅಲ್ಲಿಟ್ಟು ಇಬ್ಬರೂ ಪಕ್ಕಕ್ಕೆ ಸರಿದು ನಿಂತರು. ಅಲ್ಲಿ ಕೂಡಾ ತೊಟ್ಟಿಕ್ಕಲು ಪ್ರಾರಂಭ ವಾಯಿತು. ಅವನ ಮುಖದ ಬದಲಾಗುತ್ತಿದ್ದ ಭಾವನೆಗಳನ್ನು ಗಮನಿಸಿ "ಹಾಯಾಗಿ ಏಯರ್ ಕಂಡೀಷನ್ ಕೋಣೆಯಲ್ಲಿ ಮಲಗಿಕೊಳ್ಳಬೇಕಾಗಿದ್ದವರು! ಅಜ್ಜಿ ಇದ್ದಿದ್ದರೆ ನನ್ನನ್ನು ಬೈಯ್ಯುತ್ತಿದ್ದರು."

"ಯಾಕೆ?"

"ನಿಮ್ಮನ್ನು ಹೀಗೆ ನೆನೆಸುತ್ತಿರುವುದಕ್ಕೆ"

ಅದುವರೆವಿಗೆ ಅವರು ಮೂಲೆ ಸೇರಿದ್ದರು. ಅಲ್ಲೆಲ್ಲಾ ಪಾತ್ರೆಗಳು...... ಠಕ್ ಠಕ್ ನೀರಿನ ಹನಿಗಳು...

ಅವಳ ಸಾಮಿಪ್ಯ, ಮನೆಯಲ್ಲಿ ಬೀಳುತ್ತಿದ್ದ ಮಳೆ ಅವನಿಗೆಷ್ಟೋ ರೋಮಾಂಚಕವಾಗಿತ್ತು.

"ಈ ಮೂಲೆಯಲ್ಲೂ ಸುರಿದರೆ ಎಲ್ಲಿಗೆ ಹೋಗುವುದು?" ಮೇಲಕ್ಕೆ ನೋಡುತ್ತಾ ಕೇಳಿದ.

"ಹೊರಗೆ ಮಳೆಯಲ್ಲಿ"

"ನಿಮ್ಮ ಅಜ್ಜಿ ಬೈಯ್ಯುತ್ತಾಳೇನೋ?"

"ಆ ದಿನ ನನ್ನ ಮೇಲೆ ಸ್ಟೇಜು ಬೀಳದಂತೆ ತಡೆದಿರಿ. ಇವತ್ತು ನಿಮ್ಮ ಮೇಲೆ ಹನಿ ಬೀಳದಂತೆ ಮಾಡಲಾರೆನಾ?"

ಅವನು ಅಮಿತಾಶ್ಚರ್ಯದಿಂದ "ನನ್ನ ಮೇಲೆ ನೀನು ಬೋರಲು ಮಲಗ್ತೀಯಾ?" ಎಂದು ಕೇಳಿದ. ಮೇಲೆ ಗೌರಮ್ಮಗಳಾಗಿ ಕಾಣುವ ಹುಡುಗೀರು ವಿಜೃಂಭಿಸಿದರೆ ತುಫಾನುಗಳಾಗುತ್ತಾರೆಂದು ಅವನೆಲ್ಲೋ ಓದಿದ್ದ.

ಅವಳು ನಗು ತಡೆದುಕೊಳ್ಳುತ್ತಾ "ಛೇ! ಹಾಗಲ್ಲ...ಸೆರಗನ್ನು ಹೊದ್ದಿಸ್ತೀನಿ" ಹೇಳಿದಳು.

ಏಕೋ ಏನೋ ಅವನಿಗೆ ಆ ಕೂಡಲೇ ಪ್ರವಲ್ಲಿಕ ನೆನಪಾದಳು. ಏನು ಮಾಡುತ್ತಿರುತ್ತಾಳೆ! ಬಹುಶಃ ಸ್ವಾಮಿಯನ್ನು ಹೇಗೆ ಎದುರಿಸುವುದೆಂದು ಯೋಚಿಸುತ್ತಿರಬಹುದಾ? ತಾನೇನು ಇಲ್ಲಿ ಕರ್ತವ್ಯ ಮರೆತು ಹೀಗೆ ರೋಮ್ಯಾಂ-

ಟಿಕ್ ಮೂಡ್‌ನಲ್ಲಿ...

"ಹಾಗೇಕೆ ಮೌನವಾಗಿಬಿಟ್ಟಿರಿ?"

"ತುಂಬಾ ದುರ್ಭೇದ್ಯವಾದ ಕೋಟೆ ಅದು. ಯಾವ ದಾರಿಯಿಂದ ಒಳಗೆ ಪ್ರವೇಶಿಸುವುದು ಎಂದು ಯೋಚಿಸುತ್ತಿದ್ದೇನೆ. ಸೂರ್ಯಾರಾವ್, ರಾಮಲಾಲ್, ಪರಮೇಶ್ವರ್...ತುಂಬಾ ಭಯಂಕರ ವ್ಯಕ್ತಿಗಳು ಕಾವಲು ಕಾಯುತ್ತಿದ್ದಾರೆ."

"ನೀವು ಹೇಳುವುದು ನನಗರ್ಥವಾಗುತ್ತಿಲ್ಲ."

ಅವನು ಮಾತನಾಡಲಿಲ್ಲ. ಮಳೆಯ ಶಬ್ದವನ್ನು ಕೇಳುತ್ತಾ ಇಬ್ಬರೂ ಮೌನವಾಗಿದ್ದುಬಿಟ್ಟರು. ಅದನ್ನು ಭಂಗಪಡಿಸುತ್ತಾ ಅವಳು ಹೇಳಿದಳು–

"ಸೂರ್ಯಾರಾವ್ ಅಂದರೆ ಮಿನಿಸ್ಟರ್ ಸೂರ್ಯಾರಾವ್ ತಾನೇ?"

"ಹೌದು-ಯಾಕೆ?"

"ಯಾಕೂ ಇಲ್ಲ. ಆತನ ಮಗಳು ನಮ್ಮ ಕಾಲೇಜೇ–"

ಅವನು ಮತ್ತೆ ಯೋಚನೆಯಲ್ಲಿ ಮುಳುಗಿದ. ಮತ್ತೆರಡು ನಿಮಿಷಗಳು ಕಳೆದವು. ಒಂದು ಸಣ್ಣ ಮಿಂಚು–ಆಕಾಶದಲ್ಲಿ–ಅವನ ಮೆದುಳಿನಲ್ಲಿ. ಅದು ತಟ್ಟುತ್ತಿದ್ದಂತೆಯೇ ಅವನು ನೆಟ್ಟಗಾದ. ಅವಳು ಅವನೆಡೆಗೇ ನೋಡುತ್ತಿದ್ದಳು.

"ಮಾಲಾ-ಆ ಹುಡುಗಿಯನ್ನು ನೀನು ನನಗೆ ತೋರಿಸುತ್ತೀಯಾ?" ಎಂದು ಕೇಳಿದ.

* * * *

ಇಂದಿರಾ ಗಾಂಧಿ ಮಹಿಳಾ ಕಾಲೇಜಿನ ಕಾಂಪೌಂಡಿನಿಂದ ಹುಡುಗಿಯರು ಗುಂಪು ಗುಂಪಾಗಿ ಹೊರ ಬರುತ್ತಿದ್ದಾರೆ. ಆ ಹುಡುಗಿ ಮಾತ್ರ ಒಂಟಿಯಾಗಿ ಬರುತ್ತಿದ್ದಳು.

ವಿಹಾರಿಯ ಕಾರು ಅವಳ ಬಳಿ ಬಂದು ನಿಂತಿತು. ಕಾರಿನಿಂದಿಳಿದು "ಮೇಡಮ್ ನಿಮ್ಮ ತಂದೆಗೆ ಹಾರ್ಟ್ ಅಟ್ಯಾಕ್ ಆಗಿದೆ. ಈಗ ತಾನೆ ಡೆಲ್ಲಿಯಿಂದ ಕರೆದುಕೊಂಡು ಬಂದಿದ್ದಾರೆ" ಎಂದು ಹೇಳಿದ.

ಅವಳು ಬೆಚ್ಚಿಬಿದ್ದಳು. ಅಳುಮುಖದಿಂದ "ಈಗೆಲ್ಲಿದ್ದಾರೆ?" ಎಂದು ಕೇಳಿದಳು.

"ಆಸ್ಪತ್ರೆಯಲ್ಲಿ...ನೀವು ಅರ್ಜೆಂಟಾಗಿ ಬರಬೇಕು."

ಇಬ್ಬರೂ ಕಾರನ್ನು ಹತ್ತಿದರು. ಕಾರು ಮುಂದಕ್ಕೋಡಿತು.

"ಎಲ್ಲಿ? ಯಾವ ಆಸ್ಪತ್ರೆ?" ಅವಳು ಕೇಳಿದಳು ಗಾಬರಿಯಿಂದ.

"ಸಾರಿ ಮೇಡಮ್ ಯು ಆರ್ ಬೀಯಿಂಗ್ ಕಿಡ್ನಾಪ್ಡ್" ನಿಧಾನವಾಗಿ ಹೇಳಿದ.

ಅವಳು ಬೆಚ್ಚಿಬಿದ್ದಳು ಕೈಗಳು ನಡುಗುತ್ತಿರುವುದು ಸ್ಪಷ್ಟವಾಗಿ ಕಾಣುತ್ತಿತ್ತು. ಅವಳು ಇಳಿಯಲು ಸಾಧ್ಯವಿಲ್ಲದಂತೆ ಕಾರಿನ ವೇಗವನ್ನು ಹೆಚ್ಚಿಸಿದ! 2-3 ನಿಮಿಷ ಮೌನವಾಗಿ ಡ್ರೈವ್‌ಮಾಡಿ ಅವಳೆಡೆಗೆ ನೋಡಿದ.

ಅವಳ ಮುಖದಲ್ಲಿ ರಕ್ತ ಇಂಗಿ ಹೋದಂತೆ ಕಾಣಿಸಿತು. ತುಂಬಾ ಕಷ್ಟದಿಂದ ಅಳುವನ್ನು ತಡೆದುಕೊಂಡಳು. ಅವನಿಗೆ ಕರುಣೆ ಉಕ್ಕಿ ಬಂತು. ಅವಳೊಡನೆ ಹೇಗೆ ಮಾತಿಗೆ ಪ್ರಾರಂಭಿಸಬೇಕೆಂಬುದೇ ಅವನಿಗೆ ತಿಳಿಯಲಿಲ್ಲ.

"ನಿಮ್ಮನ್ನು 'ತಂಗಿ' ಎಂದು ಕರೆಯಲಾ?" ಎಂದು ಕೇಳಿದ.

ಅವಳು ಬೆಚ್ಚಿಬಿದ್ದು ಗಲಿಬಿಲಿಯಿಂದ ನೋಡಿದಳು. ಅವನು ಸ್ನೇಹಪೂರ್ವಕವಾಗಿ ನಕ್ಕ. ಅವಳಿನ್ನೂ ಹಾಗೆಯೇ ನೋಡುತ್ತಿದ್ದಳು.

"ನನ್ನ ಹೆಸರು ವಿಹಾರಿ...ನಿಕುಂಜ್ ವಿಹಾರಿ" ಎಂದು ಹೇಳಿದ. "ನಾನು ಕಿಡ್ನಾಪರ್ ಅಲ್ಲ. ಪ್ರೊಫೆಷನಲ್ ಕಿಡ್ನಾಪರ್ಸ್ ಯಾರೂ ತಮ್ಮ ಹೆಸರನ್ನು ಹೇಳಿಕೊಳ್ಳುವುದಿಲ್ಲ." ಅವಳು ಮೌನವಾಗಿದ್ದಳು. ಹೆದರಿಕೆಯಿಂದ ಅವಳಿನ್ನೂ ಹೊರಬಂದಿರಲಿಲ್ಲ. ಅಷ್ಟರಲ್ಲಿ ಅವನ ಸ್ವರ ಮಂದ್ರಸ್ಥಾಯಿಯಲ್ಲಿ ಕೇಳಿಸಿತು.

"ಪ್ರತಿಯೊಬ್ಬರೂ ಕ್ರಾಂತಿಯ ಬಗ್ಗೆ, ನೈತಿಕ ಮೌಲ್ಯಗಳ ಬಗ್ಗೆ ಮಾತನಾಡುತ್ತಾರೆ. ಅದನ್ನು ತಮ್ಮಿಂದಲೇ ಪ್ರಾರಂಭಿಸಬೇಕೆಂದುಕೊಳ್ಳುವುದಿಲ್ಲ. ರಾತ್ರಿ ಹಗಲು ರಿಹರ್ಸಲ್ ಆದಮೇಲೆ, ಬಾರುಗಳಲ್ಲಿ ಗಂಟಲುತನಕ ಕುಡಿದು ಸಮಾಜದ ಬಗ್ಗೆ ಮಾತನಾಡುವವರು, ರಿಕ್ಷಾದವನೊಡನೆ ಮನೆ ಸೇರಿದಾಗ ಇಪ್ಪತ್ತು ಪೈಸೆಗಾಗಿ ಜಗಳವಾಡುತ್ತಾರೆ ಆರ್ಧಗಂಟೆ ಬೇಕಾದರು. ಹಾಗೆಂದು ಕೇಳಿದರೆ "ಕಷ್ಟಪಟ್ಟು ಸಂಪಾದಿಸಿದ್ದು ಬ್ರದರ್" ಎಂದು ಹೇಳುವುದನ್ನು ನಾನೇ ಕೇಳಿದ್ದೇನೆ. ಅಷ್ಟೇಕೆ ನಿಮ್ಮ ಕಾಲೇಜಿನಲ್ಲಿ "ಲಂಚ ನಿರ್ಮೂಲನೆ ಸಾಧ್ಯವಾ?" ಎಂಬ ವಿಷಯದ ಬಗ್ಗೆ ಚರ್ಚೆ ಏರ್ಪಡಿಸಿ. ತುಂಬಾ ಜನ "ಲಂಚಗಾರರನ್ನು ಹಿಡಿದು ಬುದ್ಧಿ ಹೇಳಬೇಕು. ಶಿಕ್ಷಿಸಬೇಕು. ಮತ್ತೆ ಅದೇ ಕೆಲಸ ಮಾಡಿದರೆ ಅಂತಹವರಿಗೆ ಮರಣದಂಡನೆ ವಿಧಿಸಬೇಕು" ಎಂದು ಗಂಟಲು ಕಿತ್ತು ಹೋಗುವವರೆಗೂ ವಾದಿಸುತ್ತಾರೆ. ಅದರಲ್ಲಿ ತುಂಬಾ ಜನ ಸರ್ಕಾರಿ ಕೆಲಸಗಳಲ್ಲಿರುವವರ ಮಕ್ಕಳೇ! ಅವರಿಗೆ ನಿಜಕ್ಕೂ ಗೊತ್ತಿಲ್ಲವಾ-ತಮ್ಮ ಮನೆಗೆ ಬರುವ ಪ್ರಸೆಂಟೇಷನ್‌ಗಳು, ತಮ್ಮ ತಂದೆಯವರು ಸಂಪಾದಿಸುವ "ಆಸ್ತಿಗಳ" ಹಿಂದೆ ಲಂಚವಿರುತ್ತದೆಂದು...ಆದರೂ ಆ ಸೋಫಾಗಳನ್ನೂ ಫ್ರಿಜ್‌ಗಳನ್ನೂ ಅನುಭವಿಸುತ್ತಿರುತ್ತಾರೆ. ಯಾರಾದರೂ

ಇದರ ಬಗ್ಗೆ ಕೇಳಿದರೆ "ಪ್ರಪಂಚವೇ ಹೀಗಿದೆ. ನಮ್ಮಪ್ಪ ಒಬ್ಬರು ಸರಿಹೋದರೆ ಆದೀತಾ?" ಎಂದು ಪ್ರಶ್ನಿಸುತ್ತಾರೆ. ಈ ವಾದ ಅದೆಷ್ಟರ ಮಟ್ಟಿಗೆ ನಿಜವೋ ನನಗೆ ತಿಳಿಯದು. ಬಹುಶಃ ಒಟ್ಟು ವ್ಯವಸ್ಥೆಯೇ ಸಂಪೂರ್ಣ ಸರಿ ಆದಾಗ ಲಂಚ ಕೊಡುವುದು ಕೂಡಾ ಮನುಷ್ಯನ ದಿನಚರಿಯ ಒಂದು ಭಾಗವಾಗುತ್ತದೆ! ಅದಕ್ಕೆ ಯಾರೂ ವಿರೋಧಿಸುವುದಿಲ್ಲವೇನೋ!!! ಆದರೆ ಕೇವಲ ಒಬ್ಬನೇ ಒಬ್ಬ ವ್ಯಕ್ತಿಗೆ ಈ ರೀತಿಯ ಅರಾಜಕತೆ ಕೊನೆಯಿಲ್ಲದ ನಷ್ಟವನ್ನುಂಟುಮಾಡಿದರೆ ಆಗ ಅವ ನೇನು ಮಾಡುತ್ತಾನೆ? ಹತ್ತು ಜನರನ್ನು ಸೇರಿಸಿ ಅವರಿಗೆ ಮನಮುಟ್ಟುವಂತೆ ಹೇಳಿ ಒಂದುಗೂಡಿಸಲು ಪ್ರಯತ್ನಿಸುತ್ತಾನೆ. ಯಾರೂ ತನಗೆ ಸಹಾಯಕ್ಕೆ ಬರ ದಿದ್ದರೆ, ಸ್ವಲ್ಪ ಪೌರುಷವಿರುವವನಾದರೂ, ಪ್ರಾಣಕ್ಕೂ ಹಿಂಜರಿಯದೆ ಒಬ್ಬನೇ ತಿರುಗಿಬೀಳುತ್ತಾನೆ. ಈಗ ನಾನು ಮಾಡುತ್ತಿರುವ ಕೆಲಸವೂ ಅದೇ".

ಅವನಿಷ್ಟು ಹೊತ್ತು ನಿಧಾನವಾಗಿ, ಸ್ಪಷ್ಟವಾಗಿ ಮಾತನಾಡಿದ್ದು ಅವಳಿಗೆ ಧೈರ್ಯಬರುವಂತೆ ಮಾಡಿತು. ಯಾವುದೋ ದುರುದ್ದೇಶದಿಂದ ಅವನು ತನ್ನನ್ನು ಕಿಡ್ನಾಪ್ ಮಾಡಿಲ್ಲವೆಂದು ಅವಳಿಗನ್ನಿಸಿತು. ಮೇಲಾಗಿ ಅವನು ಖಳ ನಟನಂತೆ ಕಾಣದೆ ಸಭ್ಯಸ್ಥನಂತೆ ಕಾಣುತ್ತಿದ್ದಾನೆ. ಆಗ ಅವಳಿಗೆ ಸಂಪೂರ್ಣ ಭಯ ಮಾಯವಾಗಿ, ಕುತೂಹಲ ಮೂಡಿತು. "ಇದನ್ನೆಲ್ಲಾ ನನಗೇಕೆ ಹೇಳು ತ್ತಿದ್ದೀರಿ?" ಎಂದು ಕೇಳಿದಳು.

"ಈ ಸ್ವಲ್ಪ ದಿನಗಳ ಹಿಂದೆ ಒಬ್ಬ ಮುಗ್ಧ ಬಾಲಕನನ್ನು ಕೊಂದು ಅಸೆಂಬ್ಲಿಯ ಮುಂದೆ ಹಾಕಿದ್ದರಲ್ಲಾ ನೆನಪಿದೆಯಾ?"

"ಪೇಪರಿನಲ್ಲಿ ಓದಿದ್ದೆ"

"ಹಾಗೆ ಕೊಂದವರ ಬಗ್ಗೆ ನಿಮ್ಮ ಅಭಿಪ್ರಾಯವೇನು?"

"ಆ ಪಾಪಿಯನ್ನು ಸರಿಯಾಗಿ ಶಿಕ್ಷಿಸಬೇಕು. ಮತ್ತೆ ಅಂತಹ ಕೆಲಸ ಮಾಡ ದಂತೆ ಬುದ್ಧಿ ಹೇಳಬೇಕು. ಗಲ್ಲಿಗೇರಿಸಬೇಕು" ಆವೇಶದಿಂದ ಹೇಳಿದಳು.

ವಿಹಾರಿ ನಕ್ಕ. "ಸರಿಯಾಗಿ ಎರಡು ನಿಮಿಷಗಳ ಮುಂಚೆ ನಾನು ಹೇಳಿದ ಮಾತುಗಳನ್ನೇ ನೀವು ಈಗ ಹೇಳುತ್ತಿದ್ದೀರಿ?"

"ನಾನು ಬಾಯಿ ಮಾತಿಗೆ ಹೇಳುತ್ತಿಲ್ಲ, ಮನಃಸ್ಫೂರ್ತಿಯಾಗಿ ಹೇಳು ತ್ತಿದ್ದೇನೆ."

"ಅವರು ನಿಮ್ಮ ಸಂಬಂಧಿಕರಾದರೆ?"

"ಯಾರಾದರೂ ಸರಿ–" ಸ್ವರವೆತ್ತಿ ಹೇಳಿದಳು.

ಅವನು ಅವಳನ್ನು ನೇರವಾಗಿ ನೋಡುತ್ತಾ–"ತಂದೆ ಆದರೆ?" ಅಂದ.

ಅವಳು ಸಿಡಿಲು ಬಡಿದಂತೆ ನೋಡಿದಳು. "ಏನಂದಿರಿ?"

"ಆ ಹುಡುಗ ಸಾಯಲು ಕಾರಣ ನಿಮ್ಮ ತಂದೆಯೇ ಆದರೆ—ಎಂದು ಕೇಳುತ್ತಿದ್ದೀನಿ."

ಅವಳು ಅವನೆಡೆಗೆ ಅನುಮಾನದಿಂದ ನೋಡಿದಳು. "ನೀವು ನನ್ನನ್ನು ಯಾರೆಂದು ತಿಳಿದುಕೊಂಡಿದ್ದೀರಿ–ನಾನು ಮಿನಿಸ್ಟರ್ ಸೂರ್ಯಾರಾವ್ ಮಗಳು."

"ಛೀಫ್ ಮಿನಿಸ್ಟರ್ ಆಗಲು ನಿಮ್ಮ ತಂದೆ ಆಡಿದ ನಾಟಕ ಇದೆಲ್ಲಾ ಮಿಸ್ ವರಲಕ್ಷ್ಮಿ! ರಾಜ್ಯದಲ್ಲಿ ಅದು ಸಾಧ್ಯವಾಗದಾದಾಗ ಕೇಂದ್ರದಲ್ಲಿ ಮಂತ್ರಿಯಾದರು."

"ನೋ...ನಾನಿದನ್ನೆಲ್ಲಾ ನಂಬಲಾರೆ" ಎಂದು ಕಿರುಚಿದಳು.

"ಇದನ್ನೆಲ್ಲಾ ನಾನು ನಿಮಗೆ ಹೇಳಬೇಕಾದ ಅವಶ್ಯಕತೆಯಿಲ್ಲ. ಒಂದೆರಡು ದಿನಗಳ ಮಟ್ಟಿಗೆ ನಿಮ್ಮನ್ನು ಕಿಡ್ನಾಪ್ ಮಾಡಿ ನನ್ನ ಕೆಲಸಗಳನ್ನೆಲ್ಲಾ ಪೂರೈಸಿಕೊಳ್ಳಬಲ್ಲೆ. ಆದರೆ ನಿಮಗೆ ನಾನು ಈ ವಿಷಯಗಳನ್ನೆಲ್ಲಾ ಹೇಳುತ್ತಿರುವುದಕ್ಕೆ ಕಾರಣ ನಿಮ್ಮನ್ನು ನಮ್ಮಲ್ಲಿ ಸೇರಿಸಿಕೊಳ್ಳಲು! ವಯಸ್ಸು ಬೆಳೆಯುತ್ತಿದ್ದಂತೆ ವ್ಯಾಮೋಹವೂ ಬೆಳೆಯುತ್ತದೆ. ಸ್ವಾರ್ಥ ಹೆಚ್ಚಾಗುತ್ತದೆ. ಯೌವ್ವನದಲ್ಲಿ ಅವೆರಡೂ ಇರುವುದಿಲ್ಲ. ಅದಕ್ಕೆ ದೇಶವನ್ನು ಉಳಿಸುವುದು ಅಳಿಸುವುದು ಯುವ ಪೀಳಿಗೆಯಿಂದಲೇ ಸಾಧ್ಯವೆಂದು ರಾಜಕೀಯ ತಜ್ಞರು ಹೇಳುತ್ತಾರೆ. ನಿಮ್ಮ ತಂದೆಯ ಬಗ್ಗೆ ಹೇಳಬೇಕೆಂದರೆ ತುಂಬಾ ಇದೆ. ಅಂಥ ದುಷ್ಟ, ಕ್ರೂರಿ ಮತ್ತೊಬ್ಬನಿರುತ್ತಾನೆಂದೇ ನನಗೆ ಅನುಮಾನ. ಆದರೆ ಆತ ಸ್ವತಃ ಕೊಲೆಮಾಡುವುದಿಲ್ಲ. ಪದವಿಗಾಗಿ ಏನನ್ನಾದರೂ ಮಾಡುತ್ತಾನೆ. ಸರಿಯಾದ ರಾಜಕೀಯ ನಾಯಕ" ಎನ್ನುತ್ತಾ ಸ್ವಾಮಿ ಮಕ್ಕಳನ್ನು ಕಿಡ್ನಾಪ್ ಮಾಡಿದ್ದರಿಂದ ಪ್ರಾರಂಭಿಸಿ ತಮ್ಮನ್ನು ಕೊಲ್ಲುವ ಪ್ರಯತ್ನದವರೆಗೂ ಹೇಳಿದ.

ಅವಳ ತುಟಿಗಳು ನಡುಗುತ್ತಿದ್ದವು. ಅದು ಆವೇಶವೋ ಉದ್ವಿಗ್ನತೆಯೋ ತಿಳಿಯಲಿಲ್ಲ, "ಇದು...ಇದೆಲ್ಲ ನಿಜವಾ? ನಾನು ನಂಬಲಾರೆ" ಅಂದಳು.

"ಪೊಲೀಸರಂತೆ ನೀವು ಕೂಡಾ ಸಾಕ್ಷಿಗಳನ್ನು ಕೇಳಿದರೆ ನಾನೇನೂ ಹೇಳಲಾರೆ. ನಿರೂಪಿಸಲಾರದಂತಹ ನಿಜ ಇದು. ಆದರೆ ನಿಮ್ಮ ಮನಸ್ಸಾಕ್ಷಿಗಳಿಗೆ ನಿಜ ತಿಳಿಯಬೇಕೆಂದರೆ ನಾನು ಹೇಳಿದಂತೆ ಮಾಡಿ" ಎಂದು ಅವಳಿಗೆ ವಿವರಿಸಿದ. 5 ನಿಮಿಷಗಳ ನಂತರ ಅವಳು ಡೆಲ್ಲಿಗೆ ಫೋನ್ ಮಾಡಿದಳು ಅವನು ಪಕ್ಕದಲ್ಲೇ ಇದ್ದ.

"ಅಪ್ಪಾ"

"ಓ ನೀನಾ ತಾಯಿ! ಹೇಗಿದ್ದಿ? ಏನು ವಿಷಯ? ಎಲ್ಲಿಂದ ಮಾತಾಡು

ತ್ತಿದ್ದಿ? ಮನೆಯಿಂದಲಾ?" ಪ್ರಶ್ನೆಗಳ ಮಳೆ ಸುರಿಸಿದ ಮುದ್ದಿನ ಮಗಳಿಗೆ ಸೂರ್ಯಾರಾವ್ ಡೆಲ್ಲಿಯಿಂದಲೆ.

"ಮನೆಯ ಬಳಿಯಿಂದಲೇ ಅಪ್ಪಾ"

"ಚೆನ್ನಾಗಿ ಓದ್ತಿದೀಯಾ?"

"ಓದ್ತಿದೀನಪ್ಪಾ...ಅಪ್ಪಾ"

"ಏನು .."

"ನೆನ್ನೆ ಅನಂತಾನಂತಸ್ವಾಮಿಯ ದರ್ಶನಕ್ಕೆ ಹೋಗಿದ್ದೆ"

"ಏಕೆ?"

"ಫ್ರೆಂಡ್ಸ್ ಜೊತೆ ಹೋಗಿದ್ದೆ. ನನ್ನನ್ನು ಅವರು ಗುರುತಿಸಿ, 'ಸೂರ್ಯಾರಾವ್ ಮಗಳು ತಾನೇ' ಎಂದು ಆಶೀರ್ವದಿಸಿದರು.

ಅನಂತರ ಮತ್ತೆ ನಿಧಾನವಾಗಿ '...ಅಪ್ಪಾ' ಅಂದಳು.

"ಏನಮ್ಮಾ .. ಏನೋ ಕೇಳಬೇಕೆಂದಿದ್ದೀಯಲ್ಲಾ..."

"ನಿಮ್ಮಪ್ಪನಿಗೆ ಮಂತ್ರಿ ಪದವಿಯನ್ನು ಕೊಡಿಸಿದ್ದು ನಾನೇಂತ ಅವರು ಹೇಳಿದರು" ಎಂದು ಪೂರ್ತಿ ಮಾಡಿದಳು. ಅತ್ತಕಡೆಯಿಂದ ಸೂರ್ಯಾರಾವ್ ಗಹಗಹಿಸಿ ನಕ್ಕ. "ಅನ್ನಲಿ ಬಿಡು. ನಮಗೆ ಗುರು ಸಮಾನ ಆತ. ಆತನ ಪ್ರಸಾದವೇ ಅಂದುಕೋ" ಅವನ ಮಾತಿನ್ನೂ ಪೂರ್ತಿಯಾಗಿರಲಿಲ್ಲ,

"ಯಜ್ಞಕ್ಕೆ ಬಲಿ ಕೊಟ್ಟಂತೆ ನಿಮ್ಮಪ್ಪನ ಪದವಿಗೆ ಪುಟ್ಟ ಹುಡುಗನನ್ನು ಬಲಿಕೊಡಬೇಕಾಯಿತೆಂದೂ ಹೇಳಿದ ಅಪ್ಪ."

ಅತ್ತ ಸೂರ್ಯಾರಾವ್ ಮುಖದಲ್ಲಿದ್ದ ನಗು ಮಾಯವಾಯಿತು! ಇರಿಟೇಷನ್ ತುಂಬಿದ ಮುಖದಿಂದ "ಅವನ ಮುಖ" ಅಂದ.

ಅವಳು ನಿಧಾನವಾಗಿ, "...ನಿಜವಾ ಅಪ್ಪ?" ಎಂದು ಕೇಳಿದಳು.

"ಇಲ್ಲಮ್ಮಾ! ಯಾರೋ ಯಾರನ್ನೋ ಕೊಂದು ಅಸೆಂಬ್ಲಿ ಎದುರು ಹಾಕಿದರೆ ಅದಕ್ಕೂ ನನ್ನ ಮಂತ್ರಿಯ ಪದವಿಗೂ ಏನು ಸಂಬಂಧ? ವಿಚಾರಿಸ್ತೀನಿಬಿಡು."

"ಯಜ್ಞಕ್ಕೆ ಹುಡುಗನ ಬಲಿ ಎಂದೊಡನೆ ಅಸೆಂಬ್ಲಿ ಮುಂದೆ ಎಂದು ನಿಮಗೆ ಹೇಗೆ ತಿಳಿಯಿತಪ್ಪಾ?"– ಕೇಳಬೇಕೆಂದುಕೊಂಡಳು. ಆದರೆ ಕೇಳಲಿಲ್ಲ, ಅರ್ಥವಾಗಿಹೋಯಿತು. ಒಮ್ಮೆಗೇ ಫೋನನ್ನಿಟ್ಟುಬಿಟ್ಟಳು. ವಿಹಾರಿಯೊಡನೆ ಹೋಗಿ ಕಾರಿನಲ್ಲಿ ಕುಳಿತಳು.

"ಈಗ ಹೇಳಿ ಅಂತಹ ಪಾಪಿಯನ್ನು ಚೂರು ಚೂರು ಕಡಿದರೂ ಪಾಪವಿಲ್ಲ ತಾನೇ?"

ಅವಳು ಕೂಡಲೇ ಉತ್ತರಿಸಲಿಲ್ಲ. ಸ್ವಲ್ಪ ಸಮಯದ ನಂತರ ಕೇಳಿದಳು,

"ಈಗ ನಾನೇನು ಮಾಡಬೇಕು?"

"ಏನೂ ಮಾಡಬೇಕಾದ ಅಗತ್ಯವಿಲ್ಲ. ವೇಗವಾಗಿ ಸುತ್ತುವ ಮೋಸದ ಚಕ್ರ ಇದು. ಅನಂತಾನಂತಸ್ವಾಮಿ ವೇಗವಾಗಿ ಇದನ್ನು ಸುತ್ತಿಸುತ್ತಿದ್ದಾನೆ. ಈ ಚಕ್ರದಲ್ಲಿ ನಿನ್ನ ತಂದೆ, ನನ್ನ ತಂದೆ ಇನ್ನೂ ಕೆಲವರಿದ್ದಾರೆ, ಈ ಚಕ್ರವನ್ನು ನಿಲ್ಲಿಸಬೇಕೆಂದುಕೊಳ್ಳುತ್ತಿದ್ದೇನೆ. ಅಷ್ಟು ವೇಗವಾಗಿ ಸುತ್ತುವ ಚಕ್ರ ಒಮ್ಮೆಗೇ ನಿಂತರೆ ತುಂಬಾ ಜನಕ್ಕೆ ತೊಂದರೆ ಆಗುತ್ತದೆ. ನನ್ನ ತಂದೆಯನ್ನು ರಕ್ಷಿಸಿಕೊಳ್ಳಲು ನಿನ್ನ ತಂದೆಗೆ ತೊಂದರೆಯಾದರೆ ಆ ನಂತರ ನನ್ನ ಮನಸ್ಸಿಗೆ ನೋವಾಗದಿರಲೆಂದೇ ಇವನ್ನೆಲ್ಲಾ ನಿಮಗೆ ಹೇಳುತ್ತಿರುವುದು ಅದರ ನೈತಿಕ ಕರ್ತವ್ಯ ಕೂಡಾ ನನ್ನದೇ" ಎನ್ನುತ್ತಾ ಕಾರನ್ನು ಸ್ಟಾರ್ಟ್ ಮಾಡಿದ.

"ನಾವೆಲ್ಲಿಗೆ ಹೋಗುತ್ತಿದ್ದೇವೆ?"

"ಸಿ.ಬಿ.ಐ. ಡೆಪ್ಯೂಟಿ ಛೀಫ್ ಪ್ರವಲ್ಲಿಕರ ಮನೆಗೆ–"

* * * *

ಸೂರ್ಯಾರಾವ್‌ಗೆ ತುಂಬಾ ಕೋಪ ಬಂತು. ಸ್ವಾಮಿಯಂತಹವನು ಅಷ್ಟೇಕೆ ಬೇಜವಾಬ್ದಾರಿಯಿಂದ ವರ್ತಿಸಿದನೆಂದುಕೊಂಡ.

ಪಿ. ಎ.ಗೆ ಹೇಳಿ ಸ್ವಾಮಿಗೆ ಕನೆಕ್ಷನ್ ಕೊಡುವಂತೆ ಸೂಚಿಸಿದ.

ಐದು ನಿಮಿಷಗಳಲ್ಲಿ ಎಸ್.ಟಿ.ಡಿ. ಬಂತು.

"ಸ್ವಾಮಿಗಳಿಲ್ಲ" ಅತ್ತಕಡೆಯಿಂದ ಕೇಳಿಸಿತು.

"ಯಾರು ಮಾತನಾಡುತ್ತಿರುವುದು?"

"ರಾಮಲಾಲ್"

"ಸ್ವಾಮಿಯನ್ನು ಕೂಡಲೇ ನನ್ನೊಡನೆ ಮಾತನಾಡಿಸುವಂತೆ ತಿಳಿಸು"–

"ಹಾಗೇ ಆಗಲಿ--"

"ಅವರಿಗೆ ಬುದ್ಧಿ ನೆಟ್ಟಗಿದೆ ತಾನೇ? ಚಿಕ್ಕ ಹುಡುಗರೊಡನೆ ಆ ರೀತಿಯಾ ಮಾತನಾಡುವುದು?"

"ಏನು ಮಾತನಾಡಿದರು?" ಎಂದು ಕೇಳಲಿಲ್ಲ ರಾಮಲಾಲ್. "ಸರಿ ಅದನ್ನೂ ಹೇಳುತ್ತೇನೆ ಬಿಡಿ" ಎಂದ ನಿರ್ಲಿಪ್ತನಾಗಿ. ಸೂರ್ಯಾರಾವ್ ನಾಲಿಗೆ ಕಚ್ಚಿಕೊಂಡು "ಬೇಡಬಿಡು" ಎಂದ.

"ಹಾಗೇ ಆಗಲಿ" ರಾಮಲಾಲ್ ಫೋನಿಟ್ಟುಬಿಟ್ಟ. ಸೂರ್ಯಾರಾವ್ ಮೀಟಿಂಗಿಗೆ ಹೊರಟ. ಈ ಸಂಭಾಷಣೆ ನಡೆಯುತ್ತಿದ್ದ ಸಮಯಕ್ಕೆ ವಿಹಾರಿ

ವಿಮಾನದಲ್ಲಿ ಡೆಲ್ಲಿಗೆ ಬರುತ್ತಿದ್ದ.

ಮಂತ್ರಿ ಸೂರ್ಯಾರಾವ್ ಹಾಗೂ ಜಪಾನ್‌ನ ವಿದೇಶ ವ್ಯವಹಾರಗಳ ಮಂತ್ರಿಗಳ ನಡುವೆ ಅಗ್ರಿಮೆಂಟ್ ಆ ಹಾಲಿನಲ್ಲಿ ನಡೆಯಲಿತ್ತು.

ಸರ್ಕಾರೀ ಅಧಿಕಾರಿಗಳೆಲ್ಲಾ ಗಡಿಬಿಡಿಯಿಂದಿದ್ದರು.

ಜಪಾನ್‌ನಿಂದ ಹಡಗು ಬರುತ್ತದೆ. ಅದರ ಸಂಬಂಧವಾಗಿ ಇಬ್ಬರೂ ಸಹಿ ಮಾಡಬೇಕಿತ್ತು.

"ನೀವು ಜಪಾನ್‌ಗೆ ಬರಬೇಕು" ಆಹ್ವಾನಿಸಿದ ಜಪಾನಿನ ವಿದೇಶಾಂಗ ಮಂತ್ರಿ. "ಷ್ಯೂರ್, ಷ್ಯೂರ್" ಎನ್ನುತ್ತಿದ್ದಾನೆ ಸೂರ್ಯಾರಾವ್. ಅದೇ ಸಮಯಕ್ಕೆ ಸೆಕ್ಯೂರಿಟಿ ಗಾರ್ಡ್ ಬಂದು, "ಸಾರ್, ಯಾರೋ ಸ್ವಾಮಿಯ ಕಡೆಯವರಂತೆ ಆಗಲ್ಲಾಂದ್ರೂ ಕೇಳ್ತಾ ಇಲ್ಲ. ಕೂಡಲೇ ನಿಮ್ಮನ್ನು ನೋಡಬೇಕೆಂದು ಕೇಳುತ್ತಿದ್ದಾರೆ" ಎಂದ.

ಸೂರ್ಯಾರಾವ್‌ನ ಹಣೆಯಲ್ಲಿ ಗೆರೆಗಳು ಮೂಡಿದವು. "ಈಗಲೇ ಬರುತ್ತಿದ್ದೇನೆ" ಎನ್ನುತ್ತಾ ಪಕ್ಕದ ಛೇಂಬರಿಗೆ ಹೋದ.

ತುಂಬಾ ಚಿಕ್ಕ ಕೊಠಡಿ ಅದು. ಏಯರ್ ಕಂಡೀಷನರ್‌ನಿಂದಾಗಿ ತಣ್ಣಗಿದೆ ಅಲ್ಲಿ, ಒಂದು ಗೋಡೆಗೆ ನೆಹ್ರು, ಮತ್ತೊಂದು ಗೋಡೆಗೆ ಇಂದಿರಾ ಗಾಂಧಿಯ ಫೋಟೋಗಳನ್ನು ತೂಗುಹಾಕಿದ್ದಾರೆ. ಹೊರಗಡೆಯ ಗಡಿಬಿಡಿ ಒಳಗೆ ಕೇಳಿಸುತ್ತಿದೆ. ವಿಹಾರಿ ಕೊಠಡಿಯ ಮಧ್ಯೆ ಕುಳಿತಿದ್ದಾನೆ.

* * * * *

"ನೀನಾ?" ಅಂದ ಕೋಪದಿಂದ ಸೂರ್ಯಾರಾವ್.

ಉತ್ತರವಾಗಿ ಸುಮ್ಮನೆ ನಕ್ಕ ವಿಹಾರಿ.

"ಸ್ವಾಮಿಯ ಹೆಸರೇಕೆ ಹೇಳಿದಿ? ಯಾಕೆ ಹೇಳಿದಿ?"

"ಇಷ್ಟು ಗಡಿಬಿಡಿಯ ವೇಳೆಯಲ್ಲಿ ನಿಮ್ಮನ್ನು ಹೊರಗೆ ಕರೆಸಲು ಅದೊಂದೇ ಉಪಾಯ ಉಳಿದಿದ್ದು. ಏಕೆ ಬಂದೆನೆಂದರೆ..." ಎನ್ನುತ್ತಾ ಕೈಯ್ಯಲ್ಲಿದ್ದ ಪಾಕೆಟ್ಟನ್ನು ಟೇಬಲ್ ಮೇಲಿಡುತ್ತಾ ಅವನೆಡೆಗೆ ನೋಡಿದ.

"ಏನದು?"

"ನಿಮ್ಮ ಮಗಳು ಇವತ್ತು ಉಟ್ಟಿದ್ದ ಸೀರೆ"

"ವ್ಹಾಟ್?"

"ಬ್ಲೌಸ್ ಕೂಡಾ ಇದೆ."

"ನಿಂಗೇನಾದರೂ ತಲೆ ಕೆಟ್ಟಿದೆಯಾ? ಪೋಲೀಸ್...ಪೋಲೀಸ್...... ಪೋಲೀಸ್..."

"ಕೂಗಬೇಡ. ಹೊರಗೆ ಪತ್ರಿಕಾ ವರದಿಗಾರರು ಇದ್ದಾರೆ. ಮಂತ್ರಿಯವರ ಮಗಳ ಸೀರೆ ಯಾರ ಬಳಿಯೋ ಇದೆಯೆಂದರೆ ಓದುಗರಿಗೆ ಬಿಸಿ ಸುದ್ದಿ."

ಸೂರ್ಯಾರಾವ್ ಎಚ್ಚೆತ್ತುಕೊಂಡ. "ಈ ಸೀರೆ ಬ್ಲೌಸ್ ನಿನ್ನ ಬಳಿಗೆ ಹೇಗೆ ಬಂತು?"

"ನೆನ್ನೆಯಿಂದಲೂ ನಿನ್ನ ಮಗಳು ಯಾವುದೊ ನೋವನ್ನು ಅನುಭವಿಸುತ್ತಿದ್ದಾಳೆ. ಈ ದಿನ ನನ್ನ ಬಳಿಗೆ ಬಂದಳು, ನೀನು ಮುಖ್ಯಮಂತ್ರಿ ಪದವಿಗಾಗಿ ಮಾಡಿದ ದುಷ್ಟ ಕೆಲಸದ ಬಗ್ಗೆ ಅವಳಿಗ್ಯಾರೋ ಹೇಳಿದಂತಿದೆ. ಆ ಮಕ್ಕಳನ್ನು ರಕ್ಷಿಸಿದ್ದು ನಾನೇ ಎಂದು, ಆ ವಿವರಗಳು ನನಗೆ ಗೊತ್ತಿರಬಹುದೇದು ನನ್ನ ಬಳಿಗೆ ಬಂದಿದ್ದಳು."

ಸೂರ್ಯಾರಾವ್ ಹಲ್ಲು ಕಚ್ಚಿಕೊಂಡು "ಹೇಳಿ ಬಿಟ್ಟೆಯಾ?" ಎಂದ.

ವಿಹಾರಿ ನಕ್ಕುಬಿಟ್ಟ. "ಶತ್ರುವಿನ ಮಗಳ ಹೊಗಳಿಕೆ ನನಗೆ ಬೇಕಾಗಿಲ್ಲ."

"ನಾನೇನೂ ಹೇಳಲಿಲ್ಲ. ಹೇಳುವ ಅವಶ್ಯಕತೆಯೂ ಇಲ್ಲ."

"ಮತ್ತೇನು ಮಾಡಿದಿ?"

"ಹುಲಿಯ ಬೋನಿನಲ್ಲಿ ತಾನಾಗೇ ಬಂದ ಮೊಲವನ್ನು ಹುಲಿಬಿಡುತ್ತದಾ? ಅದನ್ನು ಅಲ್ಲಿಯೇ ಬಂಧಿಸಿ, ಕೂಡಲೇ ವಿಮಾನದಲ್ಲಿ ನಿನ್ನ ಬಳಿಗೆ ಬಂದೆ."

"ಯಾಕೆ?"

"ನಿನ್ನಿಂದ ಒಂದು ಕೆಲಸ ಮಾಡಿಸಿಕೊಳ್ಳುವ ಷರತ್ತಿನ ಮೇಲೆ ನಿನ್ನ ಮಗಳ ಬಿಡುಗಡೆ ಮಾಡುತ್ತೇನೆ."

"ಕಿಡ್ನಾಪಿಂಗ್‌ಗೆ ಎಷ್ಟು ವರ್ಷಗಳ ಶಿಕ್ಷೆ ಗೊತ್ತಾ?"

"ನಿನ್ನ ಮಗಳೆಂದರೆ ನಿನಗೆಷ್ಟು ಪ್ರೀತಿಯಿದೆಯೆಂದು ಕೂಡಾ ಗೊತ್ತು."

ವಿಹಾರಿಯ ಮುಖದಲ್ಲಿ ನಗು ಮಾಯವಾಯಿತು. "ನಾನು ಇನ್ನು ಅರ್ಧ ಗಂಟೆಯಲ್ಲಿ ಇಲ್ಲಿಂದ ಫೋನ್ ಮಾಡದಿದ್ದರೆ ಅಲ್ಲಿ ನಿನ್ನ ಮಗಳು ರೇಪ್‌ಗೆ ಗುರಿಯಾಗುತ್ತಾಳೆ. ನಾನೆಷ್ಟು ಪ್ರಾಕ್ಟಿಕಲ್ ಮನುಷ್ಯನೆಂದು ಹೇಳುವುದಕ್ಕಾಗಿ ಅವಳನ್ನು ಕೇವಲ ಲಂಗ, ಬ್ರಾದಿಂದ ಮಾತ್ರ ಇರಿಸಿಬಂದಿದ್ದೇನೆ. ನಿನ್ನಂಥ ರಾಕ್ಷಸ ಇಂತಹ ಋಜುವಾತನ್ನು ನೋಡದಿದ್ದರೆ ನಂಬುವುದಿಲ್ಲವೆಂದು ಹೀಗೆ ಮಾಡಿದ್ದೇನೆ. ನಾನು ನಿನಗಿಂತಲೂ ದೊಡ್ಡ ರಾಕ್ಷಸನೆಂದೂ, ಎಲ್ಲಕ್ಕೂ ಸಿದ್ಧನಾಗಿದ್ದೇನೆಂದೂ ಹೇಳುವುದಕ್ಕಾಗಿ ಇದನ್ನು ತಂದಿದ್ದೇನೆ. ಈಗ ಕರಿ ಪೋಲೀಸರನ್ನು ಬೇಕಾದರೆ."

ಸೂರ್ಯಾರಾವ್ ತುಂಬಾ ಹೊತ್ತು ಮಾತನಾಡಲಿಲ್ಲ. ನಂತರ ಹೀನಸ್ವರ ದಲ್ಲಿ, "ನಿನಗೇನುಬೇಕು?" ಎಂದು ಕೇಳಿದ.

"ಗುಡ್, ನನಗೆ ಬೇಕಾದದ್ದು ತುಂಬಾ ಸಿಂಪಲ್."

"ಏನದು?"

"ಈದಿನ ಸಹಿ ಮಾಡುವ ಕಾಗದಗಳಿಗೆ ನಾಳೆ ಸಹಿ ಮಾಡುತ್ತಿದ್ದಿ–ಅಷ್ಟೆ!"

"ವ್ವಾ ಟ್–?"

"ಜಪಾನ್‌ನಿಂದ ಬರುತ್ತಿರುವ ಹಡಗಿನ ಬಗ್ಗೆ ಕೆಲವು ವಿವರಣೆಗಳು ಬೇಕು ಎಂದು ಕಾರಣ ನೀಡಿ ನಾಳೆ ಸಹಿ ಮಾಡುತ್ತಿದ್ದಿ. ನಂಗೆ ಬೇಕಾದದ್ದು ಅಷ್ಟೇ."

"ಅದರಿಂದ ನಿನಗೇನು ಲಾಭ?"

"ಅದು ನಿನಗೆ ಅನವಶ್ಯಕ. ನಿನ್ನ ಮಗಳನ್ನು ಕ್ಷೇಮವಾಗಿ ಪಡೆಯಬೇಕೆಂದರೆ ಹೀಗೆ ಮಾಡಲೇಬೇಕು."

"ಇಷ್ಟು ಚಿಕ್ಕ ಕೆಲಸವಾ?"

"ಹೌದು ಚಿಕ್ಕ ಕೆಲಸವೇ"

"ಆಮೇಲೆ ಇನ್ನೇನೂ ಬೇರೆ ಕಂಡೀಷನ್‌ಗಳನ್ನು ಹಾಕುವುದಿಲ್ಲ ತಾನೆ?"

"ಇಲ್ಲ"

"ನಂಬಿಕೆ ಏನು?"

"ನಿನಗಿನ್ನೊಂದು ಆಯ್ಕೆ ಇಲ್ಲ. ಇಂತಹ ವಿಷಯಗಳಲ್ಲಿ ನಂಬಿಕೆ ಬಿಟ್ಟು ಬೇರೆ ದಾರಿಯಿಲ್ಲ."

ಸೂರ್ಯಾರಾವ್ ತಡಬಡಿಸಿ, "ಸರಿ...ಓಕೆ" ಎಂದ.

"ನಾಳೆ ಇಷ್ಟು ಹೊತ್ತಿಗೆ ನಿನ್ನ ಮಗಳು ಫೋನ್ ಮಾಡುತ್ತಾಳೆ, ಕ್ಷೇಮ ವಾಗಿ ನಿಮ್ಮ ಮನೆಯಿಂದ!"

ವಿಹಾರಿ ಹೊರಟುಹೋದ.

ಸೂರ್ಯಾರಾವ್ ಹಾಗೆಯೇ ನಿಂತುಬಿಟ್ಟ. ನಾಳೆಯ ವರೆಗೂ ಈ ಸಹಿ ಮಾಡುವುದನ್ನು ಮುಂದೂಡುವುದು ಕಷ್ಟವೇನಲ್ಲ. ವಿಹಾರಿ ಈ ಕೋರಿಕೆ ಯನ್ನೇಕೆ ಬಯಸಿದನೋ ಅವನಿಗೆ ಅರ್ಥವಾಗಲಿಲ್ಲ.

ಮಹಾಸಮುದ್ರಗಳಲ್ಲಿನ ಏರುಪೇರು ಒಂದು ಸಣ್ಣ ಸುಳಿಗಾಳಿಯಿಂದ ಪ್ರಾರಂಭವಾಗುತ್ತದೆಂದು ಅವನಿಗೆ ಗೊತ್ತಿರಲಿಲ್ಲ.

# 18

ಅನಂತಾನಂತಸ್ವಾಮಿ ಹೆಚ್ಚಾಗಿ ನಗುವುದಿಲ್ಲ, ಆದರೆ ಹಣೆಯ ಮೇಲಿನ ಗೆರೆಗಳೇ ಅವನ ಮನೋಕಾಠಿಣ್ಯವನ್ನು ಸೂಚಿಸುತ್ತಿರುತ್ತದೆ.

ಅವನ ನಗು ಕಂಡವರೇ ಅಪರೂಪ. ಜಮ್ಮುವಿನಲ್ಲಿ ಕೆಲವು ಜನ ದೂರ ದರ್ಶನದಲ್ಲಿ 'ರಾಮಾಯಣ' ಬರುತ್ತಿದ್ದ ಸಮಯದಲ್ಲಿ ಕರೆಂಟು ಹೋದದ್ದರಿಂದ ಉದ್ರಿಕ್ತರಾಗಿ ಎಲೆಕ್ಟ್ರಿಕ್ ಆಫೀಸನ್ನೇ ಸುಟ್ಟ ಸುದ್ದಿ ಅದು.

"ರಾಮಲಾಲ್ ಆ ಸುದ್ದಿ ಓದಿದೆಯಾ" ಸ್ವಾಮಿ ಕೇಳಿದ.

ರಾಮಲಾಲ್ ಪೇಪರನ್ನು ತೆಗೆದುಕೊಂಡು ಓದಿದ. ಅವನಿಗೆ ಆಶ್ಚರ್ಯ ವಾಯಿತು. ಆದರೆ ಆಶ್ಚರ್ಯ ಪೇಪರಿನಲ್ಲಿ ಓದಿದ ಸುದ್ದಿಯಿಂದ ಬಂದದ್ದಲ್ಲ. ಸ್ವಾಮಿ ಅಷ್ಟು ಸಂತೋಷದಿಂದಿರುವುದನ್ನು ಕಂಡು... ಅನುಚರರೊಡನೆ ಅಷ್ಟು ಕ್ಲೋಸಾಗಿ ಮಾತನಾಡುತ್ತಿರುವುದನ್ನು ಕಂಡು.

"ಏನಿದೆ ಸ್ವಾಮಿ ಅದರಲ್ಲಿ?"

"ಏನಿದೆಯಾ.. ? ಹ್ಞು ಏನು ಇಲ್ಲ? ಮೊನ್ನೆ ನೀನೇಕೆ ಆ ಕರೆಂಟ್ ಆಫೀಸನ್ನು ಬಾಂಬಿಟ್ಟು ಸುಟ್ಟುಬಿಡುವಷ್ಟು ಆವೇಶಪಟ್ಟೆ?"

ಸ್ವಾಮಿಯ ಪ್ರಶ್ನೆಗೆ ರಾಮಲಾಲ್ ನಾಚಿಕೊಂಡ. ಅವನು ಪ್ರಾಣ ತೆಗೆಯುವ ರಾಕ್ಷಸಿಯೇ, ಅವನಲ್ಲೊಂದು ಸಣ್ಣ ಬಲಹೀನತೆಯಿದೆ. ತನ್ನ ಇಬ್ಬರು ಮಕ್ಕಳೆಂದರೆ ಅವನಿಗೆ ಪ್ರಾಣ. ಆ ದಿನ ಸ್ವಾಮಿ ಮಕ್ಕಳನ್ನು ಕಿಡ್ನಾಪ್ ಮಾಡಿ ಸಾಯಿಸೆಂದು ಹೇಳಿದಾಗ ಅವನು ತಡಬಡಿಸಿದ್ದು ಅದಕ್ಕೆ. ಅವನು ಕರೆಂಟ್ ಆಫೀಸನ್ನು ಸುಟ್ಟುಬಿಡುವ ಪ್ರಯತ್ನಮಾಡಿದ್ದು. ತನ್ನ ಮಕ್ಕಳು ಟೀವಿನಲ್ಲಿ ಒನ್‌ಡೇ ಇಂಟರ್‌ನ್ಯಾಷನಲ್ಲನ್ನು ತುಂಬಾ ಉತ್ಸುಕತೆಯಿಂದ ನೋಡುತ್ತಿದ್ದಾಗ ಕರೆಂಟ್ ಹೋಗಿತ್ತು. ಮಕ್ಕಳು ಅಳಲು ಪ್ರಾರಂಭಿಸಿದವು. ರಾಮಲಾಲ್ ಕೂಡಲೇ ಆಫೀಸಿಗೆ ಫೋನ್ ಮಾಡಿ, "ಕರೆಂಟ್ ಯಾವಾಗ ಬರುತ್ತೆ?" ಎಂದು ಕೇಳಿದ, ಅತ್ತ ಕಡೆಯಿಂದ ಬೇಜವಾಬ್ದಾರಿ ಉತ್ತರ ಬಂತು.

ರೊಚ್ಚಿಗೆದ್ದ ರಾಮಲಾಲ್ ತನ್ನ ಕಾರಿನಲ್ಲಿ ಎರಡು ಬಾಂಬ್‌ಗಳನ್ನು ಹಾಕಿಕೊಂಡು ಆಫೀಸನ್ನೇ ಸುಟ್ಟುಬಿಟ್ಟ. ಅದನ್ನೇ ಈಗ ಜ್ಞಾಪಿಸಿದ್ದ ಸ್ವಾಮಿ.

"ತರ್ಕಕ್ಕೆ ನಿಲುಕದ ಅತೀ ವಿಚಿತ್ರವಾದದ್ದು ಮನುಷ್ಯನ ವರ್ತನೆ ರಾಮಲಾಲ್! ಕ್ರಿಕೆಟ್ ನೋಡಲಾದುದಕ್ಕೆ ಆವೇಶಪಟ್ಟೆ ವಿಷಯ ಕಲ್ಪಿತ ಕಥೆ

ಯಾಗಿ ಅನ್ನಿಸಬಹುದು. ಆದರೆ ಇಲ್ಲಿ ನೋಡು ಉದಾಹರಣೆಯೊಡನೆ ಸಹ ಇಲ್ಲೊಂದು ಸುದ್ದಿ ಇದೆ...ಇದೇ ಆವೇಶ ನಮ್ಮ ಕೆಲಸಕ್ಕೆ ಮತ್ತಷ್ಟು ಅನುಕೂಲ ಕಲ್ಪಿಸುತ್ತದೆ! ನುಗ್ಗುವ ಜನಪ್ರವಾಹದೆದುರು ಯಾವ ಸರ್ಕಾರವೂ ಏನೂ ಮಾಡಲಾರದು. ನಾಳೆ ವಿಜಯದಶಮಿ ದಿನ ನಾನು ನಿಗದಿಪಡಿಸಿರುವ ಮುಹೂರ್ತವನ್ನು ಯಾವ ಶಕ್ತಿಯೂ ತಡೆಯಲಾರದು" ಎನ್ನುತ್ತಾ ಜೋರಾಗಿ ನಗಲು ಪ್ರಾರಂಭಿಸಿದ.

ಅದೇ ಸಮಯಕ್ಕೆ ಪಕ್ಕದಲ್ಲಿದ್ದ ಫೋನ್ ಟ್ರಿಣ್ ಗುಟ್ಟಿತು.

"ನಾನು–ಮಹೇಶ್‌ಭಟ್"

"ಏನು ಭಟ್?"

ಭಟ್ ಮಂತ್ರಿಗಳೊಬ್ಬರ ಸೆಕ್ರೆಟರಿ. ಸ್ವಾಮಿಗೆ ಬೇಕಾದವನು.

"ಜಪಾನ್‌ನಿಂದ ಬರಬೇಕಾಗಿದ್ದ ಹಡಗಿನ ವಿಷಯವಾಗಿ ಸೂರ್ಯಾರಾವ್ ಆ ಒಪ್ಪಂದಕ್ಕೆ ಸಹಿ ಮಾಡಲಿಲ್ಲ."

"ಏನು?"

"ಯಾವುದೋ ಸಾಂಕೇತಿಕ ಕಾರಣಗಳಿಂದು ನಾಳೆಗೆ ಮುಂದೂಡಿದ್ದಾನೆ."

ಸ್ವಾಮಿಯ ಹಣೆಯ ಮೇಲೆ ಗೆರೆಗಳು ಮೂಡಿದವು. "-ನಾಳೆ ಆ ಜಪಾನ್ ಮಿನಿಸ್ಟರ್ ಬೆಂಗಳೂರಿಗೆ ಹೋಗುತ್ತಿದ್ದಾನಲ್ಲಾ!"

"ಹೌದು. ಅಲ್ಲಿಯ ಕಾರ್ಯಕ್ರಮಗಳಲ್ಲಿ ಪಾಲ್ಗೊಂಡು ನಾಡಿದ್ದು ಬರುತ್ತಾರೆ. ಆಮೇಲೆ ಸಹಿ ಮಾಡುತ್ತಾರಂತೆ."

ಸ್ವಾಮಿ ಫೋನಿಟ್ಟುಬಿಟ್ಟ.

ಏನಂತಹ ಸಾಂ...ಕೇ...ತಿ . ಕ ಕಾರಣಗಳು?

ಅವನಿಗೆ ಮೈಯೆಲ್ಲಾ ಉರಿಯಲಾರಂಭಿಸಿತು.

ಸರಿಯಾಗಿ ವಿಜಯದಶಮಿಯ ಹಿಂದಿನ ದಿನ ಆ ಹಡಗು ಭಾರತಕ್ಕೆ ಬರುವಂತೆ ಏರ್ಪಾಟು ಮಾಡಲಾಗಿತ್ತು. ಈ ಮೂರು ದಿನಗಳ 'ತಡ'ದಿಂದ ಗೋಲ್ಡನ್ ದ್ವೀಪದ ಬಳಿ ಆಯುಧಗಳ ಬದಲಾವಣೆಯನ್ನು ಒಂದೇ ಒಂದು ದಿನದಲ್ಲಿ ಮಾಡಬೇಕು. (ಮೊದಲು ನಾಲ್ಕು ದಿನ ಅಂದುಕೊಂಡಿದ್ದು) ಅಸಾಧ್ಯವೇನಲ್ಲ. ಆದರೆ ತುಂಬಾ ಗಡಿಬಿಡಿ. ಸ್ವಾಮಿ ಅಸಹನೆಯಿಂದ ಒದ್ದಾಡಿದ. ಏನೋ ಅಪಶೃತಿ.

ಅಷ್ಟರಲ್ಲಿ ಪರಮೇಶ್ವರ್ ಅಲ್ಲಿಗೆ ಬಂದ. ಸ್ವಾಮಿ ನಡದದ್ದನ್ನೆಲ್ಲಾ ಹೇಳಿದ.

"...ಅದೇಕೆ ಸೂರ್ಯಾರಾವ್ ಹೀಗೆ ಮಾಡಿದನೋ ಅರ್ಥವಾಗುತ್ತಿಲ್ಲ."

"ಮೂರು ದಿನ ತಡವಾ? ಸರಿಯಾಗಿ ಮೂರು ದಿನಗಳಾ?"ಪರಮೇಶ್ವರ್ ಕೇಳಿದ. ಅವನ ಸ್ವರದಲ್ಲಿ ಅನೂಹ್ಯವಾದ ಆಂದೋಲನ ಕಂಡಿತು.

"ಹಾಗೇಕೆ ಕೇಳುತ್ತಿದ್ದಿ ಪರಮೇಶ್ವರ್? ಇಲ್ಲಿ ಸಹಿಯಾದ ಮರುಕ್ಷಣವೇ ಅಲ್ಲಿ ಹಡಗು ಹೊರಡುವ ಏರ್ಪಾಟು ಮಾಡಿದ್ದೇವಲ್ಲಾ?"

"ಆದರೆ ಆ ದಿನ ಬುದ್ಧನ ಜನ್ಮದಿನದ ಹಬ್ಬ. ನಮಗಿಂತಲೂ ಜಪಾನೀಯರು ಹೆಚ್ಚು ಸೆಂಟಿಮೆಂಟಲಿಸ್ಟ್‌ಗಳು. ಆ ದಿನ ಎಂತಹ ಕೆಲಸಗಳನ್ನು ಮಾಡುವುದಿಲ್ಲ."

"ಆದರೆ ಅಲ್ಲಿ ಮಾಫಿಯ ನಮಗೆ ಸಹಾಯ..." ಅವನ ಮಾತಿನ್ನೂ ಪೂರ್ತಿಯಾಗಿರಲಿಲ್ಲ.

"ಮಾಫಿಯಾಗಿಂತ ಮತ ದೊಡ್ಡದು ಸ್ವಾಮಿ"

ಪರಮೇಶ್ವರ್‌ನ ಮಾತುಗಳು ಬಾಣದಂತೆ ನಾಟಿತು. ತನ್ನ ಆಯುಧ ಹಿಂತಿರುಗಿ ತನಗೇ ಡಿಸ್ಟರ್ಬ್ ಮಾಡಿದಂತೆ ಅನ್ನಿಸಿತು. ಅಪಶಕುನ ಐದು ಬಣ್ಣಗಳಲ್ಲಿ ಕಂಡಿತು. ಸಿಟ್ಟಿನಿಂದ ಫೋನೆತ್ತಿಕೊಂಡ.

ತಾನೇ ಸ್ವತಃ ಸೂರ್ಯ್ಯರಾವ್‌ಗೆ ಫೋನ್ ಮಾಡಿದ. ಅತ್ತ ಕಡೆ ಸೂರ್ಯ್ಯರಾವ್ ಲೈನಿನೊಳಗೆ ಬರುತ್ತಿದ್ದಂತೆಯೇ "ಏನು? ಏನಾಯ್ತು?" ಎಂದು ಕಿರುಚಿದ ಕೋಪದಿಂದ.

ಸೂರ್ಯ್ಯರಾವ್ ಉತ್ತರಿಸಲು ತಡಬಡಿಸಿದ. ಮಗಳ ಕಿಡ್ನಾಪ್ ವಿಷಯವನ್ನು ಫೋನಿನಲ್ಲಿ ಹೇಳಲು ಅವನು ಇಷ್ಟಪಡಲಿಲ್ಲ.

"ಸ್ವಲ್ಪ ತೊಂದರೆ ಬಂದಿದೆ ಸ್ವಾಮಿ. ಅದರಿಂದ ತಡವಾಯಿತು" ಅಂದ.

"ಏನದು ತೊಂದರೆ?" ಕಟುವಾಗಿ ಕೇಳಿದ ಸ್ವಾಮಿ.

ಸೂರ್ಯ್ಯರಾವ್‌ಗೆ ಕೂಡ ಕೋಪಬಂತು, ಮುಂಚಿನ ವ್ಯಕ್ತಿಯಾಗಿರಲಿಲ್ಲ. ಅವನೀಗ ಮಂತ್ರಿ! ಅಷ್ಟೇ ಅಲ್ಲದೆ ಈ ಸ್ವಾಮಿ ಅನವಶ್ಯಕವಾಗಿ ತನ್ನ ಮಗಳೊಡನೆ ತಾನು ಸಣ್ಣ ಮಕ್ಕಳನ್ನು ಸಾಯಿಸುವುದರ ಮೂಲಕ ತನ್ನ ಮೇಲೆ ತಾನೇ ಕೊಲೆ ಯತ್ನ ನಡೆಯಿತೆಂದು ಹೇಳಿಕೊಳ್ಳುವ ಮೂಲಕ ಮಿನಿಸ್ಟರ್ ಆದನೆಂಬ ವಿಷಯ ಹೇಳಿದ್ದಾನೆ. ಆ ಕೋಪ ಕೂಡ ಇತ್ತು!

ಹೀಗಾಗಿ "ಸರ್ಕಾರ ಎಂದರೆ ತುಂಬಾ ತೊಂದರೆಗಳಿರುತ್ತವೆ ಸ್ವಾಮಿ. ಅವೆಲ್ಲವನ್ನೂ ಹೇಗೆ ಹೇಳಲಿ?" ಅಂದ. ಅಷ್ಟರಲ್ಲಿ ಸ್ವಾಮಿಯ ಬಳಿಯಿಂದ ಪರಮೇಶ್ವರ್ ಫೋನ್ ತೆಗೆದುಕೊಂಡ.

"ನೀನು ಮಾಡಿದ ಈ ಕೆಲಸದಿಂದ ವಿಜಯದಶಮಿಯ ವೇಳೆಗೆ ಹಡಗು ಭಾರತಕ್ಕೆ ಬರಲಾಗುವುದಿಲ್ಲ. ನಮ್ಮ ಪ್ರೋಗ್ರಾಂ ನಾಲ್ಕು ದಿನ ತಡವಾಗುತ್ತದೆ."

"ನಾನು ಮಾಡಿದ್ದು ಒಂದು ದಿನದ ತಡ ಮಾತ್ರ."

"ಅವೆಲ್ಲಾ ಹೇಳಲು ಸಮಯವಿಲ್ಲ. ಏನು ನಡೆಯಿತೆಂದು ಬೇಗ ಹೇಳು"

"ನನ್ನ ಮಗಳನ್ನು ನಿನ್ನ ಮಗ ಕಿಡ್ನಾಪ್ ಮಾಡಿದ್ದಾನೆ."

"ವ್ಹಾಟ್?"

"ಹೌದು. ಒಂದು ದಿನ ಸಮಯ ಕೇಳಿದ ಅಷ್ಟೇ"

"ನೀನು ಫೂಲಿಷ್ ಆಗಿ ಟೋಪಿಬಿದ್ದಿ"

"ಮಗಳ ಬಗ್ಗೆ ಪ್ರೀತಿಯಿರುವುದು ಫೂಲಿಷ್‌ನೆಸ್ ಅಲ್ಲ"

"ವಿಹಾರಿ ನಿನ್ನ ಮಗಳನ್ನು ಏನೂ ಮಾಡಿರುವುದಿಲ್ಲ ಬಿಡು"

"ನೀನು ಹೇಗೆ ಗ್ಯಾರಂಟಿ ಕೊಡ್ತಿ?"

"ನಮಗೆ ಈ ವಿಷಯಗಳನ್ನೆಲ್ಲಾ ತಿಳಿಸಬೇಕಾಗಿತ್ತು"

"ಟೈಮಿರಲಿಲ್ಲ. ಸೀರೆಯನ್ನೇ ತಂದು ತೋರಿಸಿದ. ನಿರ್ಧಾರ ತೆಗೆದು ಕೊಳ್ಳುವುದು ತಡವಾದರೆ ಒಳ ಉಡುಪುಗಳೂ ಬರುತ್ತವೆಂದು ಹೇಳಿದ."

"ಕೆಲಸಕ್ಕಿಂತಲೂ ಈ ಸಂಬಂಧಗಳು ಮುಖ್ಯವಲ್ಲ. ಅದರಲ್ಲಿಯೂ ಏನು ನಡೆಯಿತೆಂದು ತಿಳಿದು ಕೂಡಾ—"

ಆಗಲೇ ಕೆಂಪಗಾಗಿದ್ದ ಸೂರ್ಯಾರಾವ್ ಮುಖ ಈ ಮಾತುಗಳನ್ನು ಕೇಳಿ ಮತ್ತಷ್ಟು ಉರಿಯಿತು.

"ಮಗನನ್ನೇ ಕೊಲ್ಲಲು ಪ್ಲಾನ್ ಹಾಕಿದವನಿಗೆ-ಸಂಬಂಧಗಳ ಬೆಲೆ ತಾನೇ ಹೇಗೆ ಗೊತ್ತಾಗುತ್ತೆ ಬಿಡು" ಎಂದು ಬಿಟ್ಟ. ಅದಕ್ಕುತ್ತರವಾಗಿ ಪರಮೇಶ್ವರ್ ಹೇಳುವುದಕ್ಕೆ ಮುಂಚೆಯೇ ಫೋನನ್ನು ಇಟ್ಟುಬಿಟ್ಟ. ಪರಮೇಶ್ವರನ ಮುಖ ದಲ್ಲಾಗಿದ್ದ ಬದಲಾವಣೆಯನ್ನು ಗಮನಿಸಿದ ಸ್ವಾಮಿ, "ಏನು ನಡೆಯಿತು?" ಎಂದು ಕೇಳಿದ.

"ಏನೂ ಇಲ್ಲ, ಸೂರ್ಯಾರಾವ್ ಮಗಳನ್ನು ವಿಹಾರಿ ಕಿಡ್ನಾಪ್ ಮಾಡಿ ದ್ದಾನಂತೆ. ಸಹಿ ಮಾಡುವುದನ್ನು ಒಂದು ದಿನ ತಡ ಮಾಡಿದರೆ ಸಾಕು, ಮಗಳನ್ನು ಬಿಟ್ಟುಬಿಡುತ್ತಾನಂತೆ."

"ಅದ್ಯಾವ ಸೀಮೆ ಕಂಡೀಷನ್?"

"ನಂಗೂ ಅದೇ ಅರ್ಥವಾಗುತ್ತಿಲ್ಲ"

"ಪರಮೇಶ್ವರ್! ನೀನು ಬುದ್ಧಿವಂತ. ನಿನ್ನಷ್ಟು ಬುದ್ಧಿವಂತ ಮತ್ತೊಬ್ಬ ನಿಲ್ಲವೆಂದು ನನ್ನ ಅಭಿಪ್ರಾಯ. ನಿನ್ನ ಮಗ ನಿನಗಿಂತಲೂ ಬುದ್ಧಿವಂತನಂತೆ ಕಾಣುತ್ತಿದ್ದಾನೆ. ಅವನೇನೋ ಯೋಜನೆ ಹಾಕಿದ್ದಾನೆ. ಅದನ್ನು ಕಂಡುಹಿಡಿಯ ಲಾರೆಯಾ?"

"ಬಹುಶಃ ಸೂರ್ಯಾರಾವ್‌ಗೂ, ನಮಗೂ ನಡುವೆ ದ್ವೇಷ ಹುಟ್ಟಿಸಲು ಈ ರೀತಿ ಮಾಡಿರಬಹುದು"

"ಒಂದು ದಿನ 'ತಡ' ಮಾಡಿಸಿದರೆ ದ್ವೇಷ ಬರುತ್ತದೆಂದು ಅವನಿಗೆ ಹೇಗೆ ಗೊತ್ತಾಗುತ್ತದೆ?" ಸ್ವಾಮಿ ಕೇಳಿದ.

"ನೀವು ನಿಮ್ಮ ಸಾಮಂತರಿಂದ ತುಂಬಾ ವಿಧೇಯತೆಯನ್ನು ಆಶಿಸುತ್ತೀರೆಂದು ಅವನಿಗೆ ಗೊತ್ತು, ಮಿನಿಸ್ಟರ್ ಮಗಳನ್ನು ಕಿಡ್ನಾಪ್ ಮಾಡುವುದೆಂದರೆ ತಮಾಷೆಯಲ್ಲ. ಅಷ್ಟು ರಿಸ್ಕ್ ತೆಗೆದುಕೊಂಡಿದ್ದಾನೆ. ಕೇವಲ 'ಒಂದು ದಿನ' ಅಂದರೆ ಮಿನಿಸ್ಟರ್ ಕೂಡಾ ಪೋಲೀಸರಿಗೆ ಫೋನ್ ಮಾಡುವುದಿಲ್ಲ, ಆದರೆ ಒಂದು ದಿನ ನಾಲ್ಕು ದಿನ ಆಗುವುದರಿಂದ ವಿಜಯದಶಮಿ ದಾಟಿ ನಿಮಗೆ ತುಂಬಾ ಕೋಪ ಬರುತ್ತದೆಂದೂ, ಆಗ ಸೂರ್ಯಾರಾವ್ ಮೇಲೆ ಆಕ್ಷನ್ ತೆಗೆದುಕೊಳ್ಳುತ್ತೀರೆಂದೂ ಅಂದುಕೊಂಡಿರುತ್ತಾನೆ..." ಪರಮೇಶ್ವರ್ ಯೋಚಿಸಿ ಹೇಳಿದ.

ಸ್ವಾಮಿ ಪರಮೇಶ್ವರ್ ಬಳಿಗೆ ಬಂದು, ಅವನ ಭುಜ ತಟ್ಟುತ್ತಾ "ಗುಡ್. ಹಾಗೆ ಆಗಿರಬಹುದು. ಆದರೆ ನಾವು ಅಷ್ಟು ಸುಲಭವಾಗಿ ಅವನ ಬುಟ್ಟಿಯಲ್ಲಿ ಬೀಳುತ್ತೇವೆಂದು ಅಂದುಕೊಂಡರೆ ಅದು ನಿನ್ನ ಮಗನ ಮೂರ್ಖತನ ಅಷ್ಟೆ" ಎಂದು ನಕ್ಕುಬಿಟ್ಟ.

ಪರಮೇಶ್ವರ್ ಕೂಡ ನಕ್ಕು ಅಲ್ಲಿಂದ ಹೊರಟು ಹೋದ.

ನಿಜಕ್ಕೂ ನಡೆದದ್ದು ಅದಲ್ಲ. ಮೂರ್ಖರಾದದ್ದು ಅವರಿಬ್ಬರೇ.

* * * * *

"ಹಲೋ"

"ಸೂರ್ಯಾರಾವ್ ಸ್ಪೀಕಿಂಗ್"

"ನಾನು ವಿಹಾರಿ ಮಾತನಾಡುತ್ತಿರುವುದು"

"ನೀವು ತಿಳಿಸಿದಂತೆಯೇ ಸಹಿ ಮಾಡುವುದನ್ನು ಒಂದು ದಿನದ ಮಟ್ಟಿಗೆ ಮುಂದೂಡಿದ್ದೇನೆ. ನನ್ನ ಮಗಳನ್ನು ಬಿಡಬಾರದೆ?"

"ಇನ್ನೂ ಒಂದು ದಿನ ಪೂರ್ತಿಯಾಗಲಿಲ್ಲ ಸೂರ್ಯಾರಾವ್. 24 ಗಂಟೆ ಪೂರ್ತಿಯಾಗಲಿ, ತಪ್ಪದೆ ಬಿಟ್ಟುಬಿಡುತ್ತೇನೆ."

"ಈ ರಾತ್ರಿ ನನ್ನ ಮಗಳು ನಿನ್ನ ಬಳಿಯಿರುವುದು ನನಗೆ ಇಷ್ಟವಿಲ್ಲ ವಿಹಾರಿ. ನನ್ನ ಬಗ್ಗೆ ನಂಬಿಕೆಯಿರಿಸಿ ಅವಳನ್ನು ಬಿಟ್ಟುಬಿಡು."

"ನನ್ನ ಮೇಲೆ ನೀವೂ ನಂಬಿಕೆಯಿರಿಸಿ. ನಾಳೆ ಬೆಳಗ್ಗೆ ಬಿಟ್ಟುಬಿಡುತ್ತೇನೆ. ಅಷ್ಟರಲ್ಲಿ ನನಗೊಂದು ಚಿಕ್ಕ ಸಹಾಯ ಬೇಕು."

''ಏನದು?"

''ಈಗ ನೀವೆಲ್ಲಿಗೆ ಹೋಗುತ್ತಿದ್ದೀರಿ?''

''ಗೆಸ್ಟ್‌ಹೌಸ್‌ಗೆ. ಇಷ್ಟಕ್ಕೂ ನಿನಗೇನಾಗಬೇಕು?''

''ನನಗೆ ಕೂಡಲೇ ಐದುಸಾವಿರ ಬೇಕು."

''ಮಿಸ್ಟರ್ ನಿನ್ನ ಕೋರಿಕೆಗಳು ಒಂದೊಂದೇ ಬೆಳೆಯುತ್ತಿದೆ, ನಾನು ಕೊಡುವುದಿಲ್ಲ.''

"ತುಂಬಾ ಅರ್ಜೆಂಟ್.''

''ನಾಳೆ ಮತ್ತಷ್ಟು ಕೇಳುವುದಿಲ್ಲವೆಂದು ಯಾವ ನಂಬಿಕೆ?''

''ಸೂರ್ಯಾರಾವ್! ನನ್ನದು ತುಂಬಾ ಸಣ್ಣ ಕೋರಿಕೆಗಳು. ಹಾಗೆ ಕೇಳ ಬೇಕೆಂದಿದ್ದರೆ ಮೊದಲೇ ಐವತ್ತು ಸಾವಿರ ಕೇಳುತ್ತಿದ್ದೆ. ಹೇಳು......ಕೇಳಿದ್ದರೆ ಕೊಡುತ್ತಿದ್ದಿಯೋ ಇಲ್ಲವೊ?"

ಸೂರ್ಯಾರಾವ್ ಮಾತನಾಡಲಿಲ್ಲ.

''ರಾತ್ರಿಗೆ ಬರ್ತೀನಿ. ಐದು ಸಾವಿರ ಸಿದ್ಧವಾಗಿರಲಿ''

''ನನ್ನ ಮಗಳು"

''ನಾಳೆ ಬೆಳಗ್ಗೆ ಕ್ಷೇಮವಾಗಿ ಬರುತ್ತಾಳೆ." ಫೋನ್ ಕಟ್ ಆಯಿತು.

ಸೂರ್ಯಾರಾವ್‌ಗೆ ಅರ್ಥವಾಗಲಿಲ್ಲ. ಏಕಿಷ್ಟು ಆತುರವಾಗಿ ಅವನಿಗೆ ಐದು ಸಾವಿರ ಬೇಕೋ? ನಿಜಕ್ಕೂ ಬ್ಲಾಕ್‌ಮೆಯಿಲರ್ ಆದರೆ ಐದು ಸಾವಿರ ಮಾತ್ರ ಕೇಳುತ್ತಿರಲಿಲ್ಲ.

ಸೂರ್ಯಾರಾವ್ ಗೆಸ್ಟ್‌ಹೌಸ್‌ಗೆ ಹೊರಟ.

* * * *

ಹೊರಗೆ ಮಿಂಚು-ಗುಡುಗು.

ಗೆಸ್ಟ್‌ಹೌಸ್ ಮುಂದೆ ಒಂದು ರಿಕ್ಷಾ ನಿಂತಿತು. ಅದರಿಂದ ಸುನಾದಮಾಲ ಇಳಿದಳು. ಸ್ವಲ್ಪ ಭಯಪಟ್ಟವಳಂತೆ ಕಾಣುತ್ತಿದ್ದಳು. ಆದರೆ ಈ ಹಿಂದೆ ಐದು ನಿಮಿಷಗಳ ವರೆಗೂ ವಿಹಾರಿ ಅವಳಿಗೆ ಧೈರ್ಯ ತುಂಬಿಸಿ ಕಳಿಸಿದ್ದ. ಅವಳು ಒಳಗೆ ಹೋಗುತ್ತಿದ್ದಂತೆ ವಾಚ್‌ಮನ್ ಅವಳನ್ನು ತಡೆದ.

"ಸೂರ್ಯಾರಾವ್‌ಗೋಸ್ಕರವೇ ಈ ಸಮಯಕ್ಕೆ ಬರಲು ತಿಳಿಸಿದ್ದರು."

ವಾಚ್‌ಮನ್ ಸ್ವಲ್ಪ ತಡಬಡಿಸಿ ತಲೆ ಆಡಿಸಿದ.

ಸೂರ್ಯಾರಾವ್ ಮಧ್ಯದ ಹಾಲಿನಲ್ಲಿ ಕುಳಿತಿದ್ದ. ಊಹಿಸದ ರೀತಿಯಲ್ಲಿ ಯಾರೋ ಹುಡುಗಿಯೊಬ್ಬಳು ಬಂದದ್ದನ್ನು ಕಂಡು ಆಶ್ಚರ್ಯದಿಂದ,

''ಯಾರು ನೀನು?'' ಎಂದ ಕೇಳಿದ.

''ನ...ನ...ನಮ್ಮ ಭಾವ ಕಳುಹಿಸಿದ'' ಹೆದರುತ್ತಲೇ ಹೇಳಿದಳು.

''ಯಾರು ನಿಮ್ಮ ಭಾವ?''

''ವಿಹಾರಿ'' ಅವಳ ಹಣೆಯೆಲ್ಲಾ ಬೆವರಿನಿಂದ ಒದ್ದೆಯಾಗುತ್ತಿತ್ತು. "ನೀವು ಐದು ಸಾವಿರ ರೂಪಾಯಿ ಕೊಡುತ್ತೀರಿ–ಅದನ್ನು ತೆಗೆದುಕೊಂಡು ಬರಲು ಹೇಳಿದ"

"ಅವನೇ ಬರಬಹುದಾಗಿತ್ತಲ್ಲಾ......ನಿನ್ನೇಕೆ ಕಳುಹಿಸಿದ?" ಅವಳು ಉಗುಳು ನುಂಗಿ, ''ನಾನು ಹೋಗ್ತೀನಿ'' ಅಂದಳು.

"ಯಾಕೆ?"

"ನಂಗೆ ಭಯ ಆಗುತ್ತೆ'' ಸೂರ್ಯಾರಾವ್ ಜೋರಾಗಿ ನಕ್ಕ. "ನಿಂಗೂ ನಿಮ್ಮ ಭಾವನಿಗೂ ಈ ಕಳ್ಳತನಗಳು ಹೊಸದಾಗಿರುವಂತಿದೆಯಲ್ಲಾ'' ಸುನಾದ-ಮಾಲ ಮಾತನಾಡಲಿಲ್ಲ.

''ಹ್ಞ......ಮೊದಲು ನಿಮ್ಮ ಭಾವನಿಗೆ ಕಿಡ್ನಾಪಿಂಗ್ ಅಂದರೇನೆಂದು ಗೊತ್ತಾ? ನಾನೀಗ ನಿನ್ನನ್ನು ಇಲ್ಲಿಯೇ ಬಂಧಿಸಿ, ನನ್ನ ಮಗಳನ್ನು ಬಿಡುವ ವರೆಗೂ ನಿನ್ನನ್ನೂ ಬಿಡುವುದಿಲ್ಲವೆಂದು ಹೇಳಿದರೆ ಏನು ಮಾಡುತ್ತಾನೆ?"

''ನಂಗೇನೂ ಗೊತ್ತಿಲ್ಲ. ನಾನು ಹೋಗ್ತೀನಿ."

"ಬೇಡ, ತಗೋ ಈ ಐದು ಸಾವಿರ ತೆಗೆದುಕೋ" ಎನ್ನುತ್ತಾ ಹಣದ ಕಟ್ಟನ್ನು ಕೊಟ್ಟ. ಮಿಂಚಿನ ನಡುವೆ ಫ್ಲ್ಯಾಷ್ ಮಿಂಚಿತು. ಅವಳು ಆ ಹಣ ವನ್ನು ಕೈಯಲ್ಲಿ ಹಿಡಿದು ಅವನೆಡೆಗೆ ಕಣ್ರೆಪ್ಪೆ ಬಡಿಯದೆ ನೋಡುತ್ತಾ "ಥ್ಯಾಂಕ್ಸ್" ಎಂದು ಹೇಳಿದಳು. ಹೊರಗೆ ಮಿಂಚುತ್ತಿದ್ದ ಪ್ರತಿಭೆಯ ಬೆಳಕಿನಲ್ಲಿ ಅವಳು ಸುಂದರವಾಗಿ ಕಾಣುತ್ತಿದ್ದಳು.

ಆಕಾಶದ ತುಂಬಾ ನೀಲಿ ಬಾವುಟಗಳನ್ನೆತ್ತಿದಂತೆ, ಸಂಧ್ಯಾರಾಣಿಯು ಕತ್ತಿ ನಲ್ಲಿ ಗೆಜ್ಜೆ ಗಲ ಗಲ ಶಬ್ದ ಮಾಡಿದಂತೆ ಚರಣಮಂಜೀರ ಹೇಮಗಾತ್ರಿ ತಂಪು ಬೆಳದಿಂಗಳ ರಾತ್ರಿರಾಣಿ ಮಿಂಚು ಕಣ್ಣುಗಳಲ್ಲಿ ಪ್ರತಿಫಲಿಸಿ ಬಿಲ್ಲುಗಳಡಿ ರಕ್ಷಣೆ ಪಡೆ ಯುತ್ತಿರುವಂತೆ ಶರದೃತುವಿನ ಹುಣ್ಣಿಮೆಯಲ್ಲಿ ಎರಡು ಎವರೆಸ್ಟ್ ಶಿಖರಗಳು ಆರಂಗುಲದ ಅವಳ ಕಿರುನಗೆ...ಸಮುದ್ರದ ಮೇಲೆ ಮುತ್ತಿನ ಸಹಿಯಂತೆ ..

"ಹಾಗೆ ನೋಡಬೇಡಿ...ನಿಮ್ಮ ಐದು ಸಾವಿರ ಬೇಕಾದ್ರೆ ವಾಪಸ್

ತಗೊಳ್ಳಿ. ನಾನು ಹೊರಟು ಹೋಗ್ತೀನಿ" ಟೇಪ್‌ರಿಕಾರ್ಡರ್ ಆನ್‌ಮಾಡಿದ ಕೂಡಲೇ ಅವಳಾಡಿದ ಮೊದಲ ಮಾತು ಅದು.

ನಿಜಕ್ಕೂ ಆ ದೃಷ್ಟಿಯಿಂದ ನೋಡಿರಲಿಲ್ಲ. ಸೂರ್ಯಾರಾವ್ ಅವಳನ್ನು ಈಗ ನೋಡಿದ. ಗುಡುಗುವ ತಾರಾಲೋಕ ಮಿಂಚುವ ಹಸನ್ಮುಖಿ ಹೂವು ಕತ್ತಲು...ಆಸೆ ಆಕಾಶದಷ್ಟಾಗಿ...

"ಈ ಐದು ಸಾವಿರಕ್ಕಾಗಿ ಬಂದೆ, ನೀವು ನನ್ನ ಮೇಲೆ ಕೈಮಾಡಿದಿರೆಂದರೆ ಜೋರಾಗಿ ಕಿರುಚಿಕೊಳ್ಳುತ್ತೇನೆ" ಅವಳು ಭಯದಿಂದ ಹೇಳಿದಳು. ಅಹಂಗೆ ಪೆಟ್ಟುಬಿದ್ದ ಸೂರ್ಯಾರಾವ್ ಜೋರಾಗಿ ನಕ್ಕ.

"ಕೂಗಿಕೊಂಡರೂ ಇಲ್ಲಿ ಯಾರಿಗೂ ಕೇಳಿಸುವುದಿಲ್ಲ."

"ಒಂದು ಸಣ್ಣ ಕೆಲಸಕ್ಕಾಗಿ ನಾನಿಲ್ಲಿಗೆ ಬಂದರೆ ಅದನ್ನು ನೀವು ಹೀಗೆ ದುರುಪಯೋಗಪಡಿಸಿಕೊಳ್ಳುವುದು ಅನ್ಯಾಯ" ಎನ್ನುತ್ತಾ ಅವನೆಡೆಗೇ ಹೆಜ್ಜೆ ಹಾಕಿದಳು. ಒಂದು ಮಧುರವಾದ ಪರಿಮಳ ಅವನನ್ನು ಸುತ್ತುವರಿಯಿತು. ಮಳೆಯ ಹನಿ ಬಾಗಿಲಬಡಿದಂತೆ, ಕೋಣೆಯಲ್ಲಿ ಊದಿನಕಡ್ಡಿ ತನ್ನ ಪರಿಮಳ ಬೀರುತ್ತಿದ್ದಂತೆ,

ಭ್ರಮಿಸಿ–

ಅವನು ಅವಳ ಕೈಯನ್ನು ಹಿಡಿದುಕೊಂಡ. ಮತ್ತೊಂದು ಫ್ಲಾಷ್ ಬೆಳಗಿತು. ಅಷ್ಟೆ–

ಅವಳು ಕೂಡಲೇ ರಿಯಾಕ್ಟ್ ಆದಳು. ಒಂದು ಕೈಯನ್ನು ಅವಳು ತನ್ನ ಬ್ಲೌಸಿನ ಕಡೆಗೂ ಮತ್ತೊಂದನ್ನು ಕತ್ತಿನ ಕಡೆಗೂ ವೇಗವಾಗಿ ಹಾಕಿಕೊಂಡಳು.

ತಾನು ಮಾಡುತ್ತಿರುವುದು ಲಜ್ಜಾರಹಿತವಾದ ಕೆಲಸವೆಂದು ಅವಳಿಗೆ ಗೊತ್ತು. ಆದರೆ ಅವಳ ಕಣ್ಮುಂದೆ ಸತ್ತುಹೋದ ತನ್ನ ವಿಷ್ಣುವಿನ ಸ್ನೇಹಿತ ವಿನೀಲ್ ಕಂಡ. ಪದ್ಮಾಕರನ ಶವ ಕಂಡಿತು. ಅಧಿಕಾರಕ್ಕಾಗಿ ಪ್ರಜೆಗಳನ್ನು ನಾಯಿಗಳನ್ನಾಗಿ ಆಡಿಸುವ ಪಾಪಿಗಳ ಅಧಃಪತನಕ್ಕಾಗಿ ಹದಿನೇಳು ವರ್ಷದ ತನ್ನ ಯೌವ್ವನ ಪೇಪರುಗಳಲ್ಲಿ ಬಿದ್ದರೇನು?

ಅವಳ ಕೈ ಬ್ಲೌಸನ್ನು ಹರಿದುಕೊಂಡಿತು. ಅವಳ ಬಲಸ್ತನ ಸುವರ್ಣ ಕಲಶದಂತೆ ಮಿಂಚುತ್ತಿತ್ತು. ಉಗುರು ಕತ್ತನ್ನು ಗೀಚಿತು. ರಕ್ತದ ಚಂದನ ಕತ್ತಿನ ಸುತ್ತಲೂ ಬಳಿದಂತಾಯಿತು.

ಒಂದು ಕಾಲದಲ್ಲಿ ಅವಳು ಪರಪುರುಷನ ನೆರಳು ಬಿದ್ದರೇನೇ ಓಡಿ ಸ್ನಾನ ಮಾಡುತ್ತಿದ್ದಳು. ಪೋಸ್ಟ್‌ಮನ್ ಕೈತಗುಲಿದರೇನೇ ತೆಂಗಿನ ನಾರಿನಿಂದ ಕೈಯನ್ನು ಉಜ್ಜಿ ತೊಳೆದುಕೊಳ್ಳುತ್ತಿದ್ದಳು. ಅಂತಹವಳು ತನಗೆ ವಹಿಸಿದ

ಕೆಲಸವನ್ನು ಒಂಟಿಯಾಗಿ ನಿರ್ವಹಿಸುತ್ತಿದ್ದಾಳೆ. ಸಾವಿರಾರು ಅಜ್ಞಾತ ಸೈನಿಕರು ತಮ್ಮ ದೇಶಕ್ಕಾಗಿ ಹೇಗೆ ಪ್ರಾಣ ತ್ಯಾಗ ಮಾಡುತ್ತಾರೋ, ಅನ್ಯಾಯಗಳನ್ನೆದುರಿಸಲು ಅದೆಷ್ಟು ಮಹನೀಯರು ಪ್ರಾಣ ತ್ಯಾಗ ಮಾಡಿದ್ದಾರೆಂದು ಹಿಂದಿನ ರಾತ್ರಿ ಸುನಾದಮಾಲಳೊಡನೆ, ಸೂರ್ಯಾರಾವ್ ಮಗಳನ್ನೂ ಕೂಡಿಸಿಕೊಂಡು ಮನ ಮುಟ್ಟುವಂತೆ ಮಾತನಾಡಿದ್ದ ವಿಹಾರಿ. ಕ್ರಾಂತಿ ಯಾವಾಗಲೋ, ಎಲ್ಲಿಂದಲೋ ಬರುವುದಿಲ್ಲ; ನಮ್ಮಿಂದಲೇ ಬರಬೇಕು. ಮನುಷ್ಯನಲ್ಲಿ ಬದಲಾವಣೆ ಕೂಡಾ ಅಷ್ಟೇ. ಒಬ್ಬ ಒಳ್ಳೆಯ ಸಹಚರನಿಂವ ಬರುತ್ತದೆ. ಆಕಸ್ಮಿಕವಾಗಿ ಬರುತ್ತದೆ. ಈ ದಿನ ಅವಳು ಪ್ರದರ್ಶಿಸಿದ ಧೈರ್ಯವನ್ನು, ಕೆಲವು ದಿನಗಳ ಹಿಂದೆ ಹೇಳಿದ್ದಿದ್ದರೆ–ಅವಳೇ ಕನಸಿನಲ್ಲಿಯೂ ಊಹಿಸುತ್ತಿರಲಿಲ್ಲ. ಅಷ್ಟು ಎಚ್ಚೆತ್ತಿದ್ದಳು ಅವಳು.

"ಹೆಲ್ಪ್...ಹೆಲ್ಪ್...ರಕ್ಷಿಸಿ...ರಕ್ಷಿಸೀ..." ಎಂದು ಕಿರುಚಿದಳು. ಆಗಲೇ ಏನೋ ಅನುಮಾನ ಬಂದ ಸೂರ್ಯಾರಾವ್ ಗಾಭರಿಯಾದ. ಅಷ್ಟರಲ್ಲಿ ಬಾಗಿಲು ಹಠಾತ್ತನೆ ತೆರೆದುಕೊಂಡಿದ್ದು ಸೂರ್ಯಾರಾವ್ ಪಾಕಿನಿಂದ ಚೇತರಿಸಿಕೊಳ್ಳುವುದಕ್ಕೆ ಮುಂಚೆಯೇ ನಾಲ್ಕೈದು ಜನ ಒಳಗೆ ಪ್ರವೇಶಿಸಿದ್ದು–ಬೇಗ ಬೇಗನೆ ನಡೆದು ಹೋಯಿತು.

* * * *

ಮೂರನೆ ದಿನ ಈ ಸುದ್ದಿ ಪೇಪರ್‌ಗಳಲ್ಲಿ ಅವರೆಕಾಯಿ ಗಾತ್ರದ ಅಕ್ಷರಗಳಲ್ಲಿ ಬಂತು;

**'ಅತ್ಯಾಚಾರ ಪ್ರಯತ್ನದಲ್ಲಿ ಕೇಂದ್ರ ಮಂತ್ರಿಯ ಬಂಧನ'**

ಲಂಚದೊಡನೆ, ಮಾನವನ್ನೂ ಅಪಹರಿಸಲು ಯತ್ನಿಸಿದ ಮಂತ್ರಿ ಸೂರ್ಯಾರಾವ್..

ವಿವಿಧ ರೀತಿಯ ಹೆಡ್ಡಿಂಗ್‌ಗಳ ಕೆಳಗೆ, ಫೋಟೋಗಳ ಸಹಿತ ಸುದ್ದಿ ಪ್ರಸಾರವಾಯಿತು.

"ಸುನಾದಮಾಲ ಎಂಬ ಯುವತಿ, ಪದವಿ ಮುಗಿಸಿ ಸ್ವತಂತ್ರವಾಗಿ ಉದ್ಯೋಗ ಮಾಡಲು ಮಂತ್ರಿಯವರನ್ನು ಭೇಟಿಮಾಡಿದಳು. ಅವಳನ್ನು ಸಂಜೆ ಗೆಸ್ಟ್‌ಹೌಸ್‌ಗೆ ಬರಲು, ಜೊತೆಗೆ ಐದು ಸಾವಿರ ತರಲು ಹೇಳಿದ್ದರು, ಸೂರ್ಯಾರಾವ್. ಆ ಕೆಲಸಕ್ಕೆ ಮಂತ್ರಿಯವರ ರೆಕಮೆಂಡೇಶನ್ ಅವಶ್ಯಕವಿಲ್ಲವೆಂದು ತಿಳಿಯದ ಮುಗ್ಧೆ, ತನ್ನ ಮೇಲೆ ಕೈ ಮಾಡಲು ಬಂದ ಸೂರ್ಯಾರಾವ್ ವಿರುದ್ಧ

ಪೋಲೀಸರಿಗೆ ದೂರಿತ್ತಿದ್ದಾಳೆ. ಡಿ.ಐ.ಜಿ. ಸ್ವತಃ ಬಲೆಬೀಸಿ ಸೂರ್ಯಾರಾವನ್ನು ರೆಡ್‌ಹ್ಯಾಂಡಾಗಿ ಹಿಡಿದಿದ್ದಾರೆ. ಸೂರ್ಯಾರಾವ್‌ಗೂ ಸುನಾದಮಾಲಳಿಗೂ ನಡೆದ ಸಂಭಾಷಣೆ ಟೇಪ್‌ನಲ್ಲಿ ರೆಕಾರ್ಡ್ ಮಾಡಲಾಗಿದೆ. ಅದನ್ನು ಸ್ವತಃ ಡಿ.ಐ. ಜಿ.ಯವರು ಪತ್ರಿಕೆಗಳಿಗೆ ಬಿಡುಗಡೆ ಮಾಡಿದರು" (ಅದರ ವಿವರಗಳನ್ನು ಪ್ರಕಟಿಸಿದ್ದರು.) ಜೊತೆಗೆ ಫೋಟೋ ದೊಡ್ಡ ಕಣ್ಗಳಲ್ಲಿ ಭಯ ತುಂಬಿಕೊಂಡಿರುವ ಸುನಾದಮಾಲ–ಹರಿದ ಬ್ಲೌಸು–ಅವಳ ಕೈ ಹಿಡಿದಿದ್ದ ಸೂರ್ಯಾರಾವ್–ಅದಕ್ಕಿಂತಲೂ ಮತ್ತೇನು ಬೇಕು? ಅರೆಸ್ಟು–ಬೆಯಿಲ್ ಮೇಲೆ ಬಿಡುಗಡೆ–ಮಂತ್ರಿಮಂಡಲದಿಂದ ಸಸ್ಪೆಂಡ್ ಎಲ್ಲವೂ ಕ್ಷಣಗಳಲ್ಲಿಯೇ ನಡೆದುಹೋಯಿತು.

ಈ ಕೇಸನ್ನು ತೆಗೆದುಕೊಂಡಿದ್ದ ಪ್ರವಲ್ಲಿಕಳಿಗೆ ವಿಹಾರಿ ಪರಿಚಿತನೆಂದು ಕೆಲವರಿಗೆ ಮಾತ್ರ ಗೊತ್ತಿತ್ತು. ಅವಳು ಕೂಡಾ ತೆರೆಯ ಮರೆಯಲ್ಲೇ ನಿಂತು ಇದನ್ನೆಲ್ಲಾ ನಿರ್ವಹಿಸಿದ್ದಳು. ಸೂರ್ಯಾರಾವ್ ಬೆಯಿಲ್‌ಮೇಲೆ ಬಿಡುಗಡೆ ಆದ ಮೇಲೆ ವಿಹಾರಿಯನ್ನು ಭೇಟಿಮಾಡಿದ್ದಳು. "ಈ ರಾತ್ರಿ ಸೂರ್ಯಾರಾವ್ ಮಾಡುವ ಊಟದಲ್ಲಿ ಇದನ್ನು ಬೆರೆಸಬೇಕು" ಎಂದು ಒಂದು ಸೀಸೆಯನ್ನು ಕೊಟ್ಟ ವಿಹಾರಿ.

"ಏಕೆ?" ಆಶ್ಚರ್ಯದಿಂದ ಕೇಳಿದಳು. "ಅವನ ಕಥೆ ಪೂರ್ತಿಯಾಯಿತಲ್ಲಾ ?"

"ನಿಜವಾದ ಕಥೆ ಪ್ರಾರಂಭವಾಗುವುದೇ ಈಗ" ಎಂದ ನಗುತ್ತಾ.

* * * *

ರಾತ್ರಿ ಊಟ ಮಾಡಿ ಸೂರ್ಯಾರಾವ್ ಬೆಡ್ ರೂಮಿನಲ್ಲಿ ಕುಳಿತಿದ್ದಾನೆ. ಸುಮಾರು ಎಂಟು ಗಂಟೆಗಳಿಂದಲೂ ಅವನು ಯಾರೊಡನೆಯೂ ಮಾತನಾಡುತ್ತಿಲ್ಲ. ಯಾರಿಗೂ ಇಂಟರ್‌ವ್ಯೂ ಕೊಡುತ್ತಿಲ್ಲ. ಪೇಪರಿನಲ್ಲಿ ಬಂದಿದ್ದ ಒಂದೊಂದು ವಾಕ್ಯವೂ ಅವನ ಹೃದಯವನ್ನು ಚುಚ್ಚುತ್ತಿತ್ತು. ನೆನ್ನೆಯ ವರೆಗೂ ಗೌರವಾನ್ವಿತ ಮಂತ್ರಿ–ಇವತ್ತೇನಾದರೂ ಜನಗಳಿಗೆ ಕಂಡರೆ ಹೊಡೆದುಬಿಡುತ್ತಾರೆ. ಯಾರ ಮೇಲೆಯೋ ತಿಳಿಯದ ದ್ವೇಷ. ಆ ವಿಹಾರಿಯನ್ನು ಕೊಂದು ಚೂರು ಚೂರು ಮಾಡಿಬಿಡುವಷ್ಟು ಸಿಟ್ಟು. ಸ್ವಾಮಿಗೆ ಫೋನ್ ಮಾಡೋಣವೆಂದರೆ ಸಿಗುತ್ತಿಲ್ಲ. ಹಾಗೆಯೇ ಕುಳಿತುಬಿಟ್ಟ.

ಮಗಳು ಕೋಣೆಯೊಳಗೆ ಬಂದಳು.

ಅವಳು ಹಿಂದಿನ ದಿನವಷ್ಟೇ ಮನೆಗೆ ಬಂದಿದ್ದಳು. ತಂದೆಯ ಬಂಧನದ

ಗಡಿಬಿಡಿಯಲ್ಲಿ ಅವಳನ್ನು ಯಾರೂ ಗಮನಿಸಿರಲಿಲ್ಲ.

"ಕ್ಷಮಿಸು ಅಪ್ಪಾ. ಇದೆಲ್ಲಾ ನನ್ನಿಂದಲೇ ನಡೆದದ್ದು'' ಅಂದಳು.

''ನೀನೇನು ಮಾಡ್ತೀಯಮ್ಮ. ಎಲ್ಲಾ ನನ್ನ ಕರ್ಮ. ಆದರೆ ಪ್ರಮಾಣ ಮಾಡಿ ಹೇಳುತ್ತಿದ್ದೇನೆ. ಆ ಹುಡುಗಿಯ ಮೇಲೆ ನಾನು ಕೈಮಾಡಲಿಲ್ಲ. ಅವಳೇ ಬ್ಲೌಸನ್ನು ಹರಿದುಕೊಂಡಳು, ಆ ವಿಹಾರಿ ಆಡಿದ ನಾಟಕ ಅದು."

ಅವಳು ಆಶ್ಚರ್ಯದಿಂದ ನೋಡುತ್ತಾ "ವಿಹಾರಿಯಾ?" ಎಂದು ಕೇಳಿದಳು.

"ಅದೇ ನಿನ್ನನ್ನು ಕಿಡ್ನಾಪ್ ಮಾಡಿದವನು"

"ಆದರೆ ಅವನು ನನ್ನನ್ನು ನೆನ್ನೆ ರಾತ್ರಿಯೇ ಬಿಟ್ಟಿದ್ದ"

ಸೂರ್ಯಾರಾವ್ ಸಿಡಿಲು ಒಡಿದಂತೆ ನೋಡಿದ. "ನೆನ್ನೆ ರಾತ್ರಿಯೇ ಬಿಟ್ಟುಬಿಟ್ಟನಾ?"

"ಹೌದಪ್ಪಾ. ರಾತ್ರಿಯೇ ಮನೆಗೆ ಬಂದುಬಿಟ್ಟೆ. ನೀನು ಗೆಸ್ಟ್‌ಹೌಸ್‌ನಲ್ಲಿದ್ದೀಯೆಂದು ತಿಳಿಯಿತು. ಹೇಗೆ ಹೇಳಬೇಕೆಂದೇ ತಿಳಿಯಲಿಲ್ಲ."

ಅವಳು ಹೇಳಿದ್ದರಲ್ಲಿ ಸುಳ್ಳೇನೂ ಇರಲಿಲ್ಲ. ಗೆಸ್ಟ್‌ಹೌಸ್‌ನ ಫೋನನ್ನು ವಿಹಾರಿ ಕಟ್‌ಮಾಡಿದ್ದ ಅಷ್ಟೆ.

"ಅವನು ನೆನ್ನೆ ರಾತ್ರಿಯೇ ಹೇಗೆ ಬಿಟ್ಟಾ?''

"ನಂಗೊತ್ತಿಲ್ಲ''

ಸೂರ್ಯಾರಾವ್ ವಿಹಾರಿಯ ಫೋನ್ ನಂಬರನ್ನು ಹುಡುಕಿ ಫೋನ್ ಮಾಡಿದ.

"ನನ್ನ ಮಗಳನ್ನು ನೆನ್ನೆಯೇ ಬಿಟ್ಟುಬಿಟ್ಟೆಯಾ?''

"ಹೌದು. ನನಗೆ ಬೇಕಾಗಿದ್ದುದು ಅಗ್ರಿಮೆಂಟ್ ಮೇಲೆ ಒಂದು ದಿನ ತಡವಾಗಿ ಸಹಿ ಮಾಡಬೇಕಾದ್ದಷ್ಟೆ. ಅದಾದ ಕೂಡಲೇ ನಿಮ್ಮ ಮಗಳನ್ನು ಬಿಟ್ಟುಬಿಟ್ಟೆ.''

"ಐದು ಸಾವಿರ ಕೇಳಿದ್ದು-?"

"ಯಾವ ಐದು ಸಾವಿರ?"

"ನಿನ್ನ ಸೋದರ ಸೊಸೆಯನ್ನು ಕಳುಹಿಸಿದ್ದೀಯಲ್ಲಾ-"

"ನಿಮ್ಮ ಮಾತೇ ಅರ್ಥ ಆಗ್ತಾಯಿಲ್ಲ ನಂಗೆ."

ಸೂರ್ಯಾರಾವ್‌ಗೆ ಟೆನ್ಷನ್ ಬೆಳೆಯಿತು.

"ಐದು ಸಾವಿರ ಕೊಡುವಂತೆ ನೀನು ನನ್ನನ್ನು ಬ್ಲಾಕ್‌ಮೈಯಿಲ್ ಮಾಡಲಿಲ್ಲವಾ?" ಎಂದು ಕಿರುಚಿದ.

"ನೋಡು ಮಿಸ್ಟರ್ ಸೂರ್ಯಾರಾವ್–ನನಗೂ ನಿಯತ್ತಿದೆ. ಅದೂ ಅಲ್ಲದೆ ಹಣದ ಅವಶ್ಯಕತೆ ನನಗೇನೂ ಇಲ್ಲ. ಯಾರೋ ನನ್ನಂತೆ ಸ್ವರಮಾಡಿ ಪರಿಸ್ಥಿತಿಯ ಅನುಕೂಲ ಪಡೆದಿದ್ದಾರಷ್ಟೆ'' ಎಂದು ಫೋನಿಟ್ಟುಬಿಟ್ಟ.

ಸೂರ್ಯಾರಾವ್‌ಗೆ ಹುಚ್ಚು ಹಿಡಿದಂತಾಯಿತು.

ಯಾರೋ ಚೆನ್ನಾಗಿ ನಾಟಕವಾಡಿ ತನ್ನ ಪದವಿ ಹೋಗುವಂತೆ ಮಾಡಿದ್ದಾರೆ. ಯಾರು? ಸ್ವಾಮಿಯಾ?

ಆ ರೀತಿಯ ಆಲೋಚನೆ ಬರುತ್ತಿದ್ದಂತೆಯೇ ಸೂರ್ಯಾರಾವ್ ಬೆಚ್ಚಿಬಿದ್ದ. ತನ್ನ ಅನುಚರರ ಬಗ್ಗೆ ಸ್ವಲ್ಪ ಅನುಮಾನ ಬಂದರೂ ಸ್ವಾಮಿ ಸಹಿಸಲಾರ. ಅದಕ್ಕೆಂದೇ ಈ ರೀತಿ ಮಾಡಿದನಾ? ತಾನು ಪರಮೇಶ್ವರ್‌ರೊಡನೆ ಕಠಿಣವಾಗಿ ಮಾತನಾಡಿದ್ದ. ಅದನ್ನು ಮನಸ್ಸಿನಲ್ಲಿರಿಸಿಕೊಂಡು ಈ ರೀತಿ ಸೇಡು ತೀರಿಸಿಕೊಂಡನಾ? ಕೋಪದಿಂದಲೋ, ಭಯದಿಂದಲೋ ಸೂರ್ಯಾರಾವ್ ನಡುಗಿಬಿಟ್ಟ. ಮುಂದಿನ ಕ್ಷಣವೇ ಅವನ ಎಚ್ಚರ ತಪ್ಪಿತು.

ಅವನು ತಿಂದಿದ್ದ ಊಟದಲ್ಲಿ ಮೂರು ದಿನಗಳ ಕಾಲ ಎಚ್ಚರ ತಪ್ಪುವಂತಹ ವಿಷವನ್ನು ಬೆರೆಸಿದ್ದು ವಿಹಾರಿಯೇ.

ಎರಡನೇ ಅಂಕ ಪೂರ್ತಿಯಾಗಲು ಅಷ್ಟು ಕಾಲ ಸಾಕಾಗಿತ್ತು.

* * * *

ಸೂರ್ಯಾರಾವ್‌ನ ಮಂತ್ರಿಪದವಿ ಹೋದದ್ದು ಸ್ವಾಮಿಗೆ ಸಿಡಿಲೆರಗಿದಂತಾಯ್ತು.

ಸುನಾದಮಾಲ, ವಿಹಾರಿಯ ಸ್ನೇಹಿತಳೆಂದು ಅವನಿಗೆ ಗೊತ್ತಿತ್ತು.

ಸೂರ್ಯಾರಾವ್ ಇಷ್ಟು ಸುಲಭವಾಗಿ ಅವರ ಬುಟ್ಟಿಗೆ ಬೀಳುತ್ತಾನೆಂದು ಸ್ವಾಮಿ ಊಹಿಸಿರಲಿಲ್ಲ.

ಪರಮೇಶ್ವರ್‌ನ ಮುಖಾಂತರ ಸೂರ್ಯಾರಾವ್‌ಗೆ ಧೈರ್ಯಗುಂದಬೇಡವೆಂದು ಫೋನ್ ಮಾಡಿಸಿದ.

ಪರಮೇಶ್ವರ್ ಫೋನಿಡುತ್ತಾ ''ಸೂರ್ಯಾರಾವ್ ಮನೆಯಲ್ಲಿಲ್ಲ" ಎಂದ.

''ಏನಾದ?"

''ಇದ್ದಕ್ಕಿಂತೆಯೇ ಎಚ್ಚರ ತಪ್ಪಿದನಂತೆ. ಎದೆ ನೋವೇನೋ ಎಂದುಕೊಳ್ಳುತ್ತಿದ್ದಾರೆ. ಆಸ್ಪತ್ರೆಗೆ ಸೇರಿಸಿದ್ದಾರಂತೆ."

ಸ್ವಾಮಿಯ ಕಣ್ಣುಗಳು ಕೆಂಪಗಾದವು. "ಹೇಗಾದರೂ ಮಾಡಿ ಆ ವಿಹಾರಿ

ಪ್ರವಲ್ಲಿಕ ಮಾತಾಡದಂತೆ ಅವರಿಬ್ಬರನ್ನೂ ಬೇರೆ ಮಾಡುವ ಪ್ಲಾನ್ ಮಾಡ ಬೇಕು" ಅಂದ.

ಐದು ನಿಮಿಷಗಳ ನಂತರ ಪರಮೇಶ್ವರ್ ಪ್ಲಾನ್ ಹೇಳಿದ.

ಅದನ್ನು ಕೇಳಿದ ಸ್ವಾಮಿ ಸಂತೃಪ್ತನಾಗಿ ನಕ್ಕ. ಇಲ್ಲಿ ಇದು ನಡೆಯುತ್ತಿದ್ದ ಸಮಯದಲ್ಲಿ, ಅಲ್ಲಿ ವಿಹಾರಿ ಪ್ರವಲ್ಲಿಕಳಿಗೆ ''ನನಗೆ ರಾಮಲಾಲ್‌ನ ಲೈಫ್ ಹಿಸ್ಟರಿ ಬೇಕು–" ಎಂದು ಕೇಳುತ್ತಿದ್ದ.

"ರಾಮಲಾಲ್‌ನ ಜೀವನ ಚರಿತ್ರೆಯಾ? ಏಕೆ?'' ಎಂದು ಕೇಳಿದಳು ಪ್ರವಲ್ಲಿಕ. ವಿಹಾರಿ ನಕ್ಕು, "ಹೇಳ್ತೀನಿ" ಎಂದ.

''ಇನ್ನೊಂದು ಗಂಟೆಯಲ್ಲಿ ಕೊಡುತ್ತೇನೆ'' ಪ್ರವಲ್ಲಿಕ ಹೇಳಿದಳು. ಆಗ-ಲೆಂಬಂತೆ ತಲೆ ಆಡಿಸಿದ ವಿಹಾರಿ. "ಬೈ ದಿಬೈ ಕಂಗ್ರಾಜುಲೇಷನ್, ಇದುವರೆವಿಗೂ ನಾವ್ಯಾರೂ ಮಾಡದ ಕೆಲಸವನ್ನು ನೀವು ಸಾಧಿಸಿದ್ದೀರಿ" ಅಂದಳು.

"ಈಗಲೇ ಎಲ್ಲಿ ಮುಗಿಯಿತು? ಮುಂದೆ ಇದೆ."

ಇಬ್ಬರೂ ಡ್ರೈವ್‌ಇನ್ ಹೋಟೆಲ್ಲಿನಲ್ಲಿ ಕುಳಿತಿದ್ದರು. ಕಾರುಗಳು ಸಾಲಾಗಿ ನಿಂತಿದ್ದವು.

"ನನಗರ್ಥವಾಗದ್ದೊಂದಿದೆ. ಸೂರ್ಯಾರಾವನ್ನೇಕೆ ಅಷ್ಟು ದಿನಗಳ ಕಾಲ ಪ್ರಜ್ಞೆ ತಪ್ಪುವಂತೆ ಮಾಡಿದ್ದು?''

ವಿಹಾರಿ ನಕ್ಕು, "ಹೇಳುವುದಿಲ್ಲ" ಎಂದ. "ನಿಮಗೂ ಹೇಳುತ್ತಿಲ್ಲವಲ್ಲ ಎಂದೇನೂ ಅಂದುಕೊಳ್ಳಬೇಡಿ. ನಿಮ್ಮ ಡಿಪಾರ್ಟ್‌ಮೆಂಟಿನಲ್ಲಿ ಹೀಗೆ ಒಂದು ವಿಷಯ ರಹಸ್ಯವಾಗಿರುವ ಬಗ್ಗೆಯೇ ನನಗೆ ಅನುಮಾನ."

ಪ್ರವಲ್ಲಿಕ ಅರ್ಥವಾದವಳಂತೆ ತಲೆ ಆಡಿಸಿದಳು. ಅಷ್ಟರಲ್ಲಿ ಮತ್ತೊಂದು ಕಾರು ಬಂದು ಪಕ್ಕದಲ್ಲಿ ನಿಂತಿತು. ಅದರಲ್ಲಿ ಹಿಂದಿನ ಸಿ.ಬಿ.ಐ. ಛೀಫ್ ಇದ್ದ. ಇವರನ್ನು ಕಂಡು ವಿಷ್ ಮಾಡಿದ.

ಆತ ಆರ್ಡರ್ ಮಾಡಲು ಅತ್ತ ತಿರುಗುತ್ತಿದ್ದಂತೆಯೇ, "ಈತನ ಪರಿಸ್ಥಿತಿ ಏನು?" ಎಂದು ವಿಹಾರಿ ಕೇಳಿದ.

"ಮತ್ತೆ ನಮ್ಮ ಛೀಫಾಗಿ ಬರಲಿದ್ದಾನೆ."

"ಅದೇಕೆ? ಅನುಮಾನದಿಂದ ಟ್ರಾನ್ಸ್‌ಫರ್ ಮಾಡಿದ್ದರಲ್ಲಾ!"

"ಮತ್ತೆ ಪ್ರಯತ್ನ ಮಾಡಿದಂತಿದೆ. ಅದೂ ಅಲ್ಲದೆ ಸೂರ್ಯಾರಾವ್ ಬಂಧನದ ವಿಷಯದಲ್ಲಿ ಈತನೇ ಸ್ವತಃ ಎಲ್ಲಾ ಏರ್ಪಾಟುಗಳನ್ನೂ ಮಾಡಿದ್ದ. ಬಹುಶಃ ನಾವಂದುಕೊಂಡಂತೆ ಈತನಿಗೂ, ಅನಂತಾನಂತಸ್ವಾಮಿಗೂ ಸಂಬಂಧ ವಿಲ್ಲವೇನೋ?"

"ಸ್ವಾಮಿ ಅಂದರೆ ನೆನಪಾಯಿತು. ನೆನ್ನೆ ಒಂದು ಕೆಲಸ ಮಾಡಿದ್ದೇನೆ. ಸ್ವಾಮಿಗೆ ಒಂದು ಬಹುಮಾನ ಕೊಟ್ಟಿದ್ದೆ. ಚಾರ್‌ಮಿನಾರ್.. ಅಮೃತ ಶಿಲೆಯದು."

"ಚಾರ್‌ಮಿನಾರ್ ಏಕೆ?"

"ಒಂದು ಸ್ತಂಭವನ್ನು ಮುರಿದು ಕಳುಹಿಸಿದ್ದೆ" ಸಾಮಾನ್ಯ ವಿಷಯ ವೆಂಬಂತೆ ಹೇಳಿದ.

ಅವಳಿಗೆ ಮೊದಲು ಅರ್ಥವಾಗಲಿಲ್ಲ. ಅರ್ಥವಾದ ಕೂಡಲೇ ಜೋರಾಗಿ ನಗಲು ಪ್ರಾರಂಭಿಸಿದಳು. ಸರಿಯಾಗಿ ಅದೇ ಸಮಯಕ್ಕೆ ಸುನಾದಮಾಲ, ವಿಷ್ಣು ವಿನ ಜೊತೆ ಅಲ್ಲಿಗೆ ಬಂದಳು. ವಿಷ್ಣು ಐಸ್‌ಕ್ರೀಂ ತಿನ್ನುತ್ತಿದ್ದಷ್ಟು ಹೊತ್ತೂ ಅವಳು ಇವರ ಕಾರಿನೆಡೆಗೇ ನೋಡುತ್ತಾ ನಿಂತಿದ್ದಳು. ನಂತರ ವಿಷ್ಣುವನ್ನು ಕರೆದುಕೊಂಡು ಅಲ್ಲಿಂದ ಹೊರಟು ಹೋದಳು. ಅವಳ ಮುಖ ಬೆಳ್ಳಗೆ ಬಿಳಿಚಿಕೊಂಡಿತ್ತು. ಪ್ರವಲ್ಲಿಕಳೂ ಅಲ್ಲಿಂದ ಹೊರಟು ಒಂದೂವರೆ ಗಂಟೆಗಳ ನಂತರ ಬಂದು ಕಾರಿನೊಳಗಿಂದ ಒಂದು ಫೈಲನ್ನು ತೆಗೆದು ವಿಹಾರಿಗೆ ಕೊಡುತ್ತಾ "ರಾಮಲಾಲ್‌ನ ಚರಿತ್ರೆಯೆಲ್ಲ ಇದರಲ್ಲಿದೆ" ಎಂದಳು. ಸುಮಾರು 10 ಪುಟಗಳಲ್ಲಿ ಅವನ ಬಾಲ್ಯ, ಪರಿಚಯಸ್ಥರು, ಅಭ್ಯಾಸಗಳು, ಬಲಹೀನತೆಗಳೆಲ್ಲವೂ ವಿವರವಾಗಿದ್ದವು. ಅವನ ಮೇಲಿನ ಸಿ.ಬಿ.ಐ. ರಿಪೋರ್ಟ್ ಅದು.

"ಗುಡ್" ಅದನ್ನು ತೆಗೆದುಕೊಳ್ಳುತ್ತ ಹೇಳಿದ.

"ನನ್ನಿಂದ ಇನ್ನೇನಾದರೂ ಸಹಾಯ ಬೇಕಾಗಿತ್ತಾ?"

"ಜಪಾನ್‌ನಿಂದ ಬರುವ ಹಡಗು ಹೊರಡುವ ಮುಂಚೆಯೇ ಸೂರ್ಯಾ-ರಾವ್ ಸಹಿ ಮಾಡದೆ ಪದವಿ ಕಳೆದುಕೊಂಡ! ಆ ಹಡಗು ಏನಾಯಿತೆಂದು ಕಂಡುಕೊ. ಹೊಸದಾಗಿ ಬರುವ ಮಂತ್ರಿ ಸಹಿ ಮಾಡುತ್ತಾನಾ ಇಲ್ಲವಾ ಎಂದು."

"ಕಂಡುಹಿಡಿಯುತ್ತೇನೆ."

"ನಮ್ಮ ರಹಸ್ಯಗಳು, ಸಿ.ಬಿ.ಐ. ಆಫೀಸಿನಲ್ಲಿ ಮಾತಾಡಿಕೊಂಡಿರುವುದರೊಡನೆ ಎಲ್ಲಾ ಶತ್ರುಗಳಿಗೆ ತಿಳಿದುಬಿಟ್ಟಿದೆ. ಅದು ಹೇಗೆ ನಡೆಯುತ್ತಿದೆಯೆಂದೇ ಅರ್ಥವಾಗುತ್ತಿಲ್ಲ."

ಅವಳು ಉತ್ತರಿಸಲಿಲ್ಲ.

"ಪ್ರವಲ್ಲಿಕ ನೀನು ಎಚ್ಚರದಿಂದಿರು. ಈಗ ನಾವು ಸ್ವಾಮಿಗೆ ಕೊಟ್ಟಿರುವ ಪೆಟ್ಟು ಸಾಮಾನ್ಯದ್ದಲ್ಲ. ಅವನು ಮಹಾ ಅಪಾಯಕರ ವ್ಯಕ್ತಿ. ಮತ್ತೆ ಕೆಲವು ದಿನಗಳ ಕಾಲ ನಿನ್ನ ಸುತ್ತಮುತ್ತಲಿನ ಪರಿಸರವನ್ನು ಗಮನಿಸುತ್ತಿರು. ನಾವು

ಮಾಡಿದ್ದಕ್ಕೆ ಅವನು ಹುಚ್ಚನಂತಾಗಿ ಏನು ಬೇಕಾದರೂ ಮಾಡಬಹುದು." ಅವಳು ನಕ್ಕು, "ಇಂತಹವುಗಳನ್ನು ಎದುರಿಸಲು ನಮಗೆ ಸಿಬಿಐ ಟ್ರೈನಿಂಗ್ ಇದೆ ಬಿಡು, ನನ್ನ ಪ್ರಾಣಕ್ಕೇನೂ ಅಪಾಯವಿಲ್ಲ" ಅಂದಳು.

ಅಪಾಯ ಪ್ರಾಣಗಳಿಗೆ ಬರಲಿಲ್ಲ, ಮತ್ತೊಂದು ಕಡೆಯಿಂದ ಬಂತು!

*  *  *  *

"ರಾಮಲಾಲ್ ನಮ್ಮ ವ್ಯಕ್ತಿಯೊಬ್ಬ ಆಸ್ಪತ್ರೆಯಿಂದ ಕಾಣೆಯಾಗಿದ್ದಾನೆ. ಅವನೇನಾದನೆಂದು ತಿಳಿಯಿತಾ?"

ರಾಮಲಾಲ್ ಇಲ್ಲವೆಂಬಂತೆ ತಲೆ ಆಡಿಸಿದ.

"ಅವನಿಗೆ ಎಚ್ಚರವಾದರೆ ನಮ್ಮ ರಹಸ್ಯಗಳನ್ನು ಹೇಳಿಬಿಡುತ್ತಾನೆ. ಡಿಪಾರ್ಟ್‌ಮೆಂಟೇ ಅವನನ್ನು ಆಸ್ಪತ್ರೆಯಿಂದ ಸಾಗಿಸಿರುತ್ತದೆಂದು ನನ್ನ ಊಹೆ."

"ಡಿಪಾರ್ಟ್‌ಮೆಂಟಿನಲ್ಲಿರುವ ನಮ್ಮವರು ಅದರ ಬಗ್ಗೆ ಏನೂ ತಿಳಿಸಿಲ್ಲ. ಬಹುಶಃ ಹಾಗೇನಾದರೂ ಆಗಿದ್ದಿದ್ದರೆ ಹೇಳಿಬಿಡುತ್ತಿದ್ದರು ಅವರು"

"ಅವರಿಗೆ ತಿಳಿಯದಂತೆ ಪ್ರವಲ್ಲಿಕಳೇ ಸ್ವತಃ ಜವಾಬ್ದಾರಿಯಿಂದ ತಪ್ಪಿಸಿದ್ದಾಳೇನೋ?" ಯೋಚಿಸುತ್ತಾ ಹೇಳಿದ ಸ್ವಾಮಿ.

ರಾಮಲಾಲ್ ಆಶ್ಚರ್ಯದಿಂದ ನಂಬದವನಂತೆ "ಅದು ತುಂಬಾ ರಿಸ್ಕ್ ಅಲ್ಲವಾ" ಎಂದು ಕೇಳಿದ.

"ಡಿಪಾರ್ಟ್‌ಮೆಂಟ್ ಮೂಲಕ ಏನು ಮಾಡಿದರೂ ನಾವು ಅದನ್ನು ಕಂಡುಹಿಡಿದು ಬಿಡುತ್ತೇವೆಂದು ಅವರಿಗೆ ಅನುಮಾನ ಬಂದಿದೆ. ಅದಕ್ಕೆ ಮೂರನೇ ಕಣ್ಣಿಗೆ ತಿಳಿಯದಂತೆ ಪ್ರವಲ್ಲಿಕ, ವಿಹಾರಿ ಅವನನ್ನು ಅಪಹರಿಸಿರುತ್ತಾರೆ! ರಾಮಲಾಲ್! ಹೇಗಾದರೂ ನೀನು ಅವನನ್ನು ಕಂಡು ಹಿಡಿಯಬೇಕು. ಸಾಧ್ಯವಾದರೆ ಅವನ ಬಾಯನ್ನು ಶಾಶ್ವತವಾಗಿ ಮುಚ್ಚಿಸಿಬಿಡು. ಅವನು ಅವರಿಗೆ ಅಪ್ರೂವರ್ ಆಗಿ ಸಿಗಬಾರದು ಅಷ್ಟೇ."

"ಡಾಕ್ಟರ್ ದಯಾನಂದ ಕೃಷ್ಣಮೂರ್ತಿಯನ್ನು ನೆರಳಿನಂತೆ ಹಿಂಬಾಲಿಸಿದರೆ ನಮ್ಮ A-5 ಎಲ್ಲಿದ್ದಾನೆಂದು ತಿಳಿಯುತ್ತದೆ."

"ಅವರಷ್ಟು ಅಜಾಗರೂಕರಾಗಿರುತ್ತಾರೆಂದು ನಾನಂದುಕೊಳ್ಳುವುದಿಲ್ಲ, A-5 ಗೆ ಈಗ ಡಾಕ್ಟರ್ ಟ್ರೀಟ್‌ಮೆಂಟ್ ಕೊಡ್ತಿಲ್ಲ" ಪರಮೇಶ್ವರ್ ಹೇಳಿದ.

"ವಿಹಾರಿಗೆ ಕಟ್ಟಿದ್ದ ಮೈಕ್ರೋಫೋನ್ ಮೂಲಕ ತಿಳಿದುಕೊಳ್ಳೋಣವೆಂದರೆ ಈಗ ಅದು ಅವನ ಬಳಿಯಿಲ್ಲ...ಏನೇ ಆಗಲಿ ನಮ್ಮವರನ್ನೆಲ್ಲಾ

ಎಚ್ಚರವಾಗಿರುವಂತೆ ನೋಡಿಕೋ. ಎಲ್ಲರ ಓಂದೆಯೂ 'ಷಾಡೋಸ್' ಏರ್ಪಾಡು ಮಾಡು. ಇಬ್ಬರು ವ್ಯಕ್ತಿಗಳನ್ನು ಆ ಮೈಕ್ರೋಫೋನ್ ಬಳಿ ಸದಾ ಇರುವಂತೆ ನೋಡಿಕೋ. ಥೀಫ್ ಹತ್ತಿರವಾಗಲೀ, ವಿಹಾರಿಗೆ ಕಟ್ಟಿರುವ ತಾಯಿತದ ಮೂಲಕವಾಗಲೀ A-5ನ ವಿಷಯ ಬರಬಹುದು. ನಾಳೆ ಸಂಜೆಯೊಳಗಾಗಿ A-5ನ ವಿಷಯ ನನಗೆ ಬೇಕು. ಪ್ರವಲ್ಲಿಕ, ವಿಹಾರಿ, ಥೀಫ್ ಯಾರೋ ಒಬ್ಬರ ಮೂಲಕ ನಮಗೆ A-5ನ ಬಗ್ಗೆ ತಿಳಿದೇ ತಿಳಿಯಬೇಕು. ಗೋ..." ಎನ್ನುತ್ತಾ ಸ್ವಾಮಿ ಆದೇಶ ನೀಡಿದ. ರಾಮಲಾಲ್ ತಲೆ ಆಡಿಸಿ ಅಲ್ಲಿಂದ ಹೊರಟುಹೋದ. ಇದು ನಡೆದ ಐದು ನಿಮಿಷಗಳ ನಂತರ, ತಮ್ಮ A-5ಯನ್ನು ಎಲ್ಲಿ ಬಚ್ಚಿಟ್ಟಿದ್ದಾರೆ ಎಂದು ಅವರಿಗೆ ತಿಳಿಯಿತು ಸುನಾದಮಾಲಳ ಮೂಲಕ!

## 19

ನಾನು ನಿಮಗೆ ಮೊದಲೇ ಹೇಳಿದ್ದೆ–ನಮ್ಮಜ್ಜಿಯ ಜೊತೆ ಮಾತನಾಡಿದರೂ ನನಗೆ ಅಳು ಬರುತ್ತದೆ. ಅದನ್ನು ಹೊಟ್ಟೆಕಿಚ್ಚು ಅನ್ನುವುದಿಲ್ಲ. ಪೊಸೆಸ್ಸಿವ್‌ನೆಸ್ ಎನ್ನುತ್ತಾರೆ. ಗಂಡಸರು ಅಷ್ಟು ಗಾಢವಾಗಿ ಪ್ರೀತಿಸಲಾರರಾದ್ದರಿಂದ ನನಗೆ ಈ ಪ್ರೇಮಗಳ ಬಗ್ಗೆ ನಂಬಿಕೆಯಿಲ್ಲವೆಂದಿದ್ದೆ. ನನ್ನನ್ನು ಬಲವಂತವಾಗಿ ಪ್ರೀತಿಯೊಳಗಿಳಿಸಿ, ಈಗ ಇನ್ನೊಬ್ಬಳೊಡನೆ ಹಾಯಾಗಿ ಲಲ್ಲೆ ಹೊಡೆಯುತ್ತಿದ್ದೀರಿ."

"ಲಲ್ಲೆ ಹೊಡೆಯುತ್ತಿದ್ದೀನಾ, ಇನ್ನೊಬ್ಬಳೊಡನೆ? ಯಾರು ಆ ಹುಡುಗಿ?" ವಿಹಾರಿ ಆಶ್ಚರ್ಯದಿಂದ ಕೇಳಿದ.

"ಪ್ರಹಾಳಿಕಾ...ಪ್ರಹಾಳಿಕೋ–ಕಾಳಿಕೋ"

"ಓ...ಪ್ರವಲ್ಲಿಕಾ"

"ಆಹಾ ..ಆ ಹೆಸರನ್ನು ಅದೆಷ್ಟು, ಸಿಹಿಯಾಗಿ ಹಾಡುತ್ತೀರಾ...ಓ ಗಂಡಸೇ!"

"ಮಾಲಾ..." ಕೋಪದಿಂದ ಕಿರುಚಿದ ವಿಹಾರಿ.

"ಹೆಣ್ಣೆಂದರೆ ಅಸೂಯೆಯೆಂದು ಯಾರೋ ಹೇಳಿದ್ದನ್ನು ನೀನೂ ನಿರೂಪಿಸುತ್ತಿದ್ದಿ."

"ಗಂಡಸೆಂದರೆ ಮೋಸವೆಂಬುದನ್ನು ನೀವು ಪ್ರೂವ್ ಮಾಡಿದ್ದೀರಿ"

"ನನಗೂ ಆಕೆಗೂ ನಡುವೆ ನೀನು ಊಹಿಸಿದಂತೆ ಯಾವ ಸಂಬಂಧವೂ ಇಲ್ಲ..."

"ಇದೆಯೆಂದು ನಾನು ಅಂದುಕೊಂಡಿರಲಿಲ್ಲ. ಶಾರೀರಿಕ ಸಂಬಂಧವಿದ್ದರೇನೇ ಅಸೂಯೆ ಪಡಬೇಕೆಂದು ನೀವಂದುಕೊಂಡರೆ ಅದು ತಪ್ಪು. ನೀವೊಬ್ಬರೇ ಏಕೆ? ತುಂಬಾ ಜನ ಹಾಗೆಯೇ ಅಂದುಕೊಂಡಿದ್ದಾರೆ. ನನ್ನ ದೃಷ್ಟಿಯಲ್ಲಿ ಮಾನಸಿಕ ಹತ್ತಿರತನ, ಶಾರೀರಕ ಹತ್ತಿರತನಕ್ಕಿಂತ ಭಯಂಕರವಾದದ್ದು."

"ನಿನಗೆ ತಲೆ ಕೆಟ್ಟಿದೆ."

"ಇಲ್ಲ ನನ್ನ ಮನಸ್ಸತ್ತ್ವ ಅದು. ಅದನ್ನು ಮುಚ್ಚಿಡುವ ಪ್ರಯತ್ನವನ್ನೂ ನಾನು ಮಾಡುತ್ತಿಲ್ಲ. ನನ್ನದೂ ತುಂಬ ಸಣ್ಣ ಪ್ರಪಂಚ. ಅದರಲ್ಲಿ ಒಬ್ಬನೇ ಪುರುಷ. ಅದು 'ನೀವು' ಅಂದುಕೊಂಡಿದ್ದೇನೆ. ಅದೇ ರೀತಿ ನಿಮ್ಮ ಪ್ರಪಂಚದಲ್ಲಿಯೂ ನಾನೊಬ್ಬಳೇ ಸ್ತ್ರೀ ಇರಬೇಕೆಂದುಕೊಳ್ಳುವುದರಲ್ಲಿ ತಪ್ಪೇನಿದೆ?"

"ಅದು ಮೂರ್ಖತ್ವ. ಒಬ್ಬ ಮನುಷ್ಯನಿಗೆ ಮತ್ತೊಬ್ಬರೊಡನೆ ಸಾಕಷ್ಟು ಕೆಲಸಗಳಿರುತ್ತವೆ. ಅದನ್ನು ಚರ್ಚಿಸಲು ಆ ವ್ಯಕ್ತಿ ಪುರುಷನೆ ಸ್ತ್ರೀಯೇ; ಅವಳು ನನ್ನ ಪ್ರಪಂಚದಲ್ಲಿ ಪ್ರವೇಶಿಸುತ್ತಾಳಾ-ದೂರ ನಿಂತಿರುತ್ತಾಳಾ? ಎಂದು ಯೋಚಿಸುತ್ತಾ ಕೂರುವುದು ಸಾಧ್ಯವಿಲ್ಲ. ಆಕೆ ಬುದ್ಧಿವಂತೆ, ಒಂದು ರೀತಿಯಲ್ಲಿ ಹೇಳಬೇಕೆಂದರೆ ಆಕೆಯಿಂದಲೇ ನನಗೆ ಇಷ್ಟೆಲ್ಲಾ ಸ್ಫೂರ್ತಿ. ಆಕೆಯಿಂದಲೇ ನಾನು ಬದಲಾದೆ."

"ನಾನೂ ನಿಮ್ಮಿಂದಲೇ ಬದಲಾದೆ. ಒಬ್ಬ ವ್ಯಕ್ತಿಯ ಸಾಂಗತ್ಯದಲ್ಲಿ ಹೊಸ ಬಾಗಿಲುಗಳು ತೆರೆದುಕೊಳ್ಳುವುದು–ಹೊಸ ಆಲೋಚನೆಗಳನ್ನು ಪಡೆಯುವುದು. ಇದೇ ತಾನೇ ಪ್ರೀತಿಯೆಂದರೆ ..ನಿಮ್ಮನ್ನು ನಂಬಿ ಅರ್ಧರಾತ್ರಿಯು ಮೇಳೆ ಮಂತ್ರಿಯೊಬ್ಬನ ಬಳಿಗೆ ಹೋಗಿದ್ದೆ. ಗಂಡಸೊಬ್ಬ ನನ್ನೆಡೆಗೆ ನೋಡಿದರೇನೇ ಬೆವರುವ ನಾನು, ಕೆಮರಾ ಮುಂದೆ ನಿಂತು, ಬ್ಲೌಸನ್ನು ಹರಿದುಕೊಂಡೆ. ನೀವು ಬಚ್ಚಿಟ್ಟಿರುವ ಸ್ವಾಮಿಯ ಅನುಚರರನ್ನು ನೋಡಿಕೊಳ್ಳುತ್ತಿದ್ದೇನೆ. ಇದೆಲ್ಲಾ ಪ್ರೀತಿಯಿಂದಲೇ ಮಾಡುತ್ತಿರುವುದು ನಾನು. ಅಲ್ಲಾ ಅಂತೀರಾ?"

"ನಾನೆಲ್ಲಿ ಹಾಗೆಂದೆ? ಪ್ರೀತಿಯಿಂದ ಕುರುಡುತನ ಕೂಡಾ ಬರುತ್ತದೆಂದು ಹೇಳುತ್ತೇನೆ. ಸದ್ಯಕ್ಕೆ ಅದನ್ನೀಗ ಹೋಗಲಾಡಿಸಬೇಕೆನ್ನುತ್ತೇನೆ..." ಎಂದು "ನಡಿ" ಎಂದು ಅವಳ ತೋಳನ್ನು ಹಿಡಿದು ಎಳೆದುಕೊಂಡು ಹೋದ. ಅವಳು "ಎಲ್ಲಿಗೆ?" ಎಂದು ಕೇಳುತ್ತಿದ್ದರೂ ಗಮನಿಸದೆ ಕಾರಿನಲ್ಲಿ ಕೂರಿಸಿದ.

ಅದೇ ವೇಳೆಗೆ ಅಲ್ಲಿ ಮೈಕ್ರೊಫೋನ್ ಬಳಿ ಕುಳಿತಿದ್ದ ವ್ಯಕ್ತಿ ಚಕ್ಕನೇ ಮೇಲೆದ್ದು ಸ್ವಾಮಿಯ ಬಳಿಗೆ ಓಡಿದ. ಮುಂದಿನ ಕ್ಷಣವೇ ಆ ಸುದ್ದಿ ಅಲ್ಲೆಲ್ಲಾ

ಹಬ್ಬಿತು.

"ಓಹೋ...ನಮ್ಮವನನ್ನು ಕಾವಲು ಕಾಯುತ್ತಿರುವುದು ಸುನಾದಮಾಲ ಎಂದಂತಾಯಿತು. ಊಹೆಗೂ ಸಿಗದ ರಹಸ್ಯ!ರಾಮಲಾಲ್...ಕ್ವಿಕ್" ಸ್ವಾಮಿ ಹೇಳಿದ.

ಕೆಲವೇ ಕ್ಷಣಗಳಲ್ಲಿ ಸುನಾದಮಾಲಳ ಹಿಂದೆ ನಾಲ್ಕಾರು ಜನ ನೆರಳಿನಂತೆ ಹಿಂಬಾಲಿಸಿದರು. ಅವಳಿಗೆ ಅನುಮಾನ ಬರಲಿಲ್ಲ. ಸುನಾದಮಾಲಳಂತಹ ಹುಡುಗಿಗೆ ಅಂತಹ ವಿಷಯಗಳತ್ತ ಗಮನಹರಿದರೆ ತಾನೇ! ಅದರಲ್ಲಿಯೂ ಅವಳು ತುಂಬಾ ಸಂತೋಷದಿಂದ ಇದ್ದ ದಿನ ಬೇರೆ.

ಆ ಸಂತೋಷಕ್ಕೆ ಕಾರಣ ಅವಳ ಅನುಮಾನಗಳೆಲ್ಲಾ ಪರಿಹಾರವಾದದ್ದು! ಅವಳು 'ಎಲ್ಲಿಗೆ?' ಎಂದು ಕೇಳುತ್ತಿದ್ದರೂ ಅವಳ ತೋಳನ್ನು ಹಿಡಿದು ಕಾರಿನ ಬಳಿಗೆ ಎಳೆದೊಯ್ದು ಹೊರಟೇ ಬಿಟ್ಟ ಪ್ರವಲ್ಲಿಕಳ ಮನೆಗೆ!! ಅಷ್ಟು ಆತುರದಿಂದ ಬಂದ ಇಬ್ಬರನ್ನೂ ಕಂಡು ಪ್ರವಲ್ಲಿಕ ಆಶ್ಚರ್ಯಪಟ್ಟಳು. ಆ ಸಮಯಕ್ಕೆ ಅವಳ ಅಪ್ಪ ಅವಳ ಮದುವೆಯ ವಿಷಯವನ್ನೇ ಮಾತನಾಡುತ್ತಿದ್ದರು.

"ಏನಿಲ್ಲ. ನಮ್ಮ ಮಾಲಳಿಗೆ ಇದ್ದಕ್ಕಿದ್ದಂತೆಯೇ ಒಂದು ಅನುಮಾನ ಬಂತು, ಅದನ್ನು ಪ್ರಾರಂಭದಲ್ಲಿಯೇ ನಿವಾರಿಸಬೇಕೆಂದು ಇಲ್ಲಿಗೆ ಕರೆತಂದೆ." ಮಾಲ ನಾಚಿಕೆಯಿಂದ, "ಏನೂ ಇಲ್ಲ" ಎಂದಳು ಕಂಗಾಲಾಗಿ, ಅವಳಿಗೆ ಇಂತಹ ಮುಜುಗರ ಪರಿಸ್ಥಿತಿ ಎಂದೂ ಬಂದಿರಲಿಲ್ಲ.

"ನಿಜವನ್ನೇಕೆ ಮುಚ್ಚಿಡಲಿ? ಈ ಹುಡುಗಿ, ನಾನು ಪ್ರೀತಿಸಿಕೊಂಡಿದ್ದೇವೆ. ಹೇಗೆ ಬಂತೋ ಏನೊ. ಇದುವರೆವಿಗೂ ನಿಮ್ಮ ಮಗಳೂ ನಾನೂ ಎಲ್ಲಾ ಕೆಲಸಗಳನ್ನು ಒಟ್ಟಾಗಿಯೇ ಮಾಡಬೇಕಾಯಿತು. ಆದರಿಂದ ಇವಳಿಗೆ ಅನುಮಾನ ಬಂದು, ಅದು ದೊಡ್ಡದಾಗಿ ಪೆಡಂಭೂತವಾಗಿ ಬದಲಾಗಿದೆ. ಅದನ್ನೀಗ ನೀವು ನಿವಾರಿಸಬೇಕು."

ಪ್ರವಲ್ಲಿಕ ಗಲಿಬಿಲಿಗೊಂಡು ವಿಹಾರಿಯೆಡೆಗೆ ನೋಡಿದಳು. ಅದು ಒಂದು ನಿರ್ವಿಕಾರ ಅಚೇತನಾವಸ್ಥೆ. ವಿಷಾದಕ್ಕಿಂತಲೂ ಹೆಚ್ಚಾದದ್ದು. ವೇದಾಂತಕ್ಕಿಂತಲೂ ಕೆಳಗಿನ ಮೆಟ್ಟಿಲಿನಲ್ಲಿತ್ತು. ವಿದ್ಯುದ್ಘಾತದಂತೆ ತಗುಲಿತ್ತು. ಅವಳ ಕಣ್ಮುಂದೆಯೇ ದೃಶ್ಯ ಸರಿಯಿತು, ನಾಟಕದ ಸ್ಟೇಜಿನ ಮೇಲೆ ಅಂದು ಸುನಾದ-ಮಾಲಳ ಮೇಲೆ ಇವನು ಮಲಗಿದ್ದ ದೃಶ್ಯ ಅದು. ತಾನು ಇವನ ಭಾರ ಹೇಳುತ್ತಿದ್ದಂತೆಯೇ, ಇವನು ಬಹುಶಃ ಸುನಾದಮಾಲಳೆಂದುಕೊಂಡಿರುತ್ತಾನೆ. ತಾನೇ ಕರ್ನಲ್ ವೇಷ ಹಾಕಿದ್ದೆಂದು ಅವನಿಗೆ ತಿಳಿಯದೇ ಹೋಯಿತು.

ಅಲ್ಲಿಯವರೆಗೂ ಪರ್ವಾಗಿಲ್ಲ.!

ಹಗ್ಗ ಕಡಿಯುವ ವರೆಗೂ ಜಗ್ಗಿತ್ತು.

ಅವಳಿಗೆ ನಗು ಬಂತು. ದುಃಖದಿಂದ ಕೂಡಿದ ನಗು ಅದು. ತನ್ನ ಮೇಲೆಯೇ ತನಗೆ ತಿಳಿಯದ ಸಿಟ್ಟು.

ಬೇಗನೆ ಚೇತರಿಸಿಕೊಂಡು "ಏನಿಲ್ಲ ಅಪ್ಪ. ಆಮೇಲೆ ಹೇಳ್ತೀನಿ. ನೀವು ಒಳಗೆ ಬನ್ನಿ. ಒಳಗೆ ಮಾತನಾಡಿಕೊಳ್ಳೋಣ," ಎಂದು ಮಾಲಳನ್ನು ಒಳಗೆ ಕರೆದೊಯ್ದಳು. ಬದುಕಿದೆನೋ–ಎಂದುಕೊಂಡು ಮಾಲ ಅವಳೊಡನೆ ಒಳಗೆ ಹೋದಳು.

ಒಳಗೆ ಹೋಗುತ್ತಿದ್ದಂತೆಯೇ, "ನಿಮ್ಮಿಬ್ಬರಿಗೂ ಪರಿಚಯ ಹೇಗೆ ಬೆಳೆಯಿತು?" ಎಂದು ಕೇಳಿದಳು. ಮಾಲ ಮೊದಲಿನಿಂದ ಎಲ್ಲಾ ಹೇಳಿಬಿಟ್ಟಳು. ಪ್ರವಲ್ಲಿಕಳಿಗೆ ನಡೆದದ್ದೆಲ್ಲಾ ಅರ್ಥವಾಯಿತು. ಮೆಡಿಕಲ್ ಷಾಪ್ ಬಳಿ ತನ್ನ ಬದಲು ಈ ಹುಡುಗಿಯನ್ನು ಹಿಡಿದು ಛೇಡಿಸಿದ್ದು ಅವಳಿಗೆ ನೆನಪಾಯಿತು.

ಅವಳು ಮಾಲಳೆಡೆಗೆ ನೋಡಿದಳು.

ಸ್ವಚ್ಛವಾಗಿ, ಮುಗ್ಧಳಾಗಿ ಕಂಡಳು.

ಅವಳೊಂದು ನಿರ್ಧಾರಕ್ಕೆ ಬಂದಳು.

ಬದುಕಿಗೆ ಕಾಮಾಗಳೇ ಹೊರತು ಫುಲ್‌ಸ್ಟಾಪ್ ಇರುವುದಿಲ್ಲ. ಸಾವೇ ಕೊನೆಯದು. ಈ ಅನ್ಯಾಯ ಇಲ್ಲಿಗೆ ಮುಗಿಯಿತು. ಉಳಿದದ್ದು ಗುರಿಯೇ–ತನ್ನ ಆಫೀಸಿನಲ್ಲಿ ಇನ್ನು ಮುಂದೆ ಹೆಚ್ಚು ಸಂಜೆಗಳನ್ನು ಕಳೆಯಬೇಕು.

ಸ್ವಲ್ಪ ಹೊತ್ತು ಮಾತನಾಡಿ ವಿಹಾರಿ ಸುನಾದಮಾಲಳೊಡನೆ ಹೊರಟು ಹೋದ. ಅವಳು ಪ್ರತಾಪರಾವ್ ಬಳಿಗೆ ಬಂದು ನಿಂತಳು. ಸ್ವರ ಬದಲಾಯಿಸುವುದು ಭಾವನೆಗಳು ಮುಖದಲ್ಲಿ ಕಾಣದಂತೆ ಮಾಡುವುದು ಸಿ ಬಿ ಐ ನಲ್ಲಿ ಸಾಧ್ಯವೇನೋ ಆಗಲಿ, ನಿಜಜೀವನದಲ್ಲಲ್ಲ, ಅವಳನ್ನು ಪ್ರತಾಪರಾವ್ ಗಮನಿಸಿದ, ಆದರೆ ಪ್ರಶ್ನೆಗಳನ್ನೇನೂ ಕೇಳಲಿಲ್ಲ. ವಿಹಾರಿಯ ಮಾತುಗಳಲ್ಲೇ ಆತನಿಗೆ ನಡೆದಿರುವುದೆಲ್ಲ ಅರ್ಥವಾಯಿತು. ಆತ್ಮೀಯತೆಯಿಂದ ಭುಜ ತಟ್ಟಿದ. "ನೊಂದುಕೊಳ್ಳುತ್ತಿದ್ದೀಯಾ ಪ್ರವಲ್ಲಿಕಾ?" ಎಂಬ ಪ್ರಶ್ನೆ ಅಡಗಿತ್ತು ಆ ಸ್ಪರ್ಶದಲ್ಲಿ. ಅವಳು ಇಲ್ಲವೆಂಬಂತೆ ತಲೆ ಆಡಿಸಿದಳು. 'ಬರೆದಿರಬೇಕು ಹಣೆಯಲ್ಲಿ' ಎಂಬ ಉತ್ತರ ಅದು.

* * * *

ಸುನಾದಮಾಲಳನ್ನು ಫಾಲೋ ಮಾಡುತ್ತಿದ್ದವರು ಅವಳೊಂದು ಬೀದಿಯಲ್ಲಿ ಪ್ರವೇಶಿಸುತ್ತಿದ್ದಂತೆಯೇ ಆ ವಿಷಯವನ್ನು ರಾಮಲಾಲ್‌ಗೆ ವೈರ್‌ಲೆಸ್ ಮೂಲಕ ತಿಳಿಸಿದರು. ಕೆಲವೇ ಕ್ಷಣಗಳಲ್ಲಿ ಅವನು ಅಲ್ಲಿಗೆ ಬಂದ.

"ಆ ಮನೆಯೊಳಗೆ ಹೋದಳು" ಎಂದು, ಒಂದು ಸಣ್ಣ ಹಂಚಿನ ಮನೆಯನ್ನು ತೋರಿಸುತ್ತಾ ಹೇಳಿದರು. ರಾಮಲಾಲ್ ಆಶ್ಚರ್ಯಪಟ್ಟ. ಏನೋ ಅರ್ಥವಾದವನಂತೆ ತಲೆ ಆಡಿಸಿದ-ಸರಿಯಾಗಿ ಪ್ರವಲ್ಲಿಕಳ ಬಂಗಲೆಯ ಹಿಂದಿನ ಮನೆ. ಮೂರನೆ ಕಣ್ಣಿಗೆ ತಿಳಿಯದಂತೆ ಆ ಮನೆಯಿಂದ ಈ ಮನೆಗೆ ಬರಬಹುದಿತ್ತು. ಪ್ರವಲ್ಲಿಕ ಈ ರೀತಿಯ ಏರ್ಪಾಟು ಮಾಡಿದ್ದಾಳೆಂದುಕೊಂಡ.

ನಿಶ್ಶಬ್ದವಾಗಿ ಒಳಗೆ ಪ್ರವೇಶಿಸಿದ.

ಆಗ ತಾನೇ "ನನ್ನ ಡ್ಯೂಟಿ ಮುಗಿಯಿತಮ್ಮಾ. ಇನ್ನು ನಿನ್ನ ಡ್ಯೂಟಿ" ಎನ್ನುತ್ತಿದ್ದಾರೆ ಪ್ರತಾಪರಾವ್. ಒಳಗೆ A-5 ಇನ್ನೂ ಎಚ್ಚರತಪ್ಪಿಯೇ ಬಿದ್ದಿದ್ದಾನೆ. ಪಹರೆಯಂತೆ ಒಬ್ಬರಾದ ಮೇಲೊಬ್ಬರು ಅವನನ್ನು ಕಾಯುತ್ತಿದ್ದಾರೆ. ಅವನನ್ನು ಅಲ್ಲಿ ಬಚ್ಚಿಟ್ಟಿದ್ದ ರಹಸ್ಯ ಇದುವರೆವಿಗೂ ನಾಲ್ವರಿಗೆ ಮಾತ್ರ ಗೊತ್ತಿತ್ತು. ಈಗ ಶತ್ರುಗಳಿಗೆ ಕೂಡಾ ತಿಳಿದುಬಿಟ್ಟಿತ್ತು.

ರಾಮಲಾಲ್ ಹಾವಿನಂತೆ ಮತ್ತಷ್ಟು ಒಳಗೆ ಸೇರಿದ, ಅವನ ಕೈಯ್ಯಲ್ಲಿ ಚೂರಿ ಹರಿತವಾಗಿ ಹೊಳೆಯುತ್ತಿತ್ತು.

"ಇನ್ನು ನೀವು ಹೋಗಿ ಅಂಕಲ್" ಎನ್ನುತ್ತಿದ್ದಾಳೆ ಸುನಾದಮಾಲ. ಅವಳಿಗೆ ತುಂಬಾ ಹೊತ್ತು ಒಬ್ಬಳೇ ಕುಳಿತು ಯೋಚಿಸಿಕೊಳ್ಳುತ್ತಿರಬೇಕೆಂದು ಅನ್ನಿಸುತ್ತಿದೆ. ಯೋಚಿಸಲು ಏನೂ ಇಲ್ಲ. ಆದರೂ ಹಾಗೆನ್ನಿಸುತ್ತಿರುತ್ತದೆ. ಅದೇ ಪ್ರೀತಿಯ ವಿಶೇಷ!

ಹೊರಡಲು ಸಿದ್ಧನಾಗಿ, ತನ್ನ ಜೇಬಿನಿಂದ ಒಂದು ಮೆಡಲನ್ನು ತೆಗೆದು ತೋರಿಸುತ್ತಾ, "ನೆನ್ನೆ ಕೇಳಿದೆಯಲ್ಲಾ, ಪರಮವೀರ ಚಕ್ರವೇನೆಂದು-ಇಗೋ ಇದೇ" ಎಂದು ಹೆಮ್ಮೆಯಿಂದ ಹೇಳಿದರು ಪ್ರತಾಪರಾವ್. ಅವಳು ಅದನ್ನು ತೆಗೆದುಕೊಂಡಳು. ಅದರ ಬಗ್ಗೆ-ಓದಿದ್ದಳಾಗಲೀ ಆದರೆ ನೋಡಿರಲಿಲ್ಲ. ಅವಳು ಅದನ್ನು ಸ್ಪರ್ಶಿಸಿದಳು. ಮೆಡಲ್ ಚೆನ್ನಾಗಿ ಕಂಡಿತು. ಅಂತಹ ಬೆಲೆಬಾಳುವಂಥದೂ ಅಲ್ಲ. ಕೋಟ್ಯಾಂತರ ಪ್ರಜೆಗಳ ಪ್ರತಿನಿಧಿಯಾಗಿ ಭಾರತದ ರಾಷ್ಟ್ರಪತಿ ಕೊಟ್ಟಿರುವುದು ಅದು. ಅವಳ ಕೈ ಬೆರಳುಗಳು ನಡುಗಿದವು.

ಅಷ್ಟರಲ್ಲಿ ರಾಮಲಾಲ್ ಮತ್ತೆರಡು ಹೆಜ್ಜೆಗಳನ್ನು ಮುಂದಕ್ಕೆ ಹಾಕಿದ. ಅವನ ಕಾಲಿನ ಕೆಳಗೆ ಸಿಕ್ಕಿದ ಪೇಪರ್ ಸ್ವಲ್ಪ ಶಬ್ದ ಮಾಡಿತು. ಸೈನ್ಯದಲ್ಲಿಯ ಪ್ರತಾಪರಾವ್‌ನ ಅನುಭವ ಕೂಡಲೇ ಎಚ್ಚರಿಸಿತು, ಆದರೆ ತಡವಾಗಿತ್ತು.

ಮಿಂಚಿಗಿಂತಲೂ ವೇಗವಾಗಿ ರಾಮಲಾಲ್‌ನ ಚೂರಿ ಮುಂದಕ್ಕೆ ಬಂತು. ಸುನಾದಮಾಲ ಕಿಟಾರನೆ ಕಿರುಚಿದಳು.

* * * *

ವಾತಾವರಣದಲ್ಲಿ ಉಂಟಾದ ಬದಲಾವಣೆಯನ್ನು ಪ್ರವಲ್ಲಿಕ ಗಮನಿಸಿದಳು. ಆಫೀಸೆಲ್ಲಾ ಮುಂಚಿನಂತಿಲ್ಲ. ಏನೋ ಬದಲಾವಣೆಯಿದೆ.

ಅವಳದರ ಬಗ್ಗೆ ಯೋಚಿಸದೆ ಹೋಗಿ ತನ್ನ ಸೀಟಿನಲ್ಲಿ ಕುಳಿತುಕೊಂಡಳು. ಎರಡು ನಿಮಿಷಗಳ ನಂತರ ಛೀಫ್‌ನಿಂದ ಕರೆಬಂತು.

"ಮೆ ಐ ಕಮಿನ್ ಸಾರ್"

"ಪ್ಲೀಸ್..."

ಅವಳು ಹೋಗಿ ಅವರ ಎದುರಿನಲ್ಲಿ ಕುಳಿತಳು. ಛೀಫ್ ಅದೊಂದು ರೀತಿಯಾಗಿದ್ದರು.

"ಎಲ್ಲಿಯ ವರೆಗೂ ಬಂತು ನಿಮ್ಮ ಇನ್‌ವೆಸ್ಟಿಗೇಷನ್?"

ಅವಳು ನಕ್ಕಳು. "ಇನ್‌ವೆಸ್ಟಿಗೇಷನ್‌ಗೇನಿದೆ ಸಾರ್? ಅಪರಾಧಿಗಳಾರೆಂದು ಗೊತ್ತಿದೆ, ಹೇಗೆ ಅಪವಾದ ಹೊರಿಸಬೇಕೆಂದು ತಿಳಿಯುತ್ತಿಲ್ಲ ಅಷ್ಟೆ".

"ಆಸ್ಪತ್ರೆಯಿಂದ ಪೇಷಂಟನ್ನು ತೆಗೆದುಕೊಂಡು ಹೋಗಿ ಎಲ್ಲಿ ಬಚ್ಚಿಟ್ಟಿದ್ದೀರಿ ಪ್ರವಲ್ಲಿಕಾ?"

"ಗೊತ್ತಿಲ್ಲ ಸಾರ್"

"ಮೊನ್ನೆ ಕೇಳಿದಾಗಲೂ ಇದೇ ಉತ್ತರ ಹೇಳಿದ್ದಿರಿ. ನಾನು ಅದನ್ನು ಅಷ್ಟು ತಲೆಗೆ ಹಚ್ಚಿಕೊಳ್ಳಲಿಲ್ಲ. ಕಾನೂನಿನ ಪ್ರಕಾರ ಎಲ್ಲಾ ಕೆಲಸಗಳನ್ನೂ ಮಾಡಲು ಸಾಧ್ಯವಾಗದಾದಾಗ, ಕೆಲವು ಔಟ್ ಆಫ್‌ವೇ ಹೋಗುವುದು ತಪ್ಪಲ್ಲವೆಂದು ನನಗೂ ಗೂತ್ತಿದೆ. ಆ ದಾರಿಯಲ್ಲಿಯೇ ನೀವೂ ಹೋಗುತ್ತಿದ್ದೀರೆಂದು ಸುಮ್ಮನಿದ್ದೆ. ನಿಮ್ಮ ಶ್ರದ್ಧೆ, ಅನಂತಾನಂತಸ್ವಾಮಿಯ ಬಗ್ಗೆ ನಿಮಗಿರುವ ದ್ವೇಷ, ನನಗೆ ಗೊತ್ತು. ನಾನು ಆತನ ಭಕ್ತ. ಆದರೆ ನೀವು ಹೇಳಿದುದೆಲ್ಲಾ ನಿಜವಾದ ಪಕ್ಷದಲ್ಲಿ, ಆತನನ್ನು ನೇಣುಗಂಬಕ್ಕೆ ಏರಿಸುವ ಮೊದಲ ವ್ಯಕ್ತಿ ನಾನು."

ಅವಳಿಗೆ ಸಂತೋಷವಾಯಿತು, "ಥ್ಯಾಂಕ್ಸ್ ಸರ್" ಅಂದಳು.

"ಆದರೆ ನಾವು ಯೋಚಿಸಿದಂತೆಯೇ ನಮ್ಮ ಮೇಲಿನವರು ಯೋಚಿಸುತ್ತಿಲ್ಲ" ಆತ ನಿಲ್ಲಿಸಿದರು. ಸ್ವಲ್ಪ ಹೊತ್ತು ಮುಜುಗರದ ವಾತಾವರಣ. ಅದನ್ನು

ಸೀಳುತ್ತಾ ಆತ ಹೇಳಿದ–"ಒಂದು ಮುಖ್ಯವಾದ ಸಾಕ್ಷಿಯನ್ನು ಆಸ್ಪತ್ರೆಯಿಂದ ತಪ್ಪಿಸಿ ಶತ್ರುಗಳಿಗೆ ಒಪ್ಪಿಸಿದ್ದೀಯೆಂದು ಆಪಾದಿಸಿ ಡಿಪಾರ್ಟ್‌ಮೆಂಟ್ ನಿನ್ನನ್ನು ಸಸ್ಪೆಂಡ್ ಮಾಡುತ್ತಿದೆ ಪ್ರವಲ್ಲಿಕ, ಇಗೋ ಆರ್ಡರ್–" ಅವಳು ವಿದ್ಯುದ್ಘಾತ ತಗುಲಿದವಳಂತೆ ನಿಶ್ಚೇಷ್ಟಿತಳಾದಳು. ಹಾಗೆಯೇ ನೋಡುತ್ತಾ ಇದ್ದುಬಿಟ್ಟಳು. ಮೊದಲು ಆತ ಹೇಳಿದ್ದು ಅವಳ ಮೆದುಳಿನವರೆಗೂ ಹೋಗಿರಲಿಲ್ಲ. ನಂತರ ತಿಳಿದ ಕೂಡಲೆ ಮನಸ್ಸು ಅಲ್ಲೋಲ ಕಲ್ಲೋಲವಾಯಿತು. ಶರೀರವನ್ನೆಲ್ಲಾ ಹಿಮದಲ್ಲಿಟ್ಟಂತೆ ತಣ್ಣಗಾಯಿತು. ಹೃದಯದ ದುಃಖ ಕಣ್ಣಲ್ಲಿ ಬರಲಿಲ್ಲ, ಮತ್ತಷ್ಟು ಮನಸ್ಸನ್ನು ಹಿಂಸಿಸಲು ಅಲ್ಲಿಯೇ ಇದ್ದುಬಿಟ್ಟಿತು.

ಸುತ್ತಲೂ ಫೈಲುಗಳು ಹಾಗೆಯೇ ಇದ್ದವು.

ಫೋನ್ ಎಂದಿನಂತೆಯೇ ರಿಂಗಾಗುತ್ತಿತ್ತು.

ಹಳೆ ಕರ್ಟನ್‌ಗಳು-ಕುರ್ಚಿಗಳು–ಟೇಬಲ್‌ಗಳು–ಸರ್ಕಾರದ ಬ್ಯೂರೋಕ್ರಸಿಗೆ ನಿದರ್ಶನವಾಗಿ ಹಾಗೆಯೇ ಇದ್ದವು.

"ಸಾರಿ ಪ್ರವಲ್ಲಿಕಾ" ಛೀಫ್ ಹೇಳುತ್ತಿದ್ದರು. ಅವಳು ಮಾತನಾಡಲಿಲ್ಲ.

ಆ ಆರ್ಡರನ್ನು ತೆಗೆದುಕೊಳ್ಳಲು ಕೂಡಾ ಸಾಧ್ಯವಿಲ್ಲವೇನೋ ಎಂಬಂತೆ ಹಾಗೆಯೇ ಕುಳಿತುಬಿಟ್ಟಿದ್ದಳು. ಎದೆಯಲ್ಲಿ ಜಲಪಾತದ ಆರ್ಭಟ, ತಲೆಯಲ್ಲಿ ಅಗ್ನಿಪರ್ವತದ ಆಸ್ಫೋಟ–ಅವಳು ಆ ಎರಡಕ್ಕೂ ನಡುವೆ ಕಡಲ ನಿಶ್ಶಬ್ದ ಗರ್ಭ.

ಪ್ರೀತಿ ವಿಫಲವಾದಾಗ ಕೂಡಾ ಅವಳಿಷ್ಟು ನೊಂದುಕೊಂಡಿರಲಿಲ್ಲ. ಲಕ್ಷ್ಯವನ್ನು ಬೇರೆಡೆಗೆ ತಿರುಗಿಸಿಕೊಂಡಿದ್ದಳು. ಬದುಕಿನ ಗುರಿ ತನಗೆ ಬೇರೆಯಿದೆ ಯೆಂದು ಕರ್ತವ್ಯದಲ್ಲಿ ಸಂಪೂರ್ಣವಾಗಿ ಮುಳುಗಿದ್ದಳು.

ಆದರೆ ಈಗ?

ಕೆಲಸವೂ ಹೋಗಿತ್ತು.

ಅಲ್ಲ, ಶತ್ರು ಎಚ್ಚರಿಕೆಯಿಂದ ತನಗೆ ಪೆಟ್ಟುಕೊಟ್ಟಿದ್ದಾನೆ. ಸಿಕ್ಕಿದ ಪ್ರಾಣಿ ಯನ್ನು ಸಾಯಿಸದೆ ಅದರ ಕೈಕಾಲುಗಳನ್ನು ಮುರಿದು ಸಂತೋಷ ಪಡುತ್ತಿದ್ದಾನೆ. ಇಲ್ಲದಿದ್ದರೆ ಛೀಫ್ ಇಷ್ಟು ಬೇಗ ಈ ಪದವಿಗೆ ಮರಳಿ ಬರುತ್ತಿರಲಿಲ್ಲ. ತನ್ನ ಮೇಲೆ ಯಾವ ಸಾಕ್ಷಿಯೂ ಇಲ್ಲದೇನೇ ಇಷ್ಟು ಬಲವಾಗಿ ತಪ್ಪನ್ನು ಹೊರಿಸಿ, ಸಸ್ಪೆನ್ಷನ್ ಆರ್ಡರ್...

...ಅವಳೆದ್ದು ನಿಂತಳು.

ಛೀಫ್ ಹಾಗೆಯೇ ನೋಡುತ್ತಾ ಇದ್ದರು, ಆತನ ಮೇಲೆ ಅವಳಿಗೆ ಅನು ಕಂಪವಿತ್ತು. ಮತ್ತೆ ಕೆಲಸ ಸಿಕ್ಕಿದ್ದರಿಂದ ಆಗ ತಾನೇ ತಿರುಪತಿಗೆ ಹೋಗಿ ಬಂದಂ-

ತಿತ್ತು. ಅವಳೆಡೆಗೆ ಕರುಣೆಯಿಂದ ನೋಡುತ್ತಿದ್ದರು. ಅವಳಿಗೆ ತನ್ನ ಮೇಲೆ ಅನುಕಂಪ ಪಡಬೇಕೋ ಆತನ ಮೇಲೆ ಅನುಕಂಪ ತೋರಿಸಬೇಕೋ ತಿಳಿಯಲಿಲ್ಲ.

ಆರ್ಡರ್ ತೆಗೆದುಕೊಂಡಳು.

ನೆಟ್ಟಗೆ ನಿಂತು ಸೆಲ್ಯೂಟ್ ಮಾಡಿದಳು.

ಅಲ್ಲಿಂದ ನಿಶ್ಶಬ್ದವಾಗಿ ಹೊರಬಂದಳು.

ವಿಶಾಲವಾದ ವರಾಂಡ.

ಎತ್ತರವಾದ ಮೆಟ್ಟಿಲುಗಳು.

ಮುರಿದುಹೋದ ಗಿಡದ ರೆಂಬೆ. ಆಧಾರವಿಲ್ಲದೆ ಮುರಿದು ಬಿದ್ದಿದ್ದ ಕುರ್ಚಿ. ಕೆಲಸಕ್ಕೆ ಬಾರದ ಹಳೆಯ ಸಾಮಾನುಗಳ ಸ್ಟೋರ್ ರೂಮ್... ಈ ದೇಶದ ಯಂತ್ರಾಂಗದಂತೆ.

ಅವಳು ಅದೇ ಮೂಡ್‌ನಲ್ಲಿ ಮನೆಗೆ ಬಂದಳು.

ಪ್ರತಾಪರಾವ್ ಮನೆಯಲ್ಲಿರಲಿಲ್ಲ. ಹಿಂದೆ ಇದ್ದ ಸಣ್ಣ ಮನೆಗೆ ಹೋದಳು. ಆ ಮನೆ ನಿಶ್ಶಬ್ದವಾಗಿತ್ತು. ತಂದೆ ಅತ್ತ ತಿರುಗಿ ಕುಳಿತಿದ್ದಾರೆ.

ಅವಳಲ್ಲಿ ಅದುವರೆವಿಗೂ ಅಡಗಿ ಕುಳಿತಿದ್ದ ಸಿಟ್ಟು, ಉದ್ವೇಗ, ಆಕ್ರೋಶ ಎಲ್ಲಾ ಒಮ್ಮೆಗೇ ಹೊರಬಿತ್ತು.

"ಅಪ್ಪಾ..." ಕೋಪದಿಂದ ಕಿರುಚಿದಳು. ಸ್ವರ ನಡುಗುತ್ತಿತ್ತು.

"..ದೇಶ ನನಗೇನು ಕೊಟ್ಟಿತು ಎಂದಲ್ಲ; ದೇಶಕ್ಕೆ ನಾನೇನು ಕೊಟ್ಟಿದ್ದೀನಿ–ಎಂದು ಆಲೋಚಿಸಬೇಕೆಂದಿದ್ದರು ಚರಿತ್ರಕಾರರು. ಈ ದೇಶದ ಬಗ್ಗೆ ನಿನಗೇನಾದರೂ ಗೊತ್ತಾ ಅಪ್ಪಾ? ಇಲ್ಲಿ ಪ್ರತಿ ನದಿಯೂ ಲಂಚ ಭ್ರಷ್ಟತನದಿಂದ ಕಲ್ಮಷಗೊಂಡು ನೀರೆಲ್ಲಾ ಕಪ್ಪಾಗಿದೆ. ಇಲ್ಲಿ ಪ್ರತಿ ಹಸಿರು ಗಿಡವೂ ರೆಡ್ ಟೇಪಿಸಂನಿಂದ ಕೆಂಪಗೆ ಕೆಂಡವಾಗಿದೆ. ಇದಕ್ಕೆ ಅತೀತವಾಗಿ ಕೆಲಸ ಮಾಡೋಣವೆಂದರೆ ಈ ದೇಶ ಕೊಟ್ಟ ಬಹುಮಾನ ಏನೆಂದು ಗೊತ್ತಾ ಅಪ್ಪಾ?... ಸಸ್ಪೆನ್ಷನ್ ಆರ್ಡರ್" ಅವಳು ಹತ್ತಿರ ಬಂದು ಹೇಳಿದಳು. "–ಮಾಡಿದ ಪ್ರತಿಯೊಂದು ಕೆಲಸಕ್ಕೂ ಲಾಭವಿರಲೇಬೇಕಾಗಿಲ್ಲ ಅಪ್ಪ. ಆದರೆ ಅದನ್ನು ಗುರುತಿಸಬೇಕೆಂಬುದು ಸ್ವಾರ್ಥದ ಮಾತಲ್ಲವಲ್ಲಾ ಹೇಳಪ್ಪಾ–" ಎಂದು ಅವರನ್ನು ಅಲುಗಿಸಲು ಹೋಗಿ ನಿಂತುಬಿಟ್ಟಳು. ಎದೆಯಿಂದ ಹರಿದು ಬಂದಿದ್ದ ರಕ್ತ ಬಟ್ಟೆಯನ್ನು ಕೆಂಪಗಾಗಿಸಿತ್ತು. ಅವರ ಕೈಯ್ಯಲ್ಲಿ ಮೆಡಲ್ ಹಾಗೆಯೇ ಇತ್ತು.

"ಅಪ್ಪಾ–ಅಪ್ಪಾ–" ಅವಳ ಕೂಗು ಗಂಟಲಲ್ಲೇ ಸಿಕ್ಕಿಹಾಕಿಕೊಳ್ಳುತ್ತಿತ್ತು. ಮೊಣಕಾಲಿನ ಮೇಲೆ ಬಗ್ಗಿ–ತಂದೆಯ ಕಾಲಿನ ಬಳಿ ಕುಳಿತಳು.

'ಸೈನಿಕನೊಬ್ಬ ಸತ್ತಕೂಡಲೇ ಯುದ್ಧ ನಿಂತು ಬಿಡುವುದಿಲ್ಲ'ವೆಂಬಂತೆ

ಆ ಮೆಡಲ್ ತೂಗಾಡುತ್ತಿತ್ತು.

ಅವಳು ಬಿಕ್ಕಿ ಬಿಕ್ಕಿ ಅತ್ತಳು...ಇದು ಮೂರನೆ ಪೆಟ್ಟು. ಸ್ವಾಮಿ ಅಂದು ಅವಮಾನ ಮಾಡಿದಾಗ ಕೆಲಸದಿಂದ ಸಮಾಧಾನ ಮಾಡಿಕೊಳ್ಳೋಣವೆಂದು ಕೊಂಡಿದ್ದಳು. ಕೆಲಸ ಕಳೆದುಕೊಂಡಾಗ ತಂದೆಯ ಬಳಿ ಬಂದು ಎಲ್ಲಾ ತಿಳಿಸಿ ಸಮಾಧಾನಪಡಿಸಿಕೊಳ್ಳೋಣವೆಂದುಕೊಂಡಿದ್ದಳು. ಅವಳಿಗೆ ಆತ ಕೇವಲ ತಂದೆ ಮಾತ್ರ ಆಗಿರಲಿಲ್ಲ, ಗೈಡ್ ಕೂಡಾ...

...ಅವಳು ಸುಮಾರು ಹತ್ತು ನಿಮಿಷಗಳ ಕಾಲ ಹಾಗೆಯೇ ಇದ್ದು ಬಿಟ್ಟಳು. ನಿಧಾನವಾಗಿ ಚೇತರಿಸಿಕೊಂಡು ಸುತ್ತಲೂ ನೋಡಿದಳು.

ಪಕ್ಕದ ಕೋಣೆಯಲ್ಲಿ ರಕ್ತದ ನಡುವೆ A-5 ಬಿದ್ದಿದ್ದ.

* * * *

ಸುನಾದಮಾಲ ವಿಹಾರಿಯೆಡೆಗೆ ಭಯದಿಂದ ನೋಡಿದಳು. ಅವನ ಮುಖ ಸಂಪೂರ್ಣವಾಗಿ ಕಪ್ಪುಗಟ್ಟಿತ್ತು. ಕೋಪ, ವಿಷಾದ ಎಲ್ಲಾ ಮಿಶ್ರ ವಾಗಿತ್ತು.

ಅರ್ಧ ಗಂಟೆಯ ಹಿಂದೆ ನಡೆದ ತಾನು ಕಂಡ ಘಟನೆ ಅವಳ ಕಣ್ಮುಂದೆ ಇನ್ನೂ ಜೀವಂತವಾಗಿತ್ತು.

ಮೃತ್ಯುವನ್ನು ಅಷ್ಟು ಹತ್ತಿರದಿಂದ ನೋಡುತ್ತೇನೆಂದು ಅವಳು ಊಹಿಸಿರಲಿಲ್ಲ. ಪಕ್ಕದಲ್ಲಿದ್ದ ವ್ಯಕ್ತಿ ನೋಡುತ್ತಿದ್ದಂತೆಯೇ ರಕ್ತದ ಮಡುವಿನಲ್ಲಿ ಬಿದ್ದಿದ್ದ. "ರನ್ ಮಾಲಾ...ಕ್ವಿಕ್" ಎಂದು ಕಿರುಚಿದ್ದರು. ಪ್ರತಾಪರಾವ್. ಮತ್ತೊಂದು ಸಲ ಚೂರಿ ಆತನ ದೇಹದೊಳಗೆ ಇಳಿಯಿತು. ಅವಳು ಹೊರ ಗೋಡಿಬಂದಿದ್ದಳು. ಆಗ ತಾನೇ ಎಚ್ಚರಗೊಳ್ಳುತ್ತಿದ್ದ A-5ಯನ್ನು ರಾಮಲಾಲ್ ಕೊಂದದ್ದು ಅವಳಿಗೆ ಗೊತ್ತು. ಬಿಲ್ಲಿನಿಂದ ಹೊರಟ ಬಾಣದಂತೆ ಅವಳು ರಸ್ತೆಗೆ ಬಂದಿದ್ದಳು. ಮನೆಗೆ ಹೇಗೆ ಸೇರಿಕೊಂಡಿದ್ದಳೆಂದು ಅವಳಿಗೇ ತಿಳಿಯಲಿಲ್ಲ. ಎಚ್ಚರತಪ್ಪಿತ್ತು. ಕಣ್ಣು ಬಿಡುವ ವೇಳೆಗೆ ವಿಹಾರಿ ಇದ್ದ.

"ನಂಗೇನೂ ಗೊತ್ತಿಲ್ಲ. ನಂಗೇನೂ ಗೊತ್ತಿಲ್ಲ" ಭಯದಿಂದ ಒದರಿದಳು. "ನಾನು ಎಚ್ಚರಿಕೆಯಿಂದಲೇ ಹೋದೆ. ಅವರು ತಮ್ಮ ಮೆಡಲ್ ತೋರಿಸು ತ್ತಿದ್ದಂತೆಯೇ ಹಿಂದಿನಿಂದ ಯಾರೋ ಬಂದು-"

"ನಾನ್ಸೆನ್ಸ್-ನಿನಗೂ ನನಗೂ ಬಿಟ್ಟು ಬೇರೆ ಯಾರಿಗೂ ಆ ಸ್ಥಳ ಗೊತ್ತಿರ ಲಿಲ್ಲ" ಎಂದು ನೆಲಕ್ಕೆ ಬಲವಾಗಿ ಕಾಲನ್ನು ಜಾಡಿಸಿದ. ಕೋಪ, ನಿಸ್ಸಹಾಯಕತೆ,

ತನ್ನ ಹತ್ತಿರದ ವ್ಯಕ್ತಿಯ ಸಾವು...ಅದರಲ್ಲಿ ತುಂಬಿತ್ತು. ಅವನು ಅವಳ ಕೈಯ್ಯನ್ನು ಹಿಡಿದಾಗ ಕಟ್ಟಿಕೊಂಡಿದ್ದ ತಾಯಿತ ನೆಲಕ್ಕೆ ಬಿತ್ತು. ಬಿದ್ದ ಕೂಡಲೆ ಅದರ ಗಂಟು ಬಿಚ್ಚಿಕೊಂಡು ಒಳಗಿನದು ಹೊರಗೆ ಕಾಣುತ್ತಿತ್ತು. ಸ್ವಾಮಿ ಬಲವಾದ ಕೋಟೆಯೊಳಗೆ ಪ್ರವೇಶಿಸಲು ಮತ್ತೊಂದು ದ್ವಾರ ತೆರೆದುಕೊಂಡಂತೆ ಒಳಗಿನಿಂದ ಮೈಕ್ರೊಫೋನ್ ಹೊರಬಿತ್ತು.

ಒಮ್ಮೆಗೇ ಆ ಕೋಣೆಯಲ್ಲಿ ನಿಶ್ಶಬ್ದ ಆವರಿಸಿತು. ಮೊದಲು ಅವನೇ ಚೇತರಿಸಿಕೊಂಡ. ಬಗ್ಗಿ ಆ ತಾಯಿತವನ್ನು ಕೈಯ್ಯಲ್ಲಿ ತೆಗೆದುಕೊಂಡ. ಅವನ ಹೃದಯ ಜೋರಾಗಿ ಬಡಿದುಕೊಳ್ಳಲಾರಂಭಿಸಿತು. ಆ ತಾಯಿತ ಒಂದು ಮೆಗಾ ಟನ್ ಬಾಂಬಿನಂತೆ ಕಂಡಿತು. ಇಷ್ಟುಕಾಲ ತಮ್ಮ ರಹಸ್ಯಗಳು ಶತ್ರುಗಳಿಗೆ ಹೇಗೆ ತಿಳಿಯುತ್ತಿತ್ತೆಂದು ಈಗ ಅರ್ಥವಾಗಿತ್ತು.

"ಏನದು?" ಸುನಾದಮಾಲ ಕೇಳಿದಳು.

ಅವನು ಅದನ್ನು ಕೈಯಲ್ಲಿ ಮುಚ್ಚಿಕೊಂಡು "ಮೈಕ್ರೋಫೋನ್"–ಅಂದ.

"ಅಂದರೆ?" ಅರ್ಥವಾಗದವಳಂತೆ ಕೇಳಿದಳು.

"ಮೈಕ್ರೋಫೋನ್ ಅಂದರೆ ಗೊತ್ತಿಲ್ಲವಾ?"

"ನನಗೆ ಫೋನ್ ಹೇಗೆ ಕೆಲಸ ಮಾಡುತ್ತದೆಂದೇ ಗೊತ್ತಿಲ್ಲ"

ವಿಹಾರಿ ಅವಳೆಡೆಗೆ ಕಣ್ರೆಪ್ಪೆ ಬಡಿಯದೆ ನೋಡಿದ. ಅವಳು ನಿಜ ಹೇಳುತ್ತಿದ್ದಾಳೋ, ಇನ್ನೂ ಸುಳ್ಳಾಡುತ್ತಿದ್ದಾಳೋ ಅರ್ಥವಾಗಲಿಲ್ಲ.

ಕೂಡಲೇ ಅವನು ನಿಟ್ಟುಸಿರುಬಿಟ್ಟ. ಸ್ವಾಮಿಯ ಒಂದು ಮುಖ್ಯವಾದ ರಹಸ್ಯ ಈಗ ಹೊರಬಿತ್ತು ಎಂಬ ಸಂತೋಷ ಅದು! ನಕ್ಕು, "ಫೋನ್ ಹೇಗೆ ಕೆಲಸ ಮಾಡುತ್ತದೆಂದೇ ತಿಳಿಯದೆ ಇಷ್ಟು ದಿನ ನನಗೆ ಫೋನ್ ಮಾಡಿದೆಯಾ?" ವ್ಯಂಗ್ಯವಾಗಿ ಕೇಳಿದ.

ಸುನಾದಮಾಲಳ ಮುಖ ಕೆಂಪಗಾಯಿತು, "ಪ್ರತಿ ಸಲವೂ ನೀವು ತಪ್ಪನ್ನು ನನ್ನ ಮೇಲೇ ಹೊರಿಸುತ್ತೀರಿ. ನೀವು ಕೊಟ್ಟಿದ್ದ ತಾಯಿತದಿಂದಲೇ ಇಷ್ಟೆಲ್ಲಾ ಅನಾಹುತವಾದದ್ದು. ಹಾಗೆಯೇ ಈ ಫೋನ್ ವಿಷಯ ಕೂಡಾ... ಮೊದಲು ಬೇಕಾದರೆ ಸುಳ್ಳು ಹೇಳುತ್ತೇನೆಂದುಕೊಳ್ಳಬಹುದು. ಈಗ ಕೂಡಾ ಅದರ ಅಗತ್ಯವೇನಿದೆ? ನಿಮ್ಮ ಭಾರದ ವಿಷಯ, ಆ ಬಿಳಿಸೀರೆಗಳ ವಿಷಯ ನನಗೆ ಗೊತ್ತಿರಲಿಲ್ಲ" ಎಂದು ಸಿಟ್ಟಿನಿಂದ ಹೇಳಿದಳು.

"ನಿನ್ನ ಬಲಗೈ ಹೆಬ್ಬೆಟ್ಟನ್ನು ತೋರಿಸು" ಅಂದ.

ಅವಳು ಆಶ್ಚರ್ಯದಿಂದ "ಏಕೆ?" ಎಂದು ಕೇಳಿದಳು.

"ಮೊದಲು ತೋರಿಸು ಹೇಳುತ್ತೇನೆ"

ಅವಳು ಹೆಬ್ಬೆರಳನ್ನು ಎತ್ತಿ ತೋರಿಸಿದಳು.

"ಮೈ ಗಾಡ್! ಇಲ್ಲವಲ್ಲಾ" ಎಂದ.

"ಏನಿಲ್ಲಾ ರೀ?"

"ಆಗ ಫೋನ್ ಮಾಡುತ್ತಿದ್ದಾಗ, ಬೆರಳಿನ ಮೇಲೆ ಮಚ್ಚೆ ಇದೆಯೆಂದು ಹೇಳಿದ್ದಿ. ಮೇಲಾಗಿ ಹಾಗೆ ಬಲ ಹೆಬ್ಬೆಟ್ಟಿನ ಮೇಲೆ ಮಚ್ಚೆಯಿದ್ದರೆ ಪ್ರೀತಿಸಿದವರೇ ಬಾಳ ಸಂಗಾತಿಯಾಗುತ್ತಾರೆಂದು ಹೇಳಿದ್ದಿ."

"ಎಡ ಹೆಬ್ಬೆರಳು, ಕಾಲಿನ ಬೆರಳುಗಳನ್ನೂ ತೋರಿಸು ಎಂದು ಕೇಳುತ್ತೀರಾ?" ಮುಗ್ಧಳಾಗಿ ಕೇಳಿದಳು.

ಅವನು ಕೋಪವನ್ನು ನುಂಗಿಕೊಳ್ಳುತ್ತಾ, "ಬೇಕಾಗಿಲ್ಲ" ಎಂದ. ಅಂದ ನಾಗಲೀ ಅವನ ಮನಸ್ಸೆಲ್ಲಾ ಅಲ್ಲೋಲ ಕಲ್ಲೋಲವಾಗಿತ್ತು.

* * * *

"ಇಲ್ಲಾ ವಿಹಾರೀ...ಅವರು ನನಗೆ ತಂದೆ ಮಾತ್ರ ಅಲ್ಲ. ಫ್ರೆಂಡ್, ಫಿಲಾಸಫರ್, ಗೈಡ್ ಎಲ್ಲಾ. ಸ್ವಂತ ವಿಷಯದಲ್ಲಿ ಸೋತರೂ, ವೃತ್ತಿಧರ್ಮದಲ್ಲಿ ಪೆಟ್ಟು ತಿಂದರೂ ಅವರೇ ನನಗೆ ಧೈರ್ಯ ನೀಡುತ್ತಿದ್ದವರು. ಅವರಿಲ್ಲದ ನನ್ನ ಬದುಕು ಹೇಗೋ ಏನೋ–" ವಿಷಾದದಿಂದ ಹೇಳಿದಳು.

ಅವಳಷ್ಟು ಭಯದಿಂದ ಇದ್ದುದನ್ನು ಅವನೆಂದೂ ನೋಡಿರಲಿಲ್ಲ. ಸಮಾಧಾನಪಡಿಸುವಂತೆ ಹೇಳಿದ, "ನಿನ್ನ ತಂದೆ ನಿನಗೆ ಗೈಡ್ ಆದರೆ ನೀನು ನನಗೆ ಇನ್ಸ್‌ಪಿರೇಷನ್ ಪ್ರವಲ್ಲಿಕಾ! ಸಾಮಾನ್ಯ ಒಬ್ಬ ನಾಟಕದ ನಟ ಇವತ್ತು ಇಷ್ಟೊಂದು ಭಯಂಕರ ಶಕ್ತಿಗಳ ಎದುರು ಹೋರಾಟ ನಡೆಸುತ್ತಿರುವುದಕ್ಕೆ ಕಾರಣ ನೀನೇ. ಒಬ್ಬೊಬ್ಬರ ಬದುಕಿನ ರೀತಿ ಬದಲಾಗಲು ಒಬ್ಬೊಬ್ಬ ವ್ಯಕ್ತಿ ಕಾರಣರಾಗಿರುತ್ತಾರೆ. ಅದೇ ರೀತಿ ನನ್ನನ್ನು ಬದಲಾಯಿಸಿದ್ದು ನೀನು. ನಾವು ನಮ್ಮ ಗುರಿಯನ್ನು ಸಾಧಿಸುತ್ತೇವೆಂಬ ನಂಬಿಕೆ ಇದೆ. ಆಗಲೇ ಮೊದಲ ವಿಜಯವನ್ನು ಸಾಧಿಸಿದ್ದೇವೆ ಕೂಡಾ. ಈ ಸಮಯದಲ್ಲಿ ನೀನು ಹೀಗೆ ನಿರಾಸೆ ಹೊಂದುವುದು ಸರಿಯಲ್ಲ ಪ್ಲೀಜ್...ಚಿಯರ್ ಅಪ್." ಅವಳು ವಿಷಣ್ಣಳಾಗಿ ನಕ್ಕಳು.

"ಹೌದು. ಈ ಸಮಯದಲ್ಲಿ ಧೈರ್ಯಬೇಕು. ಅದಕ್ಕಿಂತಲೂ ಮುಖ್ಯವಾಗಿ...ನಿನ್ನ ಸಹಾಯ ನನಗೆ ತುಂಬಾ ಅವಶ್ಯಕ."

"ಒಬ್ಬ ಸಿ. ಬಿ. ಐ. ಆಫೀಸರಾಗಿ ನಾನು ನಿನಗೆ ಸಹಾಯ ಮಾಡಲಾರೆ"

"ಯಾಕೆ?"

"ಕೆಲಸದಿಂದ ನಾನು ಸಸ್ಪೆಂಡ್ ಆಗಿದ್ದೀನಿ ವಿಹಾರಿ." ಅವನು ನಿರ್ವಿಣ್ಣನಾದ.

ಅವಳು ನಡೆದದ್ದನ್ನೆಲ್ಲಾ ಹೇಳಿದಳು. "ಅನಂತಾನಂತಸ್ವಾಮಿ ತಾನೆಷ್ಟು ಶಕ್ತಿವಂತನೆಂದು ಮತ್ತೊಮ್ಮೆ ನಿರೂಪಿಸಿದ್ದಾನೆ. A-5ಯನ್ನು ನಾವು ಬಚ್ಚಿಟ್ಟಿದ್ದ ಜಾಗ ಗೊತ್ತಾದ ಕೂಡಲೇ ಅವನ ಮರಣದ ನಿರ್ಧಾರ ಆಗಿಹೋಯಿತು. ಅದು ನಡೆಯುವುದಕ್ಕೆ ಮುಂಚೆಯೇ ನನ್ನ ಸಸ್ಪೆನ್ಷನ್ ಆರ್ಡರ್ ಸಿದ್ಧವಾಗಿತ್ತು. "ಇಂತಹ ವ್ಯಕ್ತಿಯನ್ನು ಇಂತಹ ಕಡೆ ಬಚ್ಚಿಟ್ಟಿದ್ದಿ. ಅವನಿಗೆ ಸರಿಯಾದ ರಕ್ಷಣೆ ಸಿಗಲಿಲ್ಲ. ಹಾಗಾಗಿ ಅವನ ಪ್ರಾಣ ಹೋಗಿದೆ. ರೂಲ್ಸ್‌ಗೆ ವಿರುದ್ಧವಾಗಿ ನೀನು ಈ ಕೆಲಸ ಮಾಡಿದ್ದಕ್ಕಾಗಿ ನಿನ್ನನ್ನು ಸಸ್ಪೆಂಡ್ ಮಾಡುತ್ತಿದ್ದೇನೆ." ಎಂದು ಸಸ್ಪೆಂಡ್ ಆರ್ಡರ್-A5 ಸಾಯುವ ಮುಂಚೆಯೇ ಟೈಪ್ ಮಾಡಿಸಿ. ನನಗೆ ಕೊಡಿಸಿ–ತನ್ನ ಸುಪೀರಿಯಾರಿಟಿಯನ್ನು ಮತ್ತೊಮ್ಮೆ ನಿರೂಪಿಸಿದ್ದಾನೆ."

ವಿಹಾರಿಯ ಮುಷ್ಟಿ ಮತ್ತೊಮ್ಮೆ ಬಿಗಿಗೊಂಡಿತು. ನಿಸ್ಸಹಾಯಕತೆಯಿಂದಲ್ಲ–ಕೋಪದಿಂದ; ಸಿಟ್ಟಿನಿಂದ.

ಪ್ರವಲ್ಲಿಕ ಹೇಳುತ್ತಿದ್ದಳು–"ಆ ದೃಶ್ಯವನ್ನು ನಾನು ನೋಡಲಾಗದಿದ್ದರೂ ಅದು ನನ್ನ ಕಣ್ಮುಂದೆಯೇ ನಿಂತಿದೆ-ಕಾಲಿಲ್ಲದ, ವ್ಹೀಲ್ ಛೇರಿನಲ್ಲಿ ನಿಸ್ಸಹಾಯಕನಾಗಿ ಕುಳಿತಿದ್ದ ನನ್ನ ತಂದೆಯನ್ನು ಆ ರಾಮಲಾಲ್ ಕೊಂದ ರೀತಿ! ಅದೃಷ್ಟ ಚೆನ್ನಾಗಿದ್ದು ಸುನಾದಮಾಲ ತಪ್ಪಿಸಿಕೊಂಡಳು. ಪ್ರತ್ಯಕ್ಷ ಸಾಕ್ಷಿಗಳು ತಪ್ಪಿಸಿಕೊಂಡರೂ ತನಗೇನೂ ಮಾಡಲು ಸಾಧ್ಯವಿಲ್ಲವೆಂದು ರಾಮಲಾಲ್ ಅವಳ ಹಿಂದೆ ಓಡಲಿಲ್ಲ. ನನ್ನ ತಂದೆಯನ್ನು ಕೂಡಾ ಅವನು ಪೂರ್ತಿ ಸಾಯಿಸಲಿಲ್ಲ. ಸಾವು ಅನಿವಾರ್ಯವೆಂದು, ತಪ್ಪುವುದಿಲ್ಲವೆಂದು ತಿಳಿಯುವ ಸ್ಥಿತಿಯವರೆಗೂ ಚುಚ್ಚಿ ಚುಚ್ಚಿ ಆನಂತರ ಆ ಜೀವಚ್ಛವವನ್ನು ಕುರ್ಚಿಯಲ್ಲಿ ಹಾಗೆಯೇ ಬಿಟ್ಟು. ತನ್ನ ಕೆಲಸವನ್ನು ಪೂರ್ತಿ ಮಾಡಿಕೊಂಡು ಹೊರಟುಹೋಗಿದ್ದಾನೆ. ಯಾವ ನ್ಯಾಯವೂ ಯಾವ ಸಾಕ್ಷ್ಯವೂ ತನ್ನನ್ನು ಏನೂ ಮಾಡಲಾರದೆಂಬ ಜಂಭದಿಂದ ಮೆರೆದಿದ್ದಾನೆ ಅವನು! ಅಂತಹ ದುಷ್ಟನನ್ನು ಎಷ್ಟು ಸಾವಿರ ನೇಣುಗಂಬಗಳ ಮೇಲೆ ಎಷ್ಟು ಸಾವಿರ ಸಲ ನೇಣುಹಾಕಬೇಕು?" ಆವೇಶದಿಂದ ಅವಳು ಹೇಳುತ್ತಿದ್ದ ಮಾತುಗಳು ಪೂರ್ತಿಯಾಗಿರಲಿಲ್ಲ–ಕಾರು ಸ್ಟಾರ್ಟಾದ ಸದ್ದು ಕೇಳಿಸಿತು.

ಯಾವಾಗ ಹೊರಟನೋ ಗೊತ್ತಿಲ್ಲವಾಗಲೀ ವಿಹಾರಿ ಕಾರನ್ನು ಸ್ಟಾರ್ಟ್ ಮಾಡಿ ಅಲ್ಲಿಂದ ವೇಗವಾಗಿ ಹೊರಟುಹೋದ.

* * * *

ಅವನ ರಕ್ತ ಕುದಿಯುತ್ತಿತ್ತು.

ಸ್ಟೇರಿಂಗನ್ನು ಹಿಡಿದಿದ್ದ ಕೈ ನಡುಗುತ್ತಿತ್ತು. ಒಂದು ರೀತಿಯ ಹುಚ್ಚುತನದಿಂದ ಕಾರನ್ನು ಅಮಿತ ವೇಗದಿಂದ ಓಡಿಸಿದ. ಎತ್ತ ಹೋಗುತ್ತಿದ್ದಾನೆಂದು ಅವನಿಗೇ ತಿಳಿಯುತ್ತಿಲ್ಲ. ಅಪ್ರಯತ್ನವಾಗಿ ಅವನ ಕೈಗಳು ಸ್ಟೇರಿಂಗನ್ನು ಆಶ್ರಮದ ಕಡೆಗೆ ತಿರುಗಿಸಿದವು.

ಸ್ವಾಮಿ ಇಲ್ಲದಿದ್ದುದರಿಂದ ಜನಸಂದಣಿ ಇರಲಿಲ್ಲ. ರಸ್ತೆಯ ಒಂದು ಪಕ್ಕದಲ್ಲಿ ವ್ಯಾನು ಕಂಡಿತು. ಆಶ್ರಮದ ದ್ವಾರದಿಂದ ಹೊರಬಂದು ವ್ಯಾನಿನ ಕಡೆಗೆ ನಡೆಯುತ್ತಾ ಬರುತ್ತಿದ್ದ ವ್ಯಕ್ತಿಯೊಬ್ಬ ಅಸ್ಪಷ್ಟವಾಗಿ ಕಂಡ. ದೂರದಿಂದಲೇ ಅವನ ಶರೀರದ ಹೋಲಿಕೆ ತಿಳಿಯುತ್ತಿತ್ತು.

ಆ ವ್ಯಕ್ತಿ ರಾಮಲಾಲ್.

ವಿಹಾರಿಯ ಕೈಗಳು ಸ್ಟೇರಿಂಗ್ ಸುತ್ತಲೂ ಬಿಗಿಗೊಂಡವು. ಶರೀರದಲ್ಲಿ ಒಮ್ಮೆಗೇ ರಕ್ತ ಸಂಚಾರ ಹೆಚ್ಚಾಯಿತು. ಮತ್ತೇನನ್ನೂ ಯೋಚಿಸದೆ ಕಾರಿನ ವೇಗವನ್ನು ಹೆಚ್ಚಿಸಿ ಸರಕ್ಕನೆ ಎಡಗಡೆಗೆ ಕಟ್‌ಮಾಡಿದ.

*    *    *    *

ರಾಮಲಾಲ್ ತುಂಬಾ ಸಂತೋಷದಿಂದಿದ್ದ. ಯಾರನ್ನಾದರೂ ಕೊಂದಾಗ ದಾರುಣವಾಗಿ ಹಿಂಸಿಸಿದಾಗ ಅವನಿಗೆ ಈ ರೀತಿಯ ಸಂತೋಷ ಉಂಟಾಗುತ್ತದೆ. ಪ್ರತಾಪರಾವ್ A-5ಗಳ ಸಾವು ಅವನಿಗೆ ಇಂತಹ ಸಂತೃಪ್ತಿಯನ್ನು ನೀಡಿದ್ದವು. ಸ್ವಾಮಿಯಿಂದ ದೊಡ್ಡಮೊತ್ತದ ಬಹುಮಾನವೂ ಸಿಕ್ಕಿತ್ತು. ಆನಂದದಿಂದ 24 ಗಂಟೆಗಳ ಕಾಲ ಒಂದೇಸಮನೆ ಕುಡಿದಿದ್ದ. ಆ ಮತ್ತು ಇನ್ನೂ ಇಳಿದಿರಲಿಲ್ಲ.

ಸಣ್ಣದಾಗಿ ಹಾಡಿಕೊಳ್ಳುತ್ತಾ ರಸ್ತೆಯ ಉದ್ದಕ್ಕೂ ಬಂದ.

ಅದೇ ಸಮಯಕ್ಕೆ ಸರಿಯಾಗಿ ಹಿಂದಿನಿಂದ ಬಂತು ಕಾರು. ಅವನ ಮನಸ್ಸು ಅಪಾಯವನ್ನು ಸೂಚಿಸಿತು. ಅವನೂ ಸಾಮಾನ್ಯನೇನಲ್ಲ. ಪ್ರಾಣದ ಹತ್ತಿರಕ್ಕೆ ಅನೇಕ ಸಲ ಹೋಗಿ ಬಂದವನು.

ಬರುತ್ತಿದ್ದ ಕಾರನ್ನು ಕಂಡು ಒಂದೇ ನೆಗೆತಕ್ಕೆ ಪಕ್ಕಕ್ಕೆ ಹಾರಿದ ರಾಮ-ಲಾಲ್. ಆದರೆ ಅದನ್ನು ಮೊದಲೇ ಊಹಿಸಿದಂತೆ, ಕಾರು ನಡೆಸುತ್ತಿದ್ದ ವ್ಯಕ್ತಿ ಕಾರನ್ನು ಮತ್ತಷ್ಟು ಎಡಗಡೆಗೆ ತಿರುಗಿಸಿದ. ಪಕ್ಕಕ್ಕೆ ನೆಗೆದಿದ್ದ ರಾಮಲಾಲ್ ಯಾರದೋ ಮನೆಯ ಕಾಂಪೌಂಡಿಗೆ ಡಿಕ್ಕಿಹೊಡೆದು ಅದೇ ವೇಗದಲ್ಲಿ ಬಿದ್ದ. ಅಷ್ಟರಲ್ಲಿ ಫುಟ್‌ಪಾತನ್ನು ಹತ್ತಿತು ಕಾರು. ಜೇಬಿನಿಂದ ಪಿಸ್ತೂಲನ್ನು ತೆಗೆಯುವ

ಪ್ರಯತ್ನದಲ್ಲಿ ರಾಮಲಾಲ್ ಅಂಗಾತ ಮಲಗಿದ. ಹಾಗೆ ಮಾಡುವಾಗ ಅವನ ಶರೀರದ ಅರ್ಧಭಾಗ ರಸ್ತೆಯ ಮೇಲೆ, ಇನ್ನರ್ಧ ಭಾಗ ಫುಟ್‌ಪಾತ್ ಮೇಲೆ ಇತ್ತು.

ಮುಖವನ್ನು ಪಕ್ಕಕ್ಕೆ ತಿರುಗಿಸಲು ಕೂಡಾ ವೇಳೆ ಇಲ್ಲದಷ್ಟು ವೇಗವಾಗಿ ಬಂದಿತ್ತು ಕಾರು. ಆಗ ಉಂಟಾಯಿತು ಅವನಿಗೆ ಮೊದಲನೆ ಸಲ ಭಯ. ಸ್ಟೀರಿಂಗ್ ಬಳಿ ವಿಹಾರಿ ಕಂಡ.

ವಿ...ಹಾ...ರಿ!

ಅವನು ಮೇಲೇಳಲು ಪ್ರಯತ್ನಿಸಿದ. ಕಾಲುಗಳು ಸಹಕರಿಸಲಿಲ್ಲ. ದೂರದಲ್ಲಿ ಹೋಗುತ್ತಿದ್ದ ಕಾರು ಕಂಡಿತು, ಜೇಬಿನಿಂದ ಪಿಸ್ತೂಲನ್ನು ತೆಗೆದು ಟ್ರಿಗ್ಗರನ್ನು ಒತ್ತಲು ಪ್ರಯತ್ನಿಸಿದ. ಎಚ್ಚರ ತಪ್ಪುತ್ತಿರುವ ಅನುಭವ. ಜೋಂಪು ಹಿಡಿದಿದ್ದ ಕಾಲುಗಳು ನೋಯಲು ಪ್ರಾರಂಭಿಸಿದವು. ಅದು ಪ್ರಾರಂಭ...

ಹಾಗೆಯೇ ಹಿಂದಕ್ಕೆ ಬಾಗಿದ.

* * * *

ಮತ್ತೆ ಅವನಿಗೆ ಎಚ್ಚರ ಬಂದಾಗ ಆಸ್ಪತ್ರೆಯಲ್ಲಿದ್ದ. ಮೇಲೇಳಲು ಪ್ರಯತ್ನಿಸಿ ಸಾಧ್ಯವಾಗದೆ ಅನುಮಾನಗೊಂಡು ಕಾಲಿನ ಕಡೆ ನೋಡಿಕೊಂಡ.

ಎರಡು ಕಾಲುಗಳನ್ನು ಟ್ರಾಕ್ಷನ್‌ನಲ್ಲಿರಿಸಲಾಗಿತ್ತು. ಮೇಲಿನ ಕಬ್ಬಿಣದ ರಾಡ್‌ಗಳಿಗೆ ಹಗ್ಗದಿಂದ ಕಾಲುಗಳನ್ನು ಬಿಗಿದಿದ್ದರು.

ಅಷ್ಟು ಭಯಂಕರ ವ್ಯಕ್ತಿ ನಿಸ್ಸಹಾಯಕನಾಗಿ ಬಿದ್ದಿದ್ದ.

ವರಾಂಡದಲ್ಲಿ ಡಾಕ್ಟರ್‌ಗಳು ಮಾತನಾಡಿಕೊಳ್ಳುತ್ತಿದ್ದುದು ಕೇಳಿಸುತ್ತಿತ್ತು.

"ಈತನ ಎರಡು ಕಾಲುಗಳ ಎಲುಬುಗಳು ಸರಿಹೊಂದಲು ಇನ್ನೆಷ್ಟು ದಿನ ಬೇಕಾಗುತ್ತೆ ಡಾಕ್ಟರ್?"

"ಕೇವಲ ಎಲುಬುಗಳು ಮುರಿದಿದ್ದರೆ ಪರವಾಗಿಲ್ಲ. ನರಗಳು ಕೂಡಾ ಕಡಿದುಹೋಗಿವೆ. ಅಂಪ್ಯೂಟೇಟ್ ಮಾಡಬೇಕು!"

"ಮೈ ಗಾಡ್! ಅಂಪ್ಯೂಟೇಟ್?"

ಇಬ್ಬರು ಡಾಕ್ಟರ್‌ಗಳೂ ಮಾತನಾಡಿಕೊಳ್ಳುತ್ತಾ ವರಾಂಡದಿಂದ ಹೊರಟು ಹೋದರು, ರಾಮಲಾಲ್‌ಗೆ ಅರ್ಥವಾಗಲಿಲ್ಲ.

ಆಂಪ್ಯೂಟೆಟ್ ಅಂದರೆ...

ಅಂದರೆ?

...ಅವನು ಕೇಳಲು ಪ್ರಯತ್ನಿಸಿದ, ಆದರೆ ಯಾರನ್ನು ಕೇಳುತ್ತಾನೆ? ಯಾರೂ ಇಲ್ಲ. ಅದು ಸರ್ಕಾರೀ ಆಸ್ಪತ್ರೆಯೋ, ಪ್ರೈವೇಟ್ ನರ್ಸಿಂಗ್ ಹೋಮೋ ಅವನಿಗೆ ತಿಳಿಯಲಿಲ್ಲ. ಮತ್ತೆ ಅರ್ಧಗಂಟೆ ಎದುರು ನೋಡಿದ. ಯಾರೂ ಬರಲಿಲ್ಲ. ಅದನ್ನು ಗಮನಿಸಿದರೆ ಸರ್ಕಾರೀ ಆಸ್ಪತ್ರೆಯೇ ಎನ್ನಿಸುತ್ತಿದೆ. ಆದರೆ ಆ ಕೋಣೆ ಬೆಲೆಬಾಳುವಂತೆ ಕಾಣುತ್ತಿದೆ. ಸರ್ಕಾರೀ ಆಸ್ಪತ್ರೆಗಳಲ್ಲಿ ಅಷ್ಟು ಬೆಲೆಬಾಳುವ ಕೋಣೆಗಳಿರುವುದು ಅಪರೂಪ.

ಅವನ ಅನುಮಾನ ಪರಿಹರಿಸಲು ಎಂಬಂತೆ ಸಿಸ್ಟರ್ ಒಳಗೆ ಬಂದಳು,

"ಸಿಸ್ಟರ್ ನಾನೆಲ್ಲಿದ್ದೀನಿ?" ಎಂದು ಕೇಳಿದ.

"ಅಮೇರಿಕನ್ ಆಸ್ಪತ್ರೆಯಲ್ಲಿ"

"ಓಹೋ! ಹಾಗಾ" ಎಂದುಕೊಂಡ. ಆದರೆ ಅಷ್ಟರಲ್ಲೇ ಸಾವಿರ ಅನುಮಾನಗಳು. ತನ್ನನ್ನು ಇಲ್ಲಿ ಯಾರು ಸೇರಿಸಿದ್ದಾರೆ? ತಾನಿಲ್ಲಿರುವುದು ತನ್ನವರಿಗೆ ತಿಳಿದಿದೆಯಾ? ತಿಳಿದಿದ್ದರೆ ವಿಹಾರಿಯನ್ನು ಇಷ್ಟುಹೊತ್ತಿಗೆ ಮೇಲಿನ ಲೋಕಕ್ಕೆ ಕಳುಹಿಸಿರುತ್ತಾರಾ? ಬಹುಶಃ ತಿಳಿದಿರಲಾರದು. ತಿಳಿದಿದ್ದರೆ ಆ ಮರುಕ್ಷಣವೇ ತಾನು ಈ ದೇಶದಲ್ಲೇ ಅತ್ಯಂತ ಪ್ರಸಿದ್ಧವಾದ ಆಸ್ಪತ್ರೆಯಲ್ಲಿರುತ್ತಿದ್ದ.

ಅವನು ಜೇಬನ್ನು ಸವರಿಕೊಂಡ. ಪಿಸ್ತೂಲ್ ಇಲ್ಲ. ಕಾಲುಗಳಿಗೆ ಬ್ಯಾಂಡೇಜ್ ಕಟ್ಟುವಾಗ ತೆಗೆದಿರಿಸಿರಬಹುದು.

ಅವನು ಕಣ್ಣು ಮುಚ್ಚಿಕೊಂಡ.

ವಿಹಾರಿಯ ನೆನಪಾಗಿ ಕಣ್ಣೆಲ್ಲಾ ಕೆಂಪಗಾಯಿತು. ಅವನನ್ನು ಹೇಗೆ ಕೊಲ್ಲಬೇಕೆಂದು ವಿವಿಧ ರೀತಿಯ ಹಿಂಸೆಗಳ ಬಗ್ಗೆ ಯೋಚಿಸಿದ.

ಅಷ್ಟರಲ್ಲಿ ಕೋಣೆಯಲ್ಲಿ ಸದ್ದಾದಂತಾಗಿ ಕಣ್ಣುಬಿಟ್ಟ. ನರ್ಸ್ ಏನನ್ನೋ ಸರಿಪಡಿಸುತ್ತಿದ್ದಳು.

"ಅಂಪ್ಯೂಟೆಟ್ ಅಂದರೇನು?" ಎಂದು ಕೇಳಿದ,

ಅಂತಹ ನಿಶ್ಶಬ್ದದಲ್ಲಿಯೂ ಅವನ ಭಯಂಕರ ಸ್ವರ ಹಠಾತ್ತನೆ ಕೇಳಿದ್ದರಿಂದ ನರ್ಸ್ ಬೆಚ್ಚಿಬಿದ್ದಳು. ಅವನು ಮತ್ತೆ ಕೇಳಿದ.

"ಡಾಕ್ಟರನ್ನು ಕರೆಯುತ್ತೇನೆ" ಎಂದು ಹೊರಟುಹೋದಳು.

"ನಿಲ್ಲು" ಕರ್ಕಶವಾಗಿ ಕೇಳಿದ. "ಆಂಪ್ಯೂಟೆಟ್ ಅಂದರೇನು?"

ನರ್ಸ್ ಭಯಪಡುತ್ತಾ ಹೋಗುತ್ತಿದ್ದವಳು ಹಾಗೆಯೇ ನಿಲ್ಲುತ್ತಿದ್ದಂತೆಯೇ ಬಾಗಿಲ ಬಳಿ ಏನೋ ಶಬ್ದವಾಯಿತು. ಹತ್ತು ಜನ ಹುಡುಗರು ಅವರ ಟೀಚ

ರೊಡನೆ ಒಳಗೆ ಬಂದರು. "ಇಂದು ಅಂತರ್ರಾಷ್ಟ್ರೀಯ ರೋಗಿಗಳ ದಿನಾಚರಣೆ. ಪೇಷಂಟ್ಸ್‌ಗಳನ್ನು ನೋಡಲು ಬಂದಿದ್ದೇವೆ. ಮಕ್ಕಳಿರಾ ಅಂಕಲ್‌ಗೆ ವಿಷಸ್ ಹೇಳಿ" ಎನ್ನುತ್ತಿದ್ದಳು ಟೀಚರ್ ಕನ್ನಡಕವನ್ನು ಸರಿಪಡಿಸಿಕೊಳ್ಳುತ್ತಾ.

"ಬೆಸ್ಟಾಫ್ ಲಕ್ ಅಂಕಲ್" ಮುಕ್ತ ಕಂಠದಿಂದ ಹೇಳಿ ಹೂವನ್ನು ಚೆಲ್ಲಿದರು. "ಮೈಗಾಡ್! ಹಾಗೆ ಹೂವನ್ನು ಶವದ ಮೇಲೆ ಎರಚಿದಂತೆ ಎರಚಬಾರದು ಮಕ್ಕಳಿರಾ, ಕಾಲಿನ ಬಳಿ ಹೂವಿಡಬೇಕು. ಈಗ ಈ ಶವದ–ಕ್ಷಮಿಸಿ ಇವರ ಬಗ್ಗೆ ವಿವರಿಸುತ್ತೇನೆ. ಬಾಳೆಯ ಹಣ್ಣು ಕೊಳೆತುಹೋದರೆ ಏನು ಮಾಡುತ್ತೇವೆ?"

"ಬಿಸಾಕುತ್ತೇವೆ ಟೀಚರ್."

"ಗುಡ್... ಹಾಗೆಯೇ ಕಾಲಿಗೆ ರಕ್ತವನ್ನೊಯ್ಯುವ ನರಗಳು ತುಂಡಾದರೆ ಕಾಲುಗಳು ಕೊಳೆತು ಹೋಗುತ್ತವೆ. ಅದನ್ನು ಕೂಡಲೇ ತೆಗೆದುಬಿಡದಿದ್ದರೆ ವಿಷ ಶರೀರವೆಲ್ಲಾ ಹರಡಿಬಿಡುತ್ತದೆ. ಹಾಗಾಗುವುದಕ್ಕೆ ಮುಂಚಿತವಾಗಿಯೇ ಆ ಭಾಗವನ್ನು ಬೇರ್ಪಡಿಸಿ ಬಿಡುವುದಕ್ಕೆ "ಆಂಪ್ಯೂಟೇಟ್" ಎನ್ನುತ್ತಾರೆ. ಏನನ್ನುತ್ತಾರೆ?"

"ಆಂಪ್ಯೂಟೇಟ್ ಎನ್ನುತ್ತಾರೆ" ಮಕ್ಕಳು ಜೋರಾಗಿ ಹೇಳಿದವು.

ಆಕಾಶ ಕಳಚಿಬಿದ್ದಂತಾಯಿತು. ರಾಮಲಾಲ್ ಸಣ್ಣಗೆ ನಡುಗಿದ. ಕಣ್ಮುಂದೆ ಬೆಂಕಿಯ ಮಳೆ ಸುರಿಯುತ್ತಿರುವಂತೆ ಅನ್ನಿಸಿತು. ಅವನ ಕಣ್ಮುಂದೆ ಭವಿಷ್ಯತ್ತು ಭಯಂಕರವಾಗಿ ನಾಟ್ಯವಾಡತೊಡಗಿತು.

"ಬರೀ ಎಲುಬೇ ಮುರಿದಿದೆಯೋ ನರಗಳು ಕೂಡಾ ಕತ್ತರಿಸಿ ಹೋಗಿವೆಯೋ ಎಂದು ಅದ್ಹೇಗೆ ತಿಳಿಯುತ್ತದೆ ಮಿಸ್?" ಹುಡುಗನೊಬ್ಬ ಕೇಳಿದ.

"ನಮ್ಮ ಶರೀರಕ್ಕೆ ಪೆಟ್ಟು ಬಿದ್ದಿದರೆ 'ಹಾ' ಎನ್ನುತ್ತೇವಲ್ಲ...ಅಲ್ಲಿ ರಕ್ತ ಚೆನ್ನಾಗಿ ಹರಿಯುತ್ತಿರುತ್ತದೆ. ರಕ್ತವಿಲ್ಲದ ಕಡೆ ಪೆಟ್ಟುಬಿದ್ದರೂ ನೋವಾಗುವುದಿಲ್ಲ."

ರಾಮಲಾಲ್‌ನ ಕಾಲಿನ ಮೇಲೆ ವಿಷ್ಣು ಜೋರಾಗಿ ಹೊಡೆದ. ಕೊಠಡಿಯ ಗೋಡೆಗಳೆಲ್ಲ ಅದುರುವಂತೆ ಕಿರುಚಿದ ರಾಮಲಾಲ್.

"ಅದೇಕೆ ಟೀಚರ್ ಹಾಗೆ ಕಿರುಚಿದ?"

"ಇನ್ನು ಸ್ವಲ್ಪ ಕೆಳಗೆ ಹೊಡೆದುನೋಡು"

"ಬೇಡ–ಬೇಡ" ಎಂದು ಕಿರುಚಿದ ರಾಮಲಾಲ್. ನರ್ಸ್ ಅವರನ್ನೆಲ್ಲ ಹೊರಗೆ ಕರೆದೊಯ್ದಳು. ಕೊಠಡಿಯೆಲ್ಲ ಒಮ್ಮೆಗೇ ನಿಶ್ಶಬ್ದವಾಯಿತು.

ಆ ನಿಶ್ಯಬ್ದದಲ್ಲಿ ಒಂದು ಸಣ್ಣ ಸ್ವರವೊಂದು ಕೇಳಿಸಿತು.

"ಶಕ್ತಿಶಾಲಿಯಾದ ಸರ್ಪ ಕೂಡಾ ಇರುವೆಗಳ ದಾಳಿಗೆ ಸಾಯುತ್ತದೆಂಬ ಮಾತು ನಿನಗೆ ತಿಳಿಯದೇ ರಾಮಲಾಲ್?"

ರಾಮಲಾಲ್ ಬೆಚ್ಚಿಬಿದ್ದು ತಲೆತಿರುಗಿಸಿದ. ಅದುವರೆವಿಗೂ ತಲೆಯ ಬಳಿ ಕುಳಿತಿದ್ದ ಪ್ರವಲ್ಲಿಕ ಎದ್ದು ಅವನ ಕಾಲಿನ ಬಳಿ ಬಂದು ಕುಳಿತಳು. ಒಂದು ಕ್ಷಣ ತಡೆದು ನಿಧಾನವಾಗಿ ಹೇಳಲು ಪ್ರಾರಂಭಿಸಿದಳು:

"ನನ್ನ ಬಳಿಯಿಂದ ವಿಹಾರಿ ಹೊರಟ ರೀತಿಯನ್ನು ಕಂಡೇ ಅವನನ್ನು ತಡೆಯಲು ಪ್ರಯತ್ನಿಸಿದೆ. ಆದರೆ ಅವನು ಆಗಲೇ ನಿನ್ನ ಮೇಲೆ ಕಾರನ್ನು ಹತ್ತಿಸಿಬಿಟ್ಟಿದ್ದ. ಅದೃಷ್ಟವಶಾತ್ ಸಾಕ್ಷಿಗಳಾರೂ ಇಲ್ಲ. ಎಚ್ಚರ ತಪ್ಪಿದ ನಿನ್ನನ್ನು ಕರೆತಂದು ಆಸ್ಪತ್ರೆಗೆ ಸೇರಿಸಿದ್ದೇನೆ. ಆಗ ತಿಳಿಯಿತು ನಿನ್ನೆರಡೂ ಕಾಲುಗಳನ್ನು ಆಂಪ್ಯೂಟೈಟ್ ಮಾಡದೆ ಬೇರೆ ದಾರಿಯೇ ಇಲ್ಲವೆಂದು ಡಾಕ್ಟರ್ ಆ ವಿಷಯವನ್ನು ತಿಳಿಸುವುದಕ್ಕಿಂತ ಮಕ್ಕಳಿಂದಲೇ ನಿನಗೆ ಪ್ರಾಣದ ಬೆಲೆ ತಿಳಿಯಲೆಂದು ಹೀಗೆ ಏರ್ಪಾಡು ಮಾಡಿದ್ದೆ. ನನ್ನ ತಂದೆಯ ಕಾಲುಗಳನ್ನು ಕತ್ತರಿಸಿದ್ದೆ. ನನ್ನ ಅಣ್ಣ–ಅತ್ತಿಗೆಯರನ್ನು ಸಾಯಿಸಿದ್ದೆ. ನೀನೂ ನರಳಿ ನರಳಿ ಸಾಯಬೇಕು ರಾಮಲಾಲ್! ಒಂದು ಕಾಲದಲ್ಲಿ ನನಗೆ ಈ ನ್ಯಾಯ ವ್ಯವಸ್ಥೆಯ ಮೇಲೆ ಬಲವಾದ ನಂಬಿಕೆಯಿತ್ತು. ಕೆಲಸ ಕಳೆದುಕೊಂಡ ನಂತರ ಅದೂ ಹೋಯಿತು. ನನ್ನ ಸ್ನೇಹಿತ ವಿಹಾರಿ ಹೇಳಿದ ವಾದವೇ ಸರಿ ಎನಿಸುತ್ತಿದೆ. ಈಗ ನೋಡು– ನಿನ್ನ ಕಾಲುಗಳನ್ನು ಮುರಿದುಬಿಟ್ಟಿದ್ದಾನೆ–ಯಾವ ಸಾಕ್ಷಿಗಳೂ ಇಲ್ಲ. ನಿನ್ನವರಿಗೆ ಏನು ನಡೆದಿದೆಯೆಂದು ಗೊತ್ತಿಲ್ಲ. ನೀನೆಲ್ಲಿದ್ದೀಯೆಂದೂ ಗೊತ್ತಿಲ್ಲ. ನಾಳೆ ಸಂಜೆ ನಿನಗೆ ಆಪರೇಷನ್ ನಡೆಯುತ್ತದೆ. ಎರಡು ಕಾಲುಗಳನ್ನೂ ತೆಗೆದುಬಿಡುತ್ತಾರೆ..." ಅವಳು ಸ್ವಲ್ಪ ತಡೆದು ನಂತರ ಮುಂದುವರೆಸಿದಳು.

"ನಾಡಿದ್ದು ಬೆಳಗ್ಗೆಯೇ ಅನಂತಾನಂತಸ್ವಾಮಿಗೆ ಹೇಳಿಕಳುಹಿಸುತ್ತೇನೆ. ನೀನು ಎಲ್ಲಾ ರಹಸ್ಯಗಳನ್ನು ನಮಗೆ ಹೇಳಲಿದ್ದೀಯೆಂದು. ಕೂಡಲೇ ನಿನ್ನ ಬೇಟೆ ಪ್ರಾರಂಭವಾಗುತ್ತದೆ. ನೋಡೋಣ ನಿನ್ನನ್ನೆಷ್ಟು ಜನ ಪೋಲೀಸರು ರಕ್ಷಿಸಲಿದ್ದಾರೋ?"

ಅವಳೆದ್ದು ಬಿರಬಿರನೆ ಹೊರಟು ಹೋದಳು.

*  *  *  *

"ರಾಮುಲಾಲ್ ಏನಾದ?"

–ಈ ಸಂದೇಹ ಸ್ವಾಮಿಯ ಕ್ಯಾಂಪಿನಲ್ಲಿ ಬೆಂಕಿಯಂತೆ ಹರಡಿ ಎಲ್ಲರನ್ನೂ ಗಲಿಬಿಲಿಗೊಳಿಸಿತು.

ಆಶ್ರಮದ ಹೊರಗೆ ಹೊರಳಿದ್ದುದನ್ನು ಕಂಡಿದ್ದರು. ನಂತರ ಏನಾದನೆಂದು ಗೊತ್ತಿಲ್ಲ. ಅವನು ತನ್ನ 'ಸ್ವಂತ' ಕೆಲಸಗಳ ಮೇಲೆ ಆಗಾಗ್ಗೆ ಕೆಲದಿನಗಳ ಕಾಲ ಎಲ್ಲಿಗೊ ಹೋಗುತ್ತಿದ್ದನಾಗಲೀ, ಸ್ವಾಮಿ ಯೋಜಿಸಿದ್ದ ಕಾರ್ಯಕ್ರಮದ ದಿನ ಇಷ್ಟು ಹತ್ತಿರವಾಗುತ್ತಿರುವಾಗ, ಅವನು ಹೀಗೆ ಅದೃಶ್ಯನಾದದ್ದು ಆಶ್ಚರ್ಯ ತಂದಿತು.

ಸ್ವಾಮಿಯ ಎಲ್ಲಾ ಜನರೂ ಈ ರೀತಿ ಆತಂಕಪಡುತ್ತಿದ್ದ ಸಮಯದಲ್ಲಿ-ಅಲ್ಲಿ ರಾಮುಲಾಲ್ ತನ್ನ ಭವಿಷ್ಯತ್ತಿನ ಬಗ್ಗೆ ಯೋಚಿಸುತ್ತಿದ್ದ. ಅದು ಶೂನ್ಯವಾಗಿ ಕಾಣಿಸುತ್ತಿತ್ತು. ಎರಡೂ ಕಾಲುಗಳನ್ನು ಕಳೆದುಕೊಂಡ ತಾನು ಸ್ವಾಮಿಗೆ ಯಾವ ರೀತಿಯಿಂದಲೂ ಉಪಯೋಗಕ್ಕೆ ಬರುವುದಿಲ್ಲ. ಇಷ್ಟು ದಿನ ಮಾಡಿದ ಸೇವೆಗೆ ಸ್ವಾಮಿ ಒಂದಿಪ್ಪತ್ತೈದು ಲಕ್ಷ ರೂಪಾಯಿ ಕೊಡಬಹುದು. ತನ್ನ ಬಳಿ ಐವತ್ತು ಲಕ್ಷಗಳವರೆಗೂ ಇದೆ. ಉಳಿದ ಬಾಳೆಲ್ಲಾ ಆ ಹಣದಿಂದ ನಿವೃತ್ತ ಜೀವನವನ್ನು ಕಳೆಯಬೇಕು.

ಅಷ್ಟರಲ್ಲಿ ಅವನಿಗೆ ಪ್ರವಲ್ಲಿಕ ಹೇಳಿದ ಮಾತುಗಳು ನೆನಪಾದವು.

"ನಾಳಿದ್ದು ಬೆಳಗ್ಗೆ ಅನಂತಾನಂತಸ್ವಾಮಿಗೆ ಹೇಳಿಕಳುಹಿಸುತ್ತೇವೆ ರಾಮುಲಾಲ್–ನೀನು ನಿಮ್ಮ ರಹಸ್ಯಗಳನ್ನೆಲ್ಲಾ ನಮಗೆ ಹೇಳಿಬಿಡುತ್ತೀಯೆಂದು..."

ಸ್ವಾಮಿ ನಂಬುವುದಿಲ್ಲ.

ಆದರೂ ತಾನು ಆದಷ್ಟು ಬೇಗನೆ ಇಲ್ಲಿಂದ ಹೊರಟುಬಿಡಬೇಕು. ಬೇಗನೆ ತನ್ನವರನ್ನು ಸೇರಿಕೊಳ್ಳಬೇಕು. ಕನಿಷ್ಟ ತಾನಿಲ್ಲಿರುವ ವಿಷಯವನ್ನು ಅವರಿಗೆ ತಿಳಿಸಬೇಕು. ಪೋಲೀಸ್ ಕಸ್ಟಡಿಗೆ ಹೋದನಂತರ ತಪ್ಪಿಸಿಕೊಳ್ಳುವುದು ಕಷ್ಟ, ಮುಖ್ಯವಾಗಿ ಕಾಲಿಲ್ಲದಿರುವುದು.

ಕಾಲಿನ ವಿಷಯ ನೆನಪಾಗುತ್ತಿದ್ದಂತೆಯೇ ಅವನ ಮನಸ್ಸಿಗೆ ತಕ್ಷಣ ಶೂನ್ಯತೆ ಆವರಿಸಿತು.

ಒಂದು ಅನುಮಾನ ಮಾತ್ರ ಪರಿಹಾರವಾಗಲಿಲ್ಲ.

ಪ್ರವಲ್ಲಿಕ ಡಿಪಾರ್ಟ್‌ಮೆಂಟ್‌ನಿಂದ ಸಸ್ಪೆಂಡ್ ಆಗಿದ್ದಾಳೆಂದು ಗೊತ್ತು. ಇಲ್ಲಿ ತನ್ನನ್ನು ಸೇರಿಸಿರುವುದೂ ಅವಳೇ. ಹಾಗಾದರೆ ಈ ವಿಷಯವನ್ನು ಪೋಲೀಸರಿಗೆ ತಿಳಿಸಿದ್ದಾಳಾ? ತಿಳಿಸಿದ್ದರೆ ಇದುವರವಿಗೆ ಪೋಲೀಸರು ನೊಣ

ಗಳಂತೆ ಮುತ್ತಿಕೊಳ್ಳುತ್ತಿರಲಿಲ್ಲವೆ? ಬಹುಶಃ ಹೇಳಿರಲಾರಳು. A-5ನ್ನು ಬಂಧಿಸಿದಂತೆಯೇ ನನ್ನನ್ನು ಪ್ರೈವೇಟಾಗಿ ಬಂಧಿಸಿದ್ದಾಳೆ.

ಇನ್ನೊಂದು ಕಾರಣ ಕೂಡಾ ಇದೆ. ಈ ವಿಷಯಗಳೆಲ್ಲಾ ಪೋಲೀಸರಿಗೆ ತಿಳಿಸಿದರೆ ವಿಹಾರಿಯ ಮೇಲೆ ಕೂಡಾ ಕೇಸಾಗುತ್ತದೆ. ಆದ್ದರಿಂದ ಇದನ್ನು ಅವರಿಂದ ಮುಚ್ಚಿಡಲು ಪ್ರಯತ್ನಿಸಿದ್ದಾಳೆ. ಹಾಗೇ ಮಾಡಲಿ, ತಾನು ಹೇಗೂ ಇಬ್ಬರಿಗೂ ಪ್ರೈವೇಟಾಗಿಯೆ ಪಾಠ ಕಲಿಸುತ್ತೇನೆ! ಆಗಬೇಕಾಗಿರುವುದು ಸದ್ಯಕ್ಕೆ ಇಲ್ಲಿಂದ ತಪ್ಪಿಸಿಕೊಳ್ಳುವುದು.

ಯೋಚಿಸುತ್ತಲೇ ಅವನು ನಿದ್ರಿಸಿದ.

ಅರ್ಧರಾತ್ರಿಯಲ್ಲಿ ಆಕಸ್ಮಿಕವಾಗಿ ಎಚ್ಚರವಾಯಿತು. ಅವನ ಹಾವಿನ ಕಿವಿ ಯಾವುದೋ ಶಬ್ದವನ್ನು ಕೇಳಿಸಿಕೊಂಡಿತು. ಕಣ್ಣನ್ನು ಬಿಟ್ಟು ನೋಡಿದ. ಕೋಣೆಯೆಲ್ಲಾ ನಿಶ್ಶಬ್ದವಾಗಿತ್ತು. ಆಸ್ಪತ್ರೆಯ ವಾಸನೆ ವರಾಂಡದಿಂದ ಹೊರಬರುತ್ತಿತ್ತು.

ಎರಡು ನಿಮಿಷ ನೋಡಿ ಅವನು ಕಣ್ಣನ್ನು ಮುಚ್ಚಿಕೊಳ್ಳುತ್ತಿದ್ದಂತೆಯೇ ಮತ್ತೆ ಸದ್ದಾಯಿತು. ಬಾತ್‌ರೂಮಿನಲ್ಲಿ ಏನೋ ಕೆಳಗೆ ಬಿದ್ದ ಸದ್ದು! ಕೂಡಲೇ ಯಾರೋ ಒಳಗೆ ಧುಮುಕಿದ ಶಬ್ದ. ಎರಡು ಕ್ಷಣಗಳಲ್ಲೇ ವ್ಯಕ್ತಿಯೊಬ್ಬ ಒಳಗೆ ಬಂದ. ಅವನ ಕೈಯ್ಯಲ್ಲಿ 'ಈಕ್ವಿಲೈಸರ್ 2000' ಇದೆ. 'ಈಕ್ವಿಲೈಸರ್-2000' ಸುಮಾರು ಐವತ್ತು ಸಾವಿರ ಬೆಲೆಯ ಆಯುಧ! ಕೇವಲ ಸ್ವಾಮಿಯ ಆಯುಧ ಸಂಪತ್ತಿನಲ್ಲಿ ಮಾತ್ರವಿತ್ತು!

ರಾಮಲಾಲ್‌ಗೆ ಸಂತೋಷವಾಯಿತು! ತನ್ನನ್ನು ಬಿಡಿಸಿಕೊಂಡು ಹೋಗಲು ತನ್ನವರು ಬಂದಿದ್ದಾರೆ.

ಅವನು ನಗುಮುಖದಿಂದ ತನ್ನ ಅನುಚರನೆಡೆಗೆ ನೋಡಿದ. ಕಣ್ಣಿನ ಸುತ್ತಲೂ ಕಪ್ಪುಪಟ್ಟಿ ಕಟ್ಟಿಕೊಂಡಿದ್ದರಿಂದ ಅವನ ಗುರುತು ಸಿಗಲಿಲ್ಲ.

"ನನ್ನನ್ನು ಬಿಡಿಸಿಕೊಂಡು ಹೋಗಲು ಯಾವ ಏರ್ಪಾಟನ್ನು ಮಾಡಿದ್ದೀರಿ?" ಎಂದು ಕೇಳಿದ! ಪಿಸುಮಾತಿನಲ್ಲೇ ಉತ್ತರವೆಂಬಂತೆ ಆ ವ್ಯಕ್ತಿ ಈಕ್ವಿಲೈಸರನ್ನು ಅವನೆಡೆಗೆ ಗುರಿಯಿಟ್ಟ.

...ಅವನ ಮುಖ ಬೆವರಿನಿಂದ ಸಂಪೂರ್ಣ ಒದ್ದೆಯಾಯಿತು. ಇನ್ನೊಂದು ಸೆಕೆಂಡು ತಡವಾಗಿದ್ದಿದ್ದರೆ ಅವನ ಶರೀರದಲ್ಲಿ ಸಾವಿರ ತೂತುಗಳು ಬೀಳುತ್ತಿದ್ದವು. ಅಷ್ಟರಲ್ಲೇ ಬಾಗಿಲ ಬಳಿ ಸದ್ದಾಯಿತು. ಅಲ್ಲಿ ವಿಹಾರಿ ನಿಂತಿದ್ದ. ಅವನ ಕೈಯ್ಯಲ್ಲಿ ಪಿಸ್ತೂಲು ನಿಶ್ಶಬ್ದವಾಗಿ ಕೆಲಸ ಮಾಡಿತ್ತು. ಸೈಲೆನ್ಸರ್‌ನಿಂದ ಹೊಗೆ ಬರುತ್ತಿತ್ತು. ಆ ವ್ಯಕ್ತಿಯ ಕೈಯ್ಯಲ್ಲಿದ್ದ ಈಕ್ವಿಲೆಸರ್ ಕೆಳಗೆ ಬಿತ್ತು.

ಮತ್ತೊಮ್ಮೆ ಪಿಸ್ತೂಲನ್ನು ಅವನೆಡೆಗೆ ಗುರಿಯಿಡುವ ವೇಳೆಗೆ ಆ ವ್ಯಕ್ತಿ ತಪ್ಪಿಸಿಕೊಂಡು ಓಡಿದ್ದ. ಬಾತ್‌ರೂಮಿನ ಹೊರಗೆ ಜೀಪು ಸ್ಟಾರ್ಟ್ ಮಾಡಿದ ಶಬ್ದ ಕೇಳಿಸಿತು.

ಎಲ್ಲಾ ಕೆಲವೇ ಕ್ಷಣಗಳಲ್ಲೇ ನಡೆದು ಹೋಯಿತು.

ವಿಹಾರಿ ಟಾಯಿಲೆಟ್ ಒಳಗೆ ಬಗ್ಗಿ ನೋಡಿ ಬರುತ್ತಾ, "ಬಾಸ್ಟರ್ಡ್, ತಪ್ಪಿಸಿಕೊಂಡ" ಅಂದ.

ರಾಮಲಾಲ್ ಅವನೆಡೆಗೆ ಕ್ರೂರವಾಗಿ ನೋಡಿದ. ತನ್ನನ್ನು ಅಂಗವಿಕಲನನ್ನಾಗಿ ಮಾಡಿದ ವ್ಯಕ್ತಿ ಇವನು. ಆದರೆ ವಿಹಾರಿಯ ಬಗ್ಗೆ ಅಂತಹ ಶತ್ರುತ್ವವೇನೂ ಅವನಿಗೆ ಕಾಣಲಿಲ್ಲ. ಕುರ್ಚಿ ಎಳೆದುಕೊಂಡು ವಿಹಾರಿ ಅವನ ಹತ್ತಿರ ಕುಳಿತ.

"ನಿನ್ನ ಕಾಲನ್ನು ಮುರಿದಿದ್ದು ನಾನೇ. ಕ್ಷಮಿಸೆಂದು ಕೇಳುವುದಿಲ್ಲ. ನೀನು ನಮಗೆ ಮಾಡಿರುವ ದ್ರೋಹಕ್ಕೆ ಇದು ಸೇಡು. ಈಗ ನಡೆಯಬೇಕಾದ್ದನ್ನು ಯೋಚಿಸೋಣ. ನಿನ್ನ ಮುಂದಿನ ಪ್ಲಾನ್ ತಿಳಿಸು" ಅಂದ.

"ನಿನ್ನನ್ನು ಕೊಲ್ಲುವುದು" ಸಿಟ್ಟಿನಿಂದ ಹೇಳಿದ ರಾಮಲಾಲ್. ವಿಹಾರಿ ನಕ್ಕ.

"ನೀನು ನಮ್ಮ ಬಳಿ, ಈ ಆಸ್ಪತ್ರೆಯಲ್ಲಿದ್ದೀಯೆಂದು ಪ್ರವಲ್ಲಿಕ ಸ್ವಾಮಿಗೆ ತಿಳಿಯುವಂತೆ ಮಾಡಿದ್ದಾಳೆ. ಅದರ ಫಲಿತಾಂಶವೇ ಈಗ ನಿನ್ನನ್ನು ಮುಗಿಸುವ ಯತ್ನ." ಒಂದು ಕ್ಷಣ ಸುಮ್ಮನಿದ್ದ ವಿಹಾರಿ ಮುಂದುವರೆಸಿದ:

"ನನಗೂ, ಪ್ರವಲ್ಲಿಕಳಿಗೂ ನಿನ್ನ ವಿಷಯದಲ್ಲಿ ಒಂದು ಭಿನ್ನಾಭಿಪ್ರಾಯ ಬಂದಿದೆ. ತನ್ನ ಕುಟುಂಬಕ್ಕೆ ನಡೆದ ಅನ್ಯಾಯದಿಂದ ನಿನ್ನ ಮೇಲೆ ಸೇಡು ತೀರಿಸಿಕೊಳ್ಳಬೇಕಾದದ್ದು ತಾನೇ ಎಂದು ಅವಳ ವಾದ. ನಿನ್ನ ಮೂಲಕ ಸ್ವಾಮಿಯ ರಹಸ್ಯಗಳನ್ನು ತಿಳಿದುಕೊಳ್ಳಬೇಕೆಂದು ನನ್ನ ಆಸೆ."

"ನಾನು ಸತ್ತರೂ ಹೇಳುವುದಿಲ್ಲ."

"ನಿನ್ನ ಸ್ವಾಮಿಭಕ್ತಿಯನ್ನು ಮೆಚ್ಚಿದೆ. ಸ್ವಾಮಿಯ ಮತ್ತೊಬ್ಬ ಅನುಚರನೂ ಈಗ ನಾಲ್ಕು ದಿನಗಳ ಹಿಂದೆ ಹೀಗೆಯೇ ಹೇಳಿದ್ದ, ನಿನ್ನ ಕೈಯ್ಯಲ್ಲಿ ಸತ್ತ. ಈಗ ನೀನು ಹೇಳುತ್ತಿದ್ದಿ. ಇನ್ನೊಬ್ಬ ಕೃಷ್ಣಲಾಲ್ ಕೈಲಿ ನೀನು ಸಾಯುತ್ತಿ. ಐದು ನಿಮಿಷಗಳ ಹಿಂದೆ ಸತ್ತುಹೋಗುತ್ತಿದ್ದಿ ಕೂಡಾ–"ವಿಹಾರಿಯ ಮಾತು ಪೂರ್ತಿಗೊಳ್ಳುವುದಕ್ಕೆ ಮುಂಚೆಯೇ ಪ್ರವಲ್ಲಿಕ ಬಂದಳು.

"ಹೊರಗೆ ಜೀಪಿನಲ್ಲಿ ಹೋಗುತ್ತಿದ್ದವನು ಸಿಕ್ಕಿಬಿದ್ದ" ಎಂದಳು.

"ಏನಂತೆ ಅವನ ಪ್ಲಾನು?"

"ರಾಮಲಾಲ್‌ನನ್ನು ಕೊಲ್ಲುವುದಂತೆ..." ಪ್ರವಲ್ಲಿಕ ಹೇಳಿದಳು.

"ಸಿ.ಬಿ.ಐ. ಛೀಫ್ ಬಳಿ ನಾನು ಮಾತನಾಡಿದ ಪ್ರತಿಯೊಂದೂ ಮಾತೂ ಸ್ವಾಮಿಗೆ ತಿಳಿಯುತ್ತಿದೆ. ಹೇಗೆಂದೇ ಅರ್ಥವಾಗುತ್ತಿಲ್ಲ. ಆಗಲೇ ಹೇಳಿದ್ದೆ ಸ್ವಾಮಿಗೆ ತಿಳಿಯುವಂತೆ–"ರಾಮಲಾಲ್ ನಮ್ಮಲ್ಲಿ ಸೇರಿಕೊಂಡಿದ್ದಾನೆ. ನಮಗೆ ಅಪ್ರೂವರಾಗಿ ಬದಲಾಗಿದ್ದಾನೆ" ಎಂದು. ಅದರ ಪರಿಣಾಮವೇ ಇದು. ನಾನು ಹೇಳಿದ ಮಾತುಗಳು ಸ್ವಾಮಿಗೆ ತಲುಪಿರುತ್ತವೆ."

ಅವರ ಮಾತುಗಳನ್ನು ಕೇಳುತ್ತಿದ್ದ ರಾಮಲಾಲ್‌ಗೆ ನಡೆದದ್ದೆಲ್ಲಾ ಅರ್ಥವಾಯಿತು. ಪ್ರವಲ್ಲಿಕ ಸುಳ್ಳಾಡಿದ್ದಾಳೆಂದು ಸ್ವಾಮಿಗೆ ತಿಳಿಯಲಿಲ್ಲ. ನಿಜವಾಗಿ ತಾನು ಇವರ ಕಡೆ ಸೇರಿದ್ದೇನೆಂದು ತನ್ನನ್ನು ಮುಗಿಸಿಬಿಡಲು ಆದೇಶ ನೀಡಿದ್ದಾನೆ.

ಅವನ ಕಣ್ಣುಗಳು ಕೆಂಪಗಾದವು.

ಒಂದು ಸಲ...ಒಂದೇ ಒಂದು ಸಲ ಇಲ್ಲಿಂದ ತಪ್ಪಿಸಿಕೊಂಡರೆ ಸಾಕು. ನಂತರ ಇವರ ಕತೆ ನೋಡಿಕೊಳ್ಳುತ್ತೇನೆ. ಅದೇ ವಿಷಯವನ್ನು ಪದೇ ಪದೇ ಅಂದುಕೊಂಡ.

ಅಷ್ಟರಲ್ಲಿ ದಯಾನಂದ ಕೃಷ್ಣಮೂರ್ತಿ ಒಳ ಬಂದರು. "ನರ್ಸ್ ಬಂದು ಏನೋ ಗಲಾಟೆ ನಡೆಯುತ್ತಿದೆಯೆಂದು ಹೇಳಿದಳಲ್ಲಾ ಏನಿದು?"

"ಪೇಷಂಟ್ ಮೇಲೆ ಕೊಲೆ ಪ್ರಯತ್ನ ನಡೆಯಿತು ಡಾಕ್ಟರ್–"

"ಮೈಗಾಡ್–ಹೇಗೆ?" ಕಂಗಾಲಾಗಿ ಕೇಳಿದರು ಡಾಕ್ಟರ್.

ವಿಹಾರಿ ನಡೆದದ್ದನ್ನೆಲ್ಲಾ ಹೇಳಿದ. ಕೃಷ್ಣಮೂರ್ತಿ ಆತಂಕದಿಂದ ಹೇಳಿದರು.

"ಆ ವ್ಯಕ್ತಿ ಸಿಕ್ಕಿದ್ದಾನೆಂದಿರಲ್ಲಾ; ಕೂಡಲೇ ಪೋಲೀಸರಿಗೆ ಫೋನ್ ಮಾಡ್ತೀನಿ..."

"ಬೇಡ ಡಾಕ್ಟರ್" ಅಡ್ಡಿಪಡಿಸಿದ ವಿಹಾರಿ. "ಇವನನ್ನು ಇಲ್ಲಿಂದ ಬದಲಾಯಿಸಿ ಮತ್ತೊಂದು ಸುರಕ್ಷಿತ ಪ್ರದೇಶಕ್ಕೆ ಒಯ್ಯಬೇಕು. ಪೋಲೀಸರಿಗೆ ತಿಳಿಸಿದರೆ ಏನಿದೆ? ಮರು ನಿಮಿಷವೇ ಸ್ವಾಮಿಗೆ ಇವನೆಲ್ಲಿದ್ದಾನೆಂದು ತಿಳಿದುಬಿಡುತ್ತದೆ. ತನ್ನವರನ್ನು ಕಳುಹಿಸಿ ಇವನನ್ನು ಮುಗಿಸಿಬಿಡುತ್ತಾನೆ."

"ಆದರೂ ನ್ಯಾಯವಾಗಿ "

ನ್ಯಾಯವೂ ಇದುವರೆವಿಗೂ ಏನೂ ಮಾಡಲಾರದೆ ಹೋಯಿತು. ಅದಕ್ಕೆ ಇಂದು ಅದನ್ನು ನನ್ನ ಕೈಗೆ ತೆಗೆದುಕೊಳ್ಳುತ್ತೇನೆ. ಹೇಳಿ ಅಂಕಲ್. ನೀವು ನನಗೆ ಸಹಾಯ ಮಾಡುತ್ತೀರಾ ಇಲ್ಲವಾ? ಅದೂ ಅಲ್ಲದೆ–ನಿಮ್ಮ ಬಳಿಯೇ ಉಳಿಸಿದರೆ ಇವನ ಸಾವು ಅವರ ಕೈಯ್ಯಲ್ಲಿ ಆಗೇ ಆಗುತ್ತದೆ."

ಡಾಕ್ಟರ್ ಆದರ ಬಗ್ಗೆ ಏನನ್ನೂ ಹೇಳಲು ತೋಚದವರಂತೆ ಸುಮ್ಮನೆ ಯೋಚಿಸಲು ಪ್ರಾರಂಭಿಸಿದರು. ಇಬ್ಬರೂ ಅವರೆಡೆಗೇ ನೋಡುತ್ತಿದ್ದರು. ರಾಮಲಾಲ್ ದೃಷ್ಟಿ ಟೇಬಲ್ ಮೇಲಿದ್ದ ಪಿಸ್ತೂಲಿನ ಮೇಲೆ ಬಿತ್ತು. ವಿಹಾರಿ ಉಪಯೋಗಿಸಿದ್ದ ಪಿಸ್ತೂಲ್ ಅದು.

ಅವನು ಚುರುಕಾಗಿ ಯೋಚಿಸಿದ.

ಆಸ್ಪತ್ರೆಯಲ್ಲಿದ್ದರೆ ಪೋಲೀಸರ ವಿಚಾರಣೆ. ಚಿತ್ರಹಿಂಸೆಗಳು ತಪ್ಪುವುದಿಲ್ಲ. ವಿಹಾರಿ ತೆಗೆದುಕೊಂಡು ಹೋದರೆ, ಹಳೆ ದ್ವೇಷವನ್ನೆಲ್ಲಾ ತೀರಿಸಿಕೊಳ್ಳುತ್ತಾನೆ. ಇಷ್ಟೇ ಅಲ್ಲದೆ ತನ್ನ ಕಡೆಯವರಿಂದಲೂ ಅಪಾಯ ತಪ್ಪಿದ್ದಲ್ಲ.

ತನ್ನವರ ಬಳಿಗೆ ಹೊರಟು ಹೋಗುವುದೇ ಕ್ಷೇಮಕರ, ಅವರು ತನ್ನನ್ನು ಅಪಾರ್ಥ ಮಾಡಿಕೊಂಡಿರುವ ವಿಷಯ ನಿಜವೇ. ಆದರೆ ತಾನೀಗ ಹೋಗಿ ಇವರು ಆಡುತ್ತಿರುವ ನಾಟಕ, ತಾನೆಂಥ ಸ್ಥಿತಿಯಲ್ಲೂ ರಹಸ್ಯವನ್ನು ಹೇಳಲಿಲ್ಲವೆಂದು ಸ್ವಾಮಿಗೆ ತಿಳಿಸಿದರೆ ಸಾಕು, ತನ್ನ ಉಳಿದ ಬಾಳೆಲ್ಲ ಸುಖವಾಗಿ ಕಳೆದುಬಿಡುತ್ತದೆ. ಒಂದು ಸಲ ತನ್ನವರನ್ನು ಸೇರಿಕೊಂಡರೆ ಸಾಕು. ಆಮೇಲೆ ವಿಹಾರಿಗೆ ಸರಿಯಾಗಿ ಬುದ್ಧಿ ಕಲಿಸಬಹುದು.

ಈ ಯೋಚನೆ ಬರುತ್ತಿದ್ದಂತೆಯೇ ಅವನು ಮಿಂಚಿನಂತೆ ಕೈಚಾಚಿ ಟೇಬಲ್ ಮೇಲಿದ್ದ ಪಿಸ್ತೂಲನ್ನು ತೆಗೆದುಕೊಂಡು ಡಾಕ್ಟರ್ ಕಡೆಗೆ ಗುರಿಯಿಟ್ಟು ವಿಜಯದ ನಗೆ ನಗುತ್ತಾ "ಈಗ ನೀವೆಲ್ಲ ನನ್ನ ಕೈಯಲ್ಲಿದ್ದೀರಿ ವಿಹಾರಿ! ಹೋಗಿ ಫೋನ್ ತೆಗೆದುಕೊಂಡು ಬಾ. ನಾನು ಅರ್ಜೆಂಟಾಗಿ ಸ್ವಾಮಿಗೆ ಫೋನ್ ಮಾಡಬೇಕು. ನನಗೋಸ್ಕರ ನಮ್ಮವರು ವಾಹನವನ್ನು ತಂದು ನನ್ನನ್ನು ಅದರಲ್ಲಿ ಹತ್ತಿಸಿಕೊಳ್ಳುವ ವರೆಗೂ ನೀವೆಲ್ಲ ಇದೇ ಸ್ಥಾನದಲ್ಲಿ ನಿಂತಿರಬೇಕು. ವಿಹಾರಿ! ಕ್ವಿಕ್, ಫೋನ್ ತೆಗೆದುಕೊಂಡು ಬಾ" ಆತುರಪಡಿಸಿದ.

ವಿಹಾರಿ ಕದಲಲೇ ಇಲ್ಲ.

"ಉಹ್ಞ...ಬೇಗ..." ಆಜ್ಞೆ ಮಾಡಿದ.

ವಿಹಾರಿ ಡಾಕ್ಟರ್ ಕಡೆ ನೋಡಿ "ನೋಡಿದಿರಾ ಅಂಕಲ್! ಇವನೆಂತಹವನೆಂದು. ಹಾವಿಗಿಂತಾ ಭಯಂಕರವಾದವನು. ಇವನ ಬಗ್ಗೆ ಅನುಕಂಪ ತೋರಿಸಿ ನ್ಯಾಯದ ಪರಿಧಿಯಲ್ಲಿ ಇರಿಸುತ್ತೇನೆಂದು ಹೇಳುತ್ತೀರಲ್ಲಾ. ಇವನಿಗೆ ಸರಿಯಾಗಿ

ಉತ್ತರಿಸುವುದು, ಬುದ್ಧಿ ಕಲಿಸುವುದು ನಾನೊಬ್ಬನೇ" ಎನ್ನುತ್ತಾ ರಾಮಲಾಲ್ ಬಳಿಗೆ ಬಂದ.

"ನಿಲ್ಲು ಅಲ್ಲೇ" ಕಿರುಚಿದ ರಾಮಲಾಲ್. ವಿಹಾರಿ ನಿಲ್ಲಲಿಲ್ಲ. ಮತ್ತಷ್ಟು ಹತ್ತಿರ ಬಂದ. ರಾಮಲಾಲ್ ಅವನೆಡೆಗೆ ಗುರಿಯಿಟ್ಟು ಟ್ರಿಗರ್ ಒತ್ತಿದ. ಪಿಸ್ತೂಲ್ ಸಿಡಿಯಲಿಲ್ಲ.

ವಿಹಾರಿ ನಕ್ಕು ಹೇಳಿದ: "ನೀನೆಂತಹವನೆಂದುಡಾಕ್ಟರ್‌ಗೆ ತೋರಿಸಲೆಂದೇ ಪಿಸ್ತೂಲನ್ನು ಅಲ್ಲಿಟ್ಟಿದ್ದೆ ರಾಮಲಾಲ್. ನಿನಗಿಂತಲೂ ನಾನು ಬುದ್ಧಿವಂತನೆಂದು ತೋರಿಸುವುದಕ್ಕಾಗಿಯೇ ಈ ರೀತಿ ಮಾಡಬೇಕಾಯಿತು" ಎನ್ನುತ್ತಾ ಅವನ ಕೈಯಿಂದ ಪಿಸ್ತೂಲನ್ನು ತೆಗೆದುಕೊಂಡ.

ರಾಮಲಾಲ್ ಇನ್ನೂ ಆ ಷಾಕ್‌ನಿಂದ ಚೇತರಿಸಿಕೊಂಡಿರಲಿಲ್ಲ.

ವಿಹಾರಿ ಡಾಕ್ಟರ್‌ಗೆ ಹೇಳಿದ, "ಇವನನ್ನು ನಾನು ತೆಗೆದುಕೊಂಡು ಹೋಗುತ್ತೇನೆ, ಡಾಕ್ಟರ್ ನಾಳೆ ಸಂಜೆ ಆಪರೇಷನ್ ಥಿಯೇಟರಿಗೆ ತರುತ್ತೇನೆ" ಎಂದು ಡಾಕ್ಟರರ ಉತ್ತರಕ್ಕೂ ಕಾಯದೆ ಅವನನ್ನು ಗಾಲಿಕುರ್ಚಿಯಲ್ಲಿ ಕೂಡಿಸಿದ. ಪ್ರವಲ್ಲಿಕ ಸಹಾಯ ಮಾಡಿದಳು. ಹಾಗೆಯೇ ಆ ಕುರ್ಚಿಯನ್ನು ವ್ಯಾನಿನೊಳಗೆ ತಳ್ಳಿಕೊಂಡು ಹೋದರು ಇಬ್ಬರೂ.

ಆನಂತರ ವ್ಯಾನು ಅರ್ಧಗಂಟೆಯ ಪ್ರಯಾಣ ಮಾಡಿತು. ತನ್ನನ್ನು ಎಲ್ಲಿಗೆ ಒಯ್ಯುತ್ತಿದ್ದಾರೆಂದೇ ರಾಮಲಾಲ್‌ಗೆ ಅರ್ಥವಾಗಲಿಲ್ಲ. ವಿಹಾರಿ ತನಗಿಂತಲೂ 'ಒರಟ' ಎಂದು ಮಾತ್ರ ಅರ್ಥವಾಯಿತು. ಅವನು ಕ್ರಮೇಣ ಧೈರ್ಯಗೆಡುತ್ತಿದ್ದ. ತಾನು ಅಂಗವಿಕಲನಾದೆನೆಂದು ತಿಳಿಯುತ್ತಿದ್ದಂತೆಯೇ ತನ್ನವರೇ ತನ್ನನ್ನು ಮುಗಿಸುವ ಯತ್ನ ಮಾಡಿದರು...ಇವೆಲ್ಲಾ ಅವನ ಮೇಲೆ ಅವನಿಗೆ ತಿಳಿಯದಂತೆ ಪರಿಣಾಮ ಬೀರಿದವು. ಅದುವರೆವಿಗೂ ತನ್ನ ಶರೀರವನ್ನು, ಶಕ್ತಿಯನ್ನು ನಂಬುತ್ತಿದ್ದವನು ಅವನು. ವ್ಯಾನ್ ಒಂದು ಮನೆಯ ಮುಂದೆ ನಿಂತಿತು. ಒಳಗೆ ಕರೆದೊಯ್ದ ರಾಮಲಾಲ್‌ನನ್ನು ವಿಹಾರಿ,

ವನ್ನೂ ಬಯಸುವುದಿಲ್ಲ"

"ನನ್ನಿಂದ ನಿನಗೇನು ಬೇಕು?"

"ಸ್ವಾಮಿಯ ಎಲ್ಲಾ ರಹಸ್ಯಗಳು."

"ಯಾವ ರಹಸ್ಯಗಳು?"

ವಿಹಾರಿ ಗಡಿಯಾರ ನೋಡಿಕೊಂಡ–"ಅರ್ಧ ರಾತ್ರಿ ಎರಡು ಗಂಟೆಯಾಗಿದೆ. ಬಿಸಿನೆಸ್ ಮಾತನಾಡಲು ಇದು ಸರಿಯಾದ ಸಮಯವಲ್ಲ. ಆದರೂ ನೀನು ಕೇಳಿದೆಯೆಂದು ಹೇಳುತ್ತಿದ್ದೇನೆ–ಕೇಳು. ಕಾಲಿಲ್ಲದ ನೀನು ಮರದ ದಿಮ್ಮಿಗೆ ಸಮಾನ. ಸ್ವಾಮಿಗೆ ನೀನಿನ್ನೆಂದಿಗೂ ಕೆಲಸಕ್ಕೆ ಬರಲಾರೆ. ನೀನು ಬದುಕಿದ್ದರೆ ಪೊಲೀಸರಿಗೆ ಎಲ್ಲಾ ಹೇಳಿ ಬಿಡುತ್ತೀಯೆಂಬ ಒಂದೇ ಕಾರಣಕ್ಕೆ ನಿನ್ನನ್ನು ಅವನು ಬಿಡಿಸಿಕೊಳ್ಳಲು ಪ್ರಯತ್ನಿಸುತ್ತಾನೆ. ಒಂದು ಕಾಲದಲ್ಲಿ ನೀನು ಅವನ ಬಲಭುಜವಾಗಿದ್ದಿ. ಆದರೆ, ಆ ಕೃತಜ್ಞತೆ ಎಂಬುದು ಅವನಲ್ಲಿಲ್ಲವೆಂದು ನಿನಗೆ ಗೊತ್ತಿದೆ. ಈಗ ನಿನಗುಳಿದಿರುವ ಎಲ್ಲಾ ಮಾರ್ಗಗಳಲ್ಲಿಯೂ ಉತ್ತಮವಾದುದೆಂದರೆ ನನಗೆ ಸಹಾಯ ಮಾಡುವುದು. ವಿಭೀಷಣ ರಾಮನಿಗೆ ಸಹಾಯ ಮಾಡಿದಂತೆ ನೀನು ಸ್ವಾಮಿಯ ಎಲ್ಲಾ ರಹಸ್ಯ ಜಾಗಗಳನ್ನು ಅವನ ಯೋಜನೆಗಳನ್ನೂ ನನಗೆ ತಿಳಿಸಿದರೆ–ನಾನು ಈ ಯುದ್ಧದಲ್ಲಿ ಗೆಲ್ಲುತ್ತೇನೆ. ನಿನಗೆ ಸ್ವಾಮಿಯಿಂದ ಆಮೇಲೆ ಅಪಾಯವಿರುವುದಿಲ್ಲ. ಇದುವರೆವಿಗೂ ನೀನು ಸಂಪಾದಿಸಿಕೊಂಡಿರುವ ಆಸ್ತಿಯಿಂದ ನೀನು ಹಾಯಾಗಿ ಬದುಕಬಹುದು. ಇದು ನನ್ನ ಪ್ರಪೋಜಲ್. ಒಪ್ಪಿಕೊಳ್ಳುತ್ತೀಯಾ?"

"ಉಹ್ಞೂ ...ಒಪ್ಪಿಕೊಳ್ಳುವುದಿಲ್ಲ". ರಾಮುಲಾಲ್ ಹೇಳಿದ... "ನಮ್ಮವರಿಗೆ ಎಂದಿಗಾದರೂ ನಿಜ ತಿಳಿದುಬಿಡುತ್ತದೆ. ನಾನು ಸತ್ತರೂ ಸರಿ ನಿನ್ನ ಅಂತ್ಯವನ್ನು ಅವರು ಮಾಡದೇ ಬಿಡರು."

"ಹಾಗಾದರೆ ಸರಿ, ನೀನು ಕೇಳಿದಿ ಅಂತ ಹೇಳಿದೆ ಅಷ್ಟೇ. ಯೋಚಿಸು *ಚೆನ್ನಾಗಿ. ಗುಡ್‌ನೈಟ್''* *ಎಂದು ವಿಹಾರಿ ಹೊರಟು ಹೋದ.*

ಆ ರಾತ್ರಿ ರಾಮುಲಾಲ್‌ಗೆ ನಿದ್ರೆ ಬರಲೇ ಇಲ್ಲ. ಸ್ವಲ್ಪ ಸಪ್ಪಳವಾದರೂ ಅತ್ತ ನೋಡುವುದೇ ಆಯಿತು. ಮನೆಯಲ್ಲಿ ಯಾರೂ ಇಲ್ಲ, ತಾನೊಬ್ಬನೇ ಎಂದುಕೊಂಡಿದ್ದ. ಆದರೆ ಅವನ ಊಹೆ ಬೆಳಗ್ಗೆ ಸುಳ್ಳಾಯಿತು. ಅದೊಂದು ಮಧ್ಯಮ ತರಗತಿಯ ಮನೆಯೆಂದು ಗುರುತಿಸಿದ. ಅದು ಸುನಾದಮಾಲಳ ಮನೆ.

ಬೆಳಿಗ್ಗೆ ಅವಳು ಪೇಪರ್, ಕಾಫಿ ತಂದಳು. ಇದ್ದವರಲ್ಲಿ ಅವಳು ಸ್ವಲ್ಪ ಒಳ್ಳೆಯವಳಂತೆ ಕಂಡಳು. ಅವನು ಕಾಫಿ ಕುಡಿಯುತ್ತಾ ಪೇಪರನ್ನು ಬಿಡಿಸಿದ. ಮೊದಲ ಪುಟದ ಮೂಲೆಯಲ್ಲಿ ಒಂದು ಪ್ರಕಟಣೆ ಇತ್ತು. ಅದನ್ನು ನೋಡಿ

ನೆಟ್ಟಗಾದ.

"ರಾಮಲಾಲ್, ನೀನೆಲ್ಲಿದ್ದರೂ ಕೂಡಲೇ ಆಶ್ರಮಕ್ಕೆ ಬರುವುದು. ಇಂದು ಮಧ್ಯಾಹ್ನ 12 ಗಂಟೆಗಳ ವರೆವಿಗೂ ನೋಡುತ್ತೇವೆ. ನಿನ್ನ ಹೆಂಡತಿ ಮಕ್ಕಳು ನಿನಗಾಗಿ ಎದುರು ನೋಡುತ್ತಿದ್ದಾರೆ. ನಿನಗೆ ಬರಲು ಸಾಧ್ಯವಾಗ ದಿದ್ದರೆ ಅವರಿಗೆ ಟಿಕೆಟ್‌ಗಳನ್ನು ಬುಕ್‌ಮಾಡುತ್ತೇವೆ- ಇಂತಿ ನಿನ್ನ ಮಿತ್ರರು."

ಅವನ ಕೈಯಲ್ಲಿದ್ದ ಕಾಫಿ ಕಪ್ ನಡುಗಿತು.

ಈ ವಾರ್ನಿಂಗ್‌ನ ಅರ್ಥ ಅವನಿಗೆ ಗೊತ್ತಾಯಿತು. ತನ್ನವರ ಮೇಲೆ ತನಗೆ ಆಗ ಅನುಮಾನ ಬಂದರೆ ಇದೇ ರೀತಿ ಪ್ರಕಟಣೆ ಕೊಡುತ್ತಿದ್ದ. ಅವನ ಮುಖ ರೋಷದಿಂದ ಕಪ್ಪಾಯಿತು.

"ಏನು, ಏನಾಯಿತು?" ಸುನಾದಮಾಲ ಕೇಳಿದಳು. ಅವನು ಉತ್ತರಿಸ ಲಿಲ್ಲ. ಅವನಿಗೆ ಮೊದಲನೆ ಸಲ ತನ್ನವರ ಮೇಲೆ ಕೋಪ ಬಂತು.

ಮಧ್ಯಾಹ್ನ ಎರಡು ಗಂಟೆಯಾಗುತ್ತಿದ್ದಂತೆಯೇ ವಿಹಾರಿ ಇಬ್ಬರು ಡಾಕ್ಟರುಗಳೊಡನೆ ಬಂದ. ಬ್ಯಾಂಡೇಜ್ ಬಿಚ್ಚಿದರು.

ಬೆಳ್ಳಗೆ ಬಿಳಚಿಕೊಂಡಿದ್ದವು ಪಾದಗಳು. ರಾಮಲಾಲ್‌ಗೆ ತನ್ನ ಶರೀರ ವನ್ನು ನೋಡಿಕೊಳ್ಳುವುದಕ್ಕೇ ಭಯವಾಯಿತು. ಡಾಕ್ಟರ್‌ಗಳು ಹೊರಗೆ ಮಾತ ನಾಡಿಕೊಳ್ಳುತ್ತಿದ್ದುದು ಕೇಳಿಸುತ್ತಿತ್ತು. "ಇನ್‌ಫೆಕ್ಷನ್ ತುಂಬಾ ವೇಗವಾಗಿ ವ್ಯಾಪಿಸುತ್ತದೆ. ಬೇಗ ಆಪರೇಷನ್ ಮಾಡಿದರೆ ಉತ್ತಮ."

"ಆ ಆಸ್ಪತ್ರೆಗೆ ಬೇಡ ಡಾಕ್ಟರ್. ಅಲ್ಲಿ ಇವನನ್ನು ಕೊಲ್ಲುವ ಏರ್ಪಾಡು ನಡೆದಿದೆ. ಬೇರೆ ಆಸ್ಪತ್ರೆಯನ್ನು ನೋಡಿದ್ದೇನೆ. ಡಾಕ್ಟರ್ ಕೃಷ್ಣಮೂರ್ತಿ ಅಲ್ಲಿಗೇ ಬರುತ್ತೇನೆಂದಿದ್ದಾರೆ" ವಿಹಾರಿ ಹೇಳುತ್ತಿದ್ದ.

ಪರಿಸ್ಥಿತಿ ತಾನೆಂದುಕೊಂಡದ್ದಕ್ಕಿಂತ ತೀವ್ರವಾಗಿದೆಯೆಂದುಕೊಂಡ ರಾಮಲಾಲ್.

ಸಮಯ ಮೂರಾಯಿತು.

ಒಂದೊಂದು ಏರ್ಪಾಟೂ ಪೂರ್ತಿಯಾಗುತ್ತಿದ್ದಂತೆಯೇ ರಾಮಲಾಲ್‌ನ ಮನಸ್ಸು ಕಂಪಿಸುತ್ತಿತ್ತು. ಆಪರೇಷನ್ ಥಿಯೇಟರಿನಲ್ಲಿ ಕರೆದೊಯ್ಯುತ್ತಿದ್ದಂ ತೆಯೇ ವಿಹಾರಿ ಗಡಿಬಿಡಿಯಿಂದ ಬಂದ. ಅದು ಸರ್ಕಾರಿ ಆಸ್ಪತ್ರೆಯೆಂದು ರಾಮಲಾಲ್ ಗ್ರಹಿಸಿದ. ವಿಹಾರಿಯ ಮುಖದಲ್ಲಿ ಟೆನ್ಷನ್ ಜೊತೆಗೆ ನೋವೂ ಗೋಚರವಾಗುತ್ತಿತ್ತು. ರಾಮಲಾಲ್‌ನ ಮೇಲೆ ಕೈಹಾಕಿ "ಐಯಾಮ್ ಸಾರಿ" ಅಂದ.

"ಏನು ಏನಾಯ್ತು?"

ವಿಹಾರಿ ಉತ್ತರಿಸಲಿಲ್ಲ. ಅಷ್ಟರಲ್ಲಿ ಪ್ರವಲ್ಲಿಕ ಒಳಗೆ ಬಂದಳು. ಅವಳ ಮುಖ ಕೂಡಾ ಬಾಡಿತ್ತು.

ಎಲ್ಲವನ್ನೂ ನೋಡುತ್ತಿದ್ದ ರಾಮಲಾಲ್‌ಗೆ ಅನುಮಾನ ಹೆಚ್ಚಾಗಿ, "ಏನು? ಏನಾಯ್ತು ಹೇಳಿ" ಎಂದು ಕಿರುಚಿದ.

"ಕಂಟ್ರೋಲ್ ಯುವರ್‌ಸೆಲ್ಫ್" ಎನ್ನುತ್ತಾ ಭುಜ ತಟ್ಟಿ. ವಿಹಾರಿ ಡಾಕ್ಟರೊಡನೆ ಏನೋ ಮಾತನಾಡಿದ.

ಆಪರೇಷನ್ ಥಿಯೇಟರಿಗೆ ಕರೆದೊಯ್ಯುವ ಬದಲು ಸ್ಟ್ರೆಚರನ್ನು ಜನರಲ್ ವಾರ್ಡ್ ಕಡೆಗೆ ತಳ್ಳಿಕೊಂಡು ಬಂದರು. ಉದ್ದನೆಯ ವರಾಂಡ.

"ಎಲ್ಲಿಗೆ? ನನ್ನನ್ನೆಲ್ಲಿಗೆ ಕರೆದುಕೊಂಡು ಹೋಗುತ್ತಿದ್ದೀರಿ?" ಕಿರುಚಿದ. ಸ್ಟ್ರೆಚರ್ ಒಂದು ಕೋಣೆಯ ಮುಂದೆ ನಿಂತಿತು. ಅದನ್ನು ಕಂಡು ಆಶ್ಚರ್ಯಪಟ್ಟ.

"ಮಾರ್ಚುರಿ."

ಅವನೇನೋ ಹೇಳಲು ಪ್ರಯತ್ನಿಸುತ್ತಿದ್ದಂತೆಯೇ ಒಬ್ಬ ಅದರ ಬಾಗಿಲನ್ನು ತೆರೆದ. ಸ್ಟ್ರೆಚರ್ ಶವಗಳಿದ್ದ ಕೋಣೆಯೊಳಗೆ ಹೋಯಿತು. ತಲೆ ತಿರುಗಿಸಿ ನೋಡಿದ ರಾಮಲಾಲ್ ವಿಕೃತವಾಗಿ ಕೂಗು ಹಾಕಿದ. ಆ ಮೃತ ಶರೀರವನ್ನೂ ಅಲ್ಲಾಡಿಸುವಂತಿತ್ತು ಅವನ ಕೂಗಿನ ಜೋರು. ಮಾರ್ಚುರಿ ಟೇಬಲ್ ಮೇಲೆ ಸಾಲಾಗಿ ಮೂರು ಶವಗಳಿದ್ದವು.

ಅವನ ಹೆಂಡತಿ...ಇಬ್ಬರು ಮಕ್ಕಳು...

"ಹನ್ನೆರಡವರೆಗೂ ನೋಡಿ ಟಿಕೆಟ್‌ಗಳನ್ನು ಬುಕ್ ಮಾಡುತ್ತೇವೆ" ಎಂಬ ಮಾತುಗಳಿಗೆ ಅರ್ಥ ಹೇಳುತ್ತಿದ್ದಂತೆ ಮೂರು ಶರೀರಗಳೂ ಬುಲೆಟ್‌ಗಳ ಗಾಯಗಳಿಂದ ತೂತಾಗಿ ಮೇಲೆ ಹೊದಿಸಿದ್ದ ಬಟ್ಟೆಗಳನ್ನು ಕೆಂಪಗಾಗಿಸಿದ್ದವು.

ಸ್ಟ್ರೆಚರ್ ಮೇಲಿನಿಂದ ಏಳಲು ಪ್ರಯತ್ನಿಸಿದ ರಾಮಲಾಲ್‌ನನ್ನು ಬಲವಂತದಿಂದ ಬಿಗಿಹಿಡಿದ ವಿಹಾರಿ. "ಪ್ಲೀಸ್.. ಎಕ್ಸೈಟ್ ಆಗಬೇಡ" ಎಂದು ಆ ಶವಗಳ ಬಳಿಗೆ ಕರೆದೊಯ್ದ.

ರಾಮಲಾಲ್ ಎಲೆಯಂತೆ ಅಲ್ಲಾಡುತ್ತಿದ್ದ. ಅವನಿಗೆ ಹೆಂಡತಿ ಮಕ್ಕಳೆಂದರೆ ವಿಪರೀತ ಪ್ರೀತಿ. ಮಗನ ಕ್ರಿಕೆಟ್‌ಗಾಗಿ ವಿದ್ಯುತ್ ಆಫೀಸನ್ನೇ ಬಾಂಬುಗಳಿಂದ ಸುಟ್ಟಿದ್ದವನು ಅವನು. ಅಂತಹ ನರರೂಪ ರಾಕ್ಷಸ, ದುಷ್ಟ, ಅದಕ್ಕೂ ಮುಂಚೆ ಅದೆಷ್ಟೋ ಮುಗ್ಧರನ್ನು ಭಯಂಕರವಾಗಿ ಕೊಂದಿದ್ದವನು...ವಿಷಯ ತನ್ನವರೆಗೂ ಬಂದಾಗ, ಅಣೆಕಟ್ಟು ಒಡೆದಂತೆ ಕಂಪಿಸುತ್ತಿದ್ದ. ಏಳಲು ಕಾಲಿಲ್ಲ. ಪಕ್ಕದ ಹಾಸಿಗೆಯ ಮೇಲಿನಿಂದಲೇ ಅವರನ್ನು ನೋಡಿದ. ನಿರ್ಜೀವ ಪ್ರತಿಮೆಗಳಂತಿವೆ ಶವಗಳು. ಜೋರಾಗಿ, ಅವರನ್ನು ಆಲಂಗಿಸಿಕೊಂಡು ಅಳಲು ಕೂಡಾ

ಸಾಧ್ಯವಿಲ್ಲದಂತೆ ಕಾಲುಗಳಿಗೆ ಕಟ್ಟುಗಳು. ಇಷ್ಟು ಕಾಲ ತೋರಿಸಿದ ಭಕ್ತಿಗೆ, ಸ್ವಾಮಿಯಿಂದ ಸಿಕ್ಕಿದ ಪ್ರತಿಫಲ.

ಅವನು ಹಿಸ್ಟೀರಿಕ್ ಆಗಿ ಬದಲಾಗುತ್ತಿರುವುದನ್ನು ಗಮನಿಸಿದ ಡಾಕ್ಟರ್‌ಗಳು ಅವನನ್ನು ಅಲ್ಲಿಂದ ಬಲವಂತವಾಗಿ ಹೊರಗೆ ಕರೆ ತಂದರು.

"ಇಷ್ಟು ಅಪ್‌ಸೆಟ್ ಆಗುತ್ತಾನೆಂದುಕೊಂಡಿರಲಿಲ್ಲ. ಆಪರೇಷನ್ನನ್ನು ಇನ್ನೆರಡು ದಿನಗಳ ಕಾಲ ಮುಂದೂಡಿದರೆ ಉತ್ತಮ" ಡಾಕ್ಟರ್ ಹೇಳುತ್ತಿದ್ದರು. ವಿಹಾರಿ ರಾಮಲಾಲ್ ಮೇಲೆ ಕೈ ಹಾಕಿ, "ಐಯಾಮ್ ಸಾರಿ, ನಮ್ಮಿಬ್ಬರ ನಡುವೆ ಶತ್ರುತ್ವ ಇರುವುದು ನಿಜವೇ. ಆದರೆ ನಮ್ಮ ಹೋರಾಟದಲ್ಲಿ ಅನವಶ್ಯಕವಾಗಿ ಈ ಮುಗ್ಧರು ಬಲಿಯಾಗುತ್ತಾರೆಂದುಕೊಂಡಿರಲಿಲ್ಲ."

"ಆ ಪಾಪಿ ಸ್ವಾಮಿಯ ಅಂತ್ಯ ತೋರಿಸುತ್ತೇನೆ."

"ನೀನು ಬೇಡ. ನಾನೇ ಆ ಕೆಲಸ ಮಾಡುತ್ತೇನೆ. ಈ ನಿಸ್ಸಹಾಯಕ ಸ್ಥಿತಿಯಲ್ಲಿ ನೀನೇನೂ ಮಾಡಲಾರೆ ರಾಮಲಾಲ್. ನಾನು ನಿನಗೆ ಆಗಲಿಂದ ಇದನ್ನೇ ಹೇಳುತ್ತಿದ್ದೆ. ನಾನು ನಿನ್ನನ್ನು ಬಿಟ್ಟ ಮರುಕ್ಷಣವೇ ನಿನ್ನ ಪ್ರಾಣಕ್ಕೆ ಅಪಾಯವೆಂದು. ಇನ್ನು ಮುಂದೆ ನೀನು ಅವರಿಗೆ ಯಾವ ರೀತಿಯಿಂದಲೂ ಉಪಯೋಗಕ್ಕೆ ಬಾರದವನು ರಾಮಲಾಲ್. ನೀನು ಬದುಕಬೇಕೆಂದರೆ ಸ್ವಾಮಿಯನ್ನು ನಿರ್ವೀರ್ಯ ಮಾಡದೆ ವಿಧಿಯಿಲ್ಲ. ಸ್ವಾಮಿಯ ಬಗ್ಗೆ ನಿನಗೆ ತಿಳಿದಿರುವುದನ್ನೆಲ್ಲ ಹೇಳು. ಉಳಿದದ್ದನ್ನು ನಾನು ನೋಡಿಕೊಳ್ಳುತ್ತೇನೆ."

"ಏನು ಹೇಳಬೇಕು?" ರಾಮಲಾಲ್ ಕೇಳಿದ. ಅವನ ಸ್ವರ ಆಳದಿಂದ ಬಂದಂತಿತ್ತು. ಒಂದು ಕಾಲದ ಕೊಬ್ಬು, ಬಿಂಕ, ಭೀಕರತೆ ಈಗಿರಲಿಲ್ಲ. ಸರ್ವ ಶಕ್ತಿಗಳನ್ನೂ ಕಳೆದುಕೊಂಡವನಂತಿದ್ದ.

ಜಪಾನ್‌ನಿಂದ ಬರುವ ಹಡಗಿಗೂ, ಅನಂತಾನಂತಸ್ವಾಮಿಗೂ ಏನು ಸಂಬಂಧ?"

"ದಾರಿ ಮಧ್ಯೆ ಬರುವ ಗೋಲ್ಡನ್ ಐಲೆಂಡ್‌ನಲ್ಲಿ ಆ ಹಡಗಿಗೆ ಆಯುಧಗಳನ್ನು ತುಂಬಿಸಲಾಗುತ್ತದೆ. ವಿಜಯದಶಮಿಯ ದಿನ ಸ್ವಾಮಿ ಸುಮಾರು 20 ಲಕ್ಷ ಜನಗಳಿಗೆ ಉಪನ್ಯಾಸ ಕೊಡಲಿದ್ದಾನೆ. ಆ ಉಪನ್ಯಾಸವನ್ನು ಪರಮೇಶ್ವರ್ ತಯಾರು ಮಾಡಿದ್ದಾನೆ. ಮತ, ನ್ಯಾಯ, ಪ್ರಸ್ತುತ ವ್ಯವಸ್ಥೆಯ ಮೂಲಕ ಒಂದು ಮತಸ್ಥರಿಗೆ ಆಗುತ್ತಿರುವ ಅನ್ಯಾಯ ಆ ಉಪನ್ಯಾಸದಲ್ಲಿ ವಿವರವಾಗಿ ಹೇಳಲಿದ್ದಾನೆ. ಎಲ್ಲವೂ ಸತ್ಯವೇ. ಆದರೆ ಆ ಉಪನ್ಯಾಸವನ್ನು ಕೇಳುತ್ತಿದ್ದರೆ– ನಮಗಿಷ್ಟು ಅನ್ಯಾಯ ನಡೆಯುತ್ತಿದೆಯಾ ಎಂದು ಯಾರಿಗಾದರೂ ಅನ್ನಿಸುತ್ತದೆ. ಅವರನ್ನು ರೊಚ್ಚಿಗೇಳುವಂತೆ ಮಾಡುತ್ತದೆ, ಆ ಉಪನ್ಯಾಸದ ಕ್ಯಾಸೆಟ್ಟು

ಗಳನ್ನು ದೇಶದಲ್ಲೆಲ್ಲಾ ಉಚಿತವಾಗಿ ಹಂಚಲಾಗುತ್ತದೆ. ಅದಕ್ಕಾಗಿ ಎರಡು ಕೋಟಿ ರೂಪಾಯಿಗಳ ಖರ್ಚು ಮಾಡಲಿದ್ದಾರೆ. ಸರ್ಕಾರ ಕೂಡಾ ಇದಕ್ಕೇನೂ ಮಾಡಲಾರದು. ಆ ನಂತರವೇ ನಿಜವಾದ ಗಲಭೆ ಪ್ರಾರಂಭವಾಗುವುದು-"

"ಏನು ನಡೆಯುತ್ತದೆ?"

"ದೇವಸ್ಥಾನಗಳೊಳಗೆ ತೆಂಗಿನಕಾಯಿಗಳಂತಹ ಬಾಂಬುಗಳನ್ನು ಸ್ಮಗಲ್ ಮಾಡಲಾಗುತ್ತದೆ. ಅವು ಸಿಡಿಯುತ್ತಿದ್ದಂತೆಯೇ ಮತ ಜಗಳ ಪ್ರಾರಂಭವಾಗುವಾಗುತ್ತದೆ. ಅದೇ ಸಮಯದಲ್ಲಿ ಒಂದು ಗಾಡ್ಗೆಟ್ ಡೆಲ್ಲಿಯಲ್ಲಿ ಸಿಡಿಯುತ್ತದೆ. ಕೆಲವು ದೇಶನಾಯಕರು ಸಾಯುತ್ತಾರೆ. ಕೇವಲ ಆಯಾ ದೇಶಗಳ ಲಾಭಕ್ಕಾಗಿ ಇವೆಲ್ಲಾ ನಡೆಯುತ್ತದೆ. ಅಷ್ಟರಲ್ಲಿ ಈ ದೇಶದಲ್ಲಿಯ ಸೆಕ್ಯುಲರಿಜಂ ಹೋಗಿ ಅರಾಜಕತೆ ಪ್ರಾರಂಭವಾಗುತ್ತದೆ. ಸ್ವಾಮಿ ಅತ್ಯುನ್ನತವಾದ ಪೀಠವನ್ನು ಸ್ಥಾಪಿಸಿ, ತಾನೇ ಅಧ್ಯಕ್ಷನಾಗಿ ಪ್ರಕಟಿಸುತ್ತಿದ್ದಂತೆಯೇ ಪಕ್ಕದ ದೇಶಗಳು ಅವನನ್ನು ಗುರುತಿಸುತ್ತವೆ. ಒಂದು ಬಲಿಷ್ಠ ರಾಷ್ಟ್ರ ಕೆಲವೇ ಕ್ಷಣಗಳಲ್ಲಿ ತನ್ನ ಸೈನ್ಯವನ್ನು ಕಳುಹಿಸುತ್ತದೆ."

ಒಬ್ಬ ಸಿ.ಬಿ.ಐ. ಆಫೀಸರಾಗಿ ಪ್ರವಲ್ಲಿಕ ಅದೆಷ್ಟೋ ಕೇಸುಗಳನ್ನು ಕಂಡಿದ್ದಳು. ಹಣಕ್ಕಾಗಿ, ಅಧಿಕಾರಕ್ಕಾಗಿ ಏನೆಲ್ಲಾ ಮಾಡಿದವನನ್ನು ನೋಡಿದ್ದಳು. ಆದರೆ ಈಗ ರಾಮಲಾಲ್ ಹೇಳುತ್ತಿರುವುದನ್ನು ಕೇಳುತ್ತಿದ್ದರೆ ಅವಳ ಶರೀರ ಕಂಪಿಸುತ್ತಿತ್ತು. ಅವಳು ಸ್ವಾಮಿಯ ಮೇಲೆ ರಿಪೋರ್ಟ್ ತಯಾರಿಸಿದ್ದು ನಿಜವೇ. ಆದರೆ ಅಪಾಯ ಇಷ್ಟು ಹತ್ತಿರದಲ್ಲಿದೆಯೆಂದು ಅವಳು ಊಹಿಸಿರಲಿಲ್ಲ. ಇಂದು ವಿಹಾರಿ ಈ ಕೆಲಸ ಮಾಡದೆ ಇದ್ದಿದ್ದರೆ, ಚಾಪೆಯ ಕೆಳಗಿನ ನೀರಿನಂತೆ ಅಪಾಯ ದೇಶವೆಲ್ಲಾ ವ್ಯಾಪಿಸಿಬಿಡುತ್ತಿತ್ತು.

ಅವಳ ಮೆದುಳು ಪಾದರಸಕ್ಕಿಂತಲೂ ವೇಗವಾಗಿ ಯೋಚಿಸುತ್ತಿತ್ತು.

ಇಷ್ಟು ಕಡಿಮೆ ಸಮಯದಲ್ಲಿ ಸ್ವಾಮಿಯನ್ನು ಹೇಗೆ ಎದುರಿಸುವುದು? ಆಯುಧಗಳನ್ನು ತರುತ್ತಿರುವ ಹಡಗನ್ನು ತಡೆಯಬಹುದು. ಅದರಿಂದ ಸ್ವಾಮಿಗೇನೂ ನಷ್ಟವಾಗುವುದಿಲ್ಲ. ಅದಕ್ಕಿಂತಲೂ ಭಯಂಕರವಾದ ಆಯುಧ ಸ್ವಾಮಿಯ ಕೈಯ್ಯಲ್ಲಿದೆ. ಅದರ ಹೆಸರು 'ಮತ'. ಅವನ ಉಪನ್ಯಾಸವನ್ನಾಗಲೀ, ಅವನ ಕೆಲಸಗಳನ್ನಾಗಲೀ ಸರ್ಕಾರ ಯಾವ ರೀತಿಯಿಂದಲೂ ಎದುರಿಸುವುದಿಲ್ಲ, ಕೆಲವು ಕೋಟಿ ಜನರ ಸೂಕ್ಷ್ಮವಾದ ಭಾವನೆಗಳನ್ನು ರೊಚ್ಚಿಗೆಬ್ಬಿಸುವಂತೆ ಪರಮೇಶ್ವರ್ ಈ ಉಪನ್ಯಾಸವನ್ನು ತಯಾರಿಸಿರುವುದರಲ್ಲಿ ಸಂದೇಹವೇ ಇಲ್ಲ. ಒಬ್ಬ ಮತದ ಗುರುವನ್ನು ಬಂಧಿಸುವ ಧೈರ್ಯ ಸರ್ಕಾರಕ್ಕಿಲ್ಲ. ವಿಹಾರಿಯ ಮಾತು ಕೇಳಿ ಅವಳು ಈ ಲೋಕಕ್ಕೆ ಮರಳಿದಳು.

''ನೀನು ಹೇಳಿದ್ದನ್ನೆಲ್ಲಾ ಸಾಕ್ಷ್ಯಾಧಾರಗಳಿಂದ ದೃಢಪಡಿಸಬಲ್ಲೆಯಾ ರಾಮಲಾಲ್?" ವಿಹಾರಿ ಕೇಳುತ್ತಿದ್ದ.

"ನನ್ನ ಬಳಿ ಯಾವ ಸಾಕ್ಷಿಗಳೂ ಇಲ್ಲ. ನನಗೆ ತಿಳಿದಿರುವ ಇನ್ನೊಂದು ವಿಷಯ ಏನೆಂದರೆ, ಯಾರಾದರೂ ಪರೀಕ್ಷಿಸಲು ಬರುತ್ತಾರೆಂದರೆ ಕೆಲವೇ ಕ್ಷಣಗಳಲ್ಲೇ ಆ ದ್ವೀಪದ ಪರಿಸ್ಥಿತಿಯನ್ನು ಬದಲಾಯಿಸುವ ಏರ್ಪಾಟುಗಳನ್ನು ಮಾಡುತ್ತಾರೆ. ಅದಕ್ಕೆ ಕೂಡಾ ಸಾಕ್ಷ್ಯಾಧಾರಗಳೇನೂ ಇಲ್ಲ."

"ಈ ಸ್ವಾಮಿಯ ಬಗ್ಗೆ ಸಾಕ್ಷಿಗಳನ್ನು ಯಾರು ಕೊಡಬಲ್ಲರು?"

"ಪರಮೇಶ್ವರ್ ಕೊಡಬಲ್ಲ."

"ಮತ್ತೆ?"

"ಸೂರ್ಯಾರಾವ್ "

"ನೀನೊಂದು ಸಹಾಯ ಮಾಡಿದರೆ ..ಒಂದು ಸುಳ್ಳು ಹೇಳಿದರೆ, ಸೂರ್ಯಾರಾವ್ ನಮ್ಮಲ್ಲಿ ಸೇರಿಹೋಗುತ್ತಾನೆ. ಏನು ಹೇಳಬೇಕೆಂಬುದನ್ನು ಪ್ರವಲ್ಲಿಕ ಹೇಳುತ್ತಾಳೆ. ನಾನು ಹೋಗಿ ಅವನಿಂದ ಫೋನ್ ಮಾಡಿಸುತ್ತೇನೆ. ಅವನು ಕೂಡಾ ಆಸ್ಪತ್ರೆಯಲ್ಲೇ ಇದ್ದಾನೆ."

"ಈ ಆಸ್ಪತ್ರೆಯಲ್ಲೇನಾ?"

"ಹೌದು. ಅವನಿಗೆ ಎದೆನೋವು ಬಂದಿದೆ. ಅವನು ನಿನ್ನಷ್ಟು ಧೈರ್ಯವಂತನಲ್ಲ. ಪದವಿ ಹೋದದ್ದರಿಂದ ಹೀಗಾಗಿದೆ" ಎನ್ನುತ್ತಾ ವಿಹಾರಿ ಅಲ್ಲಿಂದ ಹೊರಡಲು ಸಿದ್ಧನಾದ.

"ವಿಹಾರಿ–" ಕರೆದ ರಾಮಲಾಲ್.

ವಿಹಾರಿ ಏನೆಂಬಂತೆ ನೋಡಿದ.

"ಆ ಸ್ವಾಮಿಯನ್ನು ನಾನು...ನನ್ನ ಸ್ವಹಸ್ತದಿಂದ ಕೊಲ್ಲಬೇಕು."

ವಿಹಾರಿ ನಕ್ಕು, ಆ ಕೆಲಸಕ್ಕಾಗಿ ಈಗಾಗಲೇ ಇಬ್ಬರು ಕಾದಿದ್ದೇವೆ. ಕ್ಯೂನಲ್ಲಿ ನೀನು ಮೂರನೆಯವನು. ಸಾಧ್ಯವಾದರೆ ಸೂರ್ಯಾರಾವ್ ನಾಲ್ಕನೆಯವನಾಗುತ್ತಾನೆ" ಎನ್ನುತ್ತಾ ಹೊರಟ.

* * * *

## 20

ಸೂರ್ಯಾರಾವ್‌ಗೆ ಎಚ್ಚರವಾಗಿ ಕಣ್ಬಿಟ್ಟು ನೋಡಿದ.

ಕೋಣೆಯೆಲ್ಲಾ ನಿಶ್ಶಬ್ದವಾಗಿತ್ತು.

ಎಲ್ಲಿದ್ದಾನೆಂದು ತಿಳಿಯದೆ ಕದಲುತ್ತಿದ್ದಂತೆಯೇ ಎದೆಯ ಬಳಿಯ ವೈರೊಂದು ತಗುಲಿತು. ಕೂಡಲೇ ಕಾರ್ಡಿಯೋಗ್ರಾಫ್‌ನಲ್ಲಿ ಚುಕ್ಕಿಗಳು ಮೇಲೆ ಕೆಳಗೆ ಆಡುತ್ತಾ ಸೂಚಿಸುತ್ತಿದ್ದವು.

ತಾನೆಲ್ಲಿದ್ದೇನೆಂದು ಅರ್ಥವಾಯಿತು.

ಅವನಿಗೆ ಎಚ್ಚರವಾದುದನ್ನು ಕಂಡು ನರ್ಸ್ ಒಳಗೆ ಬಂದಳು. ತಾನೆಷ್ಟು ಸಮಯದಿಂದ ಹೀಗೆಯೇ ಇದ್ದೇನೆಂದು ಕೇಳಿದ.

ಅವಳು ಹೇಳಿದ ವಿಷಯ ಅವನಿಗೆ ಭಯವುಂಟು ಮಾಡಿತು. ಎರಡು ದಿನಗಳ ಹಿಂದೆ ಹಾರ್ಟ್ ಅಟ್ಯಾಕ್ ಆಗಿತ್ತು. ಡಾಕ್ಟರ್‌ಗಳು ಇಪ್ಪತ್ನಾಲ್ಕು ಗಂಟೆಗಳ ಕಾಲ ಶ್ರಮಿಸಿದ್ದರು. ಅದೃಷ್ಟ ಚೆನ್ನಾಗಿತ್ತು. ಇದು ಪುನರ್ಜನ್ಮ. ಆದರೂ ಇನ್ನು ಮುಂದೆ ತುಂಬಾ ಎಚ್ಚರದಿಂದಿರಬೇಕು. ಸ್ವಲ್ಪ ಒತ್ತಡ ಹೆಚ್ಚಾದರೂ ಅಪಾಯವೇ. ಉಳಿದ ಬಾಳು ಕೇವಲ ಬದುಕಿರುವುದಕ್ಕಾಗಿ ಮಾತ್ರವೇ ಆಗಲಿ ಸಂತೋಷಕ್ಕಾಗಿ ಅಲ್ಲ.

ತನಗೆ ಹೀಗೇಕಾಯಿತೆಂದು ಸೂರ್ಯಾರಾವ್‌ಗೆ ಗೊತ್ತು. ಒಂದು ಕಡೆ ಮಂತ್ರಿ ಪದವಿ ಹೋದದ್ದು. ಮತ್ತೊಂದು ಕಡೆ ಬಂಧಿಸಲ್ಪಟ್ಟು ಮಾನಹೋದದ್ದು ...

"ಅದಕ್ಕೆ ಕಾರಣ ನಿಮ್ಮ ಅನಂತಾನಂತಸ್ವಾಮಿಯೇ" ಎಂದ ವಿಹಾರಿ. "ಈಗ ತಾನೇ ವಿಷಯವನ್ನೆಲ್ಲಾ ತಿಳಿದುಕೊಂಡೆ. ನೀವು ಒಪ್ಪಂದದ ಮೇಲೆ ಸಹಿ ಮಾಡಲು ಒಂದು ದಿನ ತಡ ಮಾಡಿದ್ದಕ್ಕೆ ಸ್ವಾಮಿ ಬೆಂಕಿಯ ಮೇಲಿನ ಅರಳಿನಂತಾದನಂತೆ. ತಾನೆಷ್ಟು ಪವರ್‌ಫುಲ್ ಮನುಷ್ಯನೆಂಬುದನ್ನೂ, ಬೇಕೆಂದರೆ ತಾನೇನು ಮಾಡಬಲ್ಲೆನೆಂಬುದನ್ನೂ ತೋರಿಸಲು ಒಬ್ಬಳನ್ನು ಕಳುಹಿಸಿ ನಿಮ್ಮ ಮಾನ ತೆಗೆದಿದ್ದಾನೆ."

"ನಿಜವಾ?" ಸೂರ್ಯಾರಾವ್ ಕೇಳಿದ.

"ಹೌದು. ನನಗೆ ಆಗಲೇ ಅನುಮಾನ ಬಂದಿತ್ತು. ನಿಮ್ಮ ಮಗಳನ್ನು ನಾನು ಕಳುಹಿಸಿದ ನಂತರ ಈ ಬ್ಲಾಕ್‌ಮೈಯಿಲರ್ ಯಾರೆಂದುಕೊಂಡೆ. ಅದೂ

ಅಲ್ಲದೆ ಐದು ಹತ್ತು ಸಾವಿರಕ್ಕೆಲ್ಲಾ ಕಿಡ್ನಾಪ್ ಮಾಡುವುದೆಂದರೇನೆಂದುಕೊಂಡೆ. ಮಾರನೇ ದಿನವೇ ಪೇಪರಿನಲ್ಲಿ ಓದಿದೆ ನಿಮ್ಮ ಪದವಿ ಹೋದದ್ದು, ಎದೆನೋವು ಬಂದಿದ್ದು –ಈ ವಿಷಯಗಳನ್ನೆಲ್ಲಾ –"

"ಸ್ವಾಮಿಯೇ ಇದನ್ನೆಲ್ಲಾ ಮಾಡಿದ್ದಾನೆಂದು ನೀನು ಹೇಗೆ ಹೇಳುತ್ತಿ?"

"ರಾಮಲಾಲ್ ಹೇಳಿದ."

ಸೂರ್ಯರಾವ್ ಬೆಚ್ಚಿಬಿದ್ದುದನ್ನು ಕಾರ್ಡಿಯೋಗ್ರಾಫ್ ತೋರಿಸಿತು.

"ರಾ...ರಾಮಲಾಲ್ ನಿನಗೆ ಹೇಗೆ ಗೊತ್ತು?" ಎಂದು ಕೇಳಿದ.

"ಅವನು ಕೂಡಾ ಇದೇ ಆಸ್ಪತ್ರೆಯಲ್ಲಿದ್ದಾನೆ. ಪಾಪ ಅವನಿಗೆ ಕೂಡಾ ಘೋರವಾದ ಅನ್ಯಾಯ ನಡೆದಿದೆ. ಅವನ ಬಾಯಿಂದಲೇ ಕೇಳಿ" ಎಂದು ಫೋನ್ ಮಾಡಿದ.

ಸುಮಾರು ಹತ್ತು ನಿಮಿಷಗಳ ಕಾಲ ಇಬ್ಬರೂ ಮಾತನಾಡಿಕೊಂಡರು. ಅಷ್ಟು ಹೊತ್ತೂ ವಿಹಾರಿ ಸುಮ್ಮನೆ ಕುಳಿತಿದ್ದ. ಸೂರ್ಯರಾವ್ ಫೋನಿಡುತ್ತ "ಈ ಸ್ವಾಮಿಗೆ ತನ್ನ ಮೇಲೆಯೇ ತನಗೆ ಹೆಚ್ಚು ನಂಬಿಕೆ ಬಂದಿದೆ" ಅಂದ. ವಿಹಾರಿ ಉತ್ತರಿಸಲಿಲ್ಲ. ಮತ್ತೆ ಅವನೇ "ನಾನು ತುಂಬಾ ರಾಜಕೀಯ ನೋಡಿಕೊಳ್ಳು ತ್ತಿದ್ದೆ. ರಾಮಲಾಲ್ ಹಾಗಲ್ಲ. ನಂಬಿದ ಬಂಟನಂತೆ ಕೆಲಸ ಮಾಡುತ್ತಿದ್ದ! ಅಂತ ಹುದರಲ್ಲಿ ಅವನ ಸಂಸಾರವನ್ನೇ ನಾಶಮಾಡಿದ್ದಾನೆಂದರೆ ಅವನು ಸ್ವಾಮಿ ಯಲ್ಲ...ಯಮ..."

"ಅಂತಹ ಯಮ ಇನ್ನು ಕೆಲವೇ ದಿನಗಳಲ್ಲಿ ಈ ದೇಶದ ಅಧಿಪತಿಯಾಗ ಲಿದ್ದಾನೆ. ನೀವು ಮತ್ತೆ ಆತನ ಬಳಿ ಮಂತ್ರಿಯಾದರೂ ನಮಗೆ ಆಶ್ಚರ್ಯವಿಲ್ಲ."

"ಸ್ವಾಭಿಮಾನವಿರುವ ಯಾವನೂ ಹಾಗೆ ಮಾಡಲಾರ. ಆ ಸ್ವಾಮಿಯ ಬಳಿ ನಾನು ತುಂಬಾ ವರ್ಷಗಳ ಕಾಲ ಕೆಲಸ ಮಾಡಿದ್ದೇನೆ, ತುಂಬಾ ಕಷ್ಟ." ವಿಹಾರಿಗೆ ಅರ್ಥವಾಗಲಿಲ್ಲ ಸ್ವಾಭಿಮಾನವಿರುವವರಾರೂ ಕೆಲಸ ಮಾಡಲು ಸಾಧ್ಯವಿಲ್ಲವೆನ್ನುತ್ತಾನೆ. ತಾನು ಮಾಡಿದ್ದೇನೆಂದು ಹೇಳುತ್ತಾನೆ...ಈ ರಾಜ ಕೀಯಗಳು ತನಗೆ ಅರ್ಥವಾಗುವುದಿಲ್ಲ. ಆ ವಿಷಯವನ್ನು ಒಪ್ಪಿಕೊಳ್ಳುತ್ತಿದ್ದಂತೆ, "ಸ್ವಾಮಿಯ ಆಟ ನಡೆಯದಂತೆ ನಾವು ಹೇಗೆ ತಡೆಯಬೇಕು?" ಎಂದು ಕೇಳಿದ.

"ತಡೆಯಬಹುದು. ನೀನಿನ್ನೂ ಹುಡುಗ. ನಿನಗೆ ರಾಜಕೀಯದ ಬಗ್ಗೆ ಅಷ್ಟಾಗಿ ಗೊತ್ತಿಲ್ಲ. ಒಂದು ಸಲ ಮೇಲೇರಿ, ಮೇಲೇರಲು ಸಹಾಯ ಮಾಡಿ ದವರ ಮೇಲೇ ಕೆಸರು ಎರಚುವುದಕ್ಕೆ 'ರಾಜಕೀಯ' ಎನ್ನುತ್ತಾರೆ. ಒಂದು ಸಹಿ ಮಾಡುವುದಕ್ಕೆ ಒಂದು ದಿನ ತಡವಾಯಿತೆಂದು ಆ... (ಕೆಟ್ಟ ಮಾತು) ಮಗ ಒಬ್ಬ... (ಮತ್ತೊಂದು ಸ್ತ್ರೀಲಿಂಗದ ಅಸಭ್ಯ ಮಾತು) ಯನ್ನು ಕಳುಹಿಸಿ ನನ್ನ

ಮಂತ್ರಿ ಪದವಿಯನ್ನು ಕಿತ್ತುಕೊಳ್ಳುತ್ತಾನಾ? ರೇಪ್ ಕೇಸಿನ ಅಪಾದನೆ ಹೊರಿಸಿ ನನ್ನನ್ನು ಅರೆಸ್ಟ್ ಮಾಡಿಸುತ್ತಾನಾ? ಈ ಪಾಪಿಗೆ ರೂಪಾಯಿ ನೋಟುಗಳ ಅಭಿಷೇಕವನ್ನೇ ಮಾಡಿಸಿದ್ದೆ. ಅದಕ್ಕೆ ಕೃತಜ್ಞತೆ ಕೂಡಾ ಇಲ್ಲ. ಕರೆದು ತಾ ವರದಿಗಾರರನ್ನು! ಅರ್ಧ ಗಂಟೆಯಲ್ಲಿ ಅರವತ್ತು ಪ್ರಶ್ನೆಗಳಿಗೆ ಉತ್ತರಿಸುತ್ತೇನೆ." ಆವೇಶದಿಂದ ಹೇಳಿದ ಸೂರ್ಯರಾವ್. ಆದರೆ ಅಲ್ಲಿಂದ ಕದಲಲಿಲ್ಲ.

"ನಿಮ್ಮ ರಾಜಕೀಯಕ್ಕೆ ನನ್ನ ನಮಸ್ಕಾರಗಳು! ದೇಶ ಏಕೆ ಹೀಗೆ ಹಾಳಾಗುತ್ತಿದೆಯೆಂದು ಈಗ ಅರ್ಥವಾಗುತ್ತಿದೆ. ಆದರೆ ಸಮಸ್ಯೆ ನೀವಂದುಕೊಂಡಷ್ಟು ಚಿಕ್ಕದಲ್ಲ. ಎರಡು ದಿನಗಳಲ್ಲೇ ಪ್ರಳಯ ಪ್ರಾರಂಭವಾಗಲಿದೆ. ನಮಗೀಗ ಬೇಕಾಗಿರುವುದು ವಾದ-ವಿವಾದಗಳೂ, ಪ್ರಶ್ನೋತ್ತರಗಳೂ ಅಲ್ಲ; ಸ್ವಾಮಿಯನ್ನು ಮುಗಿಸಲು ಸರಿಯಾದ ಸಾಕ್ಷಿಗಳು."

"ಹಾಗಾದರೆ ಬರೆದುಕೋ ಹೇಳುತ್ತೇನೆ" ಎಂದು ಒಂದು ಕ್ಷಣ ಕಣ್ಮುಚ್ಚಿಕೊಂಡು ಹೇಳಲು ಪ್ರಾರಂಭಿಸಿದ.

"ಸ್ವಾಮಿಯ ಸ್ವಿಸ್‌ಬ್ಯಾಂಕ್ ಅಕೌಂಟ್ ನಂಬರ್..."

ವಿಹಾರಿ ಟೇಪ್‌ರೆಕಾರ್ಡರನ್ನು ಆನ್ ಮಾಡಿದ.

* * * *

ವಿಜಯದಶಮಿಯ ದಿನ ಸೇರಲಿದ್ದ ಭಕ್ತಕೋಟಿಗಾಗಿ ಸಿದ್ಧತೆಗಳು ಭರದಿಂದ ನಡೆಯುತ್ತಿತ್ತು. ಸುಮಾರು ಎರಡು ಲಕ್ಷ ಭಕ್ತಾದಿಗಳು ಒಂದೆಡೆ ಸೇರುವ ಅಂದಾಜು. ಹಡಗು ದ್ವೀಪದ ಬಳಿ ಬರುತ್ತಿತ್ತು.

ಗಾಡ್ಗೆಟ್ ಮಿಸೈಲ್ಸ್ ರಾಜಧಾನಿಯಲ್ಲಿ ಸ್ಫೋಟಿಸುತ್ತಿದ್ದಂತೆಯೇ, ಪವಿತ್ರ ಕ್ಷೇತ್ರಗಳಲ್ಲಿ ವಿಸ್ಫೋಟನೆಗಳು ನಡೆಯುತ್ತಿದ್ದಂತೆಯೇ ಅದರ ಪ್ರಭಾವ ಮಿಲಿಟರಿ ಅಧಿಕಾರಿಗಳ ಮೇಲೆ ಹೇಗೆ ಬೀರುತ್ತದೆ? ಒಂದು ಮತದ ಅಸ್ಥಿರತೆ ದೇಶದ ಭದ್ರತೆಗೆ ಎಷ್ಟು ಬಿಸಿಯನ್ನುಂಟುಮಾಡುತ್ತದೆಂದು ಯೋಚಿಸುತ್ತಿದ್ದ ಸ್ವಾಮಿ. ಅದೇ ಸಮಯಕ್ಕೆ ಪರಮೇಶ್ವರ್ ಗಡಿಬಿಡಿಯಿಂದ ಒಳಗೆ ಬಂದ.

ಸ್ವಾಮಿ ಸಂತೋಷದಿಂದ, "ಬಾ! ಪರಮೇಶ್ವರ್ ಬಾ! ನೋಡು ಎರಡು ನೂರು ಟೆಲಿಗ್ರಾಂಗಳು ರೋಡ್‌ನಲ್ಲಿ ಬಂದಿವೆ ನೋಡು" ಅಂದ. ಜನ್ಮದಿನದ ಶುಭಾಶಯಗಳನ್ನು ತಿಳಿಸುವ ಟೆಲಿಗ್ರಾಂಗಳು ಅವು. ಕಮ್ಯಾಂಡೋಗಳು ದೇಶದ ವಿವಿಧ ಪ್ರದೇಶಗಳಲ್ಲಿ ಸೇರಿಕೊಂಡಿದ್ದೇವೆಂದು, ರೆಡಿಯಾಗಿದ್ದೇವೆಂದು ಸೂಚಿಸುವ ಟೆಲಿಗ್ರಾಂಗಳು ಅವು. ಇಲ್ಲಿ ಸ್ವಾಮಿ ಯಾವ ಮತಸ್ಥರನ್ನುದ್ದೇಶಿಸಿ ಮಾತ

ನಾಡುತ್ತಾನೋ, ಅದೇ ಮತಸ್ಥರನ್ನು ನಿಷ್ಕರುಣೆಯಿಂದ ಆ ಪ್ರದೇಶಗಳಲ್ಲೆಲ್ಲಾ ಕೊಂದು-ಅಸ್ಥಿರತೆಯನ್ನುಂಟುಮಾಡಲು ಉಗ್ರವಾದಿಗಳು ತಮಗೆ ವಹಿಸಿದ್ದ ಜಾಗಗಳನ್ನು ಸೇರಿಕೊಂಡಿದ್ದರು.

ಸ್ವಾಮಿಯ ಸಂತೋಷವನ್ನು ಪರಮೇಶ್ವರ್ ಗಮನಿಸಲಿಲ್ಲ. "ಅನಾಹುತ ನಡೆದುಹೋಗಿದೆ. ಸೂರ್ಯಾರಾವ್ ಪೇಪರ್ ಸ್ಟೇಟ್‌ಮೆಂಟ್ ಕೊಟ್ಟುಬಿಟ್ಟಿದ್ದಾನೆ." ಅಂದ.

ಸ್ವಾಮಿಯ ಹಣೆಯ ಮೇಲೆ ಗೆರೆಗಳು ಸ್ಪಷ್ಟವಾಗಿ ಕಂಡವು.

"ಏನೆಂದು?"

"ರಹಸ್ಯಗಳನ್ನೆಲ್ಲಾ. ವಿದೇಶದ ಬ್ಯಾಂಕುಗಳಲ್ಲಿ ನಮಗೆಷ್ಟು ಹಣ ಇದೆಯೆಂದು, ಗೋಲ್ಡನ್ ಐಲೆಂಡ್‌ನಲ್ಲಿ ನಡೆಯುತ್ತಿರುವ ಕಾರ್ಯಕಲಾಪಗಳನ್ನು, ನಾಳೆಯ ಉಪನ್ಯಾಸದ ಉದ್ದೇಶವೇನು? ಜಪಾನ್‌ನಿಂದ ಬರಲಿರುವ ಹಡಗಿನ ಬಗ್ಗೆ..."

"ಸ್ಟುಪಿಡ್" ಕಿರುಚಿದ ಸ್ವಾಮಿ. "ಇದೆಲ್ಲಾ ಹೇಗೆ ನಡೆಯಿತು? ಸೂರ್ಯಾರಾವ್ ಹೀಗೇಕೆ ಮಾಡಿದ?" ಆವೇಶದಿಂದ ನಡುಗುತ್ತಾ ಕೇಳಿದ ಸ್ವಾಮಿ, ಅವನಿಷ್ಟು ಸಿಟ್ಟಿಗೆದ್ದದ್ದೇ ಅಪರೂಪ. ಪ್ರಳಯ ಕಾಲದ ಯಮನಂತಿದ್ದಾನೆ.

"ಸೂರ್ಯಾರಾವ್ ಸಹಿಮಾಡಲು ಒಂದು ದಿನ ತಡ ಮಾಡಿದ್ದಾನೆ. ಆದ್ದರಿಂದ ನಮಗೆ ಸಿಟ್ಟು ಬಂದಂತೆ ಭ್ರಮೆ ಹುಟ್ಟಿಸಿದ್ದಾನೆ ವಿಹಾರಿ! ನಂತರ ಹುಡುಗಿಯೊಬ್ಬಳ ಸಹಾಯದಿಂದ ಅವನ ಮಂತ್ರಿ ಪದವಿಯನ್ನು ಹೋಗಿಸಿದ್ದಾನೆ. ಆ ಹುಡುಗಿಯನ್ನು ಕಳುಹಿಸಿದ್ದು ನಾವೇ ಎಂಬ ಅನುಮಾನ ಬರುವಂತೆ ಮಾಡಿದ್ದಾನೆ. ಇದರಿಂದ ಸೂರ್ಯಾರಾವ್ ಸಿಟ್ಟಿಗೆದ್ದು ಎಲ್ಲಾ ಹಾಡಿಬಿಟ್ಟಿದ್ದಾನೆ."

"ಈಗ ನಾವೇನು ಮಾಡಬೇಕು?" ಸ್ವಾಮಿಯ ತುಟಿಗಳು ಆವೇಶದಿಂದ ನಡುಗುತ್ತಿದ್ದವು. ಮುಖ ಬಿಳಿಚಿಕೊಂಡಿತ್ತು. ನೀರು ಹಾವು ಎಂದುಕೊಂಡಿದ್ದ ವಿಹಾರಿ ನೋಡುತ್ತಿದ್ದಂತೆಯೇ ಕರಿಗಂಬಳಿಯಲ್ಲಿ ಮಿಡಿನಾಗರವಾಗಿದ್ದಾನೆ. ಅದು ಇರಿಟೇಷನ್. ಪರಮೇಶ್ವರ್ ಯೋಚಿಸುತ್ತಿದ್ದ.

ಬುದ್ಧಿವಂತಿಕೆ. ಏಟಿಗೆ ಎದುರೇಟು-ಇವೆಲ್ಲಾ ಪರಮೇಶ್ವರ್‌ಗೆ ಸಂಬಂಧಿಸಿದ ವಿಭಾಗ.

"ನಾಳೆಯ ಪೇಪರ್‌ನಲ್ಲಿ ಇದೆಲ್ಲಾ ಬರುತ್ತದೆ. ಬರದಂತೆ ಮಾಡಬೇಕು. ಸಾಧ್ಯವಾದರೆ ನಗರದಲ್ಲಿರುವ ಎಲ್ಲಾ ವಾರ್ತಾ ಸಂಸ್ಥೆಗಳ ಮೇಲೆ ಏಕಕಾಲಕ್ಕೆ

ದಾಳಿ ಮಾಡಬೇಕು. ನಮ್ಮದು ಹೇಗೂ ಎರಡು ಪತ್ರಿಕೆಗಳಿವೆ. ನಮ್ಮ ಬಗ್ಗೆ ಯಾವನೋ ಒಬ್ಬ ಮಾಜಿ ಮಂತ್ರಿ ಏನೋ ಹುಚ್ಚುಚ್ಚಾಗಿ ಹೇಳಿದನೆಂದು ಎಲ್ಲರೂ ಹಾಕಲಾರರು. ಸಾಕ್ಷಿ ಕೂಡಾ ಕೊಟ್ಟಿರುತ್ತಾನೆ. ಅದೇನೆಂದು ತಿಳಿದು ಕೊಳ್ಳಬೇಕು. ಅವನ್ನೆಲ್ಲಾ ವಾರ್ತಾ ಸಂಸ್ಥೆಗಳಿಂದ, ಪ್ರೆಸ್‌ಗಳಿಂದ ಹಿಂದಕ್ಕೆ ತರ ಬೇಕು. ಮಾರಣ ಹೋಮ ಮಾಡಿಯಾದರೂ ಸರಿ. ಇದೆಲ್ಲಾ ಈ ರಾತ್ರಿಯೇ ನಡೆದು ತೀರಬೇಕು. ಒಂದೆರಡು ಸಣ್ಣಪುಟ್ಟ ಪೇಪರ್‌ಗಳು ಪ್ರಕಟಿಸಿದರೂ, ದೊಡ್ಡ ಪತ್ರಿಕೆಗಳನ್ನು ಕಂಟ್ರೋಲ್ ಮಾಡಬೇಕು. ಸೂರ್ಯಾರಾವ್‌ನ ಬಾಯಿ ಶಾಶ್ವತವಾಗಿ ಮುಚ್ಚಿಸಬೇಕು.” ಪರಮೇಶ್ವರ್ ಕಣ್ಣುಮುಚ್ಚಿಕೊಂಡು ಹೇಳುತ್ತಿದ್ದ. “ಎಲ್ಲಕ್ಕಿಂತ ಮುಖ್ಯವಾಗಿ ಪ್ರಜೆಗಳಲ್ಲಿ ಚೆನ್ನಾಗಿ ನಂಬಿಕೆ ಹುಟ್ಟಿಸಬೇಕು. ಇದ ಕ್ಕಾಗಿ ಸಾಧ್ಯವಾದರೆ ವಿಜಯದಶಮಿಯ ದಿನ ಪ್ರಜೆಗಳ ಮುಂದೆ ನೀವು ಅಗ್ನಿ ಪ್ರವೇಶವನ್ನು ಮಾಡಬೇಕು.”

“ಅಗ್ನಿಪ್ರವೇಶವಾ?”

“ನಮ್ಮ ಜಾತಿಗೆ, ನಮ್ಮ ಮತಕ್ಕೆ ನಡೆಯುತ್ತಿರುವ ಅನ್ಯಾಯವನ್ನು ವಿರೋಧಿಸಿ ನೀವು ಅಂದು ಅಗ್ನಿಪ್ರವೇಶಮಾಡಿ, ಅಗ್ನಿಯಲ್ಲಿ ಸ್ನಾನಮಾಡಿ ಹೊರ ಬರುತ್ತೀರಿ. ತುಂಬಾ ಸಿಂಪಲ್ಲಾಗಿ ಯಜ್ಞ ವೇದಿಕೆಯ ಮೇಲೆ ವಿಶಾಲವಾದ ಉರಿಯನ್ನು ಏರ್ಪಾಟುಮಾಡಿ, ಮಧ್ಯದಲ್ಲಿ ಕೃತ್ರಿಮವಾದ ರೆಡ್‌ಫ್ಲ್ಯಾಮ್ ಸೃಷ್ಟಿಸಿ ನೀವು ಒಂದೆರಡು ನಿಮಿಷ ಅದರ ನಡುವೆ ಇದ್ದು ಬರಬಹುದು. ನೋಡುತ್ತಿರುವ ಭಕ್ತಕೋಟಿಗೆ ನೀವು ನಿಜವಾಗಿಯೂ ಬೆಂಕಿಯೊಳಗೆ ಪ್ರವೇಶಿಸಿ ಬಂದಂತೆಯೇ ಭ್ರಮೆ ಉಂಟಾಗುತ್ತದೆ. ಕೆಳಗಿನಿಂದ ಅದರ ವ್ಯವಸ್ಥೆಯನ್ನು ನಾನು ಮಾಡಿಸುತ್ತೇನೆ. ಆದರಿಂದ ದೇಶದಲ್ಲೆಲ್ಲ ನಿಮ್ಮ ಖ್ಯಾತಿ ಮತ್ತಷ್ಟು ಹೆಚ್ಚಾಗುತ್ತದೆ. ನೀವೊಬ್ಬ ದಿವ್ಯ ಪುರುಷರಾಗಿ ಅವತಾರ ಎತ್ತುತ್ತೀರಿ. ಮಿಲಿ ಟರಿಯನ್ನು ನಿಮ್ಮ ಕೈಯ್ಯಲ್ಲಿ ತೆಗೆದುಕೊಳ್ಳಲು ಈ ಉಪಾಯ ಸಹಾಯ ಮಾಡುತ್ತದೆ.”

ಸ್ವಾಮಿ ಸಂತೃಪ್ತಿಹೊಂದಿದ. “ಗುಡ್. ಈ ವ್ಯವಸ್ಥೆಗಳೆಲ್ಲ ನಿನ್ನ ಜವಾಬ್ದಾರಿ” ಎಂದು ಮೇಲೆದ್ದ.

“ನಾನೀಗಲೇ ಆಸ್ಪತ್ರೆಗೆ ನಮ್ಮ ಜನರನ್ನು ಪತ್ರಿಕಾ ಪ್ರತಿನಿಧಿಗಳಂತೆ ಕಳಿ ಸುತ್ತೇನೆ, ಇನ್ನೊಂದು ಗಂಟೆಯಲ್ಲಿ ಪತ್ರಿಕಾ ಸಮಾವೇಶವಿದೆ. ಸೂರ್ಯಾರಾವ್ ಪತ್ರಕರ್ತರನ್ನು ಆಹ್ವಾನಿಸಿದ್ದಾನೆ.”

“ರಾಮಲಾಲ್ ಎಲ್ಲಿದ್ದಾನೆ? ಇಂತಹ ಸಮಯದಲ್ಲಿ ಮಾಯ ವಾದನಲ್ಲಾ ?”

"ಎರಡು ದಿನಗಳಿಂದ ಮನೆಗೇ ಬಂದಿಲ್ಲವಂತೆ."

"ಈ ಗಲಭೆಗಳ ನಡುವೆ ನಿನ್ನ ಮಗ ಪ್ರಾಣ ಕಳೆದುಕೊಳ್ಳದಂತೆ ನೋಡಿಕೋ. ನನಗೆ ಅವನು ಪ್ರಾಣ ಸಹಿತ ಬೇಕು, ಅವನು ಸಾಮಾನ್ಯವಾಗಿ ಸಾಯುವುದು ನನಗಿಷ್ಟವಿಲ್ಲ."

ಪರಮೇಶ್ವರ್ ತಲೆ ಆಡಿಸಿ ಅಲ್ಲಿಂದ ಹೊರಡಲು ಸಿದ್ಧನಾದ.

"ಅಂದಹಾಗೆ ಇದು ಹೇಗೆ ನಡೆಯಿತು?" ಹಠಾತ್ತನೆ ಸ್ವಾಮಿ ಕೇಳಿದ. ಪರಮೇಶ್ವರ್ ನಿಂತ.

"ಸೂರ್ಯಾರಾವ್‌ಗೆ ಕೇವಲ ನಮ್ಮ ಆರ್ಥಿಕ ವ್ಯವಸ್ಥೆಯ ಬಗ್ಗೆ ಮಾತ್ರ ಗೊತ್ತು. ಟೆರ್ರರಿಸಂ ಬಗ್ಗೆ ಇಷ್ಟು ವಿವರಗಳು ಗೊತ್ತಿಲ್ಲ" ಎಂದು. ಪರಮೇಶ್ವರ್ ಕಡೆ ನೋಡಿದ. ಅವನಿಗೆ ಗೋಲ್ಡನ್‌ಬೀಚ್ ಬಗ್ಗೆ ವಿವರಗಳು ತಿಳಿದಿರಲಿಲ್ಲ. ಇಷ್ಟೆಲ್ಲಾ ಹೊರಬೀಳಬೇಕೆಂದರೆ ತಮ್ಮಲ್ಲಿಯ ಅತಿಮುಖ್ಯವಾದ ವ್ಯಕ್ತಿಯೊಬ್ಬ ರಹಸ್ಯಗಳನ್ನೆಲ್ಲಾ ಹೊರಗೆಡಹುತ್ತಿದ್ದಾನೆ.

ಅವನು ಯಾರು?...ಯಾರು?

* * * * *

ರಾತ್ರಿ ಹನ್ನೊಂದು ಗಂಟೆಯಾಯಿತು. ರಾಮಲಾಲ್ ನಿದ್ರಿಸಲಿಲ್ಲ. ಅವನಿಗೆ ಹೆಂಡತಿ ಮಕ್ಕಳು ಕೂಡಾ ನೆನಪಾಗುತ್ತಿಲ್ಲ. ಆ ಬಿಸಿ ತಗ್ಗಿಹೋಗಿದೆ. ತನ್ನ ಪ್ರಾಣದ ಬಗ್ಗೆ ಹೆಚ್ಚು ಯೋಚನೆ ಪ್ರಾರಂಭವಾಯಿತು. ಒಂದು ಕಾಲದಲ್ಲಿ ಪ್ರಪಂಚವೆಲ್ಲಾ ಎದುರಾದರೂ ಭಯಪಡುತ್ತಿರಲಿಲ್ಲ ಅವನು. ಆದರೆ ಈಗಿನ ಪರಿಸ್ಥಿತಿಯೇ ಬೇರೆ. ಕದಲುವುದಕ್ಕೂ ಸಾಧ್ಯವಿಲ್ಲ.

ಆಪರೇಷನ್ ಪೋಸ್ಟ್‌ಪೋನ್ ಆಯಿತು. ಈ ಟೆನ್ಷನ್‌ನಲ್ಲಿ ಆಪರೇಷನ್ ಬೇಡವೆಂದು ಡಾಕ್ಟರ್ ಕೃಷ್ಣಮೂರ್ತಿ ಹೇಳಿದರು. ಶವಾಗಾರದಲ್ಲಿ ಹೆಂಡತಿ, ಮಕ್ಕಳು ಹಾಗೆಯೇ ಇದ್ದರು–ಹೆಣಗಳಾಗಿ.

ಇನ್ನೊಂದು ಮೂರು ದಿನಗಳಲ್ಲಿ ಸ್ವಾಮಿ ನಿರ್ವೀರ್ಯನಾಗುತ್ತಾನೆಂದೂ, ಆನಂತರ ಭಯವಿರುವುದಿಲ್ಲವೆಂದೂ ವಿಹಾರಿ ಹೇಳಿದ್ದ. ಕೆಲದಿನಗಳ ಕಾಲ ಅಜ್ಞಾತವಾಸ ತಪ್ಪುವುದಿಲ್ಲವೆಂದೂ ಹೇಳಿದ್ದ. ಆದರೆ ಸ್ವಾಮಿ ಎಷ್ಟು ಪವರ್‌ಫುಲ್ ಮನುಷ್ಯನೆಂದು ರಾಮಲಾಲ್‌ಗೆ ಗೊತ್ತು. ವಿಹಾರಿಯಂತಹವನು ಅವನನ್ನು ಎದುರಿಸಲಾರ.

ಆಪರೇಷನ್ ಆದಕೂಡಲೇ ಎಚ್ಚರಿಕೆಯಿಂದ ತನ್ನ ಹಣ ತೆಗೆದುಕೊಂಡು

ಯಾವುದಾದರೂ ವಿದೇಶಕ್ಕೆ ಓಡಿಹೋಗಬೇಕು. ವಿಹಾರಿ ಹೇಳಿದ್ದರಲ್ಲಿ ಸ್ವಲ್ಪ ಮಟ್ಟಿಗೆ ನಿಜಾಂಶವಿತ್ತು. ತನಗೆ ತುಂಬಾ ರಹಸ್ಯಗಳು ಗೊತ್ತೆಂದು ಅವರಿಗೆ ತಿಳಿದಿದೆ, ಬದುಕಲು ಬಿಡುವುದಿಲ್ಲ. ಅಷ್ಟರಲ್ಲೇನಾದರೂ ವಿಹಾರಿ ಹೇಳಿದಂತೆ ಸ್ವಾಮಿಯ ಪತನವಾದರೆ ತೊಂದರೆಯೇ ಇಲ್ಲ. ಅದೃಷ್ಟವಶಾತ್ ತನ್ನ ಬಳಿ ಜೀವಿತಾಂತ ಯಾವ ಕಷ್ಟವೂ ಇಲ್ಲದೆ ಬದುಕಬಲ್ಲಷ್ಟು ಹಣವಿದೆ.

ಯೋಚಿಸುತ್ತಲೇ ಕಣ್ಣುಮುಚ್ಚಿದ.

ಹನ್ನೆರಡಾಗಿತ್ತು, ದೂರದಲ್ಲಿ ಗಡಿಯಾರ ಗಂಟೆ ಹೊಡೆಯುತ್ತಿದ್ದಂತೆಯೇ ಬಾಗಿಲ ಬಳಿ ಸದ್ದಾಯಿತು.

ರಾಮಲಾಲ್ ಕಿವಿಗಳು ನೆಟ್ಟಗಾದವು.

ಮತ್ತೆ ಸದ್ದಾಯಿತು.

ಅವನ ಹೃದಯ ಬಡಿತ ಜೋರಾಗಿ ಬಡಿದುಕೊಳ್ಳಲಾರಂಭಿಸಿತು. ಚಕ್ಕನೆ ಎದ್ದು ಕುಳಿತ.

ತಾನಿಲ್ಲಿ ಆಸ್ಪತ್ರೆಯಲ್ಲಿರುವ ವಿಷಯವನ್ನು ತುಂಬಾ ರಹಸ್ಯವಾಗಿರಿಸುತ್ತೇನೆಂದು ಹೇಳಿದ್ದ ವಿಹಾರಿ. ಅದು ಸಾಧ್ಯವಾಗದ ಮಾತು. ಸ್ವಾಮಿ ಹೇಗೋ ಹಿಡಿದುಬಿಡುತ್ತಾನೆ.

ಬಟ್ಟೆಗಳನ್ನು ತರುವ ಟ್ರಾಲಿಯಲ್ಲಿ ತಾನೊಂದು ಸಲ ಸೇರಿಕೊಂಡು ರೋಗಿಯೊಬ್ಬನನ್ನು ಇಂತಹುದೇ ಆಸ್ಪತ್ರೆಯಲ್ಲಿ ಸಾಯಿಸಿದ್ದ. ಈಗ ತನ್ನನ್ನು ಕೊಲ್ಲಲು ಯಾರು ಬರುತ್ತಾರೋ?

ಹೊರಗೆ ಏನೋ ಎಳೆದ ಶಬ್ದ.

ಡ್ಯೂಟಿ ನರ್ಸ್ ಎಲ್ಲಿದ್ದಾಳೋ ಗೊತ್ತಿಲ್ಲ. ಅವನ ಮುಖದಿಂದ ಇಳಿದ ಬೆವರು ಧಾರಾಕಾರವಾಗಿ ಸುರಿಯುತ್ತಿತ್ತು, ಮೃತ್ಯು ಬಾಗಿಲ ಬಳಿ ಬಂದು ನಿಂತಂತಿತ್ತು. ಅವನಿಗೇನು ಮಾಡಬೇಕೆಂದೇ ತೋಚಲಿಲ್ಲ. ಅಷ್ಟರಲ್ಲಿ ಶಬ್ದ ಮತ್ತಷ್ಟು ಹೆಚ್ಚಾಯಿತು. ಮತ್ತಷ್ಟು ಹತ್ತಿರ ಬಂದಂತಾಯಿತು.

ಅವನು ಎದ್ದು ನಿಂತ. ಪಕ್ಕದ ಟೇಬಲ್ಲಿನ ಮೇಲಿದ್ದ ನೀರಿನ ಬಾಟಲನ್ನು ಕೈಗೆ ತೆಗೆದುಕೊಂಡ. ಶಬ್ದವಾಗದಂತೆ ಬಾಗಿಲವರೆಗೂ ಬಂದು ಹೊರಗೆ ತಲೆ ಹಾಕಿ ನೋಡಿದ. ವರಾಂಡ ಖಾಲಿಯಾಗಿತ್ತು. ದೂರದಲ್ಲಿ ನರ್ಸೊಬ್ಬಳು ನಿದ್ರಿಸುತ್ತಿದ್ದಳು, ಮತ್ತೆ ಏನನ್ನೊ ಎಳೆಯುತ್ತಿರುವ ಶಬ್ದ. ಅವನು ಕೆಳಗೆ ನೋಡಿದ. ಇಲಿಯೊಂದು ಮಂಚದ ಬಳಿ ಬಿದ್ದಿದ್ದ ಬ್ರೆಡ್ ಪ್ಯಾಕೆಟ್ಟನ್ನು ಎಳೆದೊಯ್ಯುತ್ತಿತ್ತು. ಹೆದರಿ ಓಡಿತು. ಒಂದು ಸಲ ಜೋರಾಗಿ ನಿಟ್ಟುಸಿರುಬಿಟ್ಟು ಮುಖ ಒರೆಸಿಕೊಳ್ಳುತ್ತಾ ತನ್ನ ಭಯಕ್ಕೆ ತಾನೇ ನಕ್ಕುಬಿಟ್ಟ. ಕೂಡಲೇ ಏನೋ ಹೊಳೆದಂತೆ

ಸ್ತಬ್ಧನಾದ.

ತಾನಾಗೇ ನಡೆದು ಬಂದಿದ್ದ ತಾ . ನು...ನ...ಡೆ...ದು...ಬಂದಿದ್ದ, ಕೂಡಲೇ ತನ್ನ ಕಾಲಿನ ಕಡೆ ನೋಡಿಕೊಂಡ.

ಬ್ಯಾಂಡೇಜು ಹಾಗೆಯೇ ಇದೆ. ಒಬ್ಬ ಉಕ್ಕು ಮನುಷ್ಯ ಸಿನಿಮಾದಲ್ಲಿ ನಿಂತಂತಿದ್ದ. ಅವನು ತನ್ನ ಕಾಲುಗಳೆರಡನ್ನೂ ನೆಲಕ್ಕೆ ಜಾಡಿಸಿ ಒದ್ದ. ಸ್ವಲ್ಪ ನೋವಾದರೂ ಕಾಲುಗಳು ಸ್ವಾಧೀನದಲ್ಲಿದ್ದವು, ಹೋಗಿ ಮಂಚದ ಮೇಲೆ ಕುಳಿತು ಪಾದಗಳನ್ನು ಸ್ಪರ್ಶಿಸಿದ. ಸ್ಪರ್ಶ ತಿಳಿಯುತ್ತಿತ್ತು.

ಒಂದು ನಿರ್ಧಾರಕ್ಕೆ ಬಂದವನಂತೆ ಅವನು ಕಾಲುಗಳನ್ನು ಹಾಸಿಗೆಯ ಮೇಲೆ ಚಾಚಿಕೊಂಡು ಬ್ಯಾಂಡೇಜನ್ನು ಬಿಚ್ಚಲು ಪ್ರಾರಂಭಿಸಿದ. ಐದು ನಿಮಿಷ ಗಳ ನಂತರ ಸಂಪೂರ್ಣ ಬಿಚ್ಚಿದ, ಕಾಲುಗಳು ಯಥಾರೀತಿ ಇದ್ದವು.

ಕಾರು ಹತ್ತಿದ ಕಡೆ ಕೆಂಪಗೆ ಕಂದಿತ್ತು. ಫ್ರಾಕ್ಚರ್ ಕೂಡಾ ಆಗಿರಲಿಲ್ಲ. ಮಾರುತಿ ಕಾರು...ಆದರೂ ಭಯದಿಂದ ಎಚ್ಚರತಪ್ಪಿತ್ತು. ಹಿಂದೆ ಬಂದಿದ್ದ ಪ್ರವಲ್ಲಿಕ ಕ್ಲೋರೋಫಾರಂ ನಿಂದ...

ಅವನು ಇನ್ನು ಹೆಚ್ಚು ಯೋಚಿಸುತ್ತಾ ಕುಳಿತುಕೊಳ್ಳಲಿಲ್ಲ.

ಕೋಣೆಯಿಂದ ಹೊರಬಂದು ವರಾಂಡದಲ್ಲಿ ಶಬ್ದವಾಗದಂತೆ ನಡೆದು ಹೊರಬಿದ್ದ. ಆಸ್ಪತ್ರೆಯೆಲ್ಲಾ ನಿದ್ರೆಯಲ್ಲಿತ್ತು. ದೂರದಲ್ಲಿ ಬಿಸಾಡಿದಂತೆ ಬ್ಲಾಕುಗಳಿದ್ದವು.

ಐದು ನಿಮಿಷಗಳಲ್ಲೇ ಮನೆ ಸೇರಿಕೊಂಡ. ಅಲ್ಲಿ ಜೀಪಿತ್ತು. ಕೂಡಲೇ ಸ್ವಾಮಿಯ ಬಳಿಗೆ ಹೋಗಬೇಕೆಂದುಕೊಂಡ. ಹೊರಟು ಹೋಗಿತ್ತೆಂದುಕೊಂಡಿದ್ದ ಕಾಲುಗಳು ಮತ್ತೆ ಬಂದದ್ದರಿಂದ ಅವನ ಎದೆಯ ತುಂಬಾ ಸಂತೋಷ ತುಂಬಿತ್ತು. ತನ್ನಿಂದ ರಹಸ್ಯಗಳನ್ನು ಪಡೆದ ನಂತರ ವಿಹಾರಿ ತನ್ನ ಕಾಲಿನ ಬಗ್ಗೆ ಯೋಚಿಸಲಿಲ್ಲವೆಂದುಕೊಂಡ. ತನ್ನವರನ್ನು ಕಾಣಲು ಆತುರಪಡುತ್ತಿದ್ದ.

ಮನೆಗೆ ಬೀಗ ಹಾಕಿರಲಿಲ್ಲ.

ತನ್ನ ಮನೆಯಲ್ಲಿ ಇಂತಹ ಅರ್ಧರಾತ್ರಿಯಲ್ಲಿ ಯಾರಿದ್ದಾರಪ್ಪಾ ಎಂದು ಕೊಂಡು ಬಾಗಿಲು ಬಡಿದ.

ಅವನ ಹೆಂಡತಿ ಬಾಗಿಲು ತೆರೆದಳು.

* * * *

ತಾನು ಮಾಡುತ್ತಿರುವ ಎಲ್ಲಾ ಕೆಲಸಗಳೂ ಸ್ವಾಮಿಗೆ ತಿಳಿಯುತ್ತಿದೆಯೆಂದು ವಿಹಾರಿಗೆ ಗೊತ್ತು. ಅದರಲ್ಲಿಯೂ ಸೂರ್ಯಾರಾವ್‌ನಂತಹ ಮಂತ್ರಿ, ಪತ್ರಿಕೆಗಳಿಗೆ ಹೇಳಿಕೆ ನೀಡುವುದು ಸ್ವಾಮಿಗೆ ಕ್ಷಣದಲ್ಲಿಯೇ ತಿಳಿದುಬಿಟ್ಟಿರುತ್ತದೆ.

ಪತ್ರಕರ್ತನ ರೂಪದಲ್ಲಿ ಟೆರ್ರರಿಸ್ಟ್ ಒಬ್ಬ ಬಂದು ಸಮಾವೇಶದ ನಡುವೆ ಕುಳಿತು ಸೂರ್ಯಾರಾವ್‌ನನ್ನು ಗುಂಡಿಕ್ಕಿ ಕೊಂದರೂ ಆಶ್ಚರ್ಯವಿಲ್ಲ. ಆದ್ದರಿಂದಲೇ ಸೂರ್ಯಾರಾವ್ ಪತ್ರಿಗಳಿಗೆ ಕೊಡುವ ಹೇಳಿಕೆಗಳನ್ನು ಎರಡು ಬೇರೆ ಬೇರೆ 'ಸೆಟ್'ಗಳಾಗಿ ಮಾಡಿದ್ದ. ಒಂದರಲ್ಲಿ ಕೇವಲ ಆರೋಪಣೆಗಳೇ ಇದ್ದವು. ಅದನ್ನು ಪತ್ರಕರ್ತರಿಗೆ ಬಿಡುಗಡೆ ಮಾಡಿದ.

ವಿಹಾರಿ ಊಹಿಸಿದಂತೆಯೇ ಕೆಲವೇ ಕ್ಷಣಗಳಲ್ಲಿ ಆ ಸೆಟ್ಟು ಪರಮೇಶ್ವರ್‌ಗೆ ಸೇರಿತು. ಅದರಲ್ಲಿ ಅಪಾಯಕರ ವಿಷಯಗಳಾವುವೂ ಇರಲಿಲ್ಲ. ಪರಮೇಶ್ವರ್ ಎಚ್ಚರಿಕೆಯಿಂದ ಅದನ್ನು ಪರಿಶೀಲಿಸಿದ.

ಆ ಆಪಾದನೆಗಳು ಪೇಪರ್‌ನಲ್ಲಿ ಬಂದರೂ ಯಾವ ತೊಂದರೆಯೂ ಇಲ್ಲವೆಂದು ನಿರ್ಧರಿಸಿದ. ಸೂರ್ಯಾರಾವ್ ಇಂತಹ ಹಗುರವಾದ ಹೇಳಿಕೆ ನೀಡುತ್ತಿರುವುದಕ್ಕೆ ಕಾರಣವನ್ನು ಅವನು ಊಹಿಸಿದ್ದ. ಸ್ವಾಮಿಯ ಹೀನ ಚರಿತ್ರೆಯಲ್ಲಿ ಸೂರ್ಯಾರಾವ್‌ಗೂ ಅರ್ಧ ಭಾಗವಿತ್ತು. ಸ್ವಾಮಿಯ ರಹಸ್ಯಗಳನ್ನು ಹೊರಗೆಡಹಿದರೆ ಸೂರ್ಯಾರಾವ್ ಚರಿತ್ರೆ ಕೂಡಾ ಮುಗಿಯುತ್ತದೆ, ಹಾಗಾಗಿ ಸೂರ್ಯಾರಾವ್ ಭಯಪಟ್ಟಿದ್ದಾನೆಂದು ಊಹಿಸಿದ. ಕೇವಲ ಒಂದು ಕಲ್ಲನ್ನು ಬೀಸಿ ನೋಡೋಣ. ತಗುಲಿದರೆ ತಗುಲುತ್ತದೆಂದು ಸೂರ್ಯಾರಾವ್ ಈ ರೀತಿ ಪೇಪರ್ ಸ್ಟೇಟ್‌ಮೆಂಟ್ ಕೊಟ್ಟಿರುತ್ತಾನೆಂದೂ ತನಗೆ ತೊಂದರೆಯಾಗುವಂತಹ ಹೇಳಿಕೆ ನೀಡುವುದಿಲ್ಲವೆಂದು ಅವನು ಭಾವಿಸಿದ.

ಸೂರ್ಯಾರಾವ್‌ನಂತಹವರು ತಾವು ಜಾರಿದರೆ ಜೊತೆಯಲ್ಲಿರುವವರನ್ನೂ ಕೆಳಗೆ ಎಳೆದೊಯ್ಯುತ್ತಾರೆಂಬ ವಿಷಯವನ್ನು ಅವನು ಊಹಿಸಲಿಲ್ಲ. ಸಮಾವೇಶದಲ್ಲಿ ಮೊದಲ ಹೇಳಿಕೆಯನ್ನು ಪತ್ರಕರ್ತರಿಗೆ ಕೊಟ್ಟ ನಂತರ, ವಿಹಾರಿ ಮುಖ್ಯವಾದ ಪತ್ರಿಕೆಗಳ ಪ್ರಧಾನ ಸಂಪಾದಕರನ್ನು ಮುಖತಃ ಭೇಟಿಮಾಡಿ ಎರಡನೆ ಹೇಳಿಕೆಯನ್ನು ಸಾಕ್ಷಿಗಳೊಡನೆ ಕೊಟ್ಟ.

ಪ್ರಸಾರವಾಗುವವರೆಗೂ ಅತ್ಯಂತ ರಹಸ್ಯವಾಗಿರಬೇಕೆಂದೂ ಈ ದಶಕದ ಅತ್ಯಂತ ಸೆನ್ಸೇಷನಲ್ ಸುದ್ದಿಯೆಂದು ಅವರಿಗೆ ಎಚ್ಚರಿಕೆ ನೀಡಿದ್ದ. ಪರಮೇಶ್ವರ್‌ಗೆ ಈ ವಿಷಯ ತಿಳಿಯದೆ, ಅದನ್ನು ಮರೆತುಬಿಟ್ಟ. ಎಂತಹ ಮೇಧಾವಿಯಾದರೂ ಎಲ್ಲೋ ಒಂದು ಕಡೆ ತಪ್ಪು ಮಾಡುತ್ತಾನೆ.

# 21

ರಾಮಲಾಲ್ ತನ್ನ ಕಣ್ಣನ್ನು ತಾನೇ ನಂಬಲಾರದೆ ಹೋದ.

ಅವನಿಗೆ ಕ್ರಮೇಣ ನಡೆದದ್ದೆಲ್ಲಾ ಅರ್ಥವಾಯಿತು. ಆದರೆ ಒಂದು ಅನುಮಾನ ಮಾತ್ರ ಉಳಿಯಿತು.

"ನಿನ್ನೆ ಸಂಜೆ ನೀವೆಲ್ಲಿದ್ದಿರಿ?" ಎಂದು ಕೇಳಿದ ಹೆಂಡತಿಯನ್ನು.

ಊಟ ಮಾಡುತ್ತಿದ್ದಂತೆಯೇ ಎಲ್ಲರಿಗೂ ಮತ್ತು ಆವರಿಸಿತೆಂದೂ—ಎಚ್ಚರವಾದಾಗ ಸಂಜೆಯಾಗಿತ್ತೆಂದೂ ಹೇಳಿದಳು.

ಆದರಿಂದ ಅವನಿಗೆ ಸಂಪೂರ್ಣ ಅರ್ಥವಾಯ್ತು.

ವಿಹಾರಿ, ಪ್ರವಲ್ಲಿಕರು ಸೇರಿ ಎಂತಹ ಅದ್ಭುತವಾದ ಉಪಾಯ ಹೂಡಿದ್ದರು ಎಂದು ಆಶ್ಚರ್ಯಪಟ್ಟ.

ಎಚ್ಚರತಪ್ಪಿದ ಹೆಂಡತಿ ಮಕ್ಕಳನ್ನು ಆಸ್ಪತ್ರೆಗೆ ತಂದು ಮೇಲೆ ಕೆಂಪು ಬಣ್ಣ ಬಳಿದು ಶವಗಳಂತೆ ತೋರಿಸಿದ್ದಾರೆ. ತನ್ನ ಕಾಲಿಗೆ ಬ್ಯಾಂಡೇಜ್ ಕಟ್ಟಿ ತಾನೆಂದಿಗೂ ಉಪಯೋಗಕ್ಕೆ ಬರದ ಫೀಲಿಂಗ್ ಉಂಟುಮಾಡಿದ್ದರು. ಆ ಭ್ರಮೆಯಲ್ಲಿ ತಾನು ಎಲ್ಲ ರಹಸ್ಯಗಳನ್ನೂ ಹೇಳಿಬಿಟ್ಟಿದ್ದ.

ಈಗೇನು ಮಾಡಬೇಕು?

ಶತ್ರುಗಳಿಗೆ ತನ್ನ ಮೂಲಕವೇ ರಹಸ್ಯಗಳೆಲ್ಲ ತಿಳಿದಿದೆಯೆಂದು ಅನಂತಾನಂತಸ್ವಾಮಿಗೆ ಹೇಗೂ ತಿಳಿಯುತ್ತದೆ, ಈಗ ಎರಡೇ ದಾರಿ.

ಹೆಂಡತಿ ಮಕ್ಕಳೊಡನೆ ಅಂಡರ್‌ಗ್ರೌಂಡ್‌ಗೆ ಹೊರಟು ಹೋಗುವುದು; ಇಲ್ಲವೇ ಸ್ವಾಮಿಯ ಬಳಿ ಹೋಗಿ ಏನಾದರೂ ಸಮಾಧಾನಕರದಿಂದ ಹೇಳುವುದು. ಎರಡನೆಯದೇ ಸರಿಯೆಂಬ ಅಭಿಪ್ರಾಯಕ್ಕೆ ಬಂದ ರಾಮಲಾಲ್. ನಾಳೆ ಹೇಗೂ ಈ ದೇಶದ ಅಧಿಪತಿಯಾಗುತ್ತಾನೆ ಸ್ವಾಮಿ. ಆಗ ತಾನೆಲ್ಲಿ ಬಚ್ಚಿಟ್ಟುಕೊಂಡರೂ ಹುಡುಕಿಸುತ್ತಾನೆ. ಹೀಗೆ ಓಡಿಹೋಗುವುದರಿಂದ ಅನವಶ್ಯಕವಾಗಿ ಅನುಮಾನಗಳನ್ನು ಹೆಚ್ಚುಮಾಡಿಕೊಂಡಂತಾಗುತ್ತದೆ. ನಡೆದದ್ದನ್ನು ಸ್ವಲ್ಪ ಬದಲಾಯಿಸಿ ಹೇಳಿದರೆ ಆಯಿತು.

ರಾಮಲಾಲ್ ಆಶ್ರಮಕ್ಕೆ ಹೊರಟ. ಎಷ್ಟೇ ರಾತ್ರಿಯಾದರೂ ಸ್ವಾಮಿಯ ಅಂತಃಪುರದೊಳಗೆ ಅವನಿಗೆ ಪ್ರವೇಶವಿತ್ತು. ಅವನು ಅಲ್ಲಿಗೆ ಹೋಗುವ ವೇಳೆಗೆ

ಸ್ವಾಮಿ ಪರಮೇಶ್ವರನೊಡನೆ ಸಮಾಲೋಚಿಸುತ್ತಿದ್ದ. ಮಾರನೆ ದಿನವೇ ವಿಜಯದಶಮಿ.

"ನಾಳೆ ಪೇಪರ್‌ಗಳಲ್ಲಿ ಬರಲಿರುವ ಸುದ್ದಿ ಇದು. ಇದರಿಂದ ನಮಗೇನೂ ತೊಂದರೆಯಿಲ್ಲವೆನ್ನಿಸುತ್ತೆ" ಎನ್ನುತ್ತಾ ಪರಮೇಶ್ವರ್ ಒಂದು ಪ್ರತಿಯನ್ನು ಕೊಟ್ಟ. ಸ್ವಾಮಿ ಅದನ್ನು ನೋಡಿ, "ಇದೇ ಆದರೆ ಇದರ ಬಗ್ಗೆ ನಾವು ಆತಂಕ ಪಡಬೇಕಾಗಿಲ್ಲ. ಸ್ವಲ್ಪ ಹೆಚ್ಚು ನಿಂದನೆಯಿದೆಯಾಗಲೀ, ಇಷ್ಟಕ್ಕೆ ಪತ್ರಿಕಾಲಯ ಗಳ ಮೇಲೆ ದಾಳಿ ಮಾಡಬೇಕಾದ ಅವಶ್ಯಕತೆಯಿಲ್ಲ."

"ನನಗೂ ಹಾಗೆಯೇ ಅನಿಸುತ್ತಿದೆ" ಪರಮೇಶ್ವರ್ ಹೇಳಿದ.

ಇವರು ಈ ರೀತಿ ಮಾತನಾಡಿಕೊಳ್ಳುತ್ತಿದ್ದ ಸಮಯದಲ್ಲಿ ರಾಮಲಾಲ್ ಒಳಗೆ ಪ್ರವೇಶಿಸಿದ.

"ಇಷ್ಟು ದಿನ ಎಲ್ಲಿ ಹೋಗಿದ್ದಿ ರಾಮಲಾಲ್?"

ನಡೆದದ್ದನ್ನೆಲ್ಲಾ ವಿವರಿಸಿದ ರಾಮಲಾಲ್. ಆದರೆ ತಾನು ಕೆಲವು ರಹಸ್ಯ ಗಳನ್ನು ಹೇಳಿಬಿಟ್ಟ ಬಗ್ಗೆ ತಿಳಿಸಲಿಲ್ಲ ರಾಮಲಾಲ್. ತಪ್ಪಿಸಿಕೊಂಡು ಬಂದು ದಾಗಿ ತಿಳಿಸಿದ.

"ನಾನು ನಿನ್ನ ಮನೆಗೆ ಜನರನ್ನು ಕಳುಹಿಸಿದ್ದೆ. ನಿನ್ನ ಹೆಂಡತಿ ಮಕ್ಕಳು ವಿಷಾಹಾರ ಸೇವಿಸಿದಂತೆ ಅವರು ಯಾವುದೋ ಆಸ್ಪತ್ರೆಗೆ ಸೇರಿದಂತೆ ಕೇಳಿದೆ?" ರಾಮಲಾಲ್‌ನ ಮುಖ ವಿವರ್ಣವಾಯಿತು. ಆ ವಿಷಯವನ್ನು ಹೇಳಬೇಕೋ ಬೇಡವೋ ಎಂದು ಚಿಂತಿಸಿದ. ಹೇಳದಿರುವುದೇ ಉತ್ತಮ. ಹೇಳಿದರೆ ತಾನು ಮತ್ತೆ ಮೂರ್ಖನಾದಂತೆ ಆಗುತ್ತದೆ.

"ಹೌದು...ಆಸ್ಪತ್ರೆಯಲ್ಲಿ ಸೇರಿಸಿದ್ದರಂತೆ. ಈಗೆಲ್ಲಾ ಸರಿಹೋಗಿದೆ. ಮನೆಗೆ ಬಂದಿದ್ದಾರೆ" ಎಂದು ಹೇಳಿದ.

ಸ್ವಾಮಿ ನ್ಯೂಸ್ ಪೇಪರನ್ನು ಅವನ ಮುಂದೆ ತಳ್ಳುತ್ತಾ, "ಈ ಪ್ರಕಟಣೆ ಏನು?" ಎಂದು ಕೇಳಿದ.

"ಹನ್ನೆರಡು ಗಂಟೆಯವರೆಗೆ ನೋಡಿ ಟಿಕೆಟ್ ಬುಕ್ ಮಾಡುತ್ತೇವೆ" ಎಂಬ ಪ್ರಕಟಣೆ ಅದು. ರಾಮಲಾಲ್ ಇಕ್ಕಟ್ಟಿನಲ್ಲಿ ಸಿಕ್ಕಿಹಾಕಿಕೊಂಡ. ಒಂದು ಸುಳ್ಳನ್ನು ಮುಚ್ಚಲು ಇನ್ನೊಂದು ಸುಳ್ಳು.

"ನಂಗೆ ಗೊತ್ತಿಲ್ಲ" ಎಂದ ಮುಖದಲ್ಲಿಯ ಭಾವನೆಗಳನ್ನು ಮುಚ್ಚಿ ಕೊಳ್ಳುವ ಪ್ರಯತ್ನ ಮಾಡುತ್ತಾ.

ಅಷ್ಟರಲ್ಲಿ ಹೊರಗೆ ಪೊಲೀಸ್ ಸೈರನ್ ಕೇಳಿಸಿತು. ಮೂವರೂ ಮುಖ ಮುಖ ನೋಡಿಕೊಂಡರು.

ಎರಡು ನಿಮಿಷಗಳ ನಂತರ ಪೊಲೀಸ್ ಛೀಫ್ ಒಳಗೆ ಬಂದ. "ಅರ್ಧ ರಾತ್ರಿಯ ವೇಳೆ ನಿಮ್ಮನ್ನು ತೊಂದರೆ ಮಾಡುತ್ತಿರುವುದಕ್ಕಾಗಿ ಕ್ಷಮಿಸಿ, ಸ್ವಾಮಿ, ರಾಮಲಾಲ್‌ನನ್ನು ಬಂಧಿಸಲು ಬಂದಿದ್ದೇನೆ."

"ಯಾವ ಅಪರಾಧದ ಮೇಲೆ?" ಮುಖ ಸಿಂಡರಿಸಿ ಪರಮೇಶ್ವರ್ ಕೇಳಿದ.

"ಪರಬ್ರಹ್ಮ ಸಮಾನರಾದ ಸ್ವಾಮಿಗಳ ವಿರುದ್ಧ ಎಷ್ಟೋ ಆರೋಪಗಳನ್ನು ಮಾಡಿದ್ದಾನೆ. ಯಾವುದೋ ದ್ವೀಪದಲ್ಲಿ ಆಯುಧಗಳ ಫ್ಯಾಕ್ಟರಿ ಕೂಡಾ ಇದೆಯೆಂದು ಹೇಳಿದ್ದಾನೆ. ಮೇಲಿನಿಂದ ಆದೇಶಗಳು ಬಂದಿವೆ ವಿಚಾರಣೆ ಮಾಡಲು–"

ಸ್ವಾಮಿಯ ಕಣ್ಣುಗಳು ಬೆಂಕಿಯಂತಾದವು. ಅವಕ್ಕೇನಾದರೂ ಶಕ್ತಿಯಿದ್ದಿದ್ದರೆ ರಾಮಲಾಲ್ ಅಲ್ಲೇ ಸುಟ್ಟು ಬೂದಿಯಾಗುತ್ತಿದ್ದ. ಅವನಿಗೆ ಈಗ ಅರ್ಥವಾಯಿತು. ಗೋಲ್ಡನ್ ಐಲಂಡ್‌ನ ರಹಸ್ಯಗಳು ಯಾರ ಮೂಲಕ ಹೊರಬಿದ್ದಿದೆ ಎಂದು.

"ನಾನು ಹೇಳುವುದೇನಿದೆ? ನನಗೇನೂ ಗೊತ್ತಿಲ್ಲ" ರಾಮಲಾಲ್ ಕಂಗಾಲಾಗಿ ಹೇಳಿದ.

"ಡಾಕ್ಟರ್, ವಿಹಾರಿ, ಡೆಪ್ಯೂಟಿ ಎಲ್ಲರ ಬಳಿ ನೀನು ಮಾತನಾಡಿದ್ದು ರೆಕಾರ್ಡ್ ಆಗಿದೆ ರಾಮಲಾಲ್. ಸ್ವಾಮಿಯಂತಹ ದೇವರ ಮೇಲೆ ನೀನು ಮಾಡಿರುವ ಆಪಾದನೆಗಳಲ್ಲಿ ಎಷ್ಟು ಸತ್ಯಾಂಶವಿದೆಯೆಂದು ತಿಳಿದುಕೊಳ್ಳಲು ವಿಹಾರಿ ಆ ಕ್ಯಾಸೆಟ್ಟನ್ನು ಮೇಲಿನ ಅಧಿಕಾರಿಗಳಿಗೆ ಕಳುಹಿಸಿದ್ದಾನೆ. ಹಾಗಾಗಿ ಇಂತಹ ಸಮಯದಲ್ಲಿ ನಮ್ಮ ಆರಾಧ್ಯ ದೈವವನ್ನು ತೊಂದರೆ ಮಾಡಬೇಕಾಗಿ ಬಂತು, ನಡಿ" ಎಂದ ಛೀಫ್.

ರಾಮಲಾಲ್‌ನ ಪರಿಸ್ಥಿತಿ ಇಕ್ಕಟ್ಟಿನಲ್ಲಿ ಸಿಕ್ಕಿದಂತಾಯ್ತು. ತಾನೆಂತಹ ತಪ್ಪು ಮಾಡಿದ್ದಾನೆಂದು ಅರ್ಥವಾಯಿತು. ಪೂರ್ತಿಯಾಗಿ ವಿಹಾರಿಯ ಪರ ಅಪ್ರೂವರ್ ಆಗಿದ್ದಿದ್ದರೂ ಚೆನ್ನಾಗಿತ್ತು. ಇಲ್ಲವೇ ಹೆಂಡತಿ–ಮಕ್ಕಳೊಡನೆ ಓಡಿಹೋಗಿದ್ದಿದ್ದರೂ ಚೆನ್ನಾಗಿತ್ತು.

ಕೆಲವೇ ಕ್ಷಣಗಳಲ್ಲೇ ಅವನು ಮುಂದಿನ ಉಪಾಯವನ್ನು ಯೋಚಿಸಿದ, ಮಿಂಚಿಗಿಂತಲೂ ವೇಗವಾಗಿ ಜೇಬಿನಿಂದ ಪಿಸ್ತೂಲನ್ನು ಹೊರತೆಗೆದ. "ಹೌದು ನಾನು ಹೇಳಿದ ಮಾತು ನಿಜವೇ; ನನ್ನವರನ್ನೆಲ್ಲ ಸ್ವಾಮಿ ಸಾಯಿಸಿದ್ದಾನೆಂಬ ಆವೇಶದಲ್ಲಿ ಎಲ್ಲಾ ಹೇಳಿಬಿಟ್ಟೆ. ಈಗ ವಿಚಾರಣೆಯ ಹೆಸರಿನಲ್ಲಿ ನಿಮ್ಮ ಡಿಪಾರ್ಟ್‌ಮೆಂಟ್ ಕೊಡುವ ಚಿತ್ರಹಿಂಸೆಗೆ ನಾನು ಸಿದ್ಧನಿಲ್ಲ. ಅದರಿಂದ

ನೀವೇನೂ ಸಾಧಿಸಲಾರದೆ ನನ್ನನ್ನು ಬಿಟ್ಟರೂ ನಮ್ಮವರು ಬಿಡುವುದಿಲ್ಲವೆಂದು ನನಗೆ ಗೊತ್ತು. ಈಗ ನನಗಿರುವುದು ಒಂದೇ ಮಾರ್ಗ. ಎಲ್ಲರೂ ಕೈಗಳನ್ನು ಮೇಲೆತ್ತಿ."

ಈ ಆಕಸ್ಮಿಕ ಚರ್ಯೆಗೆ ಸ್ವಾಮಿಯನ್ನುಳಿದು ಎಲ್ಲರೂ ನಿಶ್ಚೇತರಾದರು. ಈ ಪರಿಣಾಮವನ್ನು ಮೊದಲೇ ಊಹಿಸಿದಂತೆ ಸ್ವಾಮಿ ನಿರ್ಮಲವಾಗಿದ್ದ. ಗೋಲ್ಡನ್ ದ್ವೀಪದ ರಹಸ್ಯಗಳು ಹೊರಬಿದ್ದಾಗಲೇ ಸ್ವಾಮಿಯ ಅನುಮಾನ ತನ್ನ ಮುಖ್ಯ ಅನುಚರರ ಮೇಲೆ ಬಿದ್ದಿತ್ತು. ಅದು ರಾಮಲಾಲ್ ಎಂದು ಈಗ ತಿಳಿಯಿತು.

ರಾಮಲಾಲ್ ಪರಮೇಶ್ವರನ ಹಣೆಗೆ ಪಿಸ್ತೂಲನ್ನು ಒತ್ತಿದ.

"ಈತ ನನ್ನೊಡನೆ ಬರುತ್ತಾನೆ. ನಾನು ಈ ಊರಿನಿಂದ ದೂರ ಹೋಗುವ ವರೆಗೂ ನನ್ನೊಡನೆ ಇರುತ್ತಾನೆ. ನೀವು ಸ್ವಲ್ಪ ಪ್ರಯತ್ನಪಟ್ಟರೂ ಈತನ ಪ್ರಾಣ ಹೋಗುತ್ತದೆ" ಎನ್ನುತ್ತಾ ಪರಮೇಶ್ವರ್‌ನನ್ನು ಬಾಗಿಲ ಬಳಿಗೆ ಕರೆದೊಯ್ದ.

ರಾಮಲಾಲ್ ಪರಮೇಶ್ವರ್‌ನನ್ನು ಕರೆದುಕೊಂಡು ಹೊರಗೆ ಹೋಗುತ್ತಿದ್ದಂತೆ ನಡೆಯಿತು ಆ ಘಟನೆ; ಕಣ್ರೆಪ್ಪೆ ಬಡಿಯುವುದರೊಳಗಾಗಿ ನಡೆದು ಬಿಟ್ಟಿತ್ತು.

ಸ್ವಾಮಿ ಏನು ಮಾಡಿದನೋ ಗೊತ್ತಿಲ್ಲ. ಸುಮಾರು ನೂರು ಕೇಜಿ ತೂಕದ ಷಾಂಡ್ಲಿಯರ್ ಮೇಲ್ಛಾವಣಿಯಿಂದ ಜಾರಿತ್ತು.

ಆಕಾಶದಿಂದ ಬೀಳುವ ಸಿಡಿಲಿನ ವೇಗದಲ್ಲಿ ನೆಲಕ್ಕೆ ಅಪ್ಪಳಿಸಿತ್ತು...ಮಧ್ಯೆ ರಾಮಲಾಲ್ ಅಪ್ಪಚ್ಚಿಯಾದ. ಅವನ ತಲೆ ಉದ್ದಕ್ಕೆ ಸೀಳಿ ಬಾಯಿಯಿಂದ ಕೂಗು ಬರುವುದಕ್ಕೆ ಮುಂಚೆಯೇ ಪ್ರಾಣಹೋಗಿತ್ತು.

ನೆಲದ ಮೇಲೆಲ್ಲಾ ಗಾಜಿನ ಚೂರುಗಳು ಹರಡಿದವು. ಆ ಕೋಣೆಯಲ್ಲಿ ಉಂಟಾದ ಶಬ್ದದ ತೀವ್ರತೆಗೆ ಎಷ್ಟು ಧೈರ್ಯವಂತನಾದರೂ ನಡುಗುವಂತೆ ಮಾಡಿತು. ಅನಂತರ ವ್ಯಾಪಿಸಿದ ನಿಶ್ಶಬ್ದ ಮತ್ತಷ್ಟು ಭಯಂಕರವಾಗಿತ್ತು.

ಪರಮೇಶ್ವರ್ ದಿಗ್ಭ್ರಾಂತನಾಗಿ ನಿಂತುಬಿಟ್ಟ. ರಾಮಲಾಲ್‌ನ ರಕ್ತ ಅವನ ಮುಖದ ಮೇಲೆಲ್ಲಾ ಸಿಂಪರಣೆಯಾಯಿತು. ಹೂ ಚೆಲ್ಲಿದಂತೆ ಎದುರಿಗಿನ ಶವದ ಮೇಲೆ ರಕ್ತದಿಂದ ತೊಯ್ದ ಗಾಜಿನಚೂರುಗಳು ಮಿನುಗುತ್ತಿದ್ದವು. ಎಲ್ಲಾ ಕೆಲವೇ ಕ್ಷಣಗಳಲ್ಲಿ ನಡೆದುಹೋಯಿತು. ಕೊನೆಯ ಕ್ಷಣದಲ್ಲಿ ನೋಡಿದ್ದ ಅವನು ಮೇಲಿನಿಂದ ಷಾಂಡ್ಲಿಯರ್ ಬೀಳುವುದನ್ನು. ಪಿಸ್ತೂಲಿನ ಮೇಲೆ ಏಕಾಗ್ರತೆಯಿದ್ದ ರಾಮಲಾಲ್ ಅದನ್ನು ಗಮನಿಸಲಿಲ್ಲ. ಅದು ಬೀಳುವ ಸಮಯಕ್ಕೆ

ಸರಿಯಾಗಿ ರಾಮಲಾಲ್ ಅದರ ಕೆಳಗೆ ಬಂದಿದ್ದ.

ಮೃತ್ಯುವನ್ನು ಅಷ್ಟು ಹತ್ತಿರದಿಂದ ಪರಮೇಶ್ವರ್ ನೋಡಿದ್ದು ಅದೇ ಮೊದಲ ಸಲ!

ಅದಕ್ಕೂ ಸ್ವಲ್ಪ ಮುಂಚೆ ಅಷ್ಟು ವರ್ಷಗಳ ಕಾಲ "ಒಟ್ಟಿಗೆ ಕಲೆತು ಕೆಲಸ ಮಾಡಿದ" ರಾಮಲಾಲ್, ತನ್ನ ಸ್ವಂತ ಪ್ರಾಣವನ್ನು ರಕ್ಷಿಸಿಕೊಳ್ಳಲು ಪಿಸ್ತೂಲಿನಿಂದ ತನ್ನನ್ನು ಹೆದರಿಸಿದ್ದು ಪರಮೇಶ್ವರ್‌ಗೆ ಒಂದು ದೊಡ್ಡ ಷಾಕು.

ಷಾಂಡ್ಲಿಯರ್ ಬಿದ್ದದ್ದು ಸ್ವಾಮಿಯ ಏರ್ಪಾಟೇ ಎಂದು ಪರಮೇಶ್ವರ್‌ಗೆ ಗೊತ್ತು. ರಾಮಲಾಲ್ ತಪ್ಪಿಸಿಕೊಳ್ಳುವುದು ತನ್ನ ಪ್ರೆಸ್ಟೀಜಿಗೆ ಸಂಬಂಧಿಸಿದ ವಿಷಯವೆಂದು ಭಾವಿಸಿ ಅಲ್ಲಿಂದಲೇ ಹೀಗೆ ಏರ್ಪಾಡುಮಾಡಿದ್ದ ಸ್ವಾಮಿ. ಪೋಲೀಸರಿಗೆ ಸಿಕ್ಕಿಬಿದ್ದು ಎಂದಾದರೂ ರಹಸ್ಯಗಳನ್ನೆಲ್ಲಾ ಹೇಳಿಬಿಡುತ್ತಾನೆಂಬ ಭಯವೂ ಇರಬಹುದು. ಅದನ್ನೆಲ್ಲ ಪರಮೇಶ್ವರ್ ಯೋಚಿಸುತ್ತಿದ್ದದು; ರಾಮಲಾಲ್‌ನನ್ನು ಮುಗಿಸಲು ತನ್ನ ಪ್ರಾಣ ಹೋದರೂ ಪರವಾಗಿಲ್ಲವೆಂದು ಕೊಂಡಿದ್ದಾನಾ ಸ್ವಾಮಿ? ಇಲ್ಲವೇ ತನ್ನನ್ನು ರಾಮಲಾಲ್‌ನ ಪಿಸ್ತೂಲ್ ಹಿಡಿತದಿಂದ ತಪ್ಪಿಸಲು ಹೀಗೆ ಮಾಡಿದನಾ? ತಾನು ಹೋದರೂ ಪರವಾಗಿಲ್ಲ, ರಾಮಲಾಲ್ ಕೂಡಾ ಉಳಿಯಕೂಡದೆಂದು ಈ ರೀತಿ ಮಾಡಿದ್ದರೆ ಅದು ಮತ್ತಷ್ಟು ದೊಡ್ಡ ಷಾಕು.

ಸ್ವಾಮಿ ಮಾತ್ರ ನಿರ್ವಿಕಾರನಾಗಿಯೇ ಇದ್ದ. ರಾಮಲಾಲ್ ಬಳಿಗೆ ಬಂದು ಪರೀಕ್ಷಿಸಿ ನೋಡಿದ. ಅಷ್ಟರಲ್ಲಿ ಸಿ.ಬಿ.ಐ. ಛೀಫ್ ಕೂಡಾ ಚೇತರಿಸಿಕೊಂಡ. ನಡೆದದ್ದು ವಾಸ್ತವವೆಂದು ಅವನಿಗೆ ನಂಬಿಕೆಯೇ ಬರಲಿಲ್ಲ. ತನ್ನ ಎದೆಯನ್ನು ಸವರಿಕೊಂಡ. ಯಾವುದೋ ತಿಳಿಯದ ಸಿಟ್ಟು. ಪ್ರವಲ್ಲಿಕ ತನ್ನನ್ನು ಕಂಡು ನಗುತ್ತಿರುವಂತೆ ಭಾಸವಾಯಿತು. ಕೈಗೆ ಸಿಕ್ಕಿದ್ದ ಮುಖ್ಯವಾದ ಸಾಕ್ಷಿ ಕೈತಪ್ಪಿ ಹೋಗಿದೆ. ಈಗ ಏನನ್ನೂ ನಿರೂಪಿಸಲು ಸಾಧ್ಯವಿಲ್ಲ, ತನಗೂ, ಇದಕ್ಕೂ ಸಂಬಂಧವಿಲ್ಲವೆಂಬಂತೆ ನಿರ್ವಿಕಾರದಿಂದಿದ್ದಾನೆ ಸ್ವಾಮಿ.

"ಮಾಡಿದ ಪಾಪಕ್ಕೆ ಮನುಷ್ಯ ಈ ಭೂಮಿಯ ಮೇಲೆ ಅದರ ಕರ್ಮಫಲವನ್ನು ಅನುಭವಿಸಬೇಕು. ಈ ರಾಮಲಾಲ್‌ಗೆ ಇಂತಹ ಭೀಕರ ಸಾವು ಅವನ ಹಣೆಯಲ್ಲಿ ಬರೆದಿತ್ತೇನೋ. ಇಲ್ಲದಿದ್ದರೆ ಅಷ್ಟು ಬಲವಾದ ಷಾಂಡ್ಲಿಯರ್ ಅವನ ಮೇಲೆಯೇ ಬೀಳುವುದೆಂದರೇನು? ಈಗೇನು ಮಾಡುತ್ತೀರಿ ಚೀಫ್? ಹೋಗಲಿ ಇವನೊಡನೆ ಇನ್ನಾರಾದರೂ ಷಾಮಿಲಾಗಿದ್ದಾರಾ?" ಎಂದು ಕೇಳಿದ ಸ್ವಾಮಿ.

"ಇಲ್ಲ" ಬರುತ್ತಿದ್ದ ಸಿಟ್ಟನ್ನು ಅಡಗಿಸಿಕೊಂಡು ಹೇಳಿದ ಛೀಫ್.

"ಇಲ್ಲವೇ? ಬ್ಯಾಡ್ ಲಕ್. ಈಗೇನು ಮಾಡುತ್ತೀರಿ?"

ಛೀಫ್ ಉತ್ತರಿಸಲಿಲ್ಲ. ಹೇಳಲು ಏನೂ ಇರಲಿಲ್ಲ. ರಾಮಲಾಲ್ ಶವವನ್ನು ಪೋಸ್ಟ್ ಮಾರ್ಟಮ್ ಮಾಡಿಸುವುದು, ಆಕ್ಸಿಡೆಂಟಲ್ ಸಾವೆಂದು ಫೈಲನ್ನು ಮುಚ್ಚಿಬಿಡುವುದು. ಅಷ್ಟೇ ಮಾಡುವುದು. ಶವದ ಫೋಟೋಗಳನ್ನು ತೆಗೆದರು. ಅದೆಲ್ಲಾ ಅರ್ಧ ಗಂಟೆಯಲ್ಲಿ ಪೂರ್ತಿಯಾಯಿತು, ಆಂಬುಲೆನ್ಸ್‌ನಲ್ಲಿ ಶವವನ್ನು ತೆಗೆದುಕೊಂಡು ಹೋಗಿಬಿಟ್ಟರು. ಮುಗಿದುಹೋಯಿತು...

* * * *

...ಛೀಫ್ ತನ್ನ ಮನೆಯೊಳಗೆ ಪ್ರವೇಶಿಸುತ್ತಿದ್ದಂತೆಯೇ ಪೂಜೆಯ ಕೋಣೆಗೆ ಹೋದ. ರಾಮಲಾಲ್‌ನ ಸಾವು ಅವನನ್ನು ಬೇಟೆಯಾಡುತ್ತಿತ್ತು. ಪ್ರವಲ್ಲಿಕ ಕೊಟ್ಟಿದ್ದ ಕ್ಯಾಸೆಟ್ಟಿನಲ್ಲಿಯ ಮಾತುಗಳಿನ್ನೂ ಕೇಳಿಸುತ್ತಿದ್ದವು. ರಾಮಲಾಲ್ ಹೇಳಿದ್ದೆಲ್ಲಾ ನಿಜವೇ ಆದರೆ ಸ್ವಾಮಿಯಂತಹ ಭಯಂಕರ ವ್ಯಕ್ತಿ ದೇಶದಲ್ಲಿ ಮತ್ತೊಬ್ಬನಿರಲಾರ. ದೇವರ ಮುಂದೆ ದೀಪ ಬೆಳಗುತ್ತಿತ್ತು. ತನ್ನಂತಹವರ ಮನಸ್ಸಿನಲ್ಲಿ ಅದು ಬೆಳಗುತ್ತಿದ್ದರೆ ಅದೆಷ್ಟು ಚೆನ್ನಾಗಿತ್ತು? ಹಣಕ್ಕಾಗಿ ಕೆಲವರು, ಪದವಿಗಾಗಿ ಕೆಲವರು ತಪ್ಪುದಾರಿಯಲ್ಲಿ ನಡೆದರೆ ತನ್ನಂತ ಹವರು ಮೂಢ ಭಕ್ತಿಯಿಂದ ಅದಕ್ಕಿಂತಲೂ ಅಪಾಯಕಾರೀ ಅಧಿಕಾರಿಗಳಾಗಿ ತಯಾರಾಗುತ್ತಿದ್ದಾರೆ.

ಕೈಗಳನ್ನು ಜೋಡಿಸಿ, 'ಭಗವಂತನೇ ನನ್ನನ್ನು ಕ್ಷಮಿಸು' ಎಂದುಕೊಂಡ ಮನಸ್ಸಿನಲ್ಲೇ. ತಾಯಿತ ಕಣ್ಣಿಗೆ ಕಂಡಿತು. ಮೊಣಕೈಗೆ ಸ್ವಾಮಿಯೇ ಕಟ್ಟಿದ್ದು. ಅದನ್ನು ಬಿಚ್ಚಿ ಪಟದ ಮುಂದೆ ಬಿಸಾಡಿ ಹೊರಬಂದ.

ಗಡಿಬಿಡಿಯೆಲ್ಲಾ ಮುಗಿದ ಮೇಲೆ, ತಮ್ಮ ಛೇಂಬರಿನಲ್ಲಿ ಸ್ವಾಮಿ, ಪರಮೇಶ್ವರ್ ಕುಳಿತಿದ್ದಾರೆ.

"ಏನು ಪರಮೇಶ್ವರ್? ಅಷ್ಟು ದೊಡ್ಡ ಕ್ರಿಮಿನಲ್ ಲಾಯರ್ ಆಗಿ ಆ ಷಾಕಿನಿಂದ ಇನ್ನೂ ಚೇತರಿಸಿಕೊಳ್ಳಲಿಲ್ಲವಲ್ಲ?"

ಪರಮೇಶ್ವರ್ ಸುಮ್ಮನೆ ನಕ್ಕ.

"ರಾಮಲಾಲ್, ನಿನ್ನನ್ನು ಅಡ್ಡಹಿಡಿದುಕೊಂಡು ತಪ್ಪಿಸಿಕೊಳ್ಳಲು ಪ್ರಯತ್ನಿಸಿದ. ಡ್ಯಾಮಿಟ್! ಸ್ವಾಮಿದ್ರೋಹಿ!! ಸರಿಯಾದ ಶಾಸ್ತಿಯಾಯಿತು!!! ಅವನೇನಾದರೂ ಪೊಲೀಸರ ಕೈಗೆ ಸಿಕ್ಕಿದ್ದಿದ್ದರೆ 2 ನಿಮಿಷಗಳಲ್ಲೇ ಎಲ್ಲಾ ಹೇಳಿಬಿಟ್ಟಿರುತ್ತಿದ್ದ ಪರಮೇಶ್ವರ್! ನಮ್ಮ ಬುನಾದಿ ಸ್ವಲ್ಪ ಅಲ್ಲಾಡುತ್ತಿರುವಂತೆ ಅನ್ನಿಸುತ್ತಿದೆ ನನಗೇಕೋ."

"ನಾಳೆಯೇ ವಿಜಯದಶಮಿ. ನಾವು ಏರ್ಪಡಿಸಿರುವ ಅಗ್ನಿಪ್ರವೇಶದಿಂದ ನಿಮ್ಮ ವರ್ಚಸ್ಸು ಮತ್ತಷ್ಟು ಹೆಚ್ಚಾಗುವುದರಲ್ಲಿ ಸಂಶಯವಿಲ್ಲ ಬಿಡಿ."

"ಲಕ್ಷಾಂತರ ಭಕ್ತರು ಬರುತ್ತಾರಲ್ಲ...ಕೆಲವರಿಗಾದರೂ ಅನುಮಾನ ಬರುವುದಿಲ್ಲವಾ? ಅವರಲ್ಲಿ ಕೆಲವರಾದರೂ ಗಲಭೆ ಮಾಡುವುದಿಲ್ಲವಾ?"

ಪರಮೇಶ್ವರ್ ನಕ್ಕು ಹೇಳಿದ, "ಕೆಲವು ಲಕ್ಷ ಜನರಿಗೆ ಸಂಬಂಧಿಸಿದ ವಿಷಯದ ಪರವಾಗಿ ಕೆಲವರು ಗಲಭೆ ಮಾಡುವುದು ಪ್ರಜಾತಂತ್ರ ಪ್ರಾರಂಭ ವಾದಂದಿನಿಂದಲೂ ಇದೆ. ಅದರಲ್ಲೇ ಪ್ರಜೆಗಳಿಗೆ ಆಸಕ್ತಿ. ಬೈಸಿಕೊಳ್ಳುವುದು ಜನಪ್ರಿಯತೆಯ ಒಂದು ಭಾಗವೆಂದು ನಾಯಕರು ಎಂದೋ ಗ್ರಹಿಸಿದ್ದಾರೆ. ಕೆಲವು ಲಕ್ಷ ಜನರಿಂದ ಚುನಾಯಿತರಾದ ಒಬ್ಬ ಪ್ರಜಾಪ್ರತಿನಿಧಿ ಮತ್ತೊಂದು ಪಾರ್ಟಿಯ ಅದೇ ರೀತಿ ಲಕ್ಷಾಂತರ ಜನರಿಂದ ಚುನಾಯಿತನಾದ ಪ್ರಜಾಪ್ರತಿನಿಧಿ ಯನ್ನು ಬೈಯ್ಯುತ್ತಿದ್ದರೆ–ಕೆಲವು ಕೋಟಿ ಮಂದಿ ಪ್ರಜೆಗಳು ಬಾಯಲ್ಲಿ ಬೆರಳ ನ್ನಿಟ್ಟುಕೊಂಡು ನೋಡುತ್ತಿರುವುದನ್ನು ನಾವು ಕಾಣಬಹುದು. ಪ್ರಜೆಗಳಲ್ಲಿ ಈ ಅಜ್ಞಾನ ಬೆಳೆದಷ್ಟೂ ನಮಗೆ ಒಳ್ಳೆಯದೇ. ಅದುವರೆವಿಗೂ ಏಕೆ? "ನನ್ನನ್ನು ಭ್ರಷ್ಟನೆಂದು ಕರೆದ ಮಂತ್ರಿ ಮಹಾಭ್ರಷ್ಟ. ನಾನು ಮಂತ್ರಿಯಾಗಿದ್ದಾಗ ಅವನು ಹತ್ತು ಕೋಟಿ ನುಂಗಿದ್ದನ್ನು ನಾನೇ ಕಂಡಿದ್ದೆ" ಎನ್ನುವ ಒಬ್ಬ ಮಂತ್ರಿ–ಅವನನ್ನು ಇಪ್ಪತ್ತು ಕೋಟಿ ತಿಂದಿದ್ದಾನೆಂದು ನಿಂದಿಸುವ ಮತ್ತೊಬ್ಬ ಮಂತ್ರಿ–ತಾವಿಬ್ಬರೂ ಕೂಡಿ ಮೂವ್ವತ್ತು ಕೋಟಿ ತಿಂದಿದ್ದೇವೆಂದು ಹೇಳಿಕೊಂಡರೂ, ಅವರಿಬ್ಬರನ್ನೂ ಬೇರೆ ಬೇರೆಯಾಗಿಯೋ, ಒಟ್ಟಾಗಿಯೋ ಸೇರಿಸಿ ಚಪ್ಪಲಿಯಲ್ಲಿ ಹೊಡೆಯದೆ ಅವರಿಗೆ ಮತ್ತೆ ಸನ್ಮಾನ ಮಾಡುವ ನಮ್ಮ ಜನರಿನ್ನೂ ಮೂಢರು. ನಮ್ಮ ದಿನ ಪತ್ರಿಕೆಗಳ ಸುದ್ದಿಯನ್ನು ವಿಭಾಗ ಮಾಡಿದರೆ ಕಾಮರ್ಸ್, ಎಕನಾಮಿಕ್ಸ್, ಇಂಡಸ್ಟ್ರಿಯಲ್ ಪ್ರಗತಿ ಎಲ್ಲಾ ಸೇರಿದರೂ ಶೇ. ಹತ್ತಗಷ್ಟು ಇರುವುದಿಲ್ಲ. ಶೇ. ತೊಂಬತ್ತು ಭಾಗ ಕೆಲಸಕ್ಕೆ ಬಾರದ ಪಾಲಿಟಿಕ್ಸ್ ಇರುತ್ತದೆ. ಅವನನ್ನು ಇವನು, ಇವನನ್ನು ಅವನು ಹೇಗೆ ಬೈದುಕೊಳ್ಳುತ್ತಾರೆಂದು ಬರೆದು ನಮ್ಮ ಪತ್ರಿಕಾ ಅಧಿಕಾರಿಗಳು ಹಣ ಮಾಡಿಕೊಳ್ಳುತ್ತಾರೆ. ಇವೆಲ್ಲಾ ಪೊಲಿಟಿಕಲ್ ಅವೇರ್‌ನೆಸ್ ಎಂದು ನೀವು ಹೇಳಬಹುದು ಸ್ವಾಮಿ–ಅಲ್ಲವೇ ಅಲ್ಲ. ಪ್ರಬುದ್ಧರಾದ ನೂರು ಜನ ಮತದಾರರಲ್ಲಿ ಇಪ್ಪತ್ತು ಜನ ಗುಮಾಸ್ತರು, ಇಪ್ಪತ್ತು ಜನ ಡಾಕ್ಟರ್‌ಗಳು, ಇಪ್ಪತ್ತು ಜನ ವ್ಯಾಪಾರಸ್ಥರು, ಇಪ್ಪತ್ತು ಜನ ಶಿಕ್ಷಕರು, ಇಪ್ಪತ್ತು ಜನ ಬರಹಗಾರರಿದ್ದಾರೆಂದುಕೊಳ್ಳಿ, ಅವರೆಲ್ಲರೂ ಸೇರಿ ಶೇಕಡ ನೂರು ಓಟುಗಳನ್ನು ಪಡೆದು ಗೆದ್ದುಬಂದ ವ್ಯಕ್ತಿಯೊಬ್ಬ ತನ್ನ ಆ ಕ್ಷೇತ್ರವನ್ನು ಅಭಿವೃದ್ಧಿಪಡಿಸಲು...ಗುಮಾಸ್ತರೆಲ್ಲಾ ಹತ್ತು ಗಂಟೆಗೆ ಆಫೀಸಿಗೆ ಬರದಿದ್ದರೆ,

ಶಿಕ್ಷಕರು ಟ್ಯೂಷನ್ ಹೇಳಿದರೆ, ಸರ್ಕಾರೀ ಡಾಕ್ಟರ್‌ಗಳು ಪ್ರೈವೇಟ್ ಪ್ರ್ಯಾಕ್ಟೀಸ್ ಮಾಡಿದರೆ ಕಠಿಣ ಶಿಕ್ಷೆ ವಿಧಿಸುವುದಾಗಿಯೂ, ವ್ಯಾಪಾರಿಗಳು ಮೋಸ ಮಾಡಿದರೆ, ಬರಹಗಾರರು ಸೆಕ್ಸ್, ವಾಯಿಲೆನ್ಸ್ ಬರೆದರೆ ನೇಣುಗಂಬಕ್ಕೇರಿಸುತ್ತೇವೆಂದು ಆರ್ಡಿನೆನ್ಸ್ ಜಾರಿಗೊಳಿಸಿದನೆಂದುಕೊಳ್ಳಿ; ಮುಂದಿನ ಚುನಾವಣೆಯಲ್ಲಿ ಅವನಿಗೆ ಒಂದು ಓಟೂ ಸಿಗುವುದಿಲ್ಲ. ಸಮಾಜಕ್ಕೆ ಒಳ್ಳೆಯ ಕೆಲಸ ಮಾಡಿದರೂ, ತನಗೆ 'ಪರ್ಟಿಕ್ಯುಲರ್' ಆಗಿ ನಷ್ಟವನ್ನುಂಟುಮಾಡುವ ನಾಯಕನನ್ನು ಮತದಾರ ಸಹಿಸುವುದಿಲ್ಲ. ತ್ಯಾಗಕ್ಕಿಂತ ಸ್ವಾರ್ಥವೇ ಸಾಮಾನ್ಯ ಮತದಾರನನ್ನು ಇಷ್ಟು ಪ್ರಭಾವಿತನನ್ನಾಗಿ ಮಾಡುತ್ತಿರುವಾಗ, ತಾನು ಉಳಿದವರನ್ನು ಎಕ್ಸ್‌ಪ್ಲಾಯಿಟ್ ಮಾಡಿದರೆ ತಪ್ಪೇನೆಂಬ ವಾದಕ್ಕೆ ಅಂಟಿಕೊಳ್ಳುತ್ತಾನೆ. ಇಂತಹ ಮತದಾನ ಪದ್ಧತಿಯನ್ನು ನಂಬಿರುವ ಪ್ರಜೆಗಳು ನೀವು ಅಗ್ನಿಯಲ್ಲಿ ಪ್ರವೇಶಿಸಿ ಹೊರಬಂದರೆ ನಂಬೇ ನಂಬುತ್ತಾರೆ. ಯಾರು ಸ್ವಾಮಿ ನಿಮ್ಮನ್ನು ಈ ದೇಶದಲ್ಲಿ ನಾಯಕನಾಗಲು ಒಪ್ಪಿಕೊಳ್ಳದಿರುವುದು? ಬಾ ಅನ್ನಿ ನೋಡೋಣ. ರಾಮುನನ್ನು, ಸೀತೆಯನ್ನು ಕಿರುತೆರೆಯ ಮೇಲೆ ಕುಣಿಸಿ ಹಣ ಕೊಳ್ಳೆ ಹೊಡೆದಿದ್ದಾನೆ ಒಬ್ಬ ನಿರ್ಮಾಪಕ. ಸೆಕ್ಯುಲರಿಜಂಗೆ ಹೆಸರಾದ ನಮ್ಮ ದೇಶದಲ್ಲಿ ಮತ್ತೊಂದು ಮತದ ದೇವರ ಬಗ್ಗೆ ಧೈರ್ಯವಿದ್ದರೆ ಮಾತನಾಡಲು ಹೇಳಿ– ನೋಡೋಣ. ಅದೇ ಪಾಯಿಂಟ್‌ನಿಂದ ನೀವೀಕ್ಷಣ ಕ್ಯಾಷ್ ಮಾಡಿಕೊಳ್ಳುತ್ತಿದ್ದೀರಿ. ಸುಟ್ಟು ಹೋಗಲಿ ಸ್ವಾಮಿ-ಈ ದೇಶ, ಈ ಪ್ರಜೆಗಳು ಎಲ್ಲಾ...ಕನಿಷ್ಟ ಆ ಬೂದಿಯಿಂದಲಾದರೂ ಹೊಸ ಪೀಳಿಗೆ ಉದ್ಭವಿಸುತ್ತದೇನೋ"

ಅವನ ಸ್ವರ ಆವೇಶದಿಂದ ನಡುಗುತ್ತಿತ್ತು. ಏಕೋ ಅವನಿಗೇ ತಿಳಿಯದೆ ಕಣ್ಣುಗಳು ಅಶ್ರುಪೂರಿತವಾದವು. ಯೋಚಿಸಿದರೆ ಅದರ ಹಿಂದೆ ಇರುವ ಕಾರಣ ಕೂಡಾ ಸ್ಪಷ್ಟವಾಗುತ್ತದೆ. ನಾಲ್ವರಲ್ಲಿ ಇಬ್ಬರು ಜಾರಿಹೋಗಿದ್ದಾರೆ, ಪದವಿ ಹೋದದ್ದರಿಂದ ಒಬ್ಬ, ಪ್ರಾಣಭಯದಿಂದ ಮತ್ತೊಬ್ಬ ಹೋದರು. ಇನ್ನು ತಾನೊಬ್ಬನೇ ಉಳಿದಿರುವುದು, ಬುದ್ಧಿವಂತಿಕೆ. ಬುದ್ಧಿವಂತಿಕೆ ಎಂದೂ ವಿಷಯವನ್ನು ಅನಲೈಸ್ ಮಾಡುತ್ತದೆ. ಮಾಡದಿರುವಷ್ಟು ಕಾಲ ಪರವಾಗಿಲ್ಲ. ಮಾಡಲು ಪ್ರಾರಂಭಿಸಿದರೆ ಎಲ್ಲಾ ನೋವೇ. ಅದಕ್ಕೆ ಬುದ್ಧಿವಂತಿಕೆ ಹಲ್ಲು–ಬರುವಾಗ ನೋವು ಕೊಡುತ್ತದೆಂದು ಹೇಳುತ್ತಾರೆ. ಆಗ ದುಃಖ ಉಂಟಾಗುತ್ತದೆ. ಫ್ರಸ್ಟ್ರೇಷನ್ ಉಂಟಾಗುತ್ತದೆ, ಅವನಷ್ಟು ಆವೇಶಪಟ್ಟಿದ್ದನ್ನು, ಅಷ್ಟು ಮಾತನಾಡಿದ್ದನ್ನು ಎಂದೂ ಕಾಣದ ಸ್ವಾಮಿ, ಆಶ್ಚರ್ಯವನ್ನು ಮನಸ್ಸಿನಲ್ಲೇ ಅಡಗಿಸಿಕೊಂಡು ಅವನ ಭುಜ ತಟ್ಟುತ್ತಾ, "ಸರಿ ಬಿಡು ತುಂಬಾ ಹೊತ್ತಾಯಿತು. ಬೆಳಗ್ಗೆ ಭೇಟಿ ಆಗೋಣ" ಎಂದು ಹೊರಟು ಹೋದ.

# 22

ಆಗಲೇ ಹೊರಗೆ ವಿಶಾಲವಾದ ಬಯಲಿನಲ್ಲಿ ಕಲಕಲ ಕೇಳಿಸುತ್ತಿತ್ತು. ದೂರದೂರುಗಳಿಂದ ಬರುತ್ತಿದ್ದ ಭಕ್ತಾದಿಗಳು ಗುಂಪು ಸೇರುತ್ತಿದ್ದರು.

ಬೆಳಗಾದರೆ ವಿಜಯದಶಮಿ.

ಇನ್ನು ಆರು ಗಂಟೆಗಳಲ್ಲಿ ಲಕ್ಷಾಂತರ ಜನ ಆ ಬಯಲಿನಲ್ಲಿ ಸೇರಲಿದ್ದಾರೆ.

ದೇಶವನ್ನು, ದೇಶದ ಭವಿಷತ್ತನ್ನು ಬದಲಾಯಿಸುವ ಮಾರಣಹೋಮ ಇನ್ನರ್ಧ ಗಂಟೆಯಲ್ಲಿ ಪ್ರಾರಂಭವಾಗಲಿದೆ.

ಗೋಲ್ಡನ್ ಐಲೆಂಡ್‌ಗೆ ಹಡಗು ತಲುಪಿದೆಯೆಂದು ಸುದ್ದಿ ಬಂತು. ದೇಶವೆಲ್ಲಾ ಗಾಢ ನಿದ್ರೆಯಲ್ಲಿದೆ.

ಟೆರ್ರರಿಸ್ಟ್‌ಗಳು ದೇಶದ ವಿವಿಧ ಪ್ರಾಂತ್ಯಗಳಲ್ಲಿ ಸೇರಿಕೊಳ್ಳುತ್ತಿದ್ದಾರೆ. ದಿನಾಂಕ ಬದಲಾಗುತ್ತಿದೆ.

ಪರಮೇಶ್ವರ್ ನಿದ್ರೆಗೆ ಶರಣಾಗುತ್ತಿದ್ದಾಗ ಫೋನ್ ಕರೆ ಬಂತು. "ಹಲೋ" ಅಂದ ರಿಸೀವರ್ ಎತ್ತಿ.

"ಸರ್, ನಾನು A-12 ಮಾತನಾಡುತ್ತಿದ್ದೇನೆ" ಅತ್ತಕಡೆಯಿಂದ ಉತ್ತರ ಬಂತು. ಅವನೊಬ್ಬ ಇನ್‌ಫಾರ್ಮರ್. ಆತಂಕದಿಂದ ಹೇಳಿದ್ದ.

"ಏನು... ಏನಾಯ್ತು?"

"ಮಿನಿಸ್ಟರ್ ಸೂರ್ಯಾರಾವ್ ಸ್ವಾಮಿಯ ಮೇಲೆ ಮಾಡಿರುವ ಆಪಾದನೆಗಳೆಲ್ಲಾ ಪೇಪರಿನಲ್ಲಿ ಬರುತ್ತಿದೆ ಸಾರ್. ಮೊದಲ ಎಡಿಷನ್ ರಿಲೀಸ್ ಆಗ್ತಿದೆ."

ಅಸಹನೆಯಿಂದ ಪರಮೇಶ್ವರ್, "ಅದರಲ್ಲಿ ಹೊಸದೇನಿದೆ? ಎಲ್ಲ ಗೊತ್ತಿದೆಯಲ್ಲ" ಅಂದ.

"ನೀವಂದುಕೊಂಡಿರುವುದು ಬೇರೆ. ಈಗ ಪ್ರಿಂಟಾಗಿರುವುದು ಬೇರೆ ಸಾರ್."

ಪರಮೇಶ್ವರ್ ಬೆಚ್ಚಿಬಿದ್ದು "ಏನು?" ಅಂದ. ನಿದ್ರೆ ಓಡಿತ್ತು.

"ಹೌದು ಸಾರ್. ವಿಹಾರಿ ನಮ್ಮನ್ನು ಫೂಲ್ ಮಾಡಿದ್ದಾನೆ. ಎರಡು ಬೇರೆ ರೀತಿಯದನ್ನು ತಯಾರಿಸಿದ್ದಾನೆ. ಒಂದನ್ನು ನಾವು ನೋಡಿ ಪರವಾಗಿಲ್ಲ

ಎಂದುಕೊಂಡೆವು. ಆದರೆ ಈಗ ಪ್ರಿಂಟಾಗಿರುವುದು ಬೇರೆ. ಅದರಲ್ಲಿ ಸ್ವಾಮಿಯ ಸ್ವಿಸ್ ಬ್ಯಾಂಕ್ ಅಕೌಂಟ್‌ನಿಂದ-ಗೊಲ್ಡನ್‌ಬೀಚ್‌ವರೆಗೆ ಎಲ್ಲ ವಿವರಗಳಿವೆ."

"ಮೈಗಾಡ್, ನಿಜವಾ? ನೀನು ಹೇಳುತ್ತಿರುವುದು ನಿಜವೇನಾ?" ಪರಮೇಶ್ವರ್‌ನ ಕೈಯ್ಯಲ್ಲಿದ್ದ ರಿಸೀವರ್ ನಡುಗುತ್ತಿತ್ತು.

"ನಿಜ ಸಾರ್. ಪೇಪರ್ ನನ್ನ ಕೈಯ್ಯಲ್ಲೇ ಇದೆ."

"ಯಾವ ಯಾವ ಪೇಪರ್‌ಗಳಲ್ಲಿ ಬಂದಿದೆ?"

"ಇವತ್ತೇನೋ ಒಂದೆರಡು ಪೇಪರುಗಳಲ್ಲಿ ಬಂದಿದೆ. ಬಲವಾದ ಸಾಕ್ಷಿಗಳಿಲ್ಲದೆ ಹಾಕುವುದಿಲ್ಲವೆಂದು ನಾಳೆಯವರೆಗೂ ಮುಂದೂಡಿದ್ದಾರೆ ಮತ್ತೆ ಕೆಲವು ಪೇಪರ್‌ಗಳವರು. ಈ ಒಂದು ಪೇಪರ್ ಮಾತ್ರ ಉಳಿದವರಿಗಿಂತ ಮೊದಲಿರಬೇಕೆಂದು ಸಿಕ್ಕಿರುವ ಇನ್‌ಫರ್ಮೇಷನ್ನನ್ನು ಹಾಗೆಯೇ ಪ್ರಕಟಿಸಿದ್ದಾರೆ. ಪತ್ರಿಕಾ ಪ್ರತಿನಿಧಿಗಳೆಲ್ಲಾ ! ನಾಳೆ ಸೂರ್ಯಾರಾವ್‌ನನ್ನು ಭೇಟಿ ಮಾಡಲಿದ್ದಾರೆ.

ಪರಮೇಶ್ವರ್ ನಿಧಾನವಾಗಿ ಉಸಿರೆಳೆದುಕೊಂಡ. ಕಡಿಮೆ ಸಮಯ. ಪಾದರಸಕ್ಕಿಂತಲೂ ವೇಗವಾಗಿ ಯೋಚಿಸುವ ಅವನ ಮೆದುಳು ಮುಂದೇನು ಮಾಡಬೇಕೆಂದು ನಿರ್ಧರಿಸಿತು.

ಸಿಟಿ ಎಡಿಷನ್ ಪೇಪರ್ ಬಿಡುಗಡೆ ಆಗದಂತೆ ತಡೆಯಬೇಕು. ಅದು ಈ ಕೂಡಲೆ ನಡೆಯಬೇಕು. ನಾಳೆ ಸೂರ್ಯಾರಾವ್ ಮಾತನಾಡದಂತೆ ಮಾಡಬೇಕು. ಅದಕ್ಕೆ ಸಾಮ, ದಾನ, ಭೇದ, ದಂಡೋಪಾಯಗಳಲ್ಲಿ ಯಾವುದಾದರೊಂದನ್ನು ಉಪಯೋಗಿಸಬೇಕು. ಅದು ಎರಡನೆ ಹೆಜ್ಜೆ. ಪೇಪರ್‌ಗಳು ಇನ್ನು ಮುಂದೆ ಸ್ವಾಮಿಯ ಬಗ್ಗೆ ಯಾವ ಆಪಾದನೆಗಳನ್ನೂ ಬರೆಯದಂತೆ ಕೋರ್ಟಿನಿಂದ ಸ್ಟೇ ತರಬೇಕು, ಅದು ಮೂರನೆ ಹೆಜ್ಜೆ.

ಎಲ್ಲವನ್ನೂ ಚಕಚಕನೆ ಯೋಚಿಸಿ, "ಸಿಟಿ ಎಡಿಷನ್ ಯಾವಾಗ ಊರಿನೊಳಗೆ ಬರುತ್ತದೆ?" ಎಂದು ಕೇಳಿದ.

"ಇನ್ನು ಹತ್ತು ನಿಮಿಷಗಳಲ್ಲಿ ವ್ಯಾನು ಹೊರಡುತ್ತದೆ" ಎಂದು ಉತ್ತರಿಸಿದ. ಪ್ರಿಂಟಿಂಗ್ ಊರಿಗೆ ಸ್ವಲ್ಪ ದೂರದಲ್ಲಿದ್ದ ಪ್ರೆಸ್‌ನಲ್ಲಿ ನಡೆಯುತ್ತಿತ್ತು. ಅಲ್ಲಿಂದ ಬೆಳಗಿನ ಜಾವ ಮೂರು ಗಂಟೆಗೆ ಬರುತ್ತವೆ ಪೇಪರ್‌ಗಳು. ನಾಲ್ಕು ಗಂಟೆಯ ವೇಳೆಗೆ ಹುಡುಗರು ಅವನ್ನು ವಿವಿಧ ಪ್ರದೇಶಗಳಿಗೆ ಹಂಚುತ್ತಾರೆ. ಐದು ಗಂಟೆಯ ವೇಳೆ ಒಂದು ಲಕ್ಷ ಪ್ರತಿಗಳು ಓದುಗರನ್ನು ತಲುಪುತ್ತವೆ, ಅದನ್ನು ತಡೆಯಬೇಕು.

ಪರಮೇಶ್ವರ್ ಮತ್ತೊಬ್ಬ ಅನುಚರನಿಗೆ ಫೋನ್ ಮಾಡಿದ. ಕೆಲವೇ ಕ್ಷಣಗಳಲ್ಲಿ ಏರ್ಪಾಡುಗಳು ನಡೆದವು. ಎರಡು ಜೀಪುಗಳು ಹೊರಟವು. ಹಿಂದಿನದರಲ್ಲಿ

ಪರಮೇಶ್ವರ್ ಕುಳಿತಿದ್ದ.

ಜೀಪನ್ನು ನಡೆಸುತ್ತಿದ್ದವರು ಇಂತಹುದರಲ್ಲಿ ಪ್ರೊಫೆಷನಲ್ಸ್. ಮುಂದಿನ ಜೀಪಿನಲ್ಲಿ ಪೆಟ್ರೋಲ್ ಕ್ಯಾನುಗಳಿದ್ದವು. ಡ್ರೈವರ್, ಮತ್ತೊಬ್ಬ ಮುಂದಿನ ಸೀಟಿನಲ್ಲಿ ಕುಳಿತಿದ್ದರು, ಇಬ್ಬರು ಡ್ರೈವರ್‌ಗಳ ಬಳಿಯೂ 'ವಾಕೀ–ಟಾಕೀ' ಇದ್ದವು. ಎರಡನೆ ಜೀಪು ಪತ್ರಿಕಾ ಕಾರ್ಯಾಲಯದ ಬಳಿಗೆ ಮೊದಲು ಹೊರಟು ಹೋಯಿತು.

ಎರಡು ಕಿಲೋಮೀಟರ್ ಈಚೆ ಮೊದಲ ಜೀಪು ನಿಂತಿತು.

ಐದು ನಿಮಿಷಗಳ ನಂತರ ಪೇಪರ್‌ವ್ಯಾನ್ ಊರಿನ ಕಡೆ ಹೊರಟಿತು. ಅದು ಸ್ಟಾರ್ಟ್ ಆಗುತ್ತಿದ್ದಂತೆಯೇ 'ವಾಕೀ–ಟಾಕಿ' ಮೂಲಕ ಆ ಸುದ್ದಿಯನ್ನು ಮೊದಲ ಜೀಪಿಗೆ ರವಾನಿಸಲಾಯಿತು.

ಅದರ ನಂತರ ಅಂದುಕೊಂಡಿದ್ದ ರೀತಿಯೇ ನಡೆಯಲಾರಂಭಿಸಿತು. ಪೇಪರ್ ವ್ಯಾನ್ ಸರಿಯಾಗಿ ಎರಡು ಕಿಲೋಮೀಟರ್ ಹತ್ತಿರವಾಗುವ ವೇಳೆಗೆ ಪರಮೇಶ್ವರ್ ಕುಳಿತಿದ್ದ ಜೀಪು ಹಿಂದಿನಿಂದ ಹಾರನ್ ಬಾರಿಸುತ್ತಾ ಮುಂದಕ್ಕೆ ಬಂತು. ಆದರೆ ಅದು ಬಲಗಡೆಯಿಂದ ಓವರ್‌ಟೇಕ್ ಮಾಡದೆ ಎಡಗಡೆಯಿಂದಲೇ ಮುಂದಕ್ಕೆ ಬಂತು. ಅದನ್ನು ಊಹಿಸದ ಡ್ರೈವರ್ ಎಚ್ಚರಿಕೆಯಿಂದ ವ್ಯಾನನ್ನು ಮತ್ತಷ್ಟು ಬಲಗಡೆ ತಿರುಗಿಸಿದ. ಅದೇ ವೇಳೆಗೆ ಸರಿಯಾಗಿ ಮುಂದಿನಿಂದ ಜೀಪು ಬಂತು. ವ್ಯಾನಿನ ಡ್ರೈವರ್ ಮತ್ತಷ್ಟು ಹೆದರಿ, ಸರಿಯಾದ ಪೊಸಿಷನ್‌ಗೆ ತಿರುಗಿಸುವ ವೇಳೆಗೆ ಎರಡು ವಾಹನಗಳೂ ಹತ್ತಿರವಾಗಿ, ವ್ಯಾನು ರಸ್ತೆಯ ಪಕ್ಕಕ್ಕೆ ಜಾರಿತು, ಜೀಪು ವೇಗವಾಗಿ ಹೋಗಿ ವ್ಯಾನಿನ ಹಿಂಭಾಗಕ್ಕೆ ಬಡಿಯಿತು. ವ್ಯಾನಿನಲ್ಲಿದ್ದ ಪೇಪರ್ ಬಂಡಲುಗಳಲ್ಲಿ ಕೆಲವು ನೆಲದ ಮೇಲೆ ಬಿದ್ದವು. ಅಷ್ಟರಲ್ಲೇ ಪೆಟ್ರೋಲನ್ನು ಪೇಪರ್ ಬಂಡಲ್‌ಗಳ ಮೇಲೆ ಸುರಿದರು. ಮರುಕ್ಷಣವೇ ಪೇಪರುಗಳು ಅಂಟಿಕೊಂಡು ಜೋರಾಗಿ ಉರಿಯಲು ಪ್ರಾರಂಭವಾಯಿತು. ಸುಮಾರು ಎರಡು ನಿಮಿಷಗಳ ಕಾಲ ಆ ಕತ್ತಲಲ್ಲಿ ಬೆಳಕು ನಾಟ್ಯವಾಡಿತು.

ಪೇಪರ್ ವ್ಯಾನಿನ ಡ್ರೈವರ್ ಭಯದಿಂದ ನಡುಗಿದ. ಹಿಂದಿನಿಂದ ಬಂದಿದ್ದ ಜೀಪು ಯಾವಾಗಲೋ ಹೊರಟು ಹೋಗಿತ್ತು. ತಾನೇ ಬಲಕ್ಕೆ ತನ್ನ ವ್ಯಾನನ್ನು ತಿರುಗಿಸಿ ಆಕ್ಸಿಡೆಂಟ್‌ಗೆ ಕಾರಣನಾದೆನೆಂಬ ಭಾವನೆ ಅವನಿಗುಂಟಾಯಿತು. ಆಕ್ಸಿಡೆಂಟ್‌ಗಳಲ್ಲಿ ಇದು ಸಾಮಾನ್ಯವೇ. ಯಾರೋ ಅಕಸ್ಮಿಕವಾಗಿ ಎದುರಿಗೆ ಬರುತ್ತಾರೆ. ವಾಹನವನ್ನು ಪಕ್ಕಕ್ಕೆ ತಿರುಗಿಸುತ್ತಿದ್ದಂತೆಯೇ ಮತ್ತೊಂದು ವಾಹನ ಬಂದು ಬಡಿದಿರುತ್ತದೆ. ತಪ್ಪೆಲ್ಲಾ ಪಕ್ಕಕ್ಕೆ ತಿರುಗಿಸಿದ ಡ್ರೈವರ್‌ದೇ ಆಗಿರುತ್ತದೆ, ಎದುರಿಗೆ ಬಂದ ವ್ಯಕ್ತಿ ಯಾವಾಗಲೋ ತಪ್ಪಿಸಿಕೊಂಡಿರುತ್ತಾನೆ.

ವ್ಯಾನ್ ಡ್ರೈವರ್‌ನ ಪರಿಸ್ಥಿತಿಯೂ ಈಗ ಹಾಗೆಯೇ ಆಗಿತ್ತು.

ಪರಮೇಶ್ವರ್‌ಗೆ ಬೇಕಾಗಿದ್ದುದೂ ಈಗ ಅದೇ. ಜೀಪಿಗೆ ಉಂಟಾದ ನಷ್ಟದ ಬಗ್ಗೆ ಚಿಂತಿಸುತ್ತಿರಲಿಲ್ಲ ಅವನೀಗ. ಮತ್ತೆ ನಾಳಿನ ಪೇಪರ್‌ನಲ್ಲಿ 'ಪೇಪರ್ ವ್ಯಾನಿನ ಮೇಲೆ ಗೂಂಡಾಗಳ ದೌರ್ಜನ್ಯ' ಎಂದು ಬರದಿದ್ದರೆ ಅಷ್ಟೇ ಸಾಕು. ಅದನ್ನು ಸಾಧಿಸುವುದಕ್ಕಾಗಿಯೇ ಇಷ್ಟು ಎಚ್ಚರಿಕೆಯಿಂದ ಉಪಾಯ ಹೂಡಿ ಜಯಗಳಿಸಿದ್ದ.

ಅವನಿಗೆ ತುಂಬಾ ಸುಸ್ತಾಗುತ್ತಿತ್ತು. ಆ ರಾತ್ರಿ ತುಂಬಾ ಸುದೀರ್ಘವಾಗಿರುವಂತೆ ಕಂಡಿತು. ರಾಮಲಾಲ್ ಕಣ್ಮುಂದೆಯೇ ಸತ್ತದ್ದು, ಸ್ವಂತ ಮಗ ನನಗಿಂತಲೂ ಬುದ್ಧಿವಂತಿಕೆ ಉಪಯೋಗಿಸಿ ತನ್ನ ಕಣ್ಣಿಗೇ ಮಣ್ಣೆರೆಚಿದ್ದು– ಇವೆಲ್ಲಾ ಒಂದೇ ರಾತ್ರಿ ನಡೆದು ಅವನ ಶಕ್ತಿಯನ್ನು ಹೀರಿಬಿಟ್ಟಿತ್ತು. ಇವೆಲ್ಲಾ ಒಂದು ಕಡೆ. ಅವನಲ್ಲಿ ಮುಜುಗರ ಉಂಟುಮಾಡುತ್ತಿದ್ದ ಅಸಹನೆ ಮತ್ತೊಂದು ಕಡೆ, ಯಾವುದೋ ತಿಳಿಯದ ಅಂತಃಸಂಘರ್ಷಣೆ, ಮಳೆಯ ಹನಿಗಳಂತೆ ಮುಖದ ಮೇಲೆ ಹಾರಿದ ರಾಮಲಾಲ್‌ನ ರಕ್ತ...

ಒಟ್ಟಿನಲ್ಲಿ ಹೇಗಾದರೇನು ವಿಜಯವನ್ನು ಸಾಧಿಸಿದ್ದ. ಪೇಪರ್‌ಗಳು ಓದುಗರನ್ನು ಸೇರಲಿಲ್ಲ...ಆದರೆ ಇವತ್ತು ಮಾಡಬೇಕಾದದ್ದು ಇನ್ನೂ ತುಂಬಾ ಇತ್ತು. ಸ್ವಾಮಿಯ ಅಗ್ನಿ ಪ್ರವೇಶ ಆನಂತರ ಸೂರ್ಯಾರಾವ'ನೊಡನೆ ರಾಜಿ ಮಾಡಿಕೊಂಡೋ–ಸ್ಕ್ರಾಪ್ ಮಾಡಿಕೊಂಡೋ ಆ ವಿವರಗಳು ಮತ್ತೆ ಪೇಪರ್‌ಗಳಲ್ಲಿ ಬರದಂತೆ ಮಾಡುವುದು, ಈಗಾಗಲೇ ಪತ್ರಿಕಾಲಯಗಳಿಗೆ ಹೋಗಿರುವ ಸುದ್ದಿಯನ್ನು ಸಾಕ್ಷಿ ಸಮೇತ ನಾಶಮಾಡುವುದು, ಸಾಧ್ಯವಾದರೆ ವರದಿಗಾರರನ್ನು ಕೊಂಡುಕೊಳ್ಳುವುದು, ಇಷ್ಟೆಲ್ಲಾ ಇನ್ನು ಇಪ್ಪತ್ನಾಲ್ಕು ಗಂಟೆಗಳೊಳಗಾಗಿ ನಡೆಯಬೇಕು.

ಇದಲ್ಲದೆ ಬರಲಿರುವ ಇಪ್ಪತ್ನಾಲ್ಕು ದಿನಗಳೊಳಗಾಗಿ ದೇಶದ ಸ್ಥಿತಿಯನ್ನು ಅಲ್ಲೋಲ ಕಲ್ಲೋಲ ಮಾಡಿ ಸ್ವಾಮಿಯನ್ನು ಮೇಲೇರಿಸಬೇಕು ಹಂತ ಹಂತವಾಗಿ, ವಿದೇಶಿ ಶಕ್ತಿಗಳೊಡನೆ ಸಮಾಲೋಚನೆ, ಸ್ವದೇಶೀ ಶಕ್ತಿಗಳ ದಮನ–

ಪರಮೇಶ್ವರ್ ಗಾಢವಾಗಿ ನಿಟ್ಟುಸಿರು ಬಿಟ್ಟ.

ಇಷ್ಟು ಮಾಡಿದರೆ ಸ್ವಾಮಿ ಸರ್ವಾಧಿಕಾರಿಯಾಗುತ್ತಾನೆ. ತಾನು ಚಾಣಕ್ಯನಂತೆ ದೇಶವನ್ನು ಆಳುತ್ತಾನೆ.

ಅವನಿಗೆ ತನ್ನ ಗತದಿನಗಳ ನೆನಪಾಯಿತು. ಹಣ ಬರುವುದಿಲ್ಲವೆಂದು ತಿಳಿದು ಹೆಂಡತಿಯನ್ನು ಬಿಟ್ಟಿದ್ದು, ಸ್ವಾಮಿಯ ಬಳಿ ಸೇರಿದ್ದು. ಕ್ರಿಮಿನಲ್

ಲಾಯರ್ರಾಗಿ ಪ್ರಸಿದ್ಧಿ ಹೊಂದಿದ್ದು –

ಅವನಿಗೆ ಮಗನ ನೆನಪಾಯಿತು. ತನ್ನ ರಕ್ತ...ಹೌದು. ಅದಕ್ಕೆ ಹೀಗೆ ಏಟಿಗೆ ಎದಿರೇಟನ್ನು ಹಾಕುತ್ತಿದ್ದಾನೆ, ಆದರೆ ಇನ್ನೂ ಅನುಭವ ಸಾಲದು. ಬಿಸಿರಕ್ತ. ಪ್ರಪಂಚವೆಲ್ಲಾ ಒಳ್ಳೆಯದೆಂದೇ ಭಾವಿಸುವ ವಯಸ್ಸು, ಈ ದುರ್ಭಾಗ್ಯ ಪ್ರಪಂಚದಲ್ಲಿ ಅದು ಕೆಲಸಕ್ಕೆ ಬರುವುದಿಲ್ಲವೆಂದು ಹೇಳಬೇಕು.

ಏಕೋ ಆ ಕ್ಷಣ ಅವನಿಗೆ ಮಗನನ್ನು ನೋಡಬೇಕೆನ್ನಿಸಿತು. ಹತ್ತಿರ ಕುಳ್ಳಿರಿಸಿಕೊಂಡು ಮನುಷ್ಯನ ಮೇಲೆ ಪರಿಸರದ ಪರಿಣಾಮ ಕುರಿತು. ಸ್ಟ್ರಗಲ್‌ಫಾರ್ ಎಗ್ಸಿಸ್ಟೆನ್ಸ್ ಬಗ್ಗೆ, ಬುದ್ಧಿವಂತಿಕೆ ವರ್ಸಸ್ ಸ್ವಾರ್ಥದ ಬಗ್ಗೆ. ಪ್ರತಿಷ್ಠೆಗಾಗಿ ಬುದ್ಧಿವಂತ ಪಡುವ ಕಷ್ಟಗಳ ಬಗ್ಗೆ, ಹುಡುಕುವ ದಾರಿಗಳ ಬಗ್ಗೆ ಹೇಳಬೇಕೆಂದು ಅನ್ನಿಸಿತು. ಆದರೆ ನದಿಯ ಎರಡು ವಿರುದ್ಧ ದಂಡೆಗಳ ಮೇಲಿರುವ ವ್ಯಕ್ತಿಗಳಿಗೆ ಒಬ್ಬರ ಮಾತು ಮತ್ತೊಬ್ಬರಿಗೆ ಕೇಳಿಸುವುದು ಎಷ್ಟು ಕಷ್ಟವೋ ಅಷ್ಟೇ ಅಸಾಧ್ಯ ಇದು ಎನ್ನಿಸಿತು ಅವನಿಗೆ.

ಇಲ್ಲಿ ಕೂಡಾ ಅವನು ಸ್ವಲ್ಪ ಹಿಂದೆ ಬಿದ್ದಿದ್ದ. ಅವನು ಅಸಾಧ್ಯ ಎಂದಿದ್ದನ್ನು ವಿಹಾರಿ ಮಾಡಿ ತೋರಿಸಿದ್ದ. ಹೇಗೆ ತನ್ನ ಮಗನನ್ನು ಹತ್ತಿರ ಕುಳ್ಳಿರಿಸಿಕೊಂಡು ತನ್ನ ವಾದವನ್ನು ಕೇಳಿಸಬೇಕೆಂದಿದ್ದನೋ ಹಾಗೆಯೇ ವಿಹಾರಿ ತಂದೆಗೆ ತನ್ನ ವಾದವನ್ನು ಹೇಳಬೇಕೆಂದಿದ್ದ, ಹೇಳಿದ್ದ ಕೂಡಾ.

ಮತ್ತಷ್ಟು ಜಾಣ್ಮೆಯಿಂದ.

## 23

ಪ್ರವಲ್ಲಿಕಳಿಗೆ ಬೆಳಗಿನ ಜಾವ ಐದು ಗಂಟೆಗೆ ಏಳುವ ಅಭ್ಯಾಸ. ಬೇಸಿಗೆಯಾದರೆ ನಾಲ್ಕೂವರೆಗೇ ಏಳುತ್ತಾಳೆ. ಸುಮಾರು ಒಂದು ಗಂಟೆಯ ಕಾಲ ಸ್ಕಿಪ್ಪಿಂಗ್, ಉಳಿದ ಎಕ್ಸರ್‌ಸೈಜ್ ಮಾಡುವುದರೊಡನೆ ದಿನಚರ್ಯೆಯನ್ನು ಪ್ರಾರಂಭಿಸುತ್ತಾಳೆ. ಎಷ್ಟೇ ಯೋಚನೆಗಳಿದ್ದರೂ ರಾತ್ರಿಯಾಗುತ್ತಿದ್ದಂತೆ ಚೆನ್ನಾಗಿ ನಿದ್ರಿಸುವುದು ಅವಳಿಗೆ ಅಭ್ಯಾಸ. ಬೆಳಗ್ಗೆ ಇಂಟರ್‌ವ್ಯೂನೋ, ಗಂಡನನ್ನು ನೋಡಬೇಕು ಅಂದರೇನೇ ಆ ರಾತ್ರಿಯೆಲ್ಲಾ ಟೆನ್ಷನ್‌ನಿಂದ ನಿದ್ರಿಸದೆ ಆತಂಕದಿಂದ ಕಳೆಯುವ ಯುವತಿಯರಿಗಿಂತ ಭಿನ್ನವಾಗಿ ಬೆಳೆಸಿದ್ದರು ಪ್ರತಾಪ ರಾವ್, ಹಾಗಿಲ್ಲದಿದ್ದರೆ ಆ ಡಿಪಾರ್ಟ್‌ಮೆಂಟಿನಲ್ಲಿರುವವರು ನಿದ್ರಿಸುವಂತೆಯೇ ಇಲ್ಲ.

ಯಥಾ ರೀತಿ ಅವಳು ಬೆಳಗಿನ ಜಾವ ಎದ್ದಳು,

ಆ ದಿನ ಅವಳ ಬದುಕಿನಲ್ಲಿ ಮುಖ್ಯವಾದ ದಿನವೊಂದು ಅವಳಿಗೆ ಗೊತ್ತಿತ್ತು. ಸ್ವಾಮಿ ಲಕ್ಷಾಂತರ ಜನರ ಮುಂದೆ ಅಗ್ನಿಪ್ರವೇಶ ಮಾಡಿ, ದೇಶದ ಸುಸ್ಥಿರತೆಗಾಗಿ, ಸೌಭಾಗ್ಯಕ್ಕಾಗಿ ಪುನೀತನಾಗಿ ಹೊರಬರಲಿದ್ದಾನೆ ಅಂದು.

ಸ್ವಾಮಿಯ ಆಟವನ್ನು ಬಯಲಿಗೆಳೆಯಲು ತಾವು ಸಿದ್ಧರಾಗಿದ್ದಾರೆ. ಎರಡರಲ್ಲಿ ಒಂದು ತೀರ್ಮಾನವಾಗಬೇಕು. ಮತ್ತೊಂದೆಡೆ ಸೈನ್ಯವನ್ನು ಎಚ್ಚರಿಸಿ ಸಿದ್ಧವಾಗಿರುವಂತೆ ಸೂಚಿಸಲಾಗಿತ್ತು. ಅಂದುಕೊಂಡಂತೆ ನಡೆದರೆ ಅವಳ ಬಾಳಿನ ಆಶಯ ನೆರವೇರುವ ದಿನವದು.

ಐದೂವರೆಯಾಯಿತು.

ಆರಾಯಿತು.

ಪೇಪರ್ ಬರಲಿಲ್ಲ!

ಆರೂ ಕಾಲು...ಆರೂವರೆ.

ಅವಳಿಗೆ ಅನುಮಾನ ಬಂದು ವಿಹಾರಿಗೆ ಫೋನ್ ಮಾಡಿದಳು.

"ಹೌದು. ಅದೇ ಅನುಮಾನ ನನಗೂ ಬಂದಿದೆ. ಈಗ ತಾನೇ ಪತ್ರಿಕಾ ಕಾರ್ಯಾಲಯಕ್ಕೆ ಫೋನ್ ಮಾಡಿದೆ. ಸಿಟಿ ಎಡಿಷನ್ ತರುತ್ತಿದ್ದ ಪೇಪರ್ ವ್ಯಾನಿಗೆ ಆ್ಯಕ್ಸಿಡೆಂಟ್ ಆಗಿದೆಯಂತೆ."

ಪ್ರವಲ್ಲಿಕಳಿಗೆ ಸರ್ವಶಕ್ತಿಯೂ ಬತ್ತಿ ಹೋದಂತೆ ಅನ್ನಿಸಿತು. ಎದುರಾಳಿಗಳಿಗೆ ಒಂದು ದಿನ ಸಮಯ ದೊರೆತಿದೆ. ಒಂದು ದಿನದಲ್ಲಿ ಅವರೇನಾದರೂ ಮಾಡಬಲ್ಲರು. ಬೆಳಗ್ಗೆಯೇ ಈ ಸುದ್ದಿ ಅಪಶಕುನದಂತೆ ಕಂಡಿತು. ಅವಳು ಮೌನವಾಗಿರುವುದನ್ನು ಕಂಡು ವಿಹಾರಿ ನಕ್ಕ. "ಸೋತಂತೆ ಬಳಲಬೇಡ. ಇದರ ಬಗ್ಗೆ ನಾನೊಂದು ಯೋಚಿಸಿದ್ದೇನೆ."

ಅವಳಿಗೆ ಹಾಯೆನ್ನಿಸಿತು. ಕಷ್ಟವೆಂದಾಗ ಇಷ್ಟು ಮಾತ್ರದ ಸಮಾಧಾನದ ಮಾತು ಎಷ್ಟೋ ಶಕ್ತಿಯನ್ನು ನೀಡುತ್ತದೆ. ಅಂತಹ ಶಕ್ತಿಯೇನೆಂದು ಅನುಭವದಿಂದ ಮಾತ್ರ ತಿಳಿಯಬಹುದು.

"ಏನು?" ಆತುರದಿಂದ ಕೇಳಿದಳು.

"ನಿನಗೂ, ಸಿ.ಬಿ.ಐ. ಛೀಫ್‌ಗೂ ಸಂಬಂಧ ಹೇಗಿದೆ?"

"ಯಾವ ದ್ವೇಷವೂ ಇಲ್ಲ."

"ಸಿಟಿ ಪೇಪರ್‌ಗಳು ಸುಟ್ಟುಹೋಗಿವೆ. ಆದರೆ ಡಿಸ್ಟ್ರಿಕ್ಟ್‌ಗಳಿಗೆ ಹೊರಟು ಹೋಗಿರುತ್ತೆ ತಾನೆ?"

"ಹೋಗಿದ್ದರೆ?" ಅವನೇನು ಹೇಳುತ್ತಿದ್ದಾನೆಂದೇ ಅರ್ಥವಾಗದೆ

ಕೇಳಿದಳು.

"ಜಿಲ್ಲಾ ಕೇಂದ್ರಗಳಿಗೆ ಹೋಗುತ್ತಿರುವ ಪೇಪರ್‌ಗಳು ಅಲ್ಲಿಗೆ ಸೇರಿಕೊಳ್ಳಲು ಏಳು ಏಳೂವರೆ ಆಗುತ್ತದೆ. ಅವನ್ನು ಅಲ್ಲಿಂದಲ್ಲಿಗೇ ಸೀಜ್ ಮಾಡಿ ಹಿಂದಕ್ಕೆ ತರಿಸಿ ಇಲ್ಲಿ ರಿಲೀಜ್ ಮಾಡಬೇಕು...ಸ್ವಾಮಿ ಮೀಟಿಂಗನ್ನು ಪ್ರಾರಂಭಿಸುವ ಸಮಯಕ್ಕೆ ಸರಿಯಾಗಿ"

"ಆದರೆ ರಾತ್ರಿ ಮೂರು ಗಂಟೆಗೇ ಆ ವಾಹನಗಳೆಲ್ಲಾ ಹೊರಟು ಬಿಟ್ಟಿವೆ,"

"ಇನ್ನು ಒಂದು ಗಂಟೆಯ ಸಮಯವಿದೆ"

"ಅಷ್ಟು ಕಡಿಮೆ ಸಮಯದಲ್ಲಿ ಅವುಗಳನ್ನು ಹೇಗೆ ತರುವುದು?"

"ಹೆಲಿಕಾಪ್ಟರ್ ಮೂಲಕ" ಹೇಳಿದ.

ಅವಳು ಬೆಚ್ಚಿಬೀಳಲಿಲ್ಲ. ಯೋಚಿಸಿದಳು. ಯುದ್ಧದಲ್ಲಿ ಶತ್ರು ಕತ್ತಿ ಎತ್ತಿದಾಗ "ಅಯ್ಯೋ ಈಗ ಹೇಗೆ ನಾವು ಕತ್ತಿ ತೆಗೆಯುವುದಕ್ಕೇ ಸಮಯವಿಲ್ಲವಲ್ಲಾ" ಎಂದು ಚಿಂತಿಸಬಾರದು. ಅದನ್ನೇ ಯೋಚಿಸಿದಳು. ಚಕಚಕ ಕೆಲಸ ಮಾಡಬೇಕು.

"ನಾನೀಗಲೇ ಛೀಫ್ ಬಳಿಗೆ ಹೋಗುತ್ತಿದ್ದೇನೆ" ಎಂದು ಫೋನಿಟ್ಟು ಬಿಟ್ಟಳು. ಐದು ನಿಮಿಷಗಳಲ್ಲಿ ಅವಳು ಛೀಫ್ ಬಳಿಯಿದ್ದಳು. ಆತ ಆಗತಾನೇ ಪೂಜೆ ಮುಗಿಸಿದ್ದ. ಪಂಚೆ ಉಟ್ಟು ಹೆಗಲಿನ ಮೇಲೆ ಟವಲನ್ನು ಹಾಕಿದ್ದ.

"ಇದೇನಮ್ಮಾ–ಇಷ್ಟು ಬೆಳಗ್ಗೆಯೇ ಬಂದಿ?"

"ನಿಮ್ಮ ಕೈಲಿದ್ದ ತಾಯಿತ ಎಲ್ಲಿ?" ಅವಳು ಕೇಳಿದ ಮೊದಲ ಪ್ರಶ್ನೆ. ಛೀಫ್ ಆಶ್ಚರ್ಯದಿಂದ, "ತಾಯಿತ! ಯಾವುದು?" ಎಂದ.

"ಸ್ವಾಮಿ ಕಟ್ಟಿದ್ದು"

"ದೇವರ ಮನೆಯಲ್ಲಿಟ್ಟಿದ್ದೇನೆ ಯಾಕೆ?"

ಆತನ ಅನುಮತಿ ಪಡೆದು ಅವಳು ದೇವರ ಮನೆಯೊಳಗಿಂದ ಅದನ್ನು ತಂದಳು. ಡ್ರಾಯಿಂಗ್ ರೂಮಿನಲ್ಲಿ ಕುಳಿತ ನಂತರ ಎಚ್ಚರಿಕೆಯಿಂದ ಅದನ್ನು ಬಿಚ್ಚಿದಳು. ಆತ ಆಶ್ಚರ್ಯದಿಂದ ಅವಳ ಕೆಲಸವನ್ನು ನೋಡುತ್ತಿದ್ದ.

ಒಳಗಿನಿಂದ ಒಂದು ಸಣ್ಣ ಮೈಕ್ರೋಫೋನ್, ಒಂದು ಸಣ್ಣ ವೈರು ಹೊರಬಿತ್ತು. ಛೀಫ್ ಬೆಚ್ಚಿಬಿದ್ದು–"ಮೈ ಗಾಡ್" ಎನ್ನಲು ಹೋದ.

ಅವಳು ಕೂಡಲೇ ಮೈಕ್ರೋಫೋನನ್ನು ತನ್ನ ಕೈಯಿಂದ ಮುಚ್ಚಿಕೊಂಡಳು. ಛೀಫ್‌ಗೆ ಅರ್ಥವಾಯಿತು.

ತಾಯಿತದ ಸುತ್ತಲೂ ಪ್ಲಾಸ್ಟಿಕ್ ಕವರ್ ಸುತ್ತಿದ ನಂತರ ಅವಳ

ಹೇಳಿದಳು. "ಇದೇ ಸಾರ್...ಇಷ್ಟು ದಿನ ಸ್ವಾಮಿ ನಮ್ಮ ರಹಸ್ಯಗಳನ್ನು ತಿಳಿದು ಕೊಳ್ಳುತ್ತಿದ್ದ ಸಾಧನ!"

ಆತ ಪಾಕಿನಿಂದ ಚೇತರಿಸಿಕೊಳ್ಳಲು ತುಂಬಾ ಸಮಯ ಹಿಡಿಯಿತು. ಅಷ್ಟರಲ್ಲಿ ಅವಳು ತನಗೆ ಬೇಕಾಗಿದ್ದುದನ್ನೆಲ್ಲಾ ಹೇಳಿದಳು.

ಆತ ತಲೆ ಆಡಿಸಿದ–ಎಲ್ಲಾ ಕೂಡಲೇ ಆರೇಂಜ್ ಮಾಡುತ್ತೇನೆಂಬಂತೆ.

ನಂತರ ಅವಳು—"ಇದರ ಹಿಂದೆ ಇರುವ ತಲೆ ಎಲ್ಲಾ ಪರಮೇಶ್ವರ್‌ದು ಸಾರ್" ಎನ್ನುತ್ತಾ ಪ್ಲಾಸ್ಟಿಕ್ ಕವರನ್ನು ಬಿಚ್ಚಿದಳು.

"ಹೌದು ಸಾರ್. ತಂದೆ ಮಗ ಎಂದೋ ಒಂದಾಗಿದ್ದಾರೆ" ತಾಯಿತವನ್ನು ಬಾಯಿಯ ಬಳಿ ಇಟ್ಟುಕೊಳ್ಳುತ್ತಾ ಹೇಳಿದಳು, "...ಆ ದಿನ ರಂಗಸ್ಥಳದ ಮೇಲೆ ವಿಹಾರಿ, ಪದ್ಮಾಕರ್ ನಾಟಕವಾಡುತ್ತಿದ್ದಾಗ ಪಿಸ್ತೂಲನ್ನು ಬದಲಾಯಿಸಿದಂತೆ ಪರಮೇಶ್ವರ್ ನಟಿಸಿದ. ಅದು ಕೇವಲ ನಟನೆ ಮಾತ್ರ. ಅದಕ್ಕೆ ಅಂದು ವಿಹಾರಿ ಕೇಸಿನಲ್ಲಿ ಸಿಕ್ಕಿಹಾಕಿಕೊಳ್ಳಲಿಲ್ಲ. ರಾಮಲಾಲ್‌ನನ್ನು, ಸೂರ್ಯಾರಾವ್‌ನನ್ನು ನಾಶಪಡಿಸುವಂತೆ ಸಲಹೆ ಕೊಟ್ಟಿದ್ದು ಕೂಡಾ ಪರಮೇಶ್ವರ್. ಇನ್ನೆರಡು ಗಂಟೆಯಲ್ಲಿ ಸ್ವಾಮಿ ಅಗ್ನಿ ಪ್ರವೇಶ ಮಾಡಲಿದ್ದಾನೆ. ಮಧ್ಯದಲ್ಲಿ ನಿಜವಾದ ಬೆಂಕಿಯೇ ಇರುತ್ತದೆ. ಆ ವಿಷಯ ತಿಳಿಯದ ಸ್ವಾಮಿ ಸಜೀವ ದಹನವಾಗಲಿದ್ದಾನೆ, ಇದು ಕೂಡಾ ಪರಮೇಶ್ವರ್ ಪ್ಲಾನೇ. ಸಾರ್...ಒಂದು ವಿಷಯ! ನಮ್ಮ ಡಿಪಾರ್ಟ್‌ಮೆಂಟಿನ ರಹಸ್ಯಗಳು ಹೇಗೋ ಸ್ವಾಮಿಗೆ ತಿಳಿಯುತ್ತಿದೆ, ಪರಮೇಶ್ವರ್ ನಮ್ಮ ಕಡೆಗೆ ಸೇರಿದ್ದಾನೆಂಬ ರಹಸ್ಯ ಇನ್ನೆರಡು ಗಂಟೆಗಳ ಕಾಲ ಯಾರಿಗೂ ತಿಳಿಯಕೂಡದು."

"ಹಾಗೇ ಆಗಲಮ್ಮಾ–"

ಅವಳು ಮತ್ತೆ ತಾಯಿತವನ್ನು ಪ್ಲಾಸ್ಟಿಕ್ ಕವರಿನಲ್ಲಿ ಮುಚ್ಚಿಟ್ಟಳು. ತಾನು ಆಡಿದ ಪ್ರತಿ ಮಾತೂ ಸ್ವಾಮಿಗೆ ಸೇರುತ್ತದೆಂದು ಅವಳಿಗೆ ಗೊತ್ತು. ಛೀಫ್‌ಗೆ ತಿಳಿಸಿ ಹೊರಬಂದಳು.

ಆಗ ಸಮಯ ಏಳೂವರೆಯಾಗಿತ್ತು. ಪ್ರವಲ್ಲಿಕಳ ಮನಸ್ಸೆಲ್ಲಾ ಉದ್ವೇಗದಿಂದ ತುಂಬಿತ್ತು. ಇನ್ನೊಂದು ಗಂಟೆಯ ನಂತರ ಸ್ವಾಮಿ ಸಾವಿರಾರು ಭಕ್ತರ ಮುಂದೆ ಉಪನ್ಯಾಸ ನೀಡಲಿದ್ದಾನೆ. ಮಾರಣಹೋಮಕ್ಕೆ ಪ್ರಾರಂಭೋತ್ಸವ! ಆಗ ತಾನೇ ಅಗ್ನಿಯಲ್ಲಿ ಸ್ನಾನಮಾಡಿ ಅವನು ಮಾಡಲಿರುವ ಉಪನ್ಯಾಸ ಧಾವಾಗ್ನಿಯಂತೆ ವ್ಯಾಪಿಸಲಿದೆ.

ಜಪಾನ್‌ನಿಂದ ಬರಲಿರುವ ಹಡಗು ಭಾರತದ ಸಮುದ್ರ ತೀರವನ್ನು ಸೇರಿಕೊಳ್ಳುತ್ತಿದ್ದಂತೆಯೇ ಅದನ್ನು ಸುತ್ತುವರಿದು ಅದರಲ್ಲಿರುವ ಸಾಮಗ್ರಿಗಳನ್ನು

ವಶಪಡಿಸಿಕೊಳ್ಳುವ ಏರ್ಪಾಡುಗಳನ್ನು ಮಾಡುತ್ತಿದ್ದಾನೆ ಥೀಫ್, ಆದರೆ ಆ ಹಡಗಿನ ವಿಷಯ ಇನ್ನು ರಹಸ್ಯವಾಗಿಲ್ಲದಿರುವುದರಿಂದ ಅದರಲ್ಲಿ ಸ್ವಾಮಿ ಬರೀ ಆಟದ ಸಾಮಾನುಗಳನ್ನೇ ತುಂಬಿಸಿರುತ್ತಾನೆ.

ಆ ದಿನ ನಗರದಲ್ಲಿ ಪೇಪರ್ ಬರದಿದ್ದುದು ಒಂದು ಅಪಶ್ರುತಿ. ವಿಹಾರಿ ತನ್ನ ಕೆಲಸವನ್ನು ಎಷ್ಟರವರೆಗೂ ಸಾಧಿಸುತ್ತಾನೋ ಕಾದು ನೋಡಬೇಕು, ಎಷ್ಟು ಕಷ್ಟಪಟ್ಟರೂ ಇನ್ನೆರಡು ಗಂಟೆಗಳೊಳಗಾಗಿ ಪೇಪರ್‌ಗಳನ್ನು ನಗರಕ್ಕೆ ತರುವುದು ಕಷ್ಟ. ಒಂದುವೇಳೆ ಆ ಪೇಪರನ್ನು ಓದಿದರೂ ಜನ ಹೇಗೆ ಪ್ರತಿಕ್ರಿಯೆ ತೋರುತ್ತಾರೆಂಬುದು ಪ್ರಶ್ನೆ! ದಿನಪತ್ರಿಕೆಗಳಲ್ಲಿ ಕಲ್ಪನಾ ಸುದ್ದಿಗಳನ್ನು ಓದುವುದು ಅವರಿಗೇನೂ ಹೊಸದಲ್ಲ. ಇದನ್ನು ಸಹ ಸ್ವಾಮಿಗೆ ಆಗದವರು ಬರೆದಿದ್ದಾರೆಂದು ಕೊಂಡು ಬಿಡುತ್ತಾರೊ ಏನೋ?

ಸರಿಯಾಗಿ ಎಂಟು ಗಂಟೆಗೆ ಅವಳು ಹೊರಟಳು, ಸಭಾ ಪ್ರಾಂಗಣಕ್ಕೆ ಹೋಗಲಿಲ್ಲ. ಉತ್ತರ ದಿಕ್ಕಿಗೆ ಹೊರಟಳು.

ತಂದೆಯ ಸಮಾಧಿ ಇದೆ ಅಲ್ಲಿ! ಕಾರನ್ನು ದೂರದಲ್ಲಿ ನಿಲ್ಲಿಸಿ, ಒಳಗೆ ಹೋಗಿ ಆ ಸಮಾಧಿಯ ಮುಂದೆ ಕುಳಿತಳು. ಮೇಲೆ ಆಕಾಶದಲ್ಲಿ ಯಾವುದೋ ಪಕ್ಷಿ ಕಿರುಚುತ್ತಾ ಹಾರುತ್ತಿದೆ. ಮಸಣವೆಲ್ಲ ನಿಶ್ಶಬ್ದವಾಗಿ ನಿರ್ಮಾನುಷ್ಯವಾಗಿದೆ. ತನ್ನ ತಾಯಿ ತನ್ನ ಆತ್ಮೀಯರು ಎಲ್ಲಿ ಮಣ್ಣಲ್ಲಿ ಕಲೆತು ಬಿಟ್ಟಿದ್ದಾರೋ ಅವಳಿಗೆ ಗೊತ್ತಿಲ್ಲ. ತಂದೆ ಮಾತ್ರ ಅವಳಿಗೆ ಗೊತ್ತಿತ್ತು. ಆ ಭೀಕರ ದೃಶ್ಯ ನೆನಪಿದೆ. ರಾಮಲಾಲ್ ನೆನಪಿದ್ದಾನೆ. ರಕ್ತ ನೆನಪಿದೆ. ರೌಡಿ ರಾಮಲಾಲ್, ಲಾಯರ್ ಪರಮೇಶ್ವರ್–ಇಬ್ಬರ ಭುಜದ ಮೇಲೆ ಕೈಹಾಕಿಕೊಂಡು ಅನಂತಾನಂತಸ್ವಾಮಿ ಕೋರ್ಟಿನಿಂದ ಹೊರಬಂದದ್ದು ನೆನಪಿದೆ.

ಅವಳು ಮೊಣಕಾಲಿನ ಮೇಲೆ ಕುಳಿತು ಕೈಗಳನ್ನು ಜೋಡಿಸಿ, ಗಲ್ಲವನ್ನು ಕೈಗಳ ಮೇಲಿರಿಸಿಕೊಂಡು ಕಣ್ಣು ಮುಚ್ಚಿಕೊಂಡಳು.

ನಿರ್ವಿಕಾರ, ನಿರಾಮಯಾವಸ್ಥೆಯಲ್ಲಿ, ಯಾವುದೋ ಶಕ್ತಿ ಒಳಗಿನಿಂದ ಒದ್ದುಕೊಂಡು ಬರುತ್ತಿರುವಂತೆ ಅನ್ನಿಸುತ್ತಿತ್ತು. ಸಮಾಧಿಯಿಂದಲೇ ಅವಳ ತಂದೆ ಆಶೀರ್ವಾದದಿಂದ ಅಭಿಷೇಕ ಮಾಡುತ್ತಿರುವಂತೆ ಭಾಸವಾಗುತ್ತದೆ. ಕೆಲವು ಭಾವನೆಗಳಿಗೆ ತರ್ಕ ಇರುವುದಿಲ್ಲ. ಅನುಭವ ಮಾತ್ರ ಸತ್ಯ.

ಐದು ನಿಮಿಷಗಳ ನಂತರ ಅವಳು ಎದ್ದಳು. ಪಿಸ್ತೂಲನ್ನು ನೋಡಿ ಕೊಂಡು ಕಾರನ್ನು ಸ್ಟಾರ್ಟ್ ಮಾಡಿ ಸಭೆಯ ಪ್ರಾಂಗಣಕ್ಕೆ ಹೊರಟಳು.

ಅವಳಲ್ಲಿಗೆ ಸೇರುವ ವೇಳೆಗೆ ಸರಿಯಾಗಿ ಎಂಟೂಕಾಲು ಗಂಟೆಯಾಯಿತು. ಸುಮಾರು ಫರ್ಲಾಂಗ್ ದೂರದಿಂದ ಮೇಲಿನಿಂದ ಮರಳು ಚೆಲ್ಲಿದರೆ ನೆಲಕ್ಕೆ ಬೀಳ

ದಷ್ಟು ಜನ ಕಾಣುತ್ತಿದ್ದರು. ಏನಿಲ್ಲವೆಂದರೂ ಒಂದು ಲಕ್ಷ ಜನ ಸೇರಿರಬಹುದು. ಕೆಲವರು ಪ್ರಾರ್ಥಿಸುತ್ತಿದ್ದರು. ಕೆಲವರು ಸ್ವಾಮಿಯ ಸ್ತೋತ್ರ ಮಾಡುತ್ತಿದ್ದರು. ಭಕ್ತಿಪರವಶರಾಗಿ ಕಣ್ಮುಚ್ಚಿ ನಿಂತಿದ್ದರು, ಅವಳು ಆ ದೃಶ್ಯವನ್ನು ಕಂಡು ಸ್ತಬ್ಧಳಾದಳು.

ಅವಳಿಗೆ ಸ್ವಾಮಿಯ ಮಾತುಗಳು ನೆನಪಾದವು.

"ಶಕ್ತಿ–ಬುದ್ಧಿವಂತಿಕೆ-ರಾಜಕೀಯ ನನ್ನ ಮೂರು ಸ್ಥಂಭಗಳಾದರೆ ನಾಲ್ಕನೆಯ ಸ್ಥಂಭ ಪ್ರಜೆಗಳ ಅಜ್ಞಾನ" ನಿಜವೇ ಅನ್ನಿಸಿತು.

ಭಕ್ತಿಭಾವನೆಗಳು ಹೃದಯದಲ್ಲಿ ನಿಕ್ಷೇಪವಾಗಿರುವವರೆಗೂ ಪೂಜೆ ಪುನ-ಸ್ಕಾರಗಳಿಗೆ ಮೀಸಲಾಗಿ ಇರುವವರೆಗೂ ಪರ್ವಾಗಿಲ್ಲ. ಮತತತ್ವ ಮೌಢ್ಯವಾಗಿ ಬದಲಾಗಿ ವ್ಯಕ್ತಿಪೂಜೆಯ ಪರಾಕಾಷ್ಠೆ ತಲುಪಿದರೆ ಕಷ್ಟ.

ಅವಳಿಗೇಕೋ ಸೋಲು ತಪ್ಪುವುದಿಲ್ಲವೇನೋ ಅನ್ನಿಸಿತು.

ಬೇರುಗಳನ್ನು ಆಳವಾಗಿ ಬಿಟ್ಟ ಮಹಾವೃಕ್ಷಸ್ವಾಮಿ! ನ್ಯಾಯಕ್ಕೆ ಸಿಗದಂತೆ ಅವನು ಕೊಡಲಿರುವ ಉಪನ್ಯಾಸ, ಅದರಿಂದ ಉತ್ತೇಜಿತರಾಗುವ ಪ್ರಜೆಗಳು–ಡೆಲ್ಲಿಯಲ್ಲಿ ಸಿಡಿಯಲಿರುವ ಗಾಡ್ಗೆಟ್ ಮಿಸೈಲ್ಸ್ ಎಲ್ಲಾ ಕಡೆಯಿಂದಲೂ ಉಂಟಾಗಲಿರುವ ಅಪಾಯ...

ಏನು ಮಾಡಬೇಕು?

ಯೋಚಿಸುತ್ತಾ ಅವಳು ಮುಂದಕ್ಕೆ ಸಾಗುತ್ತಿದ್ದಳು.

ಗುಂಪುಗಟ್ಟಿದ್ದಾರೆ ಜನ.

ಅವಳ ದೃಷ್ಟಿ ಒಂದೆಡೆ ನಿಂತುಹೋಯಿತು! ಅಲ್ಲಿ ಸುನಾದಮಾಲ ಇದ್ದಳು, ಆದರೆ ಅವಳು ನಿಂತಿದ್ದು ಸುನಾದಮಾಲಳನ್ನು ಕಂಡಲ್ಲ.

ಪಕ್ಕದಲ್ಲಿದ್ದ ವಿಷ್ಣುವನ್ನು ಕಂಡು! ..ಅವಳಲ್ಲಿ ಯಾವುದೋ ಆಲೋಚನೆ ಮಿಂಚಿನಂತೆ ಹೊಳೆಯಿತು.

* * * *

ಪರಮೇಶ್ವರ್ ಭವನದಿಂದ ಹೊರಬರಲು ಸಿದ್ಧವಾಗುತ್ತಿದ್ದ. ಜನರ ಘೋಷಣೆ ಹೊರಗೆಲ್ಲಾ ತುಂಬಿತ್ತು. ಆ ಭವನದ ದೊಡ್ಡ ಕನ್ನಡಿಯಲ್ಲಿ ದೂರದಲ್ಲಿಯ ಅಗ್ನಿಕುಂಡ ಕಾಣಿಸುತ್ತಿದೆ. ಉರಿ ಆಕಾಶದೆತ್ತರ ಉರಿಯುತ್ತಿದೆ.

ಒಳಗೆ ಕೂಡ ಗಡಿಬಿಡಿಯಿತ್ತು. ಆದರೆ ರಕ್ತ ಪಿಪಾಸುಗಳು, ಗೂಂಡಾಗಳು ಯಾರು ಇಲ್ಲ ಅಲ್ಲಿ. ಸ್ವಾಮಿಯನ್ನು ಮನಸಾ ವಾಚಾ ನಂಬಿರುವ ಭಕ್ತರೇ

ತುಂಬಿದ್ದಾರೆ. ಕೆಲದಿನಗಳ ಹಿಂದೆ ಯಾವ ಪರಿಣಾಮವೂ ಬೀರದೇ ಇದ್ದಿದ್ದರೆ ಸಿ.ಬಿ.ಐ. ಛೀಫ್ ಕೂಡ ಅಲ್ಲಿರುತ್ತಿದ್ದ. ಆಡಳಿತ ಪಕ್ಷ, ವಿರೋಧಪಕ್ಷ, ಅಸೆಂಬ್ಲಿ, ಪಾರ್ಲಿಮೆಂಟ್–ಎಂಬ ಭೇದವಿಲ್ಲದೆ ರಾಜಕಾರಣಿಗಳು, ಮಂತ್ರಿಗಳು ತುಂಬಾ ಜನ ಅಲ್ಲಿ ಸೇರಿದ್ದಾರೆ.

ಸ್ವಾಮಿ ತನ್ನ ಉಪನ್ಯಾಸವನ್ನು ಕೊನೆಯ ಸಲ ಓದುತ್ತಿದ್ದಾನೆ. ನಿಜಕ್ಕೂ ಅದನ್ನು ತುಂಬ ಪರಿಣಾಮಕಾರಿಯಾಗಿ ಪರಮೇಶ್ವರ್ ತಯಾರಿಸಿದ್ದ.

"ಇದು ನಮ್ಮ ದೇಶ. ನಮ್ಮ ದೇಶ ನಮ್ಮದು! ಆದರೆ ನಮ್ಮ ಅದೆಷ್ಟೋ ಹಬ್ಬಗಳಿಗೆ ರಜೆ ಇರುವುದಿಲ್ಲ. ಹಾಗೆಯೇ ಪ್ರತಿ ಶನಿವಾರವೋ, ಶುಕ್ರವಾರವೋ ದೇವಾಲಯಗಳಿಗೆ ಹೋಗಲು ಮಧ್ಯಾಹ್ನ ಒಂದೆರಡು ಗಂಟೆಗಳ ಅನುಮತಿ ಕೋರಿದರೆ ಸರ್ಕಾರಿ ಅಧಿಕಾರಿಗಳು ಒಪ್ಪಿಕೊಳ್ಳುವುದಿಲ್ಲ..." ಹೀಗೆ ಪ್ರಾರಂಭವಾಗುವ ಉಪನ್ಯಾಸ ಅಲ್ಲಿ ಸೇರಿರುವ ಲಕ್ಷಾಂತರ ಭಕ್ತರನ್ನೇ ಅಲ್ಲದೆ ದೇಶದ ಎಲ್ಲ ಪ್ರಜೆಗಳನ್ನು ಉತ್ತೇಜಿಸುವುದರಲ್ಲಿ ಸಂದೇಹವೇ ಇಲ್ಲ. ಅದೇ ಸಮಯಕ್ಕೆ ತಮ್ಮವರೇ ಶತ್ರುಗಳು ಹಾಕಿದಂತೆ ಬಾಂಬುಗಳನ್ನು ಹಾಕುವುದರಿಂದ...

ಸ್ವಾಮಿ ಕಾಗದವನ್ನು ಮಡಿಸಿಕೊಂಡು ಸಂತೃಪ್ತಿಯಿಂದ ಪಕ್ಕದಲ್ಲೇ ಇದ್ದ ಛೇಂಬರಿನೊಳಗೆ ಹೋದ. ಪ್ರತಿದಿನ ಬೆಳಗಾದ ಕೂಡಲೇ ಅಲ್ಲಿಗೆ ಹೋಗಿ ರೆಕಾರ್ಡರ್ ಆನ್ ಮಾಡುವ ಅಭ್ಯಾಸ. ಅಲ್ಲಿ ಅವನನ್ನು ಬಿಟ್ಟು ಬೇರಾರಿಗೂ ಪ್ರವೇಶವಿಲ್ಲ. ಯಾರ್ಯಾರು, ಎಲ್ಲೆಲ್ಲಿ, ಏನೇನು ಮಾತನಾಡಿಕೊಂಡರೆ ಅದೆಲ್ಲ ಮೈಕ್ರೋಫೋನ್ ಮೂಲಕ ಬಂದು ಅಲ್ಲಿ ರೆಕಾರ್ಡ್ ಆಗುತ್ತದೆ. ಮಾರನೇ ಬೆಳಗ್ಗೆ ಅವನು ಅದನ್ನು ಕೇಳುತ್ತಾನೆ.

ಹಾಗೆ ಕೇಳುತ್ತಿರುವಾಗ ಈಗೊಂದು ಗಂಟೆಯ ಮುಂಚೆ ಪ್ರವಲ್ಲಿಕ–ಸಿ.ಬಿ.ಐ. ಛೀಫ್ ನಡುವೆ ನಡೆದಿದ್ದ ಸಂಭಾಷಣೆ ಬಂತು.

"ಹೌದು ಸಾರ್... ವಿಹಾರಿ ಪರಮೇಶ್ವರ್ ಎಂದೋ ಒಂದಾಗಿದ್ದಾರೆ..."

ಸಂಪೂರ್ಣ ಸಂಭಾಷಣೆಯನ್ನು ಕೇಳಿದ ಸ್ವಾಮಿಯ ಮುಖ ಮೇಲೇರಿ ಬಂದ ಸೂರ್ಯನಿಗಿಂತಲೂ ಕೆಂಪಗಾಯಿತು. ಕೋಪದಿಂದ ನಡುಗಲಾರಂಭಿಸಿದ. "ಪರಮೇಶ್ವರ್" ಎಲ್ಲ ದಿಕ್ಕುಗಳಲ್ಲೂ ಪ್ರತಿಧ್ವನಿಸುವಷ್ಟು ಜೋರಾಗಿ ಕಿರುಚುವ ಪ್ರಯತ್ನವನ್ನು ಬಲವಂತದಿಂದ ಹತ್ತಿಕ್ಕಿದ. ತನ್ನಲ್ಲೇ ತಾನು ಏನನ್ನೋ ಆಲೋಚಿಸುತ್ತಾ ಕೋಣೆಯಿಂದ ಹೊರಬಂದ.

* * * *

"ಅಪ್ಪಾ! ನಾನು ಹೇಳಲಿರುವ ಈ ಕೆಲವು ಮಾತುಗಳನ್ನು ಗಮನವಿಟ್ಟು ಕೇಳು. ನಿನ್ನನ್ನು ಹೇಗೆ ಭೇಟಿಮಾಡಬೇಕೋ, ಭೇಟಿಮಾಡಿದರೆ ಹೇಗೆ ಈ ಮಾತುಗಳನ್ನು ಹೇಳಬೇಕೋ ತೋಚದೆ ಈ ರೀತಿಯಾಗಿ ಕ್ಯಾಸೆಟ್ ಮೂಲಕ ನಿವೇದಿಸುತ್ತಿದ್ದೇನೆ. ಪೂರ್ತಿ ಕೇಳುತ್ತೀ ತಾನೇ..."ಎಂದು ಬರುತ್ತಿದ್ದ ಮಾತುಗಳನ್ನು ಕೇಳುತ್ತಾ ರೆಕಾರ್ಡರ್ ಕಡೆ ಆಶ್ಚರ್ಯದಿಂದ ನೋಡಿದ ಪರಮೇಶ್ವರ್.

ಅವನು ಆ ಸಂದಿಗ್ಧ ಸಮಯದಲ್ಲಿ ತುಂಬಾ ಸಮಾಧಾನದಿಂದಿದ್ದ, ಬೆಳಿಗ್ಗೆ ಪೇಪರ್ ಬರಲಿಲ್ಲ. ಅದೊಂದು ವಿಜಯ. ಮಗನಿಂದ ಯಾವ ತೊಂದರೆಯೂ ಇಲ್ಲ. ಎಲ್ಲಕ್ಕಿಂತ ಮುಖ್ಯವಾಗಿ ಪ್ರವಲ್ಲಿಕ ಯಾವ ಅಡೆತಡೇನೂ ಮಾಡುತ್ತಿಲ್ಲ. ಅದು ಮತ್ತಷ್ಟು ಸಂತೃಪ್ತಿ ನೀಡುತ್ತಿತ್ತು.

ಇಷ್ಟು ಸಂತೋಷಗಳಿಂದ ಅವನು ಭವನದಿಂದ ಹೊರಬಂದು ಅಗ್ನಿ ಪೀಠದ ಕಡೆ ನಡೆಯುತ್ತಿದ್ದಾಗ ಸಿ.ಬಿ.ಐ. ಛೀಫ್ ಬಿಟ್ಟುಹೋಗಿದ್ದ ಕ್ಯಾಸೆಟ್ ಕಂಡಿತು.

ರಾಮಲಾಲ್‌ನನ್ನು ಬಂಧಿಸಲು ಬಂದಾಗ ಅವನು ಸ್ವಾಮಿಗೆ ತೋರಿಸಿದ್ದ ಕ್ಯಾಸೆಟ್ ಅದು. ಅದರ ಆಧಾರದ ಮೇಲೆ ರಾಮಲಾಲ್‌ನನ್ನು ಬಂಧಿಸಲು ಬಂದಿದ್ದ ಅವನು.

ರಾಮಲಾಲ್ ಏನು ಹೇಳಿದ್ದನೆಂಬ ಕುತೂಹಲದಿಂದ ಅದನ್ನು ಆನ್ ಮಾಡಿದ. ಆ ಕ್ಯಾಸೆಟ್‌ನಲ್ಲಿ ರಾಮಲಾಲ್‌ನ ಸ್ವರವಿರುತ್ತದೆಂದುಕೊಂಡಿದ್ದ. ಆದರೆ ತನ್ನ ಮಗನ ಸ್ವರ!

"ಅಪ್ಪಾ! ಈ ಕ್ಯಾಸೆಟ್ಟನ್ನು ನೀನು ಕೇಳುತ್ತೀಯೋ, ಸ್ವಾಮಿ ಕೇಳುತ್ತಾನೋ ಇಲ್ಲವೇ ಇಬ್ಬರೂ ಕೂಡಿ ಕೇಳುತ್ತೀರೋ ನನಗೆ ಗೊತ್ತಿಲ್ಲ. ಇಬ್ಬರೂ ಕೇಳಿದರೆ ಪರ್ವಾಗಿಲ್ಲ. ಒಬ್ಬ ಮಗ ತನ್ನ ತಂದೆಯೊಡನೆ ಮಾತನಾಡುವ ಹಕ್ಕನ್ನು ಸ್ವಾಮಿ ವಿರೋಧಿಸುವುದಿಲ್ಲವಲ್ಲ! ಅದಕ್ಕೆ ರಾಮಲಾಲ್ ಮಾತನಾಡಿದ ಮಾತಿಗೆ ಬದಲಾಗಿ ನನ್ನ ಮಾತುಗಳನ್ನು ರೆಕಾರ್ಡ್ ಮಾಡಿದ್ದೇನೆ. ರಾಮಲಾಲ್‌ನ ಮಾತುಗಳಲ್ಲೇನಿದೆ ಅಪ್ಪಾ? ಅದರಲ್ಲಿ ಹೊಸ ವಿಷಯಗಳೇನಿವೆ? ಸ್ವಾಮಿ ತನಗೆ ಹೇಗೆ ದ್ರೋಹ ಬಗೆದ. ಅವನನ್ನು ತಾನೆಷ್ಟು ನಂಬಿದ್ದೆ–ಕೊನೆಗೆ ತನ್ನ ಕಾಲು ಮುರಿದಿದೆಯೆಂದು ತಿಳಿದ ಕೂಡಲೇ ಹೇಗೆ ಮುಗಿಸಿಬಿಡಲು ಪ್ರಯತ್ನಿಸಿದ–ಇಷ್ಟೇ ತಾನೆ!!

"ಅಪ್ಪಾ! ನಮ್ಮಲ್ಲಿ ಭಿನ್ನಾಭಿಪ್ರಾಯ ಬಂದ ದಿನ ಕೂಡ ಇದನ್ನೇ ಹೇಳಿದ್ದೆ. ಈ ಪ್ರಪಂಚದಲ್ಲಿ ಸಾಧಾರಣವಾಗಿ ಮನುಷ್ಯರ ನಡುವೆಯಿರುವುದು ವ್ಯಾಪಾರ-

ಬಂಧವೇ, ಅಪ್ಯಾಯತೆ ಎಂಬುದು ಇದಕ್ಕೆ ಅತೀತವಾದದ್ದು. ಒಬ್ಬ ಗಂಡಸಿಗೆ ಮುದಿತನದಲ್ಲಿ ಕ್ಯಾನ್ಸರ್ ಬಂದರೆ ಹೆಂಡತಿ ಹಗಲಿರುಳೂ ಅವನೊಡನೇ ಇದ್ದು ಅದೇಕೆ ಸೇವೆ ಮಾಡುತ್ತಾಳೆ? ನಿಶ್ಚಿತವಾಗಿಯೂ ಹಣಕ್ಕಾಗಿಯಲ್ಲ. ಅದು ಅಪ್ಪಾ ಅಪ್ಯಾಯತೆ ಅಂದರೆ...! ಒಂದು ಮನೆಯಲ್ಲಿ ಗಂಡನು ಹಗಲೂ ರಾತ್ರಿ ಕಷ್ಟಪಟ್ಟು ಸಂಪಾದಿಸುವುದನ್ನೇ ಏಕೆ ಧ್ಯೇಯವಾಗಿರಿಸಿಕೊಂಡಿರುತ್ತಾನೆ? ತನ್ನ ಹೆಂಡತಿ ಮಕ್ಕಳು ಸುಖವಾಗಿರಬೇಕೆಂದು. ಅದು ಅಪ್ಪಾ ಪ್ರೀತಿಯೆಂದರೆ!! ನೀನು ಹೇಳಿದ ಥಿಯರಿಯೇ ಸರಿಯಾದರೆ, ಶಾರೀರಕ ಸುಖವನ್ನು ತೃಪ್ತಿಪಡಿಸಿಕೊಳ್ಳಲು ಒಬ್ಬ ಸೂಳೆ, ಶಾರೀರಿಕ ಆರೋಗ್ಯಕ್ಕಾಗಿ ಒಬ್ಬ ನರ್ಸ್, ಮನೆಯನ್ನು ಸ್ವಚ್ಛವಾಗಿರಿಸಿಕೊಳ್ಳಲು ಒಬ್ಬ ಕೆಲಸದ ಹುಡುಗನನ್ನು ನೇಮಿಸಿಕೊಳ್ಳಬಹುದು. ಆದರೆ ಗಂಡಸು ವೈವಾಹಿಕ ಧರ್ಮವನ್ನೇ ಏಕೆ ಆಶ್ರಯಿಸುತ್ತಾನೆ? ತಿಂಗಳಿಗೆ 2–3 ಸಾವಿರ ಖರ್ಚು ಮಾಡಿದರೆ ಎಲ್ಲ ಸುಖ ಸಿಗುವಾಗ ಈ ಸಂಸಾರದ ಜಂಜಾಟದಲ್ಲಿ ಅದೇಕೆ ಗಂಡಸು ಒದ್ದಾಡಬೇಕು?

"ನನಗೆ ತಿಳಿದಮಟ್ಟಿಗೆ ಇದಕ್ಕೆ ಉತ್ತರ 'ಒಂದು ಮನೆಗಾಗಿ!' ಇಲ್ಲಿ ನನ್ನ ಅರ್ಥ 'ಹೌಸ್' ಅಲ್ಲ ಅಪ್ಪ 'ಹೌಸ್ ಈಸ್ ಡಿಫರೆಂಟ್ ಫ್ರಂ ಹೋಂ'. ಈ ವಿಷಯ ನಿನಗೆ ತಿಳಿಯದ್ದೇನೂ ಅಲ್ಲ. ಇದನ್ನೇ ಸುಲಭವಾಗಿ 'ನೈತಿಕ ಬಂಧನ' ಎನ್ನುತ್ತೇನೆ.

ಇದೇ 'ನೈತಿಕ–ಬಂಧನ'ವನ್ನು ಸ್ವಲ್ಪ ವಿಶಾಲವಾದ ಪರಿಧಿಯಲ್ಲಿ ಚರ್ಚಿಸೋಣ. ಪಾಪಭೀತಿಯಿಂದಲೊ ಮತ್ಯಾವುದೋ ನೈತಿಕ ಮೌಲ್ಯಗಳಿಗಾಗಿಯೋ ಮನುಷ್ಯ ಕೆಲವು ಬಂಧನಗಳನ್ನು ಏರ್ಪಡಿಸಿಕೊಳ್ಳುತ್ತಾನೆ. ಅದೇ ಇಲ್ಲದಿದ್ದರೆ ಈ ಪ್ರಪಂಚ ಓಗಿರುತ್ತಿರಲಿಲ್ಲ.

ನೀನೇ ಊಹಿಸು ಅಪ್ಪಾ! ಒಂದು ಅಂಗಡಿಗೆ ನಿನ್ನ ಮೂವರು ಬಲಶಾಲಿ ಸ್ನೇಹಿತರೊಡನೆ ಹೋಗಿ ನೂರು ರೂಪಾಯಿ ನೋಟಿಗೆ ಚಿಲ್ಲರೆ ಕೊಡೆಂದು ಕೇಳುತ್ತಿ. ಅಂಗಡಿಯವನು ಮೊದಲು ಚಿಲ್ಲರೆ ಕೊಡುತ್ತಾನೆ. ನೀನು ನೂರು ರೂಪಾಯಿ ನೋಟು ಕೊಡುವುದಿಲ್ಲ. ಕೊಟ್ಟಿದ್ದೇನೆನ್ನುತ್ತಿ. ಅವನೇನು ಮಾಡಬಲ್ಲ? ನಿನ್ನ ಹಿಂದೆ ಮೂವರು ಸಾಕ್ಷಿಗಳಿದ್ದಾರೆ. ಅದೇ ತಾನೆ ಸಾಕ್ಷಿಯೆಂದರೆ; ಅದೇ ತಾನೆ ನ್ಯಾಯವೆಂದರೆ...!

"ನಿನ್ನ ಹಿಂದೆ ಇರುವವರಲ್ಲಿ ಒಬ್ಬ ಬಲಶಾಲಿ ಎಂದುಕೊ. ಆ ಅಂಗಡಿಯವನು ಏನಾದರೂ ಜೋರಾಗಿ ಮಾತನಾಡಿದರೆ ಅಂಗಡಿಯನ್ನೇ ನೆಲಸಮ ಮಾಡಿಸುತ್ತಿ. ಅದೇ ತಾನೆ ಬಲ ಅಂದರೆ...!

ನಿನ್ನ ಹಿಂದಿರುವ ಮತ್ತೊಬ್ಬ ಪೊಲೀಸ್ ಡ್ರೆಸ್ಸಿನಲ್ಲಿದ್ದಾನೆಂದುಕೋ.

ಅಂಗಡಿಯವನು ಏನೂ ಮಾತನಾಡಲಾರ. ಅದೇ ತಾನೇ ಅಧಿಕಾರವೆಂದರೆ...!

"ನೋಡಿದೆಯಾ ಅಪ್ಪ, ನಿನ್ನ ಸ್ವಾಮಿಯ ಥಿಯರಿಯನ್ನು ಎಷ್ಟು ಸುಲಭ ವಾಗಿ ಹೇಳಬಹುದು. ಆ ದಿನ ನಮ್ಮ ಮನೆಯಲ್ಲಿ ತಾನು ಸ್ವತಃ ಈ ಥಿಯರಿ ಯನ್ನು ಸೃಷ್ಟಿಸಿದಂತೆ ಎಷ್ಟು ಜಂಭದಿಂದ ಹೇಳಿದ್ದ ಸ್ವಾಮಿ! ಹೀಗೆ ಮೋಸ ಮಾಡುವುದು ಎಷ್ಟು ಸುಲಭವೆಂದು ನೀನೇ ಯೋಚಿಸು.

"ಆದರೆ ಅಪ್ಪಾ—

"ಇದೇ ವ್ಯವಹಾರವನ್ನು ಇನ್ನೊಂದು ಕೋನದಿಂದ ಯೋಚಿಸಿದರೆ–

"ಮಧ್ಯಾಹ್ನ ಬಿಸಿಲಿನಲ್ಲಿ...ಸೋಡಾ ಕುಡಿದರೆ ನಾಲ್ಕಾಣೆ ಕಡಿಮೆಯಾಗು ತ್ತದೆಂದು ಭಯದಿಂದ, ದಿನವೆಲ್ಲಾ, ರಾತ್ರಿಯೆಲ್ಲ–ಬಿಸಿಲಿನಲ್ಲಿ...ಚಳಿಯಲ್ಲಿ ಒಂದು ಸಣ್ಣ ಅಂಗಡಿಯಲ್ಲಿ ಕುಳಿತು ನೂರು ರೂಪಾಯಿ ಸಂಪಾದಿಸಿದ್ದ ಆ ಅಂಗಡಿ ಯವನಿಂದ ಒಂದು ಟ್ರಿಕ್ ಉಪಯೋಗಿಸಿ, ನಮಗಿರುವ ಬುದ್ಧಿವಂತಿಕೆಯಿಂದ, ಶಕ್ತಿಯ ಆಧಾರದಿಂದ ಆ ನೂರು ರೂಪಾಯಿ ಹೊಡೆದುಬಿಟ್ಟರೆ . ...ನಿಜ ವಾಗಿಯೂ ತೃಪ್ತಿ ಇದೆಯೆ ಅಪ್ಪಾ?

"ಈ ದೇಶದಲ್ಲಿ ಈಗ ನಡೆಯುತ್ತಿರುವುದೂ ಅದೇ ಅಪ್ಪಾ!

"ತುಂಬಾ ಜನ ಡಾಕ್ಟರುಗಳು, ಕಂಟ್ರಾಕ್ಟರುಗಳು, ವ್ಯಾಪಾರಿಗಳು, ಇಂಡ- ಸ್ಟ್ರಿಯಲಿಸ್ಟ್‌ಗಳು, ವಕೀಲರೆಲ್ಲ ತಮ್ಮ ತಮ್ಮ ಪರಿಧಿಯಲ್ಲಿ ಹಣ ಸಂಪಾದಿಸುತ್ತಾ, ತಮ್ಮನ್ನು ರಕ್ಷಿಸಿಕೊಳ್ಳಲು ಒಂದು ಅನುಕೂಲಕರ ವ್ಯವಸ್ಥೆ ಯನ್ನು ನಿರ್ಮಿಸಿಕೊಂಡು ಅದಕ್ಕೆ ಕಾವಲಾಗಿ ರಾಜಕೀಯ ನಾಯಕರನ್ನಿರಿಸಿ ಕೊಂಡಿದ್ದಾರೆ. ಆ ನಾಯಕ ಇವರನ್ನೆಲ್ಲ ತಿಂದುಬಿಡುವ ಬುದ್ಧಿವಂತನಾಗಿ ಬದ ಲಾಗಿದ್ದಾನೆ. ಶಕ್ತಿಶಾಲಿಗಳನ್ನು ಉಪಯೋಗಿಸಿಕೊಂಡು ತನ್ನ ಸ್ಥಾನವನ್ನು ಭದ್ರ ಪಡಿಸಿಕೊಳ್ಳುತ್ತಿದ್ದಾನೆ. ಆ ಶಕ್ತಿವಂತ ಮತ್ತೆ ತನ್ನ ಸ್ವಾರ್ಥಕ್ಕಾಗಿ ಸ್ವಲ್ಪ ಸ್ವಲ್ಪ ವಿಜೃಂಭಿಸುತ್ತಿದ್ದಾನೆ. ಇಲ್ಲದಿದ್ದರೆ ಎಂದಾದರೂ ನಮ್ಮ ಚರಿತ್ರೆಯಲ್ಲಿ ಇತ್ತಾ ಅಪ್ಪಾ–ಕೋರಿಕೆಗಳನ್ನು ತೀರಿಸಿಕೊಳ್ಳಲು ವಿಮಾನಗಳನ್ನು ಹೈಜಾಕ್ ಮಾಡುವ ಪದ್ಧತಿ? ಮದುವೆಗೆ ಬಂದವರನ್ನೆಲ್ಲಾ ಟೆರ್ರರಿಸ್ಟ್‌ಗಳು ಕೊಲ್ಲುವ ಪದ್ಧತಿ, ಬಸ್ಸು ನಿಲ್ಲಿಸಿ ಎದುರಾಳಿಗಳನ್ನು ಕೊಡಲಿಗಳಿಂದ ಚಚ್ಚಿಹಾಕುವ ಪದ್ಧತಿ?

"ಕೋರ್ಟುಗಳನ್ನು ರಾಜಕೀಯ ನಾಯಕರು ಪ್ರಶ್ನಿಸುವುದು–ಕೇಂದ್ರ, ರಾಜ್ಯ ಸರ್ಕಾರಗಳು ಶತ್ರುಗಳಂತೆ ವ್ಯವಹರಿಸುವುದು-'ಹಿಟ್‌ಲಿಸ್ಟ್'ನಲ್ಲಿ ಇರು ವವರನ್ನು ರಕ್ಷಿಸಲು ಸರ್ಕಾರ ಕೋಟ್ಯಾಂತರ ರೂಪಾಯಿ ಖರ್ಚುಮಾಡುವುದು– ಇವು ಇದಕ್ಕೂ ಮುಂಚೆ ಇತ್ತಾಪ್ಪಾ? ಇದೆಲ್ಲ ಒಂದು ಗೇಮ್!

"... ನನಗೆ ದುಃಖವಾಗುತ್ತದೆ. ಒಬ್ಬ ಸಾಮಾನ್ಯ ಪ್ರಜೆಯಾಗಿ ನಾನು ಈ ವ್ಯವಸ್ಥೆಯನ್ನು ನೋಡುತ್ತ ದುಃಖಿಸುತ್ತಿದ್ದೇನೆ! ಈ ಹತ್ತು ವರ್ಷಗಳಲ್ಲಿ ಬೆಳೆದು ನಿಂತಿರುವ ಟೆರ್ರರಿಸಂ, ನಾಶವಾಗುತ್ತಿರುವ ನೈತಿಕ ಮೌಲ್ಯಗಳು ಕ್ಷುದ್ರ ರಾಜಕೀಯಗಳು–ಭದ್ರತಾರಾಹಿತ್ಯ ಎಷ್ಟು ಬೆಳೆದಿದೆಯೆಂದು ನೋಡಿ ನನಗೆ ಭಯವಾಗುತ್ತಿದೆ. ಇವೆಲ್ಲಕ್ಕೂ ಕಾರಣ ಯಾರೆಂದು ಪ್ರಶ್ನಿಸಿಕೊಂಡರೆ ಉತ್ತರ...ಬುದ್ಧಿವಂತರು!

"ಹೌದಪ್ಪ. ನಿನ್ನಂತಹ ಬುದ್ಧಿವಂತರೇ!

"ಈ ಪ್ರಪಂಚದಲ್ಲಿ ಶೇಕಡ ತೊಂಬತ್ತರಷ್ಟು ನನ್ನಂತಹ ಸಾಮಾನ್ಯರಾದರೆ, ಕೇವಲ ಹತ್ತು ಮಂದಿ ನಿನ್ನಂತಹವರು. ನಿನ್ನಂತಹ ಗ್ರೇಟ್ ಕ್ರಿಮಿನಲ್ ಲಾಯರನ್ನು ಮುಖ್ಯಮಂತ್ರಿಗಳು ಸನ್ಮಾನ ಮಾಡಿದರೂ ಆಶ್ಚರ್ಯವಿಲ್ಲ. ನಿನ್ನಂತಹ ಬುದ್ಧಿವಂತ ಏನು ಹೇಳಿದರೂ ಜನ ನಂಬುತ್ತಾರೆ. ತಮ್ಮ ಭವಿಷ್ಯತ್ತನ್ನು ನಿನ್ನಂತಹವರ ಕೈಯ್ಯಲ್ಲಿರಿಸಿ, ನೀವೇನೋ ಸಾಧಿಸುತ್ತೀರೆಂದು ಆಸೆಯಿಂದ ಎದುರು ನೋಡುತ್ತಿರುತ್ತಾರೆ ಸಾಮಾನ್ಯ ಜನ.

"ಈ ವ್ಯವಸ್ಥೆಯನ್ನು ನಿರ್ಮಿಸಿದವರೂ ನಿನ್ನಂತಹವರೇ.

"ಆದರೆ ನೀವೆಲ್ಲಾ ಮಾಡುತ್ತಿರುವುದೇನು? ಕಾಡುಗಳನ್ನು ನಾಶಗೊಳಿಸಿ, ಅಣುವಿಕಿರಣಗಳಿಂದ ಖಾಯಿಲೆ ತರಿಸುವ ವರೆಗೂ, ಪ್ರೇಕ್ಷಕರಲ್ಲಿ ಕೋರಿಕೆಗಳನ್ನು ರೊಚ್ಚಿಗೆಬ್ಬಿಸುವಂಥ ಸಿನೆಮಾಗಳ ತಯಾರಿಕೆಯವರೆಗೂ, ಫೈನಾನ್ಸ್ ಕಂಪನಿಗಳ ಮೋಸಗಳ ವರೆಗೂ–ಎಲ್ಲಿ ನೋಡಿದರೂ, ಯಾವ ರೀತಿ ನೋಡಿದರೂ ಬುದ್ಧಿವಂತ ದಡ್ಡನ ಮೇಲೆ ಮಾಡುವ ಎಕ್ಸ್‌ಪ್ಲಾಯಿಟೇಷನ್! ಶೇ. ಹತ್ತರಷ್ಟು ಜನ ಶೇ. ತೊಂಬತ್ತರಷ್ಟು ಜನರ ಮೇಲೆ ಮಾಡುವ ಮೋಸ! ಮರ್ರಿಗಿಡಕ್ಕೆ ವಿವಿಧ ರೀತಿಯ ರೆಂಬೆಗಳು ಬಂದಂತೆ ಈ ನಿರ್ಮಾಣ ಸೌಧದಲ್ಲಿ ಗೂಂಡಾಗಳೂ ರೌಡಿಗಳೂ, ಭ್ರಷ್ಟರೂ, ಕಾಮಿಗಳೂ–ತಮ್ಮ ತಮ್ಮ ಬಯಕೆಗಳನ್ನು ಈಡೇರಿಸಿಕೊಳ್ಳಲು ಸಿದ್ಧರಾಗಿದ್ದಾರೆ. ನಿನ್ನಂತಹ ಬುದ್ಧಿಜೀವಿಗಳಿಂದ ಸ್ವಾಮಿಯಂತಹ ಕೆಡುಕು ಮೇಧಾವಿಗಳು ಪ್ರತಿಷ್ಠಾಪಿಸಲ್ಪಟ್ಟು ಪ್ರಧಾನಿಗಳಾಗಿ, ಮುಖ್ಯಮಂತ್ರಿಗಳಾಗಿ, ವಿರೋಧ ಪಕ್ಷದ ನಾಯಕರಾಗಿ ಉಪನ್ಯಾಸಗಳಲ್ಲಿ ಒಬ್ಬರನ್ನೊಬ್ಬರು ನಿಂದಿಸಿಕೊಳ್ಳುತ್ತಾ, ತಮ್ಮ ಆಸ್ತಿಗಳನ್ನು ಬೆಳೆಸಿಕೊಳ್ಳುತ್ತಾ ಯುವಪೀಳಿಗೆಯನ್ನು ನಿರ್ವೀರ್ಯಗೊಳಿಸುತ್ತಾ ಬದುಕುತ್ತಿದ್ದಾರೆ.

"ನಾವೆಲ್ಲಾ ಆಸೆಯಿಂದ ನಿಮ್ಮಲ್ಲಿ ಬದಲಾವಣೆಗಾಗಿ ಕಾಯುತ್ತಿದ್ದೇವೆ ಅಪ್ಪಾ. ನಿಮ್ಮಲ್ಲಿ ಸ್ವಾರ್ಥಚಿಂತನೆ ಕಡಿಮೆಯಾಗುತ್ತದೆಂದು, ನಮಗಾಗಿ ಕೂಡಾ ನೀವು ಆಲೋಚಿಸುತ್ತೀರೆಂದು ಎದುರು ನೋಡುತ್ತಿದ್ದೇವೆ. ಆ ಬದಲಾವಣೆ

ಏನಾದರೂ ನಿಮ್ಮಲ್ಲಿ ಬರದೆ ಇದ್ದರೆ ಭವಿಷ್ಯತ್ತಿನಲ್ಲಿ ಟೆರ್‍ರರಿಸಂ ಬಿಟ್ಟು ಉಳಿದದ್ದೇನೂ ಇರುವುದಿಲ್ಲ; ಅದು ನಿನಗೂ ಗೊತ್ತು. ನಿಜ ಹೇಳಪ್ಪಾ–ಇವನ್ನೆಲ್ಲಾ ನೀನೂ ಯೋಚಿಸಿರಲಿಲ್ಲವಾ? ನಿನ್ನಲ್ಲಿಯೂ ಘರ್ಷಣೆ ಉಂಟಾಗಿರಲಿಲ್ಲವಾ?... ಥೀ ಏನೀ ದೇಶ? ನಮ್ಮ ಭವಿಷ್ಯತ್ತು ಹೇಗೆ? ಎಂಬ ಆಲೋಚನೆ ಬಂದಿರಲಿಲ್ಲವಾ?

"ಈ ಹೋರಾಟ ನಿನಗೂ ನನಗೂ ಮಧ್ಯೆ ಆಗಲೀ, ರಾಮಲಾಲ್‌ಗೂ ನನಗೂ ಮಧ್ಯೆ ಆಗಲೀ ಅಲ್ಲ. ಸ್ವಾಮಿಗೂ ಸೂರ್ಯರಾವ್‌ಗೂ ಮಧ್ಯೆ ಕೂಡಾ ಅಲ್ಲ; ಮೋಸ ಹೋಗುವುದು ತನ್ನ ಬದುಕಿನ ಒಂದು ಭಾಗವೆಂದು ಇದುವರೆವಿಗೂ ನಂಬಿಕೊಂಡು ಬಂದಿರುವ ಶ್ರೀಸಾಮಾನ್ಯ. ಶ್ರೀಮಂತಿಕೆ ನುಂಗಿದ ಬೇಲದ ಹಣ್ಣಿನಂತಹ ವ್ಯವಸ್ಥೆಯ ಬಗ್ಗೆ ಬೇಸರ ಹೊಂದಿ ಕೊಡುತ್ತಿರುವ ಎದಿರೇಟು. ಅಗ್ನಿಸ್ನಾನ ಬೇಕಾಗಿಲ್ಲ ಅಪ್ಪಾ–ರಾಜಕೀಯ, ಮಾನಸಿಕ, ಸಾಮಾಜಿಕ ಬದಲಾವಣೆಯಿಂದ ಕೂಡಿದ ವ್ಯವಸ್ಥೆಯ ಸ್ನಾನ. ನನ್ನ ಕೂಗು ನಿನ್ನ ಆತ್ಮವಂಚನೆಯ ಸಮರ್ಥನೆಯನ್ನು ಸೀಳಿಕೊಂಡು ನಿನ್ನ ಮನಸ್ಸಿಗೆ ನಾಟಿದರೆ ಒಳ್ಳೆಯದೇ, ಇಲ್ಲದಿದ್ದರೆ ಇನ್ನಷ್ಟು ಹೋರಾಟ ಮಾಡದೇ ವಿಧಿಯಿಲ್ಲ. ಯೋಚಿಸು...ನನ್ನ ತಂದೆಯಾಗಿ ಅಲ್ಲ. ಈ ದೇಶದ ಮೇಧಾವೀ ಪುರುಷನಾಗಿ ಆಲೋಚಿಸು."

ಟೇಪ್ ರೆಕಾರ್ಡರ್ ತನ್ನಿಂತಾನೆ ನಿಂತಿತು.

ಪರಮೇಶ್ವರ್ ಹಾಗೆಯೇ ನಿಂತುಬಿಟ್ಟ. ಕೆಲವು ಗಂಟೆಗಳ ಹಿಂದೆ ತನ್ನ ಮಗನನ್ನು ತನ್ನ ಬಳಿ ಕೂರಿಸಿಕೊಂಡು ತನ್ನ ವಾದವನ್ನು ಹೇಳಬೇಕೆಂದಿದ್ದ. ಆ ಕೆಲಸವನ್ನೇ ತನ್ನ ಮಗ ಸ್ವಲ್ಪ ಬುದ್ಧಿವಂತಿಕೆಯಿಂದ ಮಾಡಿದ್ದಾನೆ. ಮತ್ತಷ್ಟು ಸ್ಪಷ್ಟವಾಗಿ ತಿಳಿಯುವಂತೆ ಮಾಡಿದ್ದಾನೆ.

"ನಾನು ಸಾಮಾನ್ಯ" ಎಂದಿದ್ದಾನೆ ಅವನು, ಅಲ್ಲ. ಅವನು ತನಗಿಂತಲೂ ತಿಳುವಳಿಕೆಯುಳ್ಳವನು, ನಿಜ!...ಕೆಟ್ಟವರ ಕಡೆ ನಿಂತ ಪ್ರತಿಯೊಬ್ಬನೂ ಅದೆಷ್ಟೇ ಆತ್ಮವಂಚನೆ ಮಾಡಿಕೊಂಡರೂ ಈ ಘರ್ಷಣೆ ತಪ್ಪುವುದಿಲ್ಲವೇನೋ, ಆದರೆ, ಅವರವರ ದಾರಿ ಅವರವರಿಗೆ ಎಂದು ಬದುಕುತ್ತಿರುತ್ತಾನೆ. ತಾನೂ ಅಷ್ಟೇನಾ...ಏನೋ ಕಾಲವೇ ನಿರ್ಧರಿಸಬೇಕು.

ಆದರೆ ಅದಕ್ಕೆ ಎಷ್ಟೋ ಕಾಲ ಅವಶ್ಯವಿಲ್ಲ. ಬರಲಿರುವ ಅತೀ ಸಮೀಪದ ಕಾಲವೇ ಅದನ್ನು ನಿರ್ಧರಿಸಲಿದೆ,

* * * *

ಪುವಲ್ಲಿಕಳಿಗೆ ಕ್ಷಣಕ್ಷಣವೂ ಅಸಹನೆ ಹೆಚ್ಚಾಗುತ್ತಿದೆ. ವಿಹಾರಿಯ ಪತ್ತೆಯಿಲ್ಲ. ಇದನ್ನೆಲ್ಲಾ ನೋಡಲು ತಾನು ಕೇವಲ ಪ್ರೇಕ್ಷಕಳಾಗಿ ಉಳಿದುಬಿಡುತ್ತೇನಾ ಎಂದುಕೊಳ್ಳುತ್ತಿದ್ದಂತೆಯೇ, ಸುನಾದಮಾಲ ಅವಳ ಬಳಿಗೆ ಬಂದಳು, ಪಕ್ಕದಲ್ಲೇ ವಿಷ್ಣು ಇದ್ದ.

"ಒಟ್ಟು ಎಷ್ಟು ಜನ ಸ್ಟೂಡೆಂಟ್ಸ್ ಬಂದಿದ್ದಾರೆ?" ಎಂದು ಕೇಳಿದಳು.

"ನಮ್ಮ ಸ್ಕೂಲಿನವರು-ಇನ್ನೂ ಬೇರೆ ಬೇರೆ ಸ್ಕೂಲಿನವರು" ಉತ್ತರಿಸಿದ ವಿಷ್ಣು.

ಅವಳು ಏನೋ ಹೇಳಲು ಬಾಯಿ ಬಿಡುತ್ತಿದ್ದಂತೆಯೇ ಜನರಲ್ಲಿ ಒಮ್ಮೆಗೇ ಕಲರವ ಹೆಚ್ಚಾದ್ದನ್ನು ಗಮನಿಸಿ, ಅತ್ತಕಡೆ ತಲೆ ತಿರುಗಿಸಿ ನೋಡಿದಳು.

ಮುಖ್ಯ ದ್ವಾರದಿಂದ ಸ್ವಾಮಿ ಹೊರಬರುತ್ತಿದ್ದ. ರೇಷ್ಮೆ ಪೀತಾಂಬರ ಧರಿಸಿ, ಕೈಮೇಲಿನಿಂದ ವಸ್ತ್ರವನ್ನು ಭುಜದ ಮೇಲೆ ಹಾಕಿಕೊಂಡಿದ್ದ. ಹಣೆಯ ಮೇಲೆ ನಾಗರಹಾವಿನ ಹೆಡೆಯ ಆಕಾರದ ತಿಲಕ ಕಾಣುತ್ತಿದೆ. ಅವನು ಗಂಭೀರದಿಂದ ನಡೆಯುತ್ತಿದ್ದಂತೆಯೇ ಹಿಂದೆ ಭಕ್ತವೃಂದ ಬರುತ್ತಿದೆ. ಎದುರಿಗೆ ಆಕಾಶದಲ್ಲಿ ಕೆಂಪನೆಯ ಸೂರ್ಯ...ಆ ಬಿಸಿಲಿಗೆ ಅವನ ಮುಖ ಅದಕ್ಕಿಂತಲೂ ಕೆಂಪಗಿದೆ. ಯಾವುದೋ ತಿಳಿಯದ ಕೋಪ. ಅವನ ಮುಖದಲ್ಲಿ ತಾಂಡವವಾಡುತ್ತಿದೆ. ಅದನ್ನು ಅಡಗಿಸಿಕೊಳ್ಳುವ ಪ್ರಯತ್ನದಲ್ಲಿ ಮುಖ ಮತ್ತಷ್ಟು ಕೆಂಪೇರುತ್ತಿದೆ.

ಭಕ್ತರು ಮತ್ತಷ್ಟು ಜೋರಾಗಿ ಜಯಘೋಷಣೆಗಳನ್ನು ಮಾಡುತ್ತಿದ್ದಾರೆ. ಅಷ್ಟರಲ್ಲಿ ವೇದಿಕೆಯ ಮೇಲೆ ಪರಮೇಶ್ವರ ಕಂಡ. ಅವನು ಕೈ ಎತ್ತುತ್ತಿದ್ದಂತೆಯೇ ಕಲರವ ಕಡಿಮೆಯಾಯಿತು. ಅಲ್ಲಿ ನೆರೆದಿದ್ದ ಪ್ರಜೆಗಳನ್ನು ಉದ್ದೇಶಿಸಿ ಪರಮೇಶ್ವರ ಹೇಳಿದ:

"ಇಂದು ಮಹಾ ಸುದಿನ. ಅನಂತಾನಂತಸ್ವಾಮಿ ಇಂದು ತಮ್ಮ ಮನಸ್ಸಿನ ಭಾವನೆಗಳನ್ನು ನಿಮ್ಮ ಮುಂದೆ ಇಡಲಿದ್ದಾರೆ. ಸಹನೆ, ನಿಸ್ವಾರ್ಥ, ಭಕ್ತಿ, ಸಮಸ್ತ ಮತಗಳ ಬಗ್ಗೆ ಪ್ರೀತಿ-ಈ ಆದರ್ಶಗಳೊಡನೆ ನಾವು ಹೇಗೆ ಮೋಸಹೋಗುತ್ತಿದ್ದೇವೆ ಎಂಬುದನ್ನು ಹೇಳುತ್ತಾರೆ. ನಮ್ಮ ಐಕ್ಯತೆಗಾಗಿ ಅವರು ಇಷ್ಟು ದಿನ ಮಾಡಿರುವ ಪ್ರಾರ್ಥನೆಯಿಂದ ಸಾಧಿಸಿರುವುದನ್ನು ನಿವೇದಿಸಲಿದ್ದಾರೆ. ನಮಗಾಗಿ, ನಮ್ಮ ಜಾತಿಗಾಗಿ, ನಮ್ಮ ಮತಕ್ಕಾಗಿ, ತಮ್ಮ ಬದುಕನ್ನೇ

ಮುಡುಪಾಗಿಟ್ಟಿರುವ ಮಹಾನುಭಾವರು ಇವರು! ದಾರಿದ್ರ್ಯದಿಂದ, ರಾಜಕೀಯ ಕುಟಿಲತ್ವದಿಂದ ನಮಗೆ ತಿಳಿಯದೆಯೇ ಬೇರೆ ಮತಸ್ಥರು ನಮಗೆ ಮಾಡುತ್ತಿರುವ ಅನ್ಯಾಯಗಳಿಂದ, ಚಾಪೆಯ ಕೆಳಗೆ ನೀರಿನಂತೆ ಹರಡಿಕೊಳ್ಳುತ್ತಿರುವ ಅಪಾಯಗಳ ಬಗ್ಗೆ ಎಚ್ಚರಿಸಲಿದ್ದಾರೆ."

ಅಲ್ಲಿ ಸೂಜಿ ಬಿದ್ದರೂ ಕೇಳಿಸುವಂತಹ ನಿಶ್ಶಬ್ದ. ಕಣ್ಣು ಮುಚ್ಚಿಕೊಂಡರೆ ಅಲ್ಲಿ ಅಷ್ಟು ಜನರಿದ್ದಾರಾ ಎಂದು ಅನುಮಾನ ಬರುವಷ್ಟು ನಿಶ್ಶಬ್ದವಾಗಿದೆ. ಆ ನಿಶ್ಶಬ್ದವನ್ನು ಛೇದಿಸುತ್ತಾ ಪರಮೇಶ್ವರ್‌ನ ಮಾತುಗಳು ಅಲೆ ಅಲೆಯಾಗಿ ತೇಲಿ ಬಂದವು.

"ಉಪನ್ಯಾಸವಾದ ಕೂಡಲೇ ನಮ್ಮ ಮತದ *ಉದ್ಧಾರಕ್ಕಾಗಿ ಸ್ವಾಮಿಗಳು* ಅಗ್ನಿ ಪ್ರವೇಶ ಮಾಡಲಿದ್ದಾರೆ! ಪುನೀತರಾಗಿ ಅವರು ಹಿಂತಿರುಗಿ ಬಂದರೆ ಅವರು ಮಹಾಪುರುಷರಾಗುತ್ತಾರೆ. ನಮ್ಮ ಮತೋದ್ಧಾರಣೆ ಆ ಭಗವಂತನಿಗೆ ಇಷ್ಟವಿಲ್ಲದಿದ್ದರೆ ಸ್ವಾಮಿಯವರನ್ನು ತನ್ನಲ್ಲೇ ಐಕ್ಯವಾಗಿರಿಸಿಕೊಳ್ಳುತ್ತಾನೆ."

ಸಮುದ್ರ ಉಕ್ಕೇರಿದಂತೆ, ಪರ್ವತಸಿಡಿಸಿದಂತೆ ಒಮ್ಮೆಗೇ ಜನರ ಕಲರವ ಪ್ರಾರಂಭವಾಯಿತು.

ಪರಮೇಶ್ವರ್ ವೇದಿಕೆಯಿಂದಿಳಿದು ಸ್ವಾಮಿಯ ಬಳಿಗೆ ಬಂದ.

ಸ್ವಾಮಿ ತೀಕ್ಷ್ಣವಾಗಿ ಅವನೆಡೆಗೆ ನೋಡಿದ. ಸ್ವರ ಕರ್ಕಶವಾಗಿ ನುಡಿಯಿತು,

"ಚೆನ್ನಾಗಿ ನಟಿಸುತ್ತಿದ್ದಿ ಪರಮೇಶ್ವರ್! ಅದ್ಭುತವಾಗಿ ನಟಿಸುತ್ತಿದ್ದಿ" ಪರಮೇಶ್ವರ್ ಪೆಟ್ಟು ತಿಂದಂತೆ ಗಲಿಬಿಲಿಗೊಂಡು ನೋಡಿದ.

ಸ್ವಾಮಿ ಕೂಡಲೇ ಎಚ್ಚೆತ್ತುಕೊಂಡ. ಮತ್ತೇನನ್ನೂ ಮಾತನಾಡಲಿಲ್ಲ. ವೇದಿಕೆಯ ಕಡೆಗೆ ನಡೆದ. ಪರಮೇಶ್ವರ್ ಅವನ ಹಿಂದೆಯೇ ನಡೆಯುತ್ತಾ "ಏನು ನಡೆಯಿತು ಸ್ವಾಮಿ?" ಕಂಗಾಲಾಗಿ ಕೇಳಿದ. ಸ್ವಾಮಿ ಅವನಿಗೆ ಉತ್ತರಿಸದೆ ನೋಡಿದ. ಅವನ ಕಣ್ಣುಗಳಲ್ಲಿ ಬೆಂಕಿಯ ಉಂಡೆ ಕಾಣುತ್ತಿತ್ತು. ಪರಮೇಶ್ವರ್ ಮತ್ತೆ ಅದೇ ಪ್ರಶ್ನೆಯನ್ನು ಕೇಳಿದ.

ಸ್ವಾಮಿ ಅಷ್ಟೇ ಕಠಿಣ ಸ್ವರದಿಂದ, "ನನಗೆಲ್ಲಾ ತಿಳಿದುಬಿಟ್ಟಿದೆ. ನೀನೂ ನಿನ್ನ ಮಗ ಒಂದಾದ ವಿಷಯ. ನನ್ನನ್ನು ಈ ದಿನ ಸಜೀವ ದಹನಮಾಡಲು ಏರ್ಪಡಿಸಿರುವ ಅಗ್ನಿಪ್ರವೇಶದ ವಿಷಯ" ಎಂದು ಹೇಳುತ್ತಿದ್ದ. 'ಇಷ್ಟು ಜನ ಭಕ್ತರು ಇಲ್ಲಿರದಿದ್ದರೆ ನಿನ್ನನ್ನು ಉದ್ದುದ್ದವಾಗಿಯೇ ಸೀಳಿಬಿಡುತ್ತಿದ್ದೆ' ಎಂಬಂತೆ! ಪರಮೇಶ್ವರ್ ದಿಗ್ಭ್ರಮೆಗೊಂಡ. 'ನೀ...ನೀವು ತಪ್ಪು ತಿಳಿದಿದ್ದೀರಿ ಸ್ವಾಮಿ' ಅಂದ.

"ನಿನ್ನ ಮಗನಿಗೆ ಇಷ್ಟು ಬುದ್ಧಿಯಿದೆ ಎಂದರೆ ನನ್ನಿಂದ ನಂಬಲಾಗುವುದಿಲ್ಲ. ನಿಶ್ಚಿತವಾಗಿಯೂ ಇದೆಲ್ಲ ನಿನ್ನ ಬುದ್ಧಿಯೇ. ರಾಮಲಾಲ್‌ನನ್ನು 'ಬ್ರೇಕ್' ಮಾಡುವುದರಲ್ಲಿಯೂ ಸೂರ್ಯಾರಾವ್‌ನನ್ನು ನನ್ನಿಂದ ಬೇರ್ಪಡಿಸುವುದರಲ್ಲಿಯೂ."

ಪರಮೇಶ್ವರ್‌ಗೆ ದುಃಖ ಬಂತು, ನಗುವೂ ಬಂತು. ಗೆದ್ದ! ತನ್ನ ಮೇಲೆ ತನ್ನ ಮಗ ಗೆದ್ದಿದ್ದಾನೆ. ಅವನು ಹೇಳಿದಂತೆ ಮಾಡಿ ತೋರಿಸಿದ್ದಾನೆ.

"ಅಪ್ಪಾ...ನಮ್ಮದು ಅಪ್ಯಾಯತೆಯಿಂದ ನೇಯ್ದಿರುವ ಸುಖ ಸಂಸಾರದ ಮನೆ...ಅದು ವ್ಯಾಪಾರೀ ಬಂಧಗಳಿಂದ ಮಾಡಿದ ಅರಗಿನ ಮನೆ ಅಲ್ಲ. ಅಲ್ಲಿ ಅಡಿಪಾಯ ಅಪನಂಬಿಕೆ. ನಮ್ಮ ಅಡಿಪಾಯ ನಂಬಿಕೆ...ಪ್ರೀತಿ" ಎಂದಿದ್ದ ಮಗನ ಮಾತುಗಳು ನೆನಪಾದವು. ತನ್ನನ್ನು ತಾನೆ ನಿಯಂತ್ರಿಸಿಕೊಂಡ. ಸೂರ್ಯಾರಾವ್‌ನಂತೆ ಅವನು ನಂಬಿಕೆ ದ್ರೋಹಿಯಲ್ಲ! ರಾಮಲಾಲ್‌ನಂತೆ ಕೂಡಲೇ ಆವೇಶದಲ್ಲಿ ನಿರ್ಧಾರ ತೆಗೆದುಕೊಳ್ಳುವವನಲ್ಲ. ಜ್ಞಾನಿ . ಎಲ್ಲೋ ತಪ್ಪಿ ಅಜ್ಞಾನವನ್ನು ಸ್ವಾರ್ಥದ ಕಡೆಗೆ ತಿರುಗಿಸಿದವನು.

"ಸ್ವಾಮಿ! ಈ ಕ್ಷಣ ನೀವು ಆವೇಶದಲ್ಲಿ ಏನೇನೋ ಮಾತನಾಡುತ್ತಿದ್ದೀರಿ. ಯಾರೋ ನಿಮ್ಮ ಮನಸ್ಸನ್ನು ಕೆಡಿಸಿದ್ದಾರೆ."

"ಐದು ನಿಮಿಷಗಳ ಮುಂಚೆಯಷ್ಟೇ ನನಗೆ ನಿಜ ತಿಳಿಯಿತು. ಪ್ರವಲ್ಲಿಕ ಛೀಫ್‌ನೊಡನೆ ಹೇಳಿದ್ದನ್ನೆಲ್ಲ ಕೇಳಿದೆ."

"ಲಕ್ಷಾಂತರ ಭಕ್ತರು ನಿಮಗಾಗಿ ಕಾಯುತ್ತಿದ್ದಾರೆ. ನಾವು ನಂತರ ಆ ವಿಷಯಗಳನ್ನೆಲ್ಲಾ ಮಾತನಾಡಿಕೊಳ್ಳೋಣ! ನಮ್ಮ ನಡುವೆ ಬಿರುಕನ್ನುಂಟು ಮಾಡಲು ಪ್ರವಲ್ಲಿಕ ಆಡಿರುವ ನಾಟಕ–ಸ್ವಾಮಿ ಇದು. ಅದನ್ನು ನಂಬಬೇಡಿ."

"ಅಷ್ಟೇ ಅಂತೀಯಾ?"

"ನೀವು ಏನು ಪ್ರಮಾಣ ಮಾಡೆಂದರೂ ನಾನು ಸಿದ್ಧ."

"ಬರೀ ಮಾತೇ ಆದರೆ ನಂಬುವುದಿಲ್ಲ. ಮಾತಿಗೆ ಮೀರಿ ಅದಕ್ಕೆ ಸಾಕ್ಷಿ ಸಿಕ್ಕಿದರೆ ನಂಬದೇ ವಿಧಿಯಿಲ್ಲವಲ್ಲ."

"ಯಾವ ಸಾಕ್ಷಿ ಸಿಕ್ಕಿದೆ ನಿಮಗೆ?"

"ಪೇಪರ್ ವ್ಯಾನನ್ನು ನಾಶಪಡಿಸಿದಂತೆ ನಟಿಸಿ ನಿನ್ನ ಮಗನಿಗೆ ನೀನೇ ಪೇಪರ್‌ಗಳನ್ನು ಕೊಟ್ಟಿರುವುದು ಸುಳ್ಳಾ?"

ಟೆನ್ಷನ್ ಹೋದಂತೆ ಪರಮೇಶ್ವರ್ ನಕ್ಕುಬಿಟ್ಟ. "ಅದೇ ನಿಜವಾಗಿದ್ದಿದ್ದರೆ ಇದುವರೆವಿಗೆ ನಗರದಲ್ಲೆಲ್ಲ ಅಲ್ಲೋಲ ಕಲ್ಲೋಲವಾಗುತ್ತಿತ್ತು. ಇಷ್ಟು ಜನ ಭಕ್ತರು ಅಲ್ಲಿ ಸೇರುತ್ತಿರಲಿಲ್ಲ. ಸ್ವಾಮಿ! ಈಗಲೇ ತಡವಾಗಿದೆ.

ವೇದಿಕೆಹತ್ತಿ"

ಸ್ವಾಮಿ ವೇದಿಕೆಯನ್ನು ಹತ್ತುತ್ತಾ ಕೊನೆಯ ಮೆಟ್ಟಿಲ ಬಳಿ ನಿಂತ. ಮುಖವನ್ನು ಹಿಂದಕ್ಕೆ ತಿರುಗಿಸದೆಯೇ ಹೇಳಿದ.

"ನೀನು ಹೇಳಿದ್ದೆಲ್ಲ ನಿಜವಾದರೆ ಅದಕ್ಕಿಂತಲೂ ನನಗೆ ಬೇಕಾದದ್ದೇನೂ ಇಲ್ಲ ಪರಮೇಶ್ವರ್. ಆದರೆ ಇದೇ ಅವಕಾಶವನ್ನು ಪಯೋಗಿಸಿಕೊಂಡು ಇಲ್ಲಿಂದ ಹೊರಟುಹೋಗುವ ಪ್ರಯತ್ನ ಮಾಡಬೇಡ. ನೀನು ತಿಳಿಸಿದಂತೆಯೇ ನಾನು ಬಂದನಂತರ ಮಾತನಾಡೋಣ. ಈಗ ನಮ್ಮವರು ನಿನ್ನನ್ನು ಗಮನಿಸುತ್ತಿದ್ದಾರೆಂಬ ವಿಷಯವನ್ನು ಮರೆಯಬೇಡ" ಎನ್ನುತ್ತಾ ಹೊರಟುಹೋದ.

ಪರಮೇಶ್ವರ್ ಪ್ರತಿಮೆಯಂತೆ ನಿಂತುಬಿಟ್ಟ.

ಅಲೆಯಮೇಲೆ ಅಲೆಬಂದು ಸಮುದ್ರ ತೀರವನ್ನು ಒದ್ದೆಮಾಡುತ್ತಾ ಹಿಂತಿರುಗುವಂತೆ ಮಗನ ಮಾತು ಪದೇ ಪದೇ ಅವನ ಮೆದುಳಿಗೆ ಬಡಿಯುತ್ತಿತ್ತು.

"ತನ್ನ ರಹಸ್ಯ ಹೊರಬೀಳುತ್ತದೆಂಬ ಅನುಮಾನ ಬರುತ್ತಿದ್ದಂತೆಯೇ ಈ ದಿನ ಒಬ್ಬ ತಮ್ಮನನ್ನು ಕೊಲ್ಲಲು ಮತ್ತೊಬ್ಬ ತಮ್ಮನನ್ನು ಕಳಿಸಿದ್ದಾನೆ. ನಾಳೆ ಆ ತಮ್ಮನನ್ನು ಕೊಲ್ಲಲು ಮತ್ತೊಬ್ಬನನ್ನು ಕಳಿಸುತ್ತಾನೆ. 'ಚರಿತ್ರೆ ಮರುಕಳಿಸುತ್ತದೆ'...ಅಪ್ಪಾ"

ಅವನು ಅಚೇತನನಾಗಿರುವಂತೆಯೇ ಸ್ವಾಮಿಯ ಉಪನ್ಯಾಸ ಪ್ರಾರಂಭವಾಯಿತು. ತಾನು ತಯಾರಿಸಿದ ಆ ಉಪನ್ಯಾಸವನ್ನೇ ಅವನು ಸ್ವಾಮಿಯ ಬಾಯಿಂದ ಕೇಳತೊಡಗಿದ.

* * * * *

ಪ್ರವಲ್ಲಿಕ ಏನು ಮಾಡಬೇಕೆಂದೇ ತೋಚದೆ ಸುಮ್ಮನೆ ನಿಂತುಬಿಟ್ಟಿದ್ದಳು. ಸ್ವಾಮಿಯ ಉಪನ್ಯಾಸವನ್ನು ಭಕ್ತರೆಲ್ಲ ಮಂತ್ರಮುಗ್ಧರಾಗಿ ಕೇಳುತ್ತಿದ್ದರು. ಪ್ರತಿ ಶ್ರೋತೃವಿನ ಮನಸ್ಸನ್ನೂ ಹಿಡಿದಿಟ್ಟಿತ್ತು ಆ ಉಪನ್ಯಾಸ.

ಮೊದಲು 'ಕಲ್ಕಿ'ಯ ಬಗ್ಗೆ ಹೇಳಿದ. ಮತ ರಕ್ಷಣೆಗಾಗಿ 'ಕಲ್ಕಿ' ಹೇಗೆ ಉದ್ಭವಿಸಿದನೆಂದು ಹೇಳಿದ. ದೇವರ ಹತ್ತನೇ ಅವತಾರವಾದ ಅವನು, "ಹಿಂದೂ..." ದೇಶವನ್ನು ಹೇಗೆ ರಕ್ಷಿಸಬೇಕೆಂದು ಹೇಳಿದ. ಎಲ್ಲಿಯೂ ತಾನೇ 'ಕಲ್ಕಿ' ಎಂದು ಹೇಳಲಿಲ್ಲ, ಆದರೆ ಜನ ಆವೇಶದಿಂದ ಕೂಗಾಡುತ್ತಿದ್ದಾರೆ. 'ಸ್ವಾಮೀ—ನೀನೇ ಕಲ್ಕಿ' ಎಂಬ ಭಾವನೆ ಅವರ ಮನಸ್ಸುಗಳಲ್ಲಿ ನಾಟುತ್ತಿದೆ. ದೂರದಲ್ಲಿ ಅಗ್ನಿ ಮತ್ತಷ್ಟು ಪ್ರಜ್ವಲವಾಗಿ ಬೆಳಗುತ್ತಿದೆ. ಅದರಿಂದ ಪುನೀತನಾಗಿ

ಸ್ವಾಮಿಯ ಉಪನ್ಯಾಸ 2ನೇ ಹಂತಕ್ಕೆ ಪ್ರವೇಶಿಸಿತು. ನಮ್ಮ ದೇಶದಲ್ಲಿ 'ನಮಗೆ' ಆಗುತ್ತಿರುವ ಅನ್ಯಾಯದ ಬಗ್ಗೆ ಮಾತನಾಡುತ್ತಿದ್ದಾನೆ. ಸಿ.ಬಿ.ಐ. ಛೀಫ್‌ಗೆ ಕೂಡಾ ಏನು ಮಾಡಬೇಕೆಂದು ತೋಚದಷ್ಟು ತೀವ್ರವಾಗಿತ್ತು ಆ ಭಾಷಣದ ರೀತಿ! ಪ್ರತಿಯೊಂದು ಮಾತೂ ನಿಜವೆಂಬಂತಿತ್ತು. ಕೊನೆಗೆ ಅಲ್ಲಿದ್ದ ಪೋಲೀಸರಲ್ಲಿ ಅಧಿಕ ಸಂಖ್ಯಾತರಾದ ಮತಸ್ಥರು ಕೂಡಾ ಸಮ್ಮೋಹ ನಕ್ಕೆ ಒಳಗಾದಂತೆ ಕೇಳುತ್ತಿದ್ದಾರೆ. ಈ ಕ್ಯಾಸೆಟ್ಟು ದೇಶದೊಳಗೆ ಪ್ರವೇಶಿಸಿದರೆ ಏನಾಗುತ್ತದೆಂದು ಊಹಿಸಿದರೇ ಭಯವಾಗುತ್ತದೆ. ಎಲ್ಲಾ ವಾಸ್ತವಗಳೇ... ಆದರೆ ಕೆಲವು ವಿಶೇಷಗಳು ಕಾಣುತ್ತಿವೆ. ಬೇರೆ ಯಾವ ಮತಸ್ಥರನ್ನೂ ಬೈಯ್ಯು ತ್ತಿಲ್ಲ. 'ನಮ್ಮ ದೌರ್ಭಾಗ್ಯ, ನಮ್ಮ ದುರದೃಷ್ಟ'–ಎಂಬಂತಹ ಮಾತುಗಳೇ ಹೆಚ್ಚಾಗಿವೆ. ಆದರೆ ಸ್ವಾಮಿಯ ಮಾತುಗಳಲ್ಲಿ ಯಾವುದೋ ಸಂಮೋಹಿನಿ ಶಕ್ತಿ ಇದೆ; ಜೋನ್ಸ್, ಹಿಟ್ಲರ್, ರಸ್ ಪುಟಿನ್... ಈ ಸಂತತಿಗೆ ಮಾತ್ರ ಇದ್ದ ಶಕ್ತಿ ಅದು!

ಇನ್ನು ಅವನನ್ನು ಯಾರೂ ತಡೆಯಲಾರರು. ಅಸೆಂಬ್ಲಿಗಳನ್ನು, ಪಾರ್ಲಿ ಮೆಂಟನ್ನು ಧ್ವಂಸಮಾಡಿ ಅವನು ಸರ್ವಾಧಿಕಾರಿಯಾಗುವುದು ನಿಶ್ಚಿತ. ಜನ ಆವೇಶದಿಂದ ಮೈಮರೆತಿದ್ದಾರೆ. ಸಸಿಯೇ ಇಷ್ಟು ಪ್ರಾಬಲ್ಯವಾಗಿರುವಾಗ ಕೆಲವು ದಿನಗಳಲ್ಲೇ ಇದು ಮಹಾವೃಕ್ಷವಾಗಿ ಬೆಳೆದನಂತರ ಅದನ್ನು ಯಾರು ತಡೆಯಬಲ್ಲರು? ಎರಡು ಬಾಂಬುಗಳು ಸಾಕು. ಎರಡು ದೇವಸ್ಥಾನಗಳ ಧ್ವಂಸ ಸಾಕು. ಎರಡು ಗುಂಪುಗಳ ಮೇಲೆ ದಾಳಿ ಸಾಕು. ರಕ್ತ ಕಾಲುವೆಗಳಾಗಿ ಹರಿ ಯುತ್ತದೆ. ಅದರ ನಡುವೆ ಸ್ವಾಮಿ ಏಳುತ್ತಾನೆ. ತಾನೇ 'ಕಲ್ಕಿ' ಎನ್ನುತ್ತಾನೆ. ಸಿಂಹಾಸನದ ಮೇಲೆ ವಿಜೃಂಭಿಸುತ್ತಾನೆ. ಅನಂತರ ಮಾರ್ಷಲ್ ಲಾ...ಸೈನಿಕ ಶಾಸನ......ವಿಶಾಲ ದೇಶದ ಆಧಿಪತ್ಯ. ಭಾರತ ದೇಶದ ಚರಿತ್ರೆಯಲ್ಲಿ ಅತಿ ಹೇಯವಾದ ಭವಿಷ್ಯತ್ತು!

ಇದನ್ನು ಹೇಗೆ ತಡೆಯುವುದು?

ಅವಳು ಕಣ್ಣು ಮುಚ್ಚಿಕೊಂಡಳು. ಅವಳಿಗೆ ಏಕೋ ಕೃಷ್ಣನ ಜನನ ನೆನಪಾಯಿತು. ಅದಕ್ಕೆ ಅರ್ಥವಿಲ್ಲ. ಪ್ರವರ್ತಕ ಮಹಮ್ಮದನ ಜನನ ನೆನಪಾಯಿತು. ಅರ್ಥವಿಲ್ಲದ ಭಾವನೆಗಳ ಅಪರೂಪ ಸಮ್ಮೇಳನ...ತನ್ನ ತಂದೆಯ ಸಾವಿನ ನೆನಪಾಯಿತು. ಪ್ರಸ್ತುತ ತನ್ನ ಪರಿಸ್ಥಿಯೂ ಅಂತಹುದೇ ನಿಸ್ಸಹಾಯಕತೆ! ತನ್ನ ಕಣ್ಮುಂದೆಯೇ ಸ್ವಾಮಿ ಗೆಲ್ಲುತ್ತಾನೆ. ತನ್ನನ್ನು ಕಂಡು ನಗುತ್ತಿದ್ದಾನೆ. ಆ ಸಮಯಕ್ಕೆ ಆಕಾಶದಲ್ಲಿ ಒಂದು ಸಣ್ಣ ನಕ್ಷತ್ರ ಕಂಡಿತು. ಅದು ತನಗೇ ಕಾಣುತ್ತಿದೆ. ಮೈಕಿನಲ್ಲಿ ಕೇಳುತ್ತಿರುವ ಸ್ವಾಮಿಯ ಕಂಚಿನ ಕಂಠವನ್ನು ಮೀರಿ ಅದರ ಶಬ್ದ ತನಗೆ ಕೇಳಿಸುತ್ತಿದೆ. ಏನದು? ಕ್ರಿಸ್ತ ಹುಟ್ಟಿದಾಗ ಆಕಾಶ ದಲ್ಲಿ ಕಂಡ ನಕ್ಷತ್ರವಾ? ಇದು ಭ್ರಮೆಯಾ? ನಿಜವಾ? ಸುತ್ತಲೂ ಇರುವ ಪರಿಸ್ಥಿತಿಯನ್ನು ಕಂಡು ತನಗೆ ಬುದ್ಧಿ ಭ್ರಮಣೆಯಾಗುತ್ತಿದೆಯಾ? ಅವಳು ಕಣ್ಣನ್ನು ತೆರೆಯಬೇಕೆಂದುಕೊಂಡಳು. ಆದರೆ ತೆರೆದೆ ಇರುವುದನ್ನು ಗಮನಿಸಿಕೊಂಡಳು, ಅದು ನಕ್ಷತ್ರವಲ್ಲ. ಕತ್ತಲನ್ನು ಸೀಳಿಕೊಂಡು ಅದು ಬರುತ್ತಿದೆ. ಆಕಾಶದಲ್ಲಿ ಸಣ್ಣ ಚುಕ್ಕೆ. ಯಾರೂ ಗಮನಿಸುತ್ತಿಲ್ಲ. ಅದನ್ನು ಅವಳ ಸೂಕ್ಷ್ಮ ದೃಷ್ಟಿಗೆ ಗೋಚರವಾಗುತ್ತಿದೆ.

ಮತ್ತಷ್ಟು ಹತ್ತಿರ ಬಂದನಂತರ ಅದರ ಆಕಾರ ತಿಳಿಯಿತು, ಗಾಳಿಯನ್ನು ಸೀಳಿಕೊಂಡು ಬರುತ್ತಿದೆ ಹೆಲಿಕಾಪ್ಟರ್.

ಹೆಲಿಕಾಪ್ಟರ್ ಧ್ವನಿಯನ್ನು ಅನುಸರಿಸಿ ಅದನ್ನು ಗುರುತಿಸಿದ ಎರಡನೇ ವ್ಯಕ್ತಿ ಸಿ.ಬಿ.ಐ. ಛೀಫ್. ತಲೆಯೆತ್ತಿ ನೋಡಿದ. ಆಗಲೇ ಅದು ಹತ್ತಿರಕ್ಕೆ ಬಂದಿತ್ತು.

ಅದರಿಂದ ಕರಪತ್ರಗಳನ್ನು ಎಸೆದಂತೆ ಪೇಪರ್‌ಗಳು ಬೀಳುತ್ತಿವೆ ಆಗ ಜನ ಕೂಡಾ ಅದನ್ನು ಗಮನಿಸಿದರು. ಗಾಳಿಯ ವೇಗಕ್ಕೆ ಆ ಪೇಪರ್ ಬಂಡಲ್ ಗಳು ಹತ್ತಿಯ ಚೂರುಗಳಂತೆ ಚದುರಿ ಕೆಳಗಿದ್ದ ಜನಗಳ_ಮೇಲೆ ಸಮುದ್ರದ ಮೇಲೆ ಸುರಿಯುವ ಮಳೆಯಂತೆ ಬೀಳುತ್ತಿದೆ.

ಉದ್ವೇಗದಿಂದ ಉಪನ್ಯಾಸ ಮಾಡುತ್ತಿದ್ದ ಸ್ವಾಮಿಯ ದೃಷ್ಟಿ ಆಗ ಬಿತ್ತು ಅದರ ಮೇಲೆ! ಆಣೆಕಟ್ಟು ಅಡ್ಡ ಬಂದಂತೆ, ವಾಕ್ ಪ್ರವಾಹ ನಿಂತಿತು. ಅಷ್ಟರಲ್ಲಿ ಒಂದು ನ್ಯೂಸ್ ಪೇಪರ್ ಗಾಳಿಯಲ್ಲಿ ಹಾರಿಕೊಂಡು ಬಂದು ಆವನ ಕಾಲಿನ ಬಳಿ ಬಿತ್ತು.

"ಮತೋನ್ಮಾದಿ ಅನಂತಾನಂತಸ್ವಾಮಿಯ ಬಣ್ಣ ಬಯಲು" ಅವರೆಕಾಯಿ ದಪ್ಪದ ಅಕ್ಷರಗಳು. ಮೊದಲ ಪುಟದ ಹೆಡ್‌ಲೈನಾಗಿ ಮೆರೆಯುತ್ತಿತ್ತು. ಅದು ಕಪಗೆ, ವಿಕೃತವಾಗಿ ತನ್ನನ್ನು ಹಾಸ್ಯಮಾಡುತ್ತಿರುವಂತೆ ಭಾಸವಾಯಿತು

ಸ್ವಾಮಿಗೆ. ಅವನು ನಿಧಾನವಾಗಿ ತಲೆ ಎತ್ತಿದ.

ಪರಮೇಶ್ವರ್ ಕಡೆಗೆ ನೋಡಿದ. ಆ ಕಣ್ಣಲ್ಲಿ ಕೋಪಕ್ಕಿಂತ ಅತೀತವಾದದ್ದೇನೋ ಇದೆ. ಕಚ್ಚುವುದಕ್ಕೆ ಮುಂಚೆ ಹಾವು ಅದೇರೀತಿ ನೋಡುತ್ತದಂತೆ!

ನಿಶ್ಶಬ್ದದಲ್ಲಿಯೇ ಅವನ ಆಲೋಚನೆಗೆ ಒಂದು ರೂಪುರೇಷೆ ಸಿದ್ಧಗೊಂಡಿತು.

ಭಕ್ತರಿನ್ನೂ ಗಲಿಬಿಲಿಯಿಂದ ಚೇತರಿಸಿಕೊಂಡಿರಲಿಲ್ಲ, ಎಲ್ಲಾ ಗಲಭೆಯಿಂದ ಕೂಡಿದೆ. ಪರಮೇಶ್ವರ್ ಅಷ್ಟರಲ್ಲಿ ವೇದಿಕೆಯ ಬಳಿಗೆ ಬಂದ. ಅವನನ್ನು ನೋಡಿದ ಸ್ವಾಮಿ, "ಸಾಕ್ಷಿಗಳೊಡನೆ ಸಹಾ ಸಿಕ್ಕಿಬಿದ್ದೆ ಪರಮೇಶ್ವರ್–ಸ್ವಾಮಿ ದ್ರೋಹೀ..." ಅಂದ. "ವ್ಯಾನು ನಾಶವಾದಂತೆ ಸುಳ್ಳು ಹೇಳಿದೆಯೆಂದು ನನಗೆ ಗೊತ್ತು. ಮೇಲಾಗಿ ಸಾಕ್ಷಿ ಸಿಗುವವರೆಗೂ ಏನನ್ನೂ ಅನ್ನಕೂಡದೆಂದು ಸುಳ್ಳು ಬೇರೆ ಹೇಳಿದಿ. ಈ ಮೋಸವನ್ನು ಎಷ್ಟು ದೂರ ತೆಗೆದುಕೊಂಡು ಹೋಗಬೇಕೆಂದಿದ್ದಿ ?"

"ಸ್ವಾಮಿ! ಆವೇಶಪಡಬೇಡಿ. ನಾನು ಇದನ್ನೆಲ್ಲ ಊಹಿಸಿಯೂ ಇರಲಿಲ್ಲ. ಈ ಪೇಪರ್ ಹಗರಣವನ್ನು ಹೇಗೆ ಎದುರಿಸಬೇಕೆಂಬುದನ್ನು ಯೋಚಿಸಲು ಸ್ವಲ್ಪ ಸಮಯಾವಕಾಶ ಕೊಡಿ, ಮೊದಲೇ ಭಕ್ತರಲ್ಲಿ ಉದ್ರೇಕ ಬೆಳೆಯುತ್ತಿದೆ."

"ಭಕ್ತರ ಉದ್ರೇಕವನ್ನು ಹೇಗೆ ಎದುರಿಸಬೇಕೆಂದು ನನಗೆ ಗೊತ್ತು. ಆ ದಿನ ಪ್ರವಲ್ಲಿಕ ನನ್ನ ಆಸನದ ಕೆಳಗೆ ಆಯುಧಗಳಿವೆಯೆಂದು ವಾರಂಟ್ ನೊಡನೆ ಬಂದಾಗ ಭಕ್ತರಿಂದ ಹೇಗೆ ತಪ್ಪಿಸಿದೆಯೋ, ಹಾಗೆಯೇ ತಪ್ಪಿಸುತ್ತಿದ್ದಿ...ಈ ಅಪರಾಧವೆಲ್ಲಾ ನಿನ್ನ ಮೇಲೆ ಹಾಕಿಕೊಂಡು ನಿನ್ನ ತಪ್ಪನ್ನು ಸಮಸ್ತ ಜನರ ಎದುರು ಒಪ್ಪಿಕೊಳ್ಳುತ್ತ" ಎಂದು ನಕ್ಕ. ಪರಮೇಶ್ವರ್ ಕೂಡಲೇ ಎಂಜಲು ನುಂಗಿಕೊಂಡು "ಹಾಗೆ ಮಾಡಿದರೆ ಕೂಡಲೇ ಪೊಲೀಸರು ಬಂಧಿಸಿಬಿಡುತ್ತಾರೆ ಸ್ವಾಮಿ..." ಅಂದ.

"ಬಂಧಿಸಲಿ ಬಿಡು. ಇನ್ನು ಕೆಲವೇ ದಿನಗಳಲ್ಲಿ ನಾನು ರಾಜನಾಗುತ್ತೇನಲ್ಲ. ನಿನ್ನನ್ನು ಬಿಡುಗಡೆ ಮಾಡುತ್ತೇನೆ" ಎನ್ನುತ್ತಾ ಮತ್ತೆ ನಕ್ಕ.

"ಆದರೆ..." ಅವನ ಮಾತು ಪೂರ್ತಿಯಾಗಲು ಬಿಡಲಿಲ್ಲ.

"ಅಂದರೆ ನಾನು ದೇಶದ ಸರ್ವಾಧಿಕಾರಿಯಾಗಲು ನೀನು ಮಾಡಿದ ಪ್ರಯತ್ನದ ಬಗ್ಗೆ ನಿನಗೇ ನಂಬಿಕೆಯಿಲ್ಲವಾ? ಪರಮೇಶ್ವರ್! ನಿನಗೊಬ್ಬನಿಗೇ ಬುದ್ಧಿವಂತಿಕೆಯಿದೆಯೆಂದುಕೊಳ್ಳಬೇಡ. ಮೈಕಿನ ಬಳಿಗೆ ಬಾ. ನೀನು ಮಾಡಿದ್ದು

ದಹನ ಮಾಡುತ್ತಿದ್ದೀಯೆಂದೂ ನನಗೆ ಗೊತ್ತು. ವಿಷಯ ಅಲ್ಲಿಯವರೆಗೂ ಬಂದರೆ ನಾನು ಮನುಷ್ಯನಾಗಿರುವುದಿಲ್ಲ. ರಾಕ್ಷಸನಾಗಿ ಬಿಡುತ್ತೇನೆ. ಒಂದು ಸಲ ಅತ್ತನೋಡು; ಸುಮಾರು ನೂರಕ್ಕೂ ಹೆಚ್ಚು ಬಂದೂಕುಗಳು ನಿನ್ನತ್ತ ಗುರಿ ಇರಿಸಿವೆ. ಆದರೂ ನಿನ್ನನ್ನು ಕ್ಷಮಿಸುತ್ತೇನೆ. ಈ ವಿಷಮ ಪರಿಸ್ಥಿತಿಯಿಂದ ರಕ್ಷಿಸು. ಇದು ಕೋರಿಕೆಯಲ್ಲ; ಬೆದರಿಕೆ."

ಪರಮೇಶ್ವರ್ ಸುತ್ತಲೂ ನೋಡಿದ. ಪೊಲೀಸ್ ವೇಷದಲ್ಲಿದ್ದ ಸುಮಾರು ಜನ ಸ್ವಾಮಿಯ ಕಡೆಯವರೇ. ಹಿಂದೆ ಭಕ್ತರ ಮೇಲೆ ಬಾಂಬುಗಳು ಬಿದ್ದಾಗ ನಡೆಯಲಿರುವ ಗಲಭೆಯಲ್ಲಿ–ಬೇರೆ ಮತಕ್ಕೆ ಸೇರಿದ ಪೊಲೀಸರು ಭಕ್ತರ ಮೇಲೆ ನಿರ್ದಾಕ್ಷಿಣ್ಯವಾಗಿ ಲಾಠಿಛಾರ್ಜು, ಗೋಳೀಬಾರು ಮಾಡಿದ್ದಾರೆಂದು ತೋರಿಸಲು, ಪೊಲೀಸರಿಗೆ ಆ ರೀತಿಯ ವೇಷವನ್ನು ತೊಡಿಸಿದ್ದರು. ಅದು ಕೂಡ ತನ್ನ ಯೋಜನೆಯೇ. ತಾನೇನು ಮಾಡಬೇಕೆಂದು ಪರಮೇಶ್ವರ್ ಆಲೋಚಿಸುತ್ತಿದ್ದಾಗ ಸ್ವಾಮಿಯ ಮಾತು ಕೇಳಿಸಿತು.

"ಸ್ವಲ್ಪ ಕಾಲ ಈ ಅಪರಾಧವನ್ನು ನಿನ್ನ ಮೇಲೆ ಹಾಕಿಕೊಂಡು ನೀನೂ ನಿನ್ನ ಮಗ ಕಲೆತು ಆಡಿದ ನಾಟಕಕ್ಕೆ ಪ್ರಾಯಶ್ಚಿತ್ತ ಮಾಡಿಕೊಳ್ಳುತ್ತೀಯೋ, ಇನ್ನು ಸ್ವಲ್ಪ ಹೊತ್ತಿನಲ್ಲಿ ನಡೆಯುವ ಗಲಭೆಯಲ್ಲಿ ಮೂರನೇ ಕಣ್ಣಿಗೆ ತಿಳಿಯದಂತೆ ಸಾಯುತ್ತೀಯೋ ಚೆನ್ನಾಗಿ ಯೋಚಿಸು ಪರಮೇಶ್ವರ್."

ಪರಮೇಶ್ವರ್ ಒಂದು ನಿರ್ಧಾರಕ್ಕೆ ಬಂದವನಂತೆ ವೇದಿಕೆಯನ್ನು ಹತ್ತಿದ. ಹೆಲಿಕಾಪ್ಟರ್ ತನ್ನ ಕೆಲಸವನ್ನು ಪೂರ್ತಿಗೊಳಿಸಿದಂತೆ ದೂರ ಹೊರಟು ಹೋಯಿತು. ಜನ ಪೇಪರನ್ನು ಓದುತ್ತಲೇ ಇದ್ದಾರೆ.

ಆದರೆ ಅದೆಲ್ಲ ಯಾರೋ ಆಗದವರು ಮಾಡಿರುವ ಕೆಲಸವೆಂದುಕೊಳ್ಳುತ್ತಿದ್ದಾರೆ. ಅಷ್ಟೇ ಆಗಲಿ ಸ್ವಾಮಿಯ ಮೇಲೆ ಯಾವ ಪರಿಣಾಮವೂ ಬೀರಲಿಲ್ಲ. ಯುದ್ಧದಲ್ಲಿ ಒಬ್ಬ ಸೈನ್ಯಾಧಿಕಾರಿ ಒಂದು ವ್ಯೂಹವನ್ನು ರಚಿಸುತ್ತಾನೆ, ತನ್ನ ಟ್ರೂಪನ್ನು ಅದೇ ರೀತಿ ನಡೆಸುತ್ತಾನೆ. ಎಲ್ಲಾ ಮಾಡಿದ ನಂತರ ಶತ್ರುಗಳು ಅಂದುಕೊಂಡಿರುವ ಜಾಗದಲ್ಲಿ ಇಲ್ಲದಿರಬಹುದು. ಇಲ್ಲವೇ ಮತ್ತಷ್ಟು ಜಾಣ್ಮೆಯಿಂದ ಎಲ್ಲೋ ಪಕ್ಕದಿಂದ ಪೆಟ್ಟು ಕೊಡಬಹುದು. ಪ್ರಸ್ತುತ ಪರಿಸ್ಥಿತಿ ಹಾಗೆಯೇ ಇತ್ತು. ಜನ ಡಿಸ್ಟರ್ಬ್ ಆಗಿರುವುದೇನೋ ನಿಜವೇ ಆಗಲಿ ಅದು ಸರಿಹೋಗಲಿಲ್ಲ. ತಮ್ಮ ಸುದ್ದಿಗಳ ಮೂಲಕ ಜನರಲ್ಲಿ ಚೈತನ್ಯತುಂಬುವ ಶಕ್ತಿಯನ್ನು ದಿನ ಪತ್ರಿಕೆಗಳು ಎಂದೋ ಕಳೆದುಕೊಂಡಿದ್ದವು. ಇನ್ನೂ ಏನೋ ಬೇಕು.

ಸುನಾದಮಾಲ ಪ್ರವಲ್ಲಿಕಳ ಕಡೆಗೆ ನೋಡಿದಳು. ವಿಷ್ಣು ಕೂಡಾ ಅವಳ

ಅನುಮತಿಗಾಗಿ ನೋಡಿದ. 'ಈಗಲೇ ಅಲ್ಲ' ಎಂಬಂತೆ ಪ್ರವಲ್ಲಿಕ ತಲೆ ಆಡಿಸಿದಳು. ಅಷ್ಟರಲ್ಲಿ ಪರಮೇಶ್ವರ್‌ನ ಮಾತು ಕೇಳಿಸಿತು ಮೈಕಿನಲ್ಲಿ–

"ನಾನು ಈ ರೀತಿ ಸ್ಟೇಜನ್ನು ಹತ್ತುತ್ತಿರುವುದು ನಿಮಗೆ ಆಶ್ಚರ್ಯ ತಂದಿರಬಹುದು. ನಾನು ಸ್ವಾಮಿಯ ನಿಷ್ಠಾವಂತ ಶಿಷ್ಯ. ನಿಮ್ಮ ಮುಂದೆ ಆಕಾಶದಿಂದ ಬಿದ್ದ ಪೇಪರ್‌ಗಳ ಬಗ್ಗೆ ವಿವರಣೆ ಕೊಡಲು ನಿಮ್ಮ ಮುಂದೆ ಬಂದಿದ್ದೇನೆ."

ಸ್ವಾಮಿಯ ತುಟಿಗಳ ಮೇಲೆ ಸಂತೃಪ್ತಿಯ ನಗೆ ಕಂಡಿತು. ಪರಮೇಶ್ವರ್ ಮುಂದುವರೆಸಿದ;

"...ಬುದ್ಧಿವಂತಿಕೆಯಿರುವವರಲ್ಲಿ ಎರಡು ರೀತಿ–ಅದನ್ನು ಮಾರಿಕೊಳ್ಳುವವರು, ಮತ್ತು ಆತ್ಮಾಭಿಮಾನವಿರುವವರು. ಮನುಷ್ಯ ಶಾರೀರಿಕವಾಗಿ ಗಾಯಗೊಂಡರೂ, ಆರ್ಥಿಕವಾಗಿ ನಷ್ಟ ಹೊಂದಿದರೂ, ಮಾನಸಿಕವಾಗಿ ಪೆಟ್ಟು ತಿಂದರೂ ತಡೆದುಕೊಳ್ಳಬಲ್ಲನೇನೋ ದಳಆರೆ. ಅವನ 'ಅಹಂ'–ಗೆ ಪೆಟ್ಟು ಬಿದ್ದರೆ ಮಾತ್ರ ತಲೆಕೆಳಗಾಗುತ್ತಾನೆ. ಆಗ ಅವನಿಗೆ ಸ್ವಾಭಿಮಾನ ನೆನಪಾಗುತ್ತದೆ. ನನಗೆ ಈಗ ಅದೇ ನೆನಪಾಗುತ್ತಿದೆ. ಹೌದು......ನಾನೀ ದೇಶದ ಮೇಧಾವಿ. ಸ್ವಾರ್ಥಕ್ಕಾಗಿ ಮಾರಿಕೊಂಡವನು! ಈಗೀಗಲೇ ಎಚ್ಚರಗೊಳ್ಳುತ್ತಿರುವವನು!"

ಸ್ವಾಮಿಯ ತುಟಿಗಳ ಮೇಲಿನ ನಗೆ ಮಾಯವಾಯಿತು. ಮುಖವನ್ನು ಸಿಂಡರಿಸಿ ನೋಡಿದ. ಪ್ರವಲ್ಲಿಕ ಕೂಡಾ ಸ್ತಬ್ಧಳಾಗಿ ಅವನೇನು ಹೇಳುತ್ತಾನೋ ಎಂದು ಕುತೂಹಲಗೊಂಡಿದ್ದಾಳೆ.

"...ಆ ಪೇಪರ್‌ನಲ್ಲಿ ಬಂದಿರುವುದೆಲ್ಲಾ ನಿಜ. ಅದರಲ್ಲಿ ನನ್ನ ಪಾಲೂ ಇದೆ. ಸ್ವಾಮಿಗೆ ಧರ್ಮದ ಬಗ್ಗೆ ಜನರನ್ನು ರೊಚ್ಚಿಗೆಬ್ಬಿಸಿ, ಗಲಭೆಗಳನ್ನು ಸೃಷ್ಟಿಸುವಂತೆ ಸಲಹೆ ನೀಡಿದ್ದು ನಾನೇ"... ನಿಶ್ಶಬ್ದದ ವಾತಾವರಣದಲ್ಲಿ ಅವನ ಮಾತು ಬಾಂಬಿನಂತೆ ಸಿಡಿಯಿತು.

ಒಮ್ಮೆಗೇ ಜನರಲ್ಲಿ ಕದಲುವಿಕೆ ಕಂಡಿತು.

ಸ್ವಾಮಿ ಕಂಗಾಲಾದ. ಆದರೆ ಒಂದು ಕ್ಷಣ ಮಾತ್ರ! ಕೂಡಲೇ ಚೇತರಿಸಿಕೊಂಡು ತನ್ನವರೆಡೆಗೆ ನೋಡಿದ. ಅವನು ಸನ್ನೆ ಮಾಡುವಷ್ಟರಲ್ಲಿ ಅವನ ಹಿಂಭಾಗಕ್ಕೆ ಏನೋ ಚುಚ್ಚಿದಂತಾಯಿತು. ತಲೆ ತಿರುಗಿಸಿ ನೋಡಿದರೆ ಪ್ರವಲ್ಲಿಕ ತುಂಬಾ ಸ್ನೇಹಪೂರ್ವಕವಾಗಿ, ಭಕ್ತಿಯಿಂದ ನಿಂತಂತೆ ಕಾಣುತ್ತಿದ್ದಾಳೆ. ಆದರೆ ಅವನ ನಡುವಿನಲ್ಲಿ ಚುಚ್ಚಿಕೊಳ್ಳುತ್ತಿರುವುದೇನೆಂದು ಅವನಿಗೆ ಗೊತ್ತಾಯಿತು. ತನ್ನ ಸನ್ನೆಯನ್ನು ತಡೆಯುವ ಆಯುಧ.

ಪರಮೇಶ್ವರ್ ತನ್ನ ಮಾತನ್ನು ಮುಂದುವರೆಸಿದ–"ನನ್ನ ದುಷ್ಟ ಆಲೋ

ಜನಗಳಿಗೆ, ಸ್ವಾಮಿಗೆ ಇಷ್ಟು ಕಾಲ ಸಹಾಯ ಮಾಡಿದ್ದಕ್ಕೆ, ನನಗೆ ನಾನೇ ಶಿಕ್ಷೆಯನ್ನು ವಿಧಿಸಿಕೊಳ್ಳುತ್ತಿದ್ದೇನೆ. ಅಗ್ನಿ ಪ್ರವೇಶವನ್ನು ನಾನೇ ಮಾಡುತ್ತೇನೆ–" ತನ್ನ ಬದುಕಿನಲ್ಲಿ ಒಂದು ಮುಖ್ಯವಾದ ನಿರ್ಧಾರವನ್ನು ತೆಗೆದುಕೊಳ್ಳುತ್ತಿರುವಂತೆ ಹೇಳಿದ.

ಭಕ್ತರೆಲ್ಲಾ ಸ್ತಬ್ಧರಾಗಿ ಕೇಳುತ್ತಿದ್ದಾರೆ. ಕಲರವ ಕಡಿಮೆಯಾಗಿ ಕುತೂಹಲ ಹೆಚ್ಚಾಯಿತು.

"ನಾನು ಮಾಡಿದ ಪಾಪಕ್ಕೆ ದೇವರು ನನ್ನನ್ನು ಕ್ಷಮಿಸಿದರೆ ಅಗ್ನಿಯಲ್ಲಿ ಮಿಂದು ಹೊರಬರುತ್ತೇನೆ. ಇಲ್ಲದಿದ್ದರೆ ಅದರಲ್ಲಿಯೇ ಸುಟ್ಟು ಬೂದಿಯಾಗಿ ಹೋಗುತ್ತೇನೆ" ಎನ್ನುತ್ತಾ ವೇದಿಕೆಯನ್ನು ಇಳಿದು ಅಗ್ನಿಕುಂಡದ ಕಡೆಗೆ ನಡೆಯುತ್ತಾ, ಸ್ವಾಮಿಯ ಬಳಿ ನಿಂತು, "ನನ್ನನ್ನೇ ನಂಬಲಿಲ್ಲವಲ್ಲಾ ಸ್ವಾಮಿ, ಈಗ ನೋಡು" ಎನ್ನುವಂತೆ ನೋಡಿದ. ಸ್ವಾಮಿ ನಿರುತ್ತರನಾದ...ಅವನು ಊಹಿಸದ ತಿರುವು ಅದು. ಅಷ್ಟರಲ್ಲಿ ಪರಮೇಶ್ವರ್ ಅಲ್ಲಿಂದ ಮುಂದಕ್ಕೆ ಹೋಗಿ ಅಗ್ನಿಯಲ್ಲಿ ಪ್ರವೇಶಿದ. ಜನರೆಲ್ಲಾ ದಿಗ್ಭ್ರಮೆಯಿಂದ ನೋಡುತ್ತಿದ್ದಾರೆ. ಜ್ವಾಲೆಯ ನಡುವೆ ಅವನು ಕೈಜೋಡಿಸಿ ನಿಂತಿರುವುದು ಜನಕ್ಕೆ ಕಾಣಿಸುತ್ತಿದೆ. ಇದ್ದಕ್ಕಿದ್ದಂತೆಯೇ ಜನರಲ್ಲಿ ಯಾರೋ ಒಬ್ಬ 'ಹರಹರ ಶಂಭೋ' ಎಂದು ಕಿರುಚಿದ ಅಷ್ಟೇ! ಒಮ್ಮೆಗೇ ಜಯಘೋಷಣೆಗಳು ಗಗನ ಮುಟ್ಟಿದವು. ಜನರನ್ನು ಕಂಟ್ರೋಲ್ ಮಾಡುವುದೇ ಕಷ್ಟವಾಯಿತು. ನಿಮಿಷದ ನಂತರ ಅವನು ಅಗ್ನಿಯಿಂದ ಹೊರ ಬಂದ. ಸ್ವಾಮಿಗೆ ಮಾತ್ರ ಕೇಳಿಸುವಂತೆ "ಕಡಿದು ಹೋಗುವ ವರೆಗೂ ಎಳೆದಿದ್ದಿ ಸ್ವಾಮಿ, ಅನುಭವಿಸು" ಎಂದ. ಮಧ್ಯದಲ್ಲಿ ಎಂತಹ ಕೃತ್ರಿಮವಾದ ಜ್ವಾಲೆಯಿದ್ದರೂ ಸುತ್ತಲೂ ಇದ್ದ ಬಿಸಿಗೆ ಅವನ ಶರೀರ ಅಲ್ಲಲ್ಲಿ ಸುಟ್ಟಿತ್ತು. ಸ್ವಾಮಿಯಂತೆ ಅವನು ಮೊದಲೇ ಅದಕ್ಕೆ ಸಿದ್ಧನಾಗಿದಿದ್ದುದರಿಂದ ಉಂಟಾದ ತೊಂದರೆ ಅದು. ಆದರೆ ತನಗೆ ಅಷ್ಟು ಮಾತ್ರದ ಶಿಕ್ಷೆ ಆಗಬೇಕೆಂದುಕೊಂಡ. ಹೊಗೆಯಿಂದ, ಗಾಯಗಳಿಂದ ಎಚ್ಚರ ತಪ್ಪಿದಂತೆ ಅನ್ನಿಸಿತು. ತೂರಾಡುತ್ತಾ ಮೈಕಿನ ಬಳಿಗೆ ಬಂದ. "ದೇವರು ನನ್ನನ್ನು ಕ್ಷಮಿಸಿದ. ಒಬ್ಬ ದ್ರೋಹಿಗೆ ಸಹಾಯ ಮಾಡಿದ್ದಕ್ಕೆ ದೇವರು ಸ್ವಲ್ಪವೇ ಈ ರೀತಿ ಶಿಕ್ಷಿಸಿಬಿಟ್ಟಿದ್ದಾನೆ. ಪ್ರಜೆಗಳಿರಾ–ಈಗ ನಿಮ್ಮ ಸರದಿ. ನಿಜವಾದ ದ್ರೋಹಿಯನ್ನು ಹೇಗೆ ಶಿಕ್ಷಿಸುತ್ತೀರೋ ನಿಮ್ಮಿಷ್ಟ–" ಎನ್ನುತ್ತಾ ಕೆಳಗೆ ಇಳಿದುಬಿಟ್ಟ.

ನಡೆಯುತ್ತಿರುವುದನ್ನೆಲ್ಲಾ ನೋಡುತ್ತಾ ಸ್ವಾಮಿ ಆವೇಶದಿಂದ ನಡುಗಲಾರಂಭಿಸಿದ. ಕಣ್ಣಿನ ಮುಂದೆಯೇ ಪರಿಸ್ಥಿತಿ ತನ್ನನ್ನು ಇಷ್ಟು ನಿಸ್ಸಹಾಯಕನನ್ನಾಗಿ ಮಾಡಿದ್ದು ಅವನಿಂದ ಸಹಿಸಲಾಗುತ್ತಿಲ್ಲ. ಪ್ರವಲ್ಲಿಕಳ ಕೈಯಲ್ಲಿದ್ದ

ಆಯುಧವನ್ನೂ ಲೆಕ್ಕಿಸದೆ ತನ್ನವರಿಗೆ ಸನ್ನೆ ಮಾಡಲು ಹೋದ.

ಪ್ರವಲ್ಲಿಕ ಕೂಡಾ ಪರಿಸ್ಥಿತಿಯನ್ನು ಗಮನಿಸುತ್ತಲೇ ಇದ್ದಾಳೆ. ಸಿಡಿಯಲು ಸಿದ್ಧವಾಗಿರುವ ಬಾಂಬಿನಂತಿದೆ ಅಲ್ಲಿನ ವಾತಾವರಣ. 'ಏನೋ ಮಾಡಬೇಕು–ಆದರೆ ಏನು ಮಾಡುವುದು?' ಎಂದು ತೋಚದೆ ಜನರೆಲ್ಲಾ ಸಂದಿಗ್ಧತೆಯಲ್ಲಿ ಇರುವಂತಿದೆ. ಅದುವರೆವಿಗೂ ಅವಳ ಅನುಮತಿಗಾಗಿ ನೋಡುತ್ತಿರುವಂತೆ ನಿಂತಿದ್ದ ವಿಷ್ಣು ಬಗ್ಗಿ ಕಲ್ಲು ತೆಗೆದುಕೊಂಡ, ಅವಳು ತಲೆ ಆಡಿಸಿದಳು.

"ನಾನು ಹಾಡಿದರೆ ನನ್ನ ಸ್ನೇಹಿತರನ್ನೆಲ್ಲಾ ಬಿಟ್ಟುಬಿಡುತ್ತೀರಾ ಅಂಕಲ್–?" ಎಂದು ಮುಗ್ಧತೆಯಿಂದ ಕೇಳುತ್ತಿರುವ ವಿನೀಲ್‌ನನ್ನು...'ಸಾರೇ ಜಹಾಸೆ ಅಚ್ಛಾ ಹಿಂದೂಸ್ತಾನ್ ಹಮಾರಾ...' ಎಂದು ಹಾಡುತ್ತಿದ್ದವನನ್ನು ನಿರ್ದಾಕ್ಷಿಣ್ಯವಾಗಿ ಕೊಂದುಹಾಕಿದ ಸ್ವಾಮಿಯ ನಿಜರೂಪ ಕಣ್ಮುಂದೆ ಬಂತು. ಜನರ ಗುಂಪಿನಿಂದ ಒಂದು ಹೆಜ್ಜೆ ಮುಂದಿಟ್ಟು ಕಲ್ಲೆಸೆದ ಅಷ್ಟೆ. ಅದು ಪ್ರಾರಂಭ, ಸುಮಾರು 500 ಹುಡುಗರು ಪ್ರವಾಹದಂತೆ ಮುನ್ನುಗ್ಗಿದರು. ಈ ದೇಶದ ಮತಮೌಢ್ಯತೆಯನ್ನು, ಅರಾಜಕತೆಯನ್ನು, ಸ್ವಾರ್ಥವನ್ನು ಎದುರಿಸುವ ಏಕೈಕ ಶಕ್ತಿಯಂತಿತ್ತು ಆ ದೃಶ್ಯ! ಅಷ್ಟೊಂದು ಹುಡುಗರು ಆ ರೀತಿ ನುಗ್ಗಿಬರುತ್ತಿದ್ದರೆ ಇರುವೆಗಳು ಒಟ್ಟಾಗಿ ಆನೆಯನ್ನು ಓಡಿಸುವಂತಿದೆ. ಭವಿಷ್ಯತ್ತಿನ ಒಂದು ಸಣ್ಣ ಆಸೆ–"ನಾವಿದ್ದೀವಿ ನೀವು ಭಯಪಡಬೇಡಿ. ಬರಲಿರುವ ಜನಾಂಗದಲ್ಲಿ ಪ್ರಸ್ತುತ ನೀವು ಸರಿಪಡಿಸಲಾರದ ಸಮಸ್ಯೆಗಳನ್ನು ನಾವು ಬಗೆಹರಿಸುತ್ತೇವೆ" ಎಂದು ಆ ಬಾಲಕರ ಸೈನ್ಯ ಯುದ್ಧಭೂಮಿಗೆ ಬಂದಂತೆ ಇದೆ. ಅದು ಅಂತಿಮ ಹೋರಾಟವಲ್ಲ; ಅನ್ಯಾಯದ ಮೇಲೆ ಪ್ರಥಮ ಹೋರಾಟ. ಅದರಲ್ಲಿ ಕೆಲವರು ವಿನೀಲನ ಸಾವನ್ನು ಪ್ರತ್ಯಕ್ಷ ಕಂಡಿದ್ದರು. ಎಷ್ಟು ದಿನಗಳಿಂದ ತಮ್ಮ ಸಿಟ್ಟನ್ನು ಮನಸ್ಸಿನಲ್ಲಿ ಬಚ್ಚಿಟ್ಟುಕೊಂಡಿದ್ದರೋ...ಈ ದಿನ ಸಿಡಿದಿದ್ದರು. ತಮ್ಮನ್ನು ಅಗಲಿದ ಮಿತ್ರನ ಆತ್ಮಶಾಂತಿಗಾಗಿ ಬೀಸುತ್ತಿರುವ ಹೂಗಳಂತಿವೆ ಆ ಕಲ್ಲುಗಳ ತೂರಾಟ. ಸ್ವಾಮಿಯ ಮೇಲೆ ಒಂದೇ ಸಮನೆ ಬಂದು ಬೀಳುತ್ತಿದೆ! ಅವನ ಅಪರಾಧವನ್ನು ಕೋರ್ಟಿನಲ್ಲಿ ಸಾಬೀತುಪಡಿಸಲು ಎಷ್ಟು ಸಾಕ್ಷಿಗಳು ಬೇಕಾಗುವುದೋ, ಎಷ್ಟು ಕಾನೂನು ಸಲಹೆಗಳನ್ನು ಪಡೆಯಬೇಕೋ ! ಈಗ ಅದೇನೂ ಇಲ್ಲ. ಅದು ಮಾರ್ಷಲ್ ಕೋರ್ಟ್. ಅಲ್ಲಿದ್ದುದು ಭಾವೀ ಭಾರತದ ಪ್ರಜೆಗಳು. ಹಿಂದೂಸ್ಥಾನವನ್ನು ನಿಜವಾಗಿಯೂ 'ಸಾರೇ ಜಹಾಸೆ ಅಚ್ಛಾ' ಮಾಡಬೇಕೆಂದಿದ್ದವರು. ಅವರಿಗೆ ಯಾವ ಸಾಕ್ಷಿಯೂ, ಯಾವ ಕಾನೂನೂ ಅವಶ್ಯಕವಿಲ್ಲ.

ಈ ಗಡಿಬಿಡಿಯಲ್ಲಿ ಸ್ವಾಮಿಯ ಅನುಚರರಿಗೆ ಏನು ಮಾಡಬೇಕೆಂದೇ ತೋಚಲಿಲ್ಲ. ಸ್ವಾಮಿಯ ಶರೀರ ರಕ್ತಸಿಕ್ತವಾಗಿದೆ. ಹಿಂದಿನಿಂದ ಬಾಂಬುಗಳನ್ನು

ಎಸೆಯುತ್ತಿದ್ದರು. ಸಿ.ಬಿ.ಐ. ಛೀಫ್ ಪೊಲೀಸ್ ಅಧಿಕಾರಿಗಳೂ ಅತ್ತ ಓಡಿದರು. ಹಿಂದೆ ಬಾಂಬುಗಳು ಸಿಡಿಯುತ್ತಿದ್ದುದರಿಂದ ಜನ ಕಂಗಾಲಾದರು.

ಈ ಗಡಿಬಿಡಿಯಲ್ಲಿ ಸ್ವಾಮಿಗೆ ಸ್ವಲ್ಪ ಸಮಯ ಸಿಕ್ಕಿತು. ಜನರ ದೃಷ್ಟಿ ಹಿಂದೆ ನಡೆಯುತ್ತಿದ್ದ ಸಿಡಿತದ ಕಡೆ ಹೋಗುತ್ತಿದ್ದಂತೆಯೇ, ಅಗ್ನಿಕುಂಡದ ಕಡೆಗೆ ಓಡಿದ. ಸುತ್ತಲೂ ಜನ. ಎಲ್ಲೂ ದಾರಿಯಿಲ್ಲ. ಆ ಜ್ವಾಲೆಯ ನಡುವೆ ಕೃತ್ರಿಮ ಬೆಂಕಿಯಿದೆಯೆಂದು ಅವನಿಗೆ ಗೊತ್ತಿತ್ತು. ಅದೊಂದೇ ಮಾರ್ಗವೆಂದು ಅಲ್ಲಿಗೆ ಓಡಿದ.

ಜ್ವಾಲೆಯ ನಡುವೆ ಸೇರಿಕೊಂಡು, ಕೆಂಡಗಳಂತೆ ಕಾಣುತ್ತಿದ್ದ ಕೆಂಪು ಇಟ್ಟಿಗೆಗಳನ್ನು ಕಾಲಿನಿಂದ ತಳ್ಳಿದ. ಕೆಳಗೆ ಟ್ರಾಪ್ ಡೋರ್ ಕಂಡಿತು. ಬಗ್ಗಿ ಅದನ್ನು ತೆರೆದುಕೊಂಡು ಒಳಗೆ ಇಳಿದ. ಅಲ್ಲಿಂದಲೇ ರೆಡ್‌ಫ್ಲೇಮ್ಸ್ ಸಂದಿಗಳ ಮೂಲಕ ಹೊರಬರುವುದು! ಅದನ್ನು ಆಪರೇಟ್ ಮಾಡುತ್ತಿದ್ದ ಅನುಚರರು ಏನಾದರೆಂದು ನೋಡಿದ. ಜನ ಭ್ರಮೆಯಿಂದ ಚೇತರಿಸಿಕೊಳ್ಳುವುದಕ್ಕೆ ಮುಂಚೆಯೇ ಅಲ್ಲಿಂದ ತಪ್ಪಿಸಿಕೊಳ್ಳಬೇಕು. ಅಂಡರ್‌ಗ್ರೌಂಡ್‌ನಿಂದ ಭವನಕ್ಕೆ ದಾರಿಯಿತ್ತು. ಅದರ ಮೂಲಕ ಹೊರಬಂದ. ಅತ್ತಕಡೆ ಜನರ ಕೋಲಾಹಲ; ಇತ್ತ ನಿರ್ಮಾನುಷ್ಯವಾಗಿತ್ತು.

ದೂರದಲ್ಲಿ ವಾಹನವಿತ್ತು. ಅದರ ಬಳಿಗೆ ಓಡಿ ಬಾಗಿಲು ತೆರೆಯುತ್ತಾ, ಹಾಗೆಯೇ ನಿಂತುಬಿಟ್ಟ.

ವಾಹನದ ಮತ್ತೊಂದು ಬದಿಗೆ ವಿಹಾರಿ ನಿಂತಿದ್ದಾನೆ. ಸ್ವಾಮಿಯನ್ನು ನೋಡಿ ನಗುತ್ತಾ, "ಹಲ್ಲೋ...ಎಂದ.

* * * *

ಸ್ವಾಮಿ ಅಗ್ನಿಯೊಳಗೆ ಪ್ರವೇಶಿಸಿದ್ದನ್ನು ಪ್ರವಲ್ಲಿಕ ನೋಡಿದಳು. ಜ್ವಾಲೆಯಲ್ಲಿ ಏನೋ ಮೋಸವಿದೆಯೆಂದು ಅವಳಿಗೆ ಗೊತ್ತಿತ್ತಾಗಲಿ—ಟ್ರಾಪ್ ಡೋರ್ ಇರುತ್ತದೆಂದು ಊಹಿಸಿರಲಿಲ್ಲ. ಆಗಲೇ ಸಾಕಷ್ಟು ಕಲ್ಲೇಟನ್ನು ತಿಂದಿದ್ದ ಸ್ವಾಮಿ ಅದರಲ್ಲಿ ಬಿದ್ದು ಸುಟ್ಟಿರಬಹುದೆಂದುಕೊಂಡಳು. ಅವಳ ದೃಷ್ಟಿ ಪರಮೇಶ್ವರ್ ಕಡೆ ಬಿತ್ತು. ಅವನಿಗೆ ಕೈ ನೀಡುತ್ತಾ,

"ಕೊನೆಯ ಕ್ಷಣದಲ್ಲಿ ಅಪ್ರೂವರ್ ಆಗಿ ಬದಲಾದುದಕ್ಕೆ ಥ್ಯಾಂಕ್ಸ್. ನೀವು ಸ್ವತಃ ಪ್ರವೇಶಿಸಿದ ಈ ಜ್ವಾಲೆಯ ಮೆಲೋಡ್ರಾಮಾ ಇಲ್ಲದಿದ್ದರೆ... ಜನ ಪೇಪರ್‌ಗಳನ್ನು ಓದಿದರೂ ನಂಬುತ್ತಿರಲಿಲ್ಲ. ಕೊನೆಯ ಕ್ಷಣದಲ್ಲಿ ನಮ್ಮ

ಕಡೆ ಬಂದು ಸಹಾಯ ಮಾಡಿದಿರಿ. ಇದೆಲ್ಲಾ ಮಗನ ಮೇಲಿನ ಪ್ರೀತಿಯಿಂದಲಾ? ಇಲ್ಲವೇ ಸ್ವಾಮಿಯ ಬಗ್ಗೆ ಹುಟ್ಟಿಕೊಂಡ ಹೊಸ ವೈರತ್ವಕ್ಕಾ?" ಎಂದು ಹೇಳಿದಳು.

"ಸತ್ತ ಹಾವನ್ನು ಮತ್ತೆ ಕೊಲ್ಲಬೇಡ. ಸ್ವಾಮಿ ತಪ್ಪಿಸಿಕೊಂಡಿದ್ದಾನೆ, ಅದನ್ನು ಗಮನಿಸು. ಜ್ವಾಲೆಯ ಒಳಗಿಂದ ಭವನದೊಳಗೆ ಟ್ರಾಪ್ ಡೋರ್ ಇದೆ" ಅವಳು ತಡಮಾಡಲಿಲ್ಲ. ಭವನದೊಳಗೆ ಓಡಿದಳು. ಅದೇ ಸಮಯಕ್ಕೆ ವಿಹಾರಿ. ಸ್ವಾಮಿಯ ನಡುವೆ ಸಂಭಾಷಣೆ ನಡೆಯುತ್ತಿತ್ತು.

"ನಿನ್ನ ನಾಲ್ಕನೇ ಸ್ತಂಭವನ್ನೂ ಉರುಳಿಸಿಬಿಟ್ಟೆ ಸ್ವಾಮಿ! ಯಾವ ಪ್ರಜೆಗಳನ್ನು ನೀನು ನಾಲ್ಕನೇ ಸ್ತಂಭವಾಗಿ ಭಾವಿಸಿದ್ದೆಯೋ ಅವರೇ ನಿನಗೆ ಕಲ್ಲಿನಿಂದ ಹೊಡೆದೋಡಿಸಿದರು. ಈ ದೇಶದ ಎಷ್ಟೇ ಶಕ್ತಿವಂತ ದುರ್ಮಾರ್ಗಿಯಾದರೂ, ಮನಸ್ಸು ಮಾಡಿದರೆ ಸಾಮಾನ್ಯನೇ ಎದುರಿಸಬಲ್ಲನೆಂದು ನಿರೂಪಿಸಿದ್ದೇನೆ. ನಾನು ವಾಗ್ದಾನ ಮಾಡಿದಂತೆಯೇ, ನಿನ್ನ "ಶಕ್ತಿ"ಯನ್ನು, "ರಾಜಕೀಯವನ್ನು ಒಡೆದು "ಬುದ್ಧಿವಂತಿಕೆ"ಯನ್ನು ನನ್ನ ತಾಯಿಗೆ-ಭಾರತಮಾತೆಗೆ ಉಳಿಸಿದ್ದೇನೆ."

ಸ್ವಾಮಿ ಗಹಗಹಿಸಿ ನಗುತ್ತಾ, "ತುಂಬಾ ಬುದ್ಧಿವಂತಿಕೆಯಿಂದ ಮಾತನಾಡುತ್ತಿದ್ದೀಯೆಂದು ತಿಳಿದೆಯೇನೋ. ಇದನ್ನೆಲ್ಲಾ ಸೇರಿಸಿ ನಾನು ತೆಗೆದುಕೊಳ್ಳುತ್ತಿರುವ ಬೆಲೆ ಏನು ಗೊತ್ತಾ?...ನಿನ್ನ ಪ್ರಾಣ" ಅಂದ.

ವಿಹಾರಿ ಕೂಡಲೇ ಈಕ್ವಿಲೈಸರ್– 2000 ತೆಗೆದ. "ಇದೂ ನಿನ್ನ ಆಯುಧವೇ ಸ್ವಾಮಿ. ನಿನ್ನ ಹೆಲಿಕಾಪ್ಟರ್‌ನಿಂದಲೇ ತೆಗೆದುಕೊಂಡೆ. ಲೋಡ್ ಮಾಡಿದೆ. ಇವನ್ನು ಕನೆಕ್ಟ್ ಮಾಡಿದರೆ ನಿನ್ನ ಆಕಾರ ಕೂಡಾ ಕಾಣದಂತೆ ಮಾಯವಾಗಿ ಬಿಡುತ್ತೆ. ಇದೇನೆಂದು ನಿನಗೆ ಗೊತ್ತಲ್ಲಾ-ಶರಣಾಗಿ ಬಿಡು" ಅಂದ.

ಸ್ವಾಮಿ ತನ್ನ ಅಂಗಿಯಿಂದ ಪಾಕೆಟ್ ಕ್ಯಾಲಕ್ಯುಲೇಟರಂತಹ ವಸ್ತುವನ್ನು ಹೊರತೆಗೆದು, "ಇದೇನೆಂದು ನಿನಗೆ ಗೊತ್ತಾ? ಗಾಡ್ಜೆಟ್ ಮಿಸೈಲ್ಸ್– ರಿಮೋಟ್ ಕಂಟ್ರೋಲ್ ಇದೆ. ಇದರ ಬಟನ್ ಒತ್ತಿದರೆ ಅಲ್ಲಿ ಮಿಸೈಲ್ ಹೊರಟು ಹತ್ತು ಜನ ನಾಯಕರ ಪ್ರಾಣ ತೆಗೆಯುತ್ತದೆ. ರಾಜಧಾನಿಯಲ್ಲಿ ಮುಖ್ಯವಾದ ವ್ಯಕ್ತಿಗಳ ಮನೆಗಳು ಸಿಡಿದು ರಾಜಕೀಯ ಸಂಚಲನೆ ಪ್ರಾರಂಭವಾಗುತ್ತದೆ. ಈಗ ಹೇಳು ಯಾರ ಆಯುಧ ಪವರ್‌ಫುಲ್?" ಎಂದು ಕೇಳಿದ.

ವಿಹಾರಿ ನಿಶ್ಚೇತನನಾದ, ಇದನ್ನು ಅವನು ಊಹಿಸಿರಲಿಲ್ಲ, ಅದೇ ಸಮಯಕ್ಕೆ ಪ್ರವಲ್ಲಿಕ ಅಲ್ಲಿ ಸೇರಿಕೊಂಡಳು. ಅವಳನ್ನು ಅವರು ಗಮನಿಸಲಿಲ್ಲ.

"ಹತ್ತು ಜನರ ಪ್ರಾಣವನ್ನು ಉಳಿಸಿಕೊಳ್ಳಬೇಕೆಂದರೆ ನನ್ನನ್ನು ಬಿಟ್ಟು ಬಿಡಬೇಕು ವಿಹಾರಿ! ಆ ಈಕ್ವಿಲೈಸರನ್ನು ದೂರ ಬಿಸಾಕು."

ವಿಹಾರಿಗೆ ಏನು ಮಾಡಬೇಕೆಂದೇ ತೋಚಲಿಲ್ಲ.

"ಎರಡು ನಿಮಿಷ ಸಮಯಾವಕಾಶ ಕೊಡುತ್ತಿದ್ದೇನೆ" ಎಚ್ಚರಿಸಿದ.

"ನೀನು ಆ ಕಂಟ್ರೋಲರನ್ನು ಉಪಯೋಗಿಸುವುದಿಲ್ಲವೆಂದು ನಾನು ಹೇಗೆ ನಂಬಲಿ?"

"ನಾನೂ ಬಿಸಾಕುತ್ತೇನೆ–"

ವಿಹಾರಿ ಯೋಚಿಸಿದ.

"ಇನ್ನೊಂದು ನಿಮಿಷ ಸಮಯವಿದೆ"– ಹೆಲಿಕಾಪ್ಟರ್‌ನೊಳಗೆ ಹತ್ತುತ್ತಾ ಇಂಜಿನ್ನನ್ನು ಸ್ಟಾರ್ಟ್‌ಮಾಡಿ ಹೇಳಿದ ಸ್ವಾಮಿ. ಅವನ ತೋರಬೆರಳು ಕಂಟ್ರೋಲರ್‌ನ ಸ್ವಿಚ್ ಮೇಲಿದೆ. ತನಗಿಂತಲೂ ಅವನು ಒಂದು ಮೆಟ್ಟಿಲು ಮೇಲಿದ್ದಾನೆಂದು ವಿಹಾರಿಗೆ ತಿಳಿಯಿತು. ಅವನು ಎಲ್ಲಕ್ಕೂ ಸಿದ್ಧನಾಗಿದ್ದಾನೆ. ವಿಹಾರಿ ತನ್ನ ಕೈಯ್ಯಲ್ಲಿದ್ದ ಆಯುಧವನ್ನು ದೂರ ಎಸೆದ.

ಸ್ವಾಮಿ ಕೂಡಾ ಕಂಟ್ರೋಲರನ್ನು ದೂರ ಎಸೆದು ಸೀಟಿನ ಪಕ್ಕದಲ್ಲೇ ಇದ್ದ ಪಿಸ್ತೂಲನ್ನು ಕೈಗೆ ತೆಗೆದುಕೊಳ್ಳುತ್ತಾ ಗಹಗಹಿಸಿ ನಕ್ಕ.

"ಮನುಷ್ಯರ ಒಳ್ಳೆಯತನದ ಬಗ್ಗೆ ನಿನಗಿನ್ನೂ ನಂಬಿಕೆಯಿರುವುದನ್ನು ಕಂಡು ನನಗೆ ತುಂಬಾ ಸಂತೋಷವಾಗಿದೆ ವಿಹಾರಿ! ಈ ದೇಶದಲ್ಲಿ ನನಗಿನ್ನು ಜಾಗವಿಲ್ಲ ನಿಜ. ಆದರೆ ಕೆಲವು ವಿದೇಶೀ ಶಕ್ತಿಗಳು ನನ್ನ ಸಹಾಯಕ್ಕಿವೆ ಎಂಬುದನ್ನು ಮರೆಯಬೇಡ. ಅವರು ಸಾಯುವುದು ನನಗೆ ಬೇಕು...ಅದಕ್ಕೇ ನಿನ್ನೊಡನೆ ಮಾತನಾಡುತ್ತಲೇ ಬಟನ್ ಒತ್ತಿದ್ದೆ. ನಿಲ್ಲು–ಕದಲಬೇಡ...ಅದು ಪಲ್ಸ್ ಕಳಿಸುವ ವರೆಗೂ ಹಾಗೆಯೇ ನಿಂತಿರಬೇಕಾದ್ದೇ...ಎಷ್ಟು ಹೊತ್ತು? ಅರ್ಧ ನಿಮಿಷ ಸಾಕು. ಇಬ್ಬರೂ ಸೇರಿ ಅವರ ಆತ್ಮ ಶಾಂತಿಗಾಗಿ ಪ್ರಾರ್ಥಿಸೋಣ."

ಹೆಲಿಕಾಪ್ಟರ್ ಗಾಳಿಯಲ್ಲಿ 2 ಅಡಿ ಮೇಲೇರಿತು. ಪಿಸ್ತೂಲನ್ನು ವಿಹಾರಿಗೇ ಗುರಿಯಿಟ್ಟು "ಇಷ್ಟೊಂದು ಸಣ್ಣ ಬೆದರಿಕೆಗೇ ಹೆದರುವಂತಹ ಸಾಮಾನ್ಯನಲ್ಲ ನಾನು. ಇಲ್ಲಿ ನಡೆದದ್ದು ಹೊರಗೆ ತಿಳಿಯುವುದಕ್ಕೆ ಮುಂಚೆಯೇ..." ಎಂದು ಏನೋ ಹೇಳಲು ಹೋದ. ಹೆಲಿಕಾಪ್ಟರ್ ಪಕ್ಕದಿಂದ ಯಾರೋ ನುಗ್ಗಿ ಬಂದಂತೆ ಕಂಡಿತು. "ಹಾಯ್ ನಿಲ್ಲು" ಎಂದು ಕಿರುಚಿದ ಆದರೆ ಅವಳು ನಿಲ್ಲಲಿಲ್ಲ. ಅಲ್ಲಿಂದ ಹೊರಡಲಿರುವ ಮಿಸೈಲ್ಸನ್ನು ತಡೆಯಲು ಕೆಳಗೆ ಬಿದ್ದಿದ್ದ ಕಂಟ್ರೋಲರ್ ಕಡೆಗೆ ಓಡುತ್ತಿದ್ದ ಪ್ರವಲ್ಲಿಕಳನ್ನು ವಿಹಾರಿ ಕೂಡಾ ನೋಡಿದ. ಸ್ವಾಮಿಯ ಕೈಯ್ಯಲ್ಲಿದ್ದ ಪಿಸ್ತೂಲು ಅತ್ತ ತಿರುಗಿದ್ದನ್ನು ಕಂಡು "ಪ್ರವಲ್ಲಿಕಾ–" ಎಂದು ಕಿರುಚಿದ ಜೋರಾಗಿ.

ಆದರೂ ಅವಳು ನಿಲ್ಲಲಿಲ್ಲ ಓಡುತ್ತಲೇ ಇದ್ದಳು. ಜೀವನ್ಮರಣಗಳ

ನಡುವೆ ಜೇನು ನೊಣದಂತೆ ಸಾಗಿದೆ ಆ ಓಟ. ಓಂದಿನಿಂದ ಸ್ವಾಮಿಯ ಕೈಯ ಲ್ಲಿದ್ದ ಪಿಸ್ತೂಲು ಸಿಡಿಯಿತು. ಒಂದೇಸಮನೆ ಒಂದು ಸಲ...ಎರಡು ಸಲ... ಮೂರು...ನಾಲ್ಕು...ಐದು...ಅವಳು ಹಾಗೆಯೇ ಕುಸಿದುಬಿದ್ದಳು.

ಇನ್ನೈದು ಸೆಕೆಂಡುಗಳ ಸಮಯವಿದೆ. ಹತ್ತಿರದಲ್ಲೇ ಬಿದ್ದಿದೆ ಕಂಟ್ರೋಲರ್! ಸಣ್ಣ ಪಾಕೆಟ್ ಕ್ಯಾಲುಕುಲೇಟರ್‌ನಂತೆ, ದೊಡ್ಡ ಬೆಂಕಿ ಪೊಟ್ಟಣದಂತೆ ಇದೆ. ಅವಳು ಕೈಚಾಚಿದಳು. ಮತ್ತೊಂದು ಗುಂಡು ಅವಳ ಕೈಗೇ ತೂರಿತು. ಕುಲುಮೆಯಲ್ಲಿ ಕೆಂಪಗೆ ಕಾಯಿಸಿದ ಚೂಪಾದ ಕಬ್ಬಿಣದ ತುಂಡನ್ನು ಶರೀರದೊಳಗೆ ಚುಚ್ಚಿ ತಿರುಗಿಸುತ್ತಿದ್ದಂತೆ ಆಗುತ್ತಿದ್ದ ನೋವನ್ನು ತುಟಿಕಚ್ಚಿ ಸಹಿಸಿಕೊಂಡು ಎರಡನೇ ಕೈಯಿಂದ ಅದನ್ನು ತೆಗೆದುಕೊಂಡಳು. ಸ್ವಾಮಿ ಮತ್ತೆ ಪಿಸ್ತೂಲಿನಿಂದ ಗುರಿಯಿಟ್ಟ. ಗುಂಡುಗಳು ಮುಗಿದಿದ್ದವು. ಅವನೂ ಈಗ ಕಂಗಾಲು ಪರಿಸ್ಥಿತಿಯಲ್ಲಿದ್ದ. ಕೂಡಲೇ ಹೆಲಿಕಾಪ್ಟರನ್ನು ಮೇಲಕ್ಕೆ ತೆಗೆದುಕೊಂಡು ಹೋದ.

ವಿಹಾರಿ ಪ್ರೇಕ್ಷಕನಂತೆ ನಿಂತುಬಿಟ್ಟ. ಮೋಡಗಳಲ್ಲಿ ಹೊರಟುಹೋದ ಹೆಲಿಕಾಪ್ಟರ್ ಒಂದು ಕಡೆ, ರೆಕ್ಕೆ ಕಡಿದ ಜಟಾಯುವಿನಂತೆ ಪ್ರವಲ್ಲಿಕ ಒಂದು ಕಡೆ ಇದ್ದಾರೆ. ಕನಸಿನಿಂದ ಎಚ್ಚೆತ್ತವನಂತೆ ಅವನು ಅವಳೆಡೆಗೆ ಓಡಿದ.

ಅವಳ ಶರೀರ ರಕ್ತದಿಂದ ತೊಯ್ದಿತ್ತು. ಅವಳ ಕಣ್ಣಲ್ಲಿ ಕಂಟ್ರೋಲರನ್ನು ಆಫ್ ಮಾಡಿದ್ದೇನೆಂಬ ತೃಪ್ತಿಯಿತ್ತು. ಅವನನ್ನು ಕಂಡು ಬಲಹೀನತೆಯಿಂದ ನಕ್ಕಳು. ನಗುವಿನಲ್ಲೇ ಪ್ರಾಣ ಹೋಗುವುದು ತನಗೆ ಬೇಕೆಂಬಂತೆ ಇದೆ ಆ ನಗು. "ವಿ...ಹಾ...ರೀ! ಅವನು ಅ ವ...ನು ಸಾಯುವುದನ್ನು ನಾ...ನು ಕಣ್ಣಾರೆ ನೋಡಬೇಕು. ಅದೇ...ಅ...ದೇ...ನ. .ನ್ನ ಅಂ...ತಿ...ಮ...ಕೋ...ರಿಕೆ" ಅವಳನ್ನು ಕೈಯಲ್ಲಿ ಎತ್ತಿ ಹಿಡಿಯುವುದಕ್ಕೂ ಸಮಯವಿಲ್ಲ.

ವಿಹಾರಿ ಎದ್ದು ನಿಂತ. ಭಾವಬಂಧಕತೆಗೂ ಆರ್ದ್ರತೆಗೂ ಅಲ್ಲಿ ಅವಕಾಶವಿರಲಿಲ್ಲ. ಹೋರಾಟದಲ್ಲಿ ಗಾಯಗೊಂಡ ಸೈನಿಕನ ಅಂತಿಮ ಕೋರಿಕೆ ಅದು. ಹೆಲಿಕಾಪ್ಟರ್ ಮೋಡದಲ್ಲಿ ಹೊರಟು ಹೋಯಿತು. ಅವನು ಈಕ್ವಿಲೈಸರನ್ನು ಕೈಗೆ ತೆಗೆದುಕೊಂಡ. ಅವನಿಗೆ ಅದನ್ನು ಸರಿಯಾಗಿ ಗುರಿಯಿಟ್ಟು ಹೊಡೆಯುವುದು ಗೊತ್ತಿರಲಿಲ್ಲ. ಒಂದೇ ಛಾನ್ಸ್ ಇರುತ್ತದೆಂದು ಮಾತ್ರ ಗೊತ್ತಿತ್ತು.

ಗಾಳಿಯಲ್ಲಿ ಎತ್ತಿ ಹಿಡಿದು ರೇಂಜ್ ನೋಡಿದ. ಎರಡು ಕಣ್ಣನ್ನೂ ಮುಚ್ಚಿಕೊಂಡು ಬದುಕಿನಲ್ಲಿ ಮೊದಲ ಸಲ ದೇವರನ್ನು ಪ್ರಾರ್ಥಿಸಿದ. ನಂತರ ಕಣ್ಣುಬಿಟ್ಟ. ಕೆಂಪಗಿವೆ ಆ ಕಣ್ಣಗಳು. ಪಾಯಿಂಟ್‌ನಲ್ಲಿ ಟಾರ್ಗೆಟ್ ಕಾಣುತ್ತಿವೆ. ಅವನ ತೋರು ಬೆರಳು ಟ್ರಿಗರ್ ಮೇಲೆ ಒತ್ತಡ ಬೀರಿತು...ಮತ್ತಷ್ಟು ಗಟ್ಟಿಯಾಗಿ...

ಸಣ್ಣ ಜರ್ಕ್...ಅಷ್ಟೇ.

ಸರಿಯಾಗಿ ಅರ್ಧ ಸೆಕೆಂಡ್ ನಂತರ ಆಕಾಶದಲ್ಲಿ ಬ್ರಹ್ಮಾಂಡವಾದ ಆಸ್ಫೋಟನೆ ನಡೆಯಿತು. ದೊಡ್ಡ ಬೆಂಕಿ, ಹೊಗೆ ಮೋಡಗಳ ನಡುವೆ ಕಂಡಿತು. ಪ್ರಜೆಗಳ ಅಜ್ಞಾನವನ್ನು, ಮತ ತತ್ವಗಳನ್ನು ರಾಜಕೀಯದೊಡನೆ ಬೆರೆಸಿ, ಗೂಂಡಾ–ಬಲದಿಂದ ದೇಶವನ್ನು ಆಳಬೇಕೆಂದಿದ್ದ ಅಭಿನವ ಹಿಟ್ಲರ್‌ನ ಆತ್ಮ ಭೂಮಿಗೆ ಬರುವುದಕ್ಕೆ ಮುಂಚೆಯೇ ಆಕಾಶದಲ್ಲಿ ಬೆರೆತು ಹೋಯಿತು. ಶರೀರದ ಜಾಡೇ ಇರಲಿಲ್ಲ.

ವಿಹಾರಿ ಹಿಂತಿರುಗಿದ,

ಆಕಾಶದೆಡೆಗೆ ನೋಡುತ್ತಾ. ಕದಲುವುದಕ್ಕೂ ಸಾಧ್ಯವಿಲ್ಲದಂತೆ ಬಿದ್ದಿದ್ದ ಪ್ರವಲ್ಲಿಕಳ ಮುಖ ಸಂತೃಪ್ತಿಯಿಂದ ಬೆಳಗುತ್ತಿತ್ತು. ಅವಳ ತುಟಿಗಳ ಮೇಲೆ ಕಿರುನಗೆ ಮಾಯವಾಗಿತ್ತು. ಅತಿ ಕಷ್ಟದಿಂದ ಬಲಗೈಯ್ಯನ್ನು ಮೇಲೆತ್ತಿ 'ನಾವು ವಿಜಯ ಸಾಧಿಸಿದೆವು' ಎಂಬುವಂತೆ ಹೆಬ್ಬೆರಳನ್ನು ತೋರಿಸಿದಳು. ಅದೇ ಸಮಯಕ್ಕೆ ಅವಳೆಡೆಗೆ ಓಡೋಡಿ ಬಂದ ವಿಹಾರಿ ವಿದ್ಯುದ್ಘಾತ ತಗುಲಿದವ ನಂತೆ ನಿಂತುಬಿಟ್ಟ. ಶರತ್‌ಕಾಲದ ತಂಪಾದ ಗರಿಕೆ ಹುಲ್ಲನ್ನು ಗ್ರೀಷ್ಮದ ತಾಪ ಸುಟ್ಟಂತೆ ನಡುಗಿಹೋದ. ಸಮುದ್ರದ ಗರ್ಭದಲ್ಲಿ ಹುಟ್ಟಿ ಭೂಮಿಯಿಂದ ಉಕ್ಕಿದ ಲಾವಾ, ಜಲಸಂಪತ್ತನ್ನೆಲ್ಲಾ ಆವಿಯಾಗಿಸಿದಂತೆ, ಮನಸ್ಸಿನಲ್ಲಿ ಉಕ್ಕುತ್ತಿದ್ದ ಆವೇಶ ಆವೇದನೆಯಾಗುತ್ತಿರುವಂತೆ ಅನ್ನಿಸಿತು– ಅವಳ ಹೆಬ್ಬೆರಳಿನ ಮೇಲಿನ ಹುಟ್ಟು ಮಚ್ಚೆ !!

ಅವನು ಗಾಳಿಯಂತೆ ಅವಳ ಮೇಲೆ ಎರಗಿ ಅವಳನ್ನು ತನ್ನ ಕೈಯ್ಯೊಳಗೆ ಎತ್ತಿಕೊಂಡ. "ನೀನು ನೀ...ನು...ನೀ...ನೇನಾ...ಪ್ರವಲ್ಲಿಕಾ?" ಎಂದ ಅಸ್ಪಷ್ಟವಾದ ಸಂಭ್ರಮವನ್ನು ವೇದನೆಯೊಡನೆ ಬೆರೆಸುತ್ತಾ.

ಮೌನ ಸಮ್ಮತಿಗೆ ಸೂಚನೆ. ಮೌನ ಸಾವಿಗೂ ಕೂಡಾ ಸೂಚನೆ!

* * * *

ಗಾಳಿಯಲ್ಲಿ ಮೂರು ಸಲ ತುಪಾಕಿ ಸಿಡಿಯಿತು. ಸೆಲ್ಯೂಟ್ ನಡೆಯುತ್ತಿದೆ; ಪ್ರವಲ್ಲಿಕಳ ಶರೀರದ ಮೇಲೆ ಬಾವುಟವನ್ನು ಹೊದಿಸಲಾಗಿದೆ.

ದೂರದಲ್ಲಿದ್ದಾನೆ ಅವನು. ನಡೆಯುತ್ತಿರುವ ಕಾರ್ಯಕ್ರಮಕ್ಕೂ ತನಗೂ ಸಂಬಂಧವಿಲ್ಲದವನಂತೆ ನಿಂತಿದ್ದಾನೆ. ಲಾಂಛನಕ್ಕೆ ಅತೀತವಾಗಿದೆ ಅವನ ಮನಸ್ಸು.

ತಾನು ಮಾಡಿದ್ದು ತಪ್ಪೇ. ಸ್ವರ ಬದಲಾಯಿಸಿದರೆ ಎಂತಹ ಆಫೀಸರಾದರೂ ಸ್ತ್ರೀ ಪುರುಷನಾಗುತ್ತಾನಾ ಎಂದಿದ್ದೆ. ಅದಕ್ಕೆ ಇಷ್ಟು ದೊಡ್ಡ ಶಿಕ್ಷೆಯೊಡನೆ ಪಾಠ ಹೇಳುತ್ತಿ ಎಂದುಕೊಂಡಿರಲಿಲ್ಲ. ಪ್ರೀತಿಯ ವಿಷಯ ಹೋಗಲಿ, ಅದು ಸಣ್ಣದು. ಮನುಷ್ಯರು ಹೇಗೆ ಬದುಕಬೇಕೋ, ಏತಕ್ಕೆ ಬದುಕಬೇಕೋ ಎಂಬುದನ್ನು ಕಲಿಸಿದೆ. ಆ ಋಣವನ್ನು ಹೇಗೆ ತೀರಿಸಲಿ?

ವಿದಾಯ ವೇದನೆಯನ್ನು ಉಂಟುಮಾಡಲು–ಸ್ನೇಹ ಪ್ರೀತಿಯಾಗಿ ಪರಿವರ್ತನೆ ಹೊಂದುವ ಅವಶ್ಯಕತೆಯಿಲ್ಲ.

ಆಕಾಶದ ಮೇಘ ತರಂಗಗಳ ಮೇಲೆ–ನೀನು ನನ್ನಲ್ಲಿ ಉಂಟುಮಾಡಿದ ಸ್ಫೂರ್ತಿ ನಾವೆಯಂತೆ ತೇಲುತ್ತಿದೆ. ಕಾಲವೆಂಬ ಸುಳಿಗಾಳಿ ಅದನ್ನು ಕಬಳಿಸ್ತದೆಂದು ತಿಳಿಯದೇ ಅದನ್ನೇ ನೋಡುತ್ತಾ ಕುಳಿತಿದ್ದೆ. ನಿನ್ನ ಸಾವಿನಲ್ಲಿ ನನ್ನ ಬದುಕು ಮುಗಿಯದೇ ಹೋಗಬಹುದು. ಆದರೆ ಏಕಾಂತ ರಾತ್ರಿಗಳ ಕತ್ತಲಿನಲ್ಲಿರುವ ನಿಶ್ಶಬ್ದವೇ ನನಗೆ ಜೊತೆಯಾಗಿ ನನ್ನನ್ನು ಸಮಾಧಾನ ಪಡಿಸಬೇಕೇ ವಿನಃ ಬೇರೆ ಯಾರೂ ಇಲ್ಲ.

ನಾಟಕಗಳನ್ನು ಆಡುವವನು ನಾನು. ಈ ದೇಶದ ಯುವ ಜನಾಂಗದ ಪ್ರತಿನಿಧಿ ನಾನು. ಬೆಟ್ಟಗಳ ಬಳಿ ಸುತ್ತಾಡುವ ಶಿಲ್ಪಿ ಹಠಾತ್ತನೆ ಒಂದು ಕಲ್ಲಿನ ಬಳಿ ನಿಂತು, ತನ್ನ ಭವಿಷ್ಯತ್ ಶಿಲ್ಪಕ್ಕೆ ಆ ಕಲ್ಲನ್ನು ಆರಿಸಿಕೊಂಡಂತೆ ನೀನು ನನ್ನನ್ನು ಆರಿಸಿಕೊಂಡೆ. ಯಾರು ಕರೆದರೆಂದು ಇಷ್ಟು ಬೇಗ ಹೊರಟು ಹೋದಿ! ಇದು ನೀನೆಂದೂ, ನೀನಲ್ಲವೆಂದು ನಾನು ತಪ್ಪು ಮಾಡುತ್ತಿದ್ದೇನೆಂದು, ಅನಂತರ ಎಂದಾದರೂ ತಿಳಿದರೆ ಅದು ಮತ್ತಷ್ಟು ನರಕವಾಗುತ್ತದೆಂದು, ಈ ಕ್ಷಣದಲ್ಲಿ ಕೂಡಾ ನಾನು ಊಹಿಸುತ್ತಿದ್ದೇನೆಂದರೆ...ಎಷ್ಟು ಸ್ವಾರ್ಥಿಯೋ ನಾನು ಅಲ್ಲವಾ? ಒಂದು ಬಾವುಟವನ್ನು ದೇಶದ ನಡುವೆ ಗರ್ವದಿಂದ ನಿಲ್ಲಿಸುವುದಕ್ಕಾಗಿ, ಅದನ್ನು ನಾಟಲು ಭೂಮಿಗೆ ಮತ್ತಷ್ಟು ಶಕ್ತಿಯನ್ನು ಕೊಡಲು ನೀನು ಭೂಮಿಯಲ್ಲಿ ಕಲೆತು ಹೋದೆಯಾ? ಪ್ರೇಮಕ್ಕಿಂತಲೂ ಧೈರ್ಯವೇ ಶ್ರೇಷ್ಠವೆಂದು ಮೆರೆಯುತ್ತಿದ್ದ ನಾನು ಈಗ ಹೀಗೆ ಆಕ್ರೋಷಿಸುತ್ತಿದ್ದೇನೆ. ನನ್ನ ದುಃಖ ಕಂಡು ನನಗೇ ನಾಚಿಕೆಯಾಗುತ್ತಿದೆ. ಹೃದಯವನ್ನು ತಟ್ಟಿದ ಪ್ರತಿಯೊಂದು ಉತ್ತೇಜನಪೂರಿತ ಅನುಭವಗಳನ್ನು ಕ್ರೋಢೀಕರಿಸಿದರೆ ತಯಾರಾದ ಮೂರ್ತಿ ನೀನು. ನೀನು ತೋರಿಸಿದ ಪ್ರತಿ ಸನ್ನೆಯನ್ನೂ ತಪ್ಪರ್ಥ ಮಾಡಿಕೊಂಡ ಅವಿವೇಕಿ ನಾನು.

ಇದೆಲ್ಲಾ ಪ್ರೀತಿ ಆಗದಿರಬಹುದು. ಸ್ನೇಹವೇ ಆಗಿರಬಹುದು. ಸಮುದ್ರವನ್ನೂ, ಸಂಜೆಗಳನ್ನೂ ಸೇರಿಸಿ ನಿನ್ನ ಬಗ್ಗೆ ಯೋಚಿಸುತ್ತೇನೆ. ಯಾವುದಾದರೂ

ಮೋಡ ದಿಗಂತದೊಳಗೆ ಜಾರುತ್ತಿದ್ದರೆ, “ನಿನಗಾಗಿ ಒಬ್ಬ ಸ್ನೇಹಿತ ಇನ್ನೂ ಇಲ್ಲೇ ಇದ್ದಾನೆ ಎಂದು ಹೇಳು” ಎಂದು ಹೇಳಿ ಕಳುಹಿಸುತ್ತೇನೆ.

ಕೃತಜ್ಞತೆ ಎಂದರೇನು? ಕಣ್ಣುಗಳ ತುದಿಗಳಲ್ಲಿ ಅಶ್ರುವಾಗಿ ನಿಲ್ಲುವುದು–ಮಾತುಗಳಲ್ಲಿ ಲಾಂಛನ ರೂಪ ಪಡೆಯುವುದು–ಅದೇ ತಾನೇ? ಅದಕ್ಕೆ ತಾನೇ ಮಾತುಗಳಿಗೆ ಸಿಗದ ಕಡೆಗೆ ಹೊರಟು ಹೋದಿ? ಮಂಜಿನಲ್ಲಿ ನೆಂದ ಹೂವನ್ನು ನನ್ನ ಕಣ್ಣಿನ ತುದಿಯ ಬಾಷ್ಪವನ್ನಾಗಿ ಮಾಡಿ... ಮೇಘರಾಗದ ತಂಪು ದನಿಯ ಹಾಡು ಕೇಳಿಸಿ. ಮೌನರಾಗದೊಡನೆ ನಮ್ಮನ್ನು ಬಿಟ್ಟು ಅದಕ್ಕೆ ಹೊರಟು ಹೋದೆಯಾ? ನಿಶ್ಶಬ್ದದಲ್ಲಿ ಕೂಡಾ ನಿನ್ನ ಧ್ವನಿ ಕೇಳುವವನೇ ನಿಜವಾದ ಸ್ನೇಹಿತ. ನಿಜವೇನೇನೋ ನನ್ನ ಈ ನಿಶ್ಶಬ್ದ ಮತ್ತೊಬ್ಬರಿಗೆ ಸೇರಲು ಎಷ್ಟು ಸಮಯ ತೆಗೆದುಕೊಳ್ಳುತ್ತೋ? ಇನ್ನು ಮುಂದೆ ನಾನು ಮಾತನಾಡುವ ಪ್ರತಿ ಮಾತಿನ ಹಿಂದೆಯೂ, ಓದುವ ಪುಸ್ತಕಗಳ-ಪುಟಗಳು-ವಾಕ್ಯಗಳು-ಪದಗಳು ಅಕ್ಷರಗಳ ನಡುವೆಯೆಲ್ಲಾ ವಿಷಾದವೇ ಕಾಣುತ್ತದೇನೋ!

ಸ್ವರ್ಗದಿಂದ ಆಲೋಚನೆ ಕಡಿಯಿತು.

ಸುನಾದಮಾಲ!

‘ಹೊರಡೋಣವಾ’ ಎಂಬಂತೆ ನೋಡಿದಳು. ಅಲ್ಲಿ ಯಾರೂ ಇರಲಿಲ್ಲ. ಎಲ್ಲರೂ ಯಾವಾಗಲೋ ಹೊರಟು ಹೋಗಿದ್ದರು. ತನ್ನ ಅನಿರ್ವಚನೀಯ ಅವಸ್ಥೆಗೆ ಅವನಿಗೆ ಆಶ್ಚರ್ಯವಾಯಿತು. ಅವಳೊಡನೆ ಹೊರಟ.

ತುಂಬಾ ಸಮಯದ ನಿಶ್ಶಬ್ದದ ನಂತರ ಅವಳು, “ಐಯಾಮ್ ಸಾರಿ” ಅಂದಳು.

“ಏಕೆ?”

“ನಾನು ಅರ್ಥಮಾಡಿಕೊಳ್ಳಬಲ್ಲೆ–”

ಅವನು ತಲೆ ಆಡಿಸಿದ.

“ಆ ಕರ್ನಲ್ ಬರಲಿಲ್ಲವಾ?”

“ಆತನಿನ್ನು ಬರುವುದಿಲ್ಲ!”

“ಅರೆ–ಯಾಕೆ?”

“ಯುದ್ಧದಲ್ಲಿ ವೀರಮರಣ ಹೊಂದಿದರಂತೆ–”

ನಡೆಯುತ್ತಿದ್ದ ಮಾಲ ನಿಂತು, “ಅಯ್ಯೋ ಪಾಪ–ಯಾವಾಗ?” ಎಂದು ಕೇಳಿದಳು. ಅವನು ಉತ್ತರಿಸಲಿಲ್ಲ. ಇಬ್ಬರೂ ಮನೆಗೆ ಬಂದರು.

ಟೇಬಲ್ ಮೇಲಿದ್ದ ಪುಸ್ತಕಗಳೆಲ್ಲಾ ಚೆದುರಿ ಬಿದ್ದಿದ್ದವು. ಮೊದಲಲ್ಲಿ ತಾನು ತಂದುಕೊಟ್ಟಿದ್ದ ಪುಸ್ತಕಗಳು.

"ಇವೇಕೆ ಇಲ್ಲಿವೆ?"

"ಅಜ್ಜಿ ತೆಗೆಸಿದ್ದು."

ಅವನು ಅದನ್ನು ಕೈಗೆ ತೆಗೆದುಕೊಂಡ. ಮಾಲಳಿಗಾಗಿ ತಂದುಕೊಟ್ಟಿದ್ದ ಪುಸ್ತಕಗಳು ಅವು.

"ಅಂದಹಾಗೆ ಮರೆತುಬಿಟ್ಟಿದ್ದೆ. ಆಗೊಮ್ಮೆ ಪ್ರವಲ್ಲಿಕ ಬಂದಿದ್ದಳು. ನೀವು ತಂದುಕೊಟ್ಟಿರುವ ಪುಸ್ತಕಗಳೆಂದು ಹೇಳಿದೆ. ತೆಗೆದು ನೋಡುತ್ತಿದ್ದಳು."

ಅವನ ಕೈ ಬೆರಳಿನ ನಡುವೆ ಇದ್ದ ಹಾಳೆಗಳು ಕಂಪಿಸುತ್ತಿದ್ದವು. ಒಂದೆಡೆ ಪೆನ್ನಿನಿಂದ ಬರೆದಿದ್ದ ಅಕ್ಷರಗಳನ್ನು ಕಂಡು ನಿಂತುಬಿಟ್ಟ.

"ಆಕೆಯೇ ಬರೆದದ್ದು ಅದು ಹಿಂದಿನಿಂದ ಹೇಳಿದಳು".

ಅದು ಯಾವ ಪುಸ್ತಕವೆಂದು ನೋಡಿದ! 'ಬೆಳದಿಂಗಳ ಬಾಲೆ'.

ಪುಸ್ತಕದ ಕೊನೆಯ ಬಿಳಿ ಹಾಳೆಯ ಮೇಲೆ ಮುತ್ತಿನಂತಹ ಅಕ್ಷರಗಳು! ಓದಲಾರಂಭಿಸಿದ:

THE OTHERWISE DULL AND GLOOMY SKY
LOOKS LIKE A SEA OF BLUE
THE OTHERWISE LONELY TWINKLE STARS
LOOK LIKE STUDDED PRECIOUS STONES
THE DEPRESSING SOUND OF THE TRAFFIC
FLOWS LIKE MUSIC INTO MY EARS
YOU AND ONLY YOU POSSESS THIS
POWER OF CHANGING DISGUST INTO DELIGHT
GOLDEN MOMENTS SLIP BY
I CAN'T HOLD THEM BACK
DON'T ASK ME WHAT AND WHY
EXPRESSION IS WHAT I LACK
ALL THAT I CAN WRITE TO YOU
IS THAT I HAVE A TREASURE
THE MEETINGS WITH YOU THOUGH FEW
THEY WERE SUCH A PLEASURE
AS I THINK OF YOU, MY FRIEND
MY PEN MOVES UNINTERRUPTEDLY
BUT THERE HAS TO BE A STOP
AND I STOP-HERE.

## ರಾಜಾ ಚೆಂಡೂರ್ ಕೃತಿಗಳು

ಸ್ವಂತ ಕೃತಿ : ನೀಲಿಚಿತ್ರಗಳು

: ಅನುವಾದಗಳು :

ಯಂಡಮೂರಿ ವೀರೇಂದ್ರನಾಥ

ಸ್ನೇಹ ಪ್ರೇಮ
ಸತ್ಯಂ ಶಿವಂ ಸುಂದರಂ
ಷಾಕ್ಮೋರಾ!!!
ಹುಡುಗಿಯರಿಗೆ ಮಾತ್ರ
ದೇವರೇ ನಿನ್ನ ಕುಲ ಯಾವುದು?
ಬಾರ್ರ್ಯಾ ಗುಣವತೀ ಶತ್ರು!
ಬೆಳದಿಂಗಳ ಗೋದಾವರಿ
ರಕ್ತ ಸಿಂಧೂರ
ಅಂಧಕಾರದಲ್ಲಿ ಸೂರ್ಯ
ಬೆಳಕಿನತ್ತ ಸೂರ್ಯ
ಕಪ್ಪಂಚು ಬಿಳಿ ಸೀರೆ
ಬೇಡ ಕೃಷ್ಣ ರಂಗಿನಾಟ
ಅಂತಿಮ ಹೋರಾಟ
ಹಿಮಪರ್ವತ
ಲೇಡೀಸ್ ಹಾಸ್ಟೆಲ್
ಅಗ್ನಿ ಪ್ರವೇಶ

ಮಲ್ಲಾದಿ ವೆಂಕಟಕೃಷ್ಣಮೂರ್ತಿ

ಮಂದಾಕಿನಿ
ಹಣ ಯಾರಿಗೆ ಕಹಿ?
ಲಿಟಲ್ ರಾಸ್ಕಲ್
ನಾತಿ ಚರಾಮಿ
ಏರ್ ಹೋಸ್ಟೆಸ್
ಪ್ರೇಮ ಸಂದೇಶ
ಬಾಡಿಗೆ ಹೃದಯಗಳು
ವೆಡ್ಡಿಂಗ್ ಬೆಲ್ಸ್
ಮಿಸ್ಟರ್ 'ವಿ'
ವಾರಸುದಾರ

ಶಾತವಾಹನ

ಹಿಮಖಡ್ಗ
ಬೆಂಕಿಯ ಉಯ್ಯಾಲೆ
ಉರಿಯುತ್ತಿರುವ ಹೂ ತೋಟ

ವೀರಭದ್ರರಾವ್ ಪಮ್ಮಿ

ಐ ಲವ್ ಯು

# ಸಾಹಿತ್ಯ ಪ್ರಕಾಶನದ ಪ್ರಕಟನೆಗಳು


**ಯಂಡಮೂರಿ ವೀರೇಂದ್ರನಾಥ** (ಅನು: ಸರಿತಾ ಜ್ಞಾನಾನಂದ)

| | |
|---|---|
| ಕರಿಗಂಬಳಿಯಲ್ಲಿ ಮಿಡಿನಾಗ | 15-00 |
| ಅಷ್ಟಾವಕ್ರ–I | 20–00 |
| ಅಷ್ಟಾವಕ್ರ–II | 20–00 |
| ಮರಣ ಮೃದಂಗ | 40–00 |
| ಸ್ವರ ಬೇತಾಳ | 21–00 |
| ರಾಕ್ಷಸ | 36–00 |
| ಬೇಡ ಕೃಷ್ಣ ರಂಗಿನಾಟ (ಅನು: ರಾಜಾ ಚೆಂಡೂರ್) | 21–00 |
| ಅಂತಿಮ ಹೋರಾಟ | 38–00 |

**ಕೆ. ಟಿ. ಗಟ್ಟಿ**

| | |
|---|---|
| ಅಭಿಚಾರ | 20–00 |
| ಸುಖಾಂತ | 12–00 |
| ಕರ್ಮಣ್ಯೇವಾಧಿಕಾರಸ್ತೇ | 14-00 |
| ಅಬ್ರಾಹ್ಮಣ | 26–00 |

**ವಿ. ಸ. ಖಾಂಡೇಕರ್** (ಅನು: ಸುಶೀಲಾ ಕೊಪ್ಪರ್)

| | |
|---|---|
| ಅಶ್ರು | 32–00 |

**ಸುದರ್ಶನ ದೇಸಾಯಿ**

| | |
|---|---|
| ಎಂಟೆದೆ ಬಂಟ | 26–00 |
| ವಿಚಿತ್ರ ಅಪರಾಧಿ | 12–00 |

**ಶಂ. ಬಾ. ಜೋಶಿ**

| | |
|---|---|
| ಮಹಾರಾಷ್ಟ್ರದ ಮೂಲ | 8–00 |
| ಕಣ್ಮರೆಯಾದ ಕನ್ನಡ | 12–00 |
| ಸಾಂಸ್ಕೃತಿಕ ಮೂಲದಲ್ಲಿನ ತಾತ್ತ್ವಿಕ ಚಿಂತನಗಳು | 6–00 |

**ಜನಪ್ರಿಯ ಕೃತಿ**

| | |
|---|---|
| ಸುಂದರ ರಾಮಾಯಣ | 24–00 |